
ತತಃ ಸರ್ವಾಃ ಪ್ರಕೃತಯೋ ರಾಮಂ ವಚನಮಬ್ರುವನ್ |
ಗಚ್ಛನ್ತಮನುಗಚ್ಛಾಮೋ ಯತ್ರ ರಾಮ ಗಮಿಷ್ಯಸಿ ||೧೨||

ಪೌರೇಷು ಯದಿ ತೇ ಪ್ರೀತಿರ್ಯದಿ ಸ್ನೇಹೋ ಹ್ಯನುತ್ತಮಃ |
ಸಪುತ್ರದಾರಾಃ ಕಾಕುತ್ಸ್ಥ ಸಮಂ ಗಚ್ಛಾಮ ಸತ್ಪಥಮ್ ||೧೩||

ತಪೋವನಂ ವಾ ದುರ್ಗಂ ವಾ ನದೀಮಮ್ಭೋನಿಧಿಂ ತಥಾ |
ವಯಂ ತೇ ಯದಿ ನ ತ್ಯಾಜ್ಯಾಃ ಸರ್ವಾನ್ನೋ ನಯ ಈಶ್ವರ ||೧೪||

ಏಷಾ ನಃ ಪರಮಾ ಪ್ರೀತಿರೇಷ ನಃ ಪರಮೋ ವರಃ |
ಹೃದ್ಗತಾ ನಃ ಸದಾ ಪ್ರೀತಿಸ್ತವಾನುಗಮನೇ ನೃಪ ||೧೫||

ಪೌರಾಣಾಂ ದೃಢಭಕ್ತಿಂ ಚ ಬಾಢಮಿತ್ಯೇವ ಸೋಽಬ್ರವೀತ್ |
ಸ್ವಕೃತಾನ್ತಂ ಚಾನ್ವವೇಕ್ಷ್ಯ ತಸ್ಮಿನ್ನಹನಿ ರಾಘವಃ ||೧೬||

ಕೋಸಲೇಷು ಕುಶಂ ವೀರಮುತ್ತರೇಷು ತಥಾ ಲವಮ್ |
ಅಭಿಷಿಚ್ಯ ಮಹಾತ್ಮಾನಾವುಭೌ ರಾಮಃ ಕುಶೀಲವೌ ||೧೭||

ಅಭಿಷಿಕ್ತೌ ಸುತಾವಙ್ಕೇ ಪ್ರತಿಷ್ಠಾಪ್ಯ ಪುರೇ ತತಃ |
ಪರಿಷ್ವಜ್ಯ ಮಹಾಬಾಹುರ್ಮೂರ್ಧ್ನ್ಯುಪಾಘ್ರಾಯ ಚಾಸಕೃತ್ ||೧೮||

ರಥಾನಾಂ ತು ಸಹಸ್ರಾಣಿ ನಾಗಾನಾಮಯುತಾನಿ ಚ |
ದಶಾಯುತಾನಿ ಚಾಶ್ವಾನಾಮೇಕೈಕಸ್ಯ ಧನಂ ದದೌ ||೧೯||

ಬಹುರತ್ನೌ ಬಹುಧನೌ ಹೃಷ್ಟಪುಷ್ಟಜನಾವೃತೌ |
ಸ್ವೇ ಪುರೇ ಪ್ರೇಷಯಾಮಾಸ ಭ್ರಾತರೌ ತೌ ಕುಶೀಲವೌ ||೨೦||

ಅಭಿಷಿಚ್ಯ ತತೋ ವೀರೌ ಪ್ರಸ್ಥಾಪ್ಯ ಸ್ವಪುರೇ ತದಾ ।
ದೂತಾನ್ಸಂಪ್ರೇಷಯಾಮಾಸ ಶತ್ರುಘ್ನಾಯ ಮಹಾತ್ಮನೇ ॥೨೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಸಪ್ತಾಧಿಕಶತತಮಃ ಸರ್ಗಃ

- --

ಅಷ್ಟಾಧಿಕಶತತಮಃ ಸರ್ಗಃ

ತೇ ದೂತಾ ರಾಮವಾಕ್ಯೇನ ಚೋದಿತಾ ಲಘುವಿಕ್ರಮಾಃ ।
ಪ್ರಜಗ್ಮುರ್ಮಧುರಾಂ ಶೀಘ್ರಂ ಚಕ್ರುರ್ವಾಸಂ ನ ಚಾಧ್ವನಿ ॥೧॥

ತತಸ್ತ್ರಿಭಿರಹೋರಾತ್ರೈಃ ಸಂಪ್ರಾಪ್ಯ ಮಧುರಾಮಥ ।
ಶತ್ರುಘ್ನಾಯ ಯಥಾತತ್ತ್ವಮಾಚಖ್ಯುಃ ಸರ್ವಮೇವ ತತ್ ॥೨॥

ಲಕ್ಷ್ಮಣಸ್ಯ ಪರಿತ್ಯಾಗಂ ಪ್ರತಿಜ್ಞಾಂ ರಾಘವಸ್ಯ ಚ ।
ಪುತ್ರಯೋರಭಿಷೇಕಂ ಚ ಪೌರಾನುಗಮನಂ ತಥಾ ॥೩॥

ಕುಶಸ್ಯ ನಗರೀ ರಮ್ಯಾ ವಿನ್ಧ್ಯಪರ್ವತರೋಧಸಿ ।
ಕುಶಾವತೀತಿ ನಾಮ್ನಾ ಸಾ ಕೃತಾ ರಾಮೇಣ ಧೀಮತಾ ॥೪॥

ಶ್ರಾವಸ್ತೀತಿ ಪುರೀ ರಮ್ಯಾ ಶ್ರಾವಿತಾ ಚ ಲವಸ್ಯ ಹ ।
ಅಯೋಧ್ಯಾಂ ವಿಜನಾಂ ಕೃತ್ವಾ ರಾಘವೋ ಭರತಸ್ತಥಾ ।
ಸ್ವರ್ಗಸ್ಯ ಗಮನೋದ್ಯೋಗಂ ಕೃತವನ್ತೌ ಮಹಾರಥೌ ॥೫॥

ಏವಂ ಸರ್ವಂ ನಿವೇದ್ಯಾಶು ಶತ್ರುಘ್ನಾಯ ಮಹಾತ್ಮನೇ ।
ವಿರೇಮುಸ್ತೇ ತತೋ ದೂತಾಸ್ತ್ವರ ರಾಜೇತಿ ಚಾಬ್ರುವನ್ ॥೬॥

ತಚ್ಛ್ರುತ್ವಾ ಘೋರಸಂಕಾಶಂ ಕುಲಕ್ಷಯಮುಪಸ್ಥಿತಮ್ ।
ಪ್ರಕೃತೀಸ್ತು ಸಮಾನೀಯ ಕಾಞ್ಚನಂ ಚ ಪುರೋಧಸಮ್ ॥೭॥

ತೇಷಾಂ ಸರ್ವಂ ಯಥಾವೃತ್ತಮಬ್ರವೀದ್ರಘುನನ್ದನಃ ।
ಆತ್ಮನಶ್ಚ ವಿಪರ್ಯಾಸಂ ಭವಿಷ್ಯಂ ಭ್ರಾತೃಭಿಃ ಸಹ ॥೮॥

ತತಃ ಪುತ್ರದ್ವಯಂ ವೀರಃ ಸೋऽಭ್ಯಷಿಞ್ಚನ್ನರಾಧಿಪಃ ।
ಸುಬಾಹುರ್ಮಧುರಾಂ ಲೇಭೇ ಶತ್ರುಘಾತೀ ಚ ವೈದಿಶಮ್ ॥೯॥

ದ್ವಿಧಾ ಕೃತ್ವಾ ತು ತಾಂ ಸೇನಾಂ
ಮಾಧುರೀಂ ಪುತ್ರಯೋರ್ದ್ವಯೋಃ ।
ಧನಂ ಚ ಯುಕ್ತಂ ಕೃತ್ವಾ ವೈ
ಸ್ಥಾಪಯಾಮಾಸ ಪಾರ್ಥಿವಃ ॥೧೦॥

ಸುಬಾಹುಂ ಮಧುರಾಯಾಂ ಚ ವೈದಿಶೇ ಶತ್ರುಘಾತಿನಮ್ ।
ಯಯೌ ಸ್ಥಾಪ್ಯ ತದಾಯೋಧ್ಯಾಂ ರಥೇನೈಕೇನ ರಾಘವಃ ॥೧೧॥

ಸ ದದರ್ಶ ಮಹಾತ್ಮಾನಂ ಜ್ವಲನ್ತಮಿವ ಪಾವಕಮ್ ।
ಸೂಕ್ಷ್ಮಕ್ಷೌಮಾಮ್ಬರಧರಂ ಮುನಿಭಿಃ ಸಾರ್ಧಮಕ್ಷಯೈಃ ॥೧೨॥

ಸೋऽಭಿವಾದ್ಯ ತತೋ ರಾಮಂ ಪ್ರಾಞ್ಜಲಿಃ ಪ್ರಯತೇನ್ದ್ರಿಯಃ ।
ಉವಾಚ ವಾಕ್ಯಂ ಧರ್ಮಜ್ಞಂ ಧರ್ಮಮೇವಾನುಚಿನ್ತಯನ್ ॥೧೩॥

ಕೃತ್ವಾಭಿಷೇಕಂ ಸುತಯೋರ್ದ್ವಯೋ ರಾಘವನನ್ದನ ।
ತವಾನುಗಮನೇ ರಾಜನ್ವಿದ್ಧಿ ಮಾಂ ಕೃತನಿಶ್ಚಯಮ್ ॥೧೪॥

ನ ಚಾನ್ಯದದ್ಯ ವಕ್ತವ್ಯಮತೋ ವೀರ ನ ಶಾಸನಮ್ ।
ವಿಹನ್ಯಮಾನಮಿಚ್ಛಾಮಿ ಮದ್ವಿಧೇನ ವಿಶೇಷತಃ ॥೧೫॥

ತಸ್ಯ ತಾಂ ಬುದ್ಧಿಮಕ್ಲೀಬಾಂ ವಿಜ್ಞಾಯ ರಘುನನ್ದನಃ ।
ಬಾಢಮಿತ್ಯೇವ ಶತ್ರುಘ್ನಂ ರಾಮೋ ವಾಕ್ಯಮುವಾಚ ಹ ॥೧೬॥

ತಸ್ಯ ವಾಕ್ಯಸ್ಯ ವಾಕ್ಯಾನ್ತೇ ವಾನರಾಃ ಕಾಮರೂಪಿಣಃ ।
ಋಕ್ಷರಾಕ್ಷಸಸಂಘಾಶ್ಚ ಸಮಾಪೇತುರನೇಕಶಃ ॥೧೭॥

ಸುಗ್ರೀವಂ ತೇ ಪುರಸ್ಕೃತ್ಯ ಸರ್ವ ಏವ ಸಮಾಗತಾಃ ।
ತಂ ರಾಮಂ ದ್ರಷ್ಟುಮನಸಃ ಸ್ವರ್ಗಾಯಾಭಿಮುಖಂ ಸ್ಥಿತಮ್ ॥೧೮॥

ದೇವಪುತ್ರಾ ಋಷಿಸುತಾ ಗನ್ಧರ್ವಾಣಾಂ ಸುತಾಸ್ತಥಾ ।
ರಾಮಕ್ಷಯಂ ವಿದಿತ್ವಾ ತೇ ಸರ್ವ ಏವ ಸಮಾಗತಾಃ ॥೧೯॥

ತೇ ರಾಮಮಭಿವಾದ್ಯೋಚುಃ ಸರ್ವೇ ವಾನರರಾಕ್ಷಸಾಃ ।
ತವಾನುಗಮನೇ ರಾಜನ್ಸಂಪ್ರಾಪ್ತಾಃ ಸ್ಮ ಸಮಾಗತಾಃ ॥೨೦॥

ಯದಿ ರಾಮ ವಿನಾಸ್ಮಾಭಿರ್ಗಚ್ಛೇಸ್ತ್ವಂ ಪುರುಷೋತ್ತಮ ।
ಯಮದಣ್ಡಮಿವೋದ್ಯಮ್ಯ ತ್ವಯಾ ಸ್ಮ ವಿನಿಪಾತಿತಾಃ ।
ತೈರೇವಮುಕ್ತಃ ಕಾಕುತ್ಸ್ಥೋ ಬಾಢಮಿತ್ಯಬ್ರವೀತ್ ಸ್ಮಯನ್ ॥೨೧॥

ಏತಸ್ಮಿನ್ನನ್ತರೇ ರಾಮಂ ಸುಗ್ರೀವೋಽಪಿ ಮಹಾಬಲಃ ।
ಪ್ರಣಮ್ಯ ವಿಧಿವದ್ವೀರಂ ವಿಜ್ಞಾಪಯಿತುಮುದ್ಯತಃ ॥೨೨॥

ಅಭಿಷಿಚ್ಯಾಙ್ಗದಂ ವೀರಮಾಗತೋಽಸ್ಮಿ ನರೇಶ್ವರ ।
ತವಾನುಗಮನೇ ರಾಜನ್ವಿದ್ಧಿ ಮಾಂ ಕೃತನಿಶ್ಚಯಮ್ ॥೨೩॥

ತಸ್ಯ ತದ್ವಚನಂ ಶ್ರುತ್ವಾ ರಾಮೋ ರಮಯತಾಂ ವರಃ ।
ವಾನರೇನ್ದ್ರಮಥೋವಾಚ ಮೈತ್ರಂ ತಸ್ಯಾನುಚಿನ್ತಯನ್ ॥೨೪॥

ಸಖೇ ಶೃಣುಷ್ವ ಸುಗ್ರೀವ ನ ತ್ವಯಾಹಂ ವಿನಾಕೃತಃ ।
ಗಚ್ಛೇಯಂ ದೇವಲೋಕಂ ವಾ ಪರಮಂ ವಾ ಪದಂ ಮಹತ್ ॥೨೫॥

ವಿಭೀಷಣಮಥೋವಾಚ ರಾಕ್ಷಸೇನ್ದ್ರಂ ಮಹಾಯಶಾಃ ॥೨೬॥

ಯಾವತ್ಪ್ರಜಾ ಧರಿಷ್ಯನ್ತಿ ತಾವತ್ತ್ವಂ ವೈ ವಿಭೀಷಣ ।
ರಾಕ್ಷಸೇನ್ದ್ರ ಮಹಾವೀರ್ಯ ಲಙ್ಕಾಸ್ಥಃ ಸ್ವಂ ಧರಿಷ್ಯಸಿ ॥೨೭॥

ಯಾವಚ್ಚನ್ದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠತಿ ಮೇದಿನೀ ।
ಯಾವಚ್ಚ ಮತ್ಕಥಾ ಲೋಕೇ ತಾವದ್ರಾಜ್ಯಂ ತವಾಸ್ತ್ವಿಹ ॥೨೮॥

ಶಾಸಿತಶ್ಚ ಸಖಿತ್ವೇನ ಕಾರ್ಯಂ ತೇ ಮಮ ಶಾಸನಮ್ ।
ಪ್ರಜಾಃ ಸಂರಕ್ಷ ಧರ್ಮೇಣ ನೋತ್ತರಂ ವಕ್ತುಮರ್ಹಸಿ ॥೨೯॥

ಕಿಂಚಾನ್ಯದ್ವಕ್ತುಮಿಚ್ಛಾಮಿ ರಾಕ್ಷಸೇನ್ದ್ರ ಮಹಾಬಲ ।
ಆರಾಧಯ ಜಗನ್ನಾಥಮಿಕ್ಷ್ವಾಕುಕುಲದೈವತಮ್ ।
ಆರಾಧನೀಯಮನಿಶಂ ದೇವೈರಪಿ ಸವಾಸವೈಃ ॥೩೦॥

ತಥೇತಿ ಪ್ರತಿಜಗ್ರಾಹ ರಾಮವಾಕ್ಯಂ ವಿಭೀಷಣಃ ।
ರಾಜಾ ರಾಕ್ಷಸಮುಖ್ಯಾನಾಂ ರಾಘವಾಜ್ಞಾಮನುಸ್ಮರನ್ ॥೩೧॥

ತಮೇವಮುಕ್ತ್ವಾ ಕಾಕುತ್ಸ್ಥೋ ಹನೂಮನ್ತಮಥಾಬ್ರವೀತ್ ।
ಜೀವಿತೇ ಕೃತಬುದ್ಧಿಸ್ತ್ವಂ ಮಾ ಪ್ರತಿಜ್ಞಾಂ ವೃಥಾ ಕೃಥಾಃ ॥೩೨॥

ಮತ್ಕಥಾಃ ಪ್ರಚರಿಷ್ಯನ್ತಿ ಯಾವಲ್ಲೋಕೇ ಹರೀಶ್ವರ ।
ತಾವದ್ರಮಸ್ವ ಸುಪ್ರೀತೋ ಮದ್ವಾಕ್ಯಮನುಪಾಲಯನ್ ॥೩೩॥

ಏವಮುಕ್ತಸ್ತು ಹನುಮಾನ್ರಾಘವೇಣ ಮಹಾತ್ಮನಾ ।
ವಾಕ್ಯಂ ವಿಜ್ಞಾಪಯಾಮಾಸ ಪರಂ ಹರ್ಷಮವಾಪ್ಯ ಚ ॥೩೪॥

ಯಾವತ್ತವ ಕಥಾ ಲೋಕೇ ವಿಚರಿಷ್ಯತಿ ಪಾವನೀ ।
ತಾವತ್ಸ್ಥಾಸ್ಯಾಮಿ ಮೇದಿನ್ಯಾಂ ತವಾಜ್ಞಾಮನುಪಾಲಯನ್ ॥೩೫॥

ಜಾಮ್ಬವನ್ತಂ ತಥೋಕ್ತ್ವಾ ತು ವೃದ್ಧಂ ಬ್ರಹ್ಮಸುತಂ ತದಾ ।
ಮೈನ್ದಂ ಚ ದ್ವಿವಿದಂ ಚೈವ ಪಞ್ಚ ಜಾಮ್ಬವತಾ ಸಹ ॥೩೬॥

ಯಾವತ್ಕಲಿಶ್ಚ ಸಂಪ್ರಾಪ್ತಸ್ತಾವಜ್ಜೀವತ ಸರ್ವದಾ ॥೩೭॥

ತಾನೇವಮುಕ್ತ್ವಾ ಕಾಕುತ್ಸ್ಥಃ ಸರ್ವಾಂಸ್ತಾನೃಕ್ಷವಾನರಾನ್ ।
ಉವಾಚ ಬಾಢಂ ಗಚ್ಛಧ್ವಂ ಮಯಾ ಸಾರ್ಧಂ ಯಥೋದಿತಮ್ ॥೩೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಅಷ್ಟಾಧಿಕಶತತಮಃ ಸರ್ಗಃ

ನವಾಧಿಕಶತತಮಃ ಸರ್ಗಃ

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ।
ರಾಮಃ ಕಮಲಪತ್ರಾಕ್ಷಃ ಪುರೋಧಸಮಥಾಬ್ರವೀತ್ ॥೧॥

ಅಗ್ನಿಹೋತ್ರಂ ವ್ರಜತ್ವಗ್ರೇ ದೀಪ್ಯಮಾನಂ ಸಹ ದ್ವಿಜೈಃ ।
ವಾಜಪೇಯಾತಪತ್ರಂ ಚ ಶೋಭಮಾನಂ ಮಹಾಪಥೇ ॥೨॥

ತತೋ ವಸಿಷ್ಠಸ್ತೇಜಸ್ವೀ ಸರ್ವಂ ನಿರವಶೇಷತಃ ।
ಚಕಾರ ವಿಧಿವದ್ಧರ್ಮಂ ಮಹಾಪ್ರಾಸ್ಥಾನಿಕಂ ವಿಧಿಮ್ ॥೩॥

ತತಃ ಸೂಕ್ಷ್ಮಾಮ್ಬರಧರೋ ಬ್ರಹ್ಮಚಾವರ್ತಯನ್ಪರಮ್ ।
ಕುಶಾನ್ಗೃಹೀತ್ವಾ ಪಾಣಿಭ್ಯಾಂ ಸರಯೂಂ ಪ್ರಯಯಾವಥ ॥೪॥

ಅವ್ಯಾಹರನ್ಕ್ವಚಿತ್ಕಿಂಚಿನ್ನಿಶ್ಚೇಷ್ಟೋ ನಿಃಸುಖಃ ಪಥಿ ।
ನಿರ್ಜಗಾಮ ಗೃಹಾತ್ತಸ್ಮಾದ್ದೀಪ್ಯಮಾನೋ ಯಥಾಂಶುಮಾನ್ ॥೫॥

ರಾಮಸ್ಯ ದಕ್ಷಿಣೇ ಪಾರ್ಶ್ವೇ ಸಪದ್ಮಾ ಶ್ರೀರುಪಸ್ಥಿತಾ ।
ಸವ್ಯೇ ತು ಹ್ರೀರ್ಮಹಾದೇವೀ ವ್ಯವಸಾಯಸ್ತಥಾಗ್ರತಃ ॥೬॥

ಶರಾ ನಾನಾವಿಧಾಶ್ಚಾಪಿ ಧನುರಾಯತ್ತಮುತ್ತಮಮ್ ।
ತಥಾಯುಧಾಶ್ಚ ತೇ ಸರ್ವೇ ಯಯುಃ ಪುರುಷವಿಗ್ರಹಾಃ ॥೭॥

ವೇದಾ ಬ್ರಾಹ್ಮಣರೂಪೇಣ ಗಾಯತ್ರೀ ಸರ್ವರಕ್ಷಿಣೀ ।
ಓಙ್ಕಾರೋಽಥ ವಷಟ್ಕಾರಃ ಸರ್ವೇ ರಾಮಮನುವ್ರತಾಃ ॥೮॥

ಋಷಯಶ್ಚ ಮಹಾತ್ಮಾನಃ ಸರ್ವ ಏವ ಮಹೀಸುರಾಃ ।
ಅನ್ವಗಚ್ಛನ್ಮಹಾತ್ಮಾನಂ ಸ್ವರ್ಗದ್ವಾರಮಪಾವೃತಮ್ ॥೯॥

ತಂ ಯಾನ್ತಮನುಗಚ್ಛನ್ತಿ ಹ್ಯನ್ತಃಪುರಚರಾಃ ಸ್ತ್ರಿಯಃ ।
ಸವೃದ್ಧಬಾಲದಾಸೀಕಾಃ ಸವರ್ಷವರಕಿಂಕರಾಃ ॥೧೦॥

ಸಾಂತಃಪುರಶ್ಚ ಭರತಃ ಶತ್ರುಘ್ನಸಹಿತೋ ಯಯೌ ।
ರಾಮಂ ಗತಿಮುಪಾಗಮ್ಯ ಸಾಗ್ನಿಹೋತ್ರಮನುವ್ರತಾಃ ॥೧೧॥

ತೇ ಚ ಸರ್ವೇ ಮಹಾತ್ಮಾನಃ ಸಾಗ್ನಿಹೋತ್ರಾಃ ಸಮಾಗತಾಃ ।
ಸಪುತ್ರದಾರಾಃ ಕಾಕುತ್ಸ್ಥಮನುಜಗ್ಮುರ್ಮಹಾಮತಿಮ್ ॥೧೨॥

ಮನ್ತ್ರಿಣೋ ಭೃತ್ಯವರ್ಗಾಶ್ಚ ಸಪುತ್ರಪಶುಬಾನ್ಧವಾಃ ।
ಸರ್ವೇ ಸಹಾನುಗಾ ರಾಮಮನ್ವಗಚ್ಛನ್ ಪ್ರಹೃಷ್ಟವತ್ ॥೧೩॥

ತತಃ ಸರ್ವಾಃ ಪ್ರಕೃತಯೋ ಹೃಷ್ಟಪುಷ್ಟಜನಾವೃತಾಃ ।
ಗಚ್ಛನ್ತಮನುಗಚ್ಛನ್ತಿ ರಾಘವಂ ಗುಣರಞ್ಜಿತಾಃ ॥೧೪॥

ತತಃ ಸಸ್ತ್ರೀಪುಮಾಂಸಸ್ತೇ ಸಪಕ್ಷಿಪಶುವಾಹನಾಃ ।
ರಾಘವಸ್ಯಾನುಗಾಃ ಸರ್ವೇ ಹೃಷ್ಟಾ ವಿಗತಕಲ್ಮಷಾಃ ॥೧೫॥

ಸ್ನಾತಾಃ ಪ್ರಮುದಿತಾಃ ಸರ್ವೇ ಹೃಷ್ಟಾಃ ಪುಷ್ಟಾಶ್ಚ ವಾನರಾಃ ।
ದೃಢಂ ಕಿಲಕಿಲಾಶಬ್ದೈಃ ಸರ್ವಂ ರಾಮಮನುವ್ರತಮ್ ॥೧೬॥

ನ ತತ್ರ ಕಶ್ಚಿದ್ದೀನೋ ವಾ ವ್ರೀಡಿತೋ ವಾಪಿ ದುಃಖಿತಃ ।
ಹೃಷ್ಟಂ ಪ್ರಮುದಿತಂ ಸರ್ವಂ ಬಭೂವ ಪರಮಾದ್ಭುತಮ್ ॥೧೭॥

ದ್ರಷ್ಟುಕಾಮೋಽಥ ನಿರ್ಯಾನ್ತಂ ರಾಮಂ ಜಾನಪದೋ ಜನಃ ।
ಯಃ ಪ್ರಾಪ್ತಃ ಸೋಽಪಿ ದೃಷ್ಟ್ವೈವ ಸ್ವರ್ಗಾಯಾನುಗತೋ ಮುದಾ ॥೧೮॥

ಋಕ್ಷವಾನರರಕ್ಷಾಂಸಿ ಜನಾಶ್ಚ ಪುರವಾಸಿನಃ ।
ಅಗಚ್ಛನ್ಪರಯಾ ಭಕ್ತ್ಯಾ ಪೃಷ್ಠತಃ ಸುಸಮಾಹಿತಾಃ ॥೧೯॥

ಯಾನಿ ಭೂತಾನಿ ನಗರೇಽಪ್ಯನ್ತರ್ಧಾನಗತಾನಿ ಚ ।
ರಾಘವಂ ತಾನ್ಯನುಯಯುಃ ಸ್ವರ್ಗಾಯ ಸಮುಪಸ್ಥಿತಮ್ ॥೨೦॥

ಯಾನಿ ಪಶ್ಯನ್ತಿ ಕಾಕುತ್ಸ್ಥಂ ಸ್ಥಾವರಾಣಿ ಚರಾಣಿ ಚ ।
ಸರ್ವಾಣಿ ರಾಮಗಮನೇ ಹ್ಯನುಜಗ್ಮುರ್ಹಿ ತಾನ್ಯಪಿ ॥೨೧॥

ನೋಚ್ಛ್ವಸತ್ತದಯೋಧ್ಯಾಯಾಂ ಸುಸೂಕ್ಷ್ಮಮಪಿ ದೃಶ್ಯತೇ ।
ತಿರ್ಯಗ್ಯೋನಿಗತಾಶ್ಚಾಪಿ ಸರ್ವೇ ರಾಮಮನುವ್ರತಾಃ ॥೨೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ನವಾಧಿಕಶತತಮಃ ಸರ್ಗಃ

ದಶಾಧಿಕಶತತಮಃ ಸರ್ಗಃ

ಅಧ್ಯರ್ಧಯೋಜನಂ ಗತ್ವಾ ನದೀಂ ಪಶ್ಚಾನ್ಮುಖಾಶ್ರಿತಾಮ್ ।
ಸರಯೂಂ ಪುಣ್ಯಸಲಿಲಾಂ ದದರ್ಶ ರಘುನನ್ದನಃ ॥೧॥

ತಾಂ ನದೀಮಾಕುಲಾವರ್ತಾಂ ಸರ್ವತ್ರಾನುಸರನ್ನೃಪಃ ।
ಆಗತಃ ಸಪ್ರಜೋ ರಾಮಸ್ತಂ ದೇಶಂ ರಘುನನ್ದನಃ ॥೨॥

ಅಥ ತಸ್ಮಿನ್ಮುಹೂರ್ತೇತು ಬ್ರಹ್ಮಾ ಲೋಕಪಿತಾಮಹಃ ।
ಸರ್ವೈಃ ಪರಿವೃತೋ ದೇವೈರ್ಋಷಿಭಿಶ್ಚ ಮಹಾತ್ಮಭಿಃ ॥೩॥

ಆಯಯೌ ಯತ್ರ ಕಾಕುತ್ಸ್ಥಃ ಸ್ವರ್ಗಾಯ ಸಮುಪಸ್ಥಿತಃ ।
ವಿಮಾನಶತಕೋಟೀಭಿರ್ದಿವ್ಯಾಭಿರಭಿಸಂವೃತಃ ॥೪॥

ದಿವ್ಯತೇಜೋವೃತಂ ವ್ಯೋಮ ಜ್ಯೋತಿರ್ಭೂತಮನುತ್ತಮಮ್ ।
ಸ್ವಯಂಪ್ರಭೈಃ ಸ್ವತೇಜೋಭಿಃ ಸ್ವರ್ಗಿಭಿಃ ಪುಣ್ಯಕರ್ಮಭಿಃ ॥೫॥

ಪುಣ್ಯಾ ವಾತಾ ವವುಶ್ಚೈವ ಗನ್ಧವನ್ತಃ ಸುಖಪ್ರದಾಃ ।
ಪಪಾತ ಪುಷ್ಪವೃಷ್ಟಿಶ್ಚ ದೇವೈರ್ಮುಕ್ತಾ ಮಹೌಘವತ್ ॥೬॥

ತಸ್ಮಿಂಸ್ತೂರ್ಯಶತೈಃ ಕೀರ್ಣೇ ಗನ್ಧರ್ವಾಪ್ಸರಸಂಕುಲೇ ।
ಸರಯೂಸಲಿಲಂ ರಾಮಃ ಪದ್ಭ್ಯಾಂ ಸಮುಪಚಕ್ರಮೇ ॥೭॥

ತತಃ ಪಿತಾಮಹೋ ವಾಣೀಂ ತ್ವನ್ತರಿಕ್ಷಾದಭಾಷತ ।
ಆಗಚ್ಛ ವಿಷ್ಣೋ ಭದ್ರಂ ತೇ ದಿಷ್ಟ್ಯಾ ಪ್ರಾಪ್ತೋऽಸಿ ರಾಘವ ॥೮॥

ಭ್ರಾತೃಭಿಃ ಸಹ ದೇವಾಭೈಃ ಪ್ರವಿಶಸ್ವ ಸ್ವಕಾಂ ತನುಮ್ ।
ಯಾಮಿಚ್ಛಸಿ ಮಹಾಬಾಹೋ ತಾಂ ತನುಂ ಪ್ರವಿಶ ಸ್ವಕಾಮ್ ॥೯॥

ವೈಷ್ಣವೀಂ ತಾಂ ಮಹಾತೇಜೋ ಯದ್ವಾಕಾಶಂ ಸನಾತನಮ್ ।
ತ್ವಂ ಹಿ ಲೋಕಗತಿರ್ದೇವ ನ ತ್ವಾಂ ಕೇಚಿತ್ಪ್ರಜಾನತೇ ॥೧೦॥

ಋತೇ ಮಾಯಾಂ ವಿಶಾಲಾಕ್ಷೀಂ ತವ ಪೂರ್ವಪರಿಗ್ರಹಾಮ್ ।
ತ್ವಾಮಚಿನ್ತ್ಯಂ ಮಹದ್ಭೂತಮಕ್ಷಯಂ ಚಾಜರಂ ತಥಾ ।
ಯಾಮಿಚ್ಛಸಿ ಮಹಾತೇಜಸ್ತಾಂ ತನುಂ ಪ್ರವಿಶ ಸ್ವಯಮ್ ॥೧೧॥

ಪಿತಾಮಹವಚಃ ಶ್ರುತ್ವಾ ವಿನಿಶ್ಚಿತ್ಯ ಮಹಾಮತಿಃ ।
ವಿವೇಶ ವೈಷ್ಣವಂ ತೇಜಃ ಸಶರೀರಃ ಸಹಾನುಜಃ ॥೧೨॥

ತತೋ ವಿಷ್ಣುಮಯಂ ದೇವಂ ಪೂಜಯನ್ತಿ ಸ್ಮ ದೇವತಾಃ ।
ಸಾಧ್ಯಾ ಮರುದ್ಗಣಾಶ್ಚೈವ ಸೇನ್ದ್ರಾಃ ಸಾಗ್ನಿಪುರೋಗಮಾಃ ॥೧೩॥

ಯೇ ಚ ದಿವ್ಯಾ ಋಷಿಗಣಾ ಗನ್ಧರ್ವಾಪ್ಸರಸಶ್ಚ ಯಾಃ ।
ಸುಪರ್ಣನಾಗಯಕ್ಷಾಶ್ಚ ದೈತ್ಯದಾನವರಾಕ್ಷಸಾಃ ॥೧೪॥

ಸರ್ವಂ ಪುಷ್ಟಂ ಪ್ರಮುದಿತಂ ಸುಸಂಪೂರ್ಣಮನೋರಥಮ್ ।
ಸಾಧು ಸಾಧ್ವಿತಿ ತೈರ್ದೇವೈಸ್ತ್ರಿದಿವಂ ಗತಕಲ್ಮಷಮ್ ॥೧೫॥

ಅಥ ವಿಷ್ಣುರ್ಮಹಾತೇಜಾಃ ಪಿತಾಮಹಮುವಾಚ ಹ ।
ಏಷಾಂ ಲೋಕಂ ಜನೌಘಾನಾಂ ದಾತುಮರ್ಹಸಿ ಸುವ್ರತ ॥೧೬॥

ಇಮೇ ಹಿ ಸರ್ವೇ ಸ್ನೇಹಾನ್ಮಾಮನುಯಾತಾ ಮನಸ್ವಿನಃ ।
ಭಕ್ತಾ ಹಿ ಭಜಿತವ್ಯಾಶ್ಚ ತ್ಯಕ್ತಾತ್ಮಾನಶ್ಚ ಮತ್ಕೃತೇ ॥೧೭॥

ತಚ್ಛ್ರುತ್ವಾ ವಿಷ್ಣುವಚನಂ ಬ್ರಹ್ಮಾ ಲೋಕಗುರುಃ ಪ್ರಭುಃ ।
ಲೋಕಾನ್ಸಂತಾನಕಾನ್ನಾಮ ಯಾಸ್ಯನ್ತೀಮೇ ಸಮಾಗತಾಃ ॥೧೮॥

ಯಚ್ಚ ತಿರ್ಯಗ್ಗತಂ ಕಿಂಚಿತ್ತ್ವಾಮೇವಮನುಚಿನ್ತಯತ್ ।
ಪ್ರಾಣಾಂಸ್ತ್ಯಕ್ಷ್ಯತಿ ಭಕ್ತ್ಯಾ ತತ್ಸಂತಾನೇಷು ನಿವತ್ಸ್ಯತಿ ।
ಸರ್ವೈರ್ಬ್ರಹ್ಮಗುಣೈರ್ಯುಕ್ತೇ ಬ್ರಹ್ಮಲೋಕಾದನನ್ತರೇ ॥೧೯॥

ವಾನರಾಶ್ಚ ಸ್ವಕಾಂ ಯೋನಿಮೃಕ್ಷಾಶ್ಚೈವ ತಥಾ ಯಯುಃ ।
ಯೇಭ್ಯೋ ವಿನಿಃಸೃತಾಃ ಸರ್ವೇ ಸುರೇಭ್ಯಃ ಸುರಸಮ್ಭವಾಃ ॥೨೦॥

ತೇಷು ಪ್ರವಿವಿಶೇ ಚೈವ ಸುಗ್ರೀವಃ ಸೂರ್ಯಮಣ್ಡಲಮ್ ।
ಪಶ್ಯತಾಂ ಸರ್ವದೇವಾನಾಂ ಸ್ವಾನ್ ಪಿತೄನ್ ಪ್ರತಿಪೇದಿರೇ ॥೨೧॥

ತಥಾ ಬ್ರುವತಿ ದೇವೇಶೇ ಗೋಪ್ರತಾರಮುಪಾಗತಾಃ ।
ಭೇಜಿರೇ ಸರಯೂಂ ಸರ್ವೇ ಹರ್ಷಪೂರ್ಣಾಶ್ರುವಿಕ್ಲವಾಃ ॥೨೨॥

ಅವಗಾಹ್ಯಾಪ್ಸು ಯೋ ಯೋ ವೈ ಪ್ರಾಣಾಂಸ್ತ್ಯಕ್ತ್ವಾ ಪ್ರಹೃಷ್ಟವತ್ ।
ಮಾನುಷಂ ದೇಹಮುತ್ಸೃಜ್ಯ ವಿಮಾನಂ ಸೋಽಧ್ಯರೋಹತ ॥೨೩॥

ತಿರ್ಯಗ್ಯೋನಿಗತಾನಾಂ ಚ ಶತಾನಿ ಸರಯೂಜಲಮ್ ।
ಸಂಪ್ರಾಪ್ಯ ತ್ರಿದಿವಂ ಜಗ್ಮುಃ ಪ್ರಭಾಸುರವಪೂಂಷಿ ತು ॥೨೪॥

ದಿವ್ಯಾ ದಿವ್ಯೇನ ವಪುಷಾ ದೇವಾ ದೀಪ್ತಾ ಇವಾಭವನ್ ॥೨೫॥

ಗತ್ವಾ ತು ಸರಯೂತೋಯಂ ಸ್ಥಾವರಾಣಿ ಚರಾಣಿ ಚ ।
ಪ್ರಾಪ್ಯ ತತ್ತೋಯವಿಕ್ಲೇದಂ ದೇವಲೋಕಮುಪಾಗಮನ್ ॥೨೬॥

ತಸ್ಮಿನ್ನೇಽಪಿ ಸಮಾಪನ್ನಾ ಋಕ್ಷವಾನರರಾಕ್ಷಸಾಃ ।
ತೇಽಪಿ ಸ್ವರ್ಗಂ ಪ್ರವಿವಿಶುರ್ದೇಹಾನ್ನಿಕ್ಷಿಪ್ಯ ಚಾಮ್ಭಸಿ ॥೨೭॥

ತತಃ ಸಮಾಗತಾನ್ಸರ್ವಾನ್ ಸ್ಥಾಪ್ಯ ಲೋಕಗುರುರ್ದಿವಿ ।
ಹೃಷ್ಟೈಃ ಪ್ರಮುದಿತೈರ್ದೇವೈರ್ಜಗಾಮ ತ್ರಿದಿವಂ ಮಹತ್ ॥೨೮॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ದಶಾಧಿಕಶತತಮಃ ಸರ್ಗಃ

ಏಕಾದಶಾಧಿಕಶತತಮಃ ಸರ್ಗಃ

ಏತಾವದೇತದಾಖ್ಯಾನಂ ಸೋತ್ತರಂ ಬ್ರಹ್ಮಪೂಜಿತಮ್ ।
ರಾಮಾಯಣಮಿತಿ ಖ್ಯಾತಂ ಮುಖ್ಯಂ ವಾಲ್ಮೀಕಿನಾ ಕೃತಮ್ ॥೧॥

ತತಃ ಪ್ರತಿಷ್ಠಿತೋ ವಿಷ್ಣುಃ ಸ್ವರ್ಗಲೋಕೇ ಯಥಾ ಪುರಾ ।
ಯೇನ ವ್ಯಾಪ್ತಮಿದಂ ಸರ್ವಂ ತ್ರೈಲೋಕ್ಯಂ ಸಚರಾಚರಮ್ ॥೨॥

ತತೋ ದೇವಾಃ ಸಗನ್ಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ನಿತ್ಯಂ ಶೃಣ್ವನ್ತಿ ಸಂಹೃಷ್ಟಾಃ ಕಾವ್ಯಂ ರಾಮಾಯಣಂ ದಿವಿ ॥೩॥

ಇದಮಾಖ್ಯಾನಮಾಯುಷ್ಯಂ ಸೌಭಾಗ್ಯಂ ಪಾಪನಾಶನಮ್ ।
ರಾಮಾಯಣಂ ವೇದಸಮಂ ಶ್ರಾದ್ಧೇಷು ಶ್ರಾವಯೇದ್ಬುಧಃ ॥೪॥

ಅಪುತ್ರೋ ಲಭತೇ ಪುತ್ರಮಧನೋ ಲಭತೇ ಧನಮ್ ।
ಸರ್ವಪಾಪೈಃ ಪ್ರಮುಚ್ಯೇತ ಪಾದಮಪ್ಯಸ್ಯ ಯಃ ಪಠೇತ್ ॥೫॥

ಪಾಪಾನ್ಯಪಿ ಚ ಯಃ ಕುರ್ಯಾದಹನ್ಯಹನಿ ಮಾನವಃ ।
ಪಠತ್ಯೇಕಮಪಿ ಶ್ಲೋಕಂ ಪಾಪಾತ್ಸ ಪರಿಮುಚ್ಯತೇ ॥೬॥

ವಾಚಕಾಯ ಚ ದಾತವ್ಯಂ ವಸ್ತ್ರಂ ಧೇನುಹಿರಣ್ಯಕಮ್ ।
ವಾಚಕೇ ಪರಿತುಷ್ಟೇ ತು ತುಷ್ಟಾಃ ಸ್ಯುಃ ಸರ್ವದೇವತಾಃ ॥೭॥

ಏತದಾಖ್ಯಾನಮಾಯುಷ್ಯಂ ಪಠನ್ರಾಮಾಯಣಂ ನರಃ ।
ಸಪುತ್ರಪೌತ್ರೋ ಲೋಕೇಽಸ್ಮಿನ್ಪ್ರೇತ್ಯ ಚೇಹ ಮಹೀಯತೇ ॥೮॥

ರಾಮಾಯಣಂ ಗೋವಿಸರ್ಗೇ ಮಧ್ಯಾಹ್ನೇ ವಾ ಸಮಾಹಿತಃ ।
ಸಾಯಾಹ್ನೇ ವಾಪರಾಹ್ಣೇ ಚ ವಾಚಯನ್ನಾವಸೀದತಿ ॥೯॥

ಅಯೋಧ್ಯಾಪಿ ಪುರೀ ರಮ್ಯಾ ಶೂನ್ಯಾ ವರ್ಷಗಣಾನ್ಬಹೂನ್ ।
ಋಷಭಂ ಪ್ರಾಪ್ಯ ರಾಜಾನಂ ನಿವಾಸಮುಪಯಾಸ್ಯತಿ ॥೧೦॥

ಏತದಾಖ್ಯಾನಮಾಯುಷ್ಯಂ ಸಭವಿಷ್ಯಂ ಸಹೋತ್ತರಮ್ ।
ಕೃತವಾನ್ಪ್ರಚೇತಸಃ ಪುತ್ರಸ್ತದ್ಬ್ರಹ್ಮಾಪ್ಯನ್ವಮನ್ಯತ ॥೧೧॥

ಅಶ್ವಮೇಧಸಹಸ್ರಸ್ಯ ವಾಜಪೇಯಾಯುತಸ್ಯ ಚ ।
ಲಭತೇ ಶ್ರವಣಾದೇವ ಸರ್ಗಸ್ಯೈಕಸ್ಯ ಮಾನವಃ ॥೧೨॥

ಪ್ರಯಾಗಾದೀನಿ ತೀರ್ಥಾನಿ ಗಙ್ಗಾದ್ಯಾಃ ಸರಿತಸ್ತಥಾ ।
ನೈಮಿಷಾದೀನ್ಯರಣ್ಯಾನಿ ಕುರುಕ್ಷೇತ್ರಾದಿಕಾನ್ಯಪಿ ।
ಗತಾನಿ ತೇನ ಲೋಕೇಸ್ಮಿನ್ಯೇನ ರಾಮಾಯಣಂ ಶ್ರುತಮ್ ॥೧೩॥

ಹೇಮಭಾರಂ ಕುರುಕ್ಷೇತ್ರೇ ಗ್ರಸ್ತೇ ಭಾನೌ ಪ್ರಯಚ್ಛತಿ ।
ಯಶ್ಚ ರಾಮಾಯಣಂ ಲೋಕೇ ಶೃಣೋತಿ ಸದೃಶಾವುಭೌ ॥೧೪॥

ಸಮ್ಯಕ್ ಶ್ರದ್ಧಾಸಮಾಯುಕ್ತಃ ಶೃಣುತೇ ರಾಘವೀಂ ಕಥಾಮ್ ।
ಸರ್ವಪಾಪಾತ್ಪ್ರಮುಚ್ಯೇತ ವಿಷ್ಣುಲೋಕಂ ಸ ಗಚ್ಛತಿ ॥೧೫॥

ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಮ್ ।
ಯಃ ಶೃಣೋತಿ ಸದಾ ಭಕ್ತ್ಯಾ ಸ ಗಚ್ಛೇದ್ವೈಷ್ಣವೀಂ ತನುಮ್ ॥೧೬॥

ಪುತ್ರದಾರಾಶ್ಚ ವರ್ಧನ್ತೇ ಸಮ್ಪದಃ ಸಂತತಿಸ್ತಥಾ ।
ಸತ್ಯಮೇತದ್ವಿದಿತ್ವಾ ತು ಶ್ರೋತವ್ಯಂ ನಿಯತಾತ್ಮಭಿಃ ॥೧೭॥

ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮನುತ್ತಮಮ್ ॥೧೮॥

ಯಃ ಪಠೇಚ್ಛೃಣುಯಾನ್ನಿತ್ಯಂ ಚರಿತಂ ರಾಘವಸ್ಯ ಹ ।
ಭಕ್ತ್ಯಾನಿಷ್ಕಲ್ಮಷೋ ಭೂತ್ವಾ ದೀರ್ಘಮಾಯುರವಾಪ್ನುಯಾತ್ ॥೧೯॥

ಚಿನ್ತಯೇದ್ರಾಘವಂ ನಿತ್ಯಂ ಶ್ರೇಯಃ ಪ್ರಾಪ್ತುಂ ಯ ಇಚ್ಛತಿ ।
ಶ್ರಾವಯೇದಿದಮಾಖ್ಯಾನಂ ಬ್ರಾಹ್ಮಣೇಭ್ಯೋ ದಿನೇ ದಿನೇ ॥೨೦॥

ಯಸ್ತ್ವಿದಂ ರಘುನಾಥಸ್ಯ ಚರಿತಂ ಸಕಲಂ ಪಠೇತ್ ।
ಸೋऽಸುಕ್ಷಯೇ ವಿಷ್ಣುಲೋಕಂ ಗಚ್ಛತ್ಯೇವ ನ ಸಂಶಯಃ ॥೨೧॥

ಪಿತಾ ಪಿತಾಮಹಸ್ತಸ್ಯ ತಥೈವ ಪ್ರಪಿತಾಮಹಃ ।
ತತ್ಪಿತಾ ತತ್ಪಿತಾ ಚೈವ ವಿಷ್ಣುಂ ಯಾನ್ತಿ ನ ಸಂಶಯಃ ॥೨೨॥

ಚತುರ್ವರ್ಗಪ್ರದಂ ನಿತ್ಯಂ ಚರಿತಂ ರಾಘವಸ್ಯ ತು ।
ತಸ್ಮಾದ್ಯತ್ನವತಾ ನಿತ್ಯಂ ಶ್ರೋತವ್ಯಂ ಪರಮಂ ಸದಾ ॥೨೩॥

ಶೃಣ್ವನ್ರಾಮಾಯಣಂ ಭಕ್ತ್ಯಾ ಯಃ ಪಾದಂ ಪದಮೇವ ವಾ ।
ಸ ಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ ॥೨೪॥

ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಉತ್ತರಕಾಣ್ಡೇ ಏಕಾದಶಾಧಿಕಶತತಮಃ ಸರ್ಗಃ

ಉತ್ತರಕಾಣ್ಡಂ ಸಂಪೂರ್ಣಮ್
ಶ್ರೀಮದ್ರಾಮಾಯಣಂ ಸಂಪೂರ್ಣಮ್
ಓಂ ತತ್ಸತ್ ; ಶುಭಂ ಭೂಯಾತ್

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ಶ್ರೀಮದ್ವಾಲ್ಮೀಕಿರಾಮಾಯಣ
ಹನ್ನೊಂದನೆಯ ಸಂಪುಟ-ಉತ್ತರಕಾಂಡ
೨ನೆಯ ಭಾಗ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಶತ್ರುಘ್ನನು ದೇವತೆಗಳಿಂದ ವರವನ್ನು ಪಡೆದು ಮಧುಪುರದಲ್ಲಿ ರಾಜ್ಯಭಾರವನ್ನಾರಂಭಿಸಿದುದು : ಹನ್ನೆರಡು ವರ್ಷಗಳನಂತರ ಶ್ರೀರಾಮನ ಬಳಿಗೆ ಹೋಗಲು ಶತ್ರುಘ್ನನು ಯೋಚಿಸಿದುದು

ಹತೇ ತು ಲವಣೇ ದೇವಾಃ ಸೇನ್ದ್ರಾಃ ಸಾಗ್ನಿಪುರೋಗಮಾಃ ।
ಊಚುಃ ಸುಮಧುರಾಂ ವಾಣೀಂ ಶತ್ರುಘ್ನಂ ಶತ್ರುತಾಪನಮ್ ॥೧॥

ಲವಣಾಸುರನು ಹತನಾಗಲು ಇಂದ್ರಾಗ್ನಿಪುರಸ್ಸರರಾದ ದೇವತೆಗಳು ಶತ್ರುತಾಪಕನಾದ ಶತ್ರುಘ್ನನಿಗೆ ಸುಮಧುರವಾದ ಈ ಮಾತನ್ನು ಹೇಳಿದರು :

ದಿಷ್ಟ್ಯಾ ತೇ ವಿಜಯೋ ವತ್ಸ ದಿಷ್ಟ್ಯಾ ಲವಣರಾಕ್ಷಸಃ ।
ಹತಃ ಪುರುಷಶಾರ್ದೂಲ ವರಂ ವರಯ ಸುವ್ರತ ॥೨॥

"ವತ್ಸ! ಸೌಭಾಗ್ಯವಶದಿಂದ ನೀನು ವಿಜಯಗಳಿಸಿದೆ. ಪುರುಷ ಶ್ರೇಷ್ಠನೇ! ಸೌಭಾಗ್ಯವಶದಿಂದ ಲವಣಾಸುರನು ಹತನಾದನು. ಸುಚರಿತ್ರನೇ! ನಿನಗೆ ಬೇಕಾದ ವರಗಳನ್ನು ಕೇಳು.

ನಿನಗೆ ವರವನ್ನು ಕೊಡುವ ಸಲುವಾಗಿಯೇ ನಾವೆಲ್ಲರೂ ಇಲ್ಲಿಗೆ ಬಂದಿರುವೆವು. ನಿನ್ನ ವಿಜಯವನ್ನೇ ನಾವು ಅಪೇಕ್ಷಿಸಿದ್ದೆವು. ನಮ್ಮ ದರ್ಶನವು

ಅಮೋಘವಾದುದು. ಆದುದರಿಂದ ನೀನು ಯಾವುದಾದರೂ ವರವನ್ನು ಕೇಳು."

ದೇವತೆಗಳ ಆ ಮಾತನ್ನು ಕೇಳಿ ವಿನಯಶೀಲನಾದ, ಶೂರನಾದ, ಮಹಾಬಾಹುವಾದ ಶತ್ರುಘ್ನನು ಕೈಗಳೆರಡನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಹೇಳಿದನು :

ಇಯಂ ಮಧುಪುರೀ ರಮ್ಯಾ ಮಧುರಾ ದೇವನಿರ್ಮಿತಾ ।
ನಿವೇಶಂ ಪ್ರಾಪ್ನುಯಾಚ್ಛೀಘ್ರಮೇಷ ಮೇಽಸ್ತು ವರಃ ಪರಃ ॥೫॥

"ದೇವತೆಗಳೇ! ದೇವನಿರ್ಮಿತವಾದ ಮತ್ತು ರಮಣೀಯವಾದ ಈ ಮಧುಪುರಿಯು ಶೀಘ್ರದಲ್ಲಿಯೇ ನನ್ನ ಮನೋಹರವಾದ ರಾಜಧಾನಿಯಾಗಿ ಪರಿವರ್ತನೆ ಹೊಂದಲಿ. ಇದೇ ನಾನು ನಿಮ್ಮಿಂದ ಅಪೇಕ್ಷಿಸುವ ವರವಾಗಿದೆ."

ಶತ್ರುಘ್ನನ ಈ ಮಾತನ್ನು ಕೇಳಿ ಪ್ರಸನ್ನಚಿತ್ತರಾದ ದೇವತೆಗಳು ಶತ್ರುಘ್ನನಿಗೆ ಹೇಳಿದರು : "ಬಾಢಂ ಹಾಗೆಯೇ ಆಗಲಿ.

ಭವಿಷ್ಯತಿ ಪುರೀ ರಮ್ಯಾ ಶೂರಸೇನಾ ನ ಸಂಶಯಃ ॥೬॥

ಈ ಪಟ್ಟಣವು ಅತ್ಯಂತರಮ್ಯವಾಗುತ್ತದೆ. ಶೂರರಾದ ಸೈನಿಕರಿಂದಲೂ ಸಂಪನ್ನವಾಗುತ್ತದೆ. ಶೂರಸೇನ ಎಂಬ ಹೆಸರಿನ ದೇಶವಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ."

ಶತ್ರುಘ್ನನಿಗೆ ಹೀಗೆ ವರವನ್ನಿತ್ತು ದೇವತೆಗಳು ಸ್ವರ್ಗಾರೋಹಣಮಾಡಿದರು. ಮಹಾತೇಜಸ್ವಿಯಾದ ಶತ್ರುಘ್ನನೂ ಯಮುನಾನದಿಯ ತೀರದಲ್ಲಿ ಬಿಟ್ಟಿದ್ದ ತನ್ನ ಸೈನಿಕರನ್ನು ಕರೆಸಿಕೊಂಡನು. ಶತ್ರುಘ್ನನ ಆಜ್ಞೆಯನ್ನು ಕೇಳಿದೊಡನೆಯೇ ಸೈನಿಕರು ಮಧುಪುರಿಗೆ ಶೀಘ್ರವಾಗಿ ಬಂದರು. ಶ್ರಾವಣಮಾಸದಲ್ಲಿ ಶತ್ರುಘ್ನನು ರಾಜಧಾನಿಯನ್ನು ನಿರ್ಮಿಸಲು ಪ್ರಾರಂಭಿಸಿದನು. ಅಲ್ಲಿಂದ ಮುಂದೆ ಹನ್ನೆರಡನೆಯ ವರ್ಷದಲ್ಲಿ ಆ ಪಟ್ಟಣದ ಮತ್ತು ಶೂರಸೇನದೇಶದ ನಿರ್ಮಾಣಕಾರ್ಯವು ಮುಗಿಯಿತು. ಆ ಪಟ್ಟಣದಲ್ಲಾಗಲೀ ದೇಶದಲ್ಲಾಗಲೀ ಭಯವೆಂಬುದೇ ಇರಲಿಲ್ಲ. ಅದು ದೇವಲೋಕದಂತೆ ಸಮಸ್ತ ಸುಖೋಪಭೋಗಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದಿತು. ಶತ್ರುಘ್ನನ ಭುಜಬಲದಿಂದ ಪಾಲಿಸಲ್ಪಡುತ್ತಿದ್ದ ಆ ದೇಶದಲ್ಲಿ ಕ್ಷೇತ್ರಗಳು (ಗದ್ದೆ-

ಹೊಲ-ತೋಟಗಳು) ಸಸ್ಯಸಮೃದ್ಧವಾಗಿದ್ದುವು. ಪರ್ಜನ್ಯನು ಕಾಲ-ಕಾಲಕ್ಕೆ ಮಳೆಗರೆಯುತ್ತಿದ್ದನು. ಅಲ್ಲಿ ನೀರೋಗದೃಢಕಾಯರಾದ ವೀರ ಪುರುಷರು ವಾಸಮಾಡುತ್ತಿದ್ದರು. ಆ ಮಧುಪುರಿಯು ಯಮುನಾನದಿಯ ತೀರದಲ್ಲಿ ನಿರ್ಮಿಸಲ್ಪಟ್ಟಿದ್ದು ಅರ್ಧಚಂದ್ರಾಕಾರದ ಆಕೃತಿಯಲ್ಲಿದ್ದಿತು. ಆ ಪಟ್ಟಣದಲ್ಲಿ ಹಲವಾರು ಸುಂದರವಾದ ಭವನಗಳೂ, ಚೌಕಗಳೂ, ಅಂಗಡೀ ಬೀದಿಗಳೂ ಇದ್ದು ಶೋಭಾಯಮಾನವಾಗಿ ಕಾಣುತ್ತಿದ್ದುವು. ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಣದವರೂ ಅಲ್ಲಿ ವಾಸಮಾಡುತ್ತಿದ್ದರು. ನಾನಾ ಪ್ರಕಾರವಾದ ವಾಣಿಜ್ಯಗಳಿಂದಲೂ ವ್ಯವಸಾಯಗಳಿಂದಲೂ ಆ ಪಟ್ಟಣವು ಶೋಭಿಸುತ್ತಿದ್ದಿತು. ಮಧುಪುರಿಯಲ್ಲಿ ಹಿಂದೆ ಲವಣಾಸುರನು ಕಟ್ಟಿಸಿದ್ದ ಭವ್ಯಭವನಗಳನ್ನು ಶತ್ರುಘ್ನನು ಸ್ವಚ್ಛಗೊಳಿಸಿ ನಾನಾಪ್ರಕಾರವಾದ ಚಿತ್ರಗಳನ್ನು ಬರೆಯಿಸಿ ಅವುಗಳ ಶೋಭೆಯನ್ನು ಮತ್ತಷ್ಟು ಹೆಚ್ಚಿಸಿದನು. ಆ ನಗರದ ಸುತ್ತಲೂ ಹಲವಾರು ಉದ್ಯಾನಗಳೂ ವಿಹಾರಸ್ಥಳಗಳೂ ಇದ್ದು ಆ ನಗರವು ರಮ್ಯವಾಗಿ ಕಾಣುತ್ತಿದ್ದಿತು. ದೇವತೆಗಳಿಗೂ ಮನುಷ್ಯರಿಗೂ ಸಂಬಂಧಿಸಿದ ಅನೇಕವಾದ ಚಿತ್ರಕಲೆಗಳು ಆ ನಗರದಲ್ಲಿದ್ದು ಆ ಪಟ್ಟಣದ ಶೋಭೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದುವು.

ನಾನಾಪ್ರಕಾರವಾದ ಕ್ರಯ-ವಿಕ್ರಯಗಳಿಗೆ ಯೋಗ್ಯವಾದ ವಸ್ತುಗಳಿಂದ ಸಂಪನ್ನವಾಗಿದ್ದ ದಿವ್ಯವಾಗಿದ್ದ ಆ ಮಧುಪುರಿಯು ನಾನಾದೇಶಗಳಿಂದ ಆಗಮಿಸುತ್ತಿದ್ದ ವರ್ತಕರಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಸಮಸ್ತಸಾಮಗ್ರಿಗಳಿಂದಲೂ ಸಮೃದ್ಧವಾಗಿದ್ದ ಆ ಪಟ್ಟಣವನ್ನು ಭರತನ ತಮ್ಮನಾದ ಸಫಲಮನೋರಥನಾದ ಶತ್ರುಘ್ನನು ನೋಡಿ ಪರಮಪ್ರೀತನಾಗಿ ಸಂತೋಷಪಟ್ಟನು. ಮಧುಪುರಿಗೆ ಆಗಮಿಸಿ ಹನ್ನೊಂದು ವರ್ಷಗಳು ಕಳೆದು ಹನ್ನೆರಡನೆಯ ವರ್ಷವು ಪ್ರಾರಂಭವಾಗಲು ಮಧುರಾ ಪಟ್ಟಣವನ್ನು ಪುನರ್ನಿರ್ಮಾಣಮಾಡಿ ವ್ಯವಸ್ಥೆಗೊಳಿಸಿದ ಶತ್ರುಘ್ನನಿಗೆ ಶ್ರೀರಾಮನ ಚರಣಾರವಿಂದಗಳನ್ನು ಸಂದರ್ಶಿಸಬೇಕೆಂಬ ಬುದ್ಧಿಯುಂಟಾಯಿತು.

ಹೀಗೆ ವಿಧ-ವಿಧವಾದ ಜನಗಳಿಂದ ಸಮಾವೃತವಾಗಿದ್ದ, ದೇವತೆಗಳ ಅಮರಾವತಿಗೆ ಸಮಾನವಾಗಿದ್ದ, ಮನೋಹರವಾದ ಮಧುಪುರಿಯನ್ನು

ನಿರ್ಮಿಸಿದನಂತರ ರಘುಕುಲವಂಶವರ್ಧನನಾದ ಶತ್ರುಘ್ನನು ರಘುಪತಿಯ ಪಾದಾರವಿಂದಗಳನ್ನು ಸಂದರ್ಶಿಸಬೇಕೆಂದು ನಿಶ್ಚಯಿಸಿದನು.

೭೦ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೭೧ನೆಯ ಸರ್ಗ

ಅಲ್ಪಸಂಖ್ಯೆಯ ಸೈನಿಕರೊಡನೆ ಶತ್ರುಘ್ನನು ಶ್ರೀರಾಮನ ಸಂದರ್ಶನಕ್ಕಾಗಿ ಅಯೋಧ್ಯೆಗೆ ಹೊರಟುದು : ಅಯೋಧ್ಯೆಗೆ ಬರುತ್ತಿದ್ದಾಗ ಹಾದಿಯಲ್ಲಿದ್ದ ವಾಲ್ಮೀಕಿಮಹರ್ಷಿಗಳ ಆಶ್ರಮದಲ್ಲಿ ನಡೆಯುತ್ತಿದ್ದ ರಾಮಕಥಾಗಾಯನವನ್ನು ಕೇಳಿ ಶತ್ರುಘ್ನನೇ ಮೊದಲಾದವರ ವಿಸ್ಮಯ

ತತೋ ದ್ವಾದಶಮೇ ವರ್ಷೇ ಶತ್ರುಘ್ನೋ ರಾಮಪಾಲಿತಾಮ್ ।
ಅಯೋಧ್ಯಾಂ ಚಕಮೇ ಗನ್ತುಮಲ್ಪಭೃತ್ಯಬಲಾನುಗಃ ॥೧॥

ಬಳಿಕ ಹನ್ನೆರಡನೆಯ ವರ್ಷದಲ್ಲಿ ಶತ್ರುಘ್ನನು ಅಲ್ಪಸಂಖ್ಯೆಯ ಸೇವಕರೊಡನೆ ಮತ್ತು ಸೈನಿಕರೊಡನೆ ಶ್ರೀರಾಮನಿಂದ ಪರಿಪಾಲಿಸಲ್ಪಡುತ್ತಿದ್ದ ಅಯೋಧ್ಯೆಗೆ ಹೋಗಿಬರಲು ನಿಶ್ಚಯಿಸಿದನು.

ಮಂತ್ರಿಮುಖ್ಯರನ್ನೂ ಸೇನಾಪ್ರಮುಖರನ್ನೂ ನಗರದ ರಕ್ಷಣೆಗಾಗಿ ಅಲ್ಲಿಯೇ ಇರುವಂತೆ ಹೇಳಿ ಶ್ರೇಷ್ಠವಾದ ಕುದುರೆಗಳಿಂದ ಯುಕ್ತವಾಗಿದ್ದ ನೂರು ರಥಗಳಿಂದ ಸಮಾವೃತನಾಗಿ ಶತ್ರುಘ್ನನು ಅಯೋಧ್ಯೆಯ ಕಡೆಗೆ ಪ್ರಯಾಣಮಾಡಿದನು. ಹಾಗೆ ಬರುತ್ತಿದ್ದಾಗ ಶತ್ರುಘ್ನನು ಏಳೆಂಟು ಜಾಗ ಗಳಲ್ಲಿ ಬಿಡಾರವನ್ನು ಬಿಟ್ಟು ಮುಂದುವರಿದು ಬರುತ್ತಾ ವಾಲ್ಮೀಕಿಮಹರ್ಷಿಗಳ ಆಶ್ರಮಕ್ಕೆ ಬಂದು ಅಂದಿನ ರಾತ್ರಿ ಅಲ್ಲಿಯೇ ತಂಗಿದನು. ಆಶ್ರಮವನ್ನು ಪ್ರವೇಶಿಸಿದೊಡನೆಯೇ ಶತ್ರುಘ್ನನು ಮಹರ್ಷಿಗಳ ಕಾಲುಗಳಿಗೆ ನಮಸ್ಕರಿಸಿ ಅವರಿತ್ತ ಅರ್ಘ್ಯ-ಪಾದ್ಯಗಳಿಂದ ಕೂಡಿದ ಆತಿಥ್ಯವನ್ನು ಆದರದಿಂದ ಸ್ವೀಕರಿಸಿದನು. ಅಂದಿನ ರಾತ್ರಿ ವಾಲ್ಮೀಕಿಮಹರ್ಷಿಗಳು ಮಹಾತ್ಮನಾದ ಶತ್ರುಘ್ನನಿಗೆ ನಾನಾವಿಧವಾದ ಸುಮಧುರವಾದ ಸಾವಿರಾರು ಕಥೆಗಳನ್ನು

ಹೇಳಿದರು. ಹಾಗೆಯೇ ಮಾತನಾಡುತ್ತಿದ್ದಾಗ ಲವಣನ ವಧೆಗೆ ಸಂಬಂಧಿಸಿ ದಂತೆ ವಾಲ್ಮೀಕಿಗಳು ಶತ್ರುಘ್ನನಿಗೆ ಹೇಳಿದರು :

ಸುದುಷ್ಕರಂ ಕೃತಂ ಕರ್ಮ ಲವಣಂ ನಿಘ್ನತಾ ತ್ವಯಾ ॥೬॥

"ಲವಣಾಸುರನನ್ನು ನೀನು ಸಂಹರಿಸಿ ಅತಿದುಷ್ಕರವಾದ ಕಾರ್ಯವನ್ನೇ ಮಾಡಿರುವೆ.

ಮಹಾಬಲರಾದ ಅನೇಕರಾಜರು ಬಲ-ವಾಹನಸಮೇತರಾಗಿ ಲವಣಾ ಸುರನೊಡನೆ ಯುದ್ಧಮಾಡುತ್ತಿದ್ದಾಗ ಪ್ರಾಣಗಳನ್ನು ತೊರೆದರು. ಪುರುಷ ಶ್ರೇಷ್ಠನೇ! ನೀನು ಅಂತಹ ಭಯಂಕರವಾದ ಪಾಪಿಯನ್ನು ಅನಾಯಾಸವಾಗಿ ಸಂಹರಿಸಿದೆ. ನಿನ್ನ ಅಪಾರವಾದ ತೇಜಸ್ಸಿನ ಪ್ರಭಾವದಿಂದ ಜಗತ್ತಿ ನಲ್ಲುಂಟಾಗಿದ್ದ ಭಯವೂ ನಾಶಹೊಂದಿತು. ರಾವಣನನ್ನು ಸಂಹರಿಸಲು ಮಹತ್ತರವಾದ ಪ್ರಯತ್ನವೇ ನಡೆಯಿತು. ಲವಣನ ಸಂಹಾರವೂ ಮಹತ್ತರ ವಾದದ್ದೇ. ಆದರೆ ಅದನ್ನು ನೀನು ಹೆಚ್ಚಿನ ಪ್ರಯತ್ನವೇ ಇಲ್ಲದೆ ಅನಾ ಯಾಸವಾಗಿ ಸಾಧಿಸಿದೆ. ಲವಣನ ಸಂಹಾರದಿಂದಾಗಿ ದೇವತೆಗಳಿಗೆ ನಿನ್ನ ವಿಷಯದಲ್ಲಿ ಹೆಚ್ಚಿನ ಪ್ರೀತಿಯುಂಟಾಗಿದೆ. ಮೂರು ಲೋಕಗಳಿಗೂ ಮತ್ತು ಸಮಸ್ತಪ್ರಾಣಿಗಳಿಗೂ ನೀನು ಪ್ರಿಯಕರವಾದ ಕಾರ್ಯವನ್ನು ಮಾಡಿರುವೆ. ನಿನಗೂ ಮತ್ತು ಲವಣನಿಗೂ ಯುದ್ಧವು ನಡೆಯುತ್ತಿದ್ದಾಗ ನಾನು ಇಂದ್ರನ ಸಭೆಯಲ್ಲಿ ಕುಳಿತಿದ್ದೆನು. ಯುದ್ಧವನ್ನು ನೋಡುವ ಆಸಕ್ತಿಯಿಂದ ದೇವತೆ ಗಳೊಡನೆ ಅಲ್ಲಿಗೆ ಬಂದ ನಾನು ನಿಮ್ಮಿಬ್ಬರಿಗೂ ನಡೆದ ಯುದ್ಧವನ್ನು ಯಥಾವತ್ತಾಗಿ ನೋಡಿದೆನು. ನಿನ್ನ ವಿಷಯದಲ್ಲಿಯೂ ನನ್ನ ಮನಸ್ಸಿನಲ್ಲಿ ಅಪಾರವಾದ ಪ್ರೇಮವಿದೆ. ಆ ಪ್ರೀತಿಯ ದ್ಯೋತಕವಾಗಿ ನಿನ್ನ ನೆತ್ತಿಯನ್ನೊಮ್ಮೆ ನಾನು ಆಘ್ರಾಣಿಸುತ್ತೇನೆ. ಹೀಗೆ ಮಾಡುವುದು ಸ್ನೇಹದ ಪರಾಕಾಷ್ಠೆಯನ್ನು ಸೂಚಿಸುತ್ತದೆ."

ಹೀಗೆ ಹೇಳಿ ವಾಲ್ಮೀಕಿಗಳು ಶತ್ರುಘ್ನನ ನೆತ್ತಿಯನ್ನು ಆಘ್ರಾಣಿಸಿದರು. ಅನಂತರ ಅವನಿಗೂ ಅವನ ಅನುಯಾಯಿಗಳಿಗೂ ಯಥಾವಿಧಿಯಾಗಿ ಸತ್ಕಾರವನ್ನು ನೀಡಿದರು. ಶತ್ರುಘ್ನನು ಊಟಮಾಡಿದನಂತರ ವಿಶ್ರಮಿಸಿಕೊಳ್ಳುತ್ತಿದ್ದಾಗ ಶ್ರೀರಾಮನ ಚರಿತ್ರೆಯನ್ನು ಅನುಕ್ರಮವಾಗಿ

ಯಾರೋ ಹಾಡುತ್ತಿದ್ದುದನ್ನು ಕೇಳಿದನು. ಶ್ರೀರಾಮನ ಚರಿತ್ರೆಯು ಗೀತಮಾಧುರ್ಯದಿಂದಲೂ ಕೂಡಿದ್ದು ಉತ್ತಮೋತ್ತಮವಾಗಿದ್ದಿತು.

ತನ್ತ್ರೀಲಯಸಮಾಯುಕ್ತಂ ತ್ರಿಸ್ಥಾನಕರಣಾನ್ವಿತಮ್ ।
ಸಂಸ್ಕೃತಂ ಲಕ್ಷಣೋಪೇತಂ ಸಮತಾಲಸಮನ್ವಿತಮ್ ।
ಶುಶ್ರಾವ ರಾಮಚರಿತಂ ತಸ್ಮಿನ್ಕಾಲೇ ಪುರಾ ಕೃತಮ್ ॥೧೫॥

ಶತ್ರುಘ್ನನು ಆ ಸಮಯದಲ್ಲಿ ಕೇಳುತ್ತಿದ್ದ ಶ್ರೀರಾಮಚರಿತಾಮೃತವು ಹಿಂದೆಯೇ ಕಾವ್ಯರೂಪದಲ್ಲಿ ರಚಿಸಲ್ಪಟ್ಟಿದ್ದಿತು. ಆ ಕಾವ್ಯವು ವೀಣಾ ವಾದ್ಯದ ಸಹಯೋಗದೊಡನೆ ಹಾಡಲ್ಪಡುತ್ತಿದ್ದಿತು. ಹೃದಯ, ಕಂಠ ಮತ್ತು ಶಿರಸ್ಸಿನ ಸ್ಥಾನಗಳಲ್ಲಿ ಮಂದ್ರ, ಮಧ್ಯ ಮತ್ತು ತಾರಗಳೆಂಬ ಸ್ವರ ಭೇದಗಳಿಂದ ಹಾಡಲ್ಪಡುತ್ತಿದ್ದಿತು. ಸಂಸ್ಕೃತಭಾಷೆಯಲ್ಲಿ ರಚಿಸಲ್ಪಟ್ಟಿದ್ದ ಆ ಮಹಾಕಾವ್ಯವು ವ್ಯಾಕರಣ, ಛಂದಸ್ಸು ಮತ್ತು ಸಂಗೀತಶಾಸ್ತ್ರದ ಲಕ್ಷಣಗಳಿಂದ ಸಂಪನ್ನವಾಗಿದ್ದು ತಾಳ-ಲಯಬದ್ಧವಾಗಿ ಹಾಡಲ್ಪಡುತ್ತಿದ್ದಿತು.

ತಾನ್ಯಕ್ಷರಾಣಿ ಸತ್ಯಾನಿ ಯಥಾವೃತ್ತಾನಿ ಪೂರ್ವಶಃ ।
ಶ್ರುತ್ವಾ ಪುರುಷಶಾರ್ದೂಲೋ ವಿಸಂಜ್ಞೋ ಬಾಷ್ಪಲೋಚನಃ ॥

ಆ ಕಾವ್ಯದಲ್ಲಿದ್ದ ಅಕ್ಷರಗಳೂ ಮತ್ತು ವಾಕ್ಯಗಳೂ ಹಿಂದಿನ ನಿಜವಾದ ಘಟನೆಗಳನ್ನು ಯಥಾವತ್ತಾಗಿ ಪ್ರತಿಪಾದಿಸುತ್ತಿದ್ದುವು. ಅಂತಹ ಪರಮಾದ್ಭುತವಾದ ಕಾವ್ಯಗಾನವನ್ನು ಕೇಳಿ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಪುರುಷಶ್ರೇಷ್ಠನಾದ ಶತ್ರುಘ್ನನು ಮೂರ್ಛಿತನಾದನು.

ಮುಹೂರ್ತಕಾಲದವರೆಗೆ ಎಚ್ಚರದಪ್ಪಿ ಬಿದ್ದಿದ್ದು ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದನು. ಅನಂತರ ಎಚ್ಚರಗೊಂಡು ಹಿಂದಿನ ಆ ಚರಿತ್ರೆಯನ್ನು ತತ್ಕಾಲದಲ್ಲಿ ನಡೆಯುತ್ತಿರುವುದೋ ಎಂಬ ಭಾವನೆಯಿಂದ ಏಕಾಗ್ರಚಿತ್ತನಾಗಿ ಕೇಳುತ್ತಿದ್ದನು.

ಶತ್ರುಘ್ನರಾಜನ ಜೊತೆಯಲ್ಲಿ ಬಂದಿದ್ದವರೂ ಆ ಗೀತಸಂಪದವನ್ನು ಕೇಳಿ ದೀನರಾಗಿ ಮತ್ತು ಅಧೋಮುಖರಾಗಿ 'ಆಶ್ಚರ್ಯಮಾಶ್ಚರ್ಯಂ' ಎಂದು ಹೇಳುತ್ತಾ ತಮ್ಮ ಅಚ್ಚರಿಯನ್ನು ವ್ಯಕ್ತಪಡಿಸಿದರು. ಶತ್ರುಘ್ನನೊಡನೆ ಬಂದಿದ್ದ ಸೈನಿಕರೂ ಪರಸ್ಪರವಾಗಿ ಹೀಗೆ ಹೇಳಿಕೊಳ್ಳುತ್ತಿದ್ದರು :

ಕಿಮಿದಂ ಕ್ವ ಚ ವರ್ತಾಮಃ ಕಿಮೇತತ್ಸ್ವಪ್ನದರ್ಶನಮ್ ।
ಅರ್ಥೋ ಯೋ ನಃ ಪುರಾ ದೃಷ್ಟಸ್ತಮಾಶ್ರಮಪದೇ ಪುನಃ ॥೨೦॥

ಶೃಣುಮಃ ಕಿಮಿದಂ ಸ್ವಪ್ನೇ ಗೀತಬನ್ಧಮನುತ್ತಮಮ್ ।

"ಇದೇನಿದು? ನಾವೀಗ ಎಲ್ಲಿದ್ದೇವೆ? ನಾವೇನಾದರೂ ಸ್ವಪ್ನವನ್ನು ಕಾಣುತ್ತಿರುವೆವೇ? ಹಿಂದೆ ನಾವು ಯಾವುದನ್ನು ನೋಡಿದ್ದೆವೋ ಅದನ್ನೇ ನಾವು ಯಥಾವತ್ತಾಗಿ ಈ ಆಶ್ರಮದಲ್ಲಿ ಸುಮಧುರಗಾಯನದ ಮೂಲಕವಾಗಿ ಕೇಳುತ್ತಿದ್ದೇವೆ. ಇಂತಹ ಉತ್ತಮವಾದ ಗೀತಬಂಧವನ್ನು ನಾವು ಸ್ವಪ್ನದಲ್ಲಿ ಕೇಳುತ್ತಿದ್ದೇವೆಯೇ?"

ಹೀಗೆ ಮಾತನಾಡಿಕೊಳ್ಳುತ್ತಿದ್ದ ಸೈನಿಕರು ಅಚ್ಚರಿಗೊಂಡು ತಮ್ಮ ರಾಜನಾದ ಶತ್ರುಘ್ನಿಗೆ ಹೇಳಿದರು :

"ನರಶ್ರೇಷ್ಠನೇ! ಈಗಲೇ ಹೋಗು. ಮುನಿಶ್ರೇಷ್ಠರಾದ ವಾಲ್ಮೀಕಿಗಳನ್ನೇ ಈ ಸುಮಧುರಗಾನದ ವಿಷಯವಾಗಿ ಪ್ರಶ್ನಿಸು."

ಕುತೂಹಲದಿಂದ ಕೂಡಿದ್ದ ಸೈನಿಕರಿಗೆ ಶತ್ರುಘ್ನನು ಉತ್ತರಿಸಿದನು :

"ಸೈನಿಕರೇ! ವಾಲ್ಮೀಕಿಮಹರ್ಷಿಗಳ ಈ ಆಶ್ರಮದಲ್ಲಿ ಇಂತಹ ಅನೇಕ ವಿಧವಾದ ಆಶ್ಚರ್ಯಕರವಾದ ಘಟನೆಗಳು ನಡೆಯುತ್ತಿರುತ್ತವೆ. ಅವೆಲ್ಲದರ ವಿಷಯವಾಗಿಯೂ ಮುನಿಗಳನ್ನು ನಾವು ಪ್ರಶ್ನಿಸುವುದು ಉಚಿತವಾಗಿ ಕಾಣುವುದಿಲ್ಲ. ಕುತೂಹಲದ ಕಾರಣದಿಂದ ಈ ವಿಷಯವನ್ನು ತಿಳಿಯಲು ಪ್ರಯತ್ನಿಸುವುದಾಗಲೀ ಮಹರ್ಷಿಗಳನ್ನು ಈ ಬಗೆಗೆ ಪ್ರಶ್ನಿಸುವುದಾಗಲೀ ಯೋಗ್ಯವಲ್ಲ."

ಹೀಗೆ ಶತ್ರುಘ್ನನು ಸೈನಿಕರಿಗೆ ಹೇಳಿ ಮಹರ್ಷಿಗಳಿಗೆ ನಮಸ್ಕರಿಸಿ ತನ್ನ ಬಿಡಾರಕ್ಕೆ ತೆರಳಿದನು.

೭೧ನೆಯ ಸರ್ಗವು ಮುಗಿಯಿತು.

ವಾಲ್ಮೀಕಿಮಹರ್ಷಿಗಳ ಅನುಮತಿಯನ್ನು ಪಡೆದು ಶತ್ರುಘ್ನನು ಅಯೋಧ್ಯೆಗೆ ಹೋಗಿ ಶ್ರೀರಾಮನೇ ಮೊದಲಾದವರನ್ನು ಸಂದರ್ಶಿಸಿದುದು : ಏಳು ದಿವಸಗಳವರೆಗೆ ಅಲ್ಲಿ ತಂಗಿದ್ದು ಪುನಃ ಮಧುಪುರಿಗೆ ಹಿಂದಿರುಗಿದುದು

ತಂ ಶಯಾನಂ ನರವ್ಯಾಘ್ರಂ ನಿದ್ರಾ ನಾಭ್ಯಾಗಮತ್ತದಾ ।
ಚಿನ್ತಯಾನಮನೇಕಾರ್ಥಂ ರಾಮಗೀತಮನುತ್ತಮಮ್ ॥೧॥

ಉತ್ತಮೋತ್ತಮವಾದ ಶ್ರೀರಾಮನ ಸಂಬಂಧವಾದ ಗೀತಗಳನ್ನು ಕೇಳುತ್ತಾ ಅದರಲ್ಲಿ ಕೇಳಿಬರುತ್ತಿದ್ದ ಅನೇಕವಿಷಯಗಳನ್ನು ಮನಸ್ಸಿನಲ್ಲಿಯೇ ಚಿಂತಿಸುತ್ತಾ ಮಲಗಿದ್ದ ಶತ್ರುಘ್ನನಿಗೆ ಅಂದಿನ ರಾತ್ರಿ ನಿದ್ರೆಯೇ ಬರಲಿಲ್ಲ.

ವೀಣೆಯ ಲಯದಿಂದ ಕೂಡಿದ್ದ ಸುಮಧುರವಾದ ಆ ಶ್ರೀರಾಮನ ಗೀತವನ್ನು ಕೇಳುತ್ತಿದ್ದಂತೆ ಮಹಾತ್ಮನಾದ ಶತ್ರುಘ್ನನಿಗೆ ಆ ರಾತ್ರಿಯು ಬಹಳ ಬೇಗ ಕಳೆದುಹೋಯಿತು. ಆ ದಿವ್ಯಮಂಗಳ ರಾತ್ರಿಯು ಕಳೆದು ಹೋದನಂತರ ಶತ್ರುಘ್ನನು ಪ್ರಾತಃಕಾಲದಲ್ಲಿ ಮಾಡಬೇಕಾಗಿದ್ದ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿ ಕೈಮುಗಿದುಕೊಂಡು ಮುನಿಶ್ರೇಷ್ಠರಾದ ವಾಲ್ಮೀಕಿಗಳಿಗೆ ಹೇಳಿದನು :

"ಮಹಾಮುನಿಗಳೇ! ಕಠೋರವ್ರತನಿಷ್ಠರಾದ ಈ ನನ್ನ ಸಂಗಡಿಗರೊಡನೆ ನಾನು ರಘುಕುಲನಂದನನಾದ ಶ್ರೀರಾಮನನ್ನು ನೋಡಲು ಅಪೇಕ್ಷಿಸುತ್ತೇನೆ. ಇಲ್ಲಿಂದ ಪ್ರಯಾಣಿಸಲು ತಮ್ಮ ಅನುಮತಿಯನ್ನು ಪ್ರಾರ್ಥಿಸುತ್ತಿದ್ದೇನೆ."

ಹೀಗೆ ಹೇಳಿದ ಶತ್ರುನಾಶಕನಾದ ಶತ್ರುಘ್ನನನ್ನು ವಾಲ್ಮೀಕಿಮಹರ್ಷಿಗಳು ಗಾಢವಾಗಿ ಆಲಿಂಗಿಸಿಕೊಂಡು ಆಶೀರ್ವದಿಸಿ ಅಯೋಧ್ಯೆಗೆ ಪ್ರಯಾಣ ಮಾಡಲು ಅವನಿಗೆ ಅನುಮತಿಯನ್ನಿತ್ತರು.

ಶ್ರೀರಾಮನನ್ನು ನೋಡಬೇಕೆಂದು ಉತ್ಸಾಹಿತನಾಗಿದ್ದ ಶತ್ರುಘ್ನನು ಪುನಃ ಮುನಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ದಿವ್ಯಪ್ರಭೆ

ಯಿಂದ ಕೂಡಿದ್ದ ರಥದಲ್ಲಿ ಕುಳಿತು ಅಯೋಧ್ಯೆಗೆ ಅಭಿಮುಖವಾಗಿ ಹೊರಟನು. ಇಕ್ಷ್ವಾಕುಕುಲನಂದನನಾದ ಶತ್ರುಘ್ನನು ಒಂದೆರಡು ದಿವಸಗಳಲ್ಲಿ ಅಯೋಧ್ಯೆಯನ್ನು ಸೇರಿ ಮಹಾಬಾಹುವಾದ ಶ್ರೀರಾಮನ ಅರಮನೆಯನ್ನು ಪ್ರವೇಶಿಸಿದನು. ದೇವತೆಗಳ ಮಧ್ಯದಲ್ಲಿರುವ ಸಹಸ್ರಾಕ್ಷನಾದ ಇಂದ್ರನಂತೆ ಮಂತ್ರಿಗಳ ಮಧ್ಯದಲ್ಲಿ ಕುಳಿತಿದ್ದ, ಪೂರ್ಣಚಂದ್ರನ ಬಿಂಬಕ್ಕೆ ಸಮಾನವಾದ ಮುಖಮಂಡಲದಿಂದ ಪರಿಶೋಭಿಸುತ್ತಿದ್ದ ಶ್ರೀರಾಮನನ್ನು ನೋಡಿ ಶತ್ರುಘ್ನನು, ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಕಾಣುತ್ತಿದ್ದ ಮಹಾತ್ಮನಾದ ಶ್ರೀರಾಮನಿಗೆ ನಮಸ್ಕರಿಸಿ ಕೈಮುಗಿದುಕೊಂಡು ಸತ್ಯಪರಾಕ್ರಮಿಯಾದ ಶ್ರೀರಾಮನಿಗೆ ಹೇಳಿದನು :

"ಮಹಾರಾಜ! ನಿನ್ನ ಆಜ್ಞಾನುಸಾರವಾಗಿ ಎಲ್ಲವನ್ನೂ ಮಾಡಿ ಮುಗಿಸಿದ್ದೇನೆ. ಪಾಪಿಷ್ಠನಾಗಿದ್ದ ಆ ಲವಣಾಸುರನು ಹತನಾದನು. ಅವನ ರಾಜಧಾನಿಯಾದ ಮಧುಪುರಿಯನ್ನು ಸುಂದರವಾಗಿ ನಿರ್ಮಿಸಲಾಗಿದೆ. ರಾಘವ! ಹನ್ನೆರಡು ವರ್ಷಗಳು ನಿನ್ನ ದರ್ಶನವಿಲ್ಲದೆಯೇ ಕಳೆದು ಹೋದುವು. ಆದರೆ, ನರೇಶ್ವರನೇ! ಇನ್ನೂ ಹೆಚ್ಚು ಕಾಲ ನಿನ್ನನ್ನು ಬಿಟ್ಟು ನಾನಿರಲು ಉತ್ಸಾಹಿತನಾಗಿಲ್ಲ. ನಿನ್ನನ್ನು ಬಿಟ್ಟಿರಲು ನನಗೆ ಸಾಧ್ಯವಾಗುವುದಿಲ್ಲ. ಪ್ರಸನ್ನನಾಗು, ರಾಘವ! ಕರುವು ತಾಯಿಹಸುವನ್ನು ಬಿಟ್ಟಿರಲಾರದಂತೆ ನಾನು ನಿನ್ನನ್ನು ಖಂಡಿತವಾಗಿಯೂ ಬಿಟ್ಟಿರಲಾರೆನು."

ಹೀಗೆ ಹೇಳುತ್ತಿದ್ದ ಶತ್ರುಘ್ನನನ್ನು ಆಲಿಂಗಿಸಿಕೊಂಡು ಶ್ರೀರಾಮನು ಹೇಳಿದನು :

ಮಾ ವಿಷಾದಂ ಕೃಥಾಃ ಶೂರ ನೈತತ್ ಕ್ಷತ್ರಿಯಚೇಷ್ಟಿತಮ್ ॥೧೩॥

"ಶೂರನೇ! ವಿಷಾದಿಸಬೇಡ. ಹೀಗೆ ಕಾತರನಾಗುವುದು ಕ್ಷತ್ರಿಯನಾದವನಿಗೆ ಉಚಿತವೆನಿಸುವುದಿಲ್ಲ. ರಾಜರಾದವರು ಪರದೇಶದಲ್ಲಿದ್ದರೂ ದುಃಖಿತರಾಗುವುದಿಲ್ಲ. ರಾಜರಾದವರು ಕ್ಷತ್ರಿಯಧರ್ಮಾನುಸಾರವಾಗಿ ಭೂಮಂಡಲದ ಯಾವ ಪ್ರಾಂತದಲ್ಲೇ ಆಗಲಿ ಪ್ರಜೆಗಳನ್ನು ಪಾಲಿಸುತ್ತಿರುವುದು ಕರ್ತವ್ಯವಾಗಿರುತ್ತದೆ. ಯಾವಾಗ ಬರಬೇಕಾಗುವುದೋ ಆಗಾಗ ನೀನು ನನ್ನನ್ನು ನೋಡುವ ಸಲುವಾಗಿ ಅಯೋಧ್ಯೆಗೆ ಬಂದು ಹೋಗುತ್ತಿರು.

ಆದರೆ ನೀನು ಮಧುಪುರಿಗೆ ಹೋಗಲೇಬೇಕು. ಅಲ್ಲಿಯೇ ನೀನು ಪ್ರಜಾ ಪಾಲನೆಯನ್ನು ಮಾಡುತ್ತಿರಬೇಕು. ನನಗೂ ನೀನು ಅತ್ಯಂತಪ್ರಿಯನಾದವನೇ. ಪ್ರಾಣಗಳಿಗಿಂತಲೂ ಹೆಚ್ಚಿನ ಪ್ರಿಯನು. ನನಗೂ ನಿನ್ನನ್ನು ನೋಡುವ ತವಕವಿರುತ್ತದೆ. ಆದರೆ ರಾಜ್ಯದ ಪಾಲನೆಯನ್ನು ಏಕಾಗ್ರತೆಯಿಂದ ಮಾಡುವುದು ನಮ್ಮ ಅವಶ್ಯಕರ್ತವ್ಯವಾಗಿರುತ್ತದೆ. ಆದುದರಿಂದ ನೀನು ಏಳು ರಾತ್ರಿಗಳವರೆಗೆ ನನ್ನ ಜೊತೆಯಲ್ಲಿಯೇ ಇರು. ಅನಂತರ ನೀನು ನಿನ್ನ ಸೇವಕರೊಡನೆಯೂ, ಸೈನಿಕರೊಡನೆಯೂ, ವಾಹನಗಳೊಡನೆಯೂ ಮಧುಪುರಿಗೆ ಪ್ರಯಾಣಮಾಡು.

ಶ್ರೀರಾಮನ ಧರ್ಮಯುಕ್ತವಾದ ಮತ್ತು ಮನೋನುಕೂಲವಾದ ಈ ಮಾತನ್ನು ಕೇಳಿ ಶತ್ರುಘ್ನನು ದೈನ್ಯವಾದ ಧ್ವನಿಯಿಂದ 'ಬಾಢಂ– ಹಾಗೆಯೇ ಆಗಲಣ್ಣ!' ಎಂದು ಹೇಳಿ ಸುಮ್ಮನಾದನು. ರಾಘವನ ಆಜ್ಞೆಯಂತೆ ಶತ್ರುಘ್ನನು ಏಳು ರಾತ್ರಿಗಳವರೆಗೆ ಅಯೋಧ್ಯೆಯಲ್ಲಿದ್ದು ಎಂಟನೆಯ ದಿವಸ ಪ್ರಯಾಣಕ್ಕೆ ಸಿದ್ಧನಾದನು. ಮಹಾತ್ಮನಾದ, ಸತ್ಯಪರಾಕ್ರಮಿಯಾದ ಶ್ರೀರಾಮನ ಮತ್ತು ಭರತ-ಲಕ್ಷ್ಮಣರ ಅನುಮತಿಯನ್ನು ಪಡೆದು ಶತ್ರುಘ್ನನು ರಥವನ್ನೇರಿದನು. ಭರತ-ಲಕ್ಷ್ಮಣರು ಬಹಳ ದೂರದವರೆಗೆ ಕಾಲ್ನಡಿಗೆಯಲ್ಲಿಯೇ ಶತ್ರುಘ್ನನನ್ನು ಅನುಸರಿಸಿಹೋದರು. ಅನಂತರ ಶತ್ರುಘ್ನನು ಅವರನ್ನು ಹಿಂದಕ್ಕೆ ಕಳುಹಿಸಿ ಶೀಘ್ರವಾಗಿ ತನ್ನ ಪಟ್ಟಣವನ್ನು ಸೇರಿದನು.

೭೨ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೭೩ನೆಯ ಸರ್ಗ

ಬ್ರಾಹ್ಮಣನೊಬ್ಬನು ತನ್ನ ಬಾಲಕನ ಶವವನ್ನು ರಾಜದ್ವಾರದಲ್ಲಿರಿಸಿ ತನ್ನ ಮಗನ ಮರಣಕ್ಕೆ ರಾಜನೇ ಕಾರಣನೆಂದು ದೂಷಿಸಿದುದು

ಪ್ರಸ್ಥಾಪ್ಯ ತು ಸ ಶತ್ರುಘ್ನಂ ಭ್ರಾತೃಭ್ಯಾಂ ಸಹ ರಾಘವಃ ।
ಪ್ರಮುಮೋದ ಸುಖೀ ರಾಜ್ಯಂ ಧರ್ಮೇಣ ಪರಿಪಾಲಯನ್ ॥೧॥

ಹೀಗೆ ಶತ್ರುಘ್ನನನ್ನು ಮಧುಪುರಿಗೆ ಕಳುಹಿಸಿದನಂತರ ಶ್ರೀರಾಮನು

ಲಕ್ಷ್ಮಣ-ಭರತರೊಡನೆ ಧರ್ಮದಿಂದ ರಾಜ್ಯಭಾರಮಾಡುತ್ತಾ ಸುಖ ದಿಂದಲೂ ಆನಂದದಿಂದಲೂ ಇದ್ದನು.

ಹಲವಾರು ದಿವಸಗಳು ಕಳೆದನಂತರ ಒಂದು ದಿನ ಪ್ರಾಂತದ ವೃದ್ಧ ಬ್ರಾಹ್ಮಣನೊಬ್ಬನು ಸತ್ತುಹೋಗಿದ್ದ ತನ್ನ ಮಗನನ್ನೆತ್ತಿಕೊಂಡು ರಾಜ ದ್ವಾರದ ಬಳಿಗೆ ಬಂದನು. ಆ ಬ್ರಾಹ್ಮಣನು ಮಗನ ಮೇಲಿನ ಪ್ರೀತಿ ಯಿಂದಲೂ ಮಗನು ಸತ್ತದುಃಖದಿಂದಲೂ ವ್ಯಾಕುಲನಾಗಿದ್ದನು. ಮಗನ ಸಂಬಂಧವಾಗಿ ನಾನಾಪ್ರಕಾರವಾದ ಮಾತುಗಳನ್ನು ಹೇಳಿಕೊಂಡು ಗೋಳಾಡುತ್ತಿದ್ದನು. ಹಲವಾರು ಬಾರಿ 'ಪುತ್ರ! ಪುತ್ರ! ಮರಣ ಹೊಂದಿದೆಯಾ! ಅಯ್ಯೋ!' ಎಂದು ಹೇಳಿಕೊಂಡು ಈ ಮಾತನ್ನು ಹೇಳಿದನು:

ಕಿಂ ನು ಮೇ ದುಷ್ಕೃತಂ ಕರ್ಮ ಪುರಾ ದೇಹಾನ್ತರೇ ಕೃತಮ್ ।
ಯದಹಂ ಪುತ್ರಮೇಕಂ ತು ಪಶ್ಯಾಮಿ ನಿಧನಂ ಗತಮ್ ॥೪॥

"ಅಯ್ಯೋ! ನಾನು ಹಿಂದಿನಜನ್ಮದಲ್ಲಿ ಯಾವ ಪಾಪವನ್ನು ಮಾಡಿ ದ್ದೆನು? ನನ್ನ ಏಕಮಾತ್ರಪುತ್ರನು ನಿಧನಹೊಂದಿರುವುದನ್ನು ನಾನು ಪ್ರತ್ಯಕ್ಷ ವಾಗಿ ನೋಡುತ್ತಿರುವೆನಲ್ಲವೇ!

ಅಪ್ರಾಪ್ತಯೌವನಂ ಬಾಲಂ ಪಞ್ಚವರ್ಷಸಹಸ್ರಕಮ್ ।
ಅಕಾಲೇ ಕಾಲಮಾಪನ್ನಂ ಮಮ ದುಃಖಾಯ ಪುತ್ರಕ ॥೫॥

ಪುತ್ರನೇ! ನೀನಿನ್ನೂ ಬಾಲನು. ಯೌವನವನ್ನೂ ದಾಟಿರಲಿಲ್ಲ. ಐದು ಸಾವಿರ ವರ್ಷಗಳು ಬದುಕಬೇಕಾಗಿದ್ದ ನೀನು ಹೀಗೆ ಅಕಾಲದಲ್ಲಿ ಮರಣಹೊಂದಿ ನನಗೆ ದುಃಖವನ್ನು ತಂದೆಯಲ್ಲ!*

ಅಲ್ಪೈರಹೋಭಿರ್ನಿಧನಂ ಗಮಿಷ್ಯಾಮಿ ನ ಸಂಶಯಃ ।
ಅಹಂ ಚ ಜನನೀ ಚೈವ ತವ ಶೋಕೇನ ಪುತ್ರಕ ॥೬॥

---

* ಈ ಶ್ಲೋಕದಲ್ಲಿ ಪಞ್ಚವರ್ಷಸಹಸ್ರಕಂ ಎಂಬಲ್ಲಿ ವರ್ಷಶಬ್ದಕ್ಕೆ ದಿನವೆಂದು ಅರ್ಥಮಾಡಬೇಕೆಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಐದು ಸಾವಿರ ದಿವಸ ಗಳು ಕಳೆದುವು. ಅರ್ಥಾತ್ ೧೩ ವರ್ಷ ೮ ತಿಂಗಳು ೧೫ ದಿವಸಗಳು ಕಳೆದಿವೆ. ಹದಿನಾಲ್ಕು ತುಂಬಿಲ್ಲ ಎಂದರ್ಥ. ಇದನ್ನು ದೃಢೀಕರಿಸುತ್ತಾ–'ಸಹಸ್ರಸಂವತ್ಸರಂ

ವತ್ಸ! ನಿನ್ನ ಅಕಾಲಮರಣದಿಂದ ಉಂಟಾಗಿರುವ ದುಃಖವನ್ನು ಸಹಿಸಲಾಗದ ನಾನು ಮತ್ತು ನಿನ್ನ ತಾಯಿಯು ಕೆಲವೇ ದಿವಸಗಳಲ್ಲಿ ಸತ್ತು ಹೋಗುತ್ತೇವೆ. ಇದರಲ್ಲಿ ಸಂಶಯವೇ ಇಲ್ಲ.

ನ ಸ್ಮರಾಮ್ಯನೃತಂ ಹ್ಯುಕ್ತಂ ನ ಚ ಹಿಂಸಾಂ ಸ್ಮರಾಮ್ಯಹಮ್ ।
ಸರ್ವೇಷಾಂ ಪ್ರಾಣಿನಾಂ ಪಾಪಂ ನ ಸ್ಮರಾಮಿ ಕದಾಚನ ॥೭॥

ನಾನು ಈ ಜನ್ಮದಲ್ಲಿಯೇ ಮಾಡಿರುವ ಕಾರ್ಯಗಳನ್ನು ಸ್ಮರಿಸಿ ಕೊಂಡರೆ ನನಗೆ ಪಾಪದ ಸಂಘಟನೆಗೆ ಅವಕಾಶವೇ ಇಲ್ಲ. ನನ್ನ ಜೀವಮಾನ ದಲ್ಲಿ ಇದುವರೆಗೆ ಒಂದೇ ಒಂದು ಸುಳ್ಳು ಹೇಳಿದ ನೆನಪಿಲ್ಲ. ಯಾವುದೇ ಪ್ರಾಣಿಯನ್ನೂ ಹಿಂಸಿಸಿದ ನೆನಪಿಲ್ಲ. ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದಯಾಪರನಾಗಿದ್ದೇನೆ. ಯಾವುದೇ ಪ್ರಾಣಿಗೂ ಕಷ್ಟವನ್ನು ಕೊಟ್ಟಿಲ್ಲ.

ಯಾವ ದುಷ್ಕೃತ್ಯದ ಕಾರಣದಿಂದ ಇನ್ನೂ ಬಾಲನಾಗಿಯೇ ಇರುವ ಈ ನನ್ನ ಮಗನು ಪಿತೃಕಾರ್ಯಗಳನ್ನು ಮಾಡದೆ ಯಮಲೋಕಕ್ಕೆ ಹೊರಟು ಹೋದನು?

ನೇದೃಶಂ ದೃಷ್ಟಪೂರ್ವಂ ಮೇ ಶ್ರುತಂ ವಾ ಘೋರದರ್ಶನಮ್ ।
ಮೃತ್ಯುರಪ್ರಾಪ್ತಕಾಲಾನಾಂ ರಾಮಸ್ಯ ವಿಷಯೇ ಹ್ಯಯಮ್ ॥೯॥

ಶ್ರೀರಾಮನ ರಾಜ್ಯದಲ್ಲಿ ಇಂತಹ ಅಕಾಲಮರಣದ ಭಯಂಕರ ದರ್ಶನವನ್ನು ನಾನು ಇದುವರೆಗೂ ನೋಡಿಯೂ ಇರಲಿಲ್ಲ. ಅಕಾಲಮರ ಣವು ಸಂಭವಿಸಿತೆಂಬ ವಾರ್ತೆಯನ್ನು ಕೇಳಿಯೂ ಇರಲಿಲ್ಲ. ಈಗ ಆಕಸ್ಮಿಕ ವಾಗಿ ನನ್ನ ಮಗನಿಗೆ ಇಂತಹ ಅಕಾಲಮರಣವು ಸಂಭವಿಸಲು ಕಾರಣ ಶ್ರೀರಾಮನದೇ ಯಾವುದಾದರೂ ದೋಷವಿರಬೇಕು.

ರಾಮಸ್ಯ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ।
ಯಥಾ ಹಿ ವಿಷಯಸ್ಥಾನಾಂ ಬಾಲಾನಾಂ ಮೃತ್ಯುರಾಗತಃ ॥೧೦॥

ಇದ್ದಕ್ಕಿದ್ದಂತೆಯೇ ಈ ದೇಶದಲ್ಲಿರುವ ಬಾಲಕರು ಅಕಾಲಮೃತ್ಯುವಿಗೆ

ಸತ್ರಮುಪಾಸೀತ-ಸಾವಿರ ವರ್ಷಗಳವರೆಗೆ ಯಜ್ಞಮಾಡಬೇಕು'–ಎಂದಿರುವ ವಿಧಿಯಲ್ಲಿ ಸಂವತ್ಸರದ ಶಬ್ದವು ದಿನವಾಚಕವಾಗಿದೆ ಎಂದು ಶ್ರೌತದ ವಾಕ್ಯವನ್ನು ಉದ್ಧರಿಸಿದ್ದಾರೆ. ಆದರೆ ಶ್ರೀರಾಮನು ಹನ್ನೊಂದು ಸಾವಿರ ವರ್ಷ ರಾಜ್ಯಭಾರಮಾಡಿದನೆಂದು ಇರುವುದರಿಂದ ಬ್ರಾಹ್ಮಣನು ತನ್ನ ಮಗನನ್ನು ಐದು ಸಾವಿರ ವರ್ಷ ಬದುಕಿರುತ್ತಿದ್ದನೆಂದು ಹೇಳಿರುವುದರಲ್ಲಿ ಅಸಹಜತೆಯೇನೂ ಕಾಣುವುದಿಲ್ಲ.

ತುತ್ತಾಗುತ್ತಿರುವುದಕ್ಕೆ ನಿಸ್ಸಂದೇಹವಾಗಿ ಶ್ರೀರಾಮನಲ್ಲಿ ಯಾವುದೋ ಮಹತ್ತರವಾದ ದೋಷವಿದ್ದಿರಲೇಬೇಕು.

ಇತರ ರಾಜ್ಯಗಳಲ್ಲಿರುವ ಬಾಲಕರಿಗೆ ಅಕಾಲಮರಣದ ಭಯವಿಲ್ಲ. ಆದುದರಿಂದ, ಓ ಮಹಾರಾಜ! ಸತ್ತುಹೋಗಿರುವ ಈ ಬಾಲಕನನ್ನು ಈಗಲೇ ನೀನು ಬದುಕಿಸಿಕೊಡು. ನೀನು ಹಾಗೆ ಬದುಕಿಸಿಕೊಡದಿದ್ದರೆ ನಾನು ನನ್ನ ಪತ್ನಿಯೊಡನೆ ಅನಾಥನಂತೆ ಈ ರಾಜದ್ವಾರದಲ್ಲಿಯೇ ಸತ್ತು ಹೋಗುತ್ತೇನೆ. ಅನಂತರ ನೀನು ಬ್ರಹ್ಮಹತ್ಯಾಪಾಪವನ್ನು ಪಡೆದುಕೊಂಡು ಸುಖದಿಂದಿರಬಹುದಾಗಿದೆ.

ಮಹಾಬಲನೇ! ನಿನ್ನ ಈ ರಾಜ್ಯದಲ್ಲಿ ನಾವು ಸುಖವಾಗಿಯೇ ಇದ್ದೆವು. ಆದುದರಿಂದ ನೀನು ನಿನ್ನ ಅನುಜರೊಡನೆ ದೀರ್ಘಾಯುಷ್ಯವನ್ನೂ ಪಡೆದು ಬಾಳುವೆ.

ನಿನ್ನ ಅಧೀನದಲ್ಲಿ ಇದ್ದ ನಮಗೆ ಇದ್ದಕ್ಕಿದ್ದಂತೆಯೇ ಬಾಲಕನ ಮರಣ ರೂಪವಾದ ದುಃಖವು ಒದಗಿಬಂದಿತು. ಆ ದುಃಖವನ್ನು ಸಹಿಸಲಾಗದೇ ನಾವೂ ಕಾಲವಶರಾಗಲಿದ್ದೇವೆ. ನಿನ್ನ ಈ ರಾಜ್ಯದಲ್ಲಿ ಈಗ ನಮಗೆ ಸ್ವಲ್ಪ ವಾದರೂ ಸುಖವೆಂಬುದೇ ಇಲ್ಲವಾಗಿದೆ.

ಸಂಪ್ರತ್ಯನಾಥೋ ವಿಷಯ ಇಕ್ಷ್ವಾಕೂಣಾಂ ಮಹಾತ್ಮನಾಮ್ ।
ರಾಮಂ ನಾಥಮಿಹಾಸಾದ್ಯ ಬಾಲಾನ್ತಕರಣಂ ಧ್ರುವಮ್ ॥೧೫॥

ಮಹಾತ್ಮರಾದ ಇಕ್ಷ್ವಾಕುಕುಲದರಸರಿಗೆ ಸೇರಿದ ಈ ರಾಜ್ಯವಿಂದು ಅನಾಥವಾಗಿದೆ. ಶ್ರೀರಾಮನನ್ನು ನಾಥನನ್ನಾಗಿ ಪಡೆದಿರುವ ನಮ್ಮ ಮಕ್ಕಳ ಅಕಾಲಮರಣವು ಈ ರಾಜ್ಯದಲ್ಲಿ ನಿಶ್ಚಿತವಾಗಿ ಹೋಗಿದೆ.

ರಾಜದೋಷೈರ್ವಿಪದ್ಯನ್ತೇ ಪ್ರಜಾ ಹ್ಯವಿಧಿಪಾಲಿತಾಃ ।
ಅಸದ್ವೃತ್ತೇ ಹಿ ನೃಪತಾವಕಾಲೇ ಮ್ರಿಯತೇ ಜನಃ ॥೧೬॥

ರಾಜನ ದೋಷದಿಂದಾಗಿ ಪ್ರಜೆಗಳು ವಿಧಿವತ್ತಾಗಿ ಪಾಲಿಸಲ್ಪಡದಿದ್ದರೆ ಪ್ರಜೆಗಳಿಗೆ ಇಂತಹ ವಿಪತ್ತುಗಳು ಸಂಭವಿಸುತ್ತವೆ. ರಾಜನು ದುರಾಚಾರಿ ಯಾದರೆ ಪ್ರಜೆಗಳು ಅಕಾಲದಲ್ಲಿ ಮರಣಹೊಂದುತ್ತಾರೆ.

ಯದ್ವಾ ಪುರೇಷ್ವಯುಕ್ತಾನಿ ಜನಾ ಜನಪದೇಷು ಚ ।
ಕುರ್ವತೇ ನ ಚ ರಕ್ಷಾಸ್ತಿ ತದಾ ಕಾಲಕೃತಂ ಭಯಮ್ ॥೧೭॥

ಅಥವಾ ನಗರದಲ್ಲಿ ಮತ್ತು ಪ್ರಾಂತಗಳಲ್ಲಿರುವ ಪ್ರಜೆಗಳು ಅನುಚಿತವಾದ ಪಾಪಕರ್ಮಗಳನ್ನು ಮಾಡುವರೋ ಅಂತಹ ಪಾಪಕರ್ಮಗಳನ್ನು ತಡೆಯಲು ಯಾವ ರಕ್ಷಕರೂ ಇರುವುದಿಲ್ಲವೋ ಅಂತಹ ಸಮಯಗಳಲ್ಲಿಯೂ ಪ್ರಜೆಗಳು ಅಕಾಲಮರಣಕ್ಕೆ ತುತ್ತಾಗುತ್ತಾರೆ. ನನ್ನ ಬಾಲಕನ ಅಕಾಲಮರಣವು ರಾಜದೋಷದಿಂದಲೇ ಸಂಭವಿಸಿದೆಯೆಂಬುದರಲ್ಲಿ ಸಂಶಯವೇ ಇಲ್ಲ. ನಗರದಲ್ಲಾಗಲೀ, ಪ್ರಾಂತಗಳಲ್ಲಾಗಲೀ ಯಾವು ದಾದರೂ ಪಾಪಕಾರ್ಯವು ನಡೆದಿರಲೇಬೇಕು."

ಹೀಗೆ ಆ ಬ್ರಾಹ್ಮಣನು ಇಂತಹ ಅನೇಕಮಾತುಗಳಿಂದ ರಾಜನ ಮುಂದೆ ತನ್ನ ದುಃಖವನ್ನು ತೋಡಿಕೊಳ್ಳುತ್ತಿದ್ದನು. ಬಾರಿ-ಬಾರಿಗೂ ಶೋಕಸಂತಪ್ತನಾಗಿ ತನ್ನ ಸತ್ತುಹೋಗಿದ್ದ ಮಗನನ್ನೆತ್ತಿ ತನ್ನೆದೆಗೆ ಅವುಚಿಕೊಳ್ಳುತ್ತಿದ್ದನು.

೭೩ನೆಯ ಸರ್ಗ ಮುಗಿಯಿತು.

ಉತ್ತರಕಾಂಡ ೭೪ನೆಯ ಸರ್ಗ

ಶೂದ್ರತಪಸ್ವಿಯು ಅಧರ್ಮಾಚರಣೆಯನ್ನು ಮಾಡುತ್ತಿರುವುದೇ ಬ್ರಾಹ್ಮಣಬಾಲಕನ ಅಕಾಲಮರಣಕ್ಕೆ ಕಾರಣವೆಂದು ನಾರದರು ಶ್ರೀರಾಮನಿಗೆ ಹೇಳಿದುದು

ತಥಾ ತು ಕರುಣಂ ತಸ್ಯ ದ್ವಿಜಸ್ಯ ಪರಿದೇವನಮ್ ।
ಶುಶ್ರಾವ ರಾಘವಃ ಸರ್ವಂ ದುಃಖಶೋಕಸಮನ್ವಿತಮ್ ॥೧॥

ಅಂತಹ ಕರುಣಾಜನಕವಾದ ದುಃಖ-ಶೋಕಗಳಿಂದ ಕೂಡಿದ ಬ್ರಾಹ್ಮಣನ ಗೋಳಾಟವನ್ನು ಶ್ರೀರಾಮನು ಕೇಳಿದನು.

ಬ್ರಾಹ್ಮಣನ ಗೋಳಾಟವನ್ನು ಕೇಳಿ ದುಃಖಸಂತಪ್ತನಾದ ಶ್ರೀರಾಮನು ವಸಿಷ್ಠರನ್ನೂ, ವಾಮದೇವರನ್ನೂ, ತಮ್ಮಂದಿರನ್ನೂ, ಮಂತ್ರಿಗಳನ್ನೂ ಮತ್ತು ಪ್ರಜಾಪ್ರಮುಖರನ್ನೂ ಸಮಾಲೋಚನೆಗಾಗಿ ಆಹ್ವಾನಿಸಿದನು. ಶ್ರೀರಾಮನ ಆಮಂತ್ರಣದಂತೆ ಎಂಟುಮಂದಿ ಬ್ರಾಹ್ಮಣರು ವಸಿಷ್ಠರೊಡನೆ ಸಭಾಭವನ

ವನ್ನು ಪ್ರವೇಶಿಸಿ 'ವರ್ಧಸ್ವ ಮಹಾರಾಜ' 'ಮಹಾರಾಜನೇ! ಅಭಿವೃದ್ಧಿಯನ್ನು ಹೊಂದು'–ಎಂಬುದಾಗಿ ಹರಸಿದರು. ಸಭಾಭವನಕ್ಕೆ ಆಗಮಿಸಿದ ಮಾರ್ಕಂಡೇಯ, ಮೌದ್ಗಲ್ಯ, ವಾಮದೇವ, ಕಾಶ್ಯಪ, ಕಾತ್ಯಾಯನ, ಜಾಬಾಲಿ, ಗೌತಮ, ನಾರದ–ಇವರೆಲ್ಲವನ್ನೂ ಯಥಾಯೋಗ್ಯವಾದ ಆಸನಗಳಲ್ಲಿ ಕುಳ್ಳಿರಿಸಿ ಅವರೆಲ್ಲರಿಗೂ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಶ್ರೀರಾಮನು ತನ್ನ ಸಿಂಹಾಸನದಲ್ಲಿ ಕುಳಿತನು. ಮಂತ್ರಿಗಳನ್ನೂ ಮಹಾಜನರನ್ನೂ ಯಥಾಯೋಗ್ಯವಾದ ಆಸನಗಳಲ್ಲಿ ಕುಳ್ಳಿರಿಸಿ ಮಹಾತೇಜಸ್ವಿಗಳಾದ ಅವರೆಲ್ಲರೂ ಸುಖಾಸೀನರಾದನಂತರ ಶ್ರೀರಾಮನು ಅವರಿಗೆ ಎಲ್ಲ ವಿಷಯಗಳನ್ನೂ ಹೇಳಿ ತತ್ಕಾಲದಲ್ಲಿ ಪುತ್ರಶೋಕಪೀಡಿತನಾದ ಬ್ರಾಹ್ಮಣನು ಮಹಾದ್ವಾರದಲ್ಲಿ ನಿಂತು ಗೋಳಾಡುತ್ತಿರುವ ವಿಷಯವನ್ನು ಸಭ್ಯರಿಗೆ ವಿಜ್ಞಾಪಿಸಿದನು. ದೀನನಾದ ಶ್ರೀರಾಮನ ಈ ಮಾತನ್ನು ಕೇಳಿ ಆ ಋಷಿಗಳ ಮತ್ತು ಸಭಿಕರ ಸನ್ನಿಧಿಯಲ್ಲಿ ನಾರದರು ತಾವಾಗಿಯೇ ಶುಭಕರವಾದ ಈ ಮಾತನ್ನು ಹೇಳಿದರು :

"ಮಹಾರಾಜ! ಯಾವ ಕಾರಣದಿಂದ ಬ್ರಾಹ್ಮಣಬಾಲಕನು ಅಕಾಲ ಮರಣಕ್ಕೆ ತುತ್ತಾಗಿರುವನೆಂಬುದನ್ನು ಹೇಳುವೆನು ; ಕೇಳು. ಕಾರಣವನ್ನು ಕೇಳಿದನಂತರ ಮಾಡಬೇಕಾದ ಕರ್ತವ್ಯವನ್ನು ಮಾಡು.

ಪುರಾ ಕೃತಯುಗೇ ರಾಜನ್ಬ್ರಾಹ್ಮಣಾ ವೈ ತಪಸ್ವಿನಃ ।
ಅಬ್ರಾಹ್ಮಣಸ್ತದಾ ರಾಜನ್ನ ತಪಸ್ವೀ ಕಥಂಚನ ॥೯॥

ಹಿಂದೆ ಕೃತಯುಗದಲ್ಲಿ ಕೇವಲ ಬ್ರಾಹ್ಮಣರು ಮಾತ್ರವೇ ತಪಸ್ಸನ್ನು ಮಾಡುತ್ತಿದ್ದರು. ಅಬ್ರಾಹ್ಮಣರು ಯಾವಾಗಲೂ ತಪಸ್ಸುಮಾಡುತ್ತಿರಲಿಲ್ಲ.

ಆ ಯುಗವು ಬ್ರಾಹ್ಮಣರ ತಪಸ್ಸಿನ ತೇಜಸ್ಸಿನಿಂದ ಬೆಳಗುತ್ತಿದ್ದಿತು. ಆ ಯುಗದಲ್ಲಿ ಬ್ರಾಹ್ಮಣರಿಗೆ ಪ್ರಾಧಾನ್ಯವಿದ್ದಿತು. ಅಜ್ಞಾನದ ವಾತಾವರಣವೇ ಇರಲಿಲ್ಲ. ಇದರಿಂದ ಆ ಯುಗದಲ್ಲಿದ್ದ ಎಲ್ಲ ಮನುಷ್ಯರೂ ಮರಣದಿಂದ ರಹಿತರಾಗಿದ್ದರು ಮತ್ತು ತ್ರಿಕಾಲಜ್ಞಾನಿಗಳೂ ಆಗಿದ್ದರು. ಕೃತಯುಗದನಂತರ ತ್ರೇತಾಯುಗವು ಪ್ರಾರಂಭವಾಯಿತು. ಆ ಯುಗದಲ್ಲಿ ಶರೀರದಾರ್ಢ್ಯವುಳ್ಳ ಕ್ಷತ್ರಿಯರ ಪ್ರಾಧಾನ್ಯವಿದ್ದಿತು. ಕ್ಷತ್ರಿಯರು ಕೂಡ ಕೃತಯುಗದ ಬ್ರಾಹ್ಮಣರಂತೆಯೇ ತಪಸ್ಸಿನಲ್ಲಿ ನಿರತರಾಗಿದ್ದರು. ಕೃತ

ಯುಗದಲ್ಲಿದ್ದ ಮಹಾತ್ಮರು ತಪಸ್ಸಿನಿಂದಲೂ ಪರಾಕ್ರಮದಿಂದಲೂ ತ್ರೇತಾ ಯುಗದ ಮಹಾತ್ಮರಿಗಿಂತ ಅಧಿಕರಾಗಿದ್ದರು.

ಬ್ರಹ್ಮ ಕ್ಷತ್ರಂ ಚ ತತ್ಸರ್ವಂ ಯತ್ಪೂರ್ವಮವರಂ ಚ ಯತ್ ।
ಯುಗಯೋರುಭಯೋರಾಸೀತ್ಸಮವೀರ್ಯಸಮನ್ವಿತಮ್ ॥೧೩॥

ಕೃತಯುಗದಲ್ಲಿ ತಾರತಮ್ಯದಿಂದ ಬ್ರಹ್ಮ-ಕ್ಷತ್ರವರ್ಣಗಳು ತ್ರೇತಾ ಯುಗದಲ್ಲಿ ಸಮಾನವಾದ ತೇಜೋ-ಪರಾಕ್ರಮಗಳನ್ನು ಹೊಂದಿದುವು. ಅಧರ್ಮದ ಒಂದು ಪಾದವು ಪ್ರಚಲಿತವಾಗಿದ್ದರೂ ಪ್ರಜಾವರ್ಗದಲ್ಲಿ ಯಾವ ತಾರತಮ್ಯವನ್ನೂ ಕಾಣದೇ ಮನುವೇ ಮುಂತಾದ ಧರ್ಮಪ್ರವರ್ತಕರು ಸರ್ವಲೋಕಸಮ್ಮತವಾದ ಚಾತುರ್ವರ್ಣ್ಯವನ್ನು ಸಂಸ್ಥಾಪಿಸಿದರು. ತ್ರೇತಾ ಯುಗವು ಬೆಳಗುತ್ತಿದ್ದಾಗ, ಧರ್ಮಕ್ಕೆ ಬಾಧೆಯನ್ನುಂಟುಮಾಡುವ ಪಾಪ ದಿಂದ ರಹಿತವಾಗಿದ್ದಾಗ ಅಧರ್ಮವೆಂಬುದು ಈ ಭೂಮಂಡಲದಲ್ಲಿ ಒಂದು ಕಾಲನ್ನೂರಿತು. ಅಧರ್ಮದಿಂದ ಕೂಡಿದ ಕಾರಣ ಪ್ರಜೆಗಳ ಮತ್ತು ರಾಜರ ತೇಜಸ್ಸು ಮಸುಕಾಗುತ್ತದೆ.

ಸತ್ಯಯುಗದಲ್ಲಿ ಜೀವಿಕೆಗೆ ಸಾಧನಭೂತವಾದ ಕೃಷಿಯೇ ಮೊದಲಾದ ಕರ್ಮಗಳನ್ನು ರಜೋಗುಣಪ್ರಧಾನವಾದ ಕರ್ಮಗಳೆಂದು ಭಾವಿಸಿ ಅಂತಹ ಕರ್ಮಗಳನ್ನು 'ಅನೃತ'–ಎಂಬ ಹೆಸರಿನಿಂದ ಕರೆಯುತ್ತಿದ್ದರು ಮತ್ತು ಅಂತಹ ಕರ್ಮಗಳನ್ನು ಮಲಕ್ಕೆ ಸಮಾನವೆಂದು ತಿಳಿದು ಪರಿತ್ಯಾಗಮಾಡುತ್ತಿದ್ದರು. ಅಂತಹ ಅನೃತಕರ್ಮವೇ ತ್ರೇತಾಯುಗದಲ್ಲಿ ಅಧರ್ಮದ ಒಂದು ಪಾದವಾಗಿ ಧರೆಗಿಳಿಯಿತು. ಹೀಗೆ ಅನೃತ (ಅಸತ್ಯ) ರೂಪವಾದ ಅಧರ್ಮದ ಒಂದು ಪಾದವನ್ನು ಭೂಮಂಡಲದಲ್ಲಿರಿಸಿದ ಕಾರಣ ಕೃತಯುಗದ ದೃಷ್ಟಿಯಿಂದ ತ್ರೇತಾಯುಗದಲ್ಲಿದ್ದ ಜನರ ಆಯುಷ್ಯವೂ ಕಡಿಮೆಯಾಯಿತು.

ಅಧರ್ಮದ ಅನೃತರೂಪಿಯಾದ ಒಂದು ಹೆಜ್ಜೆಯು ಭೂಮಂಡಲ ದಲ್ಲಿ ಇರಿಸಲ್ಪಡಲಾಗಿ ಸತ್ಯಧರ್ಮಪರಾಯಣರಾದ ಪುರುಷರು ಅನೃತ ದಿಂದಾಗುವ ದುಷ್ಪರಿಣಾಮಗಳ ನಿವಾರಣೆಗಾಗಿ ಶುಭಕರ್ಮಗಳನ್ನು ಆಚರಿಸ ತೊಡಗಿದರು.

ಹೀಗೆ ಈ ತ್ರೇತಾಯುಗದಲ್ಲಿಯೂ ಬ್ರಾಹ್ಮಣ-ಕ್ಷತ್ರಿಯರೇ ತಪಸ್ಸು ಮಾಡುತ್ತಿದ್ದಾರೆ. ಇತರ ವರ್ಣದವರು ಅವರ ಶುಶ್ರೂಷೆಯನ್ನು ಮಾಡು

ತ್ತಾರೆ. ಅವರಿಗೆ ಇದೇ ಪರಮಧರ್ಮವಾಗಿರುತ್ತದೆ. ವೈಶ್ಯರು ಬ್ರಹ್ಮ-ಕ್ಷತ್ರಗಳಿಗೆ ಪೋಷಕವಾಗಿ ಕೃಷಿ-ವಾಣಿಜ್ಯಗಳನ್ನು ಆಚರಿಸುತ್ತಿದ್ದರು. ನಾಲ್ಕನೆಯ ವರ್ಣದವರು ವಿಶೇಷವಾಗಿ ಎಲ್ಲ ವರ್ಣಗಳ ಪೂಜೆಯನ್ನೂ ಆದರ-ಸತ್ಕಾರಗಳನ್ನೂ ಮಾಡುತ್ತಿದ್ದರು. ಈ ಮಧ್ಯದಲ್ಲಿ ತ್ರೇತಾಯುಗವು ಕಳೆಯಲಿದ್ದಾಗ ಅಧರ್ಮಸಂಬಂಧವಾದ ಅನೃತವು ಸರ್ವವ್ಯಾಪಿಯಾಗಿ ಬ್ರಾಹ್ಮಣ-ಕ್ಷತ್ರಿಯರ



ತೇಜಸ್ಸು ಮತ್ತೂ ಕಡಿಮೆಯಾಯಿತು. ಅನಂತರ ಅಧರ್ಮವು ತನ್ನ ಎರಡನೆಯ ಪಾದವನ್ನೂ ಭೂಮಿಯ ಮೇಲೆ ಊರಿತು. ಹಿಂದಿನ ಎರಡು ಯುಗಗಳಿಗಿಂತಲೂ ಬೇರೆಯಾದುದರಿಂದ ಆ ಯುಗಕ್ಕೆ ದ್ವಾಪರವೆಂಬ ಹೆಸರಾಯಿತು. ದ್ವಾಪರಯುಗವು ಕ್ಷಯಿಸುತ್ತಿರಲಾಗಿ ಅಧರ್ಮ ಮತ್ತು ಅನೃತಗಳು

ಮತ್ತಷ್ಟು ವೃದ್ಧಿಹೊಂದಿದುವು. ದ್ವಾಪರಯುಗದಲ್ಲಿ ತಪಸ್ಸು ವೈಶ್ಯಭಾವವನ್ನು ಸೇರಿಕೊಂಡಿತು. ಹೀಗೆ ಮೂರು ಯುಗಗಳಲ್ಲಿಯೂ ಅನುಕ್ರಮವಾಗಿ ಮೂರು ವರ್ಣದವರಿಗೂ ತಪಸ್ಸಿನ ಅಧಿಕಾರವು ಪ್ರಾಪ್ತವಾಯಿತು. ಮೂರು ಯುಗಗಳಲ್ಲಿಯೂ ಮೂರು ವರ್ಣದವರಲ್ಲಿಯೂ ತಪಸ್ಸು ನೆಲೆಸಿತು. ಆದರೆ ಅನ್ಯವರ್ಣದವನಿಗೆ ಈ ಮೂರು ಯುಗಗಳಲ್ಲಿಯೂ ತಪೋರೂಪ ವಾದ ಧರ್ಮವು ಲಭಿಸಲಿಲ್ಲ. ಮನುಜಶ್ರೇಷ್ಠನೇ! ಮುಂದೆ ಹೀಗೂ ಆಗ ಬಹುದು. ಮುಂದೆ ಕಲಿಯುಗದಲ್ಲಿ ಅನಧಿಕೃತವಾಗಿ ಅವನೂ ಮಹತ್ತರ ವಾದ ತಪಸ್ಸನ್ನೇ ಆಚರಿಸಬಹುದು. ದ್ವಾಪರಯುಗದಲ್ಲಿಯೇ ಅವನಿಗೆ ತಪ ಸ್ಸಿನ ಪ್ರವೃತ್ತಿಯುಂಟಾದಲ್ಲಿ ಅದು ಮಹತ್ತರವಾದ ಅಧರ್ಮಕಾಲವೆಂದು ಹೇಳುತ್ತಾರೆ. ಹೀಗಿರುವಾಗ ತ್ರೇತಾಯುಗದಲ್ಲಿಯೇ ತಪಸ್ಸಿನ ಪ್ರವೃತ್ತಿ ಯುಂಟಾದಲ್ಲಿ ಹೇಳುವುದೇನಿದೆ? ಬಹುಶಃ ನಿನ್ನ ರಾಜ್ಯದ ಎಲ್ಲೆಯಲ್ಲಿಯೇ ದುರ್ಬುದ್ಧಿಯಾದವನೊಬ್ಬನು ಈಗ ಮಹಾತಪಸ್ಸನ್ನು ಮಾಡುತ್ತಿರಬಹುದು. ಈ ಕಾರಣದಿಂದಲೇ ಬ್ರಾಹ್ಮಣಬಾಲಕನು ಅಕಾಲಮರಣಕ್ಕೆ ಈಡಾಗಿರ ಬಹುದು.

ಯೋ ಹ್ಯಧರ್ಮಮಕಾರ್ಯಂ ವಾ ವಿಷಯೇ ಪಾರ್ಥಿವಸ್ಯ ತು ।
ಕರೋತಿ ಚಾಶ್ರೀಮೂಲಂ ತತ್ಪುರೇ ವಾ ದುರ್ಮತಿರ್ನರಃ ॥೨೯॥

ಕ್ಷಿಪ್ರಂ ಚ ನರಕಂ ಯಾತಿ ಸ ಚ ರಾಜಾ ನ ಸಂಶಯಃ ॥೩೦॥

ದುರ್ಬುದ್ಧಿಯ ಮನುಷ್ಯನು ಒಬ್ಬ ರಾಜನ ರಾಜ್ಯದ ಎಲ್ಲೆಯೊಳಗೆ ಅಧರ್ಮದ ಕಾರ್ಯವನ್ನು ಅಥವಾ ಮಾಡಲು ಯೋಗ್ಯವಲ್ಲದ ಕಾರ್ಯ ವನ್ನು ಮಾಡಿದರೆ ಅವನ ಆ ಕಾರ್ಯವು ಆ ರಾಜ್ಯದ ದರಿದ್ರತೆಗೆ ಕಾರಣ ವಾಗುತ್ತದೆ ಮತ್ತು ಆ ದೇಶದ ರಾಜನು ನರಕದಲ್ಲಿ ಬೀಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಅಧೀಸತ್ಯ ಚ ತಪ್ತಸ್ಯ ಕರ್ಮಣಃ ಸುಕೃತಸ್ಯ ಚ ।
ಷಷ್ಠಂ ಭಜತಿ ಭಾಗಂ ತು ಪ್ರಜಾ ಧರ್ಮೇಣ ಪಾಲಯನ್ ॥೩೧॥

ಧರ್ಮದಿಂದ ರಾಜ್ಯವನ್ನು ಪರಿಪಾಲನೆಮಾಡುವ ರಾಜನು ಪ್ರಜೆಗಳು ಮಾಡಿದ ವೇದಾಧ್ಯಯನ, ತಪಸ್ಸು ಮತ್ತು ಸತ್ಕರ್ಮಗಳ ಪುಣ್ಯರಾಶಿಯಲ್ಲಿ

ಆರನೆಯ ಒಂದು ಭಾಗವನ್ನು ಪಡೆದುಕೊಳ್ಳುತ್ತಾನೆ. ಶುಭಕರ್ಮಗಳ ಆರನೆಯ ಒಂದು ಭಾಗದಷ್ಟು ಪುಣ್ಯವನ್ನು ಪಡೆಯುವ ರಾಜನು ಪ್ರಜೆಗಳನ್ನು ಹೇಗೆ ರಕ್ಷಿಸದೇ ಇದ್ದಾನು? ಆದುದರಿಂದ, ಮಹಾರಾಜ! ಈಗಲೇ ನೀನು ನಿನ್ನ ದೇಶದಲ್ಲಿ ಹುಡುಕು. ದುಷ್ಕರ್ಮವು ಎಲ್ಲಿಯಾದರೂ ನಡೆಯುತ್ತಿದ್ದರೆ ಅದನ್ನು ತಡೆಯಲು ಕೂಡಲೇ ಪ್ರಯತ್ನಿಸು. ಹೀಗೆ ಮಾಡಿದರೆ ಪ್ರಜೆಗಳ ಆಯುಷ್ಯವೂ ವೃದ್ಧಿಸುತ್ತದೆ. ಧರ್ಮದ ವೃದ್ಧಿಯೂ ಆಗುತ್ತದೆ. ಅಕಾಲ ಮರಣಕ್ಕೆ ತುತ್ತಾಗಿರುವ ಈ ಬಾಲಕನೂ ಬದುಕುತ್ತಾನೆ."

೭೪ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೭೫ನೆಯ ಸರ್ಗ

ದುಷ್ಕರ್ಮಿಗಳನ್ನು ಹುಡುಕಲು ಪುಷ್ಪಕವಿಮಾನದಲ್ಲಿ ಕುಳಿತು ರಾಜ್ಯದ ಎಲ್ಲೆಡೆಗಳಲ್ಲಿಯೂ ಶ್ರೀರಾಮನ ಸಂಚಾರ: ಎಲ್ಲೆಲ್ಲಿಯೂ ಸತ್ಕರ್ಮಿಗಳನ್ನೇ ಕಂಡ ಶ್ರೀರಾಮನು ದಕ್ಷಿಣದಿಕ್ಕಿನಲ್ಲಿ ಪ್ರಯಾಣಮಾಡುತ್ತಾ ಶೂದ್ರತಪಸ್ವಿಯೊಬ್ಬನ ಬಳಿಗೆ ಧಾವಿಸಿದುದು

ನಾರದಸ್ಯ ತು ತದ್ವಾಕ್ಯಂ ಶ್ರುತ್ವಾಮೃತಮಯಂ ಯಥಾ ।
ಪ್ರಹರ್ಷಮತುಲಂ ಲೇಭೇ ಲಕ್ಷ್ಮಣಂ ಚೇದಮಬ್ರವೀತ್ ॥೧॥

ಶ್ರೀರಾಮನು ಅಮೃತಮಯವಾದ ನಾರದರ ಮಾತನ್ನು ಕೇಳಿ ಆನಂದ ತುಂದಿಲನಾಗಿ ಲಕ್ಷ್ಮಣನಿಗೆ ಹೇಳಿದನು :

"ಸುವ್ರತನೇ! ಸೌಮ್ಯನೇ! ಲಕ್ಷ್ಮಣ! ನೀನೀಗಲೇ ಹೋಗಿ ಶ್ರೇಷ್ಠನಾದ ಆ ಬ್ರಾಹ್ಮಣನಿಗೆ ಸಮಾಧಾನಮಾಡು. ಮೃತನಾಗಿರುವ ಆ ಬ್ರಾಹ್ಮಣ ಬಾಲಕನ ಶವವನ್ನು ಅತ್ಯುತ್ತಮವಾದ ಸುಗಂಧದಿಂದ ಕೂಡಿದ ಎಣ್ಣೆಯಿಂದ ತುಂಬಿರುವ ಕೊಪ್ಪರಿಗೆಯಲ್ಲಿ ಇಡಿಸು. ಆ ಬಾಲಕನ ಶರೀರವು ಯಾವುದೇ ಕಾರಣದಿಂದಲೂ ವಿಕೃತವಾಗದ ಹಾಗೂ ವಿನಾಶವಾಗದ ರೀತಿಯಲ್ಲಿ ಎಲ್ಲ ವ್ಯವಸ್ಥೆಗಳನ್ನೂ ಮಾಡು.

ಯಥಾ ಶರೀರೋ ಬಾಲಸ್ಯ ಗುಪ್ತಃ ಸನ್ ಶಿಷ್ಟಕರ್ಮಣಃ ।
ವಿಪತ್ತಿಃ ಪರಿಭೇದೋ ವಾ ನ ಭವೇಚ್ಚ ತಥಾ ಕುರು ॥೪॥

ಶಿಷ್ಟರು ಹೇಳಿದಂತೆ ದೈನಂದಿನಕರ್ಮಗಳನ್ನು ಮಾಡುತ್ತಿದ್ದ ಈ ಬಾಲಕನ ಶರೀರವು ವಿನಾಶವಾಗದಂತೆ ಮತ್ತು ಛಿನ್ನ-ಭಿನ್ನವಾಗದಂತೆ ನೀನು ಇದನ್ನು ರಕ್ಷಿಸುತ್ತಿರಬೇಕು."

ಶುಭಲಕ್ಷಣನಾದ ಲಕ್ಷ್ಮಣನಿಗೆ ಹೀಗೆ ಆದೇಶವನ್ನಿತ್ತು ಮನಸ್ಸಿನಲ್ಲಿ ಪುಷ್ಪಕವಿಮಾನವನ್ನು ಚಿಂತಿಸಿ–'**ಆಗಚ್ಛ**' 'ಈಗಲೇ ನನ್ನ ಬಳಿಗೆ ಬಾ'–ಎಂದು ಮಹಾಯಶೋವಂತನಾದ ಶ್ರೀರಾಮನು ವಿಮಾನಕ್ಕೆ ಆಜ್ಞಾಪಿಸಿದನು. ಸುವರ್ಣಭೂಷಿತವಾದ ಪುಷ್ಪಕವಿಮಾನವು ಶ್ರೀರಾಮನ ಮನಸ್ಸಿನ ಆಶಯವನ್ನು ತಿಳಿದು ಮುಹೂರ್ತಮಾತ್ರದಲ್ಲಿ ಶ್ರೀರಾಮನ ಬಳಿಗೆ ಬಂದಿತು.

ಶ್ರೀರಾಮನ ಬಳಿಗೆ ಬಂದೊಡನೆಯೇ ವಿಮಾನದ ಅಧಿದೇವತೆಯು ಅವನಿಗೆ ನಮಸ್ಕರಿಸಿ–'ಇದೋ ನಾನು ಇಲ್ಲಿಯೇ ಇದ್ದೇನೆ. ನಾನು ನಿನ್ನ ವಶನಾಗಿದ್ದೇನೆ. ಹೇಳಿದ ಕಾರ್ಯವನ್ನು ಮಾಡಲು ಸಿದ್ಧನಾಗಿರುವ ಕಿಂಕರನಾದ ನಾನು ನಿನ್ನ ಬಳಿಯಲ್ಲೇ ಉಪಸ್ಥಿತನಾಗಿದ್ದೇನೆ'–ಎಂದು ಹೇಳಿತು.

ಕರ್ಣಾನಂದಕರವಾಗಿ ಮಾತನಾಡಿದ ಪುಷ್ಪಕವಿಮಾನಾಧಿದೇವತೆಯ ಮಾತನ್ನು ಕೇಳಿ ನರಪತಿಯಾದ ಶ್ರೀರಾಮನು ಸುತ್ತಲೂ ನಿಂತಿದ್ದ ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಪುಷ್ಪಕವಿಮಾನವನ್ನು ಹತ್ತಿದನು. ಪಟ್ಟಣದ ರಕ್ಷಣೆಯನ್ನು ಸೌಮಿತ್ರಿ-ಭರತರಿಗೆ ವಹಿಸಿಕೊಟ್ಟು ಧನುಸ್ಸನ್ನೂ, ಬತ್ತಳಿಕೆಯನ್ನೂ, ಥಳ-ಥಳಿಸುತ್ತಿದ್ದ ಕತ್ತಿಯನ್ನೂ ತೆಗೆದು ಕೊಂಡು ವಿಮಾನದಲ್ಲಿ ಶ್ರೀರಾಮನು ಪ್ರಯಾಣಮಾಡಿದನು. ಶ್ರೀರಾಮನು ದುಷ್ಕರ್ಮಿಯನ್ನು ಹುಡುಕುತ್ತಾ ಮೊದಲು ಪಶ್ಚಿಮದಿಕ್ಕಿನ ಕಡೆಗೆ ಹೋಗಿ ಅಲ್ಲೆಲ್ಲಿಯೂ ದುಷ್ಕರ್ಮಿಯನ್ನು ಕಾಣದೆ ಅನಂತರ ಹಿಮವತ್ಪರ್ವತದಿಂದ ವ್ಯಾಪ್ತವಾದ ಉತ್ತರದಿಕ್ಕಿನ ಕಡೆಗೆ ಹೋದನು. ಆ ದಿಕ್ಕಿನಲ್ಲಿಯೂ ಯಾವನೊಬ್ಬ ದುಷ್ಕರ್ಮಿಯನ್ನೂ ಕಾಣದೆ ಶ್ರೀರಾಮನು ಪೂರ್ವದಿಕ್ಕಿನ ಕಡೆಗೆ ಹೋಗಿ ಆ ದಿಕ್ಕಿನ ಎಲ್ಲ ಪ್ರದೇಶಗಳಲ್ಲಿಯೂ ದುಷ್ಕರ್ಮಿಯನ್ನು ಹುಡುಕಿದನು. ಪುಷ್ಪಕವಿಮಾನದಲ್ಲಿ ಕುಳಿತು ಪೂರ್ವದಿಕ್ಕಿನ ಎಲ್ಲ ಪ್ರದೇಶಗಳನ್ನೂ ವೀಕ್ಷಿಸುತ್ತಿದ್ದ ಶ್ರೀರಾಮನು ಎಲ್ಲೆಡೆಗಳಲ್ಲಿಯೂ ಸದಾಚಾರ-ಸತ್ಕರ್ಮ ಸಂಪನ್ನರನ್ನೇ ಕಂಡನು. ಪೂರ್ವದಿಕ್ಕೂ ಮತ್ತು ಅಲ್ಲಿ ವಾಸಿಸುತ್ತಿದ್ದ

ಪ್ರಜೆಗಳೂ ಕನ್ನಡಿಯಂತೆ ನಿರ್ಮಲರಾಗಿದ್ದರು. ಅನಂತರ ಶ್ರೀರಾಮನು ದಕ್ಷಿಣದಿಕ್ಕಿನ ಕಡೆಗೆ ಪ್ರಯಾಣಮಾಡಿದನು. ವಿಮಾನದಲ್ಲಿ ಕುಳಿತು ದಕ್ಷಿಣ ದಿಕ್ಕಿನಲ್ಲಿದ್ದ ಪ್ರದೇಶಗಳನ್ನು ವೀಕ್ಷಿಸುತ್ತಿದ್ದ ಶ್ರೀರಾಮನು ಶೈವಲಪರ್ವತದ ಉತ್ತರದಿಕ್ಕಿನಲ್ಲಿದ್ದ ದೊಡ್ಡದಾದೊಂದು ಸರೋವರವನ್ನು ವೀಕ್ಷಿಸಿದನು. ಆ ಸರೋವರದ ತೀರಪ್ರದೇಶದಲ್ಲಿ ತಪಸ್ವಿಯೊಬ್ಬನು ವೃಕ್ಷದ ರೆಂಬೆಯನ್ನು ಕಾಲುಗಳಲ್ಲಿ ಹಿಡಿದು ತಲೆಕೆಳಗಾಗಿ ಮಹತ್ತರವಾದ ತಪಸ್ಸನ್ನು ಮಾಡುತ್ತಿದ್ದನು. ಶ್ರೇಷ್ಠವಾದ ತಪಸ್ಸನ್ನು ಮಾಡುತ್ತಿದ್ದ ಆ ತಪಸ್ವಿಯ ಬಳಿಗೆ ಹೋಗಿ ಶ್ರೀರಾಮನು ಹೇಳಿದನು :



" '**ಧನ್ಯಸ್ತ್ವಮಸಿ ಸುವ್ರತ**'–ಓ ವ್ರತನಿಷ್ಠನೇ! ನೀನು ಧನ್ಯನು.

ತಪೋವೃದ್ಧನೇ! ದೃಢಪರಾಕ್ರಮನೇ! ನೀನು ಯಾವ ಪ್ರಕೃತಿಯಲ್ಲಿ ಜನ್ಮತಾಳಿರುವೆ? ದಶರಥನ ಪುತ್ರನಾದ ರಾಮನೆಂಬ ಹೆಸರಿನ ನಾನು ಕುತೂಹಲದ ಕಾರಣದಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ನಿನ್ನ ಈ ಘೋರವಾದ ತಪಸ್ಸಿನಿಂದ ಯಾವ ವಸ್ತುವನ್ನು ಪಡೆಯಲು

ನೀನು ಅಪೇಕ್ಷಿಸಿರುವೆ? ಸ್ವರ್ಗವನ್ನಾಗಲೀ ಅಥವಾ ಬೇರೆ ಯಾವುದಾದರೂ ವಸ್ತುವನ್ನಪೇಕ್ಷಿಸಿ ನೀನು ಈ ಘೋರವಾದ ತಪಸ್ಸನ್ನು ಆಚರಿಸುತ್ತಿರುವೆಯಾ? ಬೇರೆಯವರಿಂದ ಮಾಡಲು ಅಸಾಧ್ಯವಾದ ಮತ್ತು ಪರಮಾಶ್ರಯ ವಾದ ಈ ತಪಸ್ಸನ್ನು ನೀನು ಯಾವುದರ ಪ್ರಾಪ್ತಿಗಾಗಿ ಆಚರಿಸುತ್ತಿರುವೆ? ತಾಪಸನೇ! ನೀನು ಯಾವ ದೇಹವನ್ನು ಆಶ್ರಯಿಸಿ ಇಂತಹ ಘೋರವಾದ ತಪಸ್ಸನ್ನು ಮಾಡುತ್ತಿರುವೆ? ಇದನ್ನು ನಿನ್ನಿಂದಲೇ ನಾನು ಕೇಳಿ ತಿಳಿಯಬೇಕೆಂದಿರುವೆನು. ನಿನಗೆ ಮಂಗಳವಾಗಲಿ. ದುರ್ಜಯನೇ! ನೀನು ಬ್ರಾಹ್ಮಣನಾಗಿರುವೆಯೋ? ಕ್ಷತ್ರಿಯನೇ? ಮೂರನೆಯ ವರ್ಣನಾದ ವೈಶ್ಯವರ್ಣದಲ್ಲಿ ಜನ್ಮತಾಳಿರುವೆಯಾ? ಅಥವಾ ನೀನೇನಾದರೂ ನಾಲ್ಕನೆಯ ವರ್ಣದವನೇ? ಈ ವಿಷಯವನ್ನು ಸತ್ಯವಾಗಿ ಹೇಳು. ಸತ್ಯಭಾಷಿಯಾಗು."

ತಲೆಕೆಳಗಾಗಿ ಮರಕ್ಕೆ ಜೋತುಬಿದ್ದುಕೊಂಡು ತಪಸ್ಸುಮಾಡುತ್ತಿದ್ದ ತಪಸ್ವಿಯು ಶ್ರೀರಾಮನ ಈ ಪ್ರಶ್ನೆಗಳನ್ನು ಕೇಳಿ ತನ್ನ ವರ್ಣವು ಯಾವು ದೆಂಬುದನ್ನೂ ಮತ್ತು ತಾನು ಯಾವ ಉದ್ದೇಶದಿಂದ ತಪಸ್ಸುಮಾಡುತ್ತಿರುವೆ ನೆಂಬುದನ್ನೂ ಶ್ರೀರಾಮನಿಗೆ ತಿಳಿಸಿದನು.

೭೫ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೭೬ನೆಯ ಸರ್ಗ

ಶಂಬೂಕನ ವಧೆ : ದೇವತೆಗಳ ಪ್ರಶಂಸೆ : ಅಗಸ್ತ್ಯರ ಸತ್ಕಾರ ಮತ್ತು ಆಭರಣಗಳ ಪ್ರದಾನ

ತಸ್ಯ ತದ್ವಚನಂ ಶ್ರುತ್ವಾ ರಾಮಸ್ಯಾಕ್ಲಿಷ್ಟಕರ್ಮಣಃ ।
ಅವಾಕ್ಶಿರಾಸ್ತಥಾ ಭೂತ್ವಾ ವಾಕ್ಯಮೇತದುವಾಚ ಹ ॥೧॥

ಯಾವುದೇ ಕಾರ್ಯಗಳನ್ನೂ ಅನಾಯಾಸವಾಗಿ ಮಾಡುವ ಶ್ರೀರಾಮನ ಆ ಮಾತುಗಳನ್ನು ಕೇಳಿ ತಲೆಕೆಳಗಾಗಿ ಜೋತುಬಿದ್ದಿದ್ದ ಸ್ಥಿತಿ ಯಲ್ಲಿಯೇ ಆ ತಪಸ್ವಿಯು ಹೇಳಿದನು :

"ಮಹಾಯಶೋವಂತನೇ! ರಾಮ! ನಾನು ಶೂದ್ರವರ್ಣದಲ್ಲಿ ಹುಟ್ಟಿರುವೆನು. ಸಶರೀರನಾಗಿ ದೇವತ್ವವನ್ನು ಪಡೆದು ದೇವಲೋಕವನ್ನು ವಶಪಡಿಸಿಕೊಳ್ಳಲು ನಾನು ಈ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದೇನೆ.

ರಾಘವ! ಕಾಕುತ್ಸ್ಥ! ನಾನೆಂದಿಗೂ ಸುಳ್ಳುಹೇಳುವುದಿಲ್ಲ. (ಸಶರೀರನಾಗಿ ದೇವತ್ವವನ್ನು ಪಡೆದು) ದೇವಲೋಕವನ್ನು ವಶಪಡಿಸಿಕೊಳ್ಳುವ ಸಲುವಾಗಿಯೇ ನಾನು ಈ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದೇನೆ. ನಾನು ಶಂಬೂಕನೆಂಬ ಹೆಸರಿನ ಶೂದ್ರಪ್ರಕೃತಿಯವನಾಗಿದ್ದೇನೆ."

ಶಂಬೂಕನು ಹೀಗೆ ಹೇಳುತ್ತಿರುವಾಗಲೇ ಶ್ರೀರಾಮನು ಒರೆಯಿಂದ ಫಳ-ಫಳಿಸುವ ಕತ್ತಿಯನ್ನು ತೆಗೆದು ಆತನ ತಲೆಯನ್ನು ಕತ್ತರಿಸಿದನು. ಶಂಬೂಕನು ಹೀಗೆ ಶ್ರೀರಾಮನಿಂದ ಹತನಾಗಲು ಅಗ್ನಿಪ್ರಮುಖರಾದ ಇಂದ್ರನೇ ಮೊದಲಾದ ದೇವತೆಗಳು–'ಸಾಧು ರಾಘವ! ಸಾಧು' ಎಂದು ಹೇಳುತ್ತಾ ಶ್ರೀರಾಮನನ್ನು ಬಹಳವಾಗಿ ಪ್ರಶಂಸಿಸಿದರು.* ಆ ಸಮಯದಲ್ಲಿ ಎಲ್ಲ ಕಡೆಗಳಲ್ಲಿಯೂ ವಾಯುವಿನಿಂದ ಉದುರಿಸಲ್ಪಟ್ಟ ದಿವ್ಯವಾದ ಮತ್ತು ಸುಗಂಧಯುಕ್ತವಾದ ಪುಷ್ಪಗಳ ವೃಷ್ಟಿಯಾಯಿತು. ಸುಪ್ರೀತರಾದ ದೇವತೆಗಳು ಸತ್ಯಪರಾಕ್ರಮನಾದ ಶ್ರೀರಾಮನಿಗೆ ಹೇಳಿದರು :

ಸುರಕಾರ್ಯಮಿದಂ ದೇವ ಸುಕೃತಂ ತೇ ಮಹಾಮತೇ ॥೭॥

"ಮಹಾಮತಿಮಂತನೇ! ದೇವ! ದೇವತೆಗಳ ಈ ಕಾರ್ಯವನ್ನು ನೀನು ಚೆನ್ನಾಗಿ ಸಾಧಿಸಿರುವೆ.

---

* ಇಲ್ಲಿ ನಿರೂಪಿತವಾಗಿರುವ ಶಂಬೂಕತಪಸ್ವಿಯ ಪ್ರಕರಣವು ಗೊಂದಲಕ್ಕೆ ಎಡೆ ಕೊಟ್ಟಿದೆ. ಪ್ರಕರಣವನ್ನು ಸರಿಯಾದ ಅರ್ಥದಲ್ಲಿ ಗ್ರಹಣಮಾಡದೆ ಇರುವುದರಿಂದ ಜನರ ಮನಸ್ಸನ್ನು ಕೆರಳಿಸುವ ಸಾಹಿತ್ಯವು ಇತ್ತೀಚೆಗೆ ಕಂಡುಬರುತ್ತಿದೆ. ಆದರೆ ಅನವದ್ಯವಾದ ಆರ್ಷಗ್ರಂಥಗಳನ್ನು ಶಾಸ್ತ್ರ, ಯುಕ್ತಿ, ಅನುಭವಗಳ ಪ್ರಮಾಣದಿಂದ ಪೂರ್ವಾಪರವಿವೇಚನೆಯೊಡನೆ ತೆಗೆದುಕೊಂಡರೆ ಗೊಂದಲಕ್ಕೆ ಅವಕಾಶವಿಲ್ಲ.

"ಶಂಬೂಕನು ನಾಲ್ಕನೆಯ ವರ್ಣದವನು. ಆದರೂ ಅವನು ಮನುಷ್ಯನೇ ಅಲ್ಲವೇ? ಆತ್ಮೋನ್ನತಿಯನ್ನು ಸಾಧಿಸುವ ಅಧಿಕಾರ ಅವನಿಗಿಲ್ಲವೇ? ಆತ್ಮೋನ್ನತಿಗೋಸ್ಕರ ತಪಸ್ಸುಮಾಡುತ್ತಿದ್ದ ಅಂತಹ ಶಂಬೂಕನನ್ನು ಶ್ರೀರಾಮನು ಸಂಹಾರಮಾಡಿದ್ದು ಅನ್ಯಾಯವಲ್ಲವೇ?"–ಎಂಬ ಪ್ರಶ್ನೆಯನ್ನು ಇಲ್ಲಿ ಕೇಳಲಾಗುತ್ತದೆ. ಆದರೆ ನಾಲ್ಕನೆಯ ವರ್ಣದವರಿಗೆ ಆತ್ಮೋನ್ನತಿಗಾಗಿ ಸಾಧನೆಮಾಡಲು ಅಧಿಕಾರವಿಲ್ಲ–ಎಂದು ಶಾಸ್ತ್ರಗಳಲ್ಲಿ ಎಲ್ಲಿಯೂ ಹೇಳಿಲ್ಲ. ಪ್ರಕೃತ ರಾಮಾಯಣದಲ್ಲಿಯೂ ಅಂತಹ ಹೇಳಿಕೆ ಇಲ್ಲ. ಆತ್ಮಸಾಕ್ಷಾತ್ಕಾರಮಾಡಿಕೊಳ್ಳುವುದು ಮತ್ತು ಅದಕ್ಕಾಗಿ ಸಾಧನೆಮಾಡುವುದು ಪ್ರತಿಯೊಬ್ಬ ಮನುಷ್ಯನ ಹಕ್ಕೇ ಆಗಿದೆ. ಶಾಸ್ತ್ರಗಳು ಅದನ್ನು

ಈ ಶಂಬೂಕನಿಗೆ ನಿನ್ನ ಈ ಕಾರ್ಯದಿಂದಾಗಿ ಸಶರೀರನಾಗಿ ಸ್ವರ್ಗವನ್ನು ವಶಪಡಿಸಿಕೊಂಡು ಅದನ್ನು ಉಪಭೋಗಿಸಲು ಸಾಧ್ಯವಾಗಲಿಲ್ಲ. ಇದರಿಂದ ನಾವು ಸಂತುಷ್ಟರಾಗಿದ್ದೇವೆ. ನಿನಗೆ ಬೇಕಾದ ವರವನ್ನು ಕೇಳು."

ದೇವತೆಗಳ ಈ ಮಾತನ್ನು ಕೇಳಿ ಸತ್ಯಪರಾಕ್ರಮನಾದ ಶ್ರೀರಾಮನು ಕೈಮುಗಿದುಕೊಂಡು ಸಹಸ್ರಾಕ್ಷನಾದ ಪುರಂದರನಿಗೆ ಹೇಳಿದನು :

ಯದಿ ದೇವಾಃ ಪ್ರಸನ್ನಾ ಮೇ ದ್ವಿಜಪುತ್ರಃ ಸ ಜೀವತು ।
ದಿಶನ್ತು ವರಮೇತಂ ಮೇ ಈಪ್ಸಿತಂ ಪರಮಂ ಮಮ ॥೧೦॥

"ದೇವತೆಗಳು ನಿಶ್ಚಯವಾಗಿಯೂ ನನ್ನ ವಿಷಯದಲ್ಲಿ ಪ್ರಸನ್ನರಾಗಿರುವುದಾದರೆ ಬ್ರಾಹ್ಮಣನ ಮಗನು ಬದುಕುವಂತಾಗಲಿ. ಈ ವರವನ್ನು ದೇವತೆಗಳು ನನಗೆ ದಯಪಾಲಿಸಲಿ. ಇದೇ ನನಗೆ ಇಷ್ಟವಾದ ವರವಾಗಿದೆ.

ಸಮರ್ಥಿಸುತ್ತವೆಯೇ ಹೊರತು ನಿಷೇಧಿಸುವುದಿಲ್ಲ. ದುರುದ್ದೇಶದಿಂದ ಮಾಡುವ ತಪಸ್ಸನ್ನು ಮಾತ್ರ ಶಾಸ್ತ್ರಗಳು ನಿಷೇಧಿಸುತ್ತವೆ.

ಈ ಪ್ರಕರಣದಲ್ಲಿ ಶ್ರೀರಾಮನು ಶಂಬೂಕನನ್ನು ಸಂಹರಿಸಲು ಕಾರಣ ಅವನು ತಪಸ್ಸುಮಾಡುತ್ತಿದ್ದುದಕ್ಕೋಸ್ಕರ ಅಲ್ಲ. ತಪಸ್ಸನ್ನು ಯಾವ ಉದ್ದೇಶದಿಂದ ಮಾಡಬೇಕು? ಹೇಗೆ ಮಾಡಬೇಕು? ಎಂಬುದರ ವಿವೇಕವಿಲ್ಲದೆ ಅಶಾಸ್ತ್ರೀಯವಾದ ತಪಸ್ಸನ್ನು ಅವನು ಆಚರಿಸುತ್ತಿದ್ದನು. ಆದರಿಂದ ಅವನಿಗೂ ಹಾನಿ ಲೋಕಕ್ಕೂ ಹಾನಿ. ಅವನ ದುಷ್ಟತಪಸ್ಸಿನ ಪರಿಣಾಮವಾಗಿ ಋಷಿಕುಮಾರನು ಅಕಾಲಮರಣಕ್ಕೆ ಈಡಾಗಿದ್ದನು. ಇಂತಹ ಅಧರ್ಮದಿಂದ ಉಂಟಾಗಿದ್ದ ಮತ್ತು ಮುಂದೆ ಒದಗಬಹುದಾದ ಅಧರ್ಮದ ದೆಸೆಯಿಂದ ರಾಷ್ಟ್ರವನ್ನು ಕಾಪಾಡಲು ದಂಡಧರನಾದ ಶ್ರೀರಾಮನು ಶಂಬೂಕನನ್ನು ಸಂಹರಿಸಿದ ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಶಂಬೂಕನು 'ದೇವಲೋಕಜಿಗೀಷಯಾ' ಎಂದರೆ ದೇವಲೋಕವನ್ನು ಗೆದ್ದು ವಶಪಡಿಸಿಕೊಳ್ಳಬೇಕು-ಎಂಬ ಅಭಿಸಂಧಿಯಿಂದ ತಪಸ್ಸುಮಾಡುತ್ತಿದ್ದನು. ಇಂತಹ ಕಾರ್ಯವನ್ನು ಯಾರು ಮಾಡುತ್ತಿದ್ದರೂ ಅವರು ದಂಡನೆಗೆ ಯೋಗ್ಯರೇ ಆಗುತ್ತಾರೆ. ಶ್ರೀರಾಮನ ವಂಶದ ಪೂರ್ವಪುರುಷನಾಗಿದ್ದ ಮಾಂಧಾತಮಹಾರಾಜನು ಇಂತಹ ಉದ್ದೇಶವನ್ನು ಸ್ಪಷ್ಟಪಡಿಸಿದುದಕ್ಕೋಸ್ಕರ ಇಂದ್ರನು ಅವನಿಗೆ ತಕ್ಕ ಶಿಕ್ಷೆಯನ್ನು ಕೊಟ್ಟನು. ದೇವಲೋಕದ ಆಧಿಪತ್ಯವನ್ನು ಬಯಸಿ ಘೋರತಪಸ್ಸು ಮಾಡುತ್ತಿದ್ದ ವೃತ್ರನನ್ನು ಇಂದ್ರನು ಸಂಹರಿಸಿದನು. ಅಂತೆಯೇ ತ್ರಿಶಂಕುವು ಗುರುವಾಕ್ಯವನ್ನು ಅನಾದರಿಸಿ ಇಂತಹ ಅನಧಿಕೃತವಾದ ಪ್ರಯೋಜನಕ್ಕಾಗಿ ಕಾರ್ಯಪರನಾಗಿದ್ದಕ್ಕಾಗಿ ಶಿಕ್ಷಿಸ

ಮಮಾಪಚಾರಾದ್ಬಾಲೋಽಸೌ ಬ್ರಾಹ್ಮಣಸ್ಯೈಕಪುತ್ರಕಃ ।
ಅಪ್ರಾಪ್ತಕಾಲಃ ಕಾಲೇನ ನೀತೋ ವೈವಸ್ವತಕ್ಷಯಮ್ ॥೧೧॥

ನಾನು ಮಾಡಿದ ಅಪರಾಧದ ಕಾರಣದಿಂದಲೇ ಏಕಮಾತ್ರಪುತ್ರನಾಗಿದ್ದ ಬ್ರಾಹ್ಮಣಬಾಲಕನು ಅಪ್ರಾಪ್ತವಯಸ್ಕನಾಗಿದ್ದಾಗಲೇ ಯಮನ ಅರಮನೆಗೆ ಸೆಳೆಯಲ್ಪಟ್ಟನು.

ತಂ ಜೀವಯತ ಭದ್ರಂ ವೋ ನಾನೃತಂ ಕರ್ತುಮರ್ಹಥ ।
ದ್ವಿಜಸ್ಯ ಸಂಶ್ರುತೋಽರ್ಥೋ ಮೇ ಜೀವಯಿಷ್ಯಾಮಿ ತೇ ಸುತಮ್ ॥೧೨॥

ದೇವತೆಗಳೇ! ನಿಮಗೆ ಮಂಗಳವಾಗಲಿ. ಬ್ರಾಹ್ಮಣನಿಗೆ ಅವನ ಮಗನನ್ನು ಬದುಕಿಸಿಕೊಡುವೆನೆಂದು ಪ್ರತಿಜ್ಞಾವಚನವನ್ನಿತ್ತು ಬಂದಿದ್ದೇನೆ.

ಲ್ಪಟ್ಟನು. ದೇವಲೋಕವನ್ನು ಸ್ವಾಧೀನಪಡಿಸಿಕೊಂಡು ದೇವೇಂದ್ರನನ್ನು ಪದಚ್ಯುತನನ್ನಾಗಿ ಮಾಡಲು ಯಾವುದೇ ವರ್ಣದವರು ಪ್ರಯತ್ನಿಸಿದರೂ ಅದು ದಂಡನೀಯವೇ. ಆದುದರಿಂದ ಶಂಬೂಕನಿಗೆ ಆದ ದಂಡನೆಯು ಅವನು ನಾಲ್ಕನೆಯ ವರ್ಣದವನು ಎಂಬ ಕಾರಣದಿಂದಲ್ಲ–ಎಂಬುದು ಸಿದ್ಧವಾಗುತ್ತದೆ. ಶ್ರೀರಾಮನು ಶಂಬೂಕನ ಉದ್ದೇಶ ವೇನೆಂಬುದನ್ನು ತನ್ನ ಮನಸೋಇಚ್ಛೆಯಿಂದ ಊಹೆಮಾಡಿಕೊಂಡಿಲ್ಲ. ಶಂಬೂಕ ನನ್ನೇ ಅವನ ಉದ್ದೇಶವೇನೆಂಬುದನ್ನು ಕೇಳಿ ಅನಂತರ ಅವನಿಗೆ ದಂಡನೆಯನ್ನು ಕೊಟ್ಟಿದ್ದಾನೆ. ರಾಜನು ಅಪರಾಧಿಗೆ ತಕ್ಕ ದಂಡನೆಯನ್ನು ಕೊಟ್ಟರೆ ಅದರಿಂದ ಅಪರಾಧಿಗೂ ಒಳ್ಳೆಯ ಗತಿಯೇ ಉಂಟಾಗುತ್ತದೆ. ಪರಲೋಕದಲ್ಲಿ ಅವನಿಗೆ ದಂಡನೆಯ ಭಯವಿರುವುದಿಲ್ಲ. **“ರಾಜಭಿಃ ಧೃತದಣ್ಡಾಸ್ತು ಕೃತ್ವಾ ಪಾಪಾನಿ ಮಾನವಾಃ । ನಿರ್ಮಲಾಃ ಸ್ವರ್ಗಮಾಯಾನ್ತಿ ಸನ್ತಃ ಸುಕೃತಿನೋ ಯಥಾ ॥”** ಇದರಂತೆ ಶಂಬೂಕನಿಗೂ ಒಳ್ಳೆಯ ಗತಿಯೇ ಉಂಟಾಗಿರುವುದರಿಂದ ಅದು ದಯೆಯ ಕಾರ್ಯವೇ ಹೊರತು ಕ್ರೌರ್ಯದ ಕಾರ್ಯವಲ್ಲ. ಆತ್ಮೋನ್ನತಿಗಾಗಿ ಎಲ್ಲ ವರ್ಣದವರೂ ತಪಸ್ಸುಮಾಡಬಹುದೆಂಬುದಕ್ಕೆ ಇತಿಹಾಸ-ಪುರಾಣಗಳಲ್ಲಿ ಆಧಾರಗಳಿವೆ. ಉದಾಹರಣೆಗೆ ಮನು, ಇಕ್ಷ್ವಾಕು ಮುಂತಾದ ಕ್ಷತ್ರಿಯರೂ ಕೃತಯುಗದಲ್ಲಿ ತಪಸ್ಸು ಮಾಡುತ್ತಿದ್ದರು ಮತ್ತು ತ್ರೇತಾಯುಗದಲ್ಲಿ ವೈಶ್ಯಋಷಿಯು ಆತ್ಮೋನ್ನತಿಗಾಗಿ ತಪಸ್ಸನ್ನಾಚರಿಸುತ್ತಿದ್ದ ಎಂಬುದಕ್ಕೆ ರಾಮಾಯಣದಲ್ಲೇ ಪ್ರಮಾಣವಿದೆ. ನಾಮ ಸಂಕೀರ್ತನಾದಿರೂಪವಾದ ತಪಸ್ಸನ್ನು ಎಲ್ಲರೂ ಆಚರಿಸಬಹುದು. ಗೀತೆಯು ಹೇಳುವ ಮೂರು ಬಗೆಯ ತಪಸ್ಸಿನಲ್ಲಿ ಎಲ್ಲರಿಗೂ ಅಧಿಕಾರವುಂಟು.

ಆದರೆ ಅಶಾಸ್ತ್ರವಿಹಿತವಾದ ಮತ್ತು ದುರಭಿಸಂಧಿಯಿಂದ ಕೂಡಿದ ತಪಸ್ಸು ಎಲ್ಲರಿಗೂ ನಿಷಿದ್ಧ.

ಆದುದರಿಂದ ನೀವು ಆ ಬಾಲಕನನ್ನು ಜೀವಂತನನ್ನಾಗಿ ಮಾಡಿರಿ. ನನ್ನ ಮಾತನ್ನು ಸುಳ್ಳಾಗಿಸಬೇಡಿರಿ."

ಸುಪ್ರೀತರಾಗಿದ್ದ ವಿಬುಧಶ್ರೇಷ್ಠರು ಶ್ರೀರಾಮನ ಮಾತನ್ನು ಕೇಳಿ ಪ್ರೀತಿಯುಕ್ತವಾದ ಈ ಮಾತನ್ನು ಹೇಳಿದರು :

ನಿರ್ವೃತೋ ಭವ ಕಾಕುತ್ಸ್ಥ ಸೋऽಸ್ಮಿನ್ನಹನಿ ಬಾಲಕಃ ।
ಜೀವಿತಂ ಪ್ರಾಪ್ತವಾನ್ಭೂಯಃ ಸಮೇತಶ್ಚಾಪಿ ಬನ್ಧುಭಿಃ ॥೧೪॥

"ರಾಘವ! ನೀನು ಸುಖವಾಗಿರು. ಇಂದೇ ಆ ಬ್ರಾಹ್ಮಣಬಾಲಕನು ಜೀವಂತನಾಗಿ ತನ್ನ ಬಂಧುಗಳೊಡನೆ ಸೇರಿದ್ದಾನೆ.

ಯಸ್ಮಿನ್ಮುಹೂರ್ತೇ ಕಾಕುತ್ಸ್ಥ ಶೂದ್ರೋऽಯಂ ವಿನಿಪಾತಿತಃ ।
ತಸ್ಮಿನ್ಮುಹೂರ್ತೇ ಬಾಲೋऽಸೌ ಜೀವೇನ ಸಮಯುಜ್ಯತ ॥೧೫॥

ಯಾವ ಮುಹೂರ್ತದಲ್ಲಿ ಶೂದ್ರತಪಸ್ವಿಯು ಹತನಾಗಿ ಕೆಳಗೆ ಬಿದ್ದನೋ ಅದೇ ಮುಹೂರ್ತದಲ್ಲಿಯೇ ಬ್ರಾಹ್ಮಣಬಾಲಕನು ಜೀವಂತನಾದನು.

ನರಶ್ರೇಷ್ಠನೇ! ನಿನಗೆ ಮಂಗಳವಾಗಲಿ. ನೀನು ಇನ್ನೂ ವಿಶೇಷ ವಾದ ಅಭ್ಯುದಯವನ್ನು ಪಡೆಯುವೆ. ಈಗ ನಾವೆಲ್ಲರೂ ಅಗಸ್ತ್ಯರ ಆಶ್ರಮವನ್ನು ಸಂದರ್ಶಿಸಲು ಹೋಗುತ್ತಿದ್ದೇವೆ. ಮಹಾದ್ಯುತಿಗಳಾದ ಅಗಸ್ತ್ಯರು ಜಲಶಯ್ಯಾ ಎಂಬ ವ್ರತವನ್ನು ಕೈಗೊಂಡು ಹನ್ನೆರಡು ವರ್ಷಗಳಾದುವು. ಆ ವ್ರತವು ಈಗ ತಾನೇ ಸಮಾಪ್ತವಾಗಿದೆ. ಹನ್ನೆರಡು ವರ್ಷಗಳ ವ್ರತವನ್ನು ಮುಗಿಸಿರುವ ಮಹರ್ಷಿಗಳನ್ನು ಅಭಿನಂದಿಸಲು ನಾವೆಲ್ಲರೂ ಅಲ್ಲಿಗೆ ಹೋಗುತ್ತಿದ್ದೇವೆ. ನೀನೂ ಕೂಡ ಋಷಿಶ್ರೇಷ್ಠರಾದ ಅಗಸ್ತ್ಯರನ್ನು ಸಂದರ್ಶಿಸಲು ನಮ್ಮೊಡನೆ ಬಾ."

ದೇವತೆಗಳ ಈ ಮಾತನ್ನು ಕೇಳಿ ರಘುನಂದನನು ಹಾಗೆಯೇ ಆಗಲೆಂದು ಪ್ರತ್ಯುತ್ತರಿಸಿ ಸುವರ್ಣಭೂಷಿತವಾಗಿದ್ದ ಪುಷ್ಪಕವಿಮಾನವನ್ನೇರಿದನು. ಬಹಳ ದೊಡ್ಡದಾಗಿದ್ದ ವಿಮಾನಗಳಲ್ಲಿ ಕುಳಿತು ದೇವತೆಗಳೂ ಕುಂಭಸಂಭವರ ತಪೋವನಕ್ಕೆ ಹೋದರು. ಅವರನ್ನು ಅನುಸರಿಸಿ ಪುಷ್ಪಕವಿಮಾನದಲ್ಲಿ ಕುಳಿತು ಶ್ರೀರಾಮನೂ ಹೋದನು.

ತಪೋನಿಧಿಗಳಾದ ಅಗಸ್ತ್ಯರು ತಮ್ಮ ತಪೋಭೂಮಿಗೆ ದೇವತೆಗಳು ಆಗಮಿಸಿದುದನ್ನು ಕಂಡು ಅವರಲ್ಲಿ ಯಾರೊಬ್ಬರನ್ನೂ ಬಿಡದೆ ಎಲ್ಲ ದೇವತೆಗಳನ್ನೂ ಯಥಾವಿಧಿಯಾಗಿ ಸತ್ಕರಿಸಿದರು. ಮಹರ್ಷಿಗಳಿಂದ ಸತ್ಕಾರವನ್ನು ಸ್ವೀಕರಿಸಿ ಅವರನ್ನು ಯಥೋಚಿತವಾಗಿ ಸಂಪೂಜಿಸಿ ಅಭಿವಂದಿಸಿದ ನಂತರ ದೇವತೆಗಳೆಲ್ಲರೂ ತಮ್ಮ-ತಮ್ಮ ಅನುಯಾಯಿಗಳೊಡನೆ ಸ್ವರ್ಗಕ್ಕೆ ತೆರಳಿದರು. ದೇವತೆಗಳೆಲ್ಲರೂ ಹೊರಟುಹೋದನಂತರ ಶ್ರೀರಾಮನು ಪುಷ್ಪಕವಿಮಾನದಿಂದ ಕೆಳಗಿಳಿದು ಋಷಿಶ್ರೇಷ್ಠರಾದ ಅಗಸ್ತ್ಯರಿಗೆ ಅಭಿವಂದಿಸಿದನು. ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಮಹಾತ್ಮರಾದ ಅಗಸ್ತ್ಯರಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಅವರಿಂದ ರಾಜೋಚಿತವಾದ ಆತಿಥ್ಯವನ್ನು ಪಡೆದು ಶ್ರೀರಾಮನು ಆಸನದಲ್ಲಿ ಕುಳಿತನು. ಅನಂತರ ಮಹಾತಪಸ್ವಿಗಳಾದ ಅಗಸ್ತ್ಯರು ಶ್ರೀರಾಮನಿಗೆ ಹೇಳಿದರು :

ಸ್ವಾಗತಂ ತೇ ನರಶ್ರೇಷ್ಠ ದಿಷ್ಟ್ಯಾ ಪ್ರಾಪ್ತೋಽಸಿ ರಾಘವ ।
ತ್ವಂ ಮೇ ಬಹುಮತೋ ರಾಮ ಗುಣೈರ್ಬಹುಭಿರುತ್ತಮೈಃ ।
ಅತಿಥಿಃ ಪೂಜನೀಯಶ್ಚ ಮಮ ನಿತ್ಯಂ ಹೃದಿ ಸ್ಥಿತಃ ॥೨೬॥

“ನರಶ್ರೇಷ್ಠನೇ! ನಿನಗೆ ಸ್ವಾಗತವನ್ನು ಬಯಸುತ್ತೇನೆ. ನನ್ನ ಸೌಭಾಗ್ಯದ ಕಾರಣದಿಂದಲೇ ನೀನು ನನ್ನ ಆಶ್ರಮಕ್ಕೆ ಬಂದಿರುವೆ. ನಿನ್ನಲ್ಲಿರುವ ಪರಮಶ್ರೇಷ್ಠವಾದ ಗುಣಗಳಿಗಾಗಿ ನಾನು ನಿನ್ನನ್ನು ಬಹಳವಾಗಿ ತುಂಬುಮನಸ್ಸಿನಿಂದ ಗೌರವಿಸುತ್ತೇನೆ. ನೀನು ನನ್ನ ಹೃನ್ಮಂದಿರದಲ್ಲಿ ಯಾವಾಗಲೂ ವಿರಾಜಿಸುವೆ. ನೀನು ನನಗೆ ಆದರಣೀಯನಾದ ಮತ್ತು ಪೂಜ್ಯನಾದ ಅತಿಥಿಯಾಗಿರುವೆ.

ಅಧರ್ಮತಪಸ್ಸನ್ನಾಚರಿಸುತ್ತಿದ್ದ ತಪಸ್ವಿಯನ್ನು ಸಂಹರಿಸಲು ನೀನು ಇಲ್ಲಿಗೆ ಬಂದಿರುವೆಯೆಂದೂ ಮತ್ತು ಧರ್ಮದ ಬಲದಿಂದಲೇ ಬ್ರಾಹ್ಮಣನ ಮಗನನ್ನು ಬದುಕಿಸಿಕೊಟ್ಟೆಯೆಂದೂ ದೇವತೆಗಳೂ ಹೇಳುತ್ತಿದ್ದಾರೆ. ರಾಘವ! ನೀನು ಈ ರಾತ್ರಿ ನನ್ನ ಬಳಿಯಲ್ಲಿಯೇ ಈ ಆಶ್ರಮದಲ್ಲಿ ತಂಗಿರು. ಬೆಳಗಾದೊಡನೆಯೇ ಪುಷ್ಪಕವಿಮಾನದ ಮೂಲಕವಾಗಿ ನಿನ್ನ ರಾಜಧಾನಿಗೆ ಪ್ರಯಾಣಮಾಡಬಹುದಾಗಿದೆ.

ತ್ವಂ ಹಿ ನಾರಾಯಣಃ ಶ್ರೀಮಾನ್ ತ್ವಯಿ ಸರ್ವಂ ಪ್ರತಿಷ್ಠಿತಮ್ ।
ತ್ವಂ ಪ್ರಭುಃ ಸರ್ವದೇವಾನಾಂ ಪುರುಷಸ್ತ್ವಂ ಸನಾತನಃ ॥೨೯॥

ನೀನು ಸಾಕ್ಷಾತ್ ಶ್ರೀಮನ್ನಾರಾಯಣನೇ ಆಗಿರುವೆ. ನಿನ್ನಲ್ಲಿಯೇ ಸಮಸ್ತವೂ ಪ್ರತಿಷ್ಠಿತವಾಗಿದೆ. ಸಮಸ್ತದೇವತೆಗಳಿಗೂ ನೀನೇ ಪ್ರಭುವಾಗಿರುವೆ. ನೀನು ಸನಾತನನಾದ ಪುರುಷನಾಗಿರುವೆ.

ಇದೋ ನೋಡು, ರಾಘವ! ಇದು ವಿಶ್ವಕರ್ಮನಿಂದಲೇ ನಿರ್ಮಿಸಲ್ಪಟ್ಟ ದಿವ್ಯಾಭರಣವಾಗಿದೆ. ದಿವ್ಯವಾದ ರೂಪವನ್ನು ಹೊಂದಿರುವ ಈ ಆಭರಣವು ತನ್ನ ತೇಜಸ್ಸಿನಿಂದಲೇ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದೆ. ರಾಘವ! ಈ ಆಭರಣವನ್ನು ನೀನು ನನಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಪ್ರತಿಗ್ರಹಿಸು.

ದತ್ತಸ್ಯ ಹಿ ಪುನರ್ದಾನೇ ಸುಮಹತ್ಫಲಮಶ್ನುತೇ ॥೩೦॥

ದಾನವಾಗಿ ಪಡೆದ ವಸ್ತುವನ್ನು ಪುನಃ ದಾನಮಾಡುವುದರಿಂದ ಮಹಾಫಲವು ಪ್ರಾಪ್ತವಾಗುವುದೆಂದು ಹೇಳುತ್ತಾರೆ.

ಈ ಆಭರಣವನ್ನು ಧರಿಸಲು ನೀನು ಮಾತ್ರ ಸಮರ್ಥನಾಗಿರುವೆ. ಮಹಾಮಹಾಫಲಗಳನ್ನು ಪಡೆದುಕೊಳ್ಳಲು ಕೂಡ ನೀನೇ ಶಕ್ತನಾಗಿರುವೆ. ಇಂದ್ರಸಹಿತರಾದ ದೇವತೆಗಳನ್ನು ರಕ್ಷಿಸುವ ಸಾಮರ್ಥ್ಯವು ನಿನಗಿದೆ. ಆದುದರಿಂದ ಈ ದಿವ್ಯಾಭರಣವನ್ನು ವಿಧಿವತ್ತಾಗಿಯೇ ನಿನಗೆ ಅರ್ಪಿಸುತ್ತೇನೆ. ಪ್ರತಿಗ್ರಹಿಸು.”

ಅಗಸ್ತ್ಯರ ಈ ಮಾತನ್ನು ಕೇಳಿ ಇಕ್ಷ್ವಾಕುವಂಶೀಯನಾದ, ಮಹಾರಥನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಶ್ರೀರಾಮನು ಕ್ಷತ್ರಧರ್ಮವನ್ನು ಸ್ಮರಿಸುತ್ತಾ ಹೇಳಿದನು :

“ಪೂಜ್ಯರೇ! ದಾನವನ್ನು ತೆಗೆದುಕೊಳ್ಳುವುದು ಬ್ರಾಹ್ಮಣನಿಗೆ ನಿಂದನೀಯವಲ್ಲ. ವಿಪ್ರೇಂದ್ರರೇ! ಕ್ಷತ್ರಿಯರು ದಾನತೆಗೆದುಕೊಳ್ಳುವುದು ಅತಿನಿಂದನೀಯವಾದುದು. ಹೀಗಿರುವಾಗ ಕ್ಷತ್ರಿಯನಾದ ನಾನು ಹೇಗೆ ತಾನೇ ದಾನವನ್ನು ಪಡೆಯಲು ಸಾಧ್ಯವಾಗುವುದು? ಅದರಲ್ಲಿಯೂ ವಿಶೇಷ

ವಾಗಿ ಬ್ರಾಹ್ಮಣನಿಂದ ದಾನವನ್ನು ಹೇಗೆ ತಾನೇ ನಾನು ತೆಗೆದುಕೊಳ್ಳಲಿ? ಇದನ್ನು ಹೇಳುವ ಕೃಪೆಮಾಡಿರಿ."

ಶ್ರೀರಾಮನು ಹೀಗೆ ಹೇಳಲು ಅಗಸ್ತ್ಯರು ಯಥೋಚಿತವಾಗಿ ಉತ್ತರಿಸಿದರು :

"ರಾಘವ! ಬ್ರಹ್ಮಸ್ವರೂಪವಾಗಿದ್ದ ಸತ್ಯಯುಗದಲ್ಲಿ ರಾಜನಿಲ್ಲದೆಯೇ ಪ್ರಜೆಗಳಿದ್ದರು. ಆ ಸಮಯದಲ್ಲಿ ರಾಜನೆಂಬುವನೇ ಇರಲಿಲ್ಲ. ಸತ್ಯಯುಗವು ಕಳೆಯುತ್ತಿರಲಾಗಿ ದೇವತೆಗಳಿಗೆ ಇಂದ್ರನು ರಾಜನಾದನು. ಆ ಸಮಯದಲ್ಲಿ ಪ್ರಜೆಗಳೆಲ್ಲರೂ ದೇವದೇವನಾದ ಬ್ರಹ್ಮನ ಬಳಿಗೆ ಹೋಗಿ ಹೇಳಿದರು :

"ಬ್ರಹ್ಮದೇವ! ನೀನು ಇಂದ್ರನನ್ನು ದೇವತೆಗಳಿಗೆ ರಾಜನನ್ನಾಗಿ ನಿಯಮಿಸಿರುವೆ. ಹಾಗೆಯೇ ಭೂಲೋಕದಲ್ಲಿರುವ ನಮಗೂ ನರಶ್ರೇಷ್ಠನೊಬ್ಬನನ್ನು ರಾಜನನ್ನಾಗಿ ನಿಯಮಿಸು. ಅಂತಹ ರಾಜನನ್ನು ನಾವು ಪೂಜಾದಿಗಳಿಂದ ಸತ್ಕರಿಸುತ್ತಾ ಪಾಪರಹಿತರಾಗಿ ಈ ಭೂಮಂಡಲದಲ್ಲಿ ಸಂಚರಿಸುತ್ತೇವೆ. ಮುಂದೆ ನಾವು ರಾಜನಿಲ್ಲದೆ ಭೂಮಂಡಲದಲ್ಲಿ ವಾಸ ಮಾಡುವುದಿಲ್ಲ. ಇದು ನಮ್ಮ ದೃಢನಿಶ್ಚಯವಾಗಿದೆ."

ಭೂಲೋಕದ ಪ್ರಜೆಗಳ ಈ ಮಾತನ್ನು ಕೇಳಿ ಸುರಶ್ರೇಷ್ಠನಾದ ಬ್ರಹ್ಮನು ಇಂದ್ರಪ್ರಮುಖರಾದ ಲೋಕಪಾಲರನ್ನು ಕರೆಯಿಸಿ ಹೇಳಿದನು :

"ಲೋಕಪಾಲಕರೇ! ನಿಮ್ಮ ತೇಜಸ್ಸಿನ ಒಂದೊಂದಂಶವನ್ನು ಕೊಡಿರಿ. ಆ ಅಂಶಗಳಿಂದ ನಾನು ಭೂಮಂಡಲದ ಪ್ರಜೆಗಳಿಗಾಗಿ ರಾಜನನ್ನು ನಿರ್ಮಿಸುವೆನು."

ಬ್ರಹ್ಮದೇವನ ಈ ಮಾತನ್ನು ಕೇಳಿ ಲೋಕಪಾಲಕರೆಲ್ಲರೂ ತಮ್ಮ ತೇಜಸ್ಸಿನ ಒಂದೊಂದಂಶವನ್ನು ಅರ್ಪಿಸಿದರು. ಆ ಸಮಯಕ್ಕೆ ಸರಿಯಾಗಿ ಬ್ರಹ್ಮನು ಆಕಳಿಸಿದನು. ಅವನ ಆಕಳಿಕೆಯ ಜೊತೆಯಲ್ಲಿಯೇ ಕ್ಷುಪನೆಂಬ ರಾಜನು ಹುಟ್ಟಿದನು. ಆಗತಾನೇ ಲೋಕಪಾಲಕರು ಅರ್ಪಿಸಿದ್ದ ತೇಜಸ್ಸಿನ ಭಾಗಗಳನ್ನು ಬ್ರಹ್ಮನು ಕ್ಷುಪರಾಜನಲ್ಲಿರಿಸಿದನು. ಬಳಿಕ ಬ್ರಹ್ಮನು ಭೂಲೋಕದ ಪ್ರಜೆಗಳ ಪ್ರಾರ್ಥನೆಯಂತೆ ಕ್ಷುಪನನ್ನು ಪ್ರಜೆಗಳಿಗೆ ಈಶ್ವರನನ್ನಾಗಿ ಮಾಡಿ ಕಳುಹಿಸಿದನು. ಕ್ಷುಪನಲ್ಲಿ ದೇವತೆಗಳಿಗೆ ರಾಜನಾದ ಇಂದ್ರನ

ಅಂಶವೂ ಇದ್ದುದರಿಂದ ಅವನು ಭೂಮಂಡಲದ ರಾಜನಾಗಿ ಶಾಸನ ಮಾಡಲು ಉಪಕ್ರಮಿಸಿದನು. ವರುಣನ ಅಂಶದಿಂದ ಕ್ಷುಪನು ಪ್ರಜೆಗಳ ಶರೀರವನ್ನು ಪೋಷಿಸುತ್ತಿದ್ದನು. ಕುಬೇರನ ಅಂಶದಿಂದ ಕ್ಷುಪನು ಪ್ರಜೆಗಳಲ್ಲಿ ಕಾಂತಿಯನ್ನು ಮೂಡಿಸುತ್ತಿದ್ದನು. ಪ್ರಜೆಗಳನ್ನು ಐಶ್ವರ್ಯಸಂಪನ್ನರಾಗುವಂತೆ ಮಾಡುತ್ತಿದ್ದನು. ಯಮರಾಜನ ಅಂಶದಿಂದ ಅಪರಾಧಮಾಡಿದ ಪ್ರಜೆಗಳಿಗೆ ನಿಯತವಾದ ಶಿಕ್ಷೆಯನ್ನು ವಿಧಿಸುತ್ತಿದ್ದನು.

ನರಶ್ರೇಷ್ಠನೇ! ರಾಘವ! ನೀನೂ ರಾಜನಾಗಿರುವುದರಿಂದ ಎಲ್ಲ ಲೋಕಪಾಲಕರ ತೇಜಸ್ಸಿನಿಂದಲೂ ನೀನು ಸಂಪನ್ನನಾಗಿರುವೆ. ನನ್ನನ್ನು ಉದ್ಧರಿಸುವ ಸಲುವಾಗಿ ನೀನು ನಿನ್ನಲ್ಲಿರುವ ಇಂದ್ರನ ಅಂಶದಿಂದ ಈ ಆಭರಣವನ್ನು ಪ್ರತಿಗ್ರಹಿಸು. ನಿನಗೆ ಮಂಗಳವಾಗಲಿ."

ಅಗಸ್ತ್ಯರು ಹೀಗೆ ಹೇಳಲು ಮಹಾತ್ಮರಾದ ಅಗಸ್ತ್ಯಮುನಿಗಳಿಂದ ಶ್ರೀರಾಮನು ಸೂರ್ಯನಂತೆಯೇ ದೇದೀಪ್ಯಮಾನವಾಗಿ ಬೆಳಗುತ್ತಿದ್ದ ಆ ದಿವ್ಯಾಭರಣವನ್ನು ಪ್ರತಿಗ್ರಹಿಸಿದನು. ಶ್ರೇಷ್ಠವಾದ ಆ ಆಭರಣವನ್ನು ಪಡೆದುಕೊಂಡನಂತರ ಶ್ರೀರಾಮನು ಪ್ರದೀಪ್ತವಾದ ಆ ಆಭರಣವು ಅಗಸ್ತ್ಯರಿಗೆ ಹೇಗೆ ಲಭ್ಯವಾಯಿತೆಂಬುದರ ಬಗೆಗೆ ಪ್ರಶ್ನಿಸಲು ಉಪಕ್ರಮಿಸಿದನು.

"ಮುನಿಶ್ರೇಷ್ಠರೇ! ಅತ್ಯಂತ ಅದ್ಭುತವಾದ ಮತ್ತು ದಿವ್ಯವಾದ ರೂಪದಿಂದ ಯುಕ್ತವಾಗಿರುವ ಈ ಆಭರಣವು ತಮಗೆ ಹೇಗೆ ಸಿಕ್ಕಿತು? ಇದನ್ನು ತಮಗೆ ತಂದುಕೊಟ್ಟವರು ಯಾರು? ಯಶೋವಂತರೇ! ಕುತೂಹಲಾವಿಷ್ಟನಾಗಿ ನಾನು ಇದನ್ನು ಪ್ರಶ್ನಿಸುತ್ತಿದ್ದೇನೆ.

ಆಶ್ಚರ್ಯಾಣಾಂ ಬಹೂನಾಂ ಹಿ ನಿಧಿಃ ಪರಮಕೋ ಭವಾನ್ ॥೪೯॥

ಅನೇಕ ಆಶ್ಚರ್ಯಕರ ಘಟನೆಗಳಿಗೆ ತಾವು ಸಮುದ್ರಪ್ರಾಯರಾಗಿರುವಿರಿ."

ಶ್ರೀರಾಮನು ಹೀಗೆ ಪ್ರಶ್ನಿಸಲು ಅಗಸ್ತ್ಯರು ಹೇಳಿದರು :

"ರಾಘವ! ಹಿಂದೆ ಚತುರ್ಯುಗಗಳಲ್ಲೊಂದಾದ ತ್ರೇತಾಯುಗದಲ್ಲಿ ನಡೆದ ಯಥಾವತ್ತಾದ ಒಂದು ವೃತ್ತಾಂತವನ್ನು ಹೇಳುವೆನು, ಕೇಳು."

ಲ೬ನೆಯ ಸರ್ಗವು ಮುಗಿಯಿತು.

ಅಗಸ್ತ್ಯರು ಶ್ರೀರಾಮನಿಗೆ ಸ್ವರ್ಗೀಯಪುರುಷನೊಬ್ಬನು ಶವಭಕ್ಷಣೆಮಾಡಿದ ಪ್ರಸಂಗವನ್ನು ಹೇಳಿದುದು

ಅಗಸ್ತ್ಯರು ಹೇಳುತ್ತಾರೆ :

ಪುರಾ ತ್ರೇತಾಯುಗೇ ರಾಮ ಹ್ಯರಣ್ಯಂ ಬಹುವಿಸ್ತರಮ್ ।
ಸಮನ್ತಾದ್ಯೋಜನಶತಂ ವಿಮೃಗಂ ಪಕ್ಷಿವರ್ಜಿತಮ್ ॥೧॥

"ರಾಘವ! ಹಿಂದೆ ತ್ರೇತಾಯುಗದಲ್ಲಿ ನೂರುಯೋಜನಗಳಷ್ಟು ಬಹುವಿಸ್ತಾರವಾದ ಅರಣ್ಯವಿದ್ದಿತು. ಆದರೆ ಆ ಅರಣ್ಯದಲ್ಲಿ ಮೃಗಗಳಾಗಲೀ ಪಕ್ಷಿಗಳಾಗಲೀ ಇರಲಿಲ್ಲ.

ಮನುಷ್ಯರಿಂದಲೂ ರಹಿತವಾಗಿದ್ದ ಆ ಅರಣ್ಯದಲ್ಲಿ ಶ್ರೇಷ್ಠವಾದ ತಪಸ್ಸನ್ನು ಮಾಡುವ ಆಶಯದಿಂದ ನಾನು ಅಲ್ಲಿಗೆ ಹೋದೆನು. ಆ ಅರಣ್ಯದ ಸ್ವರೂಪವನ್ನು ವಿವರಿಸಿ ಹೇಳಲು ನನಗೆ ಶಕ್ಯವೇ ಇಲ್ಲ. ಅದು ರುಚಿಕರವಾದ ಫಲ-ಮೂಲಗಳಿಂದ ಸಮೃದ್ಧವಾಗಿದ್ದಿತು. ಅನೇಕ ಬಗೆಯ ವೃಕ್ಷಗಳಿಂದಲೂ ಅದು ಕಂಗೊಳಿಸುತ್ತಿದ್ದಿತು. ಆ ವನದ ಮಧ್ಯಭಾಗದಲ್ಲಿ ಒಂದು ಯೋಜನ ದಷ್ಟು ಅಗಲವಾಗಿಯೂ ಮತ್ತು ಉದ್ದವಾಗಿಯೂ ಇದ್ದ ಸರೋವರವಿದ್ದಿತು. ಆ ಸರೋವರವು ಹಂಸ-ಕಾರಂಡವ ಇವೇ ಮುಂತಾದ ಪಕ್ಷಿಗಳಿಂದ ವ್ಯಾಪ್ತ ವಾಗಿತ್ತಲ್ಲದೇ ಚಕ್ರವಾಕಪಕ್ಷಿಗಳಿಂದಲೂ ಕೂಡಿದ್ದು ಅತ್ಯಂತಶೋಭಾಯ ಮಾನವಾಗಿ ಕಾಣುತ್ತಿದ್ದಿತು. ಆ ಸರೋವರವು ಕಮಲಗಳಿಂದಲೂ ಕನ್ನೈ ದಿಲೆಗಳಿಂದಲೂ ತುಂಬಿಹೋಗಿದ್ದಿತು. ಅದರಲ್ಲಿ ಪಾಚಿ ಎಂಬುದೇ ಇರಲಿಲ್ಲ. ಅದರ ನೀರು ಅತ್ಯಂತ ರುಚಿಕರವಾಗಿದ್ದು ಆಹ್ಲಾದಕರವಾಗಿದ್ದಿತು. ಆ ಸರೋವರವು ನೋಡಲು ಅತ್ಯಂತ ಆಶ್ಚರ್ಯಕರವಾಗಿ ಕಾಣುತ್ತಿದ್ದಿತು. ಅದ ರಲ್ಲಿ ಕೆಸರೆಂಬುದೇ ಇರಲಿಲ್ಲ. ಅತ್ಯಂತ ನಿರ್ಮಲವಾಗಿದ್ದಿತು. ಅದನ್ನು ದಾಟಿ ಹೋಗಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅದರಲ್ಲಿ ಸುಂದರವಾದ ಹಲವಾರು ಪಕ್ಷಿಗಳ ಸಮೂಹಗಳಿದ್ದುವು. ಆ ಸರೋವರದ ಸಮೀಪ ದಲ್ಲಿಯೇ ಅದ್ಭುತವಾದ ಮತ್ತು ಪುರಾತನವಾದ ಆಶ್ರಮವಿದ್ದಿತು. ಆದರೆ ಅದರಲ್ಲಿ ಯಾವ ತಪಸ್ವಿಯೂ ಇರಲಿಲ್ಲ. ಗ್ರೀಷ್ಮರ್ತುವಿನ ರಾತ್ರಿಯೊಂದರಲ್ಲಿ

ಅಲ್ಲಿ ನಾನು ತಂಗಿದ್ದು ಪ್ರಾತಃಕಾಲವಾಗುತ್ತಲೇ ಆ ಮಹಾಸರೋವರದ ಬಳಿಗೆ ಹೋದೆನು. ಆ ಸಮಯದಲ್ಲಿ ನಾನು ಆ ಸರೋವರದ ಬಳಿಯಲ್ಲಿ ಒಂದು ಶವವನ್ನು ಕಂಡೆನು. ಅದು ಪುಷ್ಟವಾಗಿದ್ದಿತಲ್ಲದೆ ನಿರ್ಮಲವಾಗಿಯೂ ಇದ್ದಿತು. ಅದರಲ್ಲಿ ಮಾಲಿನ್ಯವೆಂಬುದೇ ಇರಲಿಲ್ಲ. ಆ ಜಲಾಶಯದ ತೀರದಲ್ಲಿ ಬಿದ್ದಿದ್ದ ಆ ಶವವು ಶ್ರೇಷ್ಠವಾದ ಕಾಂತಿಯಿಂದ ಕೂಡಿದ್ದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಅಂತಹ ಶವವನ್ನು ನೋಡಿದ ನಾನು ಇದೇನಿರಬಹುದೆಂದು ಯೋಚಿಸುತ್ತಾ ಮುಹೂರ್ತಕಾಲದವರೆಗೆ ಆ ಸರೋವರದ ತೀರದಲ್ಲಿಯೇ ಕುಳಿತುಬಿಟ್ಟೆನು. ಮುಹೂರ್ತಕಾಲವು ಕಳೆಯುತ್ತಿದ್ದಂತೆ ದಿವ್ಯವಾದ, ಅದ್ಭುತವಾದ, ಶ್ರೇಷ್ಠವಾದ, ಹಂಸಯುಕ್ತವಾದ, ವೇಗಶಾಲಿಯಾದ ವಿಮಾನವೊಂದು ಕೆಳಗಿಳಿಯುತ್ತಿರುವುದನ್ನು ಕಂಡೆನು. ಆ ವಿಮಾನದಲ್ಲಿ ಸ್ವರ್ಗೀಯಪುರುಷನೊಬ್ಬನು ಕುಳಿತಿದ್ದನು. ಅವನು ಅತ್ಯಂತರೂಪವಂತನಾಗಿದ್ದನು. ದಿವ್ಯಾಭರಣಗಳಿಂದ ಸಮಲಂಕೃತರಾದ ಸಾವಿರಾರು ಅಪ್ಸರೆಯರು ಅವನ ಸೇವೆಯನ್ನು ಮಾಡುತ್ತಿದ್ದರು. ಅವರಲ್ಲಿ ಕೆಲವು ಅಪ್ಸರೆಯರು ಗಾನಮಾಡುತ್ತಿದ್ದರು. ಕೆಲವರು ವೀಣಾ-ಮೃದಂಗ-ಪಣಹವೇ ಮುಂತಾದ ವಾದ್ಯಗಳನ್ನು ಬಾರಿಸುತ್ತಿದ್ದರು. ಮತ್ತೆ ಕೆಲವರು ನೃತ್ಯಮಾಡುತ್ತಿದ್ದರು. ಕಮಲಾಕ್ಷಿಯರಾದ ಮತ್ತೆ ಕೆಲವು ಅಪ್ಸರೆಯರು ಸುವರ್ಣಮಯವಾದ ದಂಡಗಳಿಂದ ಕೂಡಿದ್ದ ಬಹುಮೂಲ್ಯವಾದ ಚಾಮರಗಳಿಂದ ಸ್ವರ್ಗೀಯಪುರುಷನ ಮುಖಕ್ಕೆ ಗಾಳಿಯನ್ನು ಬೀಸುತ್ತಿದ್ದರು.

ಸೂರ್ಯದೇವನು ಮೇರುಪರ್ವತವನ್ನು ಬಿಟ್ಟು ಕೆಳಗಿಳಿಯುವಂತೆ ಆ ಸ್ವರ್ಗೀಯಪುರುಷನು ಸಿಂಹಾಸನವನ್ನು ಬಿಟ್ಟು ವಿಮಾನದಿಂದ ಕೆಳಗಿಳಿದು ಬಂದು ನಾನು ನೋಡುತ್ತಿದ್ದಂತೆಯೇ ಸರ್ವಾಂಗಸುಂದರವಾಗಿದ್ದ ಆ ಶವವನ್ನು ಭಕ್ಷಿಸತೊಡಗಿದನು. ಆ ಸ್ವರ್ಗೀಯಪುರುಷನು ಶವದಲ್ಲಿದ್ದ ಸಮೃದ್ಧವಾದ ಮಾಂಸವನ್ನು ಯಥೇಚ್ಛವಾಗಿ ತಿಂದನಂತರ ಸರೋವರದಲ್ಲಿಳಿದು ಕೈ-ಕಾಲು-ಮುಖಗಳನ್ನು ತೊಳೆದುಕೊಂಡನು. ಯಥಾವಿಧಿಯಾಗಿ ಆಚಮನವನ್ನು ಮಾಡಿ ಆ ಸ್ವರ್ಗೀಯಪುರುಷನು ಶ್ರೇಷ್ಠವಾದ ಆ ವಿಮಾನವನ್ನು ಹತ್ತಲು ಹೋದನು. ದೇವಸದೃಶನಾದ ಸ್ವರ್ಗೀಯಪುರುಷನು ವಿಮಾನಕ್ಕೆ ಹತ್ತಲಿರುವುದನ್ನು ಕಂಡು ಅವನೊಡನೆ ಈ ಮಾತನ್ನು ಹೇಳಿದೆನು :

ಕೋ ಭವಾನ್ದೇವಸಂಕಾಶ ಆಹಾರಶ್ಚ ವಿಗರ್ಹಿತಃ ।
ತ್ವಯೇದಂ ಭುಜ್ಯತೇ ಸೌಮ್ಯ ಕಿಮರ್ಥಂ ವಕ್ತುಮರ್ಹಸಿ ॥೧೯॥
ಕಸ್ಯ ಸ್ಯಾದೀದೃಶೋ ಭಾವ ಆಹಾರೋ ದೇವಸಮ್ಮತಃ ।
ಆಶ್ಚರ್ಯಂ ವರ್ತತೇ ಸೌಮ್ಯ ಶ್ರೋತುಮಿಚ್ಛಾಮಿ ತತ್ತ್ವತಃ ।
ನಾಹಮೌಪಯಿಕಂ ಮನ್ಯೇ ತವ ಭಕ್ಷ್ಯಮಿಮಂ ಶವಮ್ ॥೨೦॥

"ದೇವೋಪಮನೇ! ನೀನು ಯಾರು? ನೀನು ದೇವಸದೃಶನಾಗಿದ್ದರೂ ಇಂತಹ ನಿಂದಿತವಾದ ಆಹಾರವನ್ನೇಕೆ ಭಕ್ಷಿಸಿದೆ? ಇಂತಹ ದೇವ ಸದೃಶ ಸ್ವರೂಪ ಮತ್ತು ಅದಕ್ಕೆ ವಿರುದ್ಧವಾದ ನಿಂದ್ಯವಾದ ಆಹಾರ ಇವು ಯಾವನಿಗೆ ತಾನೇ ಇರುತ್ತದೆ? ಇದು ಯಾವ ದೇವತೆಗೆ ತಾನೇ ಸಮ್ಮತ ವಾಗುತ್ತದೆ? ಇದರಲ್ಲೇನೋ ಆಶ್ಚರ್ಯವಡಗಿದೆ. ಅದನ್ನು ಯಥಾವತ್ತಾಗಿ ನಿನ್ನಿಂದ ಕೇಳಲು ಬಯಸುತ್ತೇನೆ. ದೇವೋಪಮನಾಗಿರುವ ನಿನಗೆ ಶವ ಭಕ್ಷಣವು ಉಚಿತವಲ್ಲವೆಂಬುದೇ ನನ್ನ ಅಭಿಪ್ರಾಯವಾಗಿದೆ."

ನರೇಶ್ವರನೇ! ರಾಘವ! ಕುತೂಹಲಾವಿಷ್ಟನಾಗಿದ್ದ ನಾನು ಸ್ವರ್ಗೀಯಪುರುಷನನ್ನು ಹೀಗೆ ಮಧುರವಾದ ಮಾತಿನಿಂದ ಪ್ರಶ್ನಿಸಲು ಆ ದೇವಪುರುಷನು ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನನ್ನೊಡನೆ ಹೇಳಲು ಉಪಕ್ರಮಿಸಿದನು.

೭೭ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೭೮ನೆಯ ಸರ್ಗ

ರಾಜಾಶ್ವೇತನು ನಿಂದ್ಯವಾದ ಆಹಾರವನ್ನು ತಿನ್ನಲು ಕಾರಣವನ್ನು ತಿಳಿಸಿದುದು : ಬ್ರಹ್ಮನ ಸಲಹೆಯಂತೆ ಆಭರಣಗಳನ್ನು ದಾನಮಾಡಿದನಂತರ ಹಸಿವು-ಬಾಯಾರಿಕೆಗಳ ಸಂಕಟದಿಂದ ಶ್ವೇತರಾಜನು ಮುಕ್ತನಾದುದು

ಶ್ರುತ್ವಾ ತು ಭಾಷಿತಂ ವಾಕ್ಯಂ ಮಮ ರಾಮ ಶುಭಾಕ್ಷರಮ್ ।
ಪ್ರಾಞ್ಜಲಿಃ ಪ್ರತ್ಯುವಾಚೇದಂ ಸ ಸ್ವರ್ಗೀ ರಘುನನ್ದನ ॥೧॥

ರಘುನಂದನ! ಶುಭಾಕ್ಷರಯುಕ್ತವಾದ ನನ್ನ ಈ ಮಾತನ್ನು ಕೇಳಿ ಆ ಸ್ವರ್ಗೀಯಪುರುಷನು ಕೈಮುಗಿದುಕೊಂಡು ಹೇಳತೊಡಗಿದನು :

“ದ್ವಿಜಶ್ರೇಷ್ಠರೇ! ನೀವು ಪ್ರಶ್ನಿಸಿದುದಕ್ಕೆ ಅನುರೂಪವಾದ ಉತ್ತರ ವನ್ನು ನನ್ನಿಂದ ಕೇಳಿರಿ. ನನ್ನ ಸುಖ-ದುಃಖಗಳಿಗೆ ಕಾರಣವಾದ ಮತ್ತು ಅತಿಕ್ರಮಿಸಿ ನಡೆಯಲು ಅಶಕ್ಯವಾದ ಹಿಂದಿನ ಘಟನೆಯೊಂದನ್ನು ಲಾಲಿಸಿರಿ.

ಹಿಂದೆ ಮಹಾಯಶೋವಂತನಾದ ನನ್ನ ತಂದೆಯು ವಿದರ್ಭದೇಶಕ್ಕೆ ರಾಜನಾಗಿದ್ದನು. ಮೂರು ಲೋಕಗಳಲ್ಲಿಯೂ ಸುದೇವನೆಂದು ವಿಖ್ಯಾತ ನಾಗಿದ್ದ ಆ ನನ್ನ ತಂದೆಯು ಮಹಾವೀರ್ಯವಂತನೂ ಆಗಿದ್ದನು. ಅವನ ಇಬ್ಬರು ಭಾರ್ಯೆಯರಿಂದ ಅವನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಒಬ್ಬ ಳಲ್ಲಿ ಶ್ವೇತನೆಂಬ ಹೆಸರಿನಿಂದ ಖ್ಯಾತನಾದ ನಾನು ಹುಟ್ಟಿದೆನು. ಮತ್ತೊಬ್ಬ ಳಲ್ಲಿ ಸುರಥನೆಂಬುವನು ಹುಟ್ಟಿದನು. ನನ್ನ ತಂದೆಯು ಸ್ವರ್ಗಸ್ಥನಾದ ನಂತರ ಪ್ರಜೆಗಳೆಲ್ಲರೂ ನನಗೆ ಪಟ್ಟಗಟ್ಟಿದರು. ನಾನು ಕೂಡ ಪ್ರಜೆಗಳ ಹಿತದಲ್ಲಿಯೇ ಏಕಾಗ್ರಚಿತ್ತನಾಗಿರುತ್ತಾ ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದೆನು. ಹೀಗೆ ನಾನು ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಾ ರಾಜ್ಯ ಭಾರಮಾಡುತ್ತಿದ್ದಾಗ ಒಂದು ಸಾವಿರ ವರ್ಷಗಳು ಕಳೆದುಹೋದುವು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಯಾವುದೋ ಕಾರಣದಿಂದ ನನ್ನ ಆಯುಷ್ಯವು ಎಷ್ಟೆಂಬುದು ನನಗೆ ತಿಳಿದುಹೋಯಿತು. ನನ್ನ ಮೃತ್ಯುವಿನ ದಿವಸವನ್ನೇ ಮನಸ್ಸಿನಲ್ಲಿಟ್ಟು ಅರಣ್ಯಕ್ಕೆ ಬಂದುಬಿಟ್ಟೆನು. ಮೃಗ-ಪಕ್ಷಿಗಳಿಂದ ರಹಿತವಾಗಿದ್ದ ಮತ್ತು ಅತಿದುರ್ಗಮವಾಗಿದ್ದ ಈ ಅರಣ್ಯವನ್ನು ನಾನು ತಪಸ್ಸುಮಾಡುವ ಸಲುವಾಗಿ ಪ್ರವೇಶಿಸಿದೆನು. ಅಂತೆಯೇ ಸುಂದರವಾದ ಈ ಸರೋವರದ ತೀರದಲ್ಲಿ ತಪಸ್ಸುಮಾಡಲು ಕುಳಿತೆನು. ಇದಕ್ಕೆ ಮೊದಲು ನನ್ನ ತಮ್ಮನಾದ ಸುರಥನಿಗೆ ಪಟ್ಟಾಭಿಷೇಕವನ್ನು ಮಾಡಿ ಅವನಿಗೆ ರಾಜ್ಯಾ ಡಳಿತವನ್ನು ವಹಿಸಿಕೊಟ್ಟು ಅರಣ್ಯಕ್ಕೆ ಬಂದು ಈ ಸರೋವರದ ತೀರ ದಲ್ಲಿಯೇ ಬಹಳಕಾಲದವರೆಗೆ ತಪಸ್ಸುಮಾಡುತ್ತಿದ್ದೆನು. ವಿಶಾಲವಾದ ಈ ಅರಣ್ಯದಲ್ಲಿ ಮೂರು ಸಾವಿರ ವರ್ಷಗಳವರೆಗೆ ಸುದುಷ್ಕರವಾದ ತಪಸ್ಸನ್ನು ಮಾಡುತ್ತಿದ್ದು ಅದರ ಫಲವಾಗಿ ಶ್ರೇಷ್ಠವಾದ ಬ್ರಹ್ಮಲೋಕವನ್ನು ಪಡೆದುಕೊಂಡೆನು.

ದ್ವಿಜಶ್ರೇಷ್ಠರೇ! ನಾನು ಬ್ರಹ್ಮಲೋಕಕ್ಕೆ ಹೋದರೂ ನನಗೆ ಹಸಿವು-ಬಾಯಾರಿಕೆಗಳ ಬಾಧೆಯು ನಿಲ್ಲಲಿಲ್ಲ. ಇದರಿಂದ ನನಗೆ ಬಹಳ ವ್ಯಥೆ

ಯಾಯಿತು. ಆಗ ನಾನು ಮೂರು ಲೋಕಗಳಿಗೂ ಶ್ರೇಷ್ಠನಾದ ಬ್ರಹ್ಮದೇವನ ಬಳಿಗೆ ಹೋಗಿ ಪ್ರಶ್ನಿಸಿದೆನು : "ಪೂಜ್ಯನೇ! ಬ್ರಹ್ಮದೇವ! ಮೂರು ಸಾವಿರ ವರ್ಷಗಳ ತಪಸ್ಸಿನ ಫಲದಿಂದಾಗಿ ಈಗ ನಾನು ಹಸಿವು-ಬಾಯಾರಿಕೆಗಳ ಸೋಂಕೇ ಇಲ್ಲದ ಬ್ರಹ್ಮಲೋಕದಲ್ಲಿದ್ದೇನೆ. ಆದರೂ ಇಲ್ಲಿಯೂ ನಾನು ಹಸಿವು-ಬಾಯಾರಿಕೆಗಳಿಂದ ಪೀಡಿತನಾಗಿದ್ದೇನೆ. ಯಾವ ಪಾಪಕರ್ಮದ ಫಲವಾಗಿ ಕ್ಷುತ್ಪಿಪಾಸೆಗಳು ಇಲ್ಲಿಗೂ ನನ್ನನ್ನು ಅನುಸರಿಸಿ ಬಂದಿವೆ?–ಎಂಬುದನ್ನು ದಯಮಾಡಿ ಹೇಳು. ನನ್ನ ಹಸಿವನ್ನು ಇಂಗಿಸಿ ಕೊಳ್ಳುವುದಕ್ಕಾಗಿ ನಾನು ಯಾವ ಆಹಾರವನ್ನು ಭುಂಜಿಸಲಿ?"

ನನ್ನ ಈ ಪ್ರಶ್ನೆಯನ್ನು ಕೇಳಿ ಪಿತಾಮಹನು ನನಗೆ ಹೇಳಿದನು :

ಸ್ವಾದೂನಿ ಸ್ವಾನಿ ಮಾಂಸಾನಿ ತಾನಿ ಭಕ್ಷಯ ನಿತ್ಯಶಃ ॥೧೪॥

"ಅತ್ಯಂತರುಚಿಕರವಾಗಿರುವ ನಿನ್ನ ಮಾಂಸವನ್ನೇ ನೀನು ಅನುದಿನವೂ ತಿನ್ನುತ್ತಿರು.

ಸ್ವಶರೀರಂ ತ್ವಯಾ ಪುಷ್ಟಂ ಕುರ್ವತಾ ತಪ ಉತ್ತಮಮ್ ।
ಅನುಪ್ತಂ ರೋಹತೇ ಶ್ವೇತ ನ ಕದಾಚಿನ್ಮಹಾಮತೇ ॥೧೫॥

ಮಹಾಮತಿಯೇ! ಶ್ವೇತ! ನೀನು ಶ್ರೇಷ್ಠವಾದ ತಪಸ್ಸನ್ನು ಮಾಡು ತ್ತಿದ್ದಾಗಲೂ ನಿನ್ನ ಶರೀರವನ್ನು ಚೆನ್ನಾಗಿ ಪೋಷಿಸಿಕೊಳ್ಳುತ್ತಿದ್ದೆ. ನೀನು ದಾನವಾಗಿ ಯಾವುದನ್ನೂ ಯಾರಿಗೂ ಯಾವಾಗಲೂ ಕೊಟ್ಟವನೇ ಅಲ್ಲ. ಬೀಜಬಿತ್ತಿದರೆ ತಾನೇ ಫಲವು ಸಿಕ್ಕುತ್ತದೆ? ಬೀಜವನ್ನೇ ಬಿತ್ತದಿದ್ದರೆ ಸಸ್ಯವು ಬೆಳೆಯುವುದಿಲ್ಲ.

ದತ್ತಂ ನ ತೇಽಸ್ತಿ ಸೂಕ್ಷ್ಮೋಽಪಿ ತಪ ಏವ ನಿಷೇವಸೇ ।
ತೇನ ಸ್ವರ್ಗಗತೋ ವತ್ಸ ಬಾಧ್ಯಸೇ ಕ್ಷುತ್ಪಿಪಾಸಯಾ ॥೧೬॥

ಮಗು! ನೀನು ಕೇವಲ ತಪಸ್ಸನ್ನು ಮಾಡುತ್ತಿದ್ದೆಯೇ ಹೊರತು ಯಾರೊಬ್ಬರಿಗೂ ಯಾವುದೇ ವಸ್ತುವನ್ನಾದರೂ ಕಿಂಚಿತ್ತಾದರೂ ದಾನ ಮಾಡಿರುವುದಿಲ್ಲ. ಈ ಕಾರಣದಿಂದಲೇ ನೀನು ಸ್ವರ್ಗಕ್ಕೆ ಬಂದರೂ ಹಸಿವು-ಬಾಯಾರಿಕೆಗಳಿಂದ ಪೀಡಿಸಲ್ಪಡುತ್ತಿರುವೆ.

ನಾನಾಪ್ರಕಾರವಾದ ಆಹಾರಗಳಿಂದ ಚೆನ್ನಾಗಿ ಪೋಷಿಸಲ್ಪಟ್ಟಿರುವ

ನಿನ್ನ ಶ್ರೇಷ್ಠವಾದ ಶರೀರವು ಅಮೃತರಸದಿಂದಲೇ ಯುಕ್ತವಾಗಿರುತ್ತದೆ. ಅದನ್ನು ಭಕ್ಷಿಸುವುದರಿಂದಲೇ ನಿನ್ನ ಹಸಿವು-ಬಾಯಾರಿಕೆಗಳು ಇಂಗುತ್ತವೆ.

ಯದಾ ತು ತದ್ವನಂ ಶ್ವೇತ ಅಗಸ್ತ್ಯಃ ಸ ಮಹಾನೃಷಿಃ ।
ಆಗಮಿಷ್ಯತಿ ದುರ್ಧರ್ಷಸ್ತದಾ ಕೃಚ್ಛ್ರಾದ್ವಿಮೋಕ್ಷ್ಯಸೇ ॥೧೮॥

ಶ್ವೇತ! ಯಾವಾಗ ಈ ವನಕ್ಕೆ ದುರ್ಧರ್ಷರಾದ ಅಗಸ್ತ್ಯಮಹಾ ಮುನಿಗಳು ಆಗಮಿಸುವರೋ ಆಗ ನೀನು ಈ ಕಷ್ಟದಿಂದ ಪಾರಾಗುವೆ.

ಸೌಮ್ಯನೇ! ಅಗಸ್ತ್ಯರೇ ನಿನ್ನನ್ನು ಉದ್ಧರಿಸಲು ಸಮರ್ಥರು. ದೇವತೆ ಗಳನ್ನೇ ಅವರು ಉದ್ಧರಿಸಲು ಸಮರ್ಥರಾಗಿರುವಾಗ ಹಸಿವು-ಬಾಯಾ ರಿಕೆಗಳಿಂದ ಬಳಲುವ ನಿನ್ನನ್ನು ಉದ್ಧರಿಸುವುದರಲ್ಲಿ ವಿಶೇಷವೇನಿದೆ?"

ದ್ವಿಜಶ್ರೇಷ್ಠರೇ! ದೇವದೇವನಾದ ಬ್ರಹ್ಮನ ಈ ನಿಶ್ಚಯವನ್ನು ಕೇಳಿದನಂತರ ನಾನು ಅನಿವಾರ್ಯವಾಗಿ ನಿಂದಿತವಾದ ನನ್ನ ಶರೀರದ ಮಾಂಸವನ್ನೇ ತಿನ್ನುತ್ತಿದ್ದೇನೆ. ನಾನು ಹಲವಾರು ವರ್ಷಗಳಿಂದ ಇದನ್ನು ತಿನ್ನುತ್ತಿದ್ದರೂ ಈ ನನ್ನ ಶರೀರವು ಕ್ಷಯಿಸಿಹೋಗುತ್ತಿಲ್ಲ. ಇದನ್ನು ಭಕ್ಷಿಸುವುದರಿಂದ ನನಗೆ ಪೂರ್ಣವಾದ ತೃಪ್ತಿಯೂ ಉಂಟಾಗುತ್ತಿದೆ.

ಬ್ರಹ್ಮರ್ಷಿಗಳೇ! ನಾನು ಕಷ್ಟದ ಪ್ರತಿಕೃತಿಯೇ ಆಗಿದ್ದೇನೆ. ನನ್ನನ್ನು ಈ ಕಷ್ಟದಿಂದ ಪಾರುಮಾಡಿರಿ. ಕುಂಭಸಂಭವರಾದ ಅಗಸ್ತ್ಯರ ಹೊರತಾಗಿ ಬೇರೆ ಯಾರೂ ಈ ಅರಣ್ಯಕ್ಕೆ ಬರಲಾರರು. ಆದುದರಿಂದ ನೀವು ಅಗಸ್ತ್ಯರೇ ಆಗಿರುವಿರಿ. ಬ್ರಹ್ಮನು ಹೇಳಿರುವಂತೆ ನನ್ನನ್ನು ಈ ಕಷ್ಟದಿಂದ ಉದ್ಧರಿಸಿರಿ. ವಿಪ್ರಶ್ರೇಷ್ಠರೇ! ನಿಮಗೆ ಮಂಗಳವಾಗಲಿ. ನನ್ನನ್ನು ಉದ್ಧರಿಸುವ ಸಲುವಾಗಿ ನನ್ನ ಈ ಆಭರಣವನ್ನು ಪ್ರತಿಗ್ರಹಿಸಿ ನನ್ನನ್ನು ಅನುಗ್ರಹಿಸಿರಿ.

ಇದಂ ತಾವತ್ಸುವರ್ಣಂ ಚ ಧನಂ ವಸ್ತ್ರಾಣಿ ಚ ದ್ವಿಜ ।
ಭಕ್ಷ್ಯಂ ಭೋಜ್ಯಂ ಚ ಬ್ರಹ್ಮರ್ಷೇ ದದಾಮ್ಯಾಭರಣಾನಿ ಚ ॥೨೮॥

ಬ್ರಹ್ಮರ್ಷಿಗಳೇ! ಈ ದಿವ್ಯಾಭರಣವು ಸಾಮಾನ್ಯವಾದುದಲ್ಲ. ಇದು ಚಿನ್ನವನ್ನೂ, ಧನವನ್ನೂ, ವಸ್ತ್ರಗಳನ್ನೂ, ಭಕ್ಷ್ಯ-ಭೋಜ್ಯಗಳನ್ನೂ, ಆಭರಣಗಳನ್ನೂ ಕೊಡುತ್ತಿರುತ್ತದೆ.

ಮುನಿಶ್ರೇಷ್ಠರೇ! ಈ ದಿವ್ಯಾಭರಣದ ಮೂಲಕವಾಗಿ ನಾನು ಸಮಸ್ತ ವಾದ ಮನೋವಾಂಛಿತವಸ್ತುಗಳನ್ನೂ ಭೋಗಸಾಮಗ್ರಿಗಳನ್ನೂ ತಮಗೆ ಅರ್ಪಿಸುತ್ತಿದ್ದೇನೆ. ನನ್ನನ್ನು ಉದ್ಧರಿಸುವ ಕೃಪೆಮಾಡಿರಿ."

ರಾಘವ! ಸ್ವರ್ಗೀಯಪುರುಷನ ದುಃಖದಿಂದ ಕೂಡಿದ ಆ ಮಾತನ್ನು ಕೇಳಿ ಅವನನ್ನು ಉದ್ಧರಿಸುವ ಸಲುವಾಗಿ ಈ ಶ್ರೇಷ್ಠವಾದ ಆಭರಣವನ್ನು ನಾನು ದಾನವಾಗಿ ತೆಗೆದುಕೊಂಡೆನು. ಮಂಗಳಕರವಾದ ಆ ದಿವ್ಯಾಭರಣವನ್ನು ನಾನು ಸ್ವೀಕರಿಸುತ್ತಿದ್ದಂತೆಯೇ ರಾಜರ್ಷಿಯಾದ ಶ್ವೇತನ ಶವರೂಪದಲ್ಲಿದ್ದ ಆ ಶರೀರವು ಅದೃಶ್ಯವಾಯಿತು. ಶವರೂಪದಲ್ಲಿದ್ದ ತನ್ನ ಶರೀರವು ಅದೃಶ್ಯವಾಗಿ ಹೋಗಲು ರಾಜರ್ಷಿಯಾದ ಶ್ವೇತನು ಸಂತೃಪ್ತನಾಗಿ, ಆನಂದ ಭರಿತನಾಗಿ ಸುಖಕರವಾದ ಬ್ರಹ್ಮಲೋಕಕ್ಕೆ ತೆರಳಿದನು. ಹಸಿವು-ಬಾಯಾ ರಿಕೆಯ ದುಃಖವನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ ಇಂದ್ರನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಶ್ವೇತನು ಅದ್ಭುತವಾಗಿ ಕಾಣುವ ಈ ದಿವ್ಯಾಭರಣವನ್ನು ನನಗೆ ದಾನವಾಗಿ ಕೊಟ್ಟನು."

೭೮ನೆಯ ಸರ್ಗವು ಮುಗಿಯಿತು

ಉತ್ತರಕಾಂಡ ೭೯ನೆಯ ಸರ್ಗ

ಇಕ್ಷ್ವಾಕುವಿನ ಮಗನಾದ ದಂಡನ ರಾಜ್ಯದ ನಿರೂಪಣೆ

ತದದ್ಭುತತಮಂ ವಾಕ್ಯಂ ಶ್ರುತ್ವಾಗಸ್ತ್ಯಸ್ಯ ರಾಘವಃ ।
ಗೌರವಾದ್ವಿಸ್ಮಯಾಚ್ಚೈವ ಭೂಯಃ ಪ್ರಷ್ಟುಂ ಪ್ರಚಕ್ರಮೇ ॥೧॥

ಶ್ರೀರಾಮನು ಪರಮಾದ್ಭುತವಾದ ಅಗಸ್ತ್ಯರ ಆ ಮಾತನ್ನು ಕೇಳಿ ಗೌರವದಿಂದಲೂ ವಿಸ್ಮಯದಿಂದಲೂ ಕೂಡಿದವನಾಗಿ ಪುನಃ ಅವರನ್ನು ಪ್ರಶ್ನಿಸಿದನು :

"ಪೂಜ್ಯರೇ! ವಿದರ್ಭದೇಶದ ಶ್ವೇತರಾಜನು ತಪಸ್ಸುಮಾಡುತ್ತಿದ್ದ ಭಯಂಕರವಾದ ಆ ಅರಣ್ಯದಲ್ಲಿ ಮೃಗ-ಪಕ್ಷಿಗಳಿಲ್ಲದಿರಲು ಕಾರಣವೇನು? ಮನುಷ್ಯರಿಂದಲೂ ಶೂನ್ಯವಾಗಿದ್ದ ಆ ಅರಣ್ಯದಲ್ಲಿ ತಪಸ್ಸುಮಾಡಲು ಶ್ವೇತ ರಾಜನು ಅದನ್ನು ಪ್ರವೇಶಿಸಿದ ಬಗೆ ಹೇಗೆ? ಯಾವ ಕಾರಣದಿಂದ

ವೈದರ್ಭನು ತಪಸ್ಸುಮಾಡಲು ಮೃಗ-ಪಕ್ಷಿಗಳಿಂದಲೂ ಮನುಷ್ಯರಿಂದಲೂ ಶೂನ್ಯವಾಗಿದ್ದ ಆ ಘೋರಾರಣ್ಯವನ್ನು ಆರಿಸಿಕೊಂಡನು? ಈ ವಿಷಯ ವನ್ನು ಯಥಾವತ್ತಾಗಿ ತಮ್ಮಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ. ಹೇಳುವ ಕೃಪೆಮಾಡಿರಿ."

ಕುತೂಹಲದಿಂದ ಕೂಡಿದ ಶ್ರೀರಾಮನ ಈ ಮಾತನ್ನು ಕೇಳಿ ಪರಮ ತೇಜಸ್ವಿಗಳಾದ ಅಗಸ್ತ್ಯರು ಹೇಳಲುಪಕ್ರಮಿಸಿದರು :

"ಹಿಂದೆ ಕೃತಯುಗದಲ್ಲಿ ದಂಡಧರನಾದ ಮನುವು ಈ ಭೂಮಂಡಲ ವನ್ನು ಆಳುತ್ತಿದ್ದನು. ಅವನಿಗೆ ಕುಲನಂದನನಾದ ಇಕ್ಷ್ವಾಕುವೆಂಬ ಶ್ರೇಷ್ಠನಾದ ಪುತ್ರನಿದ್ದನು. ಮನುವು ತನ್ನ ಜ್ಯೇಷ್ಠಪುತ್ರನಾದ ಮತ್ತು ದುರ್ಜಯನಾದ ಇಕ್ಷ್ವಾಕುವನ್ನು ಭೂಮಂಡಲದ ರಾಜ್ಯಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕವನ್ನು ಮಾಡಿ ಮಗನೊಡನೆ ಹೇಳಿದನು : '**ಪೃಥಿವ್ಯಾಂ ರಾಜವಂಶಾನಾಂ ಕರ್ತಾ ಭವ**–ಪೃಥ್ವಿಯಲ್ಲಿ ರಾಜವಂಶಗಳನ್ನು ನೀನು ಸಂಸ್ಥಾಪಿಸು.'

ಮನುವಿನ ಈ ಮಾತನ್ನು ಕೇಳಿ ಇಕ್ಷ್ವಾಕುವು ಹಾಗೆಯೇ ಮಾಡುವುದಾಗಿ ತಂದೆಗೆ ಪ್ರತಿಜ್ಞೆಮಾಡಿಕೊಟ್ಟನು. ಇದರಿಂದ ಪರಮಸಂತುಷ್ಟನಾದ ಮನುವು ಪುತ್ರನಿಗೆ ಪುನಃ ಹೇಳಿದನು :

"ಉದಾರಹೃದಯನೇ! ನೀನು ಮಾಡಿದ ಪ್ರತಿಜ್ಞೆಯಿಂದ ನಾನು ಪ್ರಸನ್ನನಾಗಿದ್ದೇನೆ. ನಿನ್ನ ಪ್ರತಿಜ್ಞೆಯಂತೆ ನೀನು ನಡೆದುಕೊಳ್ಳುವೆ ಯೆಂಬುದರಲ್ಲಿ ಸಂಶಯವೇ ಇಲ್ಲ.

ದಣ್ಡೇನ ಚ ಪ್ರಜಾ ರಕ್ಷ ಮಾ ಚ ದಣ್ಡಮಕಾರಣೇ ॥೮॥

ನೀನು ದಂಡದಿಂದ ದುಷ್ಟರನ್ನು ಶಿಕ್ಷಿಸುತ್ತಾ ಪ್ರಜೆಗಳ ರಕ್ಷಣೆಯನ್ನು ಮಾಡು. ಆದರೆ ಅಪರಾಧಮಾಡದೇ ಇರುವವರನ್ನು ಯಾವ ಕಾರಣ ದಿಂದಲೂ ಶಿಕ್ಷಿಸಬಾರದು.

ಅಪರಾಧಿಷು ಯೋ ದಣ್ಡಃ ಪಾತ್ಯತೇ ಮಾನುಷೇಷು ವೈ ।
ಸ ದಣ್ಡೋ ವಿಧಿವನ್ಮುಕ್ತಃ ಸ್ವರ್ಗಂ ನಯತಿ ಪಾರ್ಥಿವಮ್ ॥೯॥

ಅಪರಾಧಿಗಳ ವಿಷಯದಲ್ಲಿ ಪ್ರಯೋಗಿಸುವ ದಂಡವು ವಿಧಿಪೂರ್ವಕ

ವಾಗಿದ್ದು ಅಂತಹ ದಂಡನೆಯು ರಾಜನನ್ನು ಸ್ವರ್ಗಕ್ಕೊಯ್ಯುತ್ತದೆ. ಆದುದರಿಂದ ದಂಡವನ್ನು ಸಮುಚಿತವಾದ ರೀತಿಯಲ್ಲಿ ಪ್ರಯೋಗಿಸಲು ಪ್ರಯತ್ನಿಸು. ಹೀಗೆ ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸುವುದರಿಂದ ನಿನಗೆ ಸ್ವರ್ಗ ಲೋಕದಲ್ಲಿ ಪರಮಪುಣ್ಯವು ಲಭಿಸುತ್ತದೆ.”

ಮನುವು ಇದೇ ಮುಂತಾಗಿ ಮಗನಿಗೆ ಸಂದೇಶವನ್ನಿತ್ತು ಪರಮಹೃಷ್ಟನಾಗಿ ಸಮಾಧಿಯೋಗದ ಮೂಲಕವಾಗಿ ಸನಾತನವಾದ ಬ್ರಹ್ಮಲೋಕಕ್ಕೆ ಹೊರಟುಹೋದನು.

ರಾಘವ! ಹೀಗೆ ಮನುವು ಸ್ವರ್ಗಕ್ಕೆ ಹೋದನಂತರ ಮಹಾತೇಜಸ್ವಿಯಾದ ಇಕ್ಷ್ವಾಕುವಿಗೆ ಪುತ್ರರನ್ನು ಹೇಗೆ ಪಡೆಯಬೇಕೆಂಬುದರ ಬಗೆಗೆ ಚಿಂತೆಯುಂಟಾಯಿತು. ಬಳಿಕ ಧರ್ಮಾತ್ಮನಾದ ಇಕ್ಷ್ವಾಕುವು ಯಜ್ಞ-ದಾನ ಮತ್ತು ತಪಸ್ಸು ಇವೇ ಮುಂತಾದ ಸತ್ಕರ್ಮಗಳನ್ನು ಮಾಡಿ ದೇವಕುಮಾರರಂತೆಯೇ ಇದ್ದ ನೂರು ಮಕ್ಕಳನ್ನು ಪಡೆದುಕೊಂಡನು. ಆ ನೂರು ಮಕ್ಕಳಲ್ಲಿ ಎಲ್ಲರಿಗಿಂತಲೂ ಕಿರಿಯನು ಮಂದಬುದ್ಧಿಯವನೂ, ವಿದ್ಯಾವಿಹೀನನೂ ಆಗಿದ್ದನು. ಅವನು ತನ್ನ ಅಣ್ಣಂದಿರ ಶುಶ್ರೂಷೆಯನ್ನೂ ಮಾಡುತ್ತಿರಲಿಲ್ಲ. ಮಂದಬುದ್ಧಿಯವನಾಗಿದ್ದುದರಿಂದ ಇವನ ಮೇಲೆ ದಂಡ ಪ್ರಯೋಗವಾಗುವುದೆಂಬುದನ್ನು ಯೋಚಿಸಿದ್ದ ಅವನ ತಂದೆಯು ಅವನಿಗೆ ದಂಡನೆಂದೇ ಹೆಸರಿಟ್ಟಿದ್ದನು. ಅಂತಹ ತನ್ನ ಮಗನಿಗೆ, ಇರಲು ಯೋಗ್ಯವಾದ ಮತ್ತು ಭಯಂಕರವಾದ ಬೇರಾವ ದೇಶವೂ ಸಿಕ್ಕುವುದಿಲ್ಲವೆಂದು ಭಾವಿಸಿದ ಇಕ್ಷ್ವಾಕುವು ವಿಂಧ್ಯಪರ್ವತಕ್ಕೂ ಶೈವಲಪರ್ವತಕ್ಕೂ ಮಧ್ಯದಲ್ಲಿದ್ದ ಭಯಂಕರವಾದ ರಾಜ್ಯವನ್ನು ಅವನಿಗೆ ಬಿಟ್ಟುಕೊಟ್ಟನು. ಪರ್ವತದ ರಮಣೀಯವಾದ ಆ ತಪ್ಪಲುಪ್ರದೇಶಕ್ಕೆ ದಂಡನು ರಾಜನಾದನು. ತಾನು ವಾಸಮಾಡುವ ಸಲುವಾಗಿ ದಂಡನು ಅನುಪಮವಾದ ಮತ್ತು ಶ್ರೇಷ್ಠವಾದ ನಗರವನ್ನು ಕಟ್ಟಿಕೊಂಡನು. ತಾನು ಕಟ್ಟಿಸಿದ ಆ ನಗರಕ್ಕೆ ಮಧುಮಂತ ಎಂದು ಹೆಸರಿಟ್ಟನಲ್ಲದೆ ಸುವ್ರತರಾದ ಶುಕ್ರಾಚಾರ್ಯರನ್ನು ತನ್ನ ಪುರೋಹಿತರನ್ನಾಗಿ ಮಾಡಿಕೊಂಡನು. ಸ್ವರ್ಗದಲ್ಲಿ ದೇವರಾಜನಂತೆಯೇ ಭೂಮಂಡಲದಲ್ಲಿ ದಂಡರಾಜನು ಪುರೋಹಿತರೊಡನಿರುತ್ತಾ ಹೃಷ್ಟ-ಪುಷ್ಟರಾದ ಪ್ರಜೆಗಳಿಂದ ಕೂಡಿದ್ದ ಮಧುಮಂತರಾಜ್ಯವನ್ನು ಶಾಸನಮಾಡಲು ಉಪಕ್ರಮಿಸಿ

ದನು. ಮಹಾತ್ಮನಾದ, ಮಹಾರಾಜಕುಮಾರನಾದ ದಂಡನು ಶುಕ್ರಾಚಾರ್ಯರೊಡನಿದ್ದುಕೊಂಡು–ಸ್ವರ್ಗದಲ್ಲಿ ಇಂದ್ರನು ಬೃಹಸ್ಪತಿಯೊಡನೆ ಸೇರಿಕೊಂಡು ಸ್ವರ್ಗವನ್ನಾಳುವಂತೆ–ಮಧುಮಂತನಗರವನ್ನು ಶಾಸನ ಮಾಡುತ್ತಿದ್ದನು."

೭೯ನೆಯ ಸರ್ಗ ಮುಗಿಯಿತು.

ದಂಡರಾಜನು ಶುಕ್ರಾಚಾರ್ಯರ ಕನ್ಯೆಯನ್ನು ಬಲಾತ್ಕರಿಸಿದುದು

ಏತದಾಖ್ಯಾಯ ರಾಮಾಯ ಮಹರ್ಷಿಃ ಕುಮ್ಭಸಮ್ಭವಃ ।
ಅಸ್ಯಾಮೇವಾಪರಂ ವಾಕ್ಯಂ ಕಥಾಯಾಮುಪಚಕ್ರಮೇ ॥೧॥

ಮಹರ್ಷಿಗಳಾದ ಕುಂಭಸಂಭವರು ಇಲ್ಲಿಯವರೆಗೆ ದಂಡನ ರಾಜ್ಯ ಸ್ಥಾಪನೆಯ ವಿಷಯವನ್ನು ಹೇಳಿ ಮುಂದೆ ದಂಡನ ಕಥೆಯ ಮತ್ತೊಂದು ಭಾಗವನ್ನು ಹೇಳಲು ಉಪಕ್ರಮಿಸಿದರು.

"ರಾಘವ! ದಂಡನು ಮನಸ್ಸನ್ನೂ ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು ಹಲವಾರು ವರ್ಷಗಳವರೆಗೆ ಯಾವ ವಿಧವಾದ ತೊಂದರೆಯೂ ಇಲ್ಲದೆ ರಾಜ್ಯವನ್ನಾಳುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ದಂಡರಾಜನು ಸುಮನೋಹರವಾದ ವಸಂತರ್ತುವಿನ ಚೈತ್ರ ಮಾಸದಲ್ಲಿ ರಮಣೀಯವಾಗಿದ್ದ ಶುಕ್ರಾಚಾರ್ಯರ ಆಶ್ರಮಕ್ಕೆ ಹೋದನು. ಅಲ್ಲಿಯ ಸುತ್ತಮುತ್ತಲಿನ ಅರಣ್ಯಪ್ರದೇಶದಲ್ಲಿ, ಭೂಮಂಡಲದಲ್ಲಿಯೇ ಸೌಂದರ್ಯದಲ್ಲಿ ಅನುಪಮಳಾಗಿದ್ದ ಶುಕ್ರಾಚಾರ್ಯರ ಮಗಳು ಸಂಚರಿಸುತ್ತಿದ್ದುದನ್ನು ನೋಡಿದನು. ಅವಳನ್ನು ನೋಡಿದೊಡನೆಯೇ ಮೂಢನಾದ ದಂಡನು ಅನಂಗನ ಬಾಣಗಳಿಗೆ ಲಕ್ಷ್ಯನಾದನು. ದಂಡನನ್ನು ಕಂಡೊಡನೆಯೇ ಭಯದಿಂದ ಕಂಪಿಸುತ್ತಿದ್ದ ಶುಕ್ರಾಚಾರ್ಯರ ಮಗಳ ಬಳಿಗೆ ದಂಡನು ಹೋಗಿ ಅವಳೊಡನೆ ಹೇಳಿದನು :

ಕುತಸ್ತ್ವಮಸಿ ಸುಶ್ರೋಣಿ ಕಸ್ಯ ವಾಸಿ ಸುತಾ ಶುಭೇ ।
ಪೀಡಿತೋಽಹಮನಙ್ಗೇನ ಪೃಚ್ಛಾಮಿ ತ್ವಾಂ ಶುಭಾನನೇ ॥೬॥

"ಸುಂದರವಾದ ನಿತಂಬಗಳುಳ್ಳವಳೇ! ನೀನೆಲ್ಲಿಂದ ಇಲ್ಲಿಗೆ ಬಂದಿ

ರುವೆ? ನೀನು ಯಾರ ಪುತ್ರಿಯಾಗಿರುವೆ? ನಿನ್ನನ್ನು ನೋಡಿದೊಡನೆಯೇ ನಾನು ಅನಂಗಪೀಡಿತನಾಗಿದ್ದೇನೆ. ಸುಂದರಮುಖಿಯೇ! ನೀನಾರೆಂಬುದನ್ನು ಹೇಳು. ನಿನ್ನ ಪರಿಚಯವನ್ನು ಮಾಡಿಕೊಡು."

ಮೋಹದಿಂದ ಉನ್ಮತ್ತನಾಗಿದ್ದ ಅತ್ಯಂತಕಾಮಿಯಾಗಿದ್ದ ದಂಡ ರಾಜನು ಹೀಗೆ ಪ್ರಶ್ನಿಸಲು ಭೃಗುಪುತ್ರಿಯು ವಿನಯಪೂರ್ವಕವಾಗಿ ಈ ಮಾತನ್ನು ಹೇಳಿದಳು :

"ರಾಜೇಂದ್ರ! ನಾನು ಅನಾಯಾಸವಾಗಿ ಕರ್ಮಗಳನ್ನು ಆಚರಿಸುವ ದೇವದೇವನಾದ ಶುಕ್ರನ ಹಿರಿಯ ಮಗಳು. ಅರಜಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದೇನೆ. ನಾನು ಈ ಆಶ್ರಮದಲ್ಲಿಯೇ ವಾಸವಾಗಿದ್ದೇನೆ.

ಮಾಂ ಮಾ ಸ್ಪೃಶ ಬಲಾದ್ರಾಜನ್ಕನ್ಯಾ ಪಿತೃವಶಾ ಹ್ಯಹಮ್ ।
ಗುರುಃ ಪಿತ ಮೇ ರಾಜೇನ್ದ್ರ ತ್ವಂ ಚ ಶಿಷ್ಯೋ ಮಹಾತ್ಮನಃ ॥೯॥

ಮಹಾರಾಜ! ಬಲಪೂರ್ವಕವಾಗಿ ನನ್ನನ್ನು ಮುಟ್ಟಲು ಪ್ರಯತ್ನಿಸ ಬೇಡ. ನಾನು ಕನ್ಯೆಯಾಗಿದ್ದು ತಂದೆಯ ಅಧೀನಳಾಗಿದ್ದೇನೆ. ನನ್ನ ತಂದೆಯು ನಿನಗೆ ಗುರುವೂ ಆಗಿದ್ದಾನೆ. ಮಹಾತ್ಮನಾದ ಶುಕ್ರನಿಗೆ ನೀನು ಶಿಷ್ಯನಾಗಿರುವೆ.

ವ್ಯಸನಂ ಸುಮಹತ್ಕ್ರುದ್ಧಃ ಸ ತೇ ದದ್ಯಾನ್ಮಹಾತಪಾಃ ।
ಯದಿ ವಾನ್ಯನ್ಮಯಾ ಕಾರ್ಯಂ ಧರ್ಮದೃಷ್ಟೇನ ಸತ್ಪಥಾ ॥೧೦॥

ವರಯಸ್ವ ನೃಪಶ್ರೇಷ್ಠ ಪಿತರಂ ಮೇ ಮಹಾದ್ಯುತಿಮ್ ।
ಅನ್ಯಥಾ ತು ಫಲಂ ತುಭ್ಯಂ ಭವೇದ್ಘೋರಾಭಿಸಂಹಿತಮ್ ॥೧೧॥

ನರಶ್ರೇಷ್ಠನೇ! ಮಹಾತಪಸ್ವಿಯಾದ ನನ್ನ ತಂದೆಯು ಕುಪಿತ ನಾದರೆ ನಿನಗೆ ಮಹಾವಿಪತ್ತನ್ನೇ ಉಂಟುಮಾಡುತ್ತಾನೆ. ನನ್ನಿಂದ ನಿನಗೇ ನಾದರೂ ಕಾರ್ಯವಾಗಬೇಕಾಗಿದ್ದರೆ ನಾನು ಹೇಳಿದಂತೆ ಮಾಡು. ಧರ್ಮ ಶಾಸ್ತ್ರದಲ್ಲಿ ಹೇಳಿರುವಂತೆ ಸನ್ಮಾರ್ಗಪ್ರವರ್ತಕನಾಗಿ ಮಹಾದ್ಯುತಿಯಾದ ನನ್ನ ತಂದೆಯ ಬಳಿಗೆ ಹೋಗಿ ನನ್ನನ್ನು ಮದುವೆಮಾಡಿಕೊಡುವಂತೆ ಅವನನ್ನು ಪ್ರಾರ್ಥಿಸು. ಹಾಗೆ ಮಾಡದೇ ನೀನೇನಾದರೂ ಸ್ವೇಚ್ಛೆಯಿಂದ

ವರ್ತಿಸಿದೆಯಾದರೆ ಅದರ ಪರಿಣಾಮವಾಗಿ ನೀನು ಭಯಂಕರವಾದ ಫಲವನ್ನು ಅನುಭವಿಸಬೇಕಾಗುವುದು.

ಕ್ರೋಧೇನ ಹಿ ಪಿತಾ ಮೇऽಸೌ ತ್ರೈಲೋಕ್ಯಮಪಿ ನಿರ್ದಹೇತ್ ।
ದಾಸ್ಯತೇ ಚಾನವದ್ಯಾಙ್ಗ ತವ ಮಾಂ ಯಾಚಿತಃ ಪಿತಾ ॥೧೨॥

ಸುಂದರವಾದ ಅಂಗಗಳನ್ನು ಹೊಂದಿರುವ ನರೇಶನೇ! ನನ್ನ ತಂದೆಯೇನಾದರೂ ಕುಪಿತನಾದರೆ ಮೂರು ಲೋಕಗಳನ್ನೇ ದಹಿಸಿಬಿಟ್ಟಾನು. ಆದುದರಿಂದ ನನ್ನನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲು ಪ್ರಯತ್ನಿಸಬೇಡ. ನೀನೇನಾದರೂ ಅವನನ್ನು ಯಾಚಿಸಿದರೆ ನನ್ನನ್ನು ನಿನಗೆ ವಿವಾಹ ಮಾಡಿಕೊಡಬಹುದು."

ಶುಕ್ರರ ಮಗಳಾದ ಅರಜೆಯು ಹೀಗೆ ಹೇಳುತ್ತಿರಲಾಗಿ ಕಾಮವಶನಾಗಿದ್ದ ಮತ್ತು ಮದೋನ್ಮತ್ತನಾಗಿದ್ದ ದಂಡನು ಎರಡು ಕೈಗಳನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಹೇಳಿದನು :

"ಸುಂದರಿಯೇ! ನನ್ನ ವಿಷಯದಲ್ಲಿ ಪ್ರಸನ್ನಳಾಗು. ವೃಥಾಕಾಲ ಯಾಪನೆಮಾಡಬೇಡ. ಸುಮುಖಿಯೇ! ನಿನ್ನ ಸಲುವಾಗಿ ನನ್ನ ಪ್ರಾಣಗಳು ಎದೆಯನ್ನು ಸೀಳಿಕೊಂಡು ಹೊರಕ್ಕೆ ಬರುವುದರಲ್ಲಿವೆ.

ತ್ವಾಂ ಪ್ರಾಪ್ಯ ತು ವಧೋ ವಾಪಿ ಪಾಪಂ ವಾಪಿ ಸುದಾರುಣಮ್ ।
ಭಕ್ತಂ ಭಜಸ್ವ ಮಾಂ ಭೀರು ಭಜಮಾನಂ ಸುವಿಹ್ವಲಮ್ ॥೧೪॥

ನಿನ್ನನ್ನು ಹೊಂದಿದನಂತರ ನನ್ನ ವಧೆಯಾದರೂ ಆಗಲಿ ; ಸುದಾರುಣವಾದ ಪಾಪವಾದರೂ ನನಗೆ ಲಭಿಸಲಿ ; ಚಿಂತೆಯಿಲ್ಲ. ಭೀರುವೇ! ನಾನು ನಿನ್ನ ಭಕ್ತನಾಗಿದ್ದೇನೆ. ಅತ್ಯಂತವ್ಯಾಕುಲನಾಗಿರುವ ನಿನ್ನ ಈ ಸೇವಕನನ್ನು ಸ್ವೀಕರಿಸು."

ದಂಡರಾಜನು ಹೀಗೆ ಹೇಳಿ ಭಾರ್ಗವಕನ್ಯೆಯನ್ನು ಎರಡು ತೋಳುಗಳಿಂದಲೂ ಬಲಾತ್ಕಾರವಾಗಿ ತಬ್ಬಿಕೊಂಡನು. ಅವಳು ತರ-ತರನೆ ನಡುಗುತ್ತಿದ್ದರೂ ಸ್ವೇಚ್ಛೆಯಿಂದ ಅವಳೊಡನೆ ಸಮಾಗಮಮಾಡಿದನು. ಇಂತಹ ಘೋರವಾದ, ಮಹಾಭಯಂಕರವಾದ, ಅನರ್ಥಕರವಾದ ಕಾರ್ಯವನ್ನು ದಂಡರಾಜನು ಮಾಡಿ ಬಹಳ ಬೇಗ ತನ್ನ ರಾಜಧಾನಿಯಾದ ಮತ್ತು ಶ್ರೇಷ್ಠ

ವಾದ ಮಧುಮಂತನಗರಕ್ಕೆ ಹೊರಟುಹೋದನು. ಇತ್ತಲಾಗಿ ಅರಜೆಯು ಅತ್ಯಂತಭಯಗೊಂಡವಳಾಗಿ ಗಟ್ಟಿಯಾಗಿ ರೋದನಮಾಡುತ್ತಾ ದೇವಸದೃಶನಾದ ತಂದೆಯನ್ನೇ ಪ್ರತೀಕ್ಷಿಸುತ್ತಾ ಆಶ್ರಮದ ಸಮೀಪದಲ್ಲೇ ನಿಂತಿದ್ದಳು.

ಆ೦ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೮೧ನೆಯ ಸರ್ಗ

ಶುಕ್ರರ ಶಾಪದಿಂದ ಸಪರಿವಾರನಾದ ದಂಡನ ಮತ್ತು ಅವನ ರಾಜ್ಯದ ವಿನಾಶ

ಸ ಮುಹೂರ್ತಾದುಪಶ್ರುತ್ಯ ದೇವರ್ಷಿರಮಿತಪ್ರಭಃ ।
ಸ್ವಮಾಶ್ರಮಂ ಶಿಷ್ಯವೃತಃ ಕ್ಷುಧಾರ್ತಃ ಸಂನ್ಯವರ್ತತ ॥೧॥

ಮುಹೂರ್ತಕಾಲ ಕಳೆದನಂತರ ಶಿಷ್ಯನೊಬ್ಬನ ಬಾಯಿಂದ ಅರಜೆಯೊಡನೆ ದಂಡರಾಜನು ಬಲಾತ್ಕಾರದಿಂದ ಸಮಾಗಮಮಾಡಿದ ವಾರ್ತೆಯನ್ನು ಕೇಳಿ ಮಹಾತೇಜಸ್ವಿಗಳಾದ, ದೇವರ್ಷಿಗಳಾದ, ಹಸಿವಿನಿಂದ ಪೀಡಿತರಾಗಿದ್ದ ಶುಕ್ರರು ಶಿಷ್ಯರಿಂದ ಪರಿವೃತರಾಗಿ ಆಶ್ರಮಕ್ಕೆ ಹಿಂದಿರುಗಿದರು.

ಆಶ್ರಮದಲ್ಲಿ ಶುಕ್ರಾಚಾರ್ಯರು ದೀನೆಯಾಗಿದ್ದ, ಧೂಳಿನಿಂದ ಮುಚ್ಚಿಹೋಗಿದ್ದ, ಪ್ರಾತಃಕಾಲದಲ್ಲಿನ ಚಂದ್ರನ ಬೆಳದಿಂಗಳಿನಂತೆಯೂ ರಾಹುಗ್ರಸ್ತನಾದ ಚಂದ್ರನಂತೆಯೂ ತೇಜೋಹೀನಳಾಗಿದ್ದ ಅರಜೆಯನ್ನು ನೋಡಿದರು. ಆ ಸಮಯದಲ್ಲಿ ಹಸಿವಿನಿಂದಲೂ ಆಯಾಸಗೊಂಡಿದ್ದ ಶುಕ್ರರ ಕೋಪವು ಮಗಳನ್ನು ನೋಡುತ್ತಲೇ ಉಲ್ಬಣಿಸಿತು. ಮೂರು ಲೋಕಗಳನ್ನೂ ಸುಟ್ಟು ಬಿಡುವರೋ ಎಂಬಂತೆ ಕಾಣುತ್ತಿದ್ದ ಶುಕ್ರರು ಶಿಷ್ಯರಿಗೆ ಹೇಳಿದರು :

"ಶಿಷ್ಯರೇ! ಶಾಸ್ತ್ರವಿಧಿಗೆ ವಿಪರೀತವಾದ ರೀತಿಯಲ್ಲಿ ನಡೆದುಕೊಂಡಿರುವ ಅಜ್ಞಾನಿಯಾದ ದಂಡನಿಗೆ ಕ್ರುದ್ಧನಾದ ನನ್ನ ಬಾಯಿಂದ ಅಗ್ನಿಜ್ವಾಲೆಯೋಪಾದಿಯಲ್ಲಿ ಹೊರಬರುವ ಸುಘೋರವಾದ ವಿಪತ್ತನ್ನು ಲಾಲಿಸಿರಿ. ಅನುಯಾಯಿಗಳಿಂದ ಕೂಡಿರುವ, ದುರಾತ್ಮನಾದ, ದುರ್ಮತಿಯಾದ ಆ ದಂಡನಿಗೆ ವಿನಾಶಕಾಲವು ಸನ್ನಿಹಿತವಾಗಿದೆ. ಧಗಧಗಿಸುತ್ತಿರುವ ಯಜ್ಞೇಶ್ವರನ ಜ್ವಾಲೆಯನ್ನು ಆ ಮೂರ್ಖನು ಆಲಿಂಗಿಸಿಕೊಳ್ಳಲು ಇಚ್ಛಿಸಿದ್ದಾನೆ.

ಇಂತಹ ಘೋರವಾದ ಪಾಪವನ್ನು ಮಾಡಿರುವ ಆ ಕೆಟ್ಟಬುದ್ಧಿಯವನಾದ ರಾಜನು ಅವನು ಮಾಡಿದ ಕರ್ಮಕ್ಕೆ ತಕ್ಕುದಾದ ಫಲವನ್ನೇ ಈಗ ಹೊಂದುತ್ತಾನೆ. ಏಳು ರಾತ್ರಿಯೊಳಗಾಗಿ ದುರ್ಮತಿಯಾದ ಈ ರಾಜನು ಪುತ್ರ-ಬಲ-ವಾಹನಸಹಿತನಾಗಿ ವಿನಾಶಹೊಂದುತ್ತಾನೆ. ನೂರು ಯೋಜನಗಳಷ್ಟು ಅಗಲವಾಗಿಯೂ ನೂರು ಯೋಜನಗಳಷ್ಟು ಉದ್ದವಾಗಿಯೂ ಇರುವ ಈ ರಾಜನ ರಾಜ್ಯವನ್ನು ಇಂದ್ರನು ಪರಮಾದ್ಭುತವಾದ ಧೂಳನ್ನು ಮಳೆಯರೂಪದಲ್ಲಿ ಸುರಿಸಿ ವಿನಾಶಗೊಳಿಸುತ್ತಾನೆ. ಇಲ್ಲಿರುವ ಎಲ್ಲ ಸ್ಥಾವರ-ಜಂಗಮ ಪ್ರಾಣಿಗಳೂ ಆ ಧೂಳಿನ ವೃಷ್ಟಿಯಿಂದಾಗಿ ಅದರಲ್ಲಿಯೇ ವಿಲೀನಗೊಳ್ಳುತ್ತವೆ. ದಂಡನ ರಾಜ್ಯದ ಎಲ್ಲೆಯವರೆಗೂ ಇರುವ ಎಲ್ಲ ಪ್ರದೇಶಗಳೂ ಮತ್ತು ಅಲ್ಲಿ ವಾಸಮಾಡುವ ಪ್ರಾಣಿಗಳೂ ಏಳು ದಿವಸಗಳ ಅವ್ಯಾಹತವಾದ ಧೂಳಿನ ವೃಷ್ಟಿಗೆ ಲಕ್ಷ್ಯಗಳಾಗಿ ಅದೃಶ್ಯವಾಗುತ್ತವೆ. ಧೂಳಿನ ರಾಶಿಯಲ್ಲೇ ಮುಚ್ಚಿಹೋಗುತ್ತವೆ."

ಹೀಗೆ ಹೇಳಿ ಕೋಪದಿಂದ ಕೆಂಗಣ್ಣರಾಗಿದ್ದ ಶುಕ್ರರು ಆಶ್ರಮಗಳಲ್ಲಿದ್ದ ಜನರಿಗೆ ದಂಡನ ರಾಜ್ಯದ ಎಲ್ಲೆಯಾಚೆಗೆ ಹೋಗಿ ನೆಲೆಸುವಂತೆ ಆದೇಶನೀಡಿದರು. ಶುಕ್ರರ ಈ ಮಾತನ್ನು ಕೇಳಿ ಆಶ್ರಮವಾಸಿಗಳೆಲ್ಲರೂ ಆ ರಾಜ್ಯದಿಂದ ಹೊರಹೊರಟು ಆ ರಾಜ್ಯದ ಎಲ್ಲೆಯಾಚೆ ನಿವಾಸಮಾಡಿದರು.

ಹೀಗೆ ಆಶ್ರಮವಾಸಿಗಳೆಲ್ಲರನ್ನೂ ರಾಜ್ಯದಿಂದ ಹೊರಕ್ಕೆ ಕಳುಹಿಸಿ ಶುಕ್ರರು ಮಗಳಾದ ಅರಜಳಿಗೆ ಹೇಳಿದರು :

ಇಹೈವ ವಸ ದುರ್ಮೇಧೇ ಆಶ್ರಮೇ ಸುಸಮಾಹಿತಾ ॥೧೩॥

"ಬುದ್ಧಿಗೆಟ್ಟವಳೇ! ಈ ಆಶ್ರಮದಲ್ಲಿಯೇ ನೀನು ಪರಮಾತ್ಮನಲ್ಲಿಯೇ ಏಕಾಗ್ರವಾದ ಮನಸ್ಸನ್ನಿಟ್ಟುಕೊಂಡು ವಾಸಮಾಡುತ್ತಿರು.

ಇಲ್ಲಿ ಯೋಜನದಷ್ಟು ವಿಸ್ತಾರವಿರುವ ಸುಂದರವಾದ ಸರೋವರವಿದೆ. ಇಲ್ಲಿಯೇ ನೀನು ಯಾವ ವಿಧವಾದ ಈತಿಬಾಧೆಗಳೂ ಇಲ್ಲದವಳಾಗಿ ಇಲ್ಲಿ ಸಿಕ್ಕುವ ಹಣ್ಣು-ಹಂಪಲುಗಳನ್ನು ಭಕ್ಷಿಸುತ್ತಾ ನಿನ್ನ ಶಾಪದ ನಿವೃತ್ತಿಯ ಕಾಲವನ್ನು ಪ್ರತೀಕ್ಷಿಸುತ್ತಿರು. ರಾತ್ರಿಯ ವೇಳೆಯಲ್ಲಿ ಯಾವ

ಪ್ರಾಣಿಗಳು ನಿನ್ನ ಸಮೀಪದಲ್ಲಿರುತ್ತವೆಯೋ ಅವುಗಳು ಕೂಡ ಧೂಳಿನ ವರ್ಷದಿಂದ ಯಾವಾಗಲೂ ವಿನಾಶಹೊಂದುವುದಿಲ್ಲ."

ಬ್ರಹ್ಮರ್ಷಿಯ ಆ ಆದೇಶವನ್ನು ಕೇಳಿ ಭೃಗುಪುತ್ರಿಯಾದ ಅರಜಳು ಅತ್ಯಂತದುಃಖಿತೆಯಾಗಿ ಹಾಗೆಯೇ ಆಗಲೆಂದು ಹೇಳಿದಳು. ಮಗಳಿಗೆ ಹೀಗೆ ಹೇಳಿ ಸಮಾಧಾನಗೊಳಿಸಿದ ಶುಕ್ರರು ಬೇರೊಂದು ರಾಜ್ಯಕ್ಕೆ ಹೋಗಿ ನೆಲೆಸಿದರು. ಬ್ರಹ್ಮವಾದಿಗಳಾದ ಶುಕ್ರರ ಶಾಪದಂತೆ ದಂಡರಾಜನ ಸೈನಿಕ-ಮಂತ್ರಿ-ವಾಹನಗಳಿಂದ ಸಮೃದ್ಧವಾಗಿದ್ದ ಆ ರಾಜ್ಯವು ಏಳು ದಿವಸಗಳಲ್ಲಿ ಭಸ್ಮೀಭೂತವಾಯಿತು. ರಾಘವ! ವಿಂಧ್ಯ ಮತ್ತು ಶೈವಲಪರ್ವತಗಳ ಮಧ್ಯಭಾಗದಲ್ಲಿ ದಂಡನ ರಾಜ್ಯವಿದ್ದಿತು. ಕೃತಯುಗದಲ್ಲಿ ದಂಡರಾಜನು ಧರ್ಮಕ್ಕೆ ವಿರುದ್ಧವಾದ ಕಾರ್ಯವನ್ನು ಎಸಗಿದ ಕಾರಣ ಶುಕ್ರರ ಶಾಪಕ್ಕೊಳಗಾದ ಆ ರಾಜ್ಯವು ಈಗ ದಂಡಕಾರುಣ್ಯವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಕಾಲಾನಂತರ ಇದೇ ಸ್ಥಳದಲ್ಲಿಯೇ ತಪಸ್ವಿಗಳು ವಾಸಮಾಡತೊಡಗಿದರು. ಆದುದರಿಂದ ಈ ಪ್ರದೇಶವು ಜನಸ್ಥಾನವೆಂಬ ಹೆಸರಿನಿಂದಲೂ ಪ್ರಸಿದ್ಧವಾಗಿದೆ.

ರಾಘವ! ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಯಥೋಚಿತವಾಗಿ ಉತ್ತರಿಸಿರುವೆನು. ಸಂಧ್ಯೋಪಾಸನೆ ಮಾಡಬೇಕಾದ ಕಾಲವು ಮೀರಿ ಹೋಗುತ್ತಿದೆ. ಇತ್ತ ಸುತ್ತಲೂ ಮಹರ್ಷಿಗಳೆಲ್ಲರೂ ಸ್ನಾನಮಾಡಿ ಶುಚೀಭೂತರಾಗಿ ಕೈಗಳಲ್ಲಿ ಪೂರ್ಣಕುಂಭಗಳನ್ನು ಹಿಡಿದು ಸೂರ್ಯೋಪಾಸನೆ ಮಾಡುತ್ತಿದ್ದಾರೆ. ಶ್ರೇಷ್ಠರಾದ ಬ್ರಹ್ಮವಿದರು ಏಕತ್ರ ಕುಳಿತು ಪಠಿಸುತ್ತಿರುವ ಬ್ರಾಹ್ಮಣಮಂತ್ರಗಳನ್ನು ಕೇಳುತ್ತಾ ಸೂರ್ಯನು ಅಸ್ತಂಗತನಾಗುತ್ತಿದ್ದಾನೆ. ನೀನೂ ಹೋಗು. ಆಚಮನ-ಸಂಧ್ಯಾದಿಗಳನ್ನು ಮಾಡು."

ಲ೧ನೆಯ ಸರ್ಗವು ಮುಗಿಯಿತು.

ಶ್ರೀರಾಮನು ಅಗಸ್ತ್ಯರ ಆಶ್ರಮದಿಂದ ಅಯೋಧ್ಯಾಪಟ್ಟಣಕ್ಕೆ ಹಿಂದಿರುಗಿದುದು

ಋಷೇರ್ವಚನಮಾಜ್ಞಾಯ ರಾಮಃ ಸಂಧ್ಯಾಮುಪಾಸಿತುಮ್ ।
ಅಪಾಕ್ರಮತ್ಸರಃ ಪುಣ್ಯಮಪ್ಸರೋಗಣಸೇವಿತಮ್ ॥೧॥

ಅಗಸ್ತ್ಯರ ಈ ಆದೇಶವನ್ನು ಕೇಳಿ ಶ್ರೀರಾಮನು ಸಂಧ್ಯೋಪಾಸನೆಗಾಗಿ ಅಪ್ಸರೆಯರಿಂದ ಸೇವಿಸಲ್ಪಡುತ್ತಿದ್ದ ಪುಣ್ಯತಮವಾದ ಸರೋವರದ ಬಳಿಗೆ ಹೋದನು.

ಪವಿತ್ರವಾದ ಆ ಸರೋವರದಲ್ಲಿ ಶ್ರೀರಾಮನು ಶುದ್ಧಾಚಮನಮಾಡಿ ಸಾಯಂಕಾಲದ ಸಂಧ್ಯೋಪಾಸನೆಯನ್ನು ಮಾಡಿದನಂತರ ಮಹಾತ್ಮರಾದ ಕುಂಭಸಂಭವರಾದ ಅಗಸ್ತ್ಯರ ಆಶ್ರಮವನ್ನು ಪ್ರವೇಶಿಸಿದನು. ಅಗಸ್ತ್ಯರು ಶ್ರೀರಾಮನ ಭೋಜನಕ್ಕಾಗಿ ಬಹುಗುಣಯುಕ್ತವಾದ ಕಂದ-ಮೂಲಗಳನ್ನೂ, ಜರಾವಸ್ಥೆಯನ್ನು ಹೋಗಲಾಡಿಸುವ ದಿವ್ಯೌಷಧಿಗಳನ್ನೂ, ಪವಿತ್ರ ವಾದ ಶಾಲ್ಯನ್ನವನ್ನೂ ಸಿದ್ಧಗೊಳಿಸಿದರು. ನರಶ್ರೇಷ್ಠನಾದ ಶ್ರೀರಾಮನು ಅಮೃತಸದೃಶವಾದ ಆ ಭೋಜನವನ್ನು ಭುಂಜಿಸಿ ಪ್ರೀತನಾಗಿ ಮತ್ತು ಪರಮತುಷ್ಟನಾಗಿ ಆ ರಾತ್ರಿಯನ್ನು ಮಹರ್ಷಿಗಳ ಆಶ್ರಮದಲ್ಲಿಯೇ ಕಳೆದನು. ಬೆಳಗಾಗುತ್ತಲೇ ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಅಯೋಧ್ಯೆಗೆ ಹೊರಡುವ ಆಶಯದಿಂದ ಅಗಸ್ತ್ಯರ ಬಳಿಗೆ ಹೋದನು. ಸುಖಾಸನದಲ್ಲಿ ಕುಳಿತಿದ್ದ ಅಗಸ್ತ್ಯಮಹರ್ಷಿಗಳಿಗೆ ಶ್ರೀರಾಮನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಹೇಳಿದನು :

ಆಪೃಚ್ಛೇ ಸ್ವಾಂ ಪುರೀಂ ಗನ್ತುಂ ಮಾಮನುಜ್ಞಾತುಮರ್ಹಸಿ ॥೬॥

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ದರ್ಶನೇನ ಮಹಾತ್ಮನಃ ।
ದ್ರಷ್ಟುಂ ಚೈವಾಗಮಿಷ್ಯಾಮಿ ಪಾವನಾರ್ಥಮಿಹಾತ್ಮನಃ ॥೭॥

“ಮಹರ್ಷಿಗಳೇ! ನನ್ನ ರಾಜಧಾನಿಗೆ ಹೋಗಲು ತಮ್ಮ ಅನುಜ್ಞೆ ಯನ್ನು ಬೇಡುತ್ತಿದ್ದೇನೆ. ಕೃಪೆಮಾಡಿ ನಾನು ಪ್ರಯಾಣಮಾಡಲು ಅನು

ಮತಿಸಿರಿ. ತಮ್ಮಂತಹ ಮಹಾತ್ಮರ ದರ್ಶನದಿಂದ ನಾನು ಧನ್ಯನಾಗಿದ್ದೇನೆ. ತಮ್ಮಿಂದ ಅನುಗ್ರಹಿಸಲ್ಪಟ್ಟಿದ್ದೇನೆ. ನನ್ನನ್ನು ನಾನು ಶುದ್ಧಿಮಾಡಿಕೊಳ್ಳಲು ಪುನಃ ನಾನಿಲ್ಲಿಗೆ ತಮ್ಮನ್ನು ಸಂದರ್ಶಿಸಲು ಬರುತ್ತೇನೆ."

ಶ್ರೀರಾಮನು ಇಂತಹ ಪರಮಾದ್ಭುತವಾದ ಮಾತನ್ನು ಹೇಳಲು ಧರ್ಮಚಕ್ಷುಗಳಾದ ಅಗಸ್ತ್ಯರು ಪರಮಪ್ರೀತರಾಗಿ ಹೇಳಿದರು :

"ರಾಘವ! ಶುಭಾಕ್ಷರಗಳಿಂದ ಯುಕ್ತವಾದ ನಿನ್ನ ಈ ಸುಂದರವಾದ ವಚನವು ನಿಶ್ಚಯವಾಗಿಯೂ ಅತ್ಯದ್ಭುತವಾಗಿದೆ. ನಿಜವನ್ನು ಹೇಳು ವುದಾದರೆ:

ಪಾವನಃ ಸರ್ವಭೂತಾನಾಂ ತ್ವಮೇವ ರಘುನನ್ದನ ॥೯॥

ಸಮಸ್ತಪ್ರಾಣಿಗಳನ್ನೂ ಪವಿತ್ರಗೊಳಿಸುವವನು ನೀನೇ ಆಗಿರುವೆ.

ಮುಹೂರ್ತಮಪಿ ರಾಮ ತ್ವಾಂ ಯೇಽನುಪಶ್ಯನ್ತಿ ಕೇಚನ ।
ಪಾವಿತಾಃ ಸ್ವರ್ಗಭೂತಾಶ್ಚ ಪೂಜ್ಯಾಸ್ತೇ ತ್ರಿದಿವೇಶ್ವರೈಃ ॥೧೦॥

ಯಾರೇ ಆಗಲಿ ; ನಿನ್ನನ್ನು ಮುಹೂರ್ತಕಾಲ ನೋಡಿದರೂ ಅವರು ಪರಮಪವಿತ್ರರಾಗುತ್ತಾರೆ. ಸ್ವರ್ಗಕ್ಕೆ ಅಧಿಕಾರಿಗಳಾಗುತ್ತಾರೆ ಮತ್ತು ದೇವತೆಗಳಿಂದಲೂ ಪೂಜಿಸಲ್ಪಡುತ್ತಾರೆ.

ಯೇ ಚ ತ್ವಾಂ ಘೋರಚಕ್ಷುರ್ಭಿಃ ಪಶ್ಯನ್ತಿ ಪ್ರಾಣಿನೋ ಭುವಿ ।
ಹತಾಸ್ತೇ ಯಮದಣ್ಡೇನ ಸದ್ಯೋ ನಿರಯಗಾಮಿನಃ ॥೧೧॥

ಪ್ರಪಂಚದಲ್ಲಿರುವ ಯಾವ ಪ್ರಾಣಿಗಳು ನಿನ್ನನ್ನು ಕ್ರೂರದೃಷ್ಟಿಯಿಂದ ನೋಡುವುವೋ ಅವೆಲ್ಲವೂ ಯಮರಾಜನ ದಂಡದಿಂದ ಪ್ರಹರಿಸಲ್ಪಟ್ಟು ಒಡನೆಯೇ ನರಕಕ್ಕೆ ಒಯ್ಯಲ್ಪಡುತ್ತವೆ.

ರಾಘವ! ಹೀಗೆ ನೀನು ಸಮಸ್ತಪ್ರಾಣಿಗಳನ್ನೂ ಪವಿತ್ರಗೊಳಿಸುವವ ನಾಗಿರುವೆ. ಭುವಿಯಲ್ಲಿ ಯಾರು ನಿನ್ನ ಕಥಾಮೃತವನ್ನು ಹೇಳುವರೋ ಅವರೆಲ್ಲರೂ ಸಿದ್ಧಿಗಳನ್ನು ಪಡೆದುಕೊಳ್ಳುತ್ತಾರೆ. ನೀನು ನಿಶ್ಚಿಂತನಾಗಿ ಕುಶಲಿಯಾಗಿ ಪ್ರಯಾಣಮಾಡು. ನೀನು ಪ್ರಯಾಣಮಾಡುವ ಮಾರ್ಗದಲ್ಲಿ ಭಯವೆಂಬುದೇ ಇರುವುದಿಲ್ಲ. ರಾಜಧಾನಿಗೆ ಪ್ರಯಾಣಮಾಡಿದನಂತರ

ಧರ್ಮದಿಂದ ರಾಜ್ಯಭಾರಮಾಡು. ನೀನೇ ಈ ಜಗತ್ತಿಗೆ ಪರಮಾಶ್ರಯ ನಾಗಿರುವೆ."

ಮಹರ್ಷಿಗಳು ಹೀಗೆ ಹೇಳಲು ಪ್ರಾಜ್ಞನಾದ ಶ್ರೀರಾಮನು ತೋಳು ಗಳೆರಡನ್ನೂ ಮೇಲೆತ್ತಿ ಕೈಮುಗಿದುಕೊಂಡು ಸತ್ಯಶೀಲರಾದ ಅಗಸ್ತ್ಯರಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿದನು. ಹೀಗೆ ಮುನಿಶ್ರೇಷ್ಠರಾದ ಅಗಸ್ತ್ಯರಿಗೆ ಅಭಿವಾದನಮಾಡಿದನಂತರ ತಪೋಧನರಾದ ಇತರ ಋಷಿ-ಮಹರ್ಷಿಗಳಿಗೂ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿ ಏಕಾಗ್ರಚಿತ್ತ ನಾಗಿ ಶ್ರೀರಾಮನು ಸುವರ್ಣಭೂಷಿತವಾದ ಪುಷ್ಪಕವಿಮಾನವನ್ನು ಹತ್ತಿದನು. ದೇವತೆಗಳು ಮಹೇಂದ್ರನನ್ನು ಸಂಪೂಜಿಸುವಂತೆ ಮಹೇಂದ್ರಸದೃಶನಾದ ಶ್ರೀರಾಮನನ್ನು ಋಷಿ-ಮಹರ್ಷಿಗಳೆಲ್ಲರೂ ಸುತ್ತುವರಿದು ನಿಂತು ಶುಭಾಶೀರ್ವಾದಗಳಿಂದ ಹರಸಿದರು. ಸುವರ್ಣಮಯವಾದ ವಿಮಾನದಲ್ಲಿ ಸ್ವಸ್ಥನಾಗಿ ಕುಳಿತಿದ್ದ ಶ್ರೀರಾಮನು ವರ್ಷಾಕಾಲದಲ್ಲಿ ಮೇಘಗಳ ಸಮೀಪ ದಲ್ಲಿರುವ ಚಂದ್ರನಂತೆಯೇ ಕಾಣುತ್ತಿದ್ದನು. ಅವನ ಪ್ರಯಾಣಕಾಲದಲ್ಲಿ ಪ್ರಜೆಗಳೂ ಋಷಿ-ಮುನಿಗಳೂ ಗುಂಪು-ಗುಂಪಾಗಿ ಸೇರಿ ಸ್ವಾಗತಬಯಸುತ್ತಿ ದ್ದರು. ಅನೇಕಕಡೆಗಳಲ್ಲಿ ಮಹರ್ಷಿಗಳಿಂದಲೂ ಪ್ರಜೆಗಳಿಂದಲೂ ಸತ್ಕೃತನಾಗಿ ಶ್ರೀರಾಮನು ಮಧ್ಯಾಹ್ನದ ವೇಳೆಗೆ ಅಯೋಧ್ಯೆಗೆ ಬಂದು ಅರಮನೆಯ ಮಧ್ಯದ ಅಂಗಳದಲ್ಲಿ ವಿಮಾನದಿಂದ ಕೆಳಗಿಳಿದನು. ಅನಂತರ ಇಚ್ಛಾನುಸಾರ ವಾಗಿ ಹೋಗುವ ಆ ಪುಷ್ಪಕವಿಮಾನವನ್ನು ಅಲ್ಲಿಯೇ ಬಿಟ್ಟು–"ನೀನಿನ್ನು ಹೋಗಬಹುದು. ನಿನಗೆ ಮಂಗಳವಾಗಲಿ"–ಎಂದು ಹೇಳಿ ಆ ವಿಮಾನವನ್ನು ಶ್ರೀರಾಮನು ಬೀಳ್ಕೊಟ್ಟನು. ಅನಂತರ ಶ್ರೀರಾಮನು ಅಂಗಳದ ಬಾಗಿಲಿನಲ್ಲಿದ್ದ ದ್ವಾರಪಾಲಕನಿಗೆ ಹೇಳಿದನು :

"ಪ್ರಹರಿ! ನೀನೀಗಲೇ ಲಕ್ಷ್ಮಣ-ಭರತರ ಬಳಿಗೆ ಹೋಗಿ ನಾನು ಬಂದಿರುವ ಸಮಾಚಾರವನ್ನು ತಿಳಿಸುವುದಲ್ಲದೆ ಅವರನ್ನು ಶೀಘ್ರವಾಗಿ ನನ್ನ ಬಳಿಗೆ ಬರುವಂತೆ ಹೇಳು."

೮೨ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೮೩ನೆಯ ಸರ್ಗ

ಭರತನ ಮಾತಿನಂತೆ ಶ್ರೀರಾಮನು ರಾಜಸೂಯಯಾಗವನ್ನು ನಿಲ್ಲಿಸಿದುದು

ತಚ್ಛ್ರುತ್ವಾ ಭಾಷಿತಂ ತಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ದ್ವಾಸ್ಸ್ಥಃ ಕುಮಾರಾವಾಹೂಯ ರಾಘವಾಯ ನ್ಯವೇದಯತ್ ॥೧॥

ಕ್ಲೇಶವಿಲ್ಲದೆಯೇ ಕಾರ್ಯಗಳನ್ನು ಮಾಡುವ ಶ್ರೀರಾಮನು ಹೇಳಿದ ಆ ಮಾತನ್ನು ಕೇಳಿ ದ್ವಾರಪಾಲಕನು ಭರತ-ಲಕ್ಷ್ಮಣರನ್ನು ಕರೆತಂದು ಅವರು ಆಗಮಿಸಿರುವ ವಾರ್ತೆಯನ್ನು ಶ್ರೀರಾಮನಿಗೆ ನಿವೇದಿಸಿದನು.



ಲಕ್ಷ್ಮಣ-ಭರತರಿಬ್ಬರೂ ಬಂದುದನ್ನು ನೋಡಿ ಪರಮಹೃಷ್ಟನಾಗಿ

ಶ್ರೀರಾಮನು ಅವರಿಬ್ಬರನ್ನೂ ಆಲಿಂಗನೆಮಾಡಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಆಸನಗಳಲ್ಲಿ ಕುಳಿತುಕೊಳ್ಳಲು ಹೇಳಿ ; ಅವರಿಬ್ಬರೂ ಕುಳಿತನಂತರ ಈ ಮಾತುಗಳನ್ನು ಹೇಳಿದನು :

"ರಾಘವರೇ! ನಾನು ಬ್ರಾಹ್ಮಣನ ಕಾರ್ಯವನ್ನು ಯಥಾವತ್ತಾಗಿ ನೆರವೇರಿಸಿದೆನು. (ಬ್ರಾಹ್ಮಣಬಾಲಕನು ಬದುಕಿಕೊಂಡನು.) ಈಗ ನಾನು ರಾಜಧರ್ಮಕ್ಕೆ ಮರ್ಯಾದಾರೂಪವಾಗಿರುವ ಶ್ರೇಷ್ಠವಾದ ರಾಜಸೂಯ ಯಾಗವನ್ನು ಮಾಡಬೇಕೆಂದಿರುವೆನು. ಧರ್ಮಸೇತುರೂಪವಾದ ರಾಜಸೂಯಯಾಗವು ಅಕ್ಷಯವೂ ಅವಿನಾಶಿಯೂ ಆದ ಫಲಗಳನ್ನು ಕೊಡತಕ್ಕುದೆಂದೂ, ಧರ್ಮಪೋಷಕವೆಂದೂ, ಸಮಸ್ತಪಾಪಗಳನ್ನೂ ನಿವಾರಿಸತಕ್ಕುದೆಂದೂ ನಾನು ಭಾವಿಸಿದ್ದೇನೆ.

ನೀವಿಬ್ಬರೂ ನನ್ನ ಆತ್ಮಸ್ವರೂಪರೇ ಆಗಿರುವಿರಿ. ನಿಮ್ಮೊಡನೆ ಸೇರಿಕೊಂಡು ನಿಮ್ಮ ಸಹಕಾರದಿಂದ ಶ್ರೇಷ್ಠವಾದ ರಾಜಸೂಯಯಾಗವನ್ನು ಮಾಡಲು ಬಯಸಿದ್ದೇನೆ. ಏಕೆಂದರೆ : ರಾಜನ ಧರ್ಮವು ರಾಜಸೂಯ ಯಾಗದಲ್ಲಿಯೇ ಪ್ರತಿಷ್ಠಿತವಾಗಿದೆ. ಶತ್ರುಸೂದನವಾದ ಮಿತ್ರದೇವತೆಯು ಶ್ರೇಷ್ಠವಾದ ಆಹುತಿಗಳಿಂದ ಯುಕ್ತವಾದ ಶ್ರೇಷ್ಠವಾದ ರಾಜಸೂಯಯಜ್ಞವನ್ನು ಮಾಡಿಯೇ ವರುಣನ ಪದವಿಯನ್ನು ಪಡೆದುಕೊಂಡನು. ಧರ್ಮಜ್ಞನಾದ ಸೋಮದೇವತೆಯು ಧರ್ಮಪೂರ್ವಕವಾಗಿ ರಾಜಸೂಯಯಾಗದ ಅನುಷ್ಠಾನವನ್ನು ಮಾಡಿ ಸಮಸ್ತಲೋಕಗಳಲ್ಲಿಯೂ ಕೀರ್ತಿಯನ್ನೂ ಮತ್ತು ಶಾಶ್ವತವಾದ ಸ್ಥಾನವನ್ನೂ ಪಡೆದುಕೊಂಡನು. ಆದುದರಿಂದ ಇಂದು ನೀವಿಬ್ಬರೂ ನನ್ನೊಡನೆ ಕುಳಿತು ನಾವು ಯಾವ ಕಾರ್ಯವನ್ನು ಮಾಡಿದರೆ ಐಹಿಕವಾದ ಮತ್ತು ಆಮುಷ್ಮಿಕವಾದ ಫಲವು ದೊರೆಯುತ್ತದೆಂಬುದನ್ನು ಸಮಾಲೋಚಿಸಿ ಹೇಳಿರಿ."

ರಾಘವನ ಈ ಮಾತನ್ನು ಕೇಳಿ ವಾಕ್ಯವಿಶಾರದನಾದ ಭರತನು ಕೈಮುಗಿದುಕೊಂಡು ಹೇಳಿದನು :

ತ್ವಯಿ ಧರ್ಮಃ ಪರಃ ಸಾಧೋ ತ್ವಯಿ ಸರ್ವಾ ವಸುಂಧರಾ ।
ಪ್ರತಿಷ್ಠಿತಾ ಮಹಾಬಾಹೋ ಯಶಶ್ಚಾಮಿತವಿಕ್ರಮ ॥೧೦॥

"ಅಮಿತವಾದ ಪರಾಕ್ರಮವುಳ್ಳವನೇ! ಮಹಾಬಾಹುವೇ! ಅಣ್ಣ!

ನಿನ್ನಲ್ಲಿಯೇ ಶ್ರೇಷ್ಠವಾದ ಧರ್ಮವು ಪ್ರತಿಷ್ಠಿತವಾಗಿದೆ. ಈ ಅಖಂಡ ಭೂಮಂಡಲವೂ ನಿನ್ನಲ್ಲಿಯೇ ಅಧಿಷ್ಠಿತವಾಗಿದೆ. ಯಶಸ್ಸು ಕೂಡ ನಿನ್ನಲ್ಲಿಯೇ ಮನೆಮಾಡಿಕೊಂಡಿದೆ. ನೀನು ಮಹಾಯಶೋವಂತನೂ ಆಗಿರುವೆ.

ಮಹೀಪಾಲಾಶ್ಚ ಸರ್ವೇ ತ್ವಾಂ ಪ್ರಜಾಪತಿಮಿವಾಮರಾಃ ।
ನಿರೀಕ್ಷನ್ತೇ ಮಹಾತ್ಮಾನಂ ಲೋಕನಾಥಂ ಯಥಾ ವಯಮ್ ॥೧೧॥

ದೇವತೆಗಳು ಹೀಗೆ ಪ್ರಜಾಪತಿಬ್ರಹ್ಮನನ್ನು ಮಹಾತ್ಮನೆಂದೂ ಲೋಕ ನಾಥನೆಂದೂ ತಿಳಿದಿರುವರೋ ಹಾಗೆಯೇ ಭೂಮಂಡಲದಲ್ಲಿರುವ ರಾಜ ರೆಲ್ಲರೂ ನಿನ್ನನ್ನು ನಾವು ಭಾವಿಸಿರುವಂತೆಯೇ ಮಹಾತ್ಮನೆಂದೂ ಲೋಕ ನಾಥನೆಂದೂ ಭಾವಿಸಿದ್ದಾರೆ.

ಪ್ರಜಾಶ್ಚ ಪಿತೃವದ್ರಾಜನ್ಪಶ್ಯನ್ತಿ ತ್ವಾಂ ಮಹಾಬಲ ।
ಪೃಥಿವ್ಯಾ ಗತಿಭೂತೋಽಸಿ ಪ್ರಾಣಿನಾಮಪಿ ರಾಘವ ॥೧೨॥

ಮಹಾಬಲನೇ! ರಾಘವ! ಮಗನು ತಂದೆಯನ್ನು ಕಾಣುವಂತೆ ರಾಜರು ನಿನ್ನನ್ನು ಕಾಣುತ್ತಾರೆ. ನೀನು ಈ ಭೂಮಂಡಲಕ್ಕೇ ಪರಮಾ ಶ್ರಯನಾಗಿರುವೆ. ಸಮಸ್ತಪ್ರಾಣಿಗಳಿಗೂ ಆಧಾರಭೂತನಾಗಿರುವೆ.

ಅಂತಹ ಪರಮಕಾರುಣಿಕನಾದ ನೀನು ಹಿಂಸೆಯಿಂದ ಕೂಡಿದ ಈ ಯಜ್ಞವನ್ನು ಹೇಗೆ ತಾನೇ ಮಾಡುವೆ? ಈ ಯಜ್ಞಮಾಡುವುದರಿಂದ ಪೃಥಿವಿ ಯಲ್ಲಿರುವ ರಾಜವಂಶಗಳ ವಿನಾಶವೇ ಆಗಿಬಿಡಬಹುದು. ಈ ಭೂಮಂಡಲ ದಲ್ಲಿ ಯಾವ ರಾಜರು ಪೌರುಷಯುಕ್ತರಾಗಿರುವರೋ ಆ ಎಲ್ಲ ರಾಜರ ವಿನಾಶಕ್ಕೂ ಸಮಸ್ತರಿಗೂ ಕೋಪವನ್ನುಂಟುಮಾಡುವ ಈ ಯಜ್ಞವು ಕಾರಣವಾಗುತ್ತದೆ. ಪುರುಷಸಿಂಹನೇ! ಮಹಾಪರಾಕ್ರಮಿಯೇ! ಇಂದು ಭೂಮಂಡಲದಲ್ಲಿರುವ ಸಮಸ್ತರಾಜರೂ ನೀನು ಸದ್ಗುಣಿಯಾಗಿರುವ ಕಾರಣದಿಂದಾಗಿ ನಿನಗೆ ಅಧೀನರಾಗಿರುತ್ತಾರೆ. ಈಗ ರಾಜಸೂಯಯಾಗ ವನ್ನು ಮಾಡಲು ಹೋಗಿ ಎಲ್ಲರ ಮನಸ್ಸಿನಲ್ಲಿಯೂ ಕೋಪವನ್ನು ಹುಟ್ಟಿಸಿ ಅವರೆಲ್ಲರನ್ನೂ ವಿನಾಶಗೊಳಿಸುವುದು ಯೋಗ್ಯವಾಗಿ ಕಾಣುವುದಿಲ್ಲ."

ಸತ್ಯಪರಾಕ್ರಮನಾದ ಶ್ರೀರಾಮನು ಅಮೃತಸದೃಶವಾದ ಭರತನ ಆ ಮಾತುಗಳನ್ನು ಕೇಳಿ ಪರಮಹೃಷ್ಟನಾದನು. ಕೈಕೇಯಿಗೆ ಆನಂದ

ವನ್ನುಂಟುಮಾಡುವ ಭರತನಿಗೆ ಶ್ರೀರಾಮನು ಶುಭಪ್ರದವಾದ ಈ ಮಾತನ್ನು ಹೇಳಿದನು :

"ಪುರುಷಸಿಂಹನೇ! ಭರತ! ನಿನ್ನ ಈ ಮಾತುಗಳಿಂದ ನಾನು ಪ್ರಸನ್ನನಾಗಿದ್ದೇನೆ ಮತ್ತು ಪರಮತುಷ್ಟನಾಗಿದ್ದೇನೆ. ನಿನ್ನ ಈ ಮಾತು ನೈಜವೂ ಧರ್ಮಸಮ್ಮತವೂ ಆಗಿದ್ದು ಅಖಂಡಭೂಮಂಡಲವನ್ನೂ ರಕ್ಷಣೆ ಮಾಡುವುದೂ ಆಗಿದೆ. ನನ್ನ ಮನಸ್ಸಿನಲ್ಲೇನೋ ರಾಜಸೂಯಯಾಗವನ್ನು ಮಾಡಬೇಕೆಂಬ ಸಂಕಲ್ಪವಿದ್ದಿತು. ನೀನು ಹೇಳಿದ ಅಮೃತಮಯವಾದ ಮಾತುಗಳನ್ನು ಕೇಳಿದ ನಂತರ ನಾನು ಶ್ರೇಷ್ಠವಾದ ರಾಜಸೂಯಯಾಗವನ್ನು ಮಾಡಬೇಕೆನ್ನುವ ನಿಶ್ಚಯದಿಂದ ವಿಮುಖನಾಗಿದ್ದೇನೆ.

ಲೋಕಪೀಡಾಕರಂ ಕರ್ಮ ನ ಕರ್ತವ್ಯಂ ವಿಚಕ್ಷಣೈಃ ।
ಬಾಲಾನಾಂ ತು ಶುಭಂ ವಾಕ್ಯಂ ಗ್ರಾಹ್ಯಂ ಲಕ್ಷ್ಮಣಪೂರ್ವಜ ।
ತಸ್ಮಾಚ್ಛೃಣೋಮಿ ತೇ ವಾಕ್ಯಂ ಸಾಧು ಯುಕ್ತಂ ಮಹಾಬಲ ॥೨೦॥

ಲಕ್ಷ್ಮಣಾಗ್ರಜನೇ! ಲೋಕಕ್ಕೆ ಪೀಡೆಯನ್ನುಂಟುಮಾಡತಕ್ಕ ಕಾರ್ಯವನ್ನು ವಿದ್ವಾಂಸನಾದವನು ಮಾಡಲೇಬಾರದು. ಒಳ್ಳೆಯ ಮತ್ತು ಉಚಿತವಾದ ಮಾತನ್ನು ಬಾಲಕರಾಡಿದರೂ ಅದನ್ನು ಗ್ರಹಿಸಲೇಬೇಕು. ಆದುದರಿಂದ ಸಮುಚಿತವೂ ಮತ್ತು ಯುಕ್ತವೂ ಆಗಿರುವ ನಿನ್ನ ಶುಭವಾಕ್ಯವನ್ನು ನಾನು ಕೇಳುತ್ತೇನೆ."

ಆಇನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ಆಳನೆಯ ಸರ್ಗ

ಅಶ್ವಮೇಧಯಾಗದ ಪ್ರಸ್ತಾಪಸಮಯದಲ್ಲಿ ಲಕ್ಷ್ಮಣನು ಇಂದ್ರ–ವೃತ್ರಾಸುರರ ಕಥೆಯನ್ನು ಹೇಳಿದುದು : ವೃತ್ರಾಸುರನ ತಪಸ್ಸಿನ ವರ್ಣನೆ : ವೃತ್ರಾಸುರನನ್ನು ಸಂಹರಿಸುವಂತೆ ವಿಷ್ಣುವಿಗೆ ಇಂದ್ರನ ಪ್ರಚೋದನೆ

ತಥೋಕ್ತವತಿ ರಾಮೇ ತು ಭರತೇ ಚ ಮಹಾತ್ಮನಿ ।
ಲಕ್ಷ್ಮಣೋಽಥ ಶುಭಂ ವಾಕ್ಯಮುವಾಚ ರಘುನನ್ದನಮ್ ॥೧॥

ಶ್ರೀರಾಮನು ಮತ್ತು ಭರತನು ಹೀಗೆ ಪರಸ್ಪರವಾಗಿ ಮಾತನಾಡಿ

ಕೊಳ್ಳುತ್ತಿರಲು ಲಕ್ಷ್ಮಣನು ಶ್ರೀರಾಮನಿಗೆ ಶುಭಕರವಾದ ಈ ಮಾತನ್ನು ಹೇಳಿದನು :

ಅಶ್ವಮೇಧೋ ಮಹಾಯಜ್ಞಃ ಪಾವನಃ ಸರ್ವಪಾಪ್ಮನಾಮ್ ।
ಪಾವನಸ್ತವ ದುರ್ಧರ್ಷೋ ರೋಚತಾಂ ರಘುನನ್ದನ ॥೨॥

"ರಾಘವ! ಅಶ್ವಮೇಧವೆಂಬ ಮಹಾಯಜ್ಞವು ಸಮಸ್ತಪಾಪಗಳನ್ನೂ ಹೋಗಲಾಡಿಸುವ ಪರಮಪವಿತ್ರವಾದ ಮತ್ತು ಸಾಮಾನ್ಯರಿಂದ ದುಷ್ಕರವಾದ ಯಜ್ಞವಾಗಿದೆ. ಆ ಮಹಾಯಜ್ಞವನ್ನು ನೀನು ಮಾಡುವುದು ನನಗೆ ಉಚಿತವಾಗಿ ಕಾಣುತ್ತದೆ.*

ಮಹಾತ್ಮನಾದ ಇಂದ್ರನ ಸಂಬಂಧವಾಗಿ ಹಿಂದೆ ನಡೆದ ವೃತ್ತಾಂತವೊಂದನ್ನು ನಾನು ಕೇಳಿದ್ದೇನೆ. ಬ್ರಹ್ಮಹತ್ಯಾಪಾಪದಿಂದ ಸಮಾವೃತನಾಗಿದ್ದ ಇಂದ್ರನು ಅಶ್ವಮೇಧಯಾಗವನ್ನು ಮಾಡಿ ಪಾಪವನ್ನು ತೊಳೆದುಕೊಂಡು ಪವಿತ್ರನಾದನಂತೆ. ದೇವಾಸುರರ ಸಮೂಹದಲ್ಲಿ ಲೋಕಸಮ್ಮತನಾದ ವೃತ್ರನೆಂಬ ಮಹಾದೈತ್ಯನೊಬ್ಬನಿದ್ದನು. ಆ ಮಹಾದೈತ್ಯನು ನೂರು ಯೋಜನಗಳಷ್ಟು ಅಗಲವಾಗಿಯೂ ಮೂರು ನೂರು ಯೋಜನಗಳಷ್ಟು ಉದ್ದವಾಗಿಯೂ ಇದ್ದನು. ಅವನು ಮೂರು ಲೋಕಗಳನ್ನೂ ಅನುರಾಗದಿಂದಲೂ ಸ್ನೇಹದಿಂದಲೂ ಕಾಣುತ್ತಿದ್ದನು. ಅವನು ಧರ್ಮವನ್ನು ಚೆನ್ನಾಗಿ ತಿಳಿದುಕೊಂಡಿದ್ದನು. ಮಾಡಿದ ಉಪಕಾರವನ್ನು ಎಂದೂ ಮರೆ ಯುತ್ತಿರಲಿಲ್ಲ. ಪರಿಷ್ಕೃತವಾದ ಬುದ್ಧಿಯುಳ್ಳವನಾಗಿದ್ದನು. ಧರ್ಮದಲ್ಲಿಯೇ ಏಕಾಗ್ರವಾದ ಮನಸ್ಸನ್ನಿಟ್ಟು ಸಂಪದ್ಭರಿತವಾದ ಭೂಮಂಡಲವನ್ನು ಧರ್ಮದಿಂದ ಶಾಸನಮಾಡುತ್ತಿದ್ದನು. ವೃತ್ರನು ಶಾಸನಮಾಡುತ್ತಿದ್ದಾಗ ಪೃಥ್ವಿಯು ಸಮಸ್ತಪ್ರಜೆಗಳಿಗೂ ಸಮಸ್ತವಾದ ಕಾಮನೆಗಳನ್ನೂ ಪೂರೈಸುತ್ತಿದ್ದಿತು. ಫಲ-ಪುಷ್ಪಗಳೂ ಕಂದ-ಮೂಲಗಳೂ ರಸವತ್ತಾಗಿರು ತ್ತಿದ್ದುವು. ಮಹಾತ್ಮನಾದ ವೃತ್ರಾಸುರನು ರಾಜ್ಯಭಾರಮಾಡುತ್ತಿದ್ದಾಗ ಬೇಸಾಯವಿಲ್ಲದೆಯೇ ಭೂಮಿಯಲ್ಲಿ ಬೆಳೆಯಾಗುತ್ತಿದ್ದಿತು. ಅವನ ರಾಜ್ಯವು

---

* ಶ್ರುತಿಯೂ ಅಶ್ವಮೇಧಯಜ್ಞದ ವಿಷಯದಲ್ಲಿ ಹೀಗೆ ಹೇಳಿದೆ : ಸರ್ವಂ ಪಾಪ್ಮಾನಂ ತರತಿ ಬ್ರಹ್ಮಹತ್ಯಾಂ ಯೋಽಶ್ವಮೇಧೇನ ಯಜತೇ । (ಯಾವನು ಅಶ್ವಮೇಧಯಜ್ಞವನ್ನು ಮಾಡುತ್ತಾನೋ ಅವನು ಸಕಲಪಾಪಗಳನ್ನೂ ದಾಟುತ್ತಾನೆ.)

ಧನ-ಧಾನ್ಯಗಳಿಂದ ಸಂಪನ್ನವಾಗಿದ್ದಿತು. ಅಂತಹ ಸಂಪದ್ಭರಿತವಾದ ಅದ್ಭುತವಾದ ರಾಜ್ಯವನ್ನು ವೃತ್ರಾಸುರನು ಉಪಭೋಗಿಸುತ್ತಿದ್ದನು.

ಹೀಗೆಯೇ ಇರುತ್ತಿರಲಾಗಿ ವೃತ್ರಾಸುರನಿಗೆ ಶ್ರೇಷ್ಠವಾದೊಂದು ತಪಸ್ಸನ್ನು ಮಾಡಬೇಕೆನ್ನುವ ಮನಸ್ಸಾಯಿತು.

ತಪೋ ಹಿ ಪರಮಂ ಶ್ರೇಯಃ ಸಮ್ಮೋಹಮಿತರತ್ಸುಖಮ್ ॥೯॥

“ತಪಸ್ಸೇ ಪರಮಶ್ರೇಯಸ್ಕರವಾದುದು ಮತ್ತು ಅತಂತ್ಯಸುಖ ದಾಯಕವಾದುದು. ಅದನ್ನು ಬಿಟ್ಟು ಉಳಿದ ಸುಖಗಳೆಲ್ಲವೂ ಕೇವಲ ಮೋಹಕವಾದುವುಗಳು. ನಿಜವಾದ ಸುಖಗಳಲ್ಲ.”

ವೃತ್ರಾಸುರನು ಹೀಗೆ ನಿಶ್ಚಯಿಸಿ ತನ್ನ ಹಿರಿಯಮಗನಾದ ಮಧುರ* ನೆಂಬುವನಿಗೆ ಪಟ್ಟಾಭಿಷೇಕಮಾಡಿ ಸಮಸ್ತದೇವತೆಗಳಿಗೂ ತಾಪವನ್ನುಂಟು ಮಾಡುವ ಉಗ್ರವಾದ ತಪಸ್ಸನ್ನು ಮಾಡತೊಡಗಿದನು. ವೃತ್ರನು ಹೀಗೆ ಉಗ್ರವಾದ ತಪಸ್ಸನ್ನು ಮಾಡುತ್ತಿರಲು ಅತಿಪೀಡಿಸಲ್ಪಟ್ಟವನಂತೆ ಕಾಣುತ್ತಿದ್ದ ಇಂದ್ರನು ವಿಷ್ಣುವನ್ನು ಸಂಧಿಸಿ ಅವನೊಡನೆ ಹೇಳಿದನು :

“ಮಹಾಬಾಹುವೇ! ತಪಸ್ಸುಮಾಡುತ್ತಿರುವಾಗಲೇ ಈ ವೃತ್ರನು ತನ್ನ ತಪಸ್ಸಿನ ಶಕ್ತಿಯಿಂದ ಸಮಸ್ತಲೋಕಗಳನ್ನೂ ಜಯಿಸಿಬಿಟ್ಟಿದ್ದಾನೆ. ಧರ್ಮಾತ್ಮ ನಾದ ಆ ದೈತ್ಯನು ಮಹಾಬಲಿಷ್ಠನಾಗಿಬಿಟ್ಟಿದ್ದಾನೆ. ಆದುದರಿಂದ ಇವನನ್ನು ಶಾಸನಮಾಡಲು ನನ್ನಿಂದಂತೂ ಸಾಧ್ಯವೇ ಇಲ್ಲ. ಅವನು ಹೀಗೆಯೇ ತಪಸ್ಸನ್ನು ಮುಂದುವರಿಸಿದರೆ ಎಂದಿನವರೆಗೆ ಈ ಮೂರು ಲೋಕಗಳೂ ಇರುತ್ತವೆಯೋ ಅಂದಿನವರೆಗೂ ಈ ಎಲ್ಲ ಲೋಕಗಳೂ ಅವನ ಅಧೀನ ದಲ್ಲಿಯೇ ಇರಬೇಕಾಗುತ್ತದೆ. ಸ್ವರ್ಗದಲ್ಲಿರುವ ದೇವತೆಗಳೂ ಭೂಮಂಡಲ

---

* ಈ ಶ್ಲೋಕದಲ್ಲಿ ಸುತಂ ಜ್ಯೇಷ್ಠಂ ಮಧುರೇಶ್ವರಮ್ ಎಂಬುದಾಗಿದೆ. ಇದಕ್ಕೆ ಒಬ್ಬೊಬ್ಬ ವ್ಯಾಖ್ಯಾನಕಾರರು ಒಂದೊಂದು ವಿಧವಾಗಿ ಅರ್ಥಮಾಡಿರುತ್ತಾರೆ.

೧) ಮಧುರ ಎಂಬ ಹಿರಿಯ ಮಗನನ್ನು ರಾಜ್ಯಕ್ಕೆ ಈಶ್ವರನನ್ನಾಗಿ ಮಾಡಿದನನು.

೨) ಮಧುರವಾಗಿ ಮಾತನಾಡುವವರಿಗೆಲ್ಲಾ ಈಶ್ವರನಾದ ಅರ್ಥಾತ್ ಮಧುರ ಭಾಷಿಯಾದ ತನ್ನ ಹಿರಿಯ ಮಗನನ್ನು ; ೩) ಮಧುರಾಪಟ್ಟಣಕ್ಕೆ ರಾಜನನ್ನಾಗಿ ಮಾಡಿದನು.

ದಲ್ಲಿರುವ ಮನುಷ್ಯರೂ ಅವನಿಗೆ ಅಧೀನರಾಗುತ್ತಾರೆ. ಉದಾರಿಯಾದ ಈ ವೃತ್ರಾಸುರನನ್ನು ನೀನು ಉದಾಸೀನಮಾಡುತ್ತಿರುವೆ. ಆದುದರಿಂದಲೇ ಅವನು ದಿನ-ದಿನಕ್ಕೂ ಹೆಚ್ಚು-ಹೆಚ್ಚು ಶಕ್ತಿಶಾಲಿಯಾಗುತ್ತಿದ್ದಾನೆ. ನೀನೇನಾದರೂ ಅವನ ವಿಷಯದಲ್ಲಿ ಕುಪಿತನಾದರೆ ಅವನು ಕ್ಷಣಮಾತ್ರವಾದರೂ ಜೀವಿಸಿರಲಾರನು. ವೃತ್ರಾಸುರನು ಯಾವತ್ತಿನಿಂದ ನಿನ್ನ ಪ್ರೀತಿಗೆ ವಿಷಯನಾದನೋ ಅಂದಿನಿಂದಲೂ ಅವನು ಲೋಕಗಳ ಮೇಲೆ ತನ್ನ ಆಧಿಪತ್ಯವನ್ನು ನಡೆಸುತ್ತಿದ್ದಾನೆ. ಆದುದರಿಂದ ನೀನು ಏಕಾಗ್ರಚಿತ್ತನಾಗಿ ಈ ವಿಷಯವನ್ನು ಸಮಾಲೋಚಿಸಿ ಈ ಮೂರು ಲೋಕಗಳ ವಿಷಯದಲ್ಲಿಯೂ ದಯೆತೋರು. ನೀನು ರಕ್ಷಣೆಯ ಭಾರವನ್ನು ಹೊತ್ತಿರುವುದರಿಂದಲೇ ಈ ಜಗತ್ತಿಂದು ಪ್ರಶಾಂತವಾಗಿಯೂ ರೋಗಗಳಿಂದ ರಹಿತವಾಗಿಯೂ ಇದೆ. ಈ ಎಲ್ಲ ದೇವತೆಗಳೂ ರಕ್ಷಣೆಗಾಗಿ ನಿನ್ನ ಕಡೆಗೇ ಕುತೂಹಲದಿಂದ ನೋಡುತ್ತಿದ್ದಾರೆ. ವೃತ್ರವಧೆಯೆಂಬ ಮಹಾಕಾರ್ಯವನ್ನು ಮಾಡಿ ದೇವತೆಗಳಿಗೆ ಉಪಕರಿಸು. ನೀನು ಯಾವಾಗಲೂ ಮಹಾತ್ಮರಾದ ಈ ದೇವತೆಗಳಿಗೆ ಸಹಾಯವನ್ನೇ ಮಾಡುತ್ತಿರುವೆ. ಹಾಗೆಯೇ ಈಗಲೂ ಮಾಡಬೇಕು. ವೃತ್ರನು ಇತರರಿಂದ ಸಹಿಸಿಕೊಳ್ಳಲು ಅಸಾಧ್ಯನಾಗಿದ್ದಾನೆ. ಅಜೇಯನಾಗಿದ್ದಾನೆ. ಇಂತಹ ಸಮಯದಲ್ಲಿ ಬೇರೆಯ ಗತಿಯನ್ನು ಕಾಣದಿರುವ ನಮಗೆ ನೀನೇ ಪರಮಾಶ್ರಯನಾಗಿರುವೆ."

ಎಳನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೮೫ನೆಯ ಸರ್ಗ

ವಿಷ್ಣುವಿನ ತೇಜಸ್ಸು ಇಂದ್ರನಲ್ಲಿಯೂ ಮತ್ತು ವಜ್ರಾಯುಧದಲ್ಲಿಯೂ ಪ್ರವೇಶಿಸಿದುದು : ವಜ್ರಾಯುಧದಿಂದ ವೃತ್ರಾಸುರನ ವಧೆ : ಬ್ರಹ್ಮಹತ್ಯಾಪಾಪದಿಂದ ಗ್ರಸ್ತನಾದ ಇಂದ್ರನು ಅಂಧಕಾರಮಯವಾದ ಪ್ರದೇಶಕ್ಕೆ ಪ್ರವೇಶಿಸಿದುದು

ಲಕ್ಷ್ಮಣಸ್ಯ ತು ತದ್ವಾಕ್ಯಂ ಶ್ರುತ್ವಾ ಶತ್ರುನಿಬರ್ಹಣಃ ।
ವೃತ್ರಘಾತಮಶೇಷೇಣ ಕಥಯೇತ್ಯಾಹ ಸುವ್ರತಃ ॥೧॥

ಲಕ್ಷ್ಮಣನು ಹೇಳಿದ ಆ ಮಾತನ್ನು ಕೇಳಿ ಶತ್ರುನಾಶಕನಾದ

ಶ್ರೀರಾಮನು–'ಸುವ್ರತನೇ! ವೃತ್ರವಧೆಯನ್ನು ಸಮಗ್ರವಾಗಿ ಹೇಳು'–ಎಂದು ಲಕ್ಷ್ಮಣನಿಗೆ ಹೇಳಿದನು.

ಶ್ರೀರಾಘವನು ಹೀಗೆ ಹೇಳಲು ಸುಮಿತ್ರಾನಂದವರ್ಧನನಾದ ಸುವ್ರತನಾದ ಲಕ್ಷ್ಮಣನು ಪುನಃ ದಿವ್ಯವಾದ ವೃತ್ರಾಸುರವಧೆಯ ಕಥೆಯನ್ನು ಹೇಳಲು ಉಪಕ್ರಮಿಸಿದನು :

"ಪ್ರಭುವೇ! ಸಹಸ್ರಾಕ್ಷನಾದ ಇಂದ್ರನ ಮತ್ತು ಸಮಗ್ರದೇವತೆಗಳ ಪ್ರಾರ್ಥನೆಯನ್ನು ಕೇಳಿ ಇಂದ್ರಪುರಸ್ಸರರಾದ ದೇವತೆಗಳಿಗೆ ಮಹಾವಿಷ್ಣುವು ಹೇಳಿದನು :

"ದೇವತೆಗಳೇ! ನಾನು ಬಹಳ ಹಿಂದೆಯೇ ಮಹಾತ್ಮನಾದ ವೃತ್ರನೊಡನೆ ಸ್ನೇಹಸಂಬಂಧವನ್ನು ಬೆಳೆಸಿದ್ದೇನೆ. ಆದುದರಿಂದ ನಿಮಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ನಾನು ಆ ಮಹಾಸುರರನ್ನು ಸಂಹರಿಸುವುದಿಲ್ಲ. ಆದರೆ ನಿಮ್ಮೆಲ್ಲರಿಗೂ ಪರಮಸುಖವನ್ನುಂಟುಮಾಡುವುದು ನನ್ನ ಅವಶ್ಯಕರ್ತವ್ಯವಾಗಿದೆ. ಆದುದರಿಂದ ವೃತ್ರನ ವಧೆಗೆ ಉಪಾಯವೊಂದನ್ನು ಹೇಳುತ್ತೇನೆ. ಅದರಿಂದ ಇಂದ್ರನು ವೃತ್ರನನ್ನು ಸಂಹರಿಸಲು ಸಮರ್ಥನಾಗುತ್ತಾನೆ. ಸುರಶ್ರೇಷ್ಠರೇ! ನಾನು ನನ್ನ ಸ್ವರೂಪಭೂತವಾದ ತೇಜಸ್ಸನ್ನು ಮೂರು ಭಾಗಗಳನ್ನಾಗಿ ವಿಭಾಗಿಸಿಕೊಳ್ಳುತ್ತೇನೆ. ಇದರಿಂದ ಸಹಸ್ರಾಕ್ಷನು ವೃತ್ರನನ್ನು ಸಂಹರಿಸಲು ಸಮರ್ಥನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಏಕಾಂಶೋ ವಾಸವಂ ಯಾತು ದ್ವಿತೀಯೋ ವಜ್ರಮೇವ ತು ।
ತೃತೀಯೋ ಭೂತಲಂ ಯಾತು ತದಾ ವೃತ್ರಂ ಹನಿಷ್ಯತಿ ॥೭॥

ನನ್ನ ಆತ್ಮಸ್ವರೂಪವಾದ ತೇಜಸ್ಸಿನ ಒಂದಂಶವು ಇಂದ್ರನನ್ನು ಪ್ರವೇಶಿಸುತ್ತದೆ. ಮತ್ತೊಂದು ಅಂಶವು ಇಂದ್ರನ ವಜ್ರಾಯುಧವನ್ನು ಪ್ರವೇಶಿಸುತ್ತದೆ. ಮೂರನೆಯದು ಭೂಮಿಯನ್ನು ಸೇರುತ್ತದೆ. ಹೀಗೆ ನನ್ನ ತೇಜಸ್ಸಿನ ಅಂಶಗಳು ಇಂದ್ರನನ್ನೂ, ವಜ್ರಾಯುಧವನ್ನೂ, ಭೂಮಿಯನ್ನೂ ಸೇರಿಕೊಂಡನಂತರ ಇಂದ್ರನು ವೃತ್ರನನ್ನು ಸಂಹರಿಸುತ್ತಾನೆ."*

---

* ಮಹಾವಿಷ್ಣುವಿನ ತೇಜಸ್ಸಿನಲ್ಲಿ ಮೂರನೆಯ ಅಂಶವು ಭೂಮಿಗೆ ಹೋದುದರ ಕಾರಣವನ್ನು ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ : ವೃತ್ರನ ವಧೆಯಾದನಂತರ

ದೇವೇಶನಾದ ಮಹಾವಿಷ್ಣುವು ಹೀಗೆ ಹೇಳಲು ದೇವತೆಗಳು ಈ ಮಾತನ್ನು ಹೇಳಿದರು :

"ದೈತ್ಯವಿನಾಶನ! ದೇವೇಶ! ನೀನು ಹೇಳಿದುದು ಸರಿಯಾಗಿದೆ. ಇದರಲ್ಲಿ ಸಂಶಯವೇ ಇಲ್ಲ. ನಿನಗೆ ಮಂಗಳವಾಗಲಿ. ವೃತ್ರನ ವಧೆಯನ್ನು ಬಯಸಿರುವ ನಾವೆಲ್ಲರೂ ಹೊರಟುಹೋಗುತ್ತೇವೆ. ಪ್ರಭುವೇ! ನೀನು ನಿನ್ನ ದಿವ್ಯತೇಜಸ್ಸಿನಿಂದ ಇಂದ್ರನನ್ನು ಅನುಗ್ರಹಿಸು."

ಹೀಗೆ ಮಹಾವಿಷ್ಣುವಿಗೆ ಹೇಳಿ ಇಂದ್ರಪ್ರಮುಖರಾದ ಮಹಾತ್ಮರಾದ ದೇವತೆಗಳೆಲ್ಲರೂ ವೃತ್ರನು ತಪಸ್ಸುಮಾಡುತ್ತಿದ್ದ ಆ ಅರಣ್ಯಕ್ಕೆ ಹೋದರು. ಅಲ್ಲವರು ತನ್ನ ತೇಜಸ್ಸಿನಿಂದ ಸರ್ವತ್ರ ವ್ಯಾಪ್ತವಾಗಿದ್ದ, ಮೂರು ಲೋಕಗಳನ್ನೂ ಆಪೋಶನಮಾಡಿಬಿಡುವನೋ ಎಂಬಂತೆಯೂ, ಆಕಾಶವನ್ನೇ ತನ್ನ ಅದ್ಭುತವಾದ ತೇಜಸ್ಸಿನಿಂದ ಭಸ್ಮಮಾಡಿಬಿಡುವನೋ ಎಂಬಂತೆಯೂ ಕಾಣುತ್ತಿದ್ದ, ತಪಸ್ಸಿನಲ್ಲಿ ನಿರತನಾಗಿದ್ದ ವೃತ್ರನನ್ನು ನೋಡಿದರು. ಅಸುರಶ್ರೇಷ್ಠನಾದ ವೃತ್ರನನ್ನು ನೋಡಿದೊಡನೆಯೇ ದೇವತೆಗಳಿಗೆ ಭಯವುಂಟಾಯಿತು. 'ಇವನನ್ನು ವಧಿಸುವುದೆಂತು? ಯಾವ ಉಪಾಯದಿಂದ ನಾವು ಪರಾಜಿತರಾಗದೆ ಹಿಂದಿರುಗುವೆವು?'–ಎಂಬುದಾಗಿ ಅವರೆಲ್ಲರೂ ಯೋಚಿಸತೊಡಗಿದರು. ದೇವತೆಗಳೆಲ್ಲರೂ ಹಾಗೆ ಚಿಂತಿಸುತ್ತಿದ್ದಾಗ ಸಹಸ್ರಾಕ್ಷನಾದ ಇಂದ್ರನು ಎರಡು ಕೈಗಳಿಂದಲೂ ವಜ್ರಾಯುಧವನ್ನೆತ್ತಿಕೊಂಡು ವೃತ್ರಾಸುರನ ತಲೆಯ ಮೇಲೆ ಪ್ರಹರಿಸಿದನು. ಇಂದ್ರನ ಆ ವಜ್ರಾಯುಧವು ಕಾಲಾಗ್ನಿಯಂತೆ ಭಯಂಕರವಾಗಿದ್ದಿತು. ಮಹಾಜ್ವಾಲೆಯಿಂದ ಕೂಡಿ ದೇದೀಪ್ಯಮಾನವಾಗಿ ಕಾಣುತ್ತಿದ್ದಿತು. ಅದರ ಪ್ರಹಾರದಿಂದ ವೃತ್ರನ ಶಿರಸ್ಸು ಕೆಳಕ್ಕೆ ಬಿದ್ದೊಡನೆಯೇ ಪ್ರಪಂಚವೇ ಭಯದಿಂದ ನಡುಗಿಹೋಯಿತು. ಇಂದ್ರನು ನಿರಪರಾಧಿಯಾದ ವೃತ್ರನ ವಧೆಮಾಡಬಾರದಾಗಿದ್ದಿತು. ಈ ವಿಷಯವನ್ನೇ ಬಹಳವಾಗಿ ಚಿಂತಿಸುತ್ತಿದ್ದ ದೇವತೆಗಳಿಗೆ ಒಡೆಯನಾದ ಇಂದ್ರನು ಲೋಕಗಳ ಕಡೆಯ ಭಾಗದಲ್ಲಿದ್ದ ಲೋಕಾಲೋಕಪರ್ವತದ ಆಚೆಯ ಕಡೆಯಲ್ಲಿದ್ದ ಅಂಧ

ದಲ್ಲಿ ಇಂದ್ರನ ಬ್ರಹ್ಮಹತ್ಯಾದೋಷವು ನಿವಾರಣೆಯಾಗುವವರೆಗೂ ಭೂಮಂಡಲವನ್ನು ರಕ್ಷಿಸುವುದಕ್ಕೂ ಹತನಾಗಿ ಬೀಳುವ ವೃತ್ರಾಸುರನನ್ನು ಧರಿಸುವುದಕ್ಕೂ ಮಹಾವಿಷ್ಣುವಿನ ತೇಜಸ್ಸಿನ ಮೂರನೆಯ ಭಾಗವು ಭೂತಲಕ್ಕೆ ಹೋಯಿತು.

ಕಾರಮಯವಾಗಿದ್ದ ಪ್ರದೇಶಕ್ಕೆ ಹೊರಟುಹೋದನು. ಅವನಲ್ಲಿಗೆ ಹೋಗುವ ಸಮಯದಲ್ಲಿ ಬ್ರಹ್ಮಹತ್ಯೆಯು ಅವನ ಬೆನ್ನಟ್ಟಿಹೋಗುತ್ತಿದ್ದಿತು. ಸ್ವಲ್ಪಹೊತ್ತಿನಲ್ಲಿಯೇ ಅವನ ಶರೀರವನ್ನು ಆವರಿಸಿಬಿಟ್ಟಿತು. ಇದರಿಂದಾಗಿ ಇಂದ್ರನಿಗೆ ಅತಿದುಃಖವಾಯಿತು. ಶತ್ರುವೇನೋ ನಾಶವಾದನು. ಆದರೆ ತಮ್ಮ ಸ್ವಾಮಿಯಾದ ಇಂದ್ರನೂ ಅದೃಶ್ಯನಾದನು. ಹೀಗೆ ಶತ್ರುವನ್ನೂ ಇಂದ್ರನನ್ನೂ ಏಕಕಾಲದಲ್ಲಿ ಕಳೆದುಕೊಂಡ ಅಗ್ನಿಪ್ರಮುಖರಾದ ದೇವತೆಗಳು ದುಃಖದ ಪರಿಹಾರಕ್ಕಾಗಿ ತ್ರಿಲೋಕಾಧಿಪತಿಯಾದ ಮಹಾವಿಷ್ಣುವನ್ನು ಪುನಃ ಪುನಃ ಪ್ರಾರ್ಥಿಸತೊಡಗಿದರು.

ತ್ವಂ ಗತಿಃ ಪರಮೇಶಾನ ಪೂರ್ವಜೋ ಜಗತಃ ಪಿತಾ ।
ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಗ್ಮಿವಾನ್ ॥೧೮॥

"ಪರಮೇಶ್ವರನೇ! ನೀನೇ ಜಗತ್ತಿಗೆ ಪರಮಾಶ್ರಯನಾಗಿರುವೆ ಮತ್ತು ಅನಾದಿಯಾದ ತಂದೆಯೂ ನೀನೇ ಆಗಿರುವೆ. ನೀನು ಸಮಸ್ತಪ್ರಾಣಿಗಳ ರಕ್ಷಣೆಗಾಗಿಯೇ ವಿಷ್ಣುರೂಪವನ್ನು ಧರಿಸಿರುವೆ.*

ಹತಶ್ಚಾಯಂ ತ್ವಯಾ ವೃತ್ರೋ ಬ್ರಹ್ಮಹತ್ಯಾ ಚ ವಾಸವಮ್ ।
ಬಾಧತೇ ಸುರಶಾರ್ದೂಲ ಮೋಕ್ಷಂ ತಸ್ಯ ವಿನಿರ್ದಿಶ ॥೧೯॥

ನೀನೇ ನಿನ್ನ ಶಕ್ತಿಯಿಂದ ಈ ವೃತ್ರಾಸುರನನ್ನು ಸಂಹರಿಸಿರುವೆ. ಆದರೆ ಬ್ರಹ್ಮಹತ್ಯೆಯು ಇಂದ್ರನನ್ನು ಪೀಡಿಸುತ್ತಿದೆ. ಇದರ ದೆಸೆಯಿಂದ ಬಿಡುಗಡೆಹೊಂದುವ ಉಪಾಯವನ್ನು ನೀನೇ ಸೂಚಿಸಬೇಕಾಗಿದೆ."

---

* ವಿಷ್ಣುಪುರಾಣದಲ್ಲಿ ವಿಷ್ಣು ಎಂಬುದಕ್ಕೆ ಹೀಗೆ ವಿವರಣೆ ಕೊಟ್ಟಿದ್ದಾರೆ :

ಯಸ್ಮಾದ್ವಿಶ್ವಮಿದಂ ಸರ್ವಂ ಯಸ್ಯ ಶಕ್ತ್ಯಾ ಮಹಾತ್ಮನಃ ।
ತಸ್ಮಾದೇವೋಚ್ಯತೇ ವಿಷ್ಣುಃ ವಿಶಧಾತೋಃ ಪ್ರವೇಶನಾತ್ ॥

'ವಿಶ' ಧಾತುವಿನ ಪ್ರವೇಶಾರ್ಥದಿಂದ (ವಿಶ-ಪ್ರವೇಶನೇ) ಯಾವ ಮಹಾತ್ಮನು ತನ್ನ ಅತುಲವಾದ ಶಕ್ತಿಯಿಂದ ಸಮಸ್ತವಿಶ್ವವನ್ನೂ ಪ್ರವೇಶಿಸುವನೋ ಅಂತಹವನ ಹೆಸರು ವಿಷ್ಣು ಎಂದಾಗಿದೆ.

ವಿಶತಿ ಸರ್ವಭೂತಾನಿ ಇತಿ ವಿಷ್ಣುಃ - ಎಲ್ಲ ಪ್ರಾಣಿಗಳನ್ನೂ ಪ್ರವೇಶಿಸುವುದರಿಂದ ವಿಷ್ಣು. ವಿಶನ್ತಿ ಸರ್ವಭೂತಾನ್ಯಸ್ಮಿನ್ ಇತಿ ವಿಷ್ಣುಃ =ಪ್ರಳಯಕಾಲದಲ್ಲಿ ಎಲ್ಲ ಪ್ರಾಣಿಗಳೂ ಯಾವನಲ್ಲಿ ಪ್ರವೇಶಿಸುವವೋ ಅವನು ವಿಷ್ಣು.

ದೇವತೆಗಳ ಆ ಮಾತನ್ನು ಕೇಳಿ ವಿಷ್ಣುವು ಹೇಳುತ್ತಾನೆ :

ಮಾಮೇವ ಯಜತಾಂ ಶಕ್ರಃ ಪಾವಯಿಷ್ಯಾಮಿ ವಜ್ರಿಣಮ್ ॥೨೦॥

“ದೇವತೆಗಳೇ! ಇಂದ್ರನು ನನ್ನ ಸಲುವಾಗಿಯೇ ಯಜ್ಞಮಾಡಲಿ. ನಾನೇ ಅವನನ್ನು ಪವಿತ್ರಗೊಳಿಸುತ್ತೇನೆ.

ಪುಣ್ಯೇನ ಹಯಮೇಧೇನ ಮಾಮಿಷ್ಟ್ವಾ ಪಾಕಶಾಸನಃ ।
ಪುನರೇಷ್ಯತಿ ದೇವಾನಾಮಿನ್ದ್ರತ್ವಮಕುತೋಭಯಃ ॥೨೧॥

ಪವಿತ್ರವಾದ ಅಶ್ವಮೇಧಯಜ್ಞದ ಮೂಲಕವಾಗಿ ಯಜ್ಞಪುರುಷನಾದ ನನ್ನನ್ನು ಆರಾಧಿಸಿದರೆ ಯಾವ ವಿಧವಾದ ಭಯವೂ ಇಲ್ಲದೆ ಇಂದ್ರನು ದೇವತೆಗಳ ಇಂದ್ರನಾಗುತ್ತಾನೆ. ಇಂದ್ರಪದವಿಯನ್ನು ಪುನಃ ಪಡೆಯುತ್ತಾನೆ.”

ರಾಘವ! ದೇವತೆಗಳ ಸಮ್ಮುಖದಲ್ಲಿ ಮಹಾವಿಷ್ಣುವು ಅಮೃತೋಪಮವಾದ ವಾಣಿಯ ಮೂಲಕವಾಗಿ ಈ ದಿವ್ಯಸಂದೇಶವನ್ನಿತ್ತು ದೇವತೆಗಳಿಂದ ಸ್ತುತಿಸಲ್ಪಡುತ್ತಾ ತನ್ನ ಪರಮಧಾಮಕ್ಕೆ ತೆರಳಿದನು.

ಲ೫ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ಲ೬ನೆಯ ಸರ್ಗ

ಇಂದ್ರನಿಲ್ಲದೆ ಜಗತ್ತಿನಲ್ಲಿ ಅಶಾಂತಿಯುಂಟಾದುದು : ಅಶ್ವಮೇಧಯಾಗದ ಅನುಷ್ಠಾನದಿಂದ ಇಂದ್ರನು ಬ್ರಹ್ಮಹತ್ಯಾಪಾಪದಿಂದ ಮುಕ್ತನಾದುದು

ತದಾ ವೃತ್ರವಧಂ ಸರ್ವಮಖಿಲೇನ ಸ ಲಕ್ಷ್ಮಣಃ ।
ಕಥಯಿತ್ವಾ ನರಶ್ರೇಷ್ಠಃ ಕಥಾಶೇಷಂ ಪ್ರಚಕ್ರಮೇ ॥೧॥

ಹೀಗೆ ಲಕ್ಷ್ಮಣನು ಸಮಗ್ರವಾಗಿ ವೃತ್ರವಧೆಯ ಕಥೆಯನ್ನು ಹೇಳಿದ ನಂತರ ಉಳಿದ ಕಥೆಯನ್ನು ಹೇಳಲುಪಕ್ರಮಿಸಿದನು.

“ಅಣ್ಣ! ದೇವತೆಗಳಿಗೆ ಭಯಂಕರನಾಗಿದ್ದ ಮಹಾವೀರ್ಯನಾಗಿದ್ದ ವೃತ್ರಾಸುರನು ಹೀಗೆ ಇಂದ್ರನಿಂದ ಹತನಾಗಲು ನಿರಪರಾಧಿಯಾದ ಬ್ರಾಹ್ಮಣನನ್ನು ಸಂಹರಿಸಿದ ಕಾರಣದಿಂದ ಬ್ರಹ್ಮಹತ್ಯಾಪಾಪವು ಇಂದ್ರ

ನನ್ನು ಆವರಿಸಿತು. ಇದರಿಂದಾಗಿ ಮೂರ್ಛೆಗೊಂಡ ಇಂದ್ರನಿಗೆ ಬಹಳ ಹೊತ್ತಿನವರೆಗೂ ಎಚ್ಚರವೇ ಆಗಲಿಲ್ಲ. ಲೋಕಗಳ ಎಲ್ಲೆಯ ಆಚೆ ಗಾಢಾಂಧಕಾರವಿದ್ದ ಪ್ರದೇಶಕ್ಕೆ ಬುದ್ಧಿಗೆಟ್ಟಿದ್ದ ಇಂದ್ರನು ಹೋಗಿ ಅಲ್ಲಿ ಸ್ವಲ್ಪಕಾಲದವರೆಗೆ ಹಾವಿನಂತೆ ಹೊರಳಾಡುತ್ತಾ ನಿಟ್ಟುಸಿರುಬಿಡುತ್ತಾ ಕಾಲ ವನ್ನು ಕಳೆಯುತ್ತಿದ್ದನು. ಇಂದ್ರನು ಅದೃಶ್ಯನಾದ ಕಾರಣ ಸಕಲಲೋಕಗಳೂ ವ್ಯಾಕುಲಗೊಂಡುವು. ಭೂಮಿಯು ಹಾಳಾಗಿಹೋಗಿರುವಂತೆ ಕಾಣು ತ್ತಿದ್ದಿತು. ಅದರಲ್ಲಿ ಆರ್ದ್ರತೆಯೇ (ತೇವವೇ) ಇರಲಿಲ್ಲ. ಅರಣ್ಯದಲ್ಲಿದ್ದ ವೃಕ್ಷಗಳೆಲ್ಲವೂ ಒಣಗಿಹೋದುವು. ನದಿಗಳಲ್ಲಿ ಪ್ರವಾಹವಾಗಲೀ ಕೆರೆ-ಕಟ್ಟೆ-ಸರೋವರಗಳಲ್ಲಿ ನೀರಾಗಲೀ ಇರಲಿಲ್ಲ. ಅನಾವೃಷ್ಟಿಯ ಕಾರಣ ದಿಂದಾಗಿ ಪ್ರಾಣಿಗಳಿಗೆ ಮಹಾಭಯವೇ ಉಂಟಾಯಿತು. ಭೂಮಂಡಲವು ಹೀಗೆ ಅನಾವೃಷ್ಟಿಯಿಂದ ಕ್ಷೀಣಿಸುತ್ತಿರಲಾಗಿ ದೇವತೆಗಳ ಮನಸ್ಸೂ ಕಳವಳ ಗೊಂಡಿತು. ಆ ಸಮಯದಲ್ಲವರು ಹಿಂದೆ ಮಹಾವಿಷ್ಣುವು ಹೇಳಿದ್ದ ಅಶ್ವ ಮೇಧಯಾಗವನ್ನು ಜ್ಞಾಪಿಸಿಕೊಂಡರು. ಬಳಿಕ ದೇವತೆಗಳು ದೇವಗುರುವಾದ ಬೃಹಸ್ಪತಿಯನ್ನೂ ಋಷಿಗಳನ್ನೂ ಕರೆದುಕೊಂಡು ಭಯಮೋಹಿತನಾಗಿದ್ದ ಇಂದ್ರನಿದ್ದೆಡೆಗೆ ಹೋದರು. ಅಲ್ಲವರು ಬ್ರಹ್ಮಹತ್ಯೆಯಿಂದ ಸಮಾವೃತನಾಗಿದ್ದ ಇಂದ್ರನನ್ನು ಕಂಡರು. ಅನಂತರ ಅವರು ಇಂದ್ರನನ್ನೇ ಮುಂದೆಮಾಡಿಕೊಂಡು ಅಶ್ವಮೇಧಯಾಗವನ್ನು ಮಾಡಲು ಉಪಕ್ರಮಿಸಿದರು. ಮಹಾತ್ಮನಾದ ಮಹೇಂದ್ರನ ಆ ಅಶ್ವಮೇಧಯಾಗವು ಮುಂದುವರಿಯಿತು. ಬ್ರಹ್ಮಹತ್ಯಾಪಾಪದಿಂದ ಬಿಡಿಸಿಕೊಳ್ಳಲು ಮತ್ತು ಹಿಂದಿನಂತೆಯೇ ಪರಿಶುದ್ಧನಾಗಲು ಇಂದ್ರನು ಆ ಯಾಗವನ್ನು ಮಾಡುತ್ತಿದ್ದನು. ಯಜ್ಞವು ಪೂರ್ಣವಾಗಲು ಇಂದ್ರನನ್ನು ಆವರಿಸಿಕೊಂಡಿದ್ದ ಬ್ರಹ್ಮಹತ್ಯಾಧಿದೇವತೆಯು ದೇವತೆಗಳ ಬಳಿಗೆ ಹೋಗಿ-ಮುಂದೆ ತನ್ನ ಸ್ಥಾನವೆಲ್ಲಿ–ಎಂದು ಪ್ರಶ್ನಿಸಿತು. ಬ್ರಹ್ಮಹತ್ಯಾಧಿದೇವತೆಯ ಈ ಮಾತನ್ನು ಕೇಳಿ ಪರಮಸಂತುಷ್ಟರಾದ ದೇವತೆಗಳು ಹೇಳಿದರು :

ಚತುರ್ಧಾ ವಿಭಜಾತ್ಮಾನಮಾತ್ಮನೈವ ದುರಾಸದೇ ॥೧೧॥

"ದುರ್ಜಯವಾದ ಶಕ್ತಿಯುಳ್ಳ ಬ್ರಹ್ಮಹತ್ಯಾಧಿದೇವತೆಯೇ! ನೀನು ನಿನ್ನನ್ನೇ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿಕೋ."

ಮಹಾತ್ಮರಾದ ದೇವತೆಗಳು ಹೇಳಿದ ಈ ಮಾತನ್ನು ಕೇಳಿ ಇಂದ್ರನ ಶರೀರದಲ್ಲಿ ಬಹಳ ಕಷ್ಟದಿಂದ ವಾಸಮಾಡುತ್ತಿದ್ದ ಬ್ರಹ್ಮಹತ್ಯಾಧಿದೇವತೆಯು ದೇವತೆಗಳು ಹೇಳಿದಂತೆ ತನ್ನ ಶರೀರವನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಕೊಂಡು ಇಂದ್ರನ ಶರೀರವನ್ನು ಬಿಟ್ಟು ಬೇರೆಡೆಗಳಲ್ಲಿ ವಾಸಮಾಡಲು ಅವ ಕಾಶಕೊಡುವಂತೆ ದೇವತೆಗಳನ್ನು ಪ್ರಾರ್ಥಿಸಿಕೊಂಡಳು.

ಏಕೇನಾಂಶೇನ ವತ್ಸ್ಯಾಮಿ ಪೂರ್ಣೋದಾಸು ನದೀಷು ವೈ ।
ಚತುರೋ ವಾರ್ಷಿಕಾನ್ಮಾಸಾನ್ದರ್ಪಘ್ನೀ ಕಾಮಚಾರಿಣೀ ॥೧೩॥

"ನಾನು ನನ್ನ ಒಂದಂಶದಿಂದ ವರ್ಷದಲ್ಲಿ ನಾಲ್ಕು ಮಾಸಗಳ ಕಾಲ ತುಂಬಿದ ಪ್ರವಾಹವಿರುವ ನದಿಗಳಲ್ಲಿ ವಾಸಮಾಡುತ್ತೇನೆ. ಆ ಸಮಯದಲ್ಲಿ ನಾನು ಸ್ವೇಚ್ಛೆಯಿಂದ ವಿಹರಿಸುತ್ತೇನೆ ಮತ್ತು ಇತರರ ದರ್ಪವನ್ನು ಅಡಗಿಸುತ್ತೇನೆ.

ಭೂಮ್ಯಾಮಹಂ ಸರ್ವಕಾಲಮೇಕೇನಾಂಶೇನ ದುರ್ವಸಾ ।
ವಸಿಷ್ಯಾಮಿ ನ ಸಂದೇಹಃ ಸತ್ಯೇನೈತದ್ಬ್ರವೀಮಿ ವಃ ॥೧೪॥

ನನ್ನ ಮತ್ತೊಂದು ಅಂಶದಿಂದ ನಾನು ಭೂಮಿಯಲ್ಲಿ ಎಲ್ಲ ಕಾಲ ಗಳಲ್ಲಿಯೂ ಇರುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ. ಸತ್ಯವಾದ ಈ ಮಾತನ್ನು ನಾನು ನಿಮ್ಮೊಡನೆ ಹೇಳುತ್ತಿದ್ದೇನೆ.

ಯೋಽಯಮಂಶಸ್ತೃತೀಯೋ ಮೇ ಸ್ತ್ರೀಷು ಯೌವನಶಾಲಿಷು ।
ತ್ರಿರಾತ್ರಂ ದರ್ಪಪೂರ್ಣಾಸು ವಸಿಷ್ಯೇ ದರ್ಪಘಾತಿನೀ ॥೧೫॥

ನನ್ನ ಈ ಮೂರನೆಯ ಅಂಶದಿಂದ ನಾನು ಗರ್ವಿಷ್ಠೆಯರಾಗಿರುವ ಯುವತಿಯರಲ್ಲಿ ಪ್ರತಿ ತಿಂಗಳಲ್ಲಿಯೂ ಮೂರು ದಿವಸಗಳವರೆಗೆ ವಾಸ ವಾಗಿದ್ದು ಅವರ ದರ್ಪವನ್ನು ಮುರಿಯುತ್ತೇನೆ.

ಹನ್ತಾರೋ ಬ್ರಾಹ್ಮಣಾನ್ಯೇ ತು ಮೃಷಾಪೂರ್ವಮದೂಷಕಾನ್ ।
ತಾಂಶ್ಚತುರ್ಥೇನ ಭಾಗೇನ ಸಂಶ್ರಯಿಷ್ಯೇ ಸುರರ್ಷಭಾಃ ॥೧೬॥

ಸುರಶ್ರೇಷ್ಠರೇ! ನನ್ನ ನಾಲ್ಕನೆಯ ಅಂಶದಿಂದ ನಾನು–ಸುಳ್ಳು ಹೇಳಿ, ಇತರರನ್ನು ದೂಷಿಸದಿರುವ ಬ್ರಾಹ್ಮಣರ ಹತ್ಯೆಮಾಡಿದವರಲ್ಲಿ ಸೇರಿಕೊಳ್ಳುತ್ತೇನೆ."

ಬ್ರಹ್ಮಹತ್ಯಾಧಿದೇವತೆಯ ಈ ಮಾತನ್ನು ಕೇಳಿ ದೇವತೆಗಳು ಹೇಳಿದರು:

"ವಾಸಕ್ಕೆ ಕಷ್ಟವಾದವಳೇ! ನೀನು ಹೇಳಿದಂತೆಯೇ ಎಲ್ಲವೂ ನಡೆಯಲಿ. ನಿನಗೆ ಅಭೀಷ್ಟವಾದುದನ್ನು ಸಾಧಿಸಿಕೊ."

ದೇವತೆಗಳು ಹೀಗೆ ಹೇಳಿದನಂತರ ಬ್ರಹ್ಮಹತ್ಯಾಧಿದೇವತೆಯು ಅದೃಶ್ಯಳಾದಳು. ಪರಮಪ್ರೀತರಾದ ದೇವತೆಗಳು ಸಹಸ್ರಾಕ್ಷನನ್ನು ಅಭಿವಂದಿಸಿದರು. ಇಂದ್ರನು ಪಾಪರಹಿತನೂ ನಿಶ್ಚಿಂತನೂ ಆದನು. ಸಹಸ್ರಾಕ್ಷನು ಇಂದ್ರಪದವಿಯಲ್ಲಿ ಪುನಃ ಪ್ರತಿಷ್ಠಿತನಾಗಲಾಗಿ ಸಮಸ್ತಜಗತ್ತೂ ಪ್ರಶಾಂತವಾಯಿತು. ತನ್ನ ಪಾಪವನ್ನು ಹೋಗಲಾಡಿಸಿದ ಅದ್ಭುತಶಕ್ತಿಶಾಲಿಯಾದ ಯಜ್ಞವನ್ನು ಇಂದ್ರನು ಬಹಳವಾಗಿ ಪ್ರಶಂಸಿಸಿದನು.

ರಾಘವ! ಅಶ್ವಮೇಧಯಜ್ಞದ ಪ್ರಭಾವವು ಇಂತಹುದು. ಆದುದರಿಂದ ನೀನೂ ಕೂಡ ಅಶ್ವಮೇಧಯಜ್ಞದ ಮೂಲಕವಾಗಿ ದೇವತೆಗಳನ್ನು ಆರಾಧಿಸು."

ಲಕ್ಷ್ಮಣನ ಉತ್ತಮವಾದ ಮತ್ತು ಅತ್ಯಂತ ಮನೋಹರವಾದ ಈ ಮಾತುಗಳನ್ನು ಕೇಳಿ ಮಹಾತ್ಮನಾದ ಇಂದ್ರಸಮಾನಪರಾಕ್ರಮಿಯಾದ ಮತ್ತು ಮಹಾಬಲಿಷ್ಠನಾದ ಶ್ರೀರಾಮನು ಪ್ರಸನ್ನನೂ ಪರಮತುಷ್ಟನೂ ಆದನು.

೮೬ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೮೭ನೆಯ ಸರ್ಗ

ಶ್ರೀರಾಮನು ಲಕ್ಷ್ಮಣನಿಗೆ ಇಲನೆಂಬ ರಾಜನ ಕಥೆಯನ್ನು ಹೇಳಿದುದು

ತಚ್ಛ್ರುತ್ವಾ ಲಕ್ಷ್ಮಣೇನೋಕ್ತಂ ವಾಕ್ಯಂ ವಾಕ್ಯವಿಶಾರದಃ ।
ಪ್ರತ್ಯುವಾಚ ಮಹಾತೇಜಾಃ ಪ್ರಹಸನ್ರಾಘವೋ ವಚಃ ॥೧॥

ಮಾತನಾಡುವುದರಲ್ಲಿ ನಿಪುಣನಾದ ಮಹಾತೇಜಸ್ವಿಯಾದ ಶ್ರೀರಾಮನು ಲಕ್ಷ್ಮಣನ ಈ ಮಾತುಗಳನ್ನು ಕೇಳಿ ನಗು-ನಗುತ್ತಲೇ ಹೇಳಿದನು:

"ನರಶ್ರೇಷ್ಠನೇ! ಲಕ್ಷ್ಮಣ! ನೀನು ಸಮಗ್ರವಾಗಿ ಹೇಳಿದ ವೃತ್ರಾಸುರನ ಕಥೆ ಮತ್ತು ಅಶ್ವಮೇಧಯಾಗದ ಫಲ–ಈ ಪ್ರಕರಣಗಳು ನೀನು ಹೇಳಿದಂತೆಯೇ ಸರಿ.

ಹಿಂದೆ ಕರ್ದಮಪ್ರಜಾಪತಿಗೆ ಇಲನೆಂಬ ಹೆಸರಿನ ಶ್ರೀಮಂತನಾದ ಮಗನಿದ್ದನೆಂದು ನಾವು ಕೇಳಿದ್ದೇವೆ. ಅವನು ಬಾಹ್ಲಿಕದೇಶಕ್ಕೆ ರಾಜನಾಗಿದ್ದನು ಮತ್ತು ಪರಮಧಾರ್ಮಿಕನೂ ಆಗಿದ್ದನು. ಮಹಾಯಶೋವಂತನಾದ ಆ ಇಲನು ಅಖಂಡವಾದ ಭೂಮಂಡಲವನ್ನೂ ತನ್ನ ಸ್ವಾಧೀನಮಾಡಿಕೊಂಡು ರಾಜ್ಯದ ಪ್ರಜೆಗಳನ್ನು ತನ್ನ ಮಕ್ಕಳಂತೆಯೇ ಪರಿಪಾಲಿಸುತ್ತಿದ್ದನು. ಪರಮೋದಾರರಾದ ದೇವತೆಗಳೂ, ಮಹಾಧನಿಗಳಾದ ದೈತ್ಯರೂ, ನಾಗ-ರಾಕ್ಷಸ-ಗಂಧರ್ವರೂ, ಮಹಾತ್ಮರಾದ ಯಕ್ಷರೂ ಇಲರಾಜನಿಗೆ ಭಯ ಗೊಂಡು ಅವನನ್ನು ಸ್ತೋತ್ರಗಳಿಂದಲೂ, ಸತ್ಕಾರಗಳಿಂದಲೂ ಅನುದಿನವೂ ಸಂತುಷ್ಟಿಗೊಳಿಸುತ್ತಿದ್ದರು. ಮಹಾತ್ಮನಾದ ಇಲರಾಜನು ಕೋಪಗೊಂಡ ನೆಂದರೆ ಮೂರು ಲೋಕಗಳೂ ಭಯದಿಂದ ನಡುಗುತ್ತಿದ್ದುವು. ಇಷ್ಟು ಪ್ರಭಾವಶಾಲಿಯಾಗಿದ್ದರೂ ಬಾಹ್ಲಿಕದೇಶದ ಸ್ವಾಮಿಯಾದ ಮಹಾಯಶೋ ವಂತನಾದ ಇಲನು ಪರಮೋದಾರನಾಗಿಯೂ, ಧರ್ಮನಿಷ್ಠನಾಗಿಯೂ ಇದ್ದನು. ಅವನ ಪರಾಕ್ರಮವೂ ಮತ್ತು ಬುದ್ಧಿಯೂ ಸ್ಥಿರವಾಗಿದ್ದುವು. ಚೈತ್ರ ಮಾಸದಲ್ಲಿ ಒಮ್ಮೆ ಇಲರಾಜನು ಸೇವಕರೊಡನೆಯೂ, ಸೇನಾಪತಿಗಳೊಡ ನೆಯೂ ಮತ್ತು ಆನೆ-ಕುದುರೆಗಳೊಡನೆಯೂ ಸುಂದರವಾದೊಂದು ಕಾಡಿಗೆ ಹೋಗಿ ಬೇಟೆಯಾಡಲು ಪ್ರಾರಂಭಿಸಿದನು. ಅತ್ಯಲ್ಪಸಮಯದಲ್ಲಿಯೇ ರಾಜನು ಆ ಸುಂದರವಾದ ಅರಣ್ಯದಲ್ಲಿದ್ದ ನೂರಾರು-ಸಾವಿರಾರು ಮೃಗಗಳನ್ನು ಸಂಹರಿಸಿದನು. ಆದರೂ ಅವನಿಗೆ ಬೇಟೆಯಾಡುವುದರಲ್ಲಿ ತೃಪ್ತಿಯುಂಟಾಗಲಿಲ್ಲ. ಇನ್ನೂ ಬೇಟೆಯಾಡಬೇಕೆಂಬ ಆಸೆಯಿಂದ ರಾಜನು ಮುಂದೆ-ಮುಂದೆ ಹೋಗುತ್ತಾ ಹತ್ತುಸಾವಿರ ಮೃಗಗಳನ್ನು ಸಂಹರಿಸಿದನು. ಹಾಗೆಯೇ ಮುನ್ನಡೆಯುತ್ತಾ ಇಲನು ಮಹಾಸೇನನು (ಕಾರ್ತಿಕೇಯನು) ಹುಟ್ಟಿದ ಪ್ರದೇಶಕ್ಕೆ ಹೋದನು. ಆ ಸ್ಥಳದಲ್ಲಿ ದೇವತೆಗಳ ಒಡೆಯನಾದ ದುರ್ಜಯನಾದ ಪರಶಿವನು ಸಮಸ್ತ ಅನುಚರರೊಡನೆ ಕೂಡಿಕೊಂಡು ಗಿರಿರಾಜಸುತೆಯಾದ ಉಮಾದೇವಿಯೊಡನೆ ವಿಹರಿಸುತ್ತಿದ್ದನು. ವೃಷಭ

ಧ್ವಜನಾದ ಉಮೇಶನಾದ ಸದಾಶಿವನು ಉಮಾದೇವಿಯನ್ನು ಸಂತೋಷ ಗೊಳಿಸುವ ಸಲುವಾಗಿ ತಾನೂ ಸ್ತ್ರೀರೂಪವನ್ನು ಧರಿಸಿ ಪತ್ನಿಯೊಡನೆ ಪರ್ವತದಲ್ಲಿ ಹರಿಯುತ್ತಿದ್ದ ನದಿಯ ತೀರದಲ್ಲಿ ವಿಹರಿಸುತ್ತಿದ್ದನು. ಮಹಾ ದೇವನು ಸ್ತ್ರೀರೂಪವನ್ನು ಧರಿಸಿದ್ದನಾದ ಕಾರಣದಿಂದ ಆ ಪ್ರದೇಶದಲ್ಲಿದ್ದ ಗಂಡುಪ್ರಾಣಿಗಳೂ, ವೃಕ್ಷಗಳೂ ಎಲ್ಲವೂ ಸ್ತ್ರೀಲಿಂಗವಾಗಿ ಪರಿವರ್ತನ ಹೊಂದಿದುವು. ಆ ಸಮಯಕ್ಕೆ ಸರಿಯಾಗಿ ಇಲನು ಬೇಟೆಯಾಡುತ್ತಾ ಆ ಪ್ರದೇಶಕ್ಕೆ ಬಂದನು. ಆ ಪ್ರದೇಶದಲ್ಲಿದ್ದ ಎಲ್ಲ ಪ್ರಾಣಿಗಳೂ ಸ್ತ್ರೀತ್ವವನ್ನು ಹೊಂದಿದ್ದುದಲ್ಲದೆ ತಾನೂ ತನ್ನ ಪರಿವಾರದವರೂ ಸ್ತ್ರೀಯರಾಗಿ ಪರಿವರ್ತನ ಹೊಂದಿರುದನ್ನು ಇಲನು ಗಮನಿಸಿದನು. ತನಗಾದ ಆ ಅವಸ್ಥೆಯನ್ನು ನೋಡಿ ರಾಜನು ಬಹಳ ದುಃಖಿತನಾದನು. ಇದೆಲ್ಲವೂ ಉಮಾಪತಿಯಾದ ಮಹಾದೇವನ ಇಚ್ಛೆಯಂತೆ ಆಗಿರುವುದೆಂಬುದನ್ನು ತಿಳಿದು ರಾಜನಿಗೆ ಭಯವೂ ಆಯಿತು. ಅನಂತರ ಭೃತ್ಯ-ಬಲಸಮೇತನಾದ ಇಲನು ಮಹಾತ್ಮನಾದ ಕಪರ್ದಿಯಾದ ಶಿತಿಕಂಠನಿಗೆ ಶರಣುಹೊಂದಿದನು. ವರದ ನಾದ ಉಮಾದೇವಿಯೊಡನಿದ್ದ ಮಹೇಶ್ವರನು ಗಹ-ಗಹಿಸಿ ನಗುತ್ತಾ ಕರ್ದಮಪ್ರಜಾಪತಿಯ ಮಗನಾದ ಇಲನಿಗೆ ಹೇಳಿದನು :

"ರಾಜರ್ಷಿಯೇ! ಮಹಾಬಲನೇ! ಕರ್ದಮಪುತ್ರನೇ! ಸುವ್ರತನೇ! ಮೇಲೇಳು. ಪುರುಷತ್ವವೊಂದನ್ನು ಬಿಟ್ಟು ಬೇರೆ ಯಾವುದಾದರೂ ವರವನ್ನು ಕೇಳಿಕೊ."

ಮಹಾತ್ಮನಾದ ಮಹಾದೇವನು ಹೀಗೆ ಹೇಳಲು ಅತ್ಯಂತದುಃಖಿತ ನಾಗಿದ್ದ, ಸ್ತ್ರೀತ್ವವನ್ನು ಹೊಂದಿದ್ದ ಇಲನು ಪುರುಷತ್ವವೊಂದನ್ನು ಬಿಟ್ಟು ಬೇರೆ ಯಾವ ವರವನ್ನೂ ಕೇಳಲಿಲ್ಲ.

ಬಳಿಕ ಮಹಾಶೋಕದಿಂದ ಪೀಡಿತನಾಗಿದ್ದ ಇಲರಾಜನು ಪರ್ವತ ರಾಜಕುಮಾರಿಯಾದ ಉಮಾದೇವಿಯ ಚರಣಗಳಿಗೆ ಸರ್ವಾತ್ಮನಾ ಬಿದ್ದು ಬೇಡಿಕೊಂಡನು.

ಈಶೇ ವರಾಣಾಂ ವರದೇ ಲೋಕಾನಾಮಸಿ ಭಾಮಿನಿ ।
ಅಮೋಘದರ್ಶನೇ ದೇವಿ ಭಜ ಸೌಮ್ಯೇನ ಚಕ್ಷುಷಾ ॥೨೨॥

"ಸರ್ವೇಶ್ವರಳೇ! ಭಕ್ತರ ಸಮಸ್ತವಾದ ವರಗಳನ್ನೂ ದಯಪಾಲಿಸು

ವವಳೇ! ಸಮಸ್ತಲೋಕಗಳಿಗೂ ವರಗಳನ್ನು ದಯಪಾಲಿಸುವವಳೇ! ಭಾಮಿನಿಯೇ! ನಿನ್ನ ದರ್ಶನವು ಯಾವಾಗಲೂ ನಿಷ್ಫಲವಾಗುವುದಿಲ್ಲ. ಆದುದರಿಂದ ನೀನು ನಿನ್ನ ಸೌಮ್ಯದೃಷ್ಟಿಯಿಂದ ನನ್ನನ್ನು ಅನುಗ್ರಹಿಸು."

ರಾಜರ್ಷಿಯಾದ ಇಲನ ಮನೋಗತವಾದ ಅಭಿಪ್ರಾಯವನ್ನು ತಿಳಿದು ರುದ್ರನಿಗೆ ಪರಮಪ್ರಿಯಳಾದ ಉಮಾದೇವಿಯು ಶುಭಕರವಾದ ಈ ಮಾತನ್ನು ಇಲನಿಗೆ ಹೇಳಿದಳು :

ಅರ್ಧಸ್ಯ ದೇವೋ ವರದೋ ವರಾರ್ಧಸ್ಯ ತವ ಹ್ಯಹಮ್ ।
ತಸ್ಮಾದರ್ಧಂ ಗೃಹಾಣ ತ್ವಂ ಸ್ತ್ರೀಪುಂಸೋರ್ಯಾವದಿಚ್ಛಸಿ ॥೨೪॥

"ಮಹಾರಾಜ! ನೀನು ಪುರುಷತ್ವಪ್ರಾಪ್ತಿರೂಪವಾದ ಯಾವ ವರವನ್ನು ಕೇಳಿರುವೆಯೋ ಅದರ ಅರ್ಧಭಾಗ ವರವನ್ನು ಕೊಡತಕ್ಕವನು ಪರಮೇಶ್ವರನು. ಉಳಿದ ಅರ್ಧಭಾಗವನ್ನು ನಾನು ಕೊಡುವೆನು. ಮಹೇಶ್ವರನ ಇಚ್ಛೆಯಂತೆ ನಿನಗೆ ಆಜೀವಪರ್ಯಂತವಾಗಿ ಸ್ತ್ರೀತ್ವವು ಲಭಿಸಿದೆ. ಅದರಲ್ಲಿ ಅರ್ಧಭಾಗವನ್ನು ಮಾತ್ರ ನಾನು ನನ್ನ ವರಪ್ರದಾನದಿಂದ ನೀಗಿಸಬಲ್ಲೆನು. ಆದುದರಿಂದ ಉಳಿದಿರುವ ನಿನ್ನ ಜೀವನದಲ್ಲಿ ಅರ್ಧಭಾಗ ಪುರುಷತ್ವವನ್ನು ನೀನು ಯಾವಾಗ ಪಡೆದುಕೊಳ್ಳಲು ಇಚ್ಛಿಸುವೆಯೆಂಬುದನ್ನು ಹೇಳು."

ಪಾರ್ವತೀದೇವಿಯ ಅತ್ಯಂತಶ್ರೇಷ್ಠವಾದ ಮತ್ತು ಪರಮಾದ್ಭುತವಾದ ಈ ವರವನ್ನು ಕೇಳಿ ಪರಮಸಂತುಷ್ಟನಾದ ಇಲನು ಹೇಳಿದನು :

ಯದಿ ದೇವಿ ಪ್ರಸನ್ನಾ ಮೇ ರೂಪೇಣಾಪ್ರತಿಮಾ ಭುವಿ ।
ಮಾಸಂ ಸ್ತ್ರೀತ್ವಮುಪಾಸಿತ್ವಾ ಮಾಸಂ ಸ್ಯಾಂ ಪುರುಷಃ ಪುನಃ ॥೨೬॥

"ದೇವಿ! ನನ್ನಲ್ಲಿ ನೀನು ಪ್ರಸನ್ನಳಾಗಿರುವುದಾದರೆ ಈ ವರವನ್ನು ದಯಪಾಲಿಸು. ರೂಪದಲ್ಲಿ ಅಪ್ರತಿಮಳಾದ ಸ್ತ್ರೀಯಾಗಿದ್ದು ಒಂದು ಮಾಸವನ್ನು ಕಳೆಯುವೆನು. ಅನಂತರ ಪುರುಷನಾಗಿ ಮತ್ತೊಂದು ಮಾಸವನ್ನು ಕಳೆಯುವೆನು. ಹೀಗೆಯೇ ಒಂದು ತಿಂಗಳು ಪುರುಷನಾಗಿಯೂ ಒಂದು ತಿಂಗಳೂ ಸ್ತ್ರೀಯಾಗಿಯೂ ಇರುತ್ತಾ ನನ್ನ ಆಯುಷ್ಯವನ್ನು ಕಳೆಯುವೆನು."

ಇಲರಾಜನ ಮನೋವಾಂಛಿತವನ್ನು ತಿಳಿದ ಸುಂದರಮುಖಿಯಾದ ಪಾರ್ವತಿದೇವಿಯು ನಿನ್ನ ಇಚ್ಛೆಯಂತೆಯೇ ನಡೆಯುತ್ತದೆಂದು ರಾಜನಿಗೆ ಹೇಳಿದಳು.

ರಾಜನ್ಪುರುಷಭೂತಸ್ತ್ವಂ ಸ್ತ್ರೀಭಾವಂ ನ ಸ್ಮರಿಷ್ಯಸಿ ।
ಸ್ತ್ರೀಭೂತಶ್ಚ ಪರಂ ಮಾಸಂ ನ ಸ್ಮರಿಷ್ಯಸಿ ಪೌರುಷಮ್ ॥೨೮॥

"ಇಲಮಹಾರಾಜ! ನೀನು ಪುರುಷನಾಗಿರುವಾಗ ಸ್ತ್ರೀಭಾವವನ್ನು ಸ್ಮರಿಸುವುದಿಲ್ಲ. ಮತ್ತೊಂದು ತಿಂಗಳು ಸ್ತ್ರೀಯಾದಾಗ ಪುರುಷಭಾವವೂ ನಿನ್ನ ಸ್ಮರಣೆಗೆ ಬರುವುದಿಲ್ಲ."

ಹೀಗೆ ಪಾರ್ವತೀದೇವಿಯ ವಿಶಾಪದಿಂದಾಗಿ ಕರ್ದಮಪ್ರಜಾಪತಿಯ ಮಗನು ಒಂದು ತಿಂಗಳು ಪುರುಷನಾಗಿ ಇಲನಾಗುತ್ತಿದ್ದನು. ಮತ್ತೊಂದು ತಿಂಗಳು ತ್ರಿಲೋಕಸುಂದರಿಯಾದ ನಾರಿಯಾದ ಇಲೆಯಾಗುತ್ತಿದ್ದನು."

ಳ೭ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ಳಳನೆಯ ಸರ್ಗ

ಇಲಾ-ಬುಧರ ಪರಸ್ಪರದರ್ಶನ

ತಾಂ ಕಥಾಮಿಲಸಮ್ಬದ್ಧಾಂ ರಾಮೇಣ ಸಮುದೀರಿತಾಮ್ ।
ಲಕ್ಷ್ಮಣೋ ಭರತಶ್ಚೈವ ಶ್ರುತ್ವಾ ಪರಮವಿಸ್ಮಿತೌ ॥೧॥

ಶ್ರೀರಾಮನು ಹೇಳಿದ ಇಲನಿಗೆ ಸಂಬಂಧಿಸಿದ ಆ ಕಥೆಯನ್ನು ಕೇಳಿ ಭರತ-ಲಕ್ಷ್ಮಣರಿಬ್ಬರೂ ಬಹಳವಾಗಿ ವಿಸ್ಮಯಗೊಂಡರು.

ಸಂಕ್ಷೇಪವಾಗಿ ಹೇಳಿದ ಆ ಕಥೆಗೆ ತೃಪ್ತರಾಗದೆ ಭರತ-ಲಕ್ಷ್ಮಣರು ಕೈಮುಗಿದುಕೊಂಡು ಮಹಾತ್ಮನಾದ ಆ ಇಲನ ಕಥೆಯನ್ನು ವಿಸ್ತಾರವಾಗಿ ಹೇಳುವಂತೆ ಶ್ರೀರಾಮನನ್ನು ಪ್ರಾರ್ಥಿಸಿದರು.

ಕಥಂ ಸ ರಾಜಾ ಸ್ತ್ರೀಭೂತೋ ವರ್ತಯಾಮಾಸ ದುರ್ಗತಿಃ ।
ಪುರುಷಃ ಸ ಯದಾ ಭೂತಃ ಕಾಂ ವೃತ್ತಿಂ ವರ್ತಯತ್ಯಸೌ ॥೩॥

"ಅಣ್ಣ! ನಿಶ್ಚಯವಾಗಿಯೂ ಇಲರಾಜನು ಹೆಂಗಸಾದಾಗ ದುರ್ಗತಿ ಯನ್ನೇ ಹೊಂದಿದಂತಾಗಿರಬೇಕು. ಅವನು ಹೆಂಗಸಾಗಿ ಪರಿವರ್ತನೆ ಹೊಂದಿ

ದಾಗ ಹೇಗೆ ನಡೆದುಕೊಳ್ಳುತ್ತಿದ್ದನು? ಪುರುಷನಾದಾಗ ಯಾವ ವೃತ್ತಿಯನ್ನು ಆಶ್ರಯಿಸಿರುತ್ತಿದ್ದನು?”

ಕೌತೂಹಲಯುಕ್ತರಾಗಿ ತನ್ನ ಅನುಜರು ಹೇಳಿದ ಮಾತನ್ನು ಕೇಳಿ ಶ್ರೀರಾಮನು ಇಲನ ಕಥೆಯನ್ನು ಪುನಃ ಯಥಾವತ್ತಾಗಿ ಹೇಳತೊಡಗಿದನು :

“ಅನುಜರೇ! ಮೊದಲ ಮಾಸದಲ್ಲಿಯೇ ಇಲನು ತ್ರಿಲೋಕಸುಂದರಿಯಾದ ನಾರಿಯಾಗಿ ಪರಿವರ್ತನೆಹೊಂದಿದನು. ಅವನ ಜೊತೆಯಲ್ಲಿದ್ದವರು ಹೆಂಗಸರಾಗಿಯೇ ಪರಿವರ್ತನೆಹೊಂದಿದ್ದರು. ಅವರೊಡನೆ ಪರಿವೃತಳಾಗಿದ್ದ ತ್ರಿಲೋಕಸುಂದರಿಯಾದ ಇಲೆಯು ಗಿಡ-ಮರ-ಬಳ್ಳಿಗಳಿಂದ ಸಮೃದ್ಧವಾಗಿದ್ದ ಆ ಅರಣ್ಯವನ್ನು ಪ್ರವೇಶಿಸಿ ಕಾಲ್ನಡಿಗೆಯಲ್ಲಿಯೇ ಸರ್ವತ್ರ ಸಂಚರಿಸತೊಡಗಿದಳು. ಬೇಟೆಯಾಡುವ ಸಲುವಾಗಿ ಜೊತೆಯಲ್ಲಿ ಕರೆತಂದಿದ್ದ ವಾಹನಗಳೆಲ್ಲವನ್ನೂ ಪರಿತ್ಯಜಿಸಿ ಪರ್ವತಗಳ ಸಾಲುಗಳ ಮಧ್ಯಭಾಗದಲ್ಲಿ ಇಲೆಯು ಸಖಿಯರೊಡನೆ ಯಥೇಚ್ಛವಾಗಿ ವಿಹರಿಸುತ್ತಿದ್ದಳು. ಅದೇ ಅರಣ್ಯದಲ್ಲಿಯೇ ಪರ್ವತದ ಸಮೀಪದಲ್ಲಿ ನಾನಾವಿಧವಾದ ಪಕ್ಷಿಗಳಿಂದ ಸಮಾವೃತವಾಗಿದ್ದ ಸುಂದರವಾದೊಂದು ಸರೋವರವಿದ್ದಿತು. ಆ ಸರೋವರದಲ್ಲಿ ತಪಸ್ಸನ್ನು ಮಾಡುತ್ತಿದ್ದ, ತನ್ನ ಶರೀರದ ಕಾಂತಿಯಿಂದ ಪೂರ್ಣಚಂದ್ರನಂತೆಯೇ ಬೆಳಗುತ್ತಿದ್ದ, ಚಂದ್ರನ ಮಗನಾದ ಬುಧನನ್ನು ಇಲೆಯು ನೋಡಿದಳು.*

ಬುಧನು ನೀರಿನ ಮಧ್ಯದಲ್ಲಿ ಕಠಿನವಾದ ತಪಸ್ಸಿನಲ್ಲಿ ತೊಡಗಿದ್ದನು. ಅವನು ಇತರರಿಂದ ಎದುರಿಸಲು ಅಸಾಧ್ಯನಾಗಿದ್ದನು. ಅವನು ಯಶೋವಂತನೂ ತರುಣಿಯರ ಮನಸ್ಸಿನಲ್ಲಿ ಕಾಮವನ್ನುಂಟುಮಾಡುವವನೂ ಆಗಿದ್ದನು. ತಾರುಣ್ಯದಲ್ಲಿ ಆಗ ತಾನೇ ಕಾಲಿಟ್ಟಿದ್ದನು. ಇಲೆಯು ನೀರಿನ ಮಧ್ಯದಲ್ಲಿದ್ದ ಸುಂದರಾಂಗನಾದ ಬುಧನನ್ನು ನೋಡಿ ಪರಮವಿಸ್ಮಿತಳಾಗಿ ತನ್ನೊಡನಿದ್ದ ಹಿಂದೆ ಪುರುಷರಾಗಿದ್ದ ಸ್ತ್ರೀಯರೊಡನೆ ಸರೋವರದಲ್ಲಿ ಧುಮುಕಿ ಅದನ್ನು ಅಲ್ಲೋಲ-ಕಲ್ಲೋಲಮಾಡಿಬಿಟ್ಟಳು. ಇಲೆಯು ನೀರಿನಲ್ಲಿ ಆಟವಾಡುತ್ತಿದ್ದುದನ್ನು ಕಂಡೊಡನೆಯೇ ಬುಧನು ಕಾಮವಶನಾದನು. ಮನ

* ಆ ಸರೋವರವಿದ್ದ ಪ್ರದೇಶವು ಶಿವನು ಶಾಪಕೊಟ್ಟ ಪ್ರದೇಶದ ಹೊರಭಾಗದಲ್ಲಿದ್ದುದರಿಂದ ಬುಧನು ಅಲ್ಲಿ ಸ್ತ್ರೀಯಾಗಿರಲಿಲ್ಲ.

ಸ್ಸಿನ ಶಾಂತಿಯನ್ನು ಕಳೆದುಕೊಂಡನು. ನೀರಿನಲ್ಲಿ ಹೆಚ್ಚು ಕಾಲ ಕುಳಿತಿರಲು ಸಾಧ್ಯವಾಗಲಿಲ್ಲ. ಅಲ್ಲಿಂದ ಮೇಲಕ್ಕೆ ಬಂದನು. ಇಲೆಯು ಮೂರು ಲೋಕಗಳಲ್ಲಿಯೇ ಪರಮಸುಂದರಿಯಾಗಿದ್ದಳು. ಅವಳನ್ನು ನೋಡುತ್ತಿದ್ದಂತೆ ಬುಧನ ಮನಸ್ಸು ಅವಳಲ್ಲಿಯೇ ಲೀನವಾಗಿಹೋಯಿತು. ಸೌಂದರ್ಯದಲ್ಲಿ ದೇವತೆಗಳ ಸೌಂದರ್ಯವನ್ನೂ ಮೀರಿಸಿರುವ ಈ ತರುಣಿಯು ಯಾರಾಗಿರಬಹುದು?–ಎಂದು ಬುಧನು ಚಿಂತಿಸತೊಡಗಿದನು.

ನ ದೇವೀಷು ನ ನಾಗೀಷು ನಾಸುರೀಷ್ವಪ್ಸರಸ್ಸು ಚ ।
ದೃಷ್ಟಪೂರ್ವಾ ಮಯಾ ಕಾಚಿದ್ರೂಪೇಣಾನೇನ ಶೋಭಿತಾ ॥೧೪॥

'ಇಂತಹ ಮನೋಹರವಾದ ರೂಪ-ಲಾವಣ್ಯಗಳಿಂದ ಶೋಭಿಸುವ ಸ್ತ್ರೀಯನ್ನು ನಾನು ಈ ಹಿಂದೆ ದೇವತೆಗಳಲ್ಲಾಗಲೀ, ನಾಗಕನ್ಯೆಯರಲ್ಲಾಗಲೀ, ಅಸುರಕನ್ಯೆಯರಲ್ಲಾಗಲೀ, ಅಪ್ಸರಸ್ತ್ರೀಯರಲ್ಲಾಗಲೀ ಕಂಡೇ ಇರಲಿಲ್ಲ.

ಸದೃಶೀಯಂ ಮಮ ಭಾವೇದ್ಯದಿ ನಾನ್ಯಪರಿಗ್ರಹಃ ।

ಇವಳ ಪಾಣಿಗ್ರಹಣವನ್ನು ಬೇರೆಯವರು ಇದುವರೆಗೂ ಮಾಡಿರದಿದ್ದರೆ ಇವಳು ನನಗೆ ಅನುರೂಪಳಾದ ವಧುವಾಗಬಹುದು.'

ಬುಧನು ಹೀಗೆ ಯೋಚಿಸುತ್ತಾ ನೀರಿನಿಂದ ಹೊರಬಂದು ಸರೋವರದ ತೀರಕ್ಕೆ ಬಂದನು. ಆ ವೇಳೆಗಾಗಲೇ ಸಖಿಯರೊಡನೆ ಇಲೆಯು ಆಶ್ರಮವನ್ನು ಸೇರಿದ್ದಳು. ಬುಧನೂ ಆಶ್ರಮದ ಬಳಿಗೆ ಹೋಗಿ ಆ ಪ್ರಮದೆಯರನ್ನು ಗಟ್ಟಿಯಾಗಿ ಕೂಗಿದನು. ಒಡನೆಯೇ ಅವರೆಲ್ಲರೂ ಆಶ್ರಮದ ಹೊರಗೆ ಬಂದು ಬುಧನಿಗೆ ನಮಸ್ಕರಿಸಿದರು.

ಅನಂತರ ಧರ್ಮಾತ್ಮನಾದ ಬುಧನು ಇಲೆಯೊಡನಿದ್ದ ಪ್ರಮದೆಯರನ್ನು ಪ್ರಶ್ನಿಸಿದನು.

"ಭಾಮಿನಿಯರೇ! ತ್ರಿಲೋಕಸುಂದರಿಯಾದ ಇವಳು ಯಾರು? ಯಾವ ಕಾರಣದಿಂದಾಗಿ ಇವಳು ನಿಮ್ಮೊಡನೆ ಇಲ್ಲಿಗೆ ಬಂದಿರುವಳು? ಈ ಎಲ್ಲವನ್ನೂ ಶೀಘ್ರವಾಗಿ ನನಗೆ ಹೇಳಿರಿ."

ಶುಭಕರವಾದ, ಮಧುರಾಕ್ಷರಯುಕ್ತವಾದ, ಮಧುರವಾದ ಬುಧನ ಆ ಮಾತುಗಳನ್ನು ಕೇಳಿ ಆ ಪ್ರಮದೆಯರು ಮಧುರವಾಣಿಯಿಂದ ಹೇಳಿದರು :

ಅಸ್ಮಾಕಮೇಷಾ ಸುಶ್ರೋಣೀ ಪ್ರಭುತ್ವೇ ವರ್ತತೇ ಸದಾ ।
ಅಪತಿಃ ಕಾನನಾನ್ತೇಷು ಸಹಾಸ್ಮಾಭಿಶ್ಚರತ್ಯಸೌ ॥೧೯॥

"ಈ ಸುಂದರಿಯು ಯಾವಾಗಲೂ ನಮಗೆ ಸ್ವಾಮಿನಿಯು. ಇವಳಿಗೆ ಪತಿಯಿರುವುದಿಲ್ಲ. ಇವಳು ಸ್ವೇಚ್ಛೆಯಿಂದ ನಮ್ಮೊಡನೆ ಈ ಅರಣ್ಯಪ್ರದೇಶ ಗಳಲ್ಲಿ ಸುತ್ತಾಡುತ್ತಿರುತ್ತಾಳೆ."

ಸುಸ್ಪಷ್ಟವಾಗಿ ಹೇಳಿದ ಸ್ತ್ರೀಯರ ಆ ಮಾತನ್ನು ಕೇಳಿ ಬುಧನು ಪುಣ್ಯತಮವಾದ ಆವರ್ತಿನೀವಿದ್ಯೆಯನ್ನು (ಮತ್ತೊಬ್ಬರ ಸ್ಥಿತಿ-ಗತಿಗಳನ್ನು ತಿಳಿಯುವ ವಿದ್ಯೆಯನ್ನು) ಸ್ಮರಿಸಿಕೊಂಡನು. ತನ್ನ ಅಂತರ್ದೃಷ್ಟಿಯಿಂದ (ಆವರ್ತಿನೀವಿದ್ಯೆಯಿಂದ) ಇಲರಾಜನ ಎಲ್ಲ ವಿಷಯಗಳನ್ನೂ ತಿಳಿದು ಕೊಂಡನಂತರ ಇಲೆಯ ಸಖಿಯರಿಗೆ ಹೇಳಿದನು :

"ನೀವೆಲ್ಲರೂ ಕಿಂಪುರುಷಿಯರಾಗಿ (ಕಿನ್ನರಿಯರಾಗಿ) ಈ ಪರ್ವತದ ತಪ್ಪಲಿನಲ್ಲಿ ವಾಸಮಾಡಿಕೊಂಡಿರಿ. ನೀವೆಲ್ಲರೂ ಸೇರಿ ಶೀಘ್ರವಾಗಿ ಈ ಪರ್ವತದ ತಪ್ಪಲಿನಲ್ಲಿ ನಿವಾಸಗಳನ್ನು ನಿರ್ಮಿಸಿಕೊಳ್ಳಿರಿ. ಇಲ್ಲಿ ಸಿಕ್ಕುವ ಫಲ-ಮೂಲಗಳಿಂದಲೇ ಜೀವನವನ್ನು ನಿರ್ವಹಿಸಿರಿ. ಮುಂದೆ ನೀವೆಲ್ಲರೂ ಕಿಂಪುರುಷರೆಂಬ ಹೆಸರಿನ ಗಂಡಂದಿರನ್ನು ಪಡೆದುಕೊಳ್ಳುವಿರಿ."

ಸೋಮಪುತ್ರನಾದ ಬುಧನು ಹೀಗೆ ಹೇಳಿದನಂತರ ಇಲನ ಭೃತ್ಯ-ಸೈನಿಕರೆಲ್ಲರೂ ಕಿಂಪುರುಷಿಯರಾಗಿ (ಕಿನ್ನರಿಯರಾಗಿ) ಪರಿವರ್ತನೆ ಹೊಂದಿದರು. ಬಹುಸಂಖ್ಯಾತರಾಗಿದ್ದ ಆ ಸ್ತ್ರೀಯರು ಬುಧನ ಮಾತಿನಂತೆ ಪರ್ವತದ ತಪ್ಪಲಿನಲ್ಲಿ ನಿವಾಸಮಾಡಿಕೊಂಡು ವಾಸಮಾಡತೊಡಗಿದರು."

ಅಅನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೮೯ನೆಯ ಸರ್ಗ

ಬುಧ ಮತ್ತು ಇಲೆಯರ ಸಮಾಗಮ : ಪುರೂರವಸನ ಉತ್ಪತ್ತಿ

ಶ್ರುತ್ವಾ ಕಿಂಪುರುಷೋತ್ಪತ್ತಿಂ ಲಕ್ಷ್ಮಣೋ ಭರತಸ್ತಥಾ ।
ಆಶ್ಚರ್ಯಮಿತಿ ಚಾಬ್ರೂತಾಮುಭೌ ರಾಮಂ ಜನೇಶ್ವರಮ್ ॥೧॥

ಲಕ್ಷ್ಮಣ-ಭರತರಿಬ್ಬರೂ ಕಿಂಪುರುಷಿಯರ ಉತ್ಪತ್ತಿಯನ್ನು ಶ್ರೀರಾಮನಿಂದ ಕೇಳಿ ಅಚ್ಚರಿಗೊಂಡು–'ಆಶ್ಚರ್ಯಮಾಶ್ಚರ್ಯಂ'–ಎಂದು ಉದ್ಗರಿಸಿದರು.

ಬಳಿಕ ಮಹಾಯಶೋವಂತನಾದ ಧರ್ಮಾತ್ಮನಾದ ಶ್ರೀರಾಮನು ಕದ್ರಮಪ್ರಜಾಪತಿಯ ಮಗನಾದ ಇಲನ ಕಥೆಯನ್ನು ಮುಂದುವರಿಸಿ ಹೇಳಿದನು :

"ಕಿನ್ನರಿಯರೆಲ್ಲರೂ ಪರ್ವತದ ತಪ್ಪಲಿನಲ್ಲಿದ್ದ ನಿವಾಸಗಳಿಗೆ ಹೋಗಲು ಬುಧನು ತ್ರಿಲೋಕಸುಂದರಿಯಾದ ಇಲೆಯನ್ನು ಕುರಿತು ಮಂದ ಹಾಸದಿಂದ ಹೇಳಿದನು :

ಸೋಮಸ್ಯಾಹಂ ಸುದಯಿತಃ ಸುತಃ ಸುರುಚಿರಾನನೇ ।
ಭಜಸ್ವ ಮಾಂ ವರಾರೋಹೇ ಭಕ್ತ್ಯಾ ಸ್ನಿಗ್ಧೇನ ಚಕ್ಷುಷಾ ॥೪॥

"ಸುಂದರವಾದ ಮುಖವುಳ್ಳವಳೇ! ಸುಂದರಾಂಗಿಯೇ! ನಾನು ಚಂದ್ರನಿಗೆ ಪರಮಪ್ರಿಯನಾದ ಮಗನಾಗಿದ್ದೇನೆ. ನನ್ನನ್ನು ಅನುರಾಗದಿಂದಲೂ ಸ್ನೇಹಪೂರ್ಣವಾದ ದೃಷ್ಟಿಯಿಂದಲೂ ನೋಡು. ನನ್ನವಳಾಗು."

ಸ್ವಜನರಿಂದ ರಹಿತವಾಗಿದ್ದ ಆ ಸ್ಥಳದಲ್ಲಿ ಬುಧನು ಹೇಳಿದ ಮಾತನ್ನು ಕೇಳಿ ಇಲೆಯು ಅತ್ಯಂತಸುಂದರನೂ ಮಹಾತೇಜಸ್ವಿಯೂ ಆಗಿದ್ದ ಬುಧನಿಗೆ ಹೇಳಿದಳು :

ಅಹಂ ಕಾಮಚರೀ ಸೌಮ್ಯ ತವಾಸ್ಮಿ ವಶವರ್ತಿನೀ ।
ಪ್ರಶಾಧಿ ಮಾಂ ಸೋಮಸುತ ಯಥೇಚ್ಛಸಿ ತಥಾ ಕುರು ॥೬॥

"ಸೌಮ್ಯನೇ! ಸೋಮಪುತ್ರನೇ! ನಾನು ನನ್ನ ಇಚ್ಛೆಗೆ ಅನುಸಾರವಾಗಿ ತಿರುಗಾಡುತ್ತಾ ಸ್ವತಂತ್ರಳಾಗಿದ್ದೇನೆ. ಆದರೆ ಈಗ ನಾನು ನಿನ್ನ ವಶವರ್ತಿಯಾಗಿದ್ದೇನೆ. ನನಗೆ ನೀನು ಆಜ್ಞಾಪಿಸು. ನಿನ್ನ ಇಚ್ಛೆಯಿದ್ದಂತೆ ಮಾಡು."

ಇಲೆಯ ಅಂತಹ ಅದ್ಭುತವಾದ ಮಾತನ್ನು ಕೇಳಿ ಕಾಮಾಸಕ್ತನಾಗಿದ್ದ ಬುಧನು ಪರಮಹರ್ಷಿತನಾದನು ಮತ್ತು ಇಲೆಯೊಡನೆ ರಮಿಸ ತೊಡಗಿದನು. ಸುಂದರಮುಖಿಯಾದ ಇಲೆಯೊಡನೆ ರತಿಕ್ರೀಡೆಯಲ್ಲಿ ತೊಡ

ಗಿದ್ದ ಕಾಮಾಸಕ್ತನಾದ ಬುಧನಿಗೆ ವೈಶಾಖಮಾಸವು ಒಂದು ಕ್ಷಣದಂತೆ ಕಳೆದುಹೋಯಿತು. ಒಂದು ಮಾಸವು ಕಳೆದುಹೋದೊಡನೆಯೇ ಪೂರ್ಣ ಚಂದ್ರನ ಬಿಂಬಕ್ಕೆ ಸಮಾನವಾದ ಮುಖಮಂಡಲದಿಂದ ಕಂಗೊಳಿಸುತ್ತಿದ್ದ ಕರ್ದಮಪ್ರಜಾಪತಿಯ ಮಗನಾದ ಇಲನು ತನ್ನ ಹಾಸಿಗೆಯಿಂದ ಮೇಲೆದ್ದು ಕುಳಿತನು. (ಇಲೆಯು ಇಲನಾದನು.)

ಆ ವೇಳೆಗೆ ಸೋಮಪುತ್ರನಾದ ಬುಧನು ನೀರಿನ ಮಧ್ಯದಲ್ಲಿ ನಿಂತು ತಪಸ್ಸುಮಾಡುತ್ತಿದ್ದನು. ಎರಡು ಕೈಗಳನ್ನೂ ಮೇಲೆತ್ತಿಕೊಂಡು ನಿರಾಧಾರನಾಗಿ ನಿಂತಿದ್ದ ಸೋಮನಿಗೆ ಇಲರಾಜನು ಹೇಳಿದನು :

ಭಗವನ್ಪರ್ವತಂ ದುರ್ಗಂ ಪ್ರವಿಷ್ಟೋಽಸ್ಮಿ ಸಹಾನುಗಃ ।
ನ ಚ ಪಶ್ಯಾಮಿ ತತ್ಸೈನ್ಯಂ ಕ್ವ ನು ತೇ ಮಾಮಕಾ ಗತಾಃ ॥೧೧॥

"ಪೂಜ್ಯನೇ! ನಾನು ನನ್ನ ಸೇವಕರೊಡನೆ ದುರ್ಗಮವಾಗಿರುವ ಈ ಪರ್ವತಪ್ರದೇಶಕ್ಕೆ ಬಂದೆನು. ಆದರೆ ಈಗ ನಾನು ನನ್ನ ಸೈನಿಕರನ್ನಾಗಲೀ ಸೇವಕರನ್ನಾಗಲೀ ಕಾಣುತ್ತಿಲ್ಲ. ನನ್ನವರೆಲ್ಲರೂ ಎಲ್ಲಿಗೆ ಹೊರಟುಹೋದ ರೆಂಬುದೇ ತಿಳಿಯದಾಗಿದೆ."

ಇಲನಿಗೆ ತಾನು ಇಲೆಯಾಗಿದ್ದೆನೆಂಬ ಸ್ಮರಣೆಯೇ ಇರಲಿಲ್ಲ. ಹಿಂದಿನ ಸ್ಮರಣೆಯನ್ನೇ ಸಂಪೂರ್ಣವಾಗಿ ಕಳೆದುಕೊಂಡಿದ್ದ ರಾಜರ್ಷಿಯಾದ ಇಲನ ಆ ಮಾತನ್ನು ಕೇಳಿ ಬುಧನು ತನ್ನ ಶ್ರೇಷ್ಠವಾದ ಮಾತಿನಿಂದ ರಾಜನನ್ನು ಸಂತೈಸುತ್ತಾ ಶುಭಕರವಾದ ಈ ಮಾತನ್ನು ಹೇಳಿದನು :

ಅಶ್ಮವರ್ಷೇಣ ಮಹತಾ ಭೃತ್ಯಾಸ್ತೇ ವಿನಿಪಾತಿತಾಃ ।
ತ್ವಂ ಚಾಶ್ರಮಪದೇ ಸುಪ್ತೋ ವಾತವರ್ಷಭಯಾರ್ದಿತಃ ॥೧೩॥

ಸಮಾಶ್ವಸಿಹಿ ಭದ್ರಂ ತೇ ನಿರ್ಭಯೋ ವಿಗತಜ್ವರಃ ।
ಫಲಮೂಲಾಶನೋ ವೀರ ನಿವಸೇಹ ಯಥಾಸುಖಮ್ ॥೧೪॥

"ಮಹಾರಾಜ! ದೊಡ್ಡದಾದೊಂದು ಕಲ್ಲುಮಳೆಗೆ ಸಿಕ್ಕಿ ನಿನ್ನ ಸೇವಕ-ಸೈನಿಕರೆಲ್ಲರೂ ಹತರಾಗಿ ಹೋದರು. ನೀನೂ ಕೂಡ ಕಲ್ಲುಮಳೆಯ ಮತ್ತು ಬಿರುಗಾಳಿಯ ಬಡಿತಕ್ಕೆ ಸಿಕ್ಕಿ ಭಯಗೊಂಡು ಈ ಆಶ್ರಮದಲ್ಲಿಯೇ ಮಲಗಿದ್ದೆ. ಸಮಾಧಾನವನ್ನು ತಂದುಕೊ. ನಿನಗೆ ಮಂಗಳವಾಗಲಿ.

ನಿರ್ಭಯನಾಗಿ, ನಿಶ್ಚಿಂತನಾಗಿ, ಫಲ-ಮೂಲಗಳನ್ನು ತಿಂದುಕೊಂಡು ಇಲ್ಲಿಯೇ ಸುಖವಾಗಿ ವಾಸಮಾಡಿಕೊಂಡಿರು.”

ಬುಧನು ಹೇಳಿದ ಆ ಮಾತಿನಿಂದ ಸಮಾಧಾನಹೊಂದಿದ ಇಲ ರಾಜನು ತನ್ನ ಭೃತ್ಯರ ಮತ್ತು ಸೈನಿಕರ ವಿನಾಶದಿಂದ ಅತ್ಯಂತದೀನನಾಗಿ ಬುಧನೊಡನೆ ಹೇಳಿದನು :

ತ್ಯಕ್ಷ್ಯಾಮ್ಯಹಂ ಸ್ವಕಂ ರಾಜ್ಯಂ ನಾಹಂ ಭೃತ್ಯೈರ್ವಿನಾಕೃತಃ ।
ವರ್ತಯೇಯಂ ಕ್ಷಣಂ ಬ್ರಹ್ಮನ್ಸಮನುಜ್ಞಾತುಮರ್ಹಸಿ ॥೧೬॥

“ಬ್ರಾಹ್ಮಣೋತ್ತಮನೇ! ನಾನು ನನ್ನ ಭೃತ್ಯರಿಂದಲೂ ಸೈನಿಕರಿಂದಲೂ ರಹಿತನಾಗಿದ್ದರೂ ನನ್ನ ರಾಜ್ಯ-ಕೋಶಗಳನ್ನು ಪರಿತ್ಯಜಿಸುವುದಿಲ್ಲ. ನಾನಿಲ್ಲಿ ಒಂದು ಕ್ಷಣವೂ ಇರಲಾರೆನು. ಆದುದರಿಂದ ನನ್ನ ರಾಜ್ಯಕ್ಕೆ ಹೋಗಲು ನನಗೆ ಅನುಜ್ಞೆಯನ್ನು ನೀಡು.

ನನಗೆ ಧರ್ಮಪರಾಯಣನಾದ ಯಶೋವಂತನಾದ ಶಶಬಿಂದು ವೆಂಬ ಹಿರಿಯ ಮಗನಿದ್ದಾನೆ. ನಾನಲ್ಲಿಗೆ ಹೋಗಿ ಅವನಿಗೆ ಪಟ್ಟಾಭಿಷೇಕ ಮಾಡಿದನಂತರ ಅವನು ರಾಜ್ಯಭಾರವನ್ನು ಮಾಡಬಲ್ಲನು.

ನನ್ನ ರಾಜಧಾನಿಯಲ್ಲಿ ಸುಖದಿಂದ ಕಾಲಕಳೆಯುತ್ತಿರುವ ಸೇವಕರನ್ನೂ, ಪತ್ನಿಯರನ್ನೂ, ಮಕ್ಕಳನ್ನೂ, ಇತರ ಪರಿವಾರದವರನ್ನೂ ಪರಿತ್ಯಜಿಸಿ ನಾನಿಲ್ಲಿರಲು ಶಕ್ಯವಿಲ್ಲ. ಆದುದರಿಂದ, ಮಹಾತೇಜಸ್ವಿಯೇ! ರಾಜ್ಯ-ಕೋಶಗಳನ್ನೂ, ಪತ್ನೀ-ಪುತ್ರರನ್ನೂ ಪರಿತ್ಯಜಿಸಿ ಈ ಅರಣ್ಯದಲ್ಲಿ ಏಕಾಕಿಯಾಗಿ ಕಾಲಕಳೆಯಬೇಕೆನ್ನುವ ಅಶುಭವಾದ ಮಾತನ್ನು ಮಾತ್ರ ಆಡಬೇಡ. ಇದರಿಂದ ನಾನು ದುಃಖಿತನಾಗುತ್ತೇನೆ.”

ಇಲರಾಜನು ಹೀಗೆ ಹೇಳಲು ಬುಧನು ರಾಜನನ್ನು ಸಮಾಧಾನಗೊಳಿಸುತ್ತಾ ಪರಮಾದ್ಭುತವಾದ ಈ ಮಾತನ್ನು ಹೇಳಿದನು :

“ಮಹಾರಾಜ! ಕಾರ್ದಮೇಯ! ಮಹಾಬಲನೇ! ನನ್ನ ಮಾತಿನಿಂದ ನೀನು ಸಂತಾಪಗೊಳ್ಳಬೇಡ. ನಾನು ಹೇಳಿದಂತೆ ಇಲ್ಲಿಯೇ ನೀನು ಒಂದು ವರ್ಷದವರೆಗೆ ವಾಸಮಾಡಿಕೊಂಡಿರು. ಅನಂತರ ನಾನು ನಿನಗೆ ಹಿತವಾಗುವ ಕಾರ್ಯವನ್ನು ಮಾಡುತ್ತೇನೆ.”

ಎಂತಹ ಕಾರ್ಯವನ್ನೂ ಕ್ಲೇಶವಿಲ್ಲದೆಯೇ ಮಾಡುವ ಸಾಮರ್ಥ್ಯ ವನ್ನು ಹೊಂದಿದ್ದ ಬ್ರಹ್ಮವಾದಿಯಾದ ಬುಧನ ಈ ಮಾತನ್ನು ಕೇಳಿ, ಅವನು ಹೇಳಿದಂತೆ ರಾಜನು ಅಲ್ಲಿಯೇ ವಾಸಮಾಡಿಕೊಂಡಿರಲು ಮನಸ್ಸುಮಾಡಿ ದನು. ಮುಂದೆ ಇಲರಾಜನು ಮಾಸವು ಕಳೆದನಂತರ ಪುನಃ ತ್ರಿಲೋಕ ಸುಂದರಿಯಾದ ಇಲೆಯಾಗಿ ಬುಧನೊಡನೆ ಸದಾಕಾಲದಲ್ಲಿಯೂ ರಮಿಸುತ್ತಿ ದ್ದನು. ಮತ್ತೊಂದು ತಿಂಗಳಲ್ಲಿ ಪುನಃ ಇಲರಾಜನಾಗಿ ಧರ್ಮಾನುಷ್ಠಾನಗಳಲ್ಲಿ ನಿಯುಕ್ತನಾಗಿರುತ್ತಿದ್ದನು.

ಒಂಬತ್ತನೆಯ ತಿಂಗಳಲ್ಲಿ ತ್ರಿಲೋಕಸುಂದರಿಯಾದ ಇಲೆಯು ಬುಧನ ಸಮಾಗಮದ ಫಲವಾಗಿ ಮಹಾತೇಜಸ್ವಿಯಾದ ಪುತ್ರನನ್ನು ಪಡೆದು ಕೊಂಡಳು. ಬುಧನ ಆ ಪುತ್ರನು ಮುಂದೆ ಪುರೂರವಸನೆಂಬ ಹೆಸರಿನಿಂದ ಪ್ರಸಿದ್ಧನಾದನು.

ಮಹಾಬಲಿಷ್ಠನಾದ ಪುರೂರವಸನ ಶರೀರಕಾಂತಿಯು ಬುಧನ ಶರೀರಕಾಂತಿಗೆ ಸಮಾನವಾಗಿದ್ದಿತು. ಸುಂದರಾಂಗಿಯಾದ ಇಲೆಯು ತನ್ನ ಪುತ್ರನನ್ನು ಬುಧನಿಗೇ ಒಪ್ಪಿಸಿಬಿಟ್ಟಳು. ವರ್ಷದಲ್ಲಿ ಯಾವ ಯಾವ ಮಾಸ ದಲ್ಲಿ ಇಲೆಯು ಪುರುಷನಾಗುತ್ತಿದ್ದಳೋ ಆಯಾ ಮಾಸಗಳಲ್ಲಿ ಬುಧನು ರಾಜನಿಗೆ ಧರ್ಮಯುಕ್ತವಾದ ಕಥೆಗಳನ್ನು ಹೇಳುತ್ತಾ ಸಂತೋಷಗೊಳಿಸು ತ್ತಿದ್ದನು."

೮೯ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೦ನೆಯ ಸರ್ಗ

ಅಶ್ವಮೇಧಯಾಗದ ಅನುಷ್ಠಾನದಿಂದ ಇಲನಿಗೆ ಪುರುಷತ್ವದ ಪ್ರಾಪ್ತಿ

ತಥೋಕ್ತವತಿ ರಾಮೇ ತು ತಸ್ಯ ಜನ್ಮ ತದದ್ಭುತಮ್ ।
ಉವಾಚ ಲಕ್ಷ್ಮಣೋ ಭೂಯೋ ಭರತಶ್ಚ ಮಹಾಯಶಾಃ ॥೧॥

ಶ್ರೀರಾಮನು ಪುರೂರವಸನ ಅದ್ಭುತವಾದ ಜನ್ಮವೃತ್ತಾಂತವನ್ನು ಹೇಳಲಾಗಿ ಬಹಳವಾಗಿ ಅಚ್ಚರಿಗೊಂಡ ಲಕ್ಷ್ಮಣ-ಭರತರು ಪುನಃ ಪ್ರಶ್ನಿಸಿದರು:

ಇಲಾ ಸಾ ಸೋಮಪುತ್ರಸ್ಯ ಸಂವತ್ಸರಮಥೋಷಿತಾ ।
ಅಕರೋತ್ಕಿಂ ನರಶ್ರೇಷ್ಠ ತತ್ತ್ವಂ ಶಂಸಿತುಮರ್ಹಸಿ ॥೨॥

"ನರಶ್ರೇಷ್ಠನೇ! ಸೋಮನ ಮಗನಾದ ಬುಧನೊಡನೆ ಒಂದು ವರ್ಷಕಾಲ ವಾಸಮಾಡಿಕೊಂಡಿದ್ದ ಇಲೆಯು ಮುಂದೇನು ಮಾಡಿದಳೆಂಬುದನ್ನು ಯಥಾವತ್ತಾಗಿ ಹೇಳು."

ಭರತ-ಲಕ್ಷ್ಮಣರ ಮಧುರವಾದ ಈ ಮಾತನ್ನು ಕೇಳಿ ಶ್ರೀರಾಮನು ಕರ್ದಮಪ್ರಜಾಪತಿಯ ಮಗನಾದ ಇಲನಿಗೆ ಸಂಬಂಧಿಸಿದ ಕಥೆಯನ್ನು ಮುಂದುವರಿಸಿ ಹೇಳಿದನು :

"ಭರತ-ಲಕ್ಷ್ಮಣರೇ! ಇಲನು ಪುರುಷನಾಗಿದ್ದ ಒಂದು ಮಾಸದಲ್ಲಿ ಬುದ್ಧಿವಂತನಾದ ಮತ್ತು ಯಶೋವಂತನಾದ ಬುಧನು ಪರಮೋದಾರನಾದ ಮತ್ತು ಮಹಾತ್ಮನಾದ ಸಂವರ್ತನನ್ನು ಕರೆಯಿಸಿದನು. ಭೃಗುಪುತ್ರನಾದ ಚ್ಯವನ, ಅರಿಷ್ಟನೇಮಿ, ಪ್ರಮೋದನ, ಮೋದಕರ ಮತ್ತು ದುರ್ವಾಸ ಈ ಮಹರ್ಷಿಗಳನ್ನೂ ಆಹ್ವಾನಿಸಿದನು. ವಾಕ್ಯಜ್ಞನಾದ, ತತ್ತ್ವದರ್ಶಿಯಾಗಿದ್ದ ಬುಧನು ಏಕಾಗ್ರಚಿತ್ತರಾಗಿದ್ದ ಆ ಎಲ್ಲ ಸುಹೃದರಾದ ಮಹರ್ಷಿಗಳನ್ನು ಆಹ್ವಾನಿಸಿದನಂತರ ಧೈರ್ಯವನ್ನವಲಂಬಿಸಿ ಆ ಮಹರ್ಷಿಗಳಿಗೆ ಹೇಳಿದನು :

"ಮಹರ್ಷಿಗಳೇ! ಮಹಾಬಾಹುವಾದ ಈ ರಾಜನು ಕರ್ದಮಪ್ರಜಾಪತಿಯ ಪುತ್ರನಾದ ಇಲನು. ಇವನಿಗೆ ಎಂತಹ ಪರಿಸ್ಥಿತಿಯು ಒದಗಿ ಬಂದಿರುವುದೆಂಬುದನ್ನು ನೀವೆಲ್ಲರೂ ತಿಳಿದಿರುವಿರಿ. ಆದುದರಿಂದ ಇವನಿಗೆ ಶ್ರೇಯಸ್ಸುಂಟಾಗುವ ಯಾವುದಾದರೂ ಉಪಾಯವನ್ನು ನೀವೆಲ್ಲರೂ ಯೋಚಿಸಿ ಹೇಳಿರಿ."

ಬುಧನು ಮಹಾತ್ಮರಾದ ಮಹರ್ಷಿಗಳೊಡನೆ ಹೀಗೆ ಮಾತನಾಡುತ್ತಿದ್ದಾಗ ಮಹಾತೇಜಸ್ವಿಯಾದ ಕರ್ದಮಪ್ರಜಾಪತಿಯೇ ಅಲ್ಲಿಗೆ ಆಗಮಿಸಿದನು. ಕರ್ದಮಪ್ರಜಾಪತಿಯೊಡನೆ ಪುಲಸ್ತ್ಯ, ಕ್ರತು, ವಷಟ್ಕಾರ ಮತ್ತು ಮಹಾತೇಜಸ್ವಿಯಾದ ಓಂಕಾರ–ಇವರೂ ಆಗಮಿಸಿದರು. ಪ್ರಸನ್ನವಾದ

ಮನಸ್ಸಿನಿಂದ ಕೂಡಿದ್ದ, ಬಾಹ್ಲಿಕದೇಶದ ಅಧಿಪತಿಯಾದ ಇಲನ ಹಿತೈಷಿಗಳಾಗಿದ್ದ ಆ ಮಹರ್ಷಿಗಳೆಲ್ಲರೂ ಪರಸ್ಪರವಾಗಿ ಕಲೆತು ಚರ್ಚಿಸುತ್ತಾ ಭಿನ್ನ-ಭಿನ್ನವಾದ ಮಾರ್ಗಗಳನ್ನು ಇಲನ ಶ್ರೇಯಸ್ಸಿಗಾಗಿ ಸೂಚಿಸತೊಡಗಿದರು.

ಅವರೆಲ್ಲರ ಸಲಹೆಗಳನ್ನು ಕೇಳಿದನಂತರ ಕರ್ದಮಪ್ರಜಾಪತಿಯು ಮಗನಿಗೆ ಹಿತಕರವಾದ ಈ ಮಾತನ್ನು ಹೇಳಿದನು :

"ಬ್ರಾಹ್ಮಣೋತ್ತಮರೇ! ಬಾಹ್ಲಿಕದೇಶದ ಅರಸನಿಗೆ ಈ ಸಮಯದಲ್ಲಿ ಯಾವ ಕಾರ್ಯವನ್ನು ಮಾಡಿದರೆ ಹಿತವಾಗುವುದೆಂಬ ವಿಷಯದಲ್ಲಿ ನಾನು ಹೇಳಲಿರುವ ಮಾತನ್ನು ಕೇಳಿರಿ.

ನಾನ್ಯಂ ಪಶ್ಯಾಮಿ ಭೈಷಜ್ಯಮನ್ತರಾ ವೃಷಭಧ್ವಜಮ್ ।
ನಾಶ್ವಮೇಧಾತ್ಪರೋ ಯಜ್ಞಃ ಪ್ರಿಯಶ್ಚೈವ ಮಹಾತ್ಮನಃ ।
ತಸ್ಮಾದ್ಯಜಾಮಹೇ ಸರ್ವೇ ಪಾರ್ಥಿವಾರ್ಥೇ ದುರಾಸದಮ್ ॥೧೨॥

ಭಗವಂತನಾದ ಪರಮೇಶ್ವರನನ್ನು ಬಿಟ್ಟು ರಾಜನ ಈ ರೋಗಕ್ಕೆ ಬೇರೆ ಯಾರೂ ಔಷಧವನ್ನು ಕೊಡಲಾರರು. ಮಹಾತ್ಮನಾದ ಪರಶಿವನಿಗೆ ಅತ್ಯಂತಪ್ರಿಯವಾದ ಅಶ್ವಮೇಧಕ್ಕಿಂತಲೂ ಮಿಗಿಲಾದ ಮತ್ತೊಂದು ಯಜ್ಞವಿರುವುದಿಲ್ಲ. ಸಾಮಾನ್ಯರಿಂದ ಮಾಡಲು ಅಸಾಧ್ಯವಾದ ಅಶ್ವಮೇಧಯಾಗವನ್ನು ಈ ಇಲರಾಜನ ಸಲುವಾಗಿ ನಾವೆಲ್ಲರೂ ಸೇರಿ ಮಾಡೋಣ."

ಕರ್ದಮಪ್ರಜಾಪತಿಯು ಹೀಗೆ ಹೇಳಲು ಬ್ರಾಹ್ಮಣಶ್ರೇಷ್ಠರು ರುದ್ರದೇವನನ್ನು ಆರಾಧಿಸುವ ಸಲುವಾಗಿ ಅಶ್ವಮೇಧಯಾಗಮಾಡುವುದು ಉಚಿತವೆಂದು ಭಾವಿಸಿದರು. ಸಂವರ್ತನ ಶಿಷ್ಯನಾದ, ಶತ್ರುಪುರವಿಜಯಿಯಾದ, ರಾಜರ್ಷಿಯಾದ, ಸುಪ್ರಸಿದ್ಧನಾದ ಮರುತ್ತನು ಆ ಅಶ್ವಮೇಧಯಾಗವನ್ನು ಮಾಡಲು ಸಮಸ್ತಸಂಭಾರಗಳನ್ನೂ ಸಂಗ್ರಹಿಸಿದನು.

ಬಳಿಕ ಬುಧನ ಆಶ್ರಮದ ಬಳಿಯಲ್ಲಿಯೇ ಆ ಮಹಾಯಜ್ಞವು ನಡೆಯಿತು. ರುದ್ರನ ಆರಾಧನೆಯ ಸಲುವಾಗಿ ಮಾಡಿದ ಆ ಅಶ್ವಮೇಧಯಾಗದಿಂದ ರುದ್ರದೇವನು ಪರಮತುಷ್ಟನಾದನು.

ಯಜ್ಞದ ಅವಭೃಥವಾದನಂತರ ಸುಪ್ರೀತನಾದ ರುದ್ರದೇವನು

ಅತ್ಯಂತ ಸಂತೋಷದಿಂದ ಇಲನ ಸನ್ನಿಧಾನದಲ್ಲಿ ಸಮಸ್ತಬ್ರಾಹ್ಮಣರಿಗೂ ಹೇಳಿದನು :

ಪ್ರೀತೋಽಸ್ಮಿ ಹಯಮೇಧೇನ ಭಕ್ತ್ಯಾ ಚ ದ್ವಿಜಸತ್ತಮಾಃ ।
ಅಸ್ಯ ಬಾಹ್ಲಿಪತೇಶ್ಚೈವ ಕಿಂ ಕರೋಮಿ ಪ್ರಿಯಂ ಶುಭಮ್ ॥೧೭॥

"ಬ್ರಾಹ್ಮಣಶ್ರೇಷ್ಠರೇ! ನೀವು ಭಕ್ತಿಪೂರ್ವಕವಾಗಿ ಮಾಡಿದ ಈ ಅಶ್ವಮೇಧಯಾಗದಿಂದ ನಾನು ಸುಪ್ರೀತನಾಗಿದ್ದೇನೆ. ಬಾಹ್ಲಿಕದೇಶದ ಅಧಿಪತಿಯಾದ ಈ ಇಲನಿಗೆ ಪ್ರಿಯಕರವೂ, ಶುಭಕರವೂ ಆದ ಯಾವ ಕಾರ್ಯವನ್ನು ನಾನು ಮಾಡಿಕೊಡಲಿ?"

ದೇವೇಶನಾದ ಉಮಾಪತಿಯು ಹೀಗೆ ಪ್ರಶ್ನಿಸಲು, ಇಲೆಯು ಯಾವಾಗಲೂ ಇಲನಾಗಿಯೇ ಇರಲು ಸಾಧ್ಯವಾಗುವಂತೆ ಅನುಗ್ರಹಿಸಬೇಕೆಂದು ಬ್ರಾಹ್ಮಣರೆಲ್ಲರೂ ಪರಮೇಶ್ವರನನ್ನು ಒಕ್ಕೊರಲಿನಿಂದ ಪ್ರಾರ್ಥಿಸಿದರು. ಬ್ರಾಹ್ಮಣರ ಪ್ರಾರ್ಥನೆಯಿಂದ ಸುಪ್ರೀತನಾದ ಮಹೇಶನು ಇಲಳಿಗೆ ಪುನಃ ಶಾಶ್ವತವಾದ ಪುರುಷತ್ವವನ್ನು ಅನುಗ್ರಹಿಸಿ ಅಲ್ಲಿಯೇ ಅಂತರ್ಧಾನನಾದನು.

ಹೀಗೆ ಅಶ್ವಮೇಧಯಾಗವು ಶುಭಕರವಾದ ರೀತಿಯಲ್ಲಿ ಮುಗಿಯಲು-ಪರಮೇಶ್ವರನೂ ಬ್ರಾಹ್ಮಣರ ಪ್ರಾರ್ಥನೆಯಂತೆ ಇಲಳಿಗೆ ಶಾಶ್ವತವಾದ ಪುರುಷತ್ವವನ್ನು ಅನುಗ್ರಹಿಸಿ ಅಂತರ್ಧಾನಹೊಂದಲು-ದೀರ್ಘದರ್ಶಿಗಳಾದ ಬ್ರಾಹ್ಮಣರೆಲ್ಲರೂ ತಮ್ಮ-ತಮ್ಮ ಸ್ಥಳಗಳಿಗೆ ತೆರಳಿದರು. ಬಳಿಕ ಇಲರಾಜನು ಬಾಹ್ಲಿಕದೇಶವನ್ನು ಪರಿತ್ಯಜಿಸಿ ಗಂಗಾ ಮತ್ತು ಯಮುನಾನದಿಗಳ ಮಧ್ಯಭಾಗದಲ್ಲಿ ಶ್ರೇಷ್ಠವಾದ ಮತ್ತು ಯಶಸ್ಕರವಾದ ಪ್ರತಿಷ್ಠಾನವೆಂಬ ಪಟ್ಟಣವನ್ನು ನಿರ್ಮಿಸಿದನು. ಹಿಂದೆಯೇ ಪಟ್ಟಾಭಿಷಿಕ್ತನಾಗಿದ್ದ ರಾಜರ್ಷಿಯಾದ ಶಶಬಿಂದುವು ಬಾಹ್ಲಿಕದೇಶವನ್ನು ಆಳುತ್ತಿದ್ದನು. ಪ್ರತಿಷ್ಠಾನಪುರದಲ್ಲಿ ಕರ್ದಮಪ್ರಜಾಪತಿಯ ಮಗನಾದ ಇಲನು ರಾಜ್ಯವಾಳುತ್ತಿದ್ದನು. ಅನೇಕ ವರ್ಷಗಳವರೆಗೆ ರಾಜ್ಯವಾಳುತ್ತಿದ್ದು ಅವಸಾನಕಾಲವು ಪ್ರಾಪ್ತವಾದ ನಂತರ ಇಲನು ದೇಹಪರಿತ್ಯಾಗಮಾಡಿ ಶ್ರೇಷ್ಠವಾದ ಬ್ರಹ್ಮಲೋಕವನ್ನು ಸೇರಿದನು. ಅವನ ಮಗನಾದ ಪುರೂರವಸನು ಪ್ರತಿಷ್ಠಾನಪುರಕ್ಕೆ ರಾಜನಾದನು.

ಭರತ-ಲಕ್ಷ್ಮಣರೇ! ಅಶ್ವಮೇಧಯಾಗದ ಪ್ರಭಾವವು ಇಂತಹುದು. ಅಶ್ವಮೇಧಯಾಗದ ಪ್ರಭಾವದಿಂದಾಗಿ ಸ್ತ್ರೀಯಾಗಿದ್ದವನು ಪುರುಷನಾದನು.

ಮತ್ತು ಇನ್ನೂ ಅನೇಕವಾದ ದುರ್ಲಭವಾದ ಫಲಗಳನ್ನು ಪಡೆದು ಕೊಂಡನು.*"

೯೦ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೧ನೆಯ ಸರ್ಗ

ಶ್ರೀರಾಮನ ಆದೇಶದಂತೆ ಅಶ್ವಮೇಧಯಜ್ಞಕ್ಕೆ ಸಿದ್ಧತೆ

ಏತದಾಖ್ಯಾಯ ಕಾಕುತ್ಸ್ಥೋ ಭ್ರಾತೃಭ್ಯಾಮಮಿತಪ್ರಭಃ ।
ಲಕ್ಷ್ಮಣಂ ಪುನರೇವಾಹ ಧರ್ಮಯುಕ್ತಮಿದಂ ವಚಃ ॥೧॥

ಮಹಾಪ್ರಭೆಯಿಂದ ಕೂಡಿದ ಶ್ರೀರಾಮನು ತನ್ನ ತಮ್ಮಂದಿರಿಗೆ ಈ ಕಥೆಯನ್ನು ಆಮೂಲಾಗ್ರವಾಗಿ ಹೇಳಿದ ನಂತರ ಲಕ್ಷ್ಮಣನಿಗೆ ಧರ್ಮ ಯುಕ್ತವಾದ ಈ ಮಾತನ್ನು ಹೇಳಿದನು :

"ಲಕ್ಷ್ಮಣ! ಅಶ್ವಮೇಧಯಾಗಮಾಡುವ ಬ್ರಾಹ್ಮಣರಲ್ಲಿ ಅಗ್ರಗಣ್ಯರಾದ ಮತ್ತು ಸರ್ವಶ್ರೇಷ್ಠರಾದ ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ ಇವರೇ ಮೊದಲಾದ ಬ್ರಾಹ್ಮಣರನ್ನು ಕರೆಯಿಸಿ ಅವರ ಸಲಹೆಗಳನ್ನು ಪಡೆದು ಏಕಾಗ್ರಚಿತ್ತನಾಗಿ ಶುಭಲಕ್ಷಣಗಳಿಂದ ಸಂಪನ್ನವಾದ ಅಶ್ವಮೇಧಾಶ್ವವನ್ನು ದೇಶಸಂಚಾರಕ್ಕಾಗಿ ಬಿಡುತ್ತೇನೆ."

ಶ್ರೀರಾಮನು ಹೀಗೆ ಹೇಳಿದೊಡನೆಯೇ ಶೀಘ್ರಗಾಮಿಯಾದ ಲಕ್ಷ್ಮಣನು ಬ್ರಾಹ್ಮಣಶ್ರೇಷ್ಠರನ್ನು ಆಹ್ವಾನಿಸಿ ಶ್ರೀರಾಮನಿಗೆ ಪರಿಚಯಿಸಿದನು. ಬ್ರಾಹ್ಮಣರೆಲ್ಲರೂ ಆಗಮಿಸಿದೊಡನೆಯೇ ಶ್ರೀರಾಮನು ಸಿಂಹಾಸನ ದಿಂದೆದ್ದು ಅವರೆಲ್ಲರಿಗೂ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿ ದನು. ದೇವಸದೃಶನಾದ, ಶತ್ರುಗಳಿಂದ ಎದುರಿಸಲು ಅಸಾಧ್ಯವಾದ ಶ್ರೀರಾಮನನ್ನು ಬ್ರಾಹ್ಮಣರು ಆಶೀರ್ವಾದಗಳಿಂದ ಸಮಾದರಿಸಿದರು. ಬಳಿಕ ಶ್ರೀರಾಮನು ಕೈಮುಗಿದುಕೊಂಡು ಧರ್ಮಯುಕ್ತವಾದ ಮತ್ತು ಅಶ್ವಮೇಧ ಯಾಗಕ್ಕೆ ಸಂಬಂಧಿಸಿದ ವಿಷಯವನ್ನು ಬ್ರಾಹ್ಮಣರಿಗೆ ಹೇಳಿದನು. ಶ್ರೀರಾಮನ ಆ ಮಾತನ್ನು ಕೇಳಿ ಎಲ್ಲ ಬ್ರಾಹ್ಮಣರೂ ಮೊದಲು ಪರಶಿವನಿಗೆ ನಮಸ್ಕರಿಸಿ

---

* ಪ್ರಯಾಗಕ್ಕೆ ಪೂರ್ವದಲ್ಲಿರುವ ಗಂಗಾನದಿಯ ತೀರದಲ್ಲಿ ಈಗಿರುವ ಝೂಸಿ ಎಂಬ ಹೆಸರಿನ ಪಟ್ಟಣವೇ ಪ್ರತಿಷ್ಠಾನಪುರವಾಗಿತ್ತೆಂದು ಹೇಳುತ್ತಾರೆ.

ಅಶ್ವಮೇಧಯಾಗವನ್ನು ಬಹಳವಾಗಿ ಶ್ಲಾಘಿಸಿದರು. ಅಶ್ವಮೇಧಯಾಗದ ವಿಷಯದಲ್ಲಿ ಆ ಬ್ರಾಹ್ಮಣರ ಅದ್ಭುತವಾದ ಮಾತನ್ನು ಕೇಳಿ ಶ್ರೀರಾಮನು ಬಹಳವಾಗಿ ಸಂತೋಷಿಸಿದನು. ಅಶ್ವಮೇಧಯಾಗಮಾಡಲು ಬ್ರಾಹ್ಮಣರು ಅನುಮತಿಸಿದನಂತರ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು :

"ಮಹಾಬಾಹುವೇ ! ಲಕ್ಷ್ಮಣ! ಮಹಾಕಾಯರಾದ ಕಪಿಶ್ರೇಷ್ಠರೊಡನೆ ಅಶ್ವಮೇಧಯಾಗಮಹೋತ್ಸವದ ಸೊಬಗನ್ನು ನೋಡಿ ಆನಂದಿಸಲು ಶೀಘ್ರ ವಾಗಿ ಬರುವಂತೆ ಸುಗ್ರೀವನಿಗೆ ಹೇಳಿಕಳುಹಿಸು. ಅತುಲಪರಾಕ್ರಮಿಯಾದ ವಿಭೀಷಣನು ಇಚ್ಛಾನುಸಾರವಾಗಿ ಪ್ರಯಾಣಮಾಡುವ ಬಹುಸಂಖ್ಯಾತರಾದ ರಾಕ್ಷಸರೊಡನೆ ಅಶ್ವಮೇಧಯಾಗಕ್ಕೆ ಆಗಮಿಸಲಿ. ಇವರಲ್ಲದೆ ಈ ನಮ್ಮ ರಾಜ್ಯದಲ್ಲಿ ನನಗೆ ಪ್ರಿಯವನ್ನುಂಟುಮಾಡುವ ಇಚ್ಛೆಯುಳ್ಳ ಯಾವ ರಾಜರಿರುವರೋ ಅವರೆಲ್ಲರೂ ತಮ್ಮ-ತಮ್ಮ ಅನುಯಾಯಿಗಳೊಡನೆ ಯಜ್ಞಭೂಮಿಯನ್ನು ಸಂದರ್ಶಿಸುವ ಸಲುವಾಗಿ ಆಗಮಿಸಲಿ. ದೇಶಾಂತರ ಗಳಿಗೆ ಕಾರ್ಯಾರ್ಥವಾಗಿ ಹೋಗಿರುವ ಧರ್ಮದಲ್ಲಿಯೇ ಏಕಾಗ್ರವಾದ ಮನಸ್ಸುಳ್ಳ ಬ್ರಾಹ್ಮಣರನ್ನು ಅಶ್ವಮೇಧಯಾಗದ ಸಲುವಾಗಿ ಆಹ್ವಾನಿಸು. ತಾಳವನ್ನು ಬಾರಿಸುತ್ತಾ ರಂಗಭೂಮಿಯಲ್ಲಿ ಸಂಚರಿಸುವ ಸೂತ್ರಧಾರರನ್ನೂ ನಟ-ನರ್ತಕರನ್ನೂ ಈ ಸಮಾರಂಭಕ್ಕೆ ಆಹ್ವಾನಿಸು.

ಗೋಮತೀನದಿಯ ತೀರದಲ್ಲಿರುವ ನೈಮಿಷಾರಣ್ಯದಲ್ಲಿ ವಿಶಾಲವಾದ ಯಜ್ಞಶಾಲೆಯನ್ನು ನಿರ್ಮಿಸುವಂತೆ ಸೇವಕರಿಗೆ ಆಜ್ಞಾಪಿಸು. ನೈಮಿಷಾರಣ್ಯವು ಅಶ್ವಮೇಧಯಾಗಮಾಡಲು ಪರಮಪವಿತ್ರವಾದ ಸ್ಥಳವಾಗಿದೆ. ಯಜ್ಞವು ನಿರ್ವಿಘ್ನವಾಗಿ ಸಮಾಪ್ತವಾಗಲು ಎಲ್ಲೆಡೆಗಳಲ್ಲಿಯೂ ಶಾಂತಿ ಕರ್ಮಗಳು ನಡೆಯಲಿ. ನೈಮಿಷಾರಣ್ಯದಲ್ಲಿ ನಡೆಯಲಿರುವ ಅಶ್ವಮೇಧ ಮಹಾಯಜ್ಞವನ್ನು ನೋಡಲು ನೂರಾರು ಸಂಖ್ಯೆಯಲ್ಲಿ ಬರುವ ಧರ್ಮಜ್ಞ ರಾದ ಪ್ರಜೆಗಳು ಕೃತಾರ್ಥರಾಗಲಿ. ಎಲ್ಲ ಪ್ರಜೆಗಳನ್ನೂ ಶೀಘ್ರವಾಗಿ ಆಹ್ವಾನಿಸು. ನಮ್ಮ ಆಹ್ವಾನವನ್ನು ಅಂಗೀಕರಿಸಿ ಇಲ್ಲಿಗೆ ಆಗಮಿಸುವ ಪ್ರಜೆಗಳು ವಿಧಿಪೂರ್ವಕವಾಗಿ ಸಮ್ಮಾನಿಸಲ್ಪಟ್ಟು ತುಷ್ಟರೂ ಪುಷ್ಟರೂ ಆಗಿ ಯಜ್ಞವು ಮುಗಿದನಂತರ ತಮ್ಮ-ತಮ್ಮ ನಿವಾಸಗಳಿಗೆ ಹಿಂದಿರುಗಲಿ. ದಷ್ಟ-ಪುಷ್ಟವಾದ ಒಂದು ಲಕ್ಷ ಆನೆ-ಕುದುರೆಗಳು, ಎತ್ತುಗಳು, ಎತ್ತಿನಗಾಡಿಗಳು

ಅಕ್ಕಿಯ ಮೂಟೆಗಳನ್ನು ಹೊತ್ತು ಮುಂದೆ ಹೋಗಲಿ. ಹತ್ತು ಸಾವಿರ ಪ್ರಾಣಿಗಳು ಎಳ್ಳು, ಕಡಲೆ, ಹುರುಳಿ, ಉದ್ದು–ಇವೇ ಮುಂತಾದ ಧಾನ್ಯಗಳ ಮೂಟೆಗಳನ್ನೂ ಉಪ್ಪಿನ ಮೂಟೆಗಳನ್ನೂ ಹೊತ್ತುಕೊಂಡು ಹೋಗಲಿ. ಈ ಧಾನ್ಯಗಳಿಗೆ ಅನುರೂಪವಾಗಿ ಎಣ್ಣೆ, ತುಪ್ಪ, ಮೊಸರು, ಚಂದನ, ಸುಗಂಧ ಪದಾರ್ಥಗಳು, ನೂರು-ನೂರು ಕೋಟಿ ಬೆಳ್ಳಿಯ ಮತ್ತು ಚಿನ್ನದ ನಾಣ್ಯಗಳು ಇವೆಲ್ಲವನ್ನೂ ತೆಗೆಸಿಕೊಂಡು ಏಕಾಗ್ರಚಿತ್ತನಾಗಿ ಭರತನು ಮುಂದೆ ಪ್ರಯಾಣಮಾಡಲಿ. ಮಾರ್ಗದಲ್ಲಿ ತಾತ್ಕಾಲಿಕವಾಗಿ ಬೇಕಾಗುವ ವಸ್ತುಗಳನ್ನು ಕೊಳ್ಳುವ ಸಲುವಾಗಿ ಬೀದಿಯಂಗಡಿಗಳು ಇಡಲ್ಪಡಲಿ. ಇದಕ್ಕೆ ಸಂಬಂಧಿಸಿ ದಂತೆ ವ್ಯಾಪಾರಿಗಳು ಮತ್ತು ವ್ಯವಸಾಯಗಾರರು ಪ್ರಯಾಣಹೊರಡಲಿ. ಅಡಿಗೆಯವರು, ನಟನರ್ತಕರು, ಬಹುಸಂಖ್ಯಾತರಾದ ಯುವತಿಯರೂ ಪ್ರಯಾಣಹೊರಡಲಿ. ಮುಂದುಗಡೆಯಲ್ಲಿ ಭರತನೊಡನೆ ಸೈನಿಕರೂ ಪ್ರಯಾಣಮಾಡಲಿ. ಮಹಾಯಶಸ್ವಿಯಾದ ಭರತನು ಶಾಸ್ತ್ರಗಳನ್ನು ತಿಳಿದ ವಿದ್ವಾಂಸರನ್ನೂ, ಬಾಲಕರನ್ನೂ, ವೃದ್ಧರನ್ನೂ, ಏಕಾಗ್ರಚಿತ್ತರಾದ ಬ್ರಾಹ್ಮಣರನ್ನೂ, ಕೆಲಸಗಾರರನ್ನೂ, ಬಡಗಿಗಳನ್ನೂ, ಕೋಶಾಧ್ಯಕ್ಷರನ್ನೂ, ವೈದಿಕರನ್ನೂ, ನಮ್ಮ ತಾಯಂದಿರನ್ನೂ, ಕುಮಾರರನ್ನೂ, ಭರತನೇ ಮೊದ ಲಾದವರ ಅಂತಃಪುರದಲ್ಲಿರುವ ರಾಣೀವಾಸದವರನ್ನೂ, ನನ್ನ ಪತ್ನಿಯ ಪ್ರತಿಮೆಯನ್ನೂ, ಯಜ್ಞಕರ್ಮದ ದೀಕ್ಷೆಯನ್ನು ತಿಳಿದಿರುವ ಬ್ರಾಹ್ಮಣರನ್ನೂ ಕರೆದುಕೊಂಡು ಮುಂದೆ ಪ್ರಯಾಣಮಾಡಲಿ."

ಬಳಿಕ ಮಹಾಬಲನಾದ ಶ್ರೀರಾಮನು ಸೇವಕರಿಂದೊಡಗೂಡಿ ಆಗಮಿಸಲಿರುವ ಮಹಾತೇಜಸ್ವಿಗಳಾದ ರಾಜರು ತಂಗಲು ಬಹುಮೂಲ್ಯ ವಾದ ಭವನಗಳನ್ನು ಒಡನೆಯೇ ನಿರ್ಮಿಸಲು ಆಜ್ಞೆಮಾಡಿದನು. ಸಪರಿವಾರ ರಾದ ರಾಜರಿಗೆ ಕ್ಷಿಪ್ರಕಾಲಗಳಲ್ಲಿ ಅನ್ನ-ಪಾನ-ವಸ್ತ್ರಗಳ ವಿತರಣೆಗೆ ಶ್ರೀರಾಮನು ಯಥಾಯೋಗ್ಯವಾದ ವ್ಯವಸ್ಥೆಮಾಡಿದನು.

ಶ್ರೀರಾಮನ ಆಜ್ಞೆಯಂತೆ ಭರತನು ಶತ್ರುಘ್ನನೊಡನೆ ಶ್ರೀರಾಮನು ಹೇಳಿದ ಸಮಸ್ತಸಂಭಾರಗಳನ್ನೂ ತೆಗೆಸಿಕೊಂಡು ನೈಮಿಷಾರಣ್ಯಕ್ಕೆ ಪ್ರಯಾಣ ಮಾಡಿದನು. ಶ್ರೀರಾಮನ ಆಹ್ವಾನದಂತೆ ಸಮಸ್ತವಾನರರ ಸಮೇತನಾಗಿ ಅಯೋಧ್ಯೆಗೆ ಆಗಮಿಸಿದ ಸುಗ್ರೀವನು ಯಜ್ಞದ ಸಮಯದಲ್ಲಿ ಶ್ರೇಷ್ಠರಾದ

ಬ್ರಾಹ್ಮಣರಿಗೆ ಊಟಬಡಿಸುವ ಕಾರ್ಯವನ್ನು ವಹಿಸಿಕೊಂಡನು. ಅಂತಃ ಪುರದ ಸ್ತ್ರೀಯರೊಡನೆಯೂ ರಾಕ್ಷಸರೊಡನೆಯೂ ಆಗಮಿಸಿದ ವಿಭೀಷಣನು ಉಗ್ರತಪಸ್ವಿಗಳಾದ ಮತ್ತು ಮಹಾತ್ಮರಾದ ಸೇವೆಯಲ್ಲಿ ತೊಡಗಿದನು.

೯೧ನೆಯ ಸರ್ಗವು ಮುಗಿಯಿತು.

ಶ್ರೀರಾಮನ ಅಶ್ವಮೇಧಯಾಗದಲ್ಲಿ ದಾನಗಳ ವೈಶಿಷ್ಟ್ಯ

ತತ್ಸರ್ವಮಖಿಲೇನಾಶು ಪ್ರಸ್ಥಾಪ್ಯ ಭರತಾಗ್ರಜಃ ।
ಹಯಂ ಲಕ್ಷಣಸಂಪನ್ನಂ ಕೃಷ್ಣಸಾರಂ ಮುಮೋಚ ಹ ॥೧॥

ಹೀಗೆ ಅಶ್ವಮೇಧಯಜ್ಞಕ್ಕೆ ಬೇಕಾದ ಸಮಸ್ತಸಾಮಗ್ರಿಗಳನ್ನೂ ಕಳುಹಿಸಿದನಂತರ ಭರತನ ಅಣ್ಣನಾದ ಶ್ರೀರಾಮನು ಉತ್ತಮಲಕ್ಷಣಗಳಿಂದ ಕೂಡಿದ್ದ ಕೃಷ್ಣಸಾರಮೃಗದಂತೆ ಕಪ್ಪುಬಣ್ಣದ ಕುದುರೆಯನ್ನು ದೇಶ ಪರ್ಯಟನಕ್ಕಾಗಿ ಕಳುಹಿಸಿದನು.

ಋತ್ವಿಜರೊಡನೆ ಲಕ್ಷ್ಮಣನನ್ನೂ ಆ ಕುದುರೆಯ ರಕ್ಷಣೆಗೆ ಕಳುಹಿಸಿ ಶ್ರೀರಾಮನು ಸೈನ್ಯದೊಡನೆ ನೈಮಿಷಾರಣ್ಯಕ್ಕೆ ಪ್ರಯಾಣಮಾಡಿದನು. ಮಹಾಬಲನಾದ ಶ್ರೀರಾಮನು ಅಲ್ಲಿ ನಿರ್ಮಿಸಿದ್ದ ಪರಮಾದ್ಭುತವಾದ ಯಜ್ಞಮಂಟಪವನ್ನು ನೋಡಿ ಅತ್ಯಂತಪ್ರಸನ್ನನಾಗಿ ಯಜ್ಞಮಂಟಪವು ಅತಿ ಸುಂದರವಾಗಿರುವುದೆಂದು ಶ್ಲಾಘಿಸಿದನು.

ನೈಮಿಷಾರಣ್ಯದಲ್ಲಿ ವಾಸಮಾಡುತ್ತಿದ್ದಾಗ ಭೂಮಂಡಲದ ಸಮಸ್ತ ರಾಜರೂ ಶ್ರೀರಾಮನಿಗೆ ಕಪ್ಪ-ಕಾಣಿಕೆಗಳನ್ನು ತರುತ್ತಿದ್ದರು. ಶ್ರೀರಾಮನು ಅವರೆಲ್ಲರಿಗೂ ಯಥೋಚಿತವಾಗಿ ಸ್ವಾಗತ-ಸತ್ಕಾರಗಳನ್ನು ಮಾಡುತ್ತಿದ್ದನು. ರಾಜರ ಸ್ವಾಗತ-ಸತ್ಕಾರಗಳನ್ನು ಮಾಡಲು ನಿಯುಕ್ತನಾಗಿದ್ದ ಭರತನು ಶತ್ರುಘ್ನನೊಡನೆ ರಾಜರಿಗೆ ಅನ್ನ-ಪಾನ-ವಸ್ತ್ರಗಳನ್ನೂ ಅವರ ವಾಸ್ತವ್ಯಕ್ಕಾಗಿ ಸಮಸ್ತವಾದ ಉಪಕರಣಗಳನ್ನೂ ಒದಗಿಸಿಕೊಡುತ್ತಿದ್ದನು.

ಸುಗ್ರೀವಸಹಿತರಾದ ಮಹಾತ್ಮರಾದ ವಾನರರು ಪ್ರಯತ್ನಪೂರ್ವಕ

ವಾಗಿ ಯಜ್ಞಕ್ಕೆ ಆಗಮಿಸಿದ ಬ್ರಾಹ್ಮಣರಿಗೆ ಭೋಜನಮಾಡಿಸುತ್ತಿದ್ದರು. ಹಲವಾರು ರಾಕ್ಷಸರಿಂದ ಪರಿವೃತನಾಗಿದ್ದ ವಿಭೀಷಣನು ಏಕಾಗ್ರಚಿತ್ತನಾಗಿ ಅಲ್ಲಿಗೆ ಆಗಮಿಸಿದ್ದ ಉಗ್ರತಪಸ್ವಿಗಳ ಕಿಂಕರನಾಗಿ ಅವರ ಸೇವೆಯನ್ನು ಜಾಗರೂಕತೆಯಿಂದ ಮಾಡುತ್ತಿದ್ದನು. ಮಹಾಬಲಿಷ್ಠನಾದ ಮತ್ತು ನರ ಶ್ರೇಷ್ಠನಾದ ಶ್ರೀರಾಮನು ಸೇವಕರೊಡನೆ ಆಗಮಿಸಿದ್ದ ಮಹಾತ್ಮರಾದ ರಾಜರಿಗೆ ಬಹುಮೂಲ್ಯವಾದ ಬಿಡಾರಗಳನ್ನು ಬಿಟ್ಟುಕೊಟ್ಟನು.

ಹೀಗೆ ಸುವಿಹಿತವಾದ ರೀತಿಯಲ್ಲಿ ಅಶ್ವಮೇಧಯಜ್ಞದ ಕಾರ್ಯವು ಪ್ರಾರಂಭವಾಯಿತು. ಇತ್ತಲಾಗಿ ಲಕ್ಷ್ಮಣನಿಂದ ರಕ್ಷಿಸಲ್ಪಡುತ್ತಿದ್ದ ಅಶ್ವ ಮೇಧಾಶ್ವದ ಸಂಚಾರವೂ ಪ್ರಾರಂಭವಾಯಿತು. ಮಹಾತ್ಮನಾದ, ರಾಜ ಶ್ರೇಷ್ಠನಾದ ಶ್ರೀರಾಮಚಂದ್ರನ ಶ್ರೇಷ್ಠವಾದ ಆ ಮಹಾಯಜ್ಞವು ಹೀಗೆ ಮುಂದುವರಿಯುತ್ತಿದ್ದಿತು. "ಯಾಚಕರು ಸಂತುಷ್ಟರಾಗುವವರೆಗೂ ಅವರಿಗೆ ಸಮಸ್ತವಸ್ತುಗಳನ್ನೂ ದಾನಮಾಡುತ್ತಲೇ ಇರಿ"–ಎಂಬ ಮಾತು ಸರ್ವತ್ರ ಕೇಳಿಬರುತ್ತಿದ್ದಿತು. **'ಯಾವತ್ತುಷ್ಯನ್ತಿ ಯಾಚಕಾಃ ಛನ್ದತೋ ದೇಹಿ ಛನ್ದತೋ ದೇಹಿ'**–ಎಂಬ ಮಾತಿನ ಹೊರತಾಗಿ ಬೇರೆ ಮಾತುಗಳೇ ಅಲ್ಲಿ ಕೇಳಿಬರುತ್ತಿರಲಿಲ್ಲ. ಯಾಚಕರಿಗೆ ಸಂತುಷ್ಟಿಯಾಗುವವರೆಗೂ ಬೆಲ್ಲದಿಂದ ಮಾಡಿದ ವಿಧ-ವಿಧವಾದ ಭಕ್ಷ್ಯಗಳನ್ನೂ ಸಿಹಿಮೋದಕಗಳನ್ನೂ ಮಹಾತ್ಮನಾದ ಶ್ರೀರಾಮನ ಆ ಶ್ರೇಷ್ಠಯಜ್ಞಸಮಾರಂಭದಲ್ಲಿ ಹಂಚುತ್ತಲೇ ಇದ್ದರು. ಯಾಚಕರ ತುಟಿಯಿಂದ 'ಸಾಕು' ಎಂಬ ಮಾತು ಹೊರಬೀಳುವವ ರೆಗೂ ವಾನರ-ರಾಕ್ಷಸರು ಯಾಚಕರಿಗೆ ಅಭೀಷ್ಟವಾದ ವಸ್ತುಗಳನ್ನು ದಾನ ಮಾಡುತ್ತಿದ್ದುದು ಸರ್ವತ್ರಕಂಡುಬರುತ್ತಿದ್ದಿತು. ಶ್ರೀರಾಮನ ಶ್ರೇಷ್ಠವಾದ ಆ ಯಜ್ಞವಾಟಿಕೆಯು ಹೃಷ್ಟ-ಪುಷ್ಟರಾದ ಜನರಿಂದ ತುಂಬಿಹೋಗಿದ್ದಿತು. ಅಲ್ಲಿ ಕೊಳಕರಾಗಲೀ, ದೀನರಾಗಲೀ, ಕೃಶರಾಗಲೀ, ದುರ್ಬಲರಾಗಲೀ ಯಾರೊ ಬ್ಬರೂ ಇರಲಿಲ್ಲ. ಅಲ್ಲಿಗೆ ಆಗಮಿಸಿದ್ದ ಮಹಾತ್ಮರಾದ ಚಿರಂಜೀವಿಗಳಾದ ಮುನಿಗಳಿಗೆ ದಾನವಸ್ತುಗಳ ರಾಶಿ-ರಾಶಿಗಳಿಂದ ಸಮಲಂಕೃತವಾಗಿದ್ದ ಅಂತಹ ಯಜ್ಞವನ್ನು ನೋಡಿದ ಸ್ಮರಣೆಯೇ ಇರಲಿಲ್ಲ.

ಚಿನ್ನದ ಆವಶ್ಯಕತೆ ಇರುವ ಯಾಚಕನು ಯಥೇಷ್ಟವಾದ ಚಿನ್ನವನ್ನು

ಪಡೆದುಕೊಳ್ಳುತ್ತಿದ್ದನು. ಧನವನ್ನು ಬಯಸುವವನಿಗೆ ತೃಪ್ತಿಯಾಗುವಷ್ಟು ಧನವೇ ಲಭಿಸುತ್ತಿದ್ದಿತು. ರತ್ನಾಭಿಲಾಷಿಯು ರತ್ನಗಳನ್ನು ಪಡೆದುಕೊಳ್ಳು ತ್ತಿದ್ದನು. ಹೀಗೆ ನಿರಂತರವೂ ದಾನಕೊಡಲ್ಪಡುತ್ತಿದ್ದ ಹಿರಣ್ಯ-ಸುವರ್ಣ-ರತ್ನ-ವಸ್ತ್ರಗಳು ರಾಶಿ-ರಾಶಿಯಾಗಿದ್ದುದು ಕಂಡುಬಂದಿತು. ಇಂತಹ ಸಂಪತ್ತಿನ ಸಮೃದ್ಧಿಯನ್ನು ಹಿಂದೆ ನಾವು ಇಂದ್ರನು ಮಾಡಿದ ಯಜ್ಞದಲ್ಲಾಗಲೀ, ಸೋಮನು ಮಾಡಿದ ಯಜ್ಞದಲ್ಲಾಗಲೀ, ಯಮನು ಮಾಡಿದ ಯಜ್ಞದಲ್ಲಾಗಲೀ, ವರುಣನು ಮಾಡಿದ ಯಜ್ಞದಲ್ಲಾಗಲೀ ಕಾಣಲಿಲ್ಲವೆಂದು ಶ್ರೀರಾಮನ ಅಶ್ವಮೇಧಮಹಾಯಜ್ಞಕ್ಕೆ ಆಗಮಿಸಿದ್ದ ತಪೋಧನರು ಉದ್ಘೋಷಿಸಿದರು. ವಾನರರೂ ಮತ್ತು ರಾಕ್ಷಸರೂ ಯಜ್ಞಮಂಟಪದ ಎಲ್ಲ ಕಡೆಗಳಲ್ಲಿಯೂ ನಿಂತಿದ್ದು ವಸ್ತ್ರ-ಧನ-ಅನ್ನಗಳನ್ನು ಅಪೇಕ್ಷಿಸುತ್ತಿದ್ದ ಯಾಚಕ ರಿಗೆ ತುಂಬುಗೈಯಿಂದ ದಾನಮಾಡುತ್ತಿದ್ದರು. ಹೀಗೆ ರಾಜಸಿಂಹನಾದ ಶ್ರೀರಾಮನ ಸಮಸ್ತಗುಣಸಂಪನ್ನವಾದ ಯಜ್ಞವು ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದವರೆಗೆ ನಡೆಯಿತು. ಆದರೂ ದಾನ-ಧರ್ಮಗಳನ್ನು ದಿನ- ದಿನಕ್ಕೂ ವೃದ್ಧಿಸುತ್ತಿದ್ದುವೇ ಹೊರತು ಕಡಿಮೆಯಾಗಲಿಲ್ಲ.

೯೨ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೩ನೆಯ ಸರ್ಗ

ಶ್ರೀರಾಮನ ಯಜ್ಞಕ್ಕೆ ವಾಲ್ಮೀಕಿಮಹರ್ಷಿಗಳ ಆಗಮನ : ರಾಮಾಯಣವನ್ನು ಗಾನಮಾಡಲು ಲವ-ಕುಶರಿಗೆ ಆದೇಶ

ವರ್ತಮಾನೇ ತಥಾಭೂತೇ ಯಜ್ಞೇ ಚ ಪರಮಾದ್ಭುತೇ ।
ಸಶಿಷ್ಯ ಆಜಗಾಮಾಶು ವಾಲ್ಮೀಕಿರ್ಭಗವಾನೃಷಿಃ ॥೧॥

ಪರಮಾದ್ಭುತವಾದ ಅಶ್ವಮೇಧಯಜ್ಞವು ಹೀಗೆ ನಡೆಯುತ್ತಿರಲಾಗಿ ಶಿಷ್ಯರ ಸಮೇತರಾಗಿ ಪೂಜ್ಯರಾದ ವಾಲ್ಮೀಕಿಮಹರ್ಷಿಗಳು ಅಲ್ಲಿಗೆ ಆಗಮಿ ಸಿದರು.

ದಿವ್ಯವಾದ ಮತ್ತು ಅದ್ಭುತವಾದ ಯಜ್ಞವನ್ನು ವಾಲ್ಮೀಕಿಗಳು ನೋಡಿ ದರು. ಋಷಿಗಳಿಗಾಗಿ ನಿರ್ಮಿಸಿದ್ದ ಪರ್ಣಶಾಲೆಗಳ ಸಮೀಪದಲ್ಲಿಯೇ ಸುಂದರವಾದ ಪರ್ಣಶಾಲೆಗಳನ್ನು ಶ್ರೀರಾಮನು ವಾಲ್ಮೀಕಿಗಳಿಗಾಗಿ ನಿರ್ಮಿಸಿ

ಕೊಟ್ಟನು. ವಾಲ್ಮೀಕಿಗಳ ಪರ್ಣಶಾಲೆಗಳಿಗೆ ಸಮೀಪದಲ್ಲಿಯೇ ಅನ್ನವೇ ಮೊದಲಾದ ಖಾದ್ಯಪದಾರ್ಥಗಳಿಂದ ಮತ್ತು ಫಲ-ಮೂಲಗಳಿಂದ ತುಂಬಿದ ಗಾಡಿಗಳು ನಿಂತಿದ್ದುವು. ಮಹಾತ್ಮರಾದ ಮುನಿಗಳಿಂದಲೂ ಮತ್ತು ರಾಜನಾದ ಶ್ರೀರಾಮನಿಂದಲೂ ಸುಸಂಸ್ಕೃತರಾದ ಮಹಾತೇಜಸ್ವಿಗಳಾದ ವಾಲ್ಮೀಕಿ ಮಹರ್ಷಿಗಳು ಬಹಳ ಸುಖದಿಂದ ಅಲ್ಲಿ ವಾಸಮಾಡುತ್ತಿದ್ದರು. ಒಮ್ಮೆ ಅವರು ಹೃಷ್ಟರಾಗಿದ್ದ ತಮ್ಮ ಪ್ರಿಯಶಿಷ್ಯರಾದ ಕುಶೀ-ಲವರಿಗೆ ಹೇಳಿದರು :

"ನೀವಿಬ್ಬರೂ ಏಕಾಗ್ರಚಿತ್ತರಾಗಿ ಎಲ್ಲೆಡೆಗಳಲ್ಲಿಯೂ ಸಂಚರಿಸುತ್ತಾ ಸಮಗ್ರರಾಮಾಯಣಕಾವ್ಯವನ್ನು ಆನಂದಭರಿತರಾಗಿ ಹಾಡಿರಿ. ಋಷ್ಯಾಶ್ರಮಗಳಲ್ಲಿ, ಬ್ರಾಹ್ಮಣರು ವಾಸಮಾಡುವ ಸ್ಥಳಗಳಲ್ಲಿ, ಬೀದಿ-ಬೀದಿಗಳಲ್ಲಿ ರಾಜಮಾರ್ಗಗಳಲ್ಲಿ, ರಾಜರ ಅರಮನೆಗಳಲ್ಲಿ, ಯಜ್ಞಕರ್ಮವು ನಡೆಯುತ್ತಿರುವ ಶ್ರೀರಾಮನ ಯಜ್ಞವಾಟದ ಮಹಾದ್ವಾರದಲ್ಲಿ ರಾಮಾಯಣಕಾವ್ಯವನ್ನು ಹಾಡಿರಿ. ಅದರಲ್ಲಿಯೂ ವಿಶೇಷವಾಗಿ ಯಜ್ಞದ ಋತ್ವಿಜರ ಮುಂದೆ ಈ ಮಹಾಕಾವ್ಯವನ್ನು ಹಾಡಬೇಕು. ಪರ್ವತದ ಶಿಖರದಲ್ಲಿ ಬೆಳೆಯುವ ವಿಧ-ವಿಧವಾದ ಈ ಫಲ-ಮೂಲಗಳು ಬಹಳ ರುಚಿಕರವಾಗಿವೆ. ಹಸಿವಾದಾಗ ಈ ಹಣ್ಣುಗಳನ್ನು ತಿನ್ನುತ್ತಾ ರಾಮಾಯಣಮಹಾಕಾವ್ಯವನ್ನು ಹಾಡಿರಿ. ವತ್ಸರೇ! ಈ ಮಧುರವಾದ ಹಣ್ಣುಗಳನ್ನೂ ಗೆಡ್ಡೆ-ಗೆಣಸುಗಳನ್ನೂ ತಿನ್ನುತ್ತಿದ್ದರೆ ನಿಮಗೆ ಗಾನಮಾಡುವುದರಿಂದ ಆಯಾಸವೇ ಆಗುವುದಿಲ್ಲ. ನಗರದ ಹೊರಗೇ ನೀವು ವಾಸಮಾಡಬೇಕು. ಮಹೀಪತಿಯಾದ ಶ್ರೀರಾಮನು ನಿಮ್ಮನ್ನೇನಾದರೂ ರಾಮಾಯಣವನ್ನು ಗಾನಮಾಡಲು ಕರೆದನಾದರೆ ಅವನ ವಿಷಯದಲ್ಲಿ ನೀವು ಎಷ್ಟು ಗೌರವದಿಂದಿರುವಿರೋ ಅಲ್ಲಿ ಕುಳಿತಿರುವ ಋಷಿ-ಮುನಿಗಳನ್ನೂ ಅಷ್ಟೇ ಗೌರವದಿಂದ ಕಾಣಬೇಕು.

ದಿವಸೇ ವಿಂಶತಿಃ ಸರ್ಗಾಃ ಗೇಯಾ ಮಧುರಯಾ ಗಿರಾ ।
ಪ್ರಮಾಣೈರ್ಬಹುಭಿಸ್ತತ್ರ ಯಥೋದ್ದಿಷ್ಟಂ ಮಯಾ ಪುರಾ ॥೧೧॥

ನಾನು ಈ ಹಿಂದೆ ಭಿನ್ನ-ಭಿನ್ನ ಸಂಖ್ಯೆಯ ಶ್ಲೋಕಗಳನ್ನೊಳಗೊಂಡ ಸರ್ಗಗಳಿಂದ ಕೂಡಿರುವ ರಾಮಾಯಣವನ್ನು ಹೇಗೆ ಉಪದೇಶಿಸಿದ್ದೇನೆಯೋ ಅದಕ್ಕೆ ಅನುಸಾರವಾಗಿ ಪ್ರತಿನಿತ್ಯವೂ ಇಪ್ಪತ್ತಿಪ್ಪತ್ತು ಸರ್ಗಗಳನ್ನು ನೀವು ನಿಮ್ಮ ಸುಮಧುರವಾದ ಕಂಠಶ್ರೀಯಿಂದ ಹಾಡಬೇಕು. ಧನಗಳಿಸುವ ಇಚ್ಛೆ

ಯನ್ನು ಸ್ವಲ್ಪವಾದರೂ ಇಟ್ಟುಕೊಳ್ಳಬಾರದು. ಯಾವುದೇ ವಿಧವಾದ ಆಸೆಯಿಂದಲೂ ನೀವು ಈ ರಾಮಾಯಣಮಹಾಕಾವ್ಯವನ್ನು ಹಾಡಬಾರದು.

ಕಿಂ ಧನೇನಾಶ್ರಮಸ್ಥಾನಾಂ ಫಲಮೂಲಾಶಿನಾಂ ಸದಾ ॥೧೨॥

ಸದಾಕಾಲದಲ್ಲಿ ಫಲ-ಮೂಲಗಳನ್ನೇ ತಿಂದು ಜೀವಿಸುವ ಆಶ್ರಮವಾಸಿಗಳಾದ ನಮಗೆ ಧನದಿಂದೇನಾಗಬೇಕಾಗಿದೆ?

ಯದಿ ಪೃಚ್ಛೇತ್ಸ ಕಾಕುತ್ಸ್ಥೋ ಯುವಾಂ ಕಸ್ಯೇತಿ ದಾರಕೌ ।
ವಾಲ್ಮೀಕೇರಥ ಶಿಷ್ಯೌ ದ್ವೌ ಬ್ರೂತಮೇವಂ ನರಾಧಿಪಮ್ ॥೧೩॥

ನೀವು ಯಾರ ಮಕ್ಕಳೆಂದು ಶ್ರೀರಾಮನೇನಾದರೂ ಕೇಳಿದರೆ ನಾವಿಬ್ಬರೂ ಮಹರ್ಷಿಗಳಾದ ವಾಲ್ಮೀಕಿಗಳ ಶಿಷ್ಯರೆಂದು ರಾಜನಿಗೆ ಹೇಳಬೇಕು.

ಈ ವೀಣೆಯು ತಂತಿಗಳುಳ್ಳದ್ದಾಗಿದೆ. ಇವುಗಳನ್ನು ಮೀಟಿದರೆ ಸುಮಧುರವಾದ ಶಬ್ದವು ಹೊರಬರುತ್ತದೆ. ಈ ವೀಣೆಯಲ್ಲಿ ಅಪೂರ್ವವಾದ ಸ್ವರಗಳನ್ನು ಪ್ರಕಟಗೊಳಿಸುವ ಸ್ಥಾನಗಳಿವೆ. ಇದನ್ನು ಬಾರಿಸುತ್ತಾ ನೀವು ನಿರ್ಭಯರಾಗಿ ರಾಮಾಯಣಕಾವ್ಯವನ್ನು ಸುಮಧುರವಾಗಿ ಹಾಡಿರಿ.

ಆದಿಪ್ರಭೃತಿ ಗೇಯಂ ಸ್ಯಾನ್ನ ಚಾವಜ್ಞಾಯ ಪಾರ್ಥಿವಮ್ ।
ಪಿತಾ ಹಿ ಸರ್ವಭೂತಾನಾಂ ರಾಜಾ ಭವತಿ ಧರ್ಮತಃ ॥೧೪॥

ಈ ಮಹಾಕಾವ್ಯವನ್ನು ನೀವು ಪ್ರಾರಂಭದಿಂದಲೇ ಹಾಡಬೇಕು. ರಾಜನಿಗೆ ಅಪಮಾನವಾಗುವ ರೀತಿಯಲ್ಲಿ ನಡೆದುಕೊಳ್ಳಬಾರದು. ಏಕೆಂದರೆ : ರಾಜನು ಧರ್ಮದ ದೃಷ್ಟಿಯಿಂದ ಸಕಲಪ್ರಾಣಿಗಳಿಗೂ ತಂದೆಯೇ ಆಗಿರುತ್ತಾನೆ.

ಆದುದರಿಂದ ನೀವಿಬ್ಬರೂ ಪ್ರಸನ್ನಚಿತ್ತರಾಗಿ ಮತ್ತು ಏಕಾಗ್ರತೆಯಿಂದ ವೀಣೆಯೊಡನೆ ಏಕತಾನರೂಪವಾದ ಸಾಮ್ಯದಿಂದ ಕೂಡಿರುವ ಮಧುರವಾದ ಕಂಠಶ್ರೀಯಿಂದ ರಾಮಾಯಣದ ಗಾನವನ್ನು ನಾಳೆಯ ಪ್ರಾತಃಕಾಲವೇ ಪ್ರಾರಂಭಿಸಿರಿ."

ಹೀಗೆ ಪರಮೋದಾರಿಗಳಾದ ವಾಲ್ಮೀಕಿಗಳು ಕುಶ-ಲವರಿಗೆ ಅನೇಕ ಪ್ರಕಾರವಾದ ಹಿತನುಡಿಗಳನ್ನು ಹೇಳಿ ಮೌನವನ್ನು ಆಶ್ರಯಿಸಿದರು.

ವಾಲ್ಮೀಕಿಮಹರ್ಷಿಗಳಿಂದ ಉಪದಿಷ್ಟರಾದ, ಸೀತಾದೇವಿಯ ಮಕ್ಕಳಾದ, ಶತ್ರುಮರ್ದನರಾದ ಕುಶೀ-ಲವರು **'ತಥೈವ ಕರವಾವ–**ಗುರು ದೇವ! ನೀವು ಹೇಳಿದಂತೆಯೇ ಮಾಡುತ್ತೇವೆ'–ಎಂದು ಹೇಳಿ ಅಲ್ಲಿಂದ ತೆರಳಿದರು.

ಶುಕ್ರಾಚಾರ್ಯರಿಂದ ಕಲ್ಪಿತವಾದ ನೀತಿಸಂಹಿತೆಯನ್ನು ಧಾರಣೆಮಾಡಿಕೊಂಡ ಅಶ್ವಿನೀಕುಮಾರರಂತೆ ಲವ-ಕುಶರು ವಾಲ್ಮೀಕಿಮಹರ್ಷಿಗಳು ಹೇಳಿದ ಅದ್ಭುತವಾದ ವಾಣಿಯನ್ನು ಮನಸ್ಸಿನಲ್ಲಿ ಧರಿಸಿಕೊಂಡು ರಾಮಾಯಣವನ್ನು ಗಾನಮಾಡುವುದರಲ್ಲಿ ಉತ್ಸುಕರಾಗಿ ಆ ರಾತ್ರಿಯನ್ನು ಸುಖದಿಂದ ಕಳೆದರು.

೯೩ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೪ನೆಯ ಸರ್ಗ

ಲವ-ಕುಶರಿಂದ ರಾಮಾಯಣಗಾಯನ : ಮಹಾಸಭೆಯಲ್ಲಿ ಶ್ರೀರಾಮನಿಂದ ರಾಮಾಯಣಗಾನ ಶ್ರವಣ

ತೌ ರಜನ್ಯಾಂ ಪ್ರಭಾತಾಯಾಂ ಸ್ನಾತೌ ಹುತಹುತಾಶನೌ ।
ಯಥೋಕ್ತಮೃಷಿಣಾ ಪೂರ್ವಂ ಸರ್ವಂ ತತ್ರೋಪಗಾಯತಾಮ್ ॥೧॥

ರಾತ್ರಿಯು ಕಳೆದು ಬೆಳಗಾಗುತ್ತಲೇ ಲವ-ಕುಶರು ಸ್ನಾನ-ಸಂಧ್ಯಾವಂದನೆಗಳನ್ನು ಮಾಡಿ ಸಮಿದಾಧಾನದ ಮೂಲಕವಾಗಿ ಅಗ್ನಿಯನ್ನು ಸಂಪೂಜಿಸಿ ವಾಲ್ಮೀಕಿಮಹರ್ಷಿಗಳ ನಿರ್ದೇಶನದಂತೆ ಸಮಗ್ರವಾದ ರಾಮಾಯಣವನ್ನು ಪ್ರಾರಂಭದಿಂದ ಗಾನಮಾಡತೊಡಗಿದರು.

ಹಿಂದಿನ ಆಚಾರ್ಯರ ನಿಯಮಕ್ಕೆ ಅನುಸಾರವಾಗಿ ಅಪೂರ್ವವಾದ ರೀತಿಯಲ್ಲಿ ಆಲಾಪನೆಯೊಡನೆ ಮೇಳೈಸಿ ಹಾಡುತ್ತಿದ್ದ ಲವ-ಕುಶರ ಸುಮಧುರವಾದ ಗಾಯನವನ್ನು ಶ್ರೀರಾಮನೂ ಕೇಳಿದನು. ಅನೇಕವಿಧವಾದ ಶ್ರುತ್ಯರ್ಥಗಳಿಂದ ಸಂಬದ್ಧವಾಗಿದ್ದ (ಧ್ವನಿ-ಪರಿಚ್ಛೇದಾದಿ ಸಾಧನಗಳಿಂದಲೂ, ದ್ರುತ-ಮಧ್ಯ-ವಿಲಂಬಿತಾವೃತ್ತಿಗಳಿಂದಲೂ, ವೀಣಾಸ್ವರಮಾಧುರ್ಯದ ಸಾಮ್ಯದಿಂದಲೂ ಕೂಡಿದ್ದ) ಬಾಲಕರ ರಾಮಾಯಣಗಾನವನ್ನು ಕೇಳಿ ಕುತೂಹಲಗೊಂಡ ಶ್ರೀರಾಮನು ಯಜ್ಞದ ಒಂದು ಕ್ರಿಯೆಗೂ ಮತ್ತೊಂದು ಕ್ರಿಯೆಗೂ ಮಧ್ಯದಲ್ಲಿ ಅವಕಾಶವು ಸಿಕ್ಕಿದಾಗ ದೊಡ್ಡ-ದೊಡ್ಡ ಮಹರ್ಷಿ

ಗಳನ್ನೂ, ರಾಜರನ್ನೂ, ವೇದವಿದರಾದ ವಿದ್ವಾಂಸರನ್ನೂ, ಪೌರಾಣಿಕರನ್ನೂ, ಶಬ್ದದ ಸ್ವರೂಪವನ್ನು ತಿಳಿದ ವೈಯಾಕರಣರನ್ನೂ, ದೊಡ್ಡ-ದೊಡ್ಡ ಬ್ರಾಹ್ಮಣರನ್ನೂ, ಸ್ವರ ಮತ್ತು ಲಕ್ಷಣಗಳನ್ನು ತಿಳಿದಿದ್ದ ಪಂಡಿತರನ್ನೂ, ಗಾಯನವನ್ನು ಕೇಳಲು ಉತ್ಸುಕರಾಗಿದ್ದ ದ್ವಿಜರನ್ನೂ, ಸಾಮುದ್ರಿಕಲಕ್ಷಣ ಗಳನ್ನು ತಿಳಿದವರನ್ನೂ, ಸಂಗೀತವಿಶಾರದರನ್ನೂ, ನಿಗಮಾಗಮಗಳ ವಿದ್ವಾಂಸರನ್ನೂ, ಪುರವಾಸಿಗಳನ್ನೂ, ಪದ-ಅಕ್ಷರ-ಸಮಾಸಗಳನ್ನು ತಿಳಿದ ವಿದ್ವಾಂಸರನ್ನೂ, ಛಂದಃಶಾಸ್ತ್ರಜ್ಞರನ್ನೂ, ಹ್ರಸ್ವ-ದೀರ್ಘ-ಪ್ಲುತ-ಪ್ರಚಯಗಳ ಲಕ್ಷಣಗಳನ್ನು ತಿಳಿದ ವಿದ್ವಾಂಸರನ್ನೂ, ಜ್ಯೋತಿಷವಿದ್ಯೆಯಲ್ಲಿ ಪಾರಂಗತ ರಾದವರನ್ನೂ, ಕಲ್ಪೋಕ್ತ-ವೇದೋಕ್ತವಿಧಿನಿಯಮಗಳನ್ನು ತಿಳಿದ ಪಂಡಿತ ರನ್ನೂ, ಕಾರ್ಯಕುಶಲರನ್ನೂ, ವಿಭಿನ್ನಭಾಷೆಗಳನ್ನು ತಿಳಿದ ವಿದ್ವಾಂಸರನ್ನೂ, ಕೇವಲ ವೀಕ್ಷಣಮಾತ್ರದಿಂದಲೇ ಇತರರ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ತಿಳಿಯುವ ಸಾಮರ್ಥ್ಯವುಳ್ಳ ಇಂಗಿತಜ್ಞರನ್ನೂ ಮತ್ತು ಸಮಸ್ತಮಹಾ ಜನಗಳನ್ನೂ ಯಜ್ಞಮಂಟಪಕ್ಕೆ ಆಹ್ವಾನಿಸಿದನು. ಇವರೇ ಅಲ್ಲದೆ ತರ್ಕವಿದ್ಯೆ ಯಲ್ಲಿ ನಿಪುಣರಾದ ನೈಯಾಯಿಕರನ್ನೂ, ಹಲವಾರು ಶಾಸ್ತ್ರಗಳನ್ನು ತಿಳಿದಿದ್ದ ಯುಕ್ತಿವಾದಿಗಳನ್ನೂ, ಛಂದಃಶಾಸ್ತ್ರಪರಿಣತರನ್ನೂ, ಪುರಾಣಜ್ಞರನ್ನೂ, ವೈದಿಕರನ್ನೂ, ದ್ವಿಜಶ್ರೇಷ್ಠರನ್ನೂ, ಚಿತ್ರಕಲೆಯನ್ನು ತಿಳಿದ ವಿದ್ವಾಂಸರನ್ನೂ, ಧರ್ಮಶಾಸ್ತ್ರಾನುಸಾರವಾದ ಸದಾಚಾರಗಳನ್ನು ತಿಳಿದ ವಿದ್ವಾಂಸರನ್ನೂ, ಷಡ್ದರ್ಶನಗಳ ಮತ್ತು ಕಲ್ಪಸೂತ್ರಗಳ ಪರಿಣತರನ್ನೂ, ಗೀತ-ನೃತ್ಯ ವಿಶಾರದರನ್ನೂ, ಶಾಸ್ತ್ರಜ್ಞರನ್ನೂ, ನೀತಿ-ನಿಪುಣರನ್ನೂ, ವೇದಾಂತದ ಅರ್ಥ ಗಳ ಪ್ರವಚನಕಾರರನ್ನೂ, ಬ್ರಹ್ಮವಿದರನ್ನೂ ಆ ಮಹಾಯಜ್ಞಮಂಟಪಕ್ಕೆ ಶ್ರೀರಾಮನು ಆಹ್ವಾನಿಸಿದನು. ಅಂತಹ ವಿದ್ವಾಂಸರೆಲ್ಲರನ್ನೂ ಒಟ್ಟಾಗಿ ಸೇರಿಸಿ ಶ್ರೀರಾಮನು ರಾಮಾಯಣಗಾನಮಾಡುವ ಬಾಲಕರನ್ನು ಸಭಾ ಮಂಟಪದಲ್ಲಿ ಕುಳ್ಳಿರಿಸಿದನು. ಆ ಮಹಾಸಭೆಯಲ್ಲಿ ಸೇರಿದ್ದ ಸಭಾಸದರು ಆನಂದವರ್ಧಕವಾದ ಮಾತುಗಳನ್ನು ಪರಸ್ಪರವಾಗಿ ಆಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಮುನಿಕುಮಾರರಿಬ್ಬರೂ ರಾಮಾಯಣಗಾನವನ್ನು ಪ್ರಾರಂಭಿ ಸಿದರು. ಅತಿಮಾನುಷವಾದ, ಅಲೌಕಿಕವಾದ, ಅತಿಮಧುರವಾದ ಗಾಯ ನವು ಪ್ರಾರಂಭವಾಯಿತು. ಗೇಯವಸ್ತುವಿನ (ರಾಮಾಯಣದ) ವಿಶೇಷತೆ

ಯಿಂದಾಗಿ ಸಭಿಕರೆಲ್ಲರೂ ಮುಗ್ಧರಾಗಿ ರಾಮಾಯಣಸುಧಾರಸವನ್ನು ಪಾನ ಮಾಡುತ್ತಿದ್ದರು. ಎಷ್ಟು ಕೇಳಿದರೂ ಅವರಿಗೆ ತೃಪ್ತಿಯೇ ಉಂಟಾಗಿಲ್ಲ. ಹೃಷ್ಟರಾದ ಸಮಸ್ತಮುನಿಗಳೂ ಮಹಾತೇಜಸ್ವಿಗಳಾದ ರಾಜರೂ ರಾಮಾ ಯಣವನ್ನು ಗಾನಮಾಡುತ್ತಿದ್ದ ಬಾಲಕರನ್ನು ಕಣ್ಣುಗಳಿಂದಲೇ ಕುಡಿದು ಬಿಡುವರೋ ಎಂಬಂತೆ ಎವೆಯಿಕ್ಕದೆ ನೋಡುತ್ತಿದ್ದರು. ಏಕಾಗ್ರಚಿತ್ತರಾಗಿ ಗಾಯನವನ್ನು ಕೇಳುತ್ತಿದ್ದ ಮತ್ತು ಬಾಲಕರ ಮುಖಮಂಡಲವನ್ನೇ ಎವೆ ಯಿಕ್ಕದೆ ನೋಡುತ್ತಿದ್ದ ಸಭಾಸದರು ಪರಸ್ಪರವಾಗಿ ಮಾತನಾಡಿಕೊಂಡರು.

ಉಭೌ ರಾಮಸ್ಯ ಸದೃಶೌ ಬಿಮ್ಬಾದ್ಬಿಮ್ಬಮಿವೋತ್ಥಿತೌ ॥೧೪॥

"ಬಿಂಬದಿಂದ ಪ್ರತಿಫಲಿಸುವ ಪ್ರತಿಬಿಂಬದಂತೆ ಈ ಇಬ್ಬರು ಬಾಲಕರೂ ಶ್ರೀರಾಮನಂತೆಯೇ ಇದ್ದಾರೆ.

ಜಟಿಲೌ ಯದಿ ನ ಸ್ಯಾತಾಂ ನ ವಲ್ಕಲಧರೌ ಯದಿ ।
ವಿಶೇಷಂ ನಾಧಿಗಚ್ಛಾಮೋ ಗಾಯತೋ ರಾಘವಸ್ಯ ಚ ॥೧೫॥

ಈ ಬಾಲಕರ ತಲೆಗಳಲ್ಲಿ ಜಟೆಗಳಿಲ್ಲದಿದ್ದರೆ, ಇವರು ನಾರುಮಡಿ ಗಳನ್ನು ಉಟ್ಟಿರದಿದ್ದರೆ ಗಾಯನಮಾಡುತ್ತಿರುವ ಇವರಿಗೂ ಮತ್ತು ಶ್ರೀರಾಮನಿಗೂ ನಾವು ಯಾವ ವ್ಯತ್ಯಾಸವನ್ನೂ ಕಾಣುತ್ತಿರಲಿಲ್ಲ."

ನಾಗರಿಕರು, ಹಳ್ಳಿಗರು, ವಿದ್ವಾಂಸರು, ಮುನಿಗಳು ಹೀಗೆ ಪರಸ್ಪರ ವಾಗಿ ಮಾತನಾಡಿಕೊಳ್ಳುತ್ತಿರಲು ನಾರದರಿಂದ ವಾಲ್ಮೀಕಿಗಳಿಗೆ ಉಪದಿಷ್ಟ ವಾದ ಮೂಲರಾಮಾಯಣವನ್ನೊಳಗೊಂಡ ಪ್ರಥಮಸರ್ಗದಿಂದ ಗಾಯ ನವು ಮೊದಲಿನಿಂದಲೂ ಪ್ರಾರಂಭವಾಯಿತು. ಮೊದಲನೆಯ ಸರ್ಗದಿಂದ ಪ್ರಾರಂಭಮಾಡಿ ಲವ-ಕುಶರು ವಾಲ್ಮೀಕಿಮಹರ್ಷಿಗಳ ನಿರ್ದೇಶನದಂತೆ ಇಪ್ಪತ್ತು ಸರ್ಗಗಳನ್ನು ಪೂರ್ತಿಯಾಗಿ ಗಾನಮಾಡಿದರು. ಆ ವೇಳೆಗೆ ಅಪರಾಹ್ನವಾಯಿತು. ರಾಮಾಯಣದ ಇಪ್ಪತ್ತು ಸರ್ಗಗಳನ್ನು ಕೇಳಿದ ಭ್ರಾತೃವತ್ಸಲನಾದ ಶ್ರೀರಾಮನು ಭರತನಿಗೆ ಹೇಳಿದನು :

ಅಷ್ಟಾದಶಸಹಸ್ರಾಣಿ ಸುವರ್ಣಸ್ಯ ಮಹಾತ್ಮನೋಃ ।
ಪ್ರಯಚ್ಛ ಶೀಘ್ರಂ ಕಾಕುತ್ಸ್ಥ ಯದನ್ಯದಭಿಕಾಂಕ್ಷಿತಮ್ ॥೧೬॥

"ಭರತ! ನೀನು ಮಹಾತ್ಮರಾದ ಈ ಇಬ್ಬರು ಬಾಲಕರಿಗೆ ಹದಿನೆಂಟು

ಸಾವಿರ ಸುವರ್ಣಮುದ್ರಿಕೆಗಳನ್ನು ಪಾರಿತೋಷಕವಾಗಿ ಕೊಡು. ಅಷ್ಟಲ್ಲದೆ ಈ ಬಾಲಕರು ಮತ್ತೇನನ್ನಾದರೂ ಅಪೇಕ್ಷಿಸಿದರೆ ಅದನ್ನೂ ಇವರಿಗೆ ಶೀಘ್ರವಾಗಿ ಕೊಡು."

ಶ್ರೀರಾಮನ ಆದೇಶದಂತೆ ಭರತನು ಬಾಲಕರಿಬ್ಬರಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಸುವರ್ಣನಾಣ್ಯಗಳನ್ನು ಕೊಟ್ಟನು. ಆದರೆ ಕುಶೀ-ಲವರು ಭರತನು ಕೊಟ್ಟ ಆ ಸುವರ್ಣನಾಣ್ಯಗಳನ್ನು ಪ್ರತಿಗ್ರಹಿಸಲಿಲ್ಲ. ಮಹಾತ್ಮರಾದ ಆ ಬಾಲಕರು ವಿಸ್ಮಿತರಾಗಿ ಹೇಳಿದರು :

ವನ್ಯೇನ ಫಲಮೂಲೇನ ನಿರತೌ ವನವಾಸಿನೌ ।
ಸುವರ್ಣೇನ ಹಿರಣ್ಯೇನ ಕಿಂ ಕರಿಷ್ಯಾವಹೇ ವನೇ ॥೨೧॥

"ನಮಗೆ ಈ ಧನದ ಆವಶ್ಯಕತೆಯೇನಿದೆ? ನಾವು ವನವಾಸಿಗಳು. ಕಾಡಿನಲ್ಲಿ ಸಿಕ್ಕುವ ಫಲ-ಮೂಲಗಳಿಂದ ಜೀವನವನ್ನು ನಿರ್ವಹಿಸುತ್ತೇವೆ. ಚಿನ್ನವನ್ನಾಗಲೀ ಬೆಳ್ಳಿಯನ್ನಾಗಲೀ ಅರಣ್ಯಕ್ಕೆ ತೆಗೆದುಕೊಂಡು ಹೋಗಿ ಮಾಡುವುದೇನಿದೆ?"

ಕುಶೀ-ಲವರು ಹೀಗೆ ಹೇಳಲು ಶ್ರೋತೃಗಳ ಮನಸ್ಸಿನಲ್ಲಿ ಕೌತೂಹಲ ವುಂಟಾಯಿತು. ಶ್ರೋತೃಗಳೂ ಮತ್ತು ಶ್ರೀರಾಮನೂ ಆಶ್ಚರ್ಯಚಕಿತ ರಾದರು. ಶ್ರೀರಾಮನು ರಾಮಾಯಣಕಾವ್ಯವು ಆ ಋಷಿಕುಮಾರರಿಗೆ ಹೇಗೆ ಸಿಕ್ಕಿತೆಂಬುದನ್ನು ತಿಳಿಯಲು ಉತ್ಸುಕನಾಗಿದ್ದನು. ಮಹಾತೇಜಸ್ವಿಯಾದ ಶ್ರೀರಾಮನು ಅದನ್ನು ತಿಳಿಯುವ ಸಲುವಾಗಿ ಋಷಿಕುಮಾರರನ್ನು ಪ್ರಶ್ನಿ ಸಿದನು:

ಕಿಂಪ್ರಮಾಣಮಿದಂ ಕಾವ್ಯಂ ಕಾ ಪ್ರತಿಷ್ಠಾ ಮಹಾತ್ಮನಃ ।
ಕರ್ತಾ ಕಾವ್ಯಸ್ಯ ಮಹತಃ ಕ್ವ ಚಾಸೌ ಮುನಿಪುಂಗವಃ ॥೨೪॥

"ಋಷಿಕುಮಾರರೇ! ಈ ಮಹಾಕಾವ್ಯದ ಪ್ರಮಾಣವೆಷ್ಟು? ಇದರಲ್ಲಿ ಎಷ್ಟು ಶ್ಲೋಕಗಳಿವೆ? ಇದನ್ನು ರಚಿಸಿದ ಮಹಾತ್ಮನಾದ ಕವಿಯ ವಾಸಸ್ಥಾನವು ಯಾವುದು? ಈ ಮಹಾಕಾವ್ಯವನ್ನು ರಚಿಸಿದ ಮುನಿಶ್ರೇಷ್ಠರು ಯಾರು? ಅವರೀಗ ಎಲ್ಲಿದ್ದಾರೆ?"

ಹೀಗೆ ಪ್ರಶ್ನಿಸಿದ ಶ್ರೀರಾಮನಿಗೆ ಋಷಿಕುಮಾರರು ಯಥೋಚಿತವಾಗಿ ಉತ್ತರಿಸಿದರು.

ವಾಲ್ಮೀಕಿರ್ಭಗವಾನ್ಕರ್ತಾ ಸಂಪ್ರಾಪ್ತೋ ಯಜ್ಞಸಂವಿಧಮ್ ।
ಯೇನೇದಂ ಚರಿತಂ ತುಭ್ಯಮಶೇಷಂ ಸಂಪ್ರದರ್ಶಿತಮ್ ॥೨೫॥

"ಮಹಾರಾಜ! ಯಾವ ಮಹಾಕಾವ್ಯದ ಮೂಲಕವಾಗಿ ನಿನಗೆ ಸಂಬಂಧಿಸಿದ ಸಮಗ್ರವಾದ ಚರಿತ್ರೆಯನ್ನು ನಮ್ಮ ಮೂಲಕವಾಗಿ ಪ್ರಕಟಿಸಿರುವರೋ ಅಂತಹ ಮಹಾಕಾವ್ಯದ ಕರ್ತೃಗಳು ಪೂಜ್ಯರಾದ ವಾಲ್ಮೀಕಿ ಮಹರ್ಷಿಗಳು. ಅವರೀಗ ಈ ಯಜ್ಞಶಾಲೆಗೇ ಬಂದಿರುತ್ತಾರೆ.



ಸಂನಿಬದ್ಧಂ ಹಿ ಶ್ಲೋಕಾನಾಂ ಚತುರ್ವಿಂಶತ್ಸಹಸ್ರಕಮ್ ।
ಉಪಾಖ್ಯಾನಶತಂ ಚೈವ ಭಾರ್ಗವೇಣ ತಪಸ್ವಿನಾ ॥೨೬॥

ಭೃಗುವಂಶದವರಾದ* ತಪಸ್ವಿ ವಾಲ್ಮೀಕಿಗಳು ಇಪ್ಪತ್ತುನಾಲ್ಕು

* ವಾಲ್ಮೀಕಿಗಳಿಗೆ ಭಾರ್ಗವ ಎಂಬ ಹೆಸರು ಇಲ್ಲಿ ಬಂದಿದೆ. ಆದುದರಿಂದ

ಸಾವಿರ ಶ್ಲೋಕಗಳಲ್ಲಿ ಈ ಮಹಾಕಾವ್ಯವನ್ನು ರಚಿಸಿದ್ದಾರೆ. ಈ ಮಹಾ ಕಾವ್ಯದಲ್ಲಿ ನೂರು ಉಪಾಖ್ಯಾನಗಳಿವೆ.

ಆದಿಪ್ರಭೃತಿ ವೈ ರಾಜನ್ಪಞ್ಚಸರ್ಗಶತಾನಿ ಚ ।
ಕಾಣ್ಡಾನಿ ಷಟ್ ಕೃತಾನೀಹ ಸೋತ್ತರಾಣಿ ಮಹಾತ್ಮನಾ ॥೨೭॥

ಮಹಾರಾಜ! ಮಹಾತ್ಮರಾದ ವಾಲ್ಮೀಕಿಮಹರ್ಷಿಗಳು ಮೊದಲಿನಿಂದ ಕಡೆಯವರೆಗೂ ಐದುನೂರು ಸರ್ಗಗಳಲ್ಲಿ ಈ ಮಹಾಕಾವ್ಯವನ್ನು ರಚಿಸಿದ್ದಾರೆ. ಆರು ಕಾಂಡಗಳೊಡನೆ ಉತ್ತರಕಾಂಡದಿಂದ ಕೂಡಿದ ಈ ಮಹಾ ಕಾವ್ಯವನ್ನು ವಿಭಾಗಿಸಿರುತ್ತಾರೆ.

ನಮ್ಮ ಗುರುಗಳಾದ ವಾಲ್ಮೀಕಿಗಳು ನಿನ್ನ ಚರಿತ್ರೆಯನ್ನು ರಚಿಸಿದ್ದಾರೆ. **ಪ್ರತಿಷ್ಠಾ ಜೀವಿತಂ ಯಾವತ್ತಾವತ್ಸರ್ವಸ್ಯ ವರ್ತತೇ ॥** ಇದರಲ್ಲಿ ನಿನ್ನ ಜೀವನದ ಎಲ್ಲ ವಿಷಯಗಳೂ ಅಡಕವಾಗಿವೆ.

ಮಹಾರಥನೇ! ನೀನು ಈ ಮಹಾಕಾವ್ಯವನ್ನು ಆಮೂಲಾಗ್ರವಾಗಿ ಕೇಳುವ ಬುದ್ಧಿಯುಳ್ಳವನಾಗಿದ್ದರೆ ಯಜ್ಞಕರ್ಮದ ಮಧ್ಯದಲ್ಲಿ ಅವಕಾಶ ಮಾಡಿಕೊಂಡು ನಿಶ್ಚಿತವಾದ ಸಮಯದಲ್ಲಿ ನಿನ್ನ ಸಹೋದರರೊಡನೆ ಈ ಮಹಾಕಾವ್ಯವನ್ನು ಕೇಳು."

ಋಷಿಕುಮಾರರ ಈ ಮಾತನ್ನು ಕೇಳಿ ಶ್ರೀರಾಮನು 'ಬಾಢಂ–ಹಾಗೆಯೇ ಆಗಲಿ'–ಎಂದು ಹೇಳಿದನು. ಋಷಿಕುಮಾರರು ಶ್ರೀರಾಮನ

ವ್ಯಾಖ್ಯಾನಕಾರರು ಹಲವಾರು ರೀತಿಗಳಲ್ಲಿ ಇದನ್ನು ಸಮರ್ಥಿಸಿದ್ದಾರೆ. ಉಶನಾ–ಭಾರ್ಗವಃ ಕವಿಃ–ಶುಕ್ರರಿಗೆ ಉಶನಸ-ಭಾರ್ಗವ-ಕವಿ ಎಂಬ ಮೂರು ಹೆಸರುಗಳೂ ಇವೆ. ಅರ್ಥಾತ್ ಭಾರ್ಗವ ಎಂದರೆ ಕವೀ ಎಂದೂ ಆಗುತ್ತದೆ. (ಶುಕ್ರರಿಗೆ ಪರ್ಯಾಯನಾಮವಾಗಿ) ಆದುದರಿಂದ ಭಾರ್ಗವನಿಗೆ ಸದೃಶರಾದವರು ಭಾರ್ಗವರು ಎಂದು ಒಬ್ಬರು ವ್ಯಾಖ್ಯಾನಮಾಡಿದ್ದಾರೆ. (೨) ವರುಣನ ಮಕ್ಕಳು ಭೃಗುಗಳು. ವಾಲ್ಮೀಕಿಗಳೂ ವರುಣನ ಪುತ್ರರೇ. ಇದರಿಂದಲೂ ವಾಲ್ಮೀಕಿಗಳು ಭಾರ್ಗವರಾಗುತ್ತಾರೆ. ಇದು ವ್ಯಾಖ್ಯಾನಕಾರರ ಮತ. ಆದರೆ ಪುರಾಣಗಳ ಪ್ರಕಾರ ಭೃಗುವಂಶದ ಒಬ್ಬ ಋಷಿಯು ಅರಣ್ಯದಲ್ಲಿ ಬಿಟ್ಟುಹೋದ ಒಂದು ಶಿಶುವೇ ನಿಷಾದವೃತ್ತಿಯಲ್ಲಿದ್ದು ಕೊನೆಗೆ ಮಹರ್ಷಿಗಳ ಉಪದೇಶದಿಂದ ತಪಸ್ಸುಮಾಡಿ ಮಹರ್ಷಿ ವಾಲ್ಮೀಕಿಯಾದನು. ಭಾವಿತೇನ ಮಹಾತ್ಮನಾ। ಎಂದು ಮತ್ತೊಂದು ಪಾಠಾಂತರವೂ ಇದೆ.

ಅನುಜ್ಞೆಯನ್ನು ಪಡೆದು ಪರಮಹೃಷ್ಟರಾಗಿ ಮುನಿಶ್ರೇಷ್ಠರಾದ ವಾಲ್ಮೀಕಿಗಳು ತಂಗಿದ್ದ ಬಿಡಾರಕ್ಕೆ ತೆರಳಿದರು. ಶ್ರೀರಾಮನು ಕೂಡ ಮಹಾತ್ಮರಾದ ರಾಜರೊಡನೆಯೂ ಋಷಿ-ಮುನಿಗಳೊಡನೆಯೂ ಕುಳಿತು ರಾಮಾಯಣದ ಗೀತಮಾಧುರ್ಯವನ್ನು ಕೇಳಿದನಂತರ ಮುಂದಿನ ಯಜ್ಞಕ್ರಿಯೆಗಾಗಿ ಕರ್ಮ ಶಾಲೆಗೆ ತೆರಳಿದನು.

ಹೀಗೆ ಮೊದಲನೆಯ ದಿವಸ ಶ್ರೀರಾಮನು ತಾಲ-ಲಯಗಳಿಂದ ಸಂಪನ್ನವಾಗಿದ್ದ ಸರ್ಗಗಳಿಂದ ಕೂಡಿದ್ದ, ಸುಸ್ವರಯುಕ್ತವಾದ ಶಬ್ದಗಳಿಂದ ಕೂಡಿದ್ದ, ವೀಣಾವಾದ್ಯದೊಡನೆ ಮೇಳೈಸಿದ್ದ, ಕುಶೀ-ಲವರು ಹಾಡಿದ ರಾಮಾಯಣದ ದಿವ್ಯಗಾಯನವನ್ನು ಕೇಳಿದನು.

೯೪ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೫ನೆಯ ಸರ್ಗ

ಸೀತೆಯು ತಾನು ಶುದ್ಧಳೆಂಬುದನ್ನು ಪ್ರಮಾಣೀಕರಿಸಿ ಹೇಳಬೇಕೆಂದು ಶ್ರೀರಾಮನು ಅಭಿಪ್ರಾಯಪಟ್ಟುದು

ರಾಮೋ ಬಹೂನ್ಯಹಾನ್ಯೇವ ತದ್ಗೀತಂ ಪರಮಂ ಶುಭಮ್ ।
ಶುಶ್ರಾವ ಮುನಿಭಿಃ ಸಾರ್ಧಂ ಪಾರ್ಥಿವೈಃ ಸಹ ವಾನರೈಃ ॥೧॥

ಹೀಗೆ ಶ್ರೀರಾಮನು ಬಹಳ ದಿವಸಗಳವರೆಗೆ ಅತ್ಯಂತಶುಭಕರವಾದ ರಾಮಾಯಣಗಾಯನವನ್ನು ಮುನಿಗಳೊಡನೆಯೂ, ವಾನರರೊಡನೆಯೂ, ರಾಜರೊಡನೆಯೂ ಕುಳಿತು ಕೇಳಿದನು.

ಅವರ ಆ ಗಾಯನದಿಂದಲೇ ಶ್ರೀರಾಮನಿಗೆ ಕುಶೀ-ಲವರಿಬ್ಬರೂ ಸೀತೆಯ ಮಕ್ಕಳೆಂಬುದು ತಿಳಿಯಿತು. ಬಳಿಕ ಸಭಿಕರ ಮಧ್ಯದಲ್ಲಿ ಕುಳಿತಿದ್ದ ಶ್ರೀರಾಮನು ಶುದ್ಧವಾದ ಆಚಾರ-ವಿಚಾರಗಳಿಂದ ಕೂಡಿದ್ದ ದೂತರನ್ನು ಕರೆಯಿಸಿ ಹೇಳಿದನು :

"ನೀವೀಗಲೇ ಪೂಜ್ಯರಾದ ವಾಲ್ಮೀಕಿಮಹರ್ಷಿಗಳ ಬಳಿಗೆ ಹೋಗಿ ನನ್ನ ಈ ಮಾತನ್ನು ಅವರಿಗೆ ಹೇಳಿರಿ.

ಯದಿ ಶುದ್ಧಸಮಾಚಾರಾ ಯದಿ ವಾ ವೀತಕಲ್ಮಷಾ ।
ಕರೋತ್ವಿಹಾತ್ಮನಃ ಶುದ್ಧಿಮನುಮಾನ್ಯ ಮಹಾಮುನಿಮ್ ॥೨॥

"ಸೀತೆಯು ಶುದ್ಧಚಾರಿತ್ರ್ಯಳಾಗಿರುವುದಾದರೆ ಯಾವುದೇ ವಿಧವಾದ ಕಲ್ಮಷವೂ ಅವಳಲ್ಲಿಲ್ಲದಿದ್ದರೆ ಅವಳು ಮಹಾಮುನಿಗಳಾದ ನಿಮ್ಮ ಅನುಮತಿಯನ್ನು ಪಡೆದು ಇಲ್ಲಿಗೆ ಬಂದು ಈ ಜನಸಮುದಾಯದ ಮುಂದೆ ತನ್ನ ಪಾವಿತ್ರ್ಯವನ್ನು ಪ್ರಮಾಣೀಕರಿಸಲಿ."

ಹೀಗೆ ಹೇಳಿ ನೀವು ಈ ವಿಷಯದಲ್ಲಿ ಮಹರ್ಷಿಗಳಾದ ವಾಲ್ಮೀಕಿಗಳ ಅಭಿಪ್ರಾಯವನ್ನೂ ಸೀತೆಯ ಮನೋಗತವಾದ ಅಭಿಪ್ರಾಯವನ್ನೂ ತಿಳಿದು ಅವಳೇನಾದರೂ ತನ್ನ ಶುದ್ಧಚಾರಿತ್ರ್ಯವನ್ನು ಇಲ್ಲಿಗೆ ಬಂದು ಪ್ರಮಾಣೀಕರಿಸುವಳೇ?–ಎಂಬ ವಿಷಯವನ್ನು ಶೀಘ್ರವಾಗಿ ನನಗೆ ಹೇಳಿರಿ.

"ನಾಳೆಯ ದಿನ ಪ್ರಾತಃಕಾಲವೇ ಜನಕನ ಮಗಳಾದ ಸೀತೆಯು ಆಗಮಿಸಿ ತನ್ನ ಕಳಂಕವನ್ನು ದೂರಗೊಳಿಸಲು ಸಭಾಮಧ್ಯದಲ್ಲಿ ತನ್ನ ಪಾವಿತ್ರ್ಯವನ್ನು ಪ್ರಮಾಣೀಕರಿಸಲಿ."

ಶ್ರೀರಾಮನ ಪರಮಾದ್ಭುತವಾದ ಈ ಮಾತನ್ನು ಕೇಳಿ ದೂತರು ವಾಲ್ಮೀಕಿಮಹರ್ಷಿಗಳಿದ್ದ ಬಿಡಾರಕ್ಕೆ ತೆರಳಿದರು.

ಅಲ್ಲಿದ್ದ ವಾಲ್ಮೀಕಿಮಹರ್ಷಿಗಳನ್ನು ಕಂಡು ಮಹಾಪ್ರಭೆಯಿಂದ ಜ್ವಲಿಸುತ್ತಿದ್ದ ಮಹಾತ್ಮರಾದ ಆ ಮಹರ್ಷಿಗಳಿಗೆ ಪ್ರಣಾಮಮಾಡಿ ಮೃದುವಾಗಿಯೂ ಮಧುರವಾಗಿಯೂ ಇದ್ದ ಶ್ರೀರಾಮನ ಮಾತುಗಳನ್ನು ಮಹರ್ಷಿಗಳಿಗೆ ಹೇಳಿದರು.

ದೂತರ ಆ ಮಾತನ್ನು ಕೇಳಿ ಶ್ರೀರಾಮನ ಮನೋಗತವಾಗಿದ್ದ ಅಭಿಪ್ರಾಯವನ್ನೂ ತಿಳಿದು ಮಹಾತೇಜಸ್ವಿಗಳಾದ ವಾಲ್ಮೀಕಿಗಳು ಹೇಳಿದರು:

ಏವಂ ಭವತು ಭದ್ರಂ ವೋ ಯಥಾ ವದತಿ ರಾಘವಃ ।
ತಥಾ ಕರಿಷ್ಯತೇ ಸೀತಾ ದೈವತಂ ಹಿ ಪತಿಃ ಸ್ತ್ರಿಯಾಃ ॥೧೦॥

"ರಾಜಭಟರೇ! ನಿಮಗೆ ಮಂಗಳವಾಗಲಿ. ಶ್ರೀರಾಮನು ಹೇಗೆ ಹೇಳಿರುವನೋ ಹಾಗೆಯೇ ಎಲ್ಲವೂ ನಡೆಯಲಿ. ರಾಮನು ಹೇಳಿರುವಂತೆಯೇ ಸೀತೆಯು ಮಾಡುವಳು. ಏಕೆಂದರೆ ಸ್ತ್ರೀಯರಿಗೆ ಪತಿಯೇ ದೇವರು."

ವಾಲ್ಮೀಕಿಮಹರ್ಷಿಗಳು ಹೀಗೆ ಹೇಳಲು ರಾಜದೂತರು ಮಹಾತೇಜಸ್ವಿ

ಯಾದ ಶ್ರೀರಾಮನ ಬಳಿಗೆ ಬಂದು ವಾಲ್ಮೀಕಿಗಳ ಸಂದೇಶವನ್ನು ತಿಳಿಸಿದರು. ಮಹಾತ್ಮರಾದ ವಾಲ್ಮೀಕಿಗಳ ಆ ಮಾತನ್ನು ಕೇಳಿ ಅತ್ಯಂತಪ್ರಹೃಷ್ಟನಾದ ಶ್ರೀರಾಮನು ಅಲ್ಲಿ ನೆರೆದಿದ್ದ ಋಷಿಗಳನ್ನೂ ರಾಜರನ್ನೂ ಕುರಿತು ಹೇಳಿದನು:

ಭಗವನ್ತಃ ಸಶಿಷ್ಯಾ ವೈ ಸಾನುಗಾಶ್ಚ ನರಾಧಿಪಾಃ ।
ಪಶ್ಯನ್ತು ಸೀತಾಶಪಥಂ ಯಶ್ಚೈವಾನ್ಯೋಽಪಿ ಕಾಂಕ್ಷತೇ ॥೧೩॥

"ಪೂಜ್ಯಪಾದರಾದ ನೀವು ಶಿಷ್ಯಸಮೇತರಾಗಿ, ಇಲ್ಲಿಗೆ ಆಗಮಿಸಿರುವ ರಾಜರು ಅವರವರ ಅನುಯಾಯಿಗಳೊಡನೆ ಸೀತಾಶಪಥವನ್ನು ಕೇಳಿರಿ. ಸೀತೆಯ ಶಪಥವನ್ನು ಕೇಳಬಯಸುವ ಸಮಸ್ತರೂ ರಾಜಸಭೆಗೆ ಬಂದು ಅವಳ ಶಪಥವನ್ನು ಕೇಳಲಿ."

ಮಹಾತ್ಮನಾದ ಶ್ರೀರಾಮನು ಹೇಳಿದ ಈ ಮಾತನ್ನು ಕೇಳಿದೊಡನೆಯೇ ಶ್ರೇಷ್ಠರಾದ ಮಹರ್ಷಿಗಳು ಒಕ್ಕೊರಲಿನಿಂದ–**'ಸಾಧು! ರಾಘವ! ಸಾಧು!'**–ಎಂದು ಉದ್ಘೋಷಿಸಿದರು.

ಅಲ್ಲಿ ನೆರೆದಿದ್ದ ರಾಜರು ಕೂಡ ಶ್ರೀರಾಮನನ್ನು ಪ್ರಶಂಸಿಸುತ್ತಾ ಹೇಳಿದರು :

"ನರಶ್ರೇಷ್ಠನೇ! ನೀನು ಹೇಳಿದ ಮಾತು ಯೋಗ್ಯವಾಗಿದೆ. ಇಂತಹ ಮಾತುಗಳು ನಿನ್ನಿಂದಲ್ಲದೆ ಬೇರೆ ಯಾರ ಬಾಯಿಂದ ತಾನೇ ಬಂದಾವು. ಇಂತಹ ಮಾತುಗಳನ್ನು ಭೂಮಿಯಲ್ಲಿ ನೀನಲ್ಲದೆ ಬೇರೆ ಯಾರೂ ಆಡಲಾರರು."

ರಾಜರೆಲ್ಲರೂ ಹೀಗೆ ಪ್ರಶಂಸೆಮಾಡಿದನಂತರ ಶ್ರೀರಾಮನು ಮರುದಿವಸ ಪ್ರಾತಃಕಾಲ ಸೀತೆಯು ತನ್ನ ಪಾವಿತ್ರ್ಯವನ್ನು ಪ್ರಮಾಣೀಕರಿಸಬೇಕೆಂಬುದನ್ನು ನಿಶ್ಚಯಿಸಿ ಸಭಾಸದರೆಲ್ಲರನ್ನೂ ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟನು.

ಇತಿ ಸಂಪ್ರವಿಚಾರ್ಯ ರಾಜಸಿಂಹಃ
ಶ್ವೋಭೂತೇ ಶಪಥಸ್ಯ ನಿಶ್ಚಯಂ ವೈ ।
ವಿಸಸರ್ಜ ಮುನೀನ್ನೃಪಾಂಶ್ಚ ಸರ್ವಾ-
ನ್ಸ ಮಹಾತ್ಮಾ ಮಹತೋ ಮಹಾನುಭಾವಃ ॥೧೭॥

ಹೀಗೆ ರಾಜಶ್ರೇಷ್ಠನಾದ, ಮಹಾನುಭಾವನಾದ, ಮಹಾತ್ಮನಾದ ಶ್ರೀರಾಮನು ಮರುದಿವಸ ಬೆಳಿಗ್ಗೆ ರಾಜಸಭೆಯಲ್ಲಿ ಸೀತೆಯು ತನ್ನ ಪಾವಿತ್ರ್ಯದ ಬಗೆಗೆ ಶಪಥಮಾಡಬೇಕೆನ್ನುವ ಕಾರ್ಯಕ್ರಮವನ್ನು ನಿಶ್ಚಯಿಸಿ ಮುನಿಗಳನ್ನೂ, ರಾಜರನ್ನೂ ಮತ್ತು ಸಮಸ್ತಸಭಾಸದರನ್ನೂ ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟನು.

೯೫ನೆಯ ಸರ್ಗವು ಮುಗಿಯಿತು.

ಸೀತೆಯ ಪಾವಿತ್ರ್ಯದ ಬಗೆಗೆ ವಾಲ್ಮೀಕಿಮಹರ್ಷಿಗಳ ಸಮರ್ಥನೆ

ತಸ್ಯಾಂ ರಜನ್ಯಾಂ ವ್ಯುಷ್ಟಾಯಾಂ ಯಜ್ಞವಾಟಂ ಗತೋ ನೃಪಃ ।
ಋಷೀನ್ಸರ್ವಾನ್ಮಹಾತೇಜಾಃ ಶಬ್ದಾಪಯತಿ ರಾಘವಃ ॥೧॥

ರಾತ್ರಿಯು ಕಳೆದು ಪ್ರಾತಃಕಾಲವಾದನಂತರ ಮಹಾತೇಜಸ್ವಿಯಾದ ಶ್ರೀರಾಮನು ಯಜ್ಞವಾಟಕ್ಕೆ ಹೋದನಂತರ ಸಮಸ್ತಋಷಿ-ಮಹರ್ಷಿ ಗಳನ್ನೂ ರಾಜಸಭೆಗೆ ಆಹ್ವಾನಿಸಿದನು.

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ವಿಶ್ವಾಮಿತ್ರೋ ದೀರ್ಘತಮಾ ದುರ್ವಾಸಾಶ್ಚ ಮಹಾತಪಾಃ ॥೨॥

ಪುಲಸ್ತ್ಯೋಽಪಿ ತಥಾ ಶಕ್ತಿರ್ಭಾರ್ಗವಶ್ಚೈವ ವಾಮನಃ ।
ಮಾರ್ಕಣ್ಡೇಯಶ್ಚ ದೀರ್ಘಾಯುರ್ಮೌದ್ಗಲ್ಯಶ್ಚ ಮಹಾಯಶಾಃ ॥೩॥

ಗರ್ಗಶ್ಚ ಚ್ಯವನಶ್ಚೈವ ಶತಾನನ್ದಶ್ಚ ಧರ್ಮವಿತ್ ।
ಭರದ್ವಾಜಶ್ಚ ತೇಜಸ್ವೀ ಹ್ಯಗ್ನಿಪುತ್ರಶ್ಚ ಸುಪ್ರಭಃ ॥೪॥

ನಾರದಃ ಪರ್ವತಶ್ಚೈವ ಗೌತಮಶ್ಚ ಮಹಾಯಶಾಃ ।
ಕಾತ್ಯಾಯನಃ ಸುಯಜ್ಞಶ್ಚ ಹ್ಯಗಸ್ತ್ಯಸ್ತಪಸಾಂ ನಿಧಿಃ ॥೫॥

ಏತೇ ಚಾನ್ಯೇ ಚ ಬಹವೋ ಮುನಯಃ ಸಂಶಿತವ್ರತಾಃ ।
ಕೌತೂಹಲಸಮಾವಿಷ್ಟಾಃ ಸರ್ವ ಏವ ಸಮಾಗತಃ ॥೬॥

ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ವಿಶ್ವಾಮಿತ್ರ, ದೀರ್ಘ

ತಮಸ, ಮಹಾತೇಜಸ್ವಿಯಾದ ದುರ್ವಾಸ, ಪುಲಸ್ತ್ಯ, ಶಕ್ತಿ, ಭಾರ್ಗವ, ವಾಮನ, ಚಿರಂಜೀವಿಯಾದ ಮಾರ್ಕಂಡೇಯ, ಮಹಾಯಶೋವಂತನಾದ ಮೌದ್ಗಲ್ಯ, ಗರ್ಗ, ಚ್ಯವನ, ಧರ್ಮಜ್ಞನಾದ ಶತಾನಂದ, ತೇಜಸ್ವಿಯಾದ ಭರದ್ವಾಜ, ಅಗ್ನಿಯ ಮಗನಾದ ಸುಪ್ರಭ, ನಾರದ, ಪರ್ವತ, ಮಹಾ ತೇಜಸ್ವಿಯಾದ ಗೌತಮ, ಕಾತ್ಯಾಯನ, ಸುಯಜ್ಞ, ತಪೋನಿಧಿಯಾದ ಅಗಸ್ತ್ಯರು–ಇವರೇ ಅಲ್ಲದೆ ಕಠೋರವ್ರತನಿಷ್ಠರಾದ ಇನ್ನೂ ಅನೇಕ ಋಷಿ-ಮಹರ್ಷಿಗಳು ಕೌತೂಹಲದಿಂದ ಕೂಡಿದವರಾಗಿ ರಾಜಭವನಕ್ಕೆ ಆಗಮಿಸಿ ದರು.

ಮಹಾಪರಾಕ್ರಮಿಗಳಾದ ರಾಕ್ಷಸರೂ, ಮಹಾಬಲರಾದ ವಾನರರೂ, ಕುತೂಹಲದಿಂದ ಕೂಡಿದವರಾಗಿ ಶ್ರೀರಾಮನ ಸಭೆಗೆ ಆಗಮಿಸಿದರು. ಇತರ ದೇಶಗಳಿಗೆ ಹೋಗಿದ್ದ ಕಠೋರವ್ರತನಿಷ್ಠರಾದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ ಮತ್ತು ಶೂದ್ರರೂ ರಾಜಸಭೆಗೆ ಆಗಮಿಸಿದರು. ಜ್ಞಾನನಿಷ್ಠರೂ, ಕರ್ಮನಿಷ್ಠರೂ ಮತ್ತು ಯೋಗನಿಷ್ಠರೂ ಆಗಿದ್ದ ಋಷಿ-ಮಹರ್ಷಿಗಳು ಸೀತಾದೇವಿಯ ಶಪಥವನ್ನು ಕೇಳುವ ಕುತೂಹಲದಿಂದ ಶ್ರೀರಾಮನ ಸಭೆಗೆ ಆಗಮಿಸಿದರು. ಶ್ರೀರಾಮನ ಸಭೆಗೆ ಆಗಮಿಸಿದ್ದವರೆಲ್ಲರೂ ಸೀತಾ ಶಪಥವನ್ನು ವೀಕ್ಷಿಸುವ ಕುತೂಹಲದಿಂದ ಕಲ್ಲಿನ ವಿಗ್ರಹಗಳಂತೆ ತಟಸ್ಥರಾಗಿ ಕುಳಿತಿರುವರೆಂಬುದನ್ನು ತಿಳಿದು ವಾಲ್ಮೀಕಿಮಹರ್ಷಿಗಳು ಸೀತಾ ದೇವಿಯೊಡನೆ ಶೀಘ್ರವಾಗಿ ಯಜ್ಞವಾಟಕ್ಕೆ ಆಗಮಿಸಿದರು.

ವಾಲ್ಮೀಕಿಮಹರ್ಷಿಗಳ ಹಿಂದೆ ಸೀತಾದೇವಿಯು ಕೈಜೋಡಿಸಿಕೊಂಡು ತಲೆತಗ್ಗಿಸಿಕೊಂಡು ನಡೆದುಬರುತ್ತಿದ್ದಳು. ಅವಳ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯುತ್ತಿದ್ದಿತು. ತನ್ನ ಹೃನ್ಮಂದಿರದಲ್ಲಿದ್ದ ಶ್ರೀರಾಮನನ್ನೇ ಸದಾಕಾಲದಲ್ಲಿಯೂ ಚಿಂತಿಸುತ್ತಿದ್ದಳು. ಬ್ರಹ್ಮನನ್ನು ಅನುಸರಿಸಿ ಬರುವ ವೇದಮಾತೆಯಂತೆ ವಾಲ್ಮೀಕಿಮಹರ್ಷಿಗಳನ್ನು ಅನುಸರಿಸಿ ಬರುತ್ತಿದ್ದ ಸೀತಾದೇವಿಯನ್ನು ನೋಡಿ–**'ಸಾಧು! ಸೀತೇ! ಸಾಧು'**–ಎಂಬುದಾಗಿ ಸಭ್ಯರೆಲ್ಲರೂ ಉದ್ಘೋಷಿಸಿದರು. ಅವರ ಘೋಷಣೆಯು ಸರ್ವತ್ರಪ್ರತಿಧ್ವನಿಸಿತು. ಆ ಸಮಯದಲ್ಲಿ ಸೀತೆಯನ್ನು ನೋಡಿದ ಸಮಸ್ತ ಸಭ್ಯರ ಹೃದಯವೂ ದುಃಖವನ್ನುಂಟುಮಾಡುವ ಮಹಾಶೋಕದಿಂದ ವ್ಯಾಪ್ತ

ವಾಗಿದ್ದಿತು. ಅವರು ಮಾಡುತ್ತಿದ್ದ ಕೋಲಾಹಲಶಬ್ದವು ಸರ್ವತ್ರ ಪ್ರತಿಧ್ವನಿಸುತ್ತಿದ್ದಿತು.

ಸಾಧು ರಾಮೇತಿ ಕೇಚಿತ್ತು ಸಾಧು ಸೀತೇತಿ ಚಾಪರೇ ।
ಉಭಾವೇವ ಚ ತತ್ರಾನ್ಯೇ ಪ್ರೇಕ್ಷಕಾಃ ಸಂಪ್ರಚುಕ್ರುಶುಃ ॥೧೪॥

ಪ್ರೇಕ್ಷಕರಲ್ಲಿ ಕೆಲವರು 'ಸಾಧು! ರಾಮ! ಸಾಧು'–ಎಂದೂ ಮತ್ತೆ ಕೆಲವರು ಸಾಧು! ಸೀತೇ! ಸಾಧು!'–ಎಂದೂ ಇತರರು 'ಸಾಧು ರಾಮ! ಸಾಧು ಸೀತೇ!' ಎಂದೂ ಕೂಗಿಕೊಳ್ಳುತ್ತಿದ್ದರು.

ಆ ಸಮಯದಲ್ಲಿ ಜನಸಮುದಾಯದ ಮಧ್ಯದಲ್ಲಿ ವಾಲ್ಮೀಕಿಮಹರ್ಷಿಗಳು ಸೀತಾಸಮೇತರಾಗಿ ಪ್ರವೇಶಿಸಿ ಶ್ರೀರಾಮನಿಗೆ ಹೇಳಿದರು :

ಇಯಂ ದಾಶರಥೇ ಸೀತಾ ಸುವ್ರತಾ ಧರ್ಮಚಾರಿಣೀ ।
ಅಪವಾದಾತ್ಪರಿತ್ಯಕ್ತಾ ಮಮಾಶ್ರಮಸಮೀಪತಃ ॥೧೬॥

"ದಶರಥನಂದನನೇ! ಈ ಸೀತೆಯು ಉತ್ತಮವಾದ ವ್ರತಗಳನ್ನು ಪರಿಪಾಲಿಸತಕ್ಕವಳು. ಧರ್ಮಚಾರಿಣಿಯು. ಲೋಕಾಪವಾದದ ಭಯದಿಂದಾಗಿ ಇವಳು ನನ್ನ ಆಶ್ರಮದ ಸಮೀಪದಲ್ಲಿ ವಿಸರ್ಜಿಸಲ್ಪಟ್ಟಳು.

ಲೋಕಾಪವಾದಭೀತಸ್ಯ ತವ ರಾಮ ಮಹಾವ್ರತ ।
ಪ್ರತ್ಯಯಂ ದಾಸ್ಯತೇ ಸೀತಾ ತಾಮನುಜ್ಞಾತುಮರ್ಹಸಿ ॥೧೭॥

ಮಹಾವ್ರತನೇ! ಲೋಕಾಪವಾದದಿಂದ ಭಯಗೊಂಡಿರುವ ನಿನಗೆ ಈ ಮಹಾಸಭೆಯಲ್ಲಿ ಸೀತೆಯು ತನ್ನ ಪಾವಿತ್ರ್ಯದ ಬಗೆಗೆ ವಿಶ್ವಾಸವನ್ನು ಹುಟ್ಟಿಸುತ್ತಾಳೆ. ಅದಕ್ಕಾಗಿ ಅನುಜ್ಞೆಯನ್ನು ನೀಡುವವನಾಗು.

ಇಮೌ ತು ಜಾನಕೀಪುತ್ರಾವುಭೌ ಚ ಯಮಜಾತಕೌ ।
ಸುತೌ ತವೈವ ದುರ್ಧರ್ಷೌ ಸತ್ಯಮೇತದ್ಬ್ರವೀಮಿ ತೇ ॥೧೮॥

ಈ ಕುಶೀ-ಲವರು ಜಾನಕಿಯ ಗರ್ಭದಲ್ಲಿ ಜನಿಸಿದ ಅವಳಿಮಕ್ಕಳು. ನಿನ್ನ ಮಕ್ಕಳೇ ಆಗಿದ್ದಾರೆ. ನಿನ್ನಂತಯೇ ಶತ್ರುಗಳಿಂದ ಎದುರಿಸಲು ಅಸಾಧ್ಯರಾದ ಮಹಾವೀರರಾಗಿರುತ್ತಾರೆ. ನಾನು ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇನೆ.

ಪ್ರಚೇತಸೋಽಹಂ ದಶಮಃ ಪುತ್ರೋ ರಾಘವನನ್ದನ ।
ನ ಸ್ಮರಾಮ್ಯನೃತಂ ವಾಕ್ಯಮಿಮೌ ತು ತವ ಪುತ್ರಕಾ ॥೧೯॥

ರಾಘವ! ನಾನು ವರುಣನಿಂದ ಹತ್ತನೆಯವನಾದ ಕುಲಪುತ್ರನಾಗಿದ್ದೇನೆ.* ನನ್ನ ಜನ್ಮದಲ್ಲಿ ಇದುವರೆಗೂ ಸುಳ್ಳುಹೇಳಿರುವ ಸ್ಮರಣೆಯೇ ನನಗಿಲ್ಲ. ನಿಶ್ಚಯವಾಗಿಯೂ ಇವರು ನಿನ್ನ ಮಕ್ಕಳೇ ಆಗಿದ್ದಾರೆ.

ಬಹುವರ್ಷಸಹಸ್ರಾಣಿ ತಪಶ್ಚರ್ಯಾ ಮಯಾ ಕೃತಾ ।
ನೋಪಾಶ್ನೀಯಾಂ ಫಲಂ ತಸ್ಯಾ ದುಷ್ಟೇಯಂ ಯದಿ ಮೈಥಿಲೀ ॥೨೦॥

ರಾಘವ! ನಾನು ಅನೇಕಸಹಸ್ರವರ್ಷಗಳವರೆಗೆ ತಪಸ್ಸನ್ನು ಮಾಡಿದ್ದೇನೆ. ಜಾನಕಿಯು ದುಷ್ಟೆಯೇ ಆಗಿದ್ದರೆ ಅದರ ಫಲವು ನನಗೆ ಲಭಿಸದಿರಲಿ.

ಮನಸಾ ಕರ್ಮಣಾ ವಾಚಾ ಭೂತಪೂರ್ವಂ ನ ಕಿಲ್ಬಿಷಮ್ ।
ತಸ್ಯಾಹಂ ಫಲಮಶ್ನಾಮಿ ಅಪಾಪಾ ಮೈಥಿಲೀ ಯದಿ ॥೨೧॥

ನಾನು ಮನಸ್ಸಿನಿಂದಾಗಲೀ, ಕಾರ್ಯದಿಂದಾಗಲೀ, ಮಾತಿನಿಂದಾಗಲೀ ಯಾವ ವಿಧವಾದ ಪಾಪವನ್ನೂ ಮಾಡಿರುವುದಿಲ್ಲ. ಜಾನಕಿಯು ನಿಷ್ಪಾಪಳೇ ಆಗಿದ್ದರೆ ಮನೋ-ವಾಕ್ಕಾಯಕರ್ಮಗಳಿಂದ ಪಾಪಮಾಡದಿರುವುದಕ್ಕಾಗಿ ಪುಣ್ಯಫಲವು ನನಗೆ ಲಭಿಸಲಿ.

---

* ವರುಣನ ಪುತ್ರರು ಭೃಗುಮಹರ್ಷಿಗಳು. ಅವರು ಬ್ರಹ್ಮನ ಮಾನಸಪುತ್ರರೇ ಆಗಿದ್ದರೂ ಮುಂದೆ ವರುಣದೇವನ ಯಜ್ಞಕುಂಡದಿಂದ ಆವಿರ್ಭವಿಸಿದುದರಿಂದ ವರುಣಪುತ್ರರೆನಿಸುತ್ತಾರೆ. **ಭೃಗ್ವಾದೀನಾಮಪಿ ಬ್ರಹ್ಮಣ ಏವ ಮಾನಸಪುತ್ರಾಣಾಂ ವಾರುಣೇ ಯಜ್ಞೇ ಪುನರುತ್ಪತ್ತಿಃ ಶ್ರೂಯತೇ ।**

(ಬ್ರಹ್ಮಸೂತ್ರ-ಶಾಂಕರಭಾಷ್ಯ III-೭-೧೯ ಯಾವದಧಿಕರಣ)

ಅಂತಹ ಭೃಗುವಂಶಜರಲ್ಲಿ ಹತ್ತನೆಯವರು ವಾಲ್ಮೀಕಿಗಳು. ಅವರ ತಂದೆಯವರು ಒಂಬತ್ತನೇ ಭಾರ್ಗವರು. ಅವರು ಶಿಶುವನ್ನು ಅರಣ್ಯದಲ್ಲಿ ಬಿಟ್ಟುಹೋಗಲು ಒಬ್ಬ ಬೇಡನು ಅದನ್ನು ಬೆಳೆಸಿ ಬೇಡರ ವ್ಯವಹಾರ ಅವರಿಗೆ ಬರುವಂತೆ ಮಾಡಿದ. ಕೊನೆಗೆ ಅವರು ಸಪ್ತರ್ಷಿಗಳ ಅಥವಾ ನಾರದರ ಅನುಗ್ರಹದಿಂದ ತಪೋನಿಷ್ಠರಾಗಿ ಬ್ರಹ್ಮದೇವರ ಮಹಾನುಗ್ರಹಕ್ಕೆ ಪಾತ್ರರಾಗಿ ವಾಲ್ಮೀಕಿಮಹರ್ಷಿಗಳಾದರು.

ಅಹಂ ಪಞ್ಚಸು ಭೂತೇಷು ಮನಃಷಷ್ಠೇಷು ರಾಘವ ।
ವಿಚಿನ್ತ್ಯ ಸೀತಾ ಶುದ್ಧೇತಿ ಜಗ್ರಾಹ ವನನಿರ್ಝರೇ ॥೨೨॥

ಪಂಚಭೂತಸಾಕ್ಷಿಯಾಗಿ ಮತ್ತು ಮನಃಸಾಕ್ಷಿಯಾಗಿ ಸೀತೆಯು ಪರಿಶುದ್ಧಳೆಂದು ತಿಳಿದನಂತರವೇ ಆಶ್ರಮದ ಸಮೀಪದ ವನದಲ್ಲಿದ್ದ ಕಿರು ನದಿಯ ತೀರದಲ್ಲಿ ಇವಳನ್ನು ನಾನು ಮಗಳಂತೆ ಪರಿಗ್ರಹಿಸಿದೆನು.

ಇಯಂ ಶುದ್ಧಸಮಾಚಾರಾ ಅಪಾಪಾ ಪತಿದೇವತಾ ।
ಲೋಕಾಪವಾದಭೀತಸ್ಯ ಪ್ರತ್ಯಯಂ ತವ ದಾಸ್ಯತಿ ॥೨೩॥

ಇವಳು ನಿಶ್ಚಯವಾಗಿಯೂ ಶುದ್ಧಚಾರಿತ್ರ್ಯಳು. ಪತಿಯನ್ನೇ ಪರದೇವತೆಯನ್ನಾಗಿ ಭಾವಿಸಿರುವವಳು. ಲೋಕಾಪವಾದದಿಂದ ಭಯಗೊಂಡಿರುವ ನಿನಗೆ ತುಂಬಿರುವ ಈ ಮಹಾಸಭೆಯಲ್ಲಿ ತಾನು ಶುದ್ಧಚಾರಿತ್ರ್ಯಳೆಂಬುದನ್ನು ಶಪಥದ ಮೂಲಕವಾಗಿ ತೋರಿಸಿಕೊಡುತ್ತಾಳೆ.

ತಸ್ಮಾದಿಯಂ ನರವರಾತ್ಮಜ ಶುದ್ಧಭಾವಾ
ದಿವ್ಯೇನ ದೃಷ್ಟಿವಿಷಯೇಣ ಮಯಾ ಪ್ರವಿಷ್ಟಾ ।
ಲೋಕಾಪವಾದಕಲುಷೀಕೃತಚೇತಸಾ ಯಾ
ತ್ಯಕ್ತಾ ತ್ವಯಾ ಪ್ರಿಯತಮಾ ವಿದಿತಾಪಿ ಶುದ್ಧಾ ॥೨೪॥

ರಾಜಕುಮಾರ! ನಾನು ದಿವ್ಯದೃಷ್ಟಿಯಿಂದ ಸೀತೆಯ ಭಾವವೂ ಮತ್ತು ವಿಚಾರವೂ (ಚಾರಿತ್ರ್ಯವೂ) ಪರಮಪವಿತ್ರವಾಗಿರುವುದೆಂಬುದನ್ನು ತಿಳಿದುಕೊಂಡೆನು. ಇವಳು ಪವಿತ್ರಳಾಗಿದ್ದುದರಿಂದಲೇ ನಾನಿವಳನ್ನು ಆಶ್ರಮಕ್ಕೆ ಕರೆದೊಯ್ದೆನು. ನಿನಗೆ ಇವಳು ಅತ್ಯಂತಪ್ರಿಯಳಾಗಿದ್ದಾಳೆ. ಇವಳು ಪರಿಶುದ್ಧಳೆಂಬ ವಿಷಯವೂ ನಿನಗೆ ಗೊತ್ತಿದೆ. ಆದರೂ ಲೋಕಾಪವಾದದಿಂದ ಮನಸ್ಸನ್ನು ಕೆಡಿಸಿಕೊಂಡು ನೀನು ಇವಳನ್ನು ಪರಿತ್ಯಜಿಸಿದೆ."

ಲಿ೬ನೆಯ ಸರ್ಗವು ಮುಗಿಯಿತು.

ಸೀತಾದೇವಿಯ ಶಪಥ : ಅದಕ್ಕೆ ಅನುಸಾರವಾಗಿ ರಸಾತಲಪ್ರವೇಶ

ವಾಲ್ಮೀಕಿನೈವಮುಕ್ತಸ್ತು ರಾಘವಃ ಪ್ರತ್ಯಭಾಷತ ।
ಪ್ರಾಞ್ಜಲಿರ್ಜಗತೋ ಮಧ್ಯೇ ದೃಷ್ಟ್ವಾ ತಾಂ ವರವರ್ಣಿನೀಮ್ ॥೧॥

ವಾಲ್ಮೀಕಿಮಹರ್ಷಿಗಳು ಹೀಗೆ ಹೇಳಿದನಂತರ ಶ್ರೀರಾಮನು ಶ್ರೇಷ್ಠ ಸೌಂದರ್ಯಭೂಷಿತೆಯಾಗಿದ್ದ ಸೀತಾದೇವಿಯನ್ನು ನೋಡಿ ನೆರೆದಿದ್ದ ಜನ ಸಮುದಾಯದ ಮಧ್ಯದಲ್ಲಿ ಕೈಮುಗಿದುಕೊಂಡು ಹೇಳಿದನು :

“ಮಹಾಭಾಗರೇ! ಧರ್ಮವನ್ನು ತಿಳಿದಿರುವ ನೀವು ಹೇಗೆ ಹೇಳಿದಿರೋ ಹಾಗೆಯೇ ಆಗಲಿ. ನಿಮ್ಮ ಈ ನಿರ್ದುಷ್ಟವಾದ ಮಾತು ಗಳಿಂದಲೇ ಸೀತೆಯು ಶುದ್ಧಚಾರಿತ್ರ್ಯಳೆಂಬ ವಿಶ್ವಾಸವು ನನಗುಂಟಾಗಿದೆ.

ಪ್ರತ್ಯಯಶ್ಚ ಪುರಾ ವೃತ್ತೋ ವೈದೇಹ್ಯಾಃ ಸುರಸಂನಿಧೌ ।
ಶಪಥಶ್ಚ ಕೃತಸ್ತತ್ರ ತೇನ ವೇಶ್ಮ ಪ್ರವೇಶಿತಾ ॥೩॥

ಹಿಂದೆಯೂ ಕೂಡ ದೇವತೆಗಳ ಸನ್ನಿಧಿಯಲ್ಲಿ ಇವಳ ವಿಷಯದಲ್ಲಿ ವಿಶ್ವಾಸಹುಟ್ಟುವಂತಹ ಪ್ರಕರಣವು ಜರುಗಿತು. ಆಗಲೂ ವೈದೇಹಿಯೂ ತನ್ನ ಶುದ್ಧಚಾರಿತ್ರ್ಯದ ವಿಷಯದಲ್ಲಿ ಶಪಥಮಾಡಿ ಕೃತಾರ್ಥಳಾದಳು. ಆ ಕಾರಣದಿಂದಲೇ ನಾನು ಅವಳಿಗೆ ನನ್ನ ಅರಮನೆಯಲ್ಲಿ ಸ್ಥಾನವನ್ನು ಕಲ್ಪಿಸಿ ಕೊಟ್ಟೆನು.

ಲೋಕಾಪವಾದೋ ಬಲವಾನ್ಯೇನ ತ್ಯಕ್ತಾ ಹಿ ಮೈಥಿಲೀ ।
ಸೇಯಂ ಲೋಕಭಯಾದ್ಬ್ರಹ್ಮನ್ನಪಾಪೇತ್ಯಭಿಜಾನತಾ ।
ಪರಿತ್ಯಕ್ತಾ ಮಯಾ ಸೀತಾ ತದ್ಭವಾನ್ ಕ್ಷನ್ತುಮರ್ಹತಿ ॥೪॥

ಮುಂದೆ ಪುನಃ ಬಲವಾದ ಲೋಕಾಪವಾದವು ಬಂದಿತು. ಆ ಕಾರಣ ದಿಂದ ನಾನು ಮೈಥಿಲಿಯನ್ನು ಪರಿತ್ಯಜಿಸಬೇಕಾಯಿತು. ಸೀತೆಯು ಸರ್ವಥಾ ನಿಷ್ಪಾಪಳೆಂಬ ವಿಷಯವು ನನಗೆ ಗೊತ್ತಿದ್ದಿತು. ಗೊತ್ತಿದ್ದರೂ ಲೋಕನಿಂದೆಗೆ ಹೆದರಿ ನಾನು ಇವಳನ್ನು ಪರಿತ್ಯಜಿಸಿದೆನು. ನನ್ನ ಈ ಅಪರಾಧವನ್ನು ತಾವು ಕ್ಷಮಿಸಬೇಕು.

ಜಾನಾಮಿ ಚೇಮೌ ಪುತ್ರೌ ಮೇ ಯಮಜಾತೌ ಕುಶೀಲವೌ ।
ಶುದ್ಧಾಯಾಂ ಜಗತೋ ಮಧ್ಯೇ ಮೈಥಿಲ್ಯಾಂ ಪ್ರೀತಿರಸ್ತು ಮೇ ॥೫॥

ಅವಳಿಮಕ್ಕಳಾದ ಕುಶೀ-ಲವರು ನನ್ನ ಮಕ್ಕಳೆಂಬುದನ್ನೂ ನಾನು ತಿಳಿದಿರುತ್ತೇನೆ. ಆದರೂ ಈ ಜನಸಮುದಾಯದಲ್ಲಿ ತಾನು ಶುದ್ಧಚಾರಿತ್ರ್ಯಳೆಂಬುದನ್ನು ಪ್ರಮಾಣೀಕರಿಸಿದನಂತರವೇ ಇವಳು ನನ್ನ ಪ್ರೀತಿಗೆ ಪಾತ್ರಳಾಗುತ್ತಾಳೆ."

ಶ್ರೀರಾಮನ ಈ ಅಭಿಪ್ರಾಯವನ್ನು ತಿಳಿದು ಸೀತೆಯು ತನ್ನ ಶುದ್ಧತೆಯನ್ನು ಪ್ರಮಾಣೀಕರಿಸಬೇಕಾಗಿದ್ದ ಆ ಸಮಯಕ್ಕೆ ಸರಿಯಾಗಿ ಇಂದ್ರನೇ ಮೊದಲಾದ ಮಹಾತೇಜಸ್ವಿಗಳಾದ ದೇವತೆಗಳು ಬ್ರಹ್ಮನನ್ನು ಮುಂದೆಮಾಡಿಕೊಂಡು ಅಲ್ಲಿಗೆ ಆಗಮಿಸಿದರು. ಪ್ರಸನ್ನಚಿತ್ತರಾಗಿದ್ದ ಆದಿತ್ಯರು, ವಸುಗಳು, ರುದ್ರರು, ವಿಶ್ವೇದೇವತೆಗಳು, ಸಪ್ತಮರುತ್ತುಗಳು, ಸಾಧ್ಯರು, ಸಮಸ್ತದೇವತೆಗಳು, ಸಮಸ್ತಮಹರ್ಷಿಗಳು, ನಾಗರು, ಸುಪರ್ಣರು, ಸಿದ್ಧರು–ಸೀತಾದೇವಿಯು ಶಪಥಮಾಡುವಳೆಂಬ ವಾರ್ತೆಯನ್ನು ಕೇಳಿ ಭ್ರಾಂತರಾಗಿ ಅಲ್ಲಿಗೆ ಆಗಮಿಸಿದರು. ದೇವತೆಗಳನ್ನೂ ಮತ್ತು ಮಹರ್ಷಿಗಳನ್ನೂ ಯಜ್ಞಮಂಟಪದಲ್ಲಿ ನೋಡಿ ಶ್ರೀರಾಮನು ಹೇಳಿದನು :

ಪ್ರತ್ಯಯೋ ಮೇ ಸುರಶ್ರೇಷ್ಠಾ ಋಷಿವಾಕ್ಯೈರಕಲ್ಮಷೈಃ ।
ಶುದ್ಧಾಯಾಂ ಜಗತೋ ಮಧ್ಯೇ ವೈದೇಹ್ಯಾಂ ಪ್ರೀತಿರಸ್ತು ಮೇ ॥

"ಸುರಶ್ರೇಷ್ಠರೇ! ಮಹರ್ಷಿಗಳಾದ ವಾಲ್ಮೀಕಿಗಳು ಹೇಳಿರುವ ದೋಷರಹಿತವಾದ ಮಾತಿನಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಆದರೂ ಈ ಜನಸಮುದಾಯದಲ್ಲಿ ವೈದೇಹಿಯು ತನ್ನ ಪಾವಿತ್ರ್ಯವನ್ನು ಪ್ರಮಾಣೀಕರಿಸಿದರೆ ವೈದೇಹಿಯ ವಿಷಯದಲ್ಲಿ ನನಗೆ ಹೆಚ್ಚಿನ ಪ್ರೀತಿಯುಂಟಾಗುತ್ತದೆ."

ಬಳಿಕ ದಿವ್ಯನಾದ, ಸುಗಂಧಯುಕ್ತನಾದ, ಮನಸ್ಸಿಗೆ ಹಿತವನ್ನುಂಟುಮಾಡುವ, ಪರಮಪವಿತ್ರನಾದ, ಶುಭದಾಯಕನಾದ, ಸುರಶ್ರೇಷ್ಠನಾದ ವಾಯುದೇವನು ಮಂದವಾಗಿ ಬೀಸುತ್ತಾ ಅಲ್ಲಿ ನೆರೆದಿದ್ದ ಜನಸಮುದಾಯಕ್ಕೆ ಆಹ್ಲಾದವನ್ನುಂಟುಮಾಡಿದನು. ಭೂಮಂಡಲದ ಸಮಸ್ತರಾಷ್ಟ್ರಗಳಿಂದಲೂ ಆಗಮಿಸಿದ್ದ ಮನುಷ್ಯರು ಏಕಾಗ್ರಚಿತ್ತರಾಗಿ ಹಿಂದಿನ ಕೃತಯುಗದಂತೆಯೇ ನಡೆಯಲಿದ್ದ ಅದ್ಭುತವೂ ಅಚಿಂತ್ಯವೂ ಆಗಿದ್ದ ಆ ಘಟನೆಯನ್ನು ನಿರೀಕ್ಷಿ

ಸುತ್ತಿದ್ದರು. ಆ ಸಮಯದಲ್ಲಿ ಸೀತಾದೇವಿಯು ತಪಸ್ವಿನಿಯರಂತೆ ಕಾಷಾಯ ವಸ್ತ್ರವನ್ನು ಧರಿಸಿದ್ದಳು. ದೇವತೆಗಳಾದಿಯಾಗಿ ಸಮಸ್ತರೂ ಆಗಮಿಸಿರುವುದನ್ನು ಕಂಡು ಕೈಜೋಡಿಸಿಕೊಂಡು ಅಧೋಮುಖಿಯಾಗಿ ಈ ಮಾತನ್ನು ಹೇಳಿದಳು :

ಯಥಾಹಂ ರಾಘವಾದನ್ಯಂ ಮನಸಾಪಿ ನ ಚಿನ್ತಯೇ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ॥೧೪॥

"ನಾನು ರಘುನಂದನನನ್ನು ಬಿಟ್ಟು ಬೇರೆ ಯಾರನ್ನೂ ಮನಸ್ಸಿನಲ್ಲಿ ಕೂಡ ಚಿಂತಿಸೆನೆಂಬುದು ನಿಶ್ಚಯವಾಗಿದ್ದರೆ ಭಗವತೀ ಭೂದೇವಿಯು ತನ್ನ ರಂಧ್ರದಲ್ಲಿ ನನಗೆ ಸ್ಥಾನವನ್ನೀಯಲಿ.

ಮನಸಾ ಕರ್ಮಣಾ ವಾಚಾ ಯಥಾ ರಾಮಂ ಸಮರ್ಚಯೇ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ॥೧೫॥

ಮನಸ್ಸಿನಿಂದಲೂ, ಕ್ರಿಯೆಯಿಂದಲೂ ಮತ್ತು ಮಾತಿನಿಂದಲೂ ನಾನು ಯಾವಾಗಲೂ ರಾಮನನ್ನೇ ಅರ್ಚಿಸುತ್ತಿದ್ದುದು ನಿಶ್ಚಯವಾದರೆ ಮಾಧವನ ಪತ್ನಿಯಾದ ಭೂದೇವಿಯು ತನ್ನ ರಂಧ್ರದೊಳಗೆ ನನಗೆ ಸ್ಥಾನವನ್ನೀಯಲಿ.

ಯಥೈತತ್ಸತ್ಯಮುಕ್ತಂ ಮೇ ವೇದ್ಮಿ ರಾಮಾತ್ಪರಂ ನ ಚ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ॥೧೬॥

'ಶ್ರೀರಾಮನನ್ನು ಬಿಟ್ಟು ಬೇರೆ ಯಾರನ್ನೂ ನಾನರಿಯೆನು'–ಎಂಬ ಈ ನನ್ನ ಮಾತು ಸತ್ಯವೇ ಆಗಿದ್ದರೆ ಮಾಧವನ ಪತ್ನಿಯಾದ ಭೂದೇವಿಯು ತನ್ನ ರಂಧ್ರವನ್ನು ನನಗೆ ಆಶ್ರಯಸ್ಥಾನವನ್ನಾಗಿ ಮಾಡಿಕೊಡಲಿ."

ವೈದೇಹಿಯು ಹೀಗೆ ಶಪಥಮಾಡುತ್ತಿರಲಾಗಿ ಭೂಮಿಯಿಂದ ಅದ್ಭುತವಾದ, ದಿವ್ಯವಾದ, ಶ್ರೇಷ್ಠವಾದ ಸಿಂಹಾಸನವು ಹೊರಬಂದಿತು. ದಿವ್ಯರತ್ನಗಳಿಂದ ಸಮಲಂಕೃತರಾಗಿದ್ದ ಮಹಾಪರಾಕ್ರಮಿಗಳಾದ ನಾಗರು ದಿವ್ಯವಾದ ರೂಪಗಳನ್ನು ಧರಿಸಿ ಆ ದಿವ್ಯಸಿಂಹಾಸನವನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿ ದ್ದರು. ಆ ಸಿಂಹಾಸನದ ಜೊತೆಯಲ್ಲಿಯೇ ಭೂದೇವಿಯೂ ಆಗಮಿಸಿ ತನ್ನೆ ರಡು ತೋಳುಗಳಿಂದಲೂ ಸೀತಾದೇವಿಯನ್ನು ಬಾಚಿತಬ್ಬಿಕೊಂಡು ಸ್ವಾಗತ ಪೂರ್ವಕವಾಗಿ ಸೀತಾದೇವಿಯನ್ನು ಅಭಿನಂದಿಸುತ್ತಾ ಸಿಂಹಾಸನದಲ್ಲಿ

ಕುಳ್ಳಿರಿಸಿದಳು. ಸೀತೆಯು ಸಿಂಹಾಸನದಲ್ಲಿ ಕುಳಿತಿದ್ದುದನ್ನೂ ರಸಾತಲವನ್ನು ಪ್ರವೇಶಿಸುತ್ತಿದ್ದುದನ್ನೂ ನೋಡಿ ದೇವತೆಗಳು ಆಕಾಶದಿಂದ ಸೀತಾದೇವಿಯ



ಮೇಲೆ ಅವಿಚ್ಛಿನ್ನವಾದ ಪುಷ್ಪವೃಷ್ಟಿಯನ್ನು ಸುರಿಸಿದರು. ಒಡನೆಯೇ ದೇವತೆಗಳ ಧನ್ಯವಾದದ ಮಹಾಶಬ್ದವು ಸರ್ವತ್ರ ಕೇಳಿಬರುತ್ತಿದ್ದಿತು.

ಸಾಧು ಸಾಧ್ವಿತಿ ವೈ ಸೀತೇ ಯಸ್ಯಾಸ್ತೇ ಶೀಲಮೀದೃಶಮ್ ॥೨೧॥

'ಸೀತೆ! ಸಾಧು! ನಿಶ್ಚಯವಾಗಿಯೂ ನಿನ್ನ ಇಂತಹ ಶೀಲವು ಪರಮ ಪವಿತ್ರವಾದುದು ಮತ್ತು ಅತ್ಯಂತಶುದ್ಧವಾದುದು. ನೀನೇ ಧನ್ಯೆ.'

ಸೀತಾದೇವಿಯು ತಾನು ಮಾಡಿದ ಶಪಥದಂತೆ ತನ್ನ ತಾಯಿಯೊಡನೆ ರಸಾತಲವನ್ನು ಪ್ರವೇಶಿಸಿದುದನ್ನು ಕಂಡು ಅಂತರಿಕ್ಷದಲ್ಲಿದ್ದ ದೇವತೆಗಳು ಪ್ರಸನ್ನಚಿತ್ತರಾಗಿ ಇದೇ ರೀತಿಯಲ್ಲಿ ಅನೇಕಪ್ರಕಾರವಾದ ಪ್ರಶಂಸಾವಾಕ್ಯಗಳನ್ನು ನುಡಿದರು. ಯಜ್ಞಮಂಟಪದಲ್ಲಿದ್ದ ಸಮಸ್ತಮುನಿಗಳೂ ನರಶ್ರೇಷ್ಠ

ರಾದ ರಾಜರೂ ಸೀತೆಯ ರಸಾತಲಪ್ರವೇಶವನ್ನು ಕಂಡು ಅಚ್ಚರಿಗೊಂಡರು. ಭೂಮ್ಯಂತರಿಕ್ಷಗಳಲ್ಲಿದ್ದ ಚರಾಚರಪ್ರಾಣಿಗಳೂ, ಪಾತಾಳದಲ್ಲಿದ್ದ ಮಹಾ ಕಾಯರಾದ ರಾಕ್ಷಸರೂ, ನಾಗರಾಜರೂ ವಿಸ್ಮಯಗೊಂಡರು. ಆ ಮಹಾ ದೃಶ್ಯವನ್ನು ನೋಡಿದ ಕೆಲವರು ಹರ್ಷದಿಂದ ನಿನಾದಮಾಡಿದರು. ಕೆಲವರು ಧ್ಯಾನಮಗ್ನರಾದರು. ಕೆಲವರು ಶ್ರೀರಾಮನ ಕಡೆಗೆ ನೋಡುತ್ತಿದ್ದರು. ಕೆಲವರು ಬುದ್ಧಿಗೆಟ್ಟವರಾಗಿ ಸೀತಾದೇವಿಯ ರಸಾತಲಪ್ರವೇಶವನ್ನೇ ಎವೆಯಿಕ್ಕದೇ ನೋಡುತ್ತಿದ್ದರು. ಸೀತಾದೇವಿಯು ರಸಾತಲವನ್ನು ಪ್ರವೇಶಿಸಿದುದನ್ನು ಕಂಡು ಸಮಸ್ತರಿಗೂ ಹರ್ಷ-ಶೋಕಗಳೆರಡೂ ಏಕಕಾಲದಲ್ಲಿ ಉಂಟಾದುವು. ಒಂದು ಮುಹೂರ್ತದವರೆಗೆ ಅಲ್ಲಿ ನೆರೆದಿದ್ದವರೆಲ್ಲರೂ ವಿಮೋಹಿತರಾದರು.

೯೭ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೯೮ನೆಯ ಸರ್ಗ

ಸೀತೆಗಾಗಿ ಶ್ರೀರಾಮನ ವಿಲಾಪ : ಬ್ರಹ್ಮನು ಶ್ರೀರಾಮನನ್ನು ಸಮಾಧಾನಗೊಳಿಸಿದುದು : ಉತ್ತರಕಾಂಡದ ಶೇಷಭಾಗವನ್ನು ಕುಶೀ-ಲವರಿಂದ ಕೇಳುವಂತೆ ಶ್ರೀರಾಮನಿಗೆ ಬ್ರಹ್ಮನ ಪ್ರೇರಣೆ

ರಸಾತಲಂ ಪ್ರವಿಷ್ಟಾಯಾಂ ವೈದೇಹ್ಯಾಂ ಸರ್ವವಾನರಾಃ ।
ಚುಕ್ರುಶುಃ ಸಾಧು ಸಾಧ್ವೀತಿ ಮುನಯೋ ರಾಮಸಂನಿಧೌ ॥೧॥

ಸೀತಾದೇವಿಯು ತನ್ನ ಶಪಥಕ್ಕನುಸಾರವಾಗಿ ರಸಾತಲವನ್ನು ಹೊಕ್ಕ ನಂತರ ಯಜ್ಞಮಂಟಪದಲ್ಲಿ ಕುಳಿತಿದ್ದ ವಾನರರೂ ಮತ್ತು ಮುನಿಗಳೂ "ಸಾಧು ಸೀತೇ! ಸಾಧು! ನೀನೇ ಧನ್ಯಳು ; ಪರಮಪವಿತ್ರಳು'–ಎಂದು ರಸಾತಲವನ್ನು ಸೇರಿರುವ ಸೀತೆಗೂ ಕೇಳಲೋ ಎಂಬಂತೆ ಕೂಗಿಕೊಂಡರು. ಆದರೆ ಯಜ್ಞವಾಟದ ಕಂಬವನ್ನು ಅವಲಂಬಿಸಿ ನಿಂತಿದ್ದ ಶ್ರೀರಾಮನ ಕಣ್ಣು ಗಳಲ್ಲಿ ಕಂಬನಿಯು ತುಂಬಿಕೊಂಡಿತು. ಅತ್ಯಂತದುಃಖಿತನಾಗಿಯೂ ದೀನ ಮನಸ್ಕನಾಗಿಯೂ ಇದ್ದ ಶ್ರೀರಾಮನು ತಲೆತಗ್ಗಿಸಿಕೊಂಡು ನಿಂತಿದ್ದನು. ಅವನು ಬಹಳ ಹೊತ್ತಿನವರೆಗೆ ಅಳುತ್ತಲೇ ಇದ್ದನು ; ಕಣ್ಣೀರುಸುರಿಸುತ್ತಲೇ ಇದ್ದನು. ಕ್ರೋಧದಿಂದಲೂ ಶೋಕದಿಂದಲೂ ಸಮಾವೃತನಾಗಿದ್ದ ಶ್ರೀರಾಮನು ಹೇಳಿದನು :

ಅಭೂತಪೂರ್ವಂ ಶೋಕಂ ಮೇ ಮನಃ ಸ್ಪ್ರಷ್ಟುಮಿವೇಚ್ಛತಿ ।
ಪಶ್ಯತೋ ಮೇ ಯಥಾ ನಷ್ಟಾ ಸೀತಾ ಶ್ರೀರಿವ ರೂಪಿಣೀ ॥೪॥

"ಅಯ್ಯೋ! ನನ್ನ ಮನಸ್ಸಿಂದು ಅಭೂತಪೂರ್ವವಾದ ಶೋಕದಲ್ಲಿ ಮುಳುಗಿಹೋಗಲಿದೆ. ಏಕೆಂದರೆ ಲಕ್ಷ್ಮಿಯ ಸದೃಶಳೇ ಆಗಿದ್ದ ನನ್ನ ಸೀತೆಯು ನನ್ನ ಕಣ್ಣೆದುರಿನಲ್ಲಿಯೇ ಅದೃಶ್ಯಳಾಗಿ ಹೋದಳಲ್ಲವೇ?

ಈ ಹಿಂದೆ ಸೀತಾದೇವಿಯು ದಕ್ಷಿಣಸಮುದ್ರದ ಆಚೆಯ ತೀರದಲ್ಲಿರುವ ಲಂಕಾಪಟ್ಟಣಕ್ಕೆ ಒಯ್ಯಲ್ಪಟ್ಟು ಅದೃಶ್ಯಳಾಗಿದ್ದಳು. ಅಲ್ಲಿಂದಲೂ ಅವಳನ್ನು ನಾನೇ ಕರೆತಂದೆನು. ಈಗ ನಾನು ಪಾತಾಳಲೋಕದಿಂದ ಅವಳನ್ನು ಕರೆತರಲಾರೆನೇ?

ವಸುಧೇ ದೇವಿ ಭವತಿ ನಿರ್ಯಾತ್ಯತಾಂ ಮಮ ।
ದರ್ಶಯಿಷ್ಯಾಮಿ ವಾ ರೋಷಂ ಯಥಾ ಮಾಮವಗಚ್ಛಸಿ ॥೬॥

ಪೂಜನೀಯಳೇ! ವಸುಂಧರೆಯೇ! ದೇವಿ! ನೀನು ನನ್ನ ಸೀತೆ ಯನ್ನು ಹಿಂದಿರುಗಿಸಿಕೊಡು. ಹಾಗೇನಾದರೂ ಮಾಡದಿದ್ದರೆ ನನ್ನ ಕೋಪದ ಪ್ರಭಾವವೇನೆಂಬುದನ್ನು ನಿನಗೆ ತೋರಿಸಿಕೊಡುತ್ತೇನೆ. ನನ್ನ ಪ್ರತಾಪ ವೆಷ್ಟೆಂಬುದನ್ನು ನೀನೂ ತಿಳಿದಿರುವೆ.

ಕಾಮಂ ಶ್ವಶ್ರೂರ್ಮಮೈವ ತ್ವಂ ತ್ವತ್ಸಕಾಶಾತ್ತು ಮೈಥಿಲೀ ।
ಕರ್ಷತಾ ಹಲಹಸ್ತೇನ ಜನಕೇನೋದ್ಧೃತಾ ಪುರಾ ॥೭॥

ನಿಶ್ಚಯವಾಗಿ ಹೇಳುವುದಾದರೆ ನೀನು ನನಗೆ ಅತ್ತೆಯಾಗಬೇಕು. ಜನಕರಾಜನು ನೇಗಿಲಿನಿಂದ ಉಳುತ್ತಿದ್ದಾಗ ನಿನ್ನಿಂದ ಮೈಥಿಲಿಯನ್ನು ಪಡೆದುಕೊಂಡನು. ಈ ಪರಿಯಲ್ಲಿ ಸೀತೆಯು ನಿನ್ನ ಮಗಳಾದುದರಿಂದ ನೀನು ನನಗೆ ಅತ್ತೆಯಾಗಬೇಕು.

ತಸ್ಮಾನ್ನಿರ್ಯಾತ್ಯತಾಂ ಸೀತಾ ವಿವರಂ ವಾ ಪ್ರಯಚ್ಛ ಮೇ ।
ಪಾತಾಲೇ ನಾಕಪೃಷ್ಠೇ ವಾ ವಸೇಯಂ ಸಹಿತಸ್ತಯಾ ॥೮॥

ಆದುದರಿಂದ ಸೀತೆಯನ್ನು ಈಗಲೇ ಕಳುಹಿಸಿಕೊಡು. ಅಥವಾ ಅವ ಳನ್ನು ಕರೆದೊಯ್ದ ಬಿಲವನ್ನಾದರೂ ನನಗೆ ತೋರಿಸು. ಪಾತಾಳದಲ್ಲೇ ಆಗಲೀ ಸ್ವರ್ಗದಲ್ಲೇ ಆಗಲೀ ನಾನವಳೊಡನೆ ಇದ್ದುಬಿಡುತ್ತೇನೆ.

ಆನಯ ತ್ವಂ ಹಿ ತಾಂ ಸೀತಾಂ ಮತ್ತೋಽಹಂ ಮೈಥಿಲೀಕೃತೇ ।
ನ ಮೇ ದಾಸ್ಯಸಿ ಚೇತ್ಸೀತಾಂ ಯಥಾರೂಪಾಂ ಮಹೀತಲೇ ॥೯॥

ಸಪರ್ವತವನಾಂ ಕೃತ್ಸ್ನಾಂ ವಿಧಮಿಷ್ಯಾಮಿ ತೇ ಸ್ಥಿತಿಮ್ ।
ನಾಶಯಿಷ್ಯಾಮ್ಯಹಂ ಭೂಮಿಂ ಸರ್ವಮಾಪೋ ಭವತ್ವಿಹ ॥೧೦॥

ಭೂದೇವಿ! ನನ್ನ ಸೀತೆಯನ್ನೀಗಲೇ ತಂದುಕೊಡು. ನನ್ನ ಸೀತೆಯ ಸಲುವಾಗಿ ನಾನೀಗ ವಿವೇಕಶೂನ್ಯನಾಗಿಬಿಟ್ಟಿದ್ದೇನೆ. ಒಂದು ವೇಳೆ ನೀನು ಸೀತೆಯನ್ನು ಹಿಂದಿರುಗಿ ಕರೆತರದಿದ್ದಲ್ಲಿ ಪರ್ವತ-ವನಗಳಿಂದ ಕೂಡಿರುವ ಸಮಗ್ರವಾದ ನಿನ್ನ ಸ್ವರೂಪವನ್ನು ಧ್ವಂಸಮಾಡಿಬಿಡುತ್ತೇನೆ. ಭೂಮಂಡಲ ವನ್ನೇ ವಿನಾಶಗೊಳಿಸುತ್ತೇನೆ. ಇಲ್ಲಿ ಸಮಸ್ತವೂ ಜಲಮಯವಾಗಿಹೋಗಲಿ."

ಕ್ರೋಧ ಮತ್ತು ಶೋಕಗಳಿಂದ ಸಮಾವೃತನಾಗಿದ್ದ ಶ್ರೀರಾಮನು ಹೀಗೆ ಗರ್ಜನೆಮಾಡುತ್ತಿರಲಾಗಿ ದೇವತೆಗಳೊಡನಿದ್ದ ಬ್ರಹ್ಮನು ಶ್ರೀರಾಮ ನಿಗೆ ಹೇಳಿದನು :

ರಾಮ ರಾಮ ನ ಸಂತಾಪಂ ಕರ್ತುಮರ್ಹಸಿ ಸುವ್ರತ ।
ಸ್ಮರ ತ್ವಂ ಪೂರ್ವಕಂ ಭಾವಂ ಮನ್ತ್ರಂ ಚಾಮಿತ್ರಕರ್ಶನ ॥೧೨॥

"ಸುವ್ರತನೇ! ರಾಮಚಂದ್ರ! ನೀನು ಹೀಗೆ ಸಂತಾಪಗೊಳ್ಳಬೇಡ. ಶತ್ರುಸೂದನನೇ! ನಿನ್ನ ಹಿಂದಿನ ಸ್ವರೂಪವನ್ನು ಮತ್ತು ನಿಬಂಧನೆಯನ್ನೂ ಸ್ಮರಿಸಿಕೋ.

ನ ಖಲು ತ್ವಾಂ ಮಹಾಬಾಹೋ ಸ್ಮಾರಯೇಯಮನುತ್ತಮಮ್ ।
ಇಮಂ ಮುಹೂರ್ತಂ ದುರ್ಧರ್ಷ ಸ್ಮರ ತ್ವಂ ಜನ್ಮ ವೈಷ್ಣವಮ್ ॥

ಎಲೈ ಮಹಾಬಾಹುವೇ! ಸರ್ವೋತ್ತಮನೇ! ದುರ್ಧರ್ಷನೇ! ನಿನಗೆ ನಾನು ಏನನ್ನೂ ಜ್ಞಾಪಿಸಬೇಕಾದ ಅವಶ್ಯಕತೆಯಿಲ್ಲ. ಆದರೂ ವಿಜ್ಞಾಪಿಸು ತ್ತೇನೆ–ನೀನು ವಿಷ್ಣುವಿನ ಅವತಾರವಾಗಿ ಹುಟ್ಟಿಬಂದಿರುವೆಯೆಂಬುದನ್ನು ನೆನಪಿಸಿಕೋ.

ಸೀತಾ ಹಿ ವಿಮಲಾ ಸಾಧ್ವೀ ತವ ಪೂರ್ವಪರಾಯಣಾ ।
ನಾಗಲೋಕಂ ಸುಖಂ ಪ್ರಾಯತ್ತ್ವದಾಶ್ರಯತಪೋಬಲಾತ್ ॥೧೪॥

ಸಾಧ್ವಿಯಾದ ಸೀತೆಯು ಪರಮಪವಿತ್ರಳಾಗಿರುತ್ತಾಳೆ. ಅವಳು ಈ

ಹಿಂದೆ ನಿನ್ನನ್ನೇ ಆಶ್ರಯನನ್ನಾಗಿ ಹೊಂದಿದ್ದಳು. ನಿನ್ನನ್ನೇ ಪರಮಾಶ್ರಯನೆಂದು ಭಾವಿಸಿ ಆಚರಿಸುತ್ತಿದ್ದ ತಪಸ್ಸಿನ ಪ್ರಭಾವದಿಂದಲೇ ಅವಳೀಗ ಸುಖವಾಗಿ ನಾಗಲೋಕಕ್ಕೆ ಹೋಗಿದ್ದಾಳೆ.

ಸ್ವರ್ಗೇ ತೇ ಸಂಗಮೋ ಭೂಯೋ ಭವಿಷ್ಯತಿ ನ ಸಂಶಯಃ ।
ಅಸ್ಯಾಸ್ತು ಪರಿಷನ್ಮಧ್ಯೇ ಯದ್ಬ್ರವೀಮಿ ನಿಬೋಧ ತತ್ ॥೧೫॥

ನೀನು ಪುನಃ ಅವಳನ್ನು ಸ್ವರ್ಗಲೋಕದಲ್ಲಿ ಸೇರುವೆ. ಇದರಲ್ಲಿ ಸಂಶಯವೇ ಇಲ್ಲ. ಈ ಸಭೆಯ ಮಧ್ಯದಲ್ಲಿ ನಾನು ಹೇಳಲಿರುವುದನ್ನು ಕೇಳು.

ನೀನೀಗ ಕೇಳುತ್ತಿರುವ ನಿನ್ನ ಚರಿತ್ರೆಗೆ ಸಂಬಂಧಿಸಿದ ಈ ರಾಮಾಯಣ ಮಹಾಕಾವ್ಯವು ಪರಮೋತ್ಕೃಷ್ಟವಾದ ಕಾವ್ಯವಾಗಿದೆ. ಇದು ನಿನ್ನ ಜೀವನದ ಸಮಸ್ತವಾದ ವೃತ್ತಾಂತವನ್ನೂ ತಿಳಿಸುವ ಮಹಾಕಾವ್ಯವಾಗಿದೆ. ಇದರಲ್ಲಿ ಸಂಶಯವೇ ಇಲ್ಲ.

ಜನ್ಮಪ್ರಭೃತಿ ತೇ ವೀರ ಸುಖದುಃಖೋಪಸೇವನಮ್ ।
ಭವಿಷ್ಯದುತ್ತರಂ ಚೇಹ ಸರ್ವಂ ವಾಲ್ಮೀಕಿನಾ ಕೃತಮ್ ॥೧೬॥

ಹುಟ್ಟಿದಾಗಿನಿಂದ ನೀನು ಅನುಭವಿಸಿದ ಸುಖ-ದುಃಖಗಳ ವಿವರಣೆಯೆಲ್ಲವೂ ಈ ಮಹಾಕಾವ್ಯದಲ್ಲಿದೆ. ಇಷ್ಟು ಮಾತ್ರವಲ್ಲ. ನಿನ್ನ ಪಟ್ಟಾಭಿಷೇಕದ ನಂತರ ಮುಂದಾಗುವ ಘಟನೆಗಳನ್ನೂ ಮಹರ್ಷಿಗಳಾದ ವಾಲ್ಮೀಕಿಗಳು ಈ ಮಹಾಕಾವ್ಯದಲ್ಲಿ ಅಳವಡಿಸಿರುತ್ತಾರೆ.

ಆದಿಕಾವ್ಯಮಿದಂ ರಾಮ ತ್ವಯಿ ಸರ್ವಂ ಪ್ರತಿಷ್ಠಿತಮ್ ।
ನ ಹ್ಯನ್ಯೋಽರ್ಹತಿ ಕಾವ್ಯಾನಾಂ ಯಶೋಭಾಗ್ರಾಘವಾದೃತೇ ॥

ರಾಘವ! ಇದು ಆದಿಕಾವ್ಯವಾಗಿದೆ. ಈ ಸಮಗ್ರಕಾವ್ಯಕ್ಕೂ ನೀನೇ ಆಧಾರಭೂತನಾಗಿರುವೆ. ನಿನ್ನ ಜೀವನವೃತ್ತಾಂತವನ್ನೇ ಆಧಾರವನ್ನಾಗಿಟ್ಟುಕೊಂಡು ಈ ಮಹಾಕಾವ್ಯವನ್ನು ರಚಿಸಲಾಗಿದೆ. ರಘುಕುಲಶಿರೋಮಣಿಯಾದ ರಾಘವನನ್ನು ಬಿಟ್ಟು ಬೇರೆ ಯಾವನೂ ಇಂತಹ ಮಹಾಕಾವ್ಯಗಳಿಗೆ ಯಶೋವಂತನಾದ ನಾಯಕನಾಗಲಾರನು. ಆದುದರಿಂದ ಪುರುಷಶ್ರೇಷ್ಠನೇ! ಧರ್ಮದಿಂದ ಏಕಾಗ್ರಚಿತ್ತನಾಗಿದ್ದು ಮುಂದೆ ಸಂಭವಿಸುವ ಘಟನೆಗಳಿಂದ ಕೂಡಿರುವ ಉಳಿದ ರಾಮಾಯಣ ಭಾಗವನ್ನು ಕೇಳು.

ಈ ಕಾವ್ಯದ ಅಂತಿಮಭಾಗವು ಉತ್ತರಕಾಂಡವೆಂಬ ಹೆಸರನ್ನು ಪಡೆದಿದೆ. ಯಶೋವಂತನೇ! ಈ ಋಷಿಪುಂಗವರೊಡನೆ ಉಳಿದಿರುವ ಕಾವ್ಯದ ಭಾಗವನ್ನು ಏಕಾಗ್ರಚಿತ್ತನಾಗಿ ಕೇಳು.

ನ ಖಲ್ವನ್ಯೇನ ಕಾಕುತ್ಸ್ಥ ಶ್ರೋತವ್ಯಮಿದಮುತ್ತಮಮ್ ।
ಪರಮಋಷಿಣಾ ವೀರ ತ್ವಯೈವ ರಘುನನ್ದನ ॥೨೨॥

ರಾಘವ! ನೀನು ಸರ್ವಶ್ರೇಷ್ಠನಾದ ರಾಜರ್ಷಿಯಾಗಿರುವೆ. ಮೊದಲು ನೀನೇ ಈ ಉತ್ತಮವಾದ ಕಾವ್ಯವನ್ನು ಕೇಳಬೇಕು. ಬೇರೆಯವರು ಅನಂತರ ಕೇಳಬೇಕು."

ಹೀಗೆ ಹೇಳಿ ತ್ರಿಲೋಕಾಧೀಶ್ವರನಾದ ಬ್ರಹ್ಮನು ದೇವತೆಗಳೊಡನೆ ಮತ್ತು ಬಂಧುಗಳೊಡನೆ ಕೂಡಿಕೊಂಡು ತನ್ನ ಲೋಕಕ್ಕೆ ಹೊರಟು ಹೋದನು. ಆದರೆ ಬ್ರಹ್ಮಲೋಕದಲ್ಲಿದ್ದ ಮಹಾತ್ಮರಾದ ಮಹಾತೇಜಸ್ವಿಗಳಾದ ಬ್ರಹ್ಮರ್ಷಿಗಳು ಬ್ರಹ್ಮನ ಅಪ್ಪಣೆಯನ್ನು ಪಡೆದು ರಾಮಾಯಣದ ಶೇಷಭಾಗವನ್ನು ಕೇಳುವ ಸಲುವಾಗಿ ಪುನಃ ಶ್ರೀರಾಮನ ಯಜ್ಞಮಂಟಪಕ್ಕೆ ಹಿಂದಿರುಗಿದರು.

ಪರಮತೇಜಸ್ವಿಯಾದ ಶ್ರೀರಾಮನು ದೇವದೇವನಾದ ಬ್ರಹ್ಮನು ಹೇಳಿದ ಶುಭಕರವಾದ ಆ ದಿವ್ಯವಾಣಿಯನ್ನು ಕೇಳಿ ವಾಲ್ಮೀಕಿಮಹರ್ಷಿಗಳಿಗೆ ಹೇಳಿದನು :

"ಪೂಜ್ಯರೇ! ಬ್ರಹ್ಮಲೋಕದ ಬ್ರಹ್ಮರ್ಷಿಗಳೆಲ್ಲರೂ ನನ್ನ ಮುಂದಿನ ಚರಿತ್ರೆಯ ಭಾಗವನ್ನು ಕೇಳುವ ಮನಸ್ಸುಳ್ಳವರಾಗಿದ್ದಾರೆ. ಆದುದರಿಂದ ಉತ್ತರಕಾಂಡದ ಕಥಾಪ್ರವಚನವು ನಾಳೆಯಿಂದಲೇ ಪ್ರಾರಂಭವಾಗಲಿ."

ಹೀಗೆ ವಾಲ್ಮೀಕಿಮಹರ್ಷಿಗಳಿಗೆ ಹೇಳಿದನಂತರ ಶ್ರೀರಾಮನು ಪ್ರಜೆಗಳೆಲ್ಲರನ್ನೂ ಅವರವರ ನಿವಾಸಗಳಿಗೆ ಕಳುಹಿಸಿಕೊಟ್ಟು ಕುಶೀ-ಲವರನ್ನು ಕರೆದುಕೊಂಡು ಪರ್ಣಶಾಲೆಯನ್ನು ಪ್ರವೇಶಿಸಿದನು. ಆ ದಿನದ ರಾತ್ರಿಯು ಸೀತೆಯ ವಿಷಯವನ್ನು ಚಿಂತಿಸುತ್ತಿರುವಾಗಲೇ ಕಳೆದುಹೋಯಿತು. ಶ್ರೀರಾಮನಿಗೆ ಆ ರಾತ್ರಿಯೆಲ್ಲಾ ಸೀತೆಯದೇ ಚಿಂತೆಯಾಗಿದ್ದಿತು.

೯೮ನೆಯ ಸರ್ಗವು ಮುಗಿಯಿತು.

ಸೀತಾದೇವಿಯು ರಸಾತಲವನ್ನು ಸೇರಿದನಂತರ ಶ್ರೀರಾಮನ ಜೀವನಚರ್ಯೆ : ರಾಮರಾಜ್ಯದ ಪರಿಸ್ಥಿತಿ : ಮಾತೆಯರ ಪರಲೋಕಗಮನ*

ರಜನ್ಯಾಂ ತು ಪ್ರಭಾತಾಯಾಂ ಸಮಾನೀಯ ಮಹಾಮುನಿಮ್ ।
ಗೀಯತಾಮವಿಶಙ್ಕಾಭ್ಯಾಂ ರಾಮಃ ಪುತ್ರಾವುವಾಚ ಹ ॥೧॥

ರಾತ್ರಿಯು ಕಳೆದು ಬೆಳಗಾಗುತ್ತಲೇ ಶ್ರೀರಾಮನು ಮಹರ್ಷಿಗಳೆಲ್ಲರನ್ನೂ ಯಜ್ಞಮಂಟಪಕ್ಕೆ ಕರೆಯಿಸಿ–ಯಾವ ವಿಧವಾದ ಶಂಕೆಯೂ ಇಲ್ಲದೆ ರಾಮಾಯಣದ ಮುಂದಿನ ಭಾಗವನ್ನು ಗಾಯನಮಾಡುವಂತೆ ಮಕ್ಕಳಿಗೆ ಹೇಳಿದನು.

ಮಹಾತ್ಮರಾದ ಮಹರ್ಷಿಗಳೆಲ್ಲರೂ ತಮ್ಮ-ತಮ್ಮ ಆಸನಗಳಲ್ಲಿ ಕುಳಿತುಕೊಂಡನಂತರ ಕುಶೀ-ಲವರು ಶ್ರೀರಾಮನ ಮುಂದಿನ ಜೀವನಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಗಾನಮಾಡತೊಡಗಿದರು.

ಪ್ರವಿಷ್ಟಾಯಾಂ ತು ಸೀತಾಯಾಂ ಭೂತಲಂ ಸತ್ಯಸಂಪದಾ ।
ತಸ್ಯಾವಸಾನೇ ಯಜ್ಞಸ್ಯ ರಾಮಃ ಪರಮದುರ್ಮನಾಃ ॥೩॥

ಅಪಶ್ಯಮಾನೋ ವೈದೇಹೀಂ ಮೇನೇ ಶೂನ್ಯಮಿದಂ ಜಗತ್ ।
ಶೋಕೇನ ಪರಮಾಯಸ್ತೋ ನ ಶಾನ್ತಿಂ ಮನಸಾಗಮತ್ ॥೪॥

"ಸತ್ಯರೂಪವಾದ ಸಂಪತ್ತಿನ ಬಲದಿಂದ ಸೀತಾದೇವಿಯು ರಸಾತಲವನ್ನು ಪ್ರವೇಶಿಸಿದ ನಂತರ ಯಜ್ಞಕರ್ಮವನ್ನು ಸಮಾಪ್ತಿಗೊಳಿಸುವ ಶ್ರೀರಾಮನು ಅತ್ಯಂತದುಃಖಿತನಾಗುತ್ತಾನೆ. ಸೀತೆಯಿಲ್ಲದ ಈ ಜಗತ್ತು ಅವನಿಗೆ ಶೂನ್ಯವಾಗಿ ಕಾಣಿಸುತ್ತದೆ. ಶೋಕದಿಂದ ವ್ಯಥಿತವಾಗಿದ್ದ ಶ್ರೀರಾಮನ ಮನಸ್ಸಿಗೆ ಶಾಂತಿಯೆಂಬುದೇ ಇಲ್ಲವಾಗುತ್ತದೆ.

---

* ಶ್ರೀರಾಮನ ನಿರ್ಯಾಣವಾಗುವುದೆಂಬ ಭಾವನೆಯಿಂದ ಉತ್ತರಕಾಂಡವನ್ನು ಅನೇಕರು ಪಾರಾಯಣಮಾಡುವುದಿಲ್ಲ. ಆದರೆ ಉತ್ತರಕಾಂಡದ ಕಥೆಯನ್ನು ಕುಶೀ-ಲವರು ಹೇಳಿದಾಗ ರಾಮನಿನ್ನೂ ಜೀವಿಸಿದ್ದನು. ಅವನೇ ತನ್ನ ಭವಿಷ್ಯವೃತ್ತಾಂತವನ್ನು ಕೇಳಿ ತಿಳಿದುಕೊಂಡನು. ಆದುದರಿಂದ ರಾಮಾಯಣದ ಅವಿಭಾಜ್ಯ ಅಂಗವಾದ

ಋಕ್ಷ-ವಾನರ-ರಾಕ್ಷಸರನ್ನೂ, ರಾಜರನ್ನೂ ಮತ್ತು ಪ್ರಜೆಗಳನ್ನೂ ಅವರವರ ದೇಶಗಳಿಗೆ ಕಳುಹಿಸಿಕೊಡುತ್ತಾನೆ. ಬ್ರಾಹ್ಮಣಶ್ರೇಷ್ಠರನ್ನು ಭೂರಿ-ದಕ್ಷಿಣೆಗಳೊಡನೆ ಪುರಸ್ಕರಿಸಿ ಕಳುಹಿಸಿಕೊಡುತ್ತಾನೆ. ಹೀಗೆ ವಿಧಿವತ್ತಾಗಿ ಯಜ್ಞವನ್ನು ಮುಗಿಸಿದನಂತರ ಶ್ರೀರಾಮನು ಸೀತಾದೇವಿಯನ್ನು ಹೃದಯದಲ್ಲಿಯೇ ಧಾರಣೆಮಾಡಿಕೊಂಡು ಅಯೋಧ್ಯಾಪಟ್ಟಣವನ್ನು ಪ್ರವೇಶಿಸುತ್ತಾನೆ. ಯಜ್ಞವನ್ನು ಮುಗಿಸಿದನಂತರ ಶ್ರೀರಾಮನು ತನ್ನ ಮಕ್ಕಳೊಂದಿಗೆ ಇರುತ್ತಾನೆ. ಸೀತೆಯನ್ನು ಬಿಟ್ಟು ಬೇರೆ ಯಾರನ್ನೂ ಅವನು ಮದುವೆಯಾಗುವುದಿಲ್ಲ. ಮುಂದೆ ನಡೆಯಲಿರುವ ಪ್ರತಿಯೊಂದು ಯಜ್ಞದಲ್ಲಿಯೂ ಸುವರ್ಣಮಯಿಯಾದ ಸೀತೆಯೇ ಪತ್ನಿಯ ಸ್ಥಾನವನ್ನು ಅಲಂಕರಿಸುತ್ತಾಳೆ. ಹತ್ತುಸಾವಿರ ವರ್ಷಗಳವರೆಗೆ ಶ್ರೀರಾಮನು ಅಶ್ವಮೇಧ ಯಾಗಗಳನ್ನು ಮಾಡುತ್ತಲೇ ಇರುತ್ತಾನೆ. ತಾನು ಮಾಡಿದ ಅಶ್ವಮೇಧ ಯಾಗಗಳ ಸಂಖ್ಯೆಗೆ ಹತ್ತುಪಟ್ಟು ಹೆಚ್ಚಾಗಿ ಬಹುದಕ್ಷಿಣಾಕವಾದ ವಾಜಪೇಯ ಯಾಗಗಳನ್ನೂ ಮಾಡುತ್ತಾನೆ. ಶ್ರೀಮಂತನಾದ ಶ್ರೀರಾಮನು ಪರ್ಯಾಪ್ತವಾದ ದಕ್ಷಿಣೆಗಳಿಂದ ಯುಕ್ತವಾದ ಅಗ್ನಿಷ್ಟೋಮ, ಅತಿರಾತ್ರ, ಗೋಸವ– ಇವೇ ಮುಂತಾದ ಅತುಲೈಶ್ವರ್ಯದಿಂದ ಮಾತ್ರವೇ ಮಾಡಲು ಸಾಧ್ಯವಾದ ಮಹಾ-ಮಹಾಯಾಗಗಳನ್ನು ಮಾಡುತ್ತಾನೆ. ಹೀಗೆ ರಾಜ್ಯಭಾರಮಾಡುವ ಮಹಾತ್ಮನಾದ ಶ್ರೀರಾಮನಿಗೆ ಬಹಳ ಕಾಲವು ಧರ್ಮೋದ್ಧಾರದ ಪ್ರಯತ್ನದಲ್ಲಿಯೇ ಕಳೆದುಹೋಗುತ್ತದೆ. ಋಕ್ಷ-ವಾನರ-ರಾಕ್ಷಸರು ಶ್ರೀರಾಮನ ಆಜ್ಞಾಪಾಲಕರಾಗಿರುತ್ತಾರೆ. ಭೂಮಂಡಲದ ರಾಜರು ಶ್ರೀರಾಮನನ್ನು ಪ್ರತಿನಿತ್ಯವೂ ತಮ್ಮ-ತಮ್ಮ ಕರ್ತವ್ಯಪರಿಪಾಲನೆಗಳಿಂದ ಸಂತೋಷಗೊಳಿಸುತ್ತಾರೆ.

ಉತ್ತರಕಾಂಡವನ್ನು ಪಾರಾಯಣಮಾಡದೇ ಬಿಡಬಾರದು. ಗಾಯತ್ರ್ಯಾತ್ಮಕವಾದ ರಾಮಾಯಣವು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿರುವುದೆಂದು ಹೇಳುತ್ತಾ ಕೇವಲ ಹತ್ತೊಂಬತ್ತು ಸಾವಿರ ಶ್ಲೋಕಗಳನ್ನು ಪಾರಾಯಣಮಾಡಿದರೆ ರಾಮಾಯಣವು ಮುಗಿದಂತಾಗುವುದಿಲ್ಲ. ಪರಮಪದವನ್ನು ಬಯಸುವವರು ಉತ್ತರ ಕಾಂಡವನ್ನು ಪಠಿಸಲೇಬೇಕು. ಕೇವಲ ಧರ್ಮಾರ್ಥ-ಕಾಮಗಳನ್ನು ಬಯಸುವವರು ಶ್ರೀರಾಮಪಟ್ಟಾಭಿಷೇಕ ಪರ್ಯಂತವಾದ ಕಥಾಭಾಗವನ್ನು ಮಾತ್ರ ಪಠಿಸುತ್ತಾರೆ.

ಕಾಲೇ ವರ್ಷತಿ ಪರ್ಜನ್ಯಃ ಸುಭಿಕ್ಷಂ ವಿಮಲಾ ದಿಶಃ ।
ಹೃಷ್ಟಪುಷ್ಟಜನಾಕೀರ್ಣಂ ಪುರಂ ಜನಪದಸ್ತಥಾ ॥೧೩॥

ಶ್ರೀರಾಮನು ರಾಜ್ಯಭಾರಮಾಡುತ್ತಿರಲಾಗಿ ಕಾಲ-ಕಾಲಕ್ಕೆ ಪರ್ಜನ್ಯನು ಮಳೆಗರೆಯುತ್ತಾನೆ. ದೇಶವೆಲ್ಲವೂ ಸುಭಿಕ್ಷವಾಗಿರುತ್ತದೆ. ದಿಕ್ಕುಗಳೆಲ್ಲವೂ ನಿರ್ಮಲವಾಗಿರುತ್ತವೆ. ಪಟ್ಟಣಗಳು ಮತ್ತು ಹಳ್ಳಿಗಳು ಹೃಷ್ಟ-ಪುಷ್ಟರಾದ ಪ್ರಜೆಗಳಿಂದ ನಿಬಿಡವಾಗಿರುತ್ತವೆ.

ನಾಕಾಲೇ ಮ್ರಿಯತೇ ಕಶ್ಚಿನ್ನ ವ್ಯಾಧಿಃ ಪ್ರಾಣಿನಾಂ ತಥಾ ।
ನಾನರ್ಥೋ ವಿದ್ಯತೇ ಕಶ್ಚಿದ್ರಾಮೇ ರಾಜ್ಯಂ ಪ್ರಶಾಸತಿ ॥೧೪॥

ಶ್ರೀರಾಮನು ರಾಜ್ಯಭಾರಮಾಡುತ್ತಿರಲಾಗಿ ಯಾರೊಬ್ಬರೂ ಅಕಾಲದಲ್ಲಿ ಮರಣಹೊಂದುವುದಿಲ್ಲ. ಪ್ರಾಣಿಗಳನ್ನು ರೋಗಗಳು ಬಾಧೆಪಡಿಸುವುದಿಲ್ಲ. ಪ್ರಪಂಚದಲ್ಲಿ ಯಾವ ವಿಧವಾದ ಉಪದ್ರವಗಳೂ ತಲೆದೋರುವುದಿಲ್ಲ.

ಹೀಗೆಯೇ ಹಲವಾರು ವರ್ಷಗಳು ಕಳೆದನಂತರ ಪುತ್ರ-ಪೌತ್ರವತಿಯಾದ, ಯಶಸ್ವಿನಿಯಾದ, ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯು ಸ್ವರ್ಗಸ್ಥಳಾಗುತ್ತಾಳೆ. ಮುಂದೆ ಕೈಕೇಯೀ-ಸುಮಿತ್ರೆಯರೂ ಕೌಸಲ್ಯಾ ದೇವಿಯ ಮಾರ್ಗವನ್ನೇ ಅನುಸರಿಸುತ್ತಾರೆ. ದಶರಥನ ಆ ಪತ್ನಿಯರೆಲ್ಲರೂ ಇಹದಲ್ಲಿ ನಾನಾವಿಧವಾದ ಧರ್ಮಕಾರ್ಯಗಳನ್ನು ಮಾಡಿರುತ್ತಾರೆ. ಸ್ವರ್ಗಕ್ಕೆ ಹೋದನಂತರ ಈ ಮೂವರೂ ಆನಂದಪರವಶರಾಗಿ ದಶರಥನೊಡನೆ ಸೇರಿಕೊಳ್ಳುತ್ತಾರೆ. ಹೀಗೆ ದಶರಥನೊಡನೆ ಸೇರುವ ಮಹಾಭಾಗ್ಯಶಾಲಿಗಳಾದ ಆ ರಾಣಿಯರು ತಾವು ಆಚರಿಸಿದ ಧರ್ಮ-ಕರ್ಮಗಳ ಪೂರ್ಣ ಫಲಗಳನ್ನು ಸ್ವರ್ಗದಲ್ಲಿ ಅನುಭವಿಸುತ್ತಾರೆ.

ಶ್ರೀರಾಮನು ಯೋಗ್ಯವಾದ ಸಮಯಗಳಲ್ಲಿ ತನ್ನ ಮೂವರು ತಾಯಂದಿರ ಸಲುವಾಗಿ ಅವರಲ್ಲಿ ಯಾವ ವಿಧವಾದ ತಾರತಮ್ಯವೂ ಇಲ್ಲದೆ ತಪಸ್ವಿಗಳಾದ ಬ್ರಾಹ್ಮಣರಿಗೆ ಮಹಾದಾನಗಳನ್ನು ಮಾಡುತ್ತಾನೆ.

ಧರ್ಮಾತ್ಮನಾದ ಶ್ರೀರಾಮನು ಪಿತೃಗಳಿಗೆ ಸಂಬಂಧಿಸಿದ ಶ್ರಾದ್ಧಾದಿ ಕರ್ಮಗಳಲ್ಲಿ ಬ್ರಾಹ್ಮಣರಿಗೆ ಕೊಡಲು ಯೋಗ್ಯವಾದ ಉತ್ತಮವಸ್ತುಗಳನ್ನು ದಾನಮಾಡುತ್ತಾನೆ. ಪಿತೃಗಳನ್ನೂ ದೇವತೆಗಳನ್ನೂ ಸಂತೋಷಗೊಳಿಸುವ

ಸಲುವಾಗಿ ಪಿಂಡಪಿತೃಯಜ್ಞವೇ ಮುಂತಾದ ಅತ್ಯಂತ ದುಸ್ತರವಾದ ಯಜ್ಞಗಳನ್ನು ಮಾಡುತ್ತಾನೆ.

ಹೀಗೆ ನಾನಾಪ್ರಕಾರವಾದ ಯಜ್ಞಗ್ಗಳ ಮೂಲಕವಾಗಿ ಧರ್ಮಕಾರ್ಯಗಳನ್ನು ಯಾವಾಗಲೂ ಮಾಡುವ ಶ್ರೀರಾಮನಿಗೆ ಅನೇಕ ಸಾವಿರ ವರ್ಷಗಳು ಸುಖವಾಗಿ ಕಳೆದುಹೋಗುತ್ತವೆ.

೯೯ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೦ನೆಯ ಸರ್ಗ

ಕೇಕಯದೇಶದಿಂದ ಬ್ರಹ್ಮರ್ಷಿಯಾದ ಗಾರ್ಗ್ಯನು ಶ್ರೀರಾಮನಿಗೆ ಹೇರಳವಾದ ಬಹುಮಾನಗಳನ್ನು ತಂದುದು : ಮಹರ್ಷಿಯ ಸಂದೇಶಾನುಸಾರವಾಗಿ ಶ್ರೀರಾಮನು ಕುಮಾರರಿಂದೊಡಗೂಡಿದ ಭರತನನ್ನು ಗಂಧರ್ವದೇಶದ ಆಕ್ರಮಣಕ್ಕಾಗಿ ಕಳುಹಿಸಿಕೊಟ್ಟುದು

ಕಸ್ಯಚಿತ್ತ್ವಥ ಕಾಲಸ್ಯ ಯುಧಾಜಿತ್ಕೇಕಯೋ ನೃಪಃ ।
ಸ್ವಗುರುಂ ಪ್ರೇಷಯಾಮಾಸ ರಾಘವಾಯ ಮಹಾತ್ಮನೇ ।
ಗಾರ್ಗ್ಯಮಙ್ಗಿರಸಃ ಪುತ್ರಂ ಬ್ರಹ್ಮರ್ಷಿಮಮಿತಪ್ರಭಮ್ ॥೧॥

ಹಲವಾರು ವರ್ಷಗಳು ಕಳೆದನಂತರ ಕೇಕಯದೇಶಕ್ಕೆ ರಾಜನಾದ ಯುಧಾಜಿತನು ಮಹಾತ್ಮನಾದ ಶ್ರೀರಾಮನ ಬಳಿಗೆ ತನ್ನ ಗುರುವಾದ, ಮಹಾತೇಜಸ್ವಿಯಾದ, ಅಂಗಿರಸನ ಮಗನಾದ, ಬ್ರಹ್ಮರ್ಷಿಯಾದ ಗಾರ್ಗ್ಯನನ್ನು ಕಳುಹಿಸಿಕೊಡುತ್ತಾನೆ.

ಗಾರ್ಗ್ಯನೊಡನೆ ಯುಧಾಜಿತನು ಶ್ರೀರಾಮನಿಗೆ ಪ್ರೇಮದ ಕಾಣಿಕೆಯಾಗಿ ಹತ್ತುಸಾವಿರ ಕುದುರೆಗಳನ್ನೂ, ಕಂಬಳಿಗಳನ್ನೂ, ಶಾಲುಗಳನ್ನೂ, ನಾನಾವಿಧವಾದ ರತ್ನಗಳನ್ನೂ, ಉತ್ತಮವಾದ ಮತ್ತು ಚಿತ್ರಿತವಾದ ವಸ್ತ್ರಗಳನ್ನೂ, ಮನೋಹರವಾದ ಆಭರಣಗಳನ್ನೂ ಕೊಟ್ಟು ಕಳುಹಿಸುತ್ತಾನೆ.

ಅಶ್ವಪತಿಯ ಮಗನಾದ ತನ್ನ ಸೋದರಮಾವನಾದ ಯುಧಾಜಿತುವು ಮಹರ್ಷಿಯಾದ ಗಾರ್ಗ್ಯನೊಡನೆ ಬಹುಮೂಲ್ಯವಾದ ಕೊಡುಗೆಗಳನ್ನು ಕೊಟ್ಟು ಅಯೋಧ್ಯೆಗೆ ಕಳುಹಿಸಿಕೊಡುತ್ತಿರುವನೆಂಬುದನ್ನು ಚಾರರ

ಮೂಲಕವಾಗಿ ತಿಳಿದೊಡನೆಯೇ ಮಹಾಬುದ್ಧಿಶಾಲಿಯಾದ ಶ್ರೀರಾಮನು ತನ್ನ ಅನುಜರೊಡನೆ ಒಂದು ಕ್ರೋಶದಷ್ಟು ದೂರಕ್ಕೆ ಹೋಗಿ–ಇಂದ್ರನು ಬೃಹಸ್ಪತಿಯನ್ನು ಸ್ವಾಗತಿಸಿ ಸತ್ಕರಿಸುವಂತೆ–ಗಾರ್ಗ್ಯನನ್ನು ಸ್ವಾಗತಿಸಿ ಸತ್ಕರಿಸುತ್ತಾನೆ.

ಮಹರ್ಷಿಯನ್ನು ಅರಮನೆಗೆ ಕರೆತಂದು ಯಥಾಯೋಗ್ಯವಾಗಿ ಸತ್ಕರಿಸಿ ಅವನು ತಂದ ಪ್ರೀತಿಯ ಧನವನ್ನು ಶ್ರೀರಾಮನು ಸ್ವೀಕರಿಸುತ್ತಾನೆ. ಗಾರ್ಗ್ಯಮಹರ್ಷಿಯ ಕುಶಲವನ್ನೂ ಮತ್ತು ಸೋದರಮಾವನಾದ ಯುಧಾಜಿತನ ಕುಶಲವನ್ನೂ ಕೇಳಿ ಸುಖಾಸನದಲ್ಲಿ ಕುಳಿತಿರುವ ಮಹಾಭಾಗ್ಯಶಾಲಿಯಾದ ಗಾರ್ಗ್ಯನನ್ನು ಪ್ರಶ್ನಿಸುತ್ತಾನೆ :

"ಮಹರ್ಷಿಯೇ! ನಮ್ಮ ಮಾವನು ಏನೆಂದು ಹೇಳಿಕಳುಹಿಸಿದ್ದಾನೆ? ಸಾಕ್ಷಾತ್ ಬೃಹಸ್ಪತಿಯಂತೆ ವಾಗ್ಮಿಗಳಲ್ಲಿ ಶ್ರೇಷ್ಠನಾದ ಪೂಜ್ಯಪಾದನಾದ ನೀನು ಇಲ್ಲಿಗೆ ಬಂದುದರ ಕಾರಣವಾದರೂ ಏನು?"

ಶ್ರೀರಾಮನು ಹೀಗೆ ಪ್ರಶ್ನಿಸಲು ಗಾರ್ಗ್ಯನು ಅದ್ಭುತವಾದಂತಹ ಕಾರ್ಯದ ವಿವರಣೆಯನ್ನು ಹೇಳಲು ಉಪಕ್ರಮಿಸುತ್ತಾನೆ :

"ಮಹಾಬಾಹುವೇ! ನಿನ್ನ ಮಾವನಾದ, ನರಶ್ರೇಷ್ಠನಾದ ಯುಧಾಜಿತುವು ಪ್ರೇಮಪೂರ್ವಕವಾಗಿ ನಿನಗೆ ಈ ಸಂದೇಶವನ್ನು ಹೇಳಿ ಕಳುಹಿಸಿದ್ದಾನೆ. ಅದನ್ನು ಕೇಳಲು ನಿನಗೆ ಇಷ್ಟವಿರುವುದಾದರೆ ಹೇಳುವೆನು ; ಕೇಳು."

ಗಾರ್ಗ್ಯನ ಮಾತನ್ನು ಕೇಳಿ ಶ್ರೀರಾಮನು ಗಾರ್ಗ್ಯನಿಗೆ ಯುಧಾಜಿತನ ಸಂದೇಶವನ್ನು ತಿಳಿಸಲು ಅನುಮತಿಸುತ್ತಾನೆ. ಗಾರ್ಗ್ಯನು ಮುಂದುವರಿದು ಹೇಳುತ್ತಾನೆ.

"ಫಲ-ಮೂಲಗಳಿಂದ ಸಮೃದ್ಧವಾದ ಮತ್ತು ಸುಶೋಭಿತವಾದ ಗಂಧರ್ವದೇಶವು ಸಿಂಧೂನದಿಯ ಎರಡು ತೀರಗಳನ್ನೂ ವ್ಯಾಪಿಸಿಕೊಂಡಿದೆ. ಗಂಧರ್ವರಾಜನಾದ ಶೈಲೂಷನ ವಂಶೀಯರಾದ, ಮಹಾಬಲಿಷ್ಠರಾದ, ಯುದ್ಧಕುಶಲರಾದ ಗಂಧರ್ವರು ಆಯುಧಪಾಣಿಗಳಾಗಿ ಆ ದೇಶವನ್ನು ಸಂರಕ್ಷಿಸುತ್ತಿದ್ದಾರೆ. ಶುಭಕರವಾದ ಆ ಗಂಧರ್ವನಗರಿಯನ್ನು ನೀನು

ಗೆದ್ದುಕೊಂಡು ಅಲ್ಲಿ ನೀನು ಸಂಪತ್ಸಮೃದ್ಧವಾದ ಎರಡು ನಗರಿಗಳನ್ನು ಪ್ರತಿಷ್ಠಾಪಿಸು. ಅತ್ಯಂತಸುಂದರವಾಗಿರುವ ಆ ದೇಶಕ್ಕೆ ಮತ್ತಾರೂ ಹೋಗಲಾರರು. ಆದುದರಿಂದ ನೀನೇ ಅಲ್ಲಿಗೆ ಹೋಗಿ ಆ ಗಂಧರ್ವನಗರಿಯನ್ನು ನಿನ್ನ ಸ್ವಾಧೀನಮಾಡಿಕೋ. ನಾನು ಯಾವಾಗಲೂ ನಿನಗೆ ಅಹಿತವಾದುದನ್ನು ಹೇಳತಕ್ಕವನಲ್ಲ."

ಸೋದರಮಾವನ ಸಂದೇಶರೂಪವಾದ ಗಾರ್ಗ್ಯನ ಈ ಮಾತನ್ನು ಕೇಳಿ ಶ್ರೀರಾಮನು ಪರಮಪ್ರೀತಿನಾಗಿ 'ಬಾಢಂ–ಆಗಲಿ' ಎಂಬ ಪ್ರತಿವಚನವನ್ನಿತ್ತು ಭರತನ ಕಡೆಗೆ ನೋಡುತ್ತಾನೆ. ಬಳಿಕ ಶ್ರೀರಾಮನು ಕೈಮುಗಿದುಕೊಂಡು ಪರಮಪ್ರೀತನಾಗಿ ಬ್ರಹ್ಮರ್ಷಿಯಾದ ಗಾರ್ಗ್ಯನಿಗೆ ಹೇಳುತ್ತಾನೆ :

"ಬ್ರಹ್ಮರ್ಷಿಯೇ! ಭರತನ ಮಕ್ಕಳಾದ, ಮಹಾವೀರರಾದ ತಕ್ಷ ಮತ್ತು ಪುಷ್ಕಲರು ಸಿಂಧೂನದಿಯ ತೀರಗಳಲ್ಲಿರುವ ಗಂಧರ್ವದೇಶವನ್ನು ಗೆದ್ದುಕೊಳ್ಳುತ್ತಾರೆ ಮತ್ತು ನಮ್ಮ ಸೋದರಮಾವನಾದ ಯುಧಾಜಿತುವಿನಿಂದ ರಕ್ಷಿಸಲ್ಪಟ್ಟವರಾಗಿ ಮುಂದೆ ಇವರೇ ಆ ರಾಜ್ಯಗಳನ್ನು ಏಕಾಗ್ರಚಿತ್ತರಾಗಿ ಧರ್ಮದಿಂದ ಶಾಸನಮಾಡುತ್ತಾರೆ. ಭರತನನ್ನು ಮುಂದೆಮಾಡಿಕೊಂಡು ಸೈನ್ಯ-ಸೇವಕರ ಸಮೇತರಾಗಿ ಈ ಇಬ್ಬರು ರಾಜಪುತ್ರರೂ ಅಲ್ಲಿಗೆ ಹೋಗಿ ಗಂಧರ್ವಪುತ್ರರನ್ನು ಸಂಹರಿಸಿ ಗಂಧರ್ವರ ಆ ದೇಶವನ್ನು ವಿಭಾಗಮಾಡಿಕೊಳ್ಳುತ್ತಾರೆ.

ತನ್ನ ಇಬ್ಬರು ಮಕ್ಕಳನ್ನೂ ಪ್ರತ್ಯೇಕವಾದ ಎರಡು ರಾಜ್ಯಗಳಲ್ಲಿ ಪ್ರತಿಷ್ಠಾಪಿಸಿ (ಆ ದೇಶಗಳಿಗೆ ರಾಜರನ್ನಾಗಿ ಮಾಡಿ) ಧರ್ಮಾತ್ಮನಾದ ಭರತನು ಪುನಃ ನನ್ನ ಬಳಿಗೇ ಬಂದುಬಿಡುತ್ತಾನೆ."

ಬ್ರಹ್ಮರ್ಷಿಯಾದ ಗಾರ್ಗ್ಯನಿಗೆ ಶ್ರೀರಾಮನು ಹೀಗೆ ಹೇಳಿ ಭರತನಿಗೆ ಸೇನಾಸಮೇತನಾಗಿ ಗಂಧರ್ವರಾಜ್ಯಕ್ಕೆ ಪ್ರಯಾಣಮಾಡಲು ಆಜ್ಞಾಪಿಸಿ ತಕ್ಷ-ಪುಷ್ಕಲರಿಬ್ಬರಿಗೂ ಮೊದಲೇ ಪಟ್ಟಾಭಿಷೇಕಮಾಡುತ್ತಾನೆ.

ಬಳಿಕ ಭರತನು ಮೃಗಶಿರಾನಕ್ಷತ್ರದಲ್ಲಿ ಅಂಗಿರಸನ ಮಗನಾದ ಗಾರ್ಗ್ಯಮಹರ್ಷಿಯನ್ನು ಮುಂದೆಮಾಡಿಕೊಂಡು ಸೈನ್ಯಸಮೇತನಾಗಿ ತನ್ನ

ಇಬ್ಬರು ಮಕ್ಕಳೊಡನೆ ಪ್ರಯಾಣಮಾಡುತ್ತಾನೆ. ಇಂದ್ರನಿಂದ ಯುಕ್ತವಾದ ದೇವಸೈನ್ಯದೋಪಾದಿಯಲ್ಲಿ ಆ ಸೈನ್ಯವು ಅಯೋಧ್ಯೆಯಿಂದ ಹೊರಡುತ್ತದೆ. ಶ್ರೀರಾಮನೂ ಸ್ವಲ್ಪದೂರದವರೆಗೆ ಸೈನ್ಯದ ಜೊತೆಯಲ್ಲಿ ಹೋಗಿ ಅದನ್ನು ಬೀಳ್ಕೊಡುತ್ತಾನೆ. ಭರತಾನುಗತವಾದ ಆ ಸೈನ್ಯವು ದೇವತೆಗಳಿಂದಲೂ ಜಯಿಸಲು ಅಸಾಧ್ಯವಾಗಿರುತ್ತದೆ. ಮಾಂಸಾಹಾರಿಗಳಾದ ಪ್ರಾಣಿಗಳೂ ಮತ್ತು ರಾಕ್ಷಸರೂ ಯುದ್ಧದಲ್ಲಿ ರಕ್ತಪಾನಮಾಡುವ ಬಯಕೆಯಿಂದ ಭರತನ ಸೈನ್ಯವನ್ನೇ ಅನುಸರಿಸಿ ಹೋಗುತ್ತಾರೆ. ಅತ್ಯಂತಭಯಂಕರವಾದ ಮಾಂಸಾಶಿಗಳಾದ ಪ್ರಾಣಿಸಮೂಹಗಳು ಸಾವಿರಾರು ಸಂಖ್ಯೆಯಲ್ಲಿ ಗಂಧರ್ವ ಪುತ್ರರ ಮಾಂಸವನ್ನು ತಿನ್ನುವ ಆಸೆಯಿಂದ ಭರತನ ಸೈನ್ಯವನ್ನನುಸರಿಸಿ ಹೋಗುತ್ತವೆ. ಸಿಂಹ, ಹುಲಿ, ಹಂದಿ, ಆಕಾಶಚಾರಿಗಳಾದ ಪಕ್ಷಿಗಳು ಸಾವಿರಾರು ಸಂಖ್ಯೆಯಲ್ಲಿ ಸೈನ್ಯದ ಮುಂಭಾಗದಲ್ಲಿ ಹೋಗುತ್ತಿರುತ್ತವೆ. ಹೀಗೆಯೇ ಒಂದೂವರೆ ತಿಂಗಳು ಪ್ರಯಾಣಮಾಡಿದನಂತರ ನೀರೋಗದೃಢ ಕಾಯರಾಗಿದ್ದ ಮತ್ತು ಹೃಷ್ಟ-ಪುಷ್ಟರಾದ ಜನರಿಂದ ವ್ಯಾಪ್ತವಾಗಿದ್ದ ಉತ್ಸಾಹಭರಿತವಾಗಿದ್ದ ಆ ಮಹಾಸೈನ್ಯವು ಕೇಕಯದೇಶವನ್ನು ಸೇರುತ್ತದೆ.

೧೦೦ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೧ನೆಯ ಸರ್ಗ

ಭರತನಿಂದ ಗಂಧರ್ವರ ಆಕ್ರಮಣ : ಅವನು ಗಂಧರ್ವರನ್ನು ಸಂಹರಿಸಿ ಎರಡು ಸುಂದರನಗರಿಗಳನ್ನು ನಿರ್ಮಿಸುವುದು : ಇಬ್ಬರು ಮಕ್ಕಳನ್ನೂ ಆ ಎರಡು ರಾಜ್ಯಗಳಲ್ಲಿರಿಸಿ ಭರತನು ಅಯೋಧ್ಯೆಗೆ ಹಿಂದಿರುಗುವುದು

ಶ್ರುತ್ವಾ ಸೇನಾಪತಿಂ ಪ್ರಾಪ್ತಂ ಭರತಂ ಕೇಕಯಾಧಿಪಃ ।
ಯುಧಾಜಿದ್ಗಾರ್ಗ್ಯಸಹಿತಂ ಪರಾಂ ಪ್ರೀತಿಮುಪಾಗಮತ್ ॥೧॥

ಕೇಕಯರಾಜನಾದ ಯುಧಾಜಿತನು ತನ್ನ ಸೋದರಳಿಯನಾದ ಭರತನೇ ಸೇನಾಪತಿಯಾಗಿ ಗಾರ್ಗ್ಯನೊಡನೆ ಬಂದಿರುವನೆಂಬುದನ್ನು ತಿಳಿದು ಪರಮಹೃಷ್ಟನಾಗುತ್ತಾನೆ.

ಯುಧಾಜಿತನು ಕೂಡ ದೊಡ್ಡದಾದ ಸೈನ್ಯವನ್ನು ತೆಗೆದುಕೊಂಡು ಅತಿಶೀಘ್ರವಾಗಿ ಭರತನ ಸೈನ್ಯದೊಡನೆ ಕಾಮರೂಪಿಗಳಾದ ಗಂಧರ್ವರ ದೇಶಕ್ಕೆ ಅವಸರದಿಂದ ಪ್ರಯಾಣಮಾಡುತ್ತಾನೆ. ಮಹಾಪರಾಕ್ರಮಿಗಳಾದ ಭರತ-ಯುಧಾಜಿತರಿಬ್ಬರೂ ಸೇರಿ ಸೈನ್ಯಸಮೇತರಾಗಿ ಗಂಧರ್ವರ ರಾಜ ಧಾನಿಗೆ ಹೋಗಿ ಅದನ್ನು ಆಕ್ರಮಿಸುತ್ತಾರೆ. ಭರತನು ತಮ್ಮ ರಾಜಧಾನಿಯನ್ನು ಆಕ್ರಮಿಸಲು ಬಂದಿರುವನೆಂಬುದನ್ನು ಕೇಳಿ ಅವನೊಡನೆ ಯುದ್ಧ ಮಾಡುವ ಅಭಿಲಾಷೆಯಿಂದ ಕೂಡಿದ್ದ ಮಹಾವೀರ್ಯರಾದ ಗಂಧರ್ವರು ಒಂದೆಡೆಯಲ್ಲಿ ಸೇರಿ ಗರ್ಜನೆಮಾಡುತ್ತಾರೆ. ಅನಂತರ ಭರತನಿಗೂ ಮತ್ತು ಗಂಧರ್ವರಿಗೂ ರೋಮಾಂಚಕರವಾದ ಮತ್ತು ಭಯಂಕರವಾದ ಯುದ್ಧವು ಏಳು ರಾತ್ರಿಗಳವರೆಗೂ ಸತತವಾಗಿ ನಡೆಯುತ್ತದೆ. ಆದರೆ ಇಬ್ಬರಲ್ಲಿ ಯಾರೊಬ್ಬರಿಗೂ ಜಯಗಳಿಸಲು ಸಾಧ್ಯವಾಗುವುದಿಲ್ಲ. ನಾಲ್ಕು ದಿಕ್ಕು ಗಳಲ್ಲಿಯೂ ರಕ್ತದ ನದಿಗಳೇ ಹರಿಯುತ್ತವೆ. ಖಡ್ಗ-ಶಕ್ತಿ ಮತ್ತು ಧನುಸ್ಸು ಗಳೇ ಆ ನದಿಯ ಮೊಸಳೆಗಳಂತಿರುತ್ತವೆ. ಆ ರಕ್ತನದಿಗಳ ಪ್ರವಾಹದಲ್ಲಿ ಮೃತರಾದ ಸೈನಿಕರ ದೇಹಗಳು ತೇಲುತ್ತಿರುತ್ತವೆ. ಅನಂತರ ರಾಮಾನುಜ ನಾದ ಭರತನು ಅತ್ಯಂತಕುಪಿತನಾಗಿ ಅತ್ಯಂತಭಯಂಕರವಾದ ಸಂವರ್ತ ಎಂಬ ಹೆಸರಿನ ಅಸ್ತ್ರವನ್ನು ಗಂಧರ್ವರ ಮೇಲೆ ಪ್ರಯೋಗಿಸುತ್ತಾನೆ. ಕಾಲಪಾಶದಿಂದ ನಿಬದ್ಧರಾಗಿದ್ದ ಮೂರು ಕೋಟಿ ಗಂಧರ್ವರೂ ಮಹಾತ್ಮ ನಾದ ಭರತನಿಂದ ಬಿಡಲ್ಪಟ್ಟ ಸಂವರ್ತಮಹಾಸ್ತ್ರದಿಂದ ಸೀಳಲ್ಪಟ್ಟವರಾಗಿ ಅಸುನೀಗುತ್ತಾರೆ. ಅಂತಹ ಭಯಂಕರ ಮಹಾಯುದ್ಧವನ್ನು ನೋಡಿದ ಸ್ಮರಣೆಯೇ ದೇವತೆಗಳಿಗೆ ಇರುವುದಿಲ್ಲ. ಎವೆಯಿಕ್ಕುವುದರೊಳಗಾಗಿ ಮಹಾ ಬಲಶಾಲಿಗಳಾದ ಮೂರುಕೋಟಿ ಗಂಧರ್ವರೂ ಸತ್ತುಹೋಗುತ್ತಾರೆ.

ಗಂಧರ್ವರೆಲ್ಲರೂ ಸತ್ತುಹೋದನಂತರ ಕೈಕೇಯಿಯ ಮಗನಾದ ಭರತನು ಅಲ್ಲಿಯೇ ಸಂಪತ್ಸಮೃದ್ಧಿಯಿಂದ ಕೂಡಿರುವ ಎರಡು ನಗರಗಳನ್ನು ಪ್ರತಿಷ್ಠಾಪಿಸುತ್ತಾನೆ.

ತಕ್ಷಂ ತಕ್ಷಶಿಲಾಯಾಂ ತು ಪುಷ್ಕಲಂ ಪುಷ್ಕಲಾವತೇ ।
ಗನ್ಧರ್ವದೇಶೇ ರುಚಿರೇ ಗಾನ್ಧಾರವಿಷಯೇ ಚ ಸಃ ॥೧೧॥

ಮನೋಹರವಾಗಿದ್ದ ಆ ಗಂಧರ್ವದೇಶದಲ್ಲಿ ಭರತನು ತಕ್ಷಶಿಲಾ

ಎಂಬ ನಗರಿಯನ್ನು ನಿರ್ಮಿಸಿ ಅಲ್ಲಿಗೆ ತಕ್ಷನನ್ನು ರಾಜನನ್ನಾಗಿ ಮಾಡುತ್ತಾನೆ. ಗಾಂಧಾರದೇಶದಲ್ಲಿ ಪುಷ್ಕಲಾವತವೆಂಬ ನಗರವನ್ನು ನಿರ್ಮಿಸಿ ಅಲ್ಲಿಗೆ ಪುಷ್ಕಲನನ್ನು ರಾಜನನ್ನಾಗಿ ಮಾಡುತ್ತಾನೆ. ಆ ಎರಡು ಪಟ್ಟಣಗಳೂ ಧನ-ಧಾನ್ಯಗಳಿಂದಲೂ, ವಜ್ರ-ವೈಡೂರ್ಯಾದಿ ರತ್ನಗಳಿಂದಲೂ ಸಮೃದ್ಧವಾಗಿರುತ್ತವೆ. ಕಾನನಗಳಿಂದಲೂ ಸಮಾವೃತವಾಗಿದ್ದು ಬಹಳವಾಗಿ ಶೋಭಿಸುತ್ತಿರುತ್ತವೆ. ಸುಂದರವಾದ ಗೋಪುರಗಳು, ಸೌಧಗಳು, ರಾಜಬೀದಿಗಳು ಇವೇ ಮುಂತಾದ ಶ್ರೇಷ್ಠಗುಣಗಳಿಂದ ಕೂಡಿದ್ದು ಆ ಎರಡು ಪಟ್ಟಣಗಳೂ ಸೌಂದರ್ಯದ ದೃಷ್ಟಿಯಿಂದ ಪರಸ್ಪರವಾಗಿ ಸ್ಪರ್ಧಿಸುತ್ತಿವೆಯೋ ಎಂಬಂತೆ ಕಾಣುತ್ತವೆ. ಎರಡು ಪಟ್ಟಣಗಳೂ ಬಹುಸುಂದರವಾಗಿರುತ್ತವೆ. ಎರಡು ನಗರಗಳಲ್ಲಿನ ಜನರ ವ್ಯವಹಾರವೂ ಕಪಟವಿಲ್ಲದೆಯೂ, ಶುಭ್ರವಾಗಿಯೂ, ಸರಳವಾಗಿಯೂ ಇರುತ್ತದೆ. ಉದ್ಯಾನವನಗಳಿಂದಲೂ ಆನೆ-ಕುದುರೆ–ಇವೇ ಮುಂತಾದ ವಾಹನಗಳಿಂದಲೂ ಸಮೃದ್ಧವಾಗಿರುತ್ತದೆ. ಎರಡು ನಗರಗಳಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾಗಿ ಅಂಗಡಿಬೀದಿಗಳಿರುತ್ತವೆ. ಎರಡು ಪಟ್ಟಣಗಳೂ ರಮ್ಯವಾಗಿರುತ್ತವೆ. ಅನೇಕಬಗೆಯ ವಸ್ತು-ವಾಹನಗಳಿಂದ ಶೋಭಾಯಮಾನವಾಗಿರುತ್ತವೆ. ಸುಂದರವಾದ ಗೃಹಗಳಿಂದ ಅಂದವಾಗಿ ಕಾಣುತ್ತವೆ. ಉಪ್ಪರಿಗೆಮನೆಗಳಿಂದ ಕೂಡಿರುತ್ತವೆ.

ಶೋಭಾಯಮಾನವಾದ ದೇವಮಂದಿರಗಳಿಂದಲೂ ತಾಲ-ತಮಾಲ-ತಿಲಕ ಇವೇ ಮುಂತಾದ ವೃಕ್ಷಗಳಿಂದಲೂ ಕಂಗೊಳಿಸುತ್ತಿರುತ್ತವೆ. ಶ್ರೀರಾಮನ ತಮ್ಮನಾದ ಭರತನು ಐದು ವರ್ಷಗಳ ಕಾಲ ಅಲ್ಲಿಯೇ ಇದ್ದು ರಾಜ್ಯಭಾರಕ್ರಮವನ್ನು ವ್ಯವಸ್ಥೆಗೊಳಿಸಿ ಅಯೋಧ್ಯೆಗೆ ಹಿಂದಿರುಗುತ್ತಾನೆ. ಇಂದ್ರನು ಬ್ರಹ್ಮನಿಗೆ ನಮಸ್ಕರಿಸುವಂತೆ ಶ್ರೀಮಂತನಾದ ಭರತನು ಅಯೋಧ್ಯೆಗೆ ಬಂದೊಡನೆಯೇ ಮತ್ತೊಬ್ಬ ಧರ್ಮರಾಜನಂತೆಯೇ ಇರುವ ಮಹಾತ್ಮನಾದ ಶ್ರೀರಾಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸುತ್ತಾನೆ. ಅನಂತರ ಭರತನು ಗಂಧರ್ವಕುಮಾರರ ವಧೆಯನ್ನೂ ರಾಜ್ಯಭಾರಕ್ರಮವನ್ನು ಸುವ್ಯವಸ್ಥೆಗೊಳಿಸಿದ ಸಮಾಚಾರವನ್ನೂ ಶ್ರೀರಾಮನಿಗೆ ವಿಶದವಾಗಿ ಹೇಳುತ್ತಾನೆ. ಭರತನ ಮಾತಿನಿಂದ ಶ್ರೀರಾಮನು ಸುಪ್ರೀತನಾಗುತ್ತಾನೆ.

೧೦೧ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೨ನೆಯ ಸರ್ಗ

ಶ್ರೀರಾಮನ ಆಜ್ಞೆಯಂತೆ ಭರತ-ಲಕ್ಷ್ಮಣರು ಕುಮಾರರಾದ ಅಂಗದ ಮತ್ತು ಚಂದ್ರಕೇತುಗಳನ್ನು ಕಾರುಪಥದೇಶಕ್ಕೆ ರಾಜರನ್ನಾಗಿ ಮಾಡುವುದು

ತಚ್ಛ್ರುತ್ವಾ ಹರ್ಷಮಾಪೇದೇ ರಾಘವೋ ಭ್ರಾತೃಭಿಃ ಸಹ ।
ವಾಕ್ಯಂ ಚಾದ್ಭುತಸಂಕಾಶಂ ತದಾ ಪ್ರೋವಾಚ ಲಕ್ಷ್ಮಣಮ್ ॥೧॥

ಭರತನಿಂದ ಗಂಧರ್ವವಿಜಯದ ಸಮಾಚಾರವನ್ನು ಕೇಳಿ ಶ್ರೀರಾಮನು ಸಂತೋಷಭರಿತನಾಗುತ್ತಾನೆ. ಪುನಃ ಶ್ರೀರಾಮನು ಪರಮಾದ್ಭುತವಾಗಿ ಕಾಣುವ ಈ ಮಾತನ್ನು ತನ್ನ ಅನುಜರಿಗೆ ಹೇಳುತ್ತಾನೆ :

"ಲಕ್ಷ್ಮಣ! ನಿನ್ನ ಈ ಇಬ್ಬರು ಕುಮಾರರಾದ ಅಂಗದ ಮತ್ತು ಚಂದ್ರ ಕೇತುಗಳುಧರ್ಮವಿಶಾರದರೂ ಮತ್ತು ರಾಜ್ಯಭಾರಮಾಡಲು ಬೇಕಾದ ದೃಢಪರಾಕ್ರಮವನ್ನು ಹೊಂದಿರುವವರೂ ಆಗಿರುತ್ತಾರೆ. ಇವರಿಗೂ ನಾನು ಪಟ್ಟಾಭಿಷೇಕಮಾಡಲು ಬಯಸಿದ್ದೇನೆ. ಆದುದರಿಂದ ನೀವು ಯಾವುದಾದರೂ ದೇಶವನ್ನು ಇವರ ಸಲುವಾಗಿ ಸೂಚಿಸಿರಿ. ಆ ದೇಶವು ರಮಣೀಯವಾಗಿರಬೇಕು. ಉಪದ್ರವಗಳಿಂದ ರಹಿತವಾಗಿರಬೇಕು ಮತ್ತು ಧನುರ್ಧಾರಿಗಳಾದ ಇವರು ಆನಂದದಿಂದಿರಲು ಸಮಸ್ತವಾದ ಅನುಕೂಲಗಳೂ ಇರಬೇಕು. ಇವರಿಬ್ಬರೂ ಅಲ್ಲಿ ವಾಸಮಾಡುವುದರಿಂದ ಬೇರೆಯ ರಾಜರಿಗೆ ಪೀಡೆಯಾಗ ಬಾರದು. ಋಷ್ಯಾಶ್ರಮಗಳೂ ವಿನಾಶಹೊಂದಬಾರದು. ನಾವು ಈ ನಮ್ಮ ಕುಮಾರರನ್ನು ರಾಜರನ್ನಾಗಿ ಮಾಡಲು ದೇಶವನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ನಾವು ಯಾವುದೇ ರೀತಿಯಲ್ಲೂ ಇತರರ ದೃಷ್ಟಿಯಿಂದ ಅಪರಾಧಿಗಳಾಗಬಾರದು. ಅಂತಹ ಒಂದು ದೇಶವನ್ನು ಕುಮಾರರಿಗಾಗಿ ಹುಡುಕಿರಿ."

ಶ್ರೀರಾಮನು ಹೀಗೆ ಹೇಳಲು ಭರತನು ಹೇಳುತ್ತಾನೆ :

"ಆರ್ಯನೇ! ಇಲ್ಲಿಯೇ ಇರುವ ಈ ಕಾರುಪಥವೆಂಬ ದೇಶವು ರಮಣೀಯವಾಗಿಯೂ ಇದೆ. ಆಧಿ-ವ್ಯಾಧಿಗಳಿಂದ ರಹಿತವಾಗಿಯೂ ಇದೆ. ಮಹಾತ್ಮನಾದ ಅಂಗದನಿಗೆ ಅದು ರಾಜಧಾನಿಯಾಗಿ ಕೊಡಲ್ಪಡಲಿ. ಚಂದ್ರ ಕೇತುವಿಗೆ ಚಂದ್ರಕಾಂತವೆಂಬ ಸುಂದರವಾದ ನಗರಿಯು ನಿರ್ಮಿಸಲ್ಪಡಲಿ."

ಭರತನು ಹೇಳಿದ ಈ ಮಾತನ್ನು ಕೇಳಿ ಶ್ರೀರಾಮನು ಅವನ ಸಲಹೆಯನ್ನು ಅಂಗೀಕರಿಸುತ್ತಾನೆ. ಕಾರುಪಥದೇಶಕ್ಕೆ ಅಂಗದನನ್ನು ರಾಜನನ್ನಾಗಿ ಮಾಡುತ್ತಾನೆ. ಕಷ್ಟಕರವಾದ ಕೆಲಸವನ್ನೂ ಸುಲಭವಾಗಿ ಮಾಡುವ ಸಾಮರ್ಥ್ಯವುಳ್ಳ ಶ್ರೀರಾಮನು ಕಾರುಪಥದೇಶದಲ್ಲಿ ಅಂಗದನಿಗಾಗಿ ಅಂಗದೀಯಾ ಎಂಬ ಪಟ್ಟಣವನ್ನು ನಿರ್ಮಿಸಿಕೊಡುತ್ತಾನೆ. ಅದು ಪರಮ ಸುಂದರವಾಗಿಯೂ ಸುರಕ್ಷಿತವಾಗಿಯೂ ಇರುತ್ತದೆ. ಚಂದ್ರಕೇತುವು ಹೃಷ್ಟಪುಷ್ಟನಾಗಿದ್ದು ಮಲ (ಜಟ್ಟಿ) ನಂತೆ ಕಾಣುತ್ತಾನೆ. ಅವನಿಗೆ ಮಲ್ಲದೇಶದಲ್ಲಿಯೇ ಚಂದ್ರಕಾಂತವೆಂದು ವಿಖ್ಯಾತವಾದ ಪಟ್ಟಣವನ್ನು ನಿರ್ಮಿಸಿಕೊಡುತ್ತಾನೆ. ಆ ಪಟ್ಟಣವು ಸ್ವರ್ಗದ ಪಟ್ಟಣವಾದ ಅಮರಾವತಿಯಂತೆ ಅತಿ ಸುಂದರವಾಗಿರುತ್ತದೆ. ಈ ರಾಜಧಾನಿಗಳನ್ನು ನೋಡಿ ರಣದುರ್ಜಯರಾದ ರಾಮ-ಲಕ್ಷ್ಮಣ-ಭರತರು ಪರಮಪ್ರೀತರಾಗುತ್ತಾರೆ ಮತ್ತು ಕುಮಾರರಿಬ್ಬರಿಗೂ ಪಟ್ಟಾಭಿಷೇಕಮಾಡಿದನಂತರ ಅಂಗದನನ್ನು ಪಶ್ಚಿಮದಿಕ್ಕಿಗೂ ಚಂದ್ರಕೇತುವನ್ನು ಉತ್ತರದಿಕ್ಕಿಗೂ ಕಳುಹಿಸಿಕೊಡುತ್ತಾರೆ. ಅಂಗದನ ಜೊತೆಯಲ್ಲಿ ಲಕ್ಷ್ಮಣನೂ ಚಂದ್ರಕೇತುವಿನ ಪಾರ್ಶ್ವರಕ್ಷಕನಾಗಿ ಭರತನೂ ಪ್ರಯಾಣಮಾಡುತ್ತಾರೆ.

ಲಕ್ಷ್ಮಣನು ಅಂಗದನೊಡನೆ ಒಂದು ವರ್ಷದವರೆಗಿದ್ದು ರಾಜ್ಯಭಾರಕ್ರಮವನ್ನು ವ್ಯವಸ್ಥೆಮಾಡಿಕೊಟ್ಟು ಕುಮಾರನು ರಾಜ್ಯಭಾರಮಾಡಲು ಸಮರ್ಥನೆಂದು ತಿಳಿದನಂತರ ಅಯೋಧ್ಯೆಗೆ ಹಿಂದಿರುಗುತ್ತಾನೆ. ಭರತನು ಕೂಡ ಚಂದ್ರಕೇತುವಿನ ಜೊತೆಯಲ್ಲಿ ವರ್ಷಕಳೆದನಂತರವೂ ಸ್ವಲ್ಪಕಾಲವಿದ್ದು ಅವನ ರಾಜ್ಯಭಾರಕ್ರಮವನ್ನು ವ್ಯವಸ್ಥೆಗೊಳಿಸಿ ರಾಜ್ಯಭಾರಮಾಡಲು ಚಂದ್ರಕೇತುವು ಸಮರ್ಥನೆಂದು ಸ್ಥಿರಪಟ್ಟನಂತರ ಅಯೋಧ್ಯೆಗೆ ಹಿಂದಿರುಗಿ ಶ್ರೀರಾಮನ ಸೇವೆಯಲ್ಲಿ ತೊಡಗುತ್ತಾನೆ. ಪರಮಧಾರ್ಮಿಕರಾದ ಭರತ-ಲಕ್ಷ್ಮಣರು ಯಾವಾಗಲೂ ಶ್ರೀರಾಮನ ಪಾದಸೇವೆಯಲ್ಲಿಯೇ ಅನುರಾಗವುಳ್ಳವರಾಗಿರುತ್ತಾರೆ. ಶ್ರೀರಾಮನ ಸೇವೆಯಲ್ಲಿಯೇ ಬಹಳಕಾಲ ಕಳೆದರೂ ಶ್ರೀರಾಮನಲ್ಲಿದ್ದ ಸ್ನೇಹಾಧಿಕ್ಯದಿಂದ ಅಷ್ಟು ಕಾಲವು ಕಳೆಯಿತೆಂಬ ಅರಿವೇ ಅವರಿಗಿರುವುದಿಲ್ಲ. ರಾಮ-ಲಕ್ಷ್ಮಣ-ಭರತ ಈ ಮೂವರೂ ಪ್ರಜೆಗಳಿಗೆ ಹಿತವಾಗುವ ಕಾರ್ಯದಲ್ಲಿಯೂ ಧಾರ್ಮಿಕಕಾರ್ಯಗಳಲ್ಲಿಯೂ ಸದಾ

ಪ್ರಯತ್ನಶೀಲರಾಗಿರುತ್ತಾರೆ. ಹೀಗೆಯೇ ಹತ್ತುಸಾವಿರ ವರ್ಷಗಳು ಕಳೆದು ಹೋಗುತ್ತವೆ.

ಧರ್ಮಸಾಧನೆಗೆ ಸ್ಥಾನಭೂತವಾದ ಅಯೋಧ್ಯಾಪಟ್ಟಣದಲ್ಲಿ ವೈಭವ ಪೂರ್ಣರಾಗಿ ತುಂಬುಮನಸ್ಸಿನಿಂದ ಕೂಡಿದ ರಾಮ-ಲಕ್ಷ್ಮಣ-ಭರತರು ಸಮಯಗಳಲ್ಲಿ ವಿಹರಿಸುತ್ತಾ ಪ್ರಜೆಗಳ ಯೋಗ-ಕ್ಷೇಮಗಳನ್ನು ನೋಡಿ ಕೊಳ್ಳುತ್ತಾ, ಮಹಾಯಜ್ಞದಲ್ಲಿ ಆಹುತಿಯನ್ನು ಕಡೆದು ಪ್ರಜ್ವಲಿಸುವ ಗಾರ್ಹಪತ್ಯ-ಆಹವನೀಯ-ದಕ್ಷಿಣಾಗ್ನಿಗಳೆಂಬ ಅಗ್ನಿತ್ರಯಗಳಂತೆ ಪ್ರಕಾಶಿಸು ತ್ತಿರುತ್ತಾರೆ.

೧೦೨ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೩ನೆಯ ಸರ್ಗ

ಶ್ರೀರಾಮನ ಅರಮನೆಗೆ ಕಾಲಪುರುಷನು ಆಗಮಿಸುವುದು

ಕಸ್ಯಚಿತ್ತ್ವಥ ಕಾಲಸ್ಯ ರಾಮೇ ಧರ್ಮಪರೇ ಸ್ಥಿತೇ ।
ಕಾಲಸ್ತಾಪಸರೂಪೇಣ ರಾಜದ್ವಾರಮುಪಾಗಮತ್ ॥೧॥

ಪುನಃ ಹಲವಾರು ವರ್ಷಗಳು ಕಳೆದನಂತರ ಶ್ರೀರಾಮನು ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿರಲಾಗಿ ಕಾಲಪುರುಷನು ತಪಸ್ವಿಯ ವೇಷವನ್ನು ಧರಿಸಿ ಶ್ರೀರಾಮನ ಅರಮನೆಯ ಮಹಾದ್ವಾರಕ್ಕೆ ಬರುತ್ತಾನೆ.

ಬಂದೊಡನೆಯೇ ಮಹಾದ್ವಾರದಲ್ಲಿ ನಿಂತಿದ್ದ ಧೈರ್ಯಶಾಲಿಯಾದ ಮತ್ತು ಯಶೋವಂತನಾದ ಲಕ್ಷ್ಮಣನಿಗೆ ತಾನು ಮಹಾಕಾರ್ಯವೊಂದರ ಸಲುವಾಗಿ ಬಂದಿರುವುದಾಗಿಯೂ ಈ ವಿಷಯವನ್ನು ಶ್ರೀರಾಮನಿಗೆ ತಿಳಿಸ ಬೇಕೆಂತಲೂ ಹೇಳುತ್ತಾನೆ.

ದೂತೋ ಹ್ಯತಿಬಲಸ್ಯಾಹಂ ಮಹರ್ಷೇರಮಿತೌಜಸಃ ।
ರಾಮಂ ದಿದೃಕ್ಷುರಾಯಾತಃ ಕಾರ್ಯೇಣ ಹಿ ಮಹಾಬಲ ॥೩॥

"ಮಹಾಬಲಿಷ್ಠನಾದ ಲಕ್ಷ್ಮಣನೇ! ನಾನು ಮಹಾತೇಜಸ್ವಿಯಾದ ಅತಿಬಲಮಹರ್ಷಿಯ ದೂತನಾಗಿದ್ದೇನೆ. ಯಾವುದೋ ಒಂದು ಅವಶ್ಯ ಕಾರ್ಯದ ಸಲುವಾಗಿ ಶ್ರೀರಾಮನನ್ನು ನೋಡಲು ಬಂದಿದ್ದೇನೆ. ಆದುದರಿಂದ ಈಗಲೇ ನೀನು ಶ್ರೀರಾಮನಿಗೆ ಈ ವಿಷಯವನ್ನು ತಿಳಿಸು."

ತಪಸ್ವಿಯ ಆ ಮಾತನ್ನು ಕೇಳಿ ಲಕ್ಷ್ಮಣನು ಬಹಳ ಅವಸರದಿಂದಲೇ ಶ್ರೀರಾಮನ ಬಳಿಗೆ ಹೋಗಿ ತಾಪಸನೊಬ್ಬನು ಬಂದಿರುವ ವಾರ್ತೆಯನ್ನು ಶ್ರೀರಾಮನಿಗೆ ಅರುಹುತ್ತಾನೆ.

ಜಯಸ್ವ ರಾಜಧರ್ಮೇಣ ಉಭೌ ಲೋಕೌ ಮಹಾದ್ಯುತೇ ।
ದೂತಸ್ತ್ವಾಂ ದ್ರಷ್ಟುಮಾಯಾತಸ್ತಪಸಾ ಭಾಸ್ಕರಪ್ರಭಃ ॥೫॥

"ಮಹಾತೇಜಸ್ವಿಯೇ! ರಾಮಚಂದ್ರ! ನೀನು ನಿನ್ನ ರಾಜಧರ್ಮದ ಪ್ರಭಾವದಿಂದ ಭೂಲೋಕ-ಸ್ವರ್ಗಲೋಕಗಳೆರಡನ್ನೂ ಜಯಿಸುವವನಾಗು. ತಪಸ್ವಿಯೊಬ್ಬನು ದೂತನಾಗಿ ನಿನ್ನಲ್ಲಿಗೆ ಬಂದಿದ್ದಾನೆ. ಅವನ ತಪೋಜನಿತವಾದ ತೇಜಸ್ಸಿನಿಂದ ಸೂರ್ಯದೇವನಂತೆಯೇ ಬೆಳಗುತ್ತಿದ್ದಾನೆ."

ಆ ಲಕ್ಷ್ಮಣನು ಹೇಳಿದ ಈ ಮಾತನ್ನು ಕೇಳಿ ಶ್ರೀರಾಮನು ಹೇಳುತ್ತಾನೆ.

ಪ್ರವೇಶ್ಯತಾಂ ಮುನಿಸ್ತಾತ ಮಹೌಜಾಸ್ತಸ್ಯ ವಾಕ್ಯಧೃಕ್ ॥೬॥

"ಮಹಾತೇಜಸ್ವಿಯಾದ ಮತ್ತು ತನ್ನ ಸ್ವಾಮಿಯ ಸಂದೇಶವನ್ನು ಹೊತ್ತು ತಂದಿರುವ ಮುನಿಯನ್ನು ಒಳಕ್ಕೆ ಬಿಡು."

ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ತನ್ನ ತೇಜಸ್ಸಿನಿಂದ ಜಾಜ್ವಲ್ಯಮಾನನಾಗಿ ಕಾಣುತ್ತಿದ್ದ ಪ್ರಖರವಾದ ಕಿರಣಗಳಿಂದ ಎಲ್ಲವನ್ನೂ ದಹಿಸಿಬಿಡುವನೋ ಎಂಬಂತೆ ಕಾಣುತ್ತಿದ್ದ ಮುನಿಯನ್ನು ಶ್ರೀರಾಮನ ಬಳಿಗೆ ಕರೆತರುತ್ತಾನೆ.

ಮುನಿದೂತನು, ತನ್ನ ದಿವ್ಯವಾದ ತೇಜಸ್ಸಿನಿಂದ ಬೆಳಗುತ್ತಿದ್ದ ರಘುಕುಲತಿಲಕನಾದ ಶ್ರೀರಾಮನ ಬಳಿಗೆ ಬಂದು ಮಧುರವಾದ ಮಾತಿನಿಂದ "ರಾಘವ! ನಿನಗೆ ಅಭ್ಯುದಯವಾಗಲಿ"–ಎಂದು ಹರಸುತ್ತಾನೆ.

ಬಳಿಕ ಮಹಾತೇಜಸ್ವಿಯಾದ ಶ್ರೀರಾಮನು ಮಹಾಮುನಿಗೆ ಅರ್ಘ್ಯ-ಪಾದ್ಯಗಳ ಮೂಲಕವಾಗಿ ಯಥೋಚಿತವಾದ ಪೂಜೆಯನ್ನು ಸಲ್ಲಿಸಿ ಸತ್ಕರಿಸುತ್ತಾನೆ. ಶಾಂತಭಾವದಿಂದ ಕೂಡಿ ಅವನು ಕುಶಲಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುತ್ತಾನೆ. ಶ್ರೀರಾಮನು ಕುಶಲಪ್ರಶ್ನೆಗಳನ್ನು ಕೇಳಿದನಂತರ

ವಾಗ್ಮಿಗಳಲ್ಲಿ ಶ್ರೇಷ್ಠನಾದ ಮಹಾಯಶೋವಂತನಾದ ಮುನಿಯು ಸುವರ್ಣ ಮಯವಾದ ಮತ್ತು ದಿವ್ಯವಾದ ಆಸನದಲ್ಲಿ ಕುಳಿತುಕೊಳ್ಳುತ್ತಾನೆ.

ಬಳಿಕ ಶ್ರೀರಾಮನು ಪುನಃ ಹೇಳುತ್ತಾನೆ :

"ಮಹಾಮತಿಯೇ! ಮುನಿವರ್ಯನೇ! ನಿನಗೆ ಸ್ವಾಗತವನ್ನು ಬಯಸುತ್ತೇನೆ. ನೀನು ಯಾವ ಮಹಾಮಹಿಮನ ದೂತನಾಗಿ ಇಲ್ಲಿಗೆ ಬಂದಿರುವೆಯೋ ಅಂತಹವನ ಸಂದೇಶವೇನೆಂಬುದನ್ನು ಹೇಳು."

ಶ್ರೀರಾಮನು ಹೀಗೆ ಹೇಳಲು ಮುನಿಯು ಹೇಳುತ್ತಾನೆ :

ದ್ವನ್ದ್ವೇ ಹ್ಯೇತತ್ಪ್ರವಕ್ತವ್ಯಂ ಹಿತಂ ವೈ ಯದ್ಯವೇಕ್ಷಸೇ ॥೧೨॥

ಯಃ ಶೃಣೋತಿ ನಿರೀಕ್ಷೇದ್ವಾ ಸ ವಧ್ಯೋ ಭವಿತಾ ತವ ।
ಭವೇದ್ವೈ ಮುನಿಮುಖ್ಯಸ್ಯ ವಚನಂ ಯದ್ಯವೇಕ್ಷಸೇ ॥೧೩॥

"ರಾಘವ! ನಮ್ಮ ಹಿತದಲ್ಲಿಯೇ ನಿನಗೆ ದೃಷ್ಟಿಯಿರುವುದಾದರೆ ನಾವಿಬ್ಬರಿರುವಾಗಲೇ ನಾನು ನಿನಗೆ ಮಹರ್ಷಿಯ ಸಂದೇಶವನ್ನು ಹೇಳ ಬೇಕಾಗುತ್ತದೆ. ಇಷ್ಟುಮಾತ್ರವಲ್ಲ ; ಮುನಿಶ್ರೇಷ್ಠನ ಸಂದೇಶವನ್ನು ನಾನು ನಿನಗೆ ಹೇಳುವಾಗ ಮತ್ತು ನೀನು ಕೇಳಿಸಿಕೊಳ್ಳುತ್ತಿರುವಾಗ ಯಾರಾದರೂ ಕೇಳಿದರೆ ಅಥವಾ ನೋಡಿದರೆ ಅಂತಹವನಿಗೆ ನೀನು ಮರಣದಂಡನೆಯನ್ನು ವಿಧಿಸಬೇಕಾಗುತ್ತದೆ."

ದೂತತಾಪಸನ ಈ ನಿಯಮಕ್ಕೆ ಶ್ರೀರಾಮನು ಸಮ್ಮತಿಸಿ ಲಕ್ಷ್ಮಣನಿಗೆ ಹೇಳುತ್ತಾನೆ :

ದ್ವಾರಿ ತಿಷ್ಠ ಮಹಾಬಾಹೋ ಪ್ರತಿಹಾರಂ ವಿಸರ್ಜಯ ॥೧೪॥

ಸ ಮೇ ವಧ್ಯಃ ಖಲು ಭವೇದ್ವಾಚಂ ದ್ವನ್ದ್ವಸಮೀರಿತಾಮ್ ।
ಋಷೇರ್ಮಮ ಚ ಸೌಮಿತ್ರೇ ಪಶ್ಯೇದ್ವಾ ಶೃಣುಯಾಚ್ಚ ಯಃ ॥

"ಲಕ್ಷ್ಮಣ! ದ್ವಾರಪಾಲಕನನ್ನು ಕಳುಹಿಸಿಕೊಟ್ಟು ನೀನೇ ಆ ಸ್ಥಾನದಲ್ಲಿ ನಿಂತುಕೊ. ನಾವಿಬ್ಬರೂ ಮಾತನಾಡುವುದನ್ನು ಯಾರು ಕೇಳಿಸಿಕೊಳ್ಳು ವರೋ ಅಥವಾ ಯಾವನು ನೋಡುವನೋ ಅಂತಹವನು ನನ್ನಿಂದ ವಧಿ ಸಲ್ಪಡುತ್ತಾನೆ. ಇದು ನನ್ನ ಪ್ರತಿಜ್ಞೆಯಾಗಿದೆ."

ಹೀಗೆ ಹೇಳಿ ತನ್ನ ಮಾತನ್ನು ಗ್ರಹಿಸಿದ ಲಕ್ಷ್ಮಣನನ್ನು ದ್ವಾರಪಾಲಕನ ಸ್ಥಾನದಲ್ಲಿರಿಸಿ ಋಷಿದೂತನಿಗೆ ಮಹಾಮುನಿಯ ಸಂದೇಶವನ್ನು ತಿಳಿಸುವಂತೆ ಹೇಳುತ್ತಾನೆ.

ಯತ್ತೇ ಮನೀಷಿತಂ ವಾಕ್ಯಂ ಯೇನ ವಾಸಿ ಸಮಾಹಿತಃ ।
ಕಥಯಸ್ವಾವಿಶಙ್ಕಸ್ತ್ವಂ ಮಮಾಪಿ ಹೃದಿ ವರ್ತತೇ ॥೧೭॥

"ಮುನಿಯೇ! ನಿನ್ನ ಮನಸ್ಸಿನ ಅಭಿಪ್ರಾಯವನ್ನು ಅಥವಾ ನೀನು ಯಾರಿಂದ ಕಳುಹಿಸಲ್ಪಟ್ಟಿರುವೆಯೋ ಆ ಮಹಾಮುನಿಯ ಅಭಿಪ್ರಾಯವನ್ನು ಯಾವ ವಿಧವಾದ ಶಂಕೆಯೂ ಇಲ್ಲದೆ ಹೇಳು. ನನ್ನ ಮನಸ್ಸಿನಲ್ಲೂ ಈ ರಹಸ್ಯವನ್ನು ಕೇಳಬೇಕೆಂಬ ಉತ್ಕಂಠೆಯುಂಟಾಗಿದೆ."

೧೦೩ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೪ನೆಯ ಸರ್ಗ

ಕಾಲಪುರುಷನು ಬ್ರಹ್ಮನ ಸಂದೇಶವನ್ನು ಶ್ರೀರಾಮನಿಗೆ ತಿಳಿಸುವುದು : ಶ್ರೀರಾಮನ ಅಂಗೀಕಾರ

ಶೃಣು ರಾಜನ್ಮಹಾಸತ್ತ್ವ ಯದರ್ಥಮಹಮಾಗತಃ ।
ಪಿತಾಮಹೇನ ದೇವೇನ ಪ್ರೇಷಿತೋಽಸ್ಮಿ ಮಹಾಬಲ ॥೧॥

ತಾಪಸದೂತನು ಹೇಳುತ್ತಾನೆ :

"ಮಹಾಸತ್ವನೇ! ಮಹಾಬಲನೇ! ಮಹಾರಾಜ! ನಾನು ಯಾವ ಕಾರಣದಿಂದ ಇಲ್ಲಿಗೆ ಬಂದಿರುವೆನೆಂಬುದನ್ನು ಹೇಳುವೆನು ; ಕೇಳು. ದೇವನಾದ ಪಿತಾಮಹನು ನನ್ನನ್ನು ನಿನ್ನಲ್ಲಿಗೆ ಕಳುಹಿಸಿಕೊಟ್ಟಿದ್ದಾನೆ.

ಶತ್ರುರಾಷ್ಟ್ರಗಳನ್ನು ಜಯಿಸುವ ಸಾಮರ್ಥ್ಯವಿರುವವನೇ! ಪೂರ್ವಾವಸ್ಥೆಯಲ್ಲಿ ಅಂದರೆ ಹಿರಣ್ಯಗರ್ಭನ ಉತ್ಪತ್ತಿಸಮಯದಲ್ಲಿ ಮಾಯೆಯ ಆವಿಷ್ಕಾರದಿಂದ ನಾನು ನಿನಗೆ ಮಗನಾಗಿ ಹುಟ್ಟಿದೆನು. ಆದುದರಿಂದ ನಾನು ನಿನಗೆ ಪುತ್ರನಾಗಬೇಕು. ನನ್ನನ್ನು ಸರ್ವಸಂಹಾರಕನಾದ ಕಾಲನೆಂದು ಕರೆಯುತ್ತಾರೆ. ಲೋಕನಾಥನಾದ, ಪ್ರಭುವಾದ, ಪೂಜ್ಯನಾದ ಪಿತಾಮಹನು ನಿನಗೆ ಈ ಸಂದೇಶವನ್ನು ಕಳುಹಿಸಿದ್ದಾನೆ :

ಸಮಯಸ್ತೇ ಕೃತಃ ಸೌಮ್ಯ ಲೋಕಾನ್ಸಂಪರಿರಕ್ಷಿತುಮ್ ॥೩॥

"ಸೌಮ್ಯನೇ! ನೀನು ಮೂರು ಲೋಕಗಳ ರಕ್ಷಣೆಗಾಗಿ ಮಾಡಿದ್ದ ಪ್ರತಿಜ್ಞೆಯು ಪೂರ್ಣವಾಗಿದೆ. ಹಿಂದೆ ಸಮಸ್ತಲೋಕಗಳನ್ನೂ ಮಾಯೆಯ ಮೂಲಕವಾಗಿ ನಿನ್ನಲ್ಲಿಯೇ ಉಡುಗಿಸಿಕೊಂಡು ಮಹಾಸಮುದ್ರದಲ್ಲಿ ಮಲಗಿದ್ದ ನೀನು ಮೊಟ್ಟಮೊದಲಿಗೆ ನನ್ನನ್ನು ಸೃಷ್ಟಿಸಿದೆ. ಅನಂತರ ನೀನು ವಿಶಾಲವಾದ ಹೆಡೆಯಿಂದಲೂ ಶರೀರದಿಂದಲೂ ಕೂಡಿರುವ ಜಲಶಾಯಿಯಾದ ಅನಂತ ಎಂಬ ಹೆಸರಿನ ಮಹಾಸರ್ಪವನ್ನು ಮಾಯೆಯಿಂದ ಸೃಷ್ಟಿಸಿದೆ. ಬಳಿಕ ನೀನು ಮಹಾಸತ್ತ್ವರೂ ಮಹಾಬಲಿಷ್ಠರೂ ಆದ ಮಧು-ಕೈಟಭರಿಗೆ ಜನ್ಮವಿತ್ತೆ. ಅವರ ಮೂಳೆಗಳ ರಾಶಿಗಳಿಂದಲೂ, ಮೇದಸ್ಸಿನಿಂದಲೂ ಮತ್ತು ಪರ್ವತಗಳಿಂದಲೂ ಸಮಾವೃತವಾದ ಮೇದಿನಿಯು* ಆಗಲೇ ಆವಿರ್ಭವಿಸಿತು. ನಿನ್ನ ನಾಭಿಯಲ್ಲಿದ್ದ ಸೂರ್ಯಸದೃಶವಾದ ಕಮಲದಲ್ಲಿ ನನಗೆ ನೀನು ಜನ್ಮವನ್ನಿತ್ತೆ. ಪ್ರಜಾಸೃಷ್ಟಿಯ ಸಮಸ್ತಕಾರ್ಯಭಾರವನ್ನೂ ನನಗೇ ವಹಿಸಿದೆ. ನನಗೆ ಪ್ರಜೋತ್ಪತ್ತಿಯ ಭಾರವನ್ನು ವಹಿಸಿದನಂತರ ಜಗತ್ಪತಿಯಾದ ನಿನ್ನ ಉಪಾಸನೆಮಾಡಿ ನಿನ್ನನ್ನು ನಾನು ಪ್ರಾರ್ಥಿಸಿಕೊಂಡೆನು.

ರಕ್ಷಾಂ ವಿಧತ್ಸ್ವ ಭೂತೇಷು ಮಮ ತೇಜಸ್ಕರೋ ಭವಾನ್ ॥೮॥

"ಪ್ರಭುವೇ! ನೀನು ಪ್ರಾಣಿಗಳ ಮಧ್ಯದಲ್ಲೇ ಇದ್ದುಕೊಂಡು ಅವುಗಳ ರಕ್ಷಣೆಯನ್ನು ಮಾಡು. ನನ್ನ ಜ್ಞಾನ-ಕ್ರಿಯಾಶಕ್ತಿರೂಪವಾದ ತೇಜಸ್ಸಿಗೂ ನೀನೇ ಕಾರಣನಾಗಿರುವೆ."

ಆಗ ನೀನು ನನ್ನ ಈ ಪ್ರಾರ್ಥನೆಯನ್ನು ಮನ್ನಿಸಿ ಪ್ರಾಣಿಗಳನ್ನು ರಕ್ಷಿಸುವ ಸಲುವಾಗಿ ಇತರರಿಂದ ಧರಿಸಲು ಅಸಾಧ್ಯವಾದ, ಅಪರಿಮೇಯವಾದ, ಸನಾತನವಾದ ಆ ನಿನ್ನ ಮೂಲಸ್ವರೂಪದಿಂದ ವಿಷ್ಣುರೂಪವನ್ನು ಧರಿಸಿದೆ.

ವಿಷ್ಣುಸ್ವರೂಪದಲ್ಲಿದ್ದ ನೀನೇ ಪುನಃ ಅದಿತಿಯ ವೀರ್ಯವಂತನಾದ ಪುತ್ರನಾಗಿ (ವಾಮನನಾಗಿ) ಜನಿಸಿದೆ. ಆಗಿನಿಂದ ನೀನು ನಿನ್ನ ಸಹೋದರರಾದ ಇಂದ್ರನೇ ಮೊದಲಾದ ದೇವತೆಗಳ ಶಕ್ತಿಯನ್ನು ವೃದ್ಧಿಪಡಿಸುತ್ತಿರುವೆ. ಅವಶ್ಯಕತೆಯೊದಗಿಬಂದಾಗ ಅವರಿಗೆ ಸಹಾಯವನ್ನೂ ಮಾಡುವೆ.

---

* ಮಧು-ಕೈಟಭರ ಮೇದಸ್ಸಿನಿಂದ ಕೂಡಿರುವುದರಿಂದಲೇ ಈ ಭೂಮಿಗೆ ಮೇದಿನೀ ಎಂಬ ಹೆಸರಾಗಿದೆ. **ಮೇದ್ಯತಿ : ಮೇದೋಽಸ್ಯಾ ಅಸ್ತಿ ಇತಿ ಮೇದಿನೀ.**

ಜಗದೀಶ್ವರನೇ! ರಾವಣನಿಂದ ಪ್ರಪಂಚದ ಪ್ರಜೆಗಳು ವಿನಾಶ ಹೊಂದುತ್ತಿರಲಾಗಿ ನೀನು ಆ ರಾವಣರಾಕ್ಷಸನನ್ನು ವಧೆಮಾಡುವ ಇಚ್ಛೆಯಿಂದ ಮನುಷ್ಯರಲ್ಲಿ ಜನ್ಮತಾಳಲು ಮನಸ್ಸುಮಾಡಿದೆ. ಆ ಸಮಯದಲ್ಲಿ ನೀನು ಹನ್ನೊಂದುಸಾವಿರ ವರ್ಷಗಳು ಭೂಮಿಯಲ್ಲಿ ವಾಸಮಾಡಿಕೊಂಡಿರುವುದಾಗಿ ನಿಶ್ಚಯಮಾಡಿಕೊಂಡೆ. ನರಶ್ರೇಷ್ಠನೇ! ನೀನು ಮನುಷ್ಯಲೋಕದಲ್ಲಿ ನಿನ್ನ ಸಂಕಲ್ಪದಿಂದಲೇ ದಶರಥನ ಮಗನಾಗಿ ಹುಟ್ಟಿದೆ. ನೀನೇ ಹಿಂದೆ ಸಂಕಲ್ಪಿಸಿದ್ದಂತೆ ನಿನಗೆ ಆ ಪೂರ್ಣಾಯುಷ್ಯವು ಮುಗಿದಿದೆ. ಆದುದರಿಂದ ನೀನು ನಮ್ಮ ಬಳಿಗೆ ಬರಲು ಇದು ಸಕಾಲವಾಗಿದೆ. ಮುಂದೆಯೂ ಬಹಳ ಕಾಲ ಪ್ರಜೆಗಳನ್ನು ಪರಿಪಾಲಿಸಿಕೊಂಡಿರಲು ನೀನು ಬಯಸುವುದಾದರೆ ಹಾಗೆಯೇ ಮಾಡಬಹುದು. ನಿನಗೆ ಮಂಗಳವಾಗಲಿ. ಅಥವಾ ದೇವಲೋಕಕ್ಕೆ ಬರುವ ಇಚ್ಛೆಯಿರುವುದಾದರೆ ಅವಶ್ಯವಾಗಿ ಆಗಮಿಸು. ನೀನು ವಿಷ್ಣುವಿನ ಧಾಮದಲ್ಲಿ (ವೈಕುಂಠದಲ್ಲಿ) ಪ್ರತಿಷ್ಠಿತನಾದನಂತರ ದೇವತೆಗಳು ಸನಾಥರಾಗಿ ನಿಶ್ಚಿಂತರಾಗುತ್ತಾರೆ."

ದೂತತಾಪಸಿಯು ಹೇಳುತ್ತಾನೆ :

"ರಾಘವ! ಪಿತಾಮಹನ ಸಂದೇಶದ ಯಥಾವತ್ತಾದ ಪೂರ್ಣಪಾಠವಿದು."

ಕಾಲಪುರುಷನು ಹೇಳುವ ಪಿತಾಮಹನ ಯಥಾವತ್ತಾದ ಸಂದೇಶ ವನ್ನು ಕೇಳಿ ಶ್ರೀರಾಮನು ಗಹಗಹಿಸಿ ನಗುತ್ತಾ ಸರ್ವಸಂಹಾರಕನಾದ ಕಾಲಪುರುಷನಿಗೆ ಹೇಳುತ್ತಾನೆ :

"ಮಹಾಕಾಲನೇ! ನಿನ್ನ ಆಗಮನದಿಂದ ಪ್ರಾಪ್ತವಾದ ದೇವದೇವ ನಾದ ಬ್ರಹ್ಮನ ಪರಮಾದ್ಭುತವಾದ ವಾಣಿಯನ್ನು ಕೇಳಿ ನಾನು ಸುಪ್ರೀತ ನಾಗಿದ್ದೇನೆ.

ತ್ರಯಾಣಾಮಪಿ ಲೋಕಾನಾಂ ಕಾರ್ಯಾರ್ಥಂ ಮಮ ಸಂಭವಃ ।
ಭದ್ರಂ ತೇಽಸ್ತು ಗಮಿಷ್ಯಾಮಿ ಯತ ಏವಾಹಮಾಗತಃ ॥೧೮॥

ಮೂರು ಲೋಕಗಳ ಕಾರ್ಯಸಿದ್ಧಿಗಾಗಿ ನನ್ನ ಈ ಅವತಾರವಾಯಿತು. ಆ ನನ್ನ ಸಂಕಲ್ಪವು ಈಗ ಪೂರ್ಣವಾಗಿದೆ. ನಿನಗೆ ಮಂಗಳವಾಗಲಿ. ನಾನು ಎಲ್ಲಿಂದ ಬಂದಿದ್ದೆನೋ ಅಲ್ಲಿಗೇ ಹೋಗುತ್ತೇನೆ.

ಹೃದ್ಗತೋ ಹ್ಯಸಿ ಸಂಪ್ರಾಪ್ತೋ ನ ಮೇ ತತ್ರ ವಿಚಾರಣಾ ।
ಮಯಾ ಹಿ ಸರ್ವಕೃತ್ಯೇಷು ದೇವಾನಾಂ ವಶವರ್ತಿನಾ ।
ಸ್ಥಾತವ್ಯಂ ಸರ್ವಸಂಹಾರ ಯಥಾ ಹ್ಯಾಹ ಪಿತಾಮಹಃ ॥೧೯॥

ಸರ್ವಸಂಹಾರಕನಾದ ಕಾಲನೇ! ನಾನು ಮನಸ್ಸಿನಲ್ಲಿಯೇ ನಿನ್ನನ್ನು ಚಿಂತಿಸುತ್ತಿದ್ದೆನು. ಅದಕ್ಕೆ ಅನುಸಾರವಾಗಿಯೇ ನೀನಿಲ್ಲಿಗೆ ಆಗಮಿಸಿರುವೆ. ಈ ವಿಷಯದಲ್ಲಿ ಪುನಃ ವಿಮರ್ಶಿಸಬೇಕಾದ ಅಗತ್ಯವೇ ಇಲ್ಲ. ಬ್ರಹ್ಮನು ಹೇಳಿರುವಂತೆ ಎಲ್ಲ ಕಾರ್ಯಗಳಲ್ಲಿಯೂ ದೇವತೆಗಳ ವಶವರ್ತಿಯಾಗಿರಬೇಕೆಂಬುದೇ ನನ್ನ ಆಶಯವಾಗಿದೆ.”

೧೦೪ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೫ನೆಯ ಸರ್ಗ

ದುರ್ವಾಸರ ಶಾಪದ ಭಯದಿಂದಾಗಿ ಲಕ್ಷ್ಮಣನು ಅವರು ಆಗಮಿಸಿರುವ ಸಮಾಚಾರವನ್ನು ಹೇಳಲು ಶ್ರೀರಾಮನ ಆಜ್ಞೆಗೆ ವಿರುದ್ಧವಾಗಿ ಶ್ರೀರಾಮನ ಬಳಿಗೆ ಹೋಗುವುದು : ಶ್ರೀರಾಮನು ದುರ್ವಾಸರಿಗೆ ಭೋಜನ ಮಾಡಿಸುವುದು : ಅವರು ಹೊರಟುಹೋದನಂತರ ಲಕ್ಷ್ಮಣನ ಸಲುವಾಗಿ ಶ್ರೀರಾಮನು ಚಿಂತಿಸುವುದು

ತಥಾ ತಯೋಃ ಸಂವದತೋರ್ದುರ್ವಾಸಾ ಭಗವಾನೃಷಿಃ ।
ರಾಮಸ್ಯ ದರ್ಶನಾಕಾಂಕ್ಷೀ ರಾಜದ್ವಾರಮುಪಾಗಮತ್ ॥೧॥

ಶ್ರೀರಾಮನೂ ಮತ್ತು ಕಾಲಪುರುಷನೂ ಮಾತನಾಡುತ್ತಿರುವಾಗ ಶ್ರೀರಾಮನನ್ನು ಸಂದರ್ಶಿಸಬೇಕೆಂಬ ಆಕಾಂಕ್ಷೆಯಿಂದ ಪೂಜ್ಯರಾದ ದುರ್ವಾಸಮಹರ್ಷಿಗಳು ಶ್ರೀರಾಮನ ಅರಮನೆಯ ಬಾಗಿಲಿಗೆ ಬರುತ್ತಾರೆ.

ಲಕ್ಷ್ಮಣನ ಬಳಿಗೆ ಹೋಗಿ ಮಹರ್ಷಿಗಳು ಅವಸರದಿಂದ ಹೇಳುತ್ತಾರೆ:

ರಾಮಂ ದರ್ಶಯ ಮೇ ಶೀಘ್ರಂ ಪುರಾ ಮೇಽರ್ಥೋಽತಿವರ್ತತೇ ॥

“ಲಕ್ಷ್ಮಣ! ನನಗೆ ಶೀಘ್ರದಲ್ಲಿ ಶ್ರೀರಾಮನ ದರ್ಶನವನ್ನು ಮಾಡಿಸು. ಇಲ್ಲದಿದ್ದರೆ ಒಂದು ಅತ್ಯವಶ್ಯಕವಾದ ಕಾರ್ಯವು ಅತಿಕ್ರಮಿಸಿ ಹೋಗುತ್ತದೆ.”

ದುರ್ವಾಸಮಹರ್ಷಿಗಳು ಹೇಳುವ ಮಾತನ್ನು ಕೇಳಿ ಶತ್ರುಹಂತಕ ನಾದ ಲಕ್ಷ್ಮಣನು ಮಹರ್ಷಿಗಳಿಗೆ ನಮಸ್ಕರಿಸಿ ಹೇಳುತ್ತಾನೆ :

ಕಿಂ ಕಾರ್ಯಂ ಬ್ರೂಹಿ ಭಗವ-
ನ್ಕೋ ಹ್ಯರ್ಥಃ ಕಿಂ ಕರೋಮ್ಯಹಮ್ ।
ವ್ಯಗ್ರೋ ಹಿ ರಾಘವೋ ಬ್ರಹ್ಮ-
ನ್ಮುಹೂರ್ತಂ ಪ್ರತಿಪಾಲ್ಯತಾಮ್ ॥೪॥



“ಬ್ರಾಹ್ಮಣೋತ್ತಮರೇ! ಪೂಜ್ಯರೇ! ನಿಮ್ಮ ಕಾರ್ಯವೇನೆಂಬುದನ್ನು ಹೇಳಿರಿ. ನಾನು ನಿಮಗಾಗಿ ಯಾವ ಕಾರ್ಯವನ್ನು ಮಾಡಿಕೊಡಲಿ. ಶ್ರೀರಾಮನೀಗ ಅನ್ಯಮನಸ್ಕನಾಗಿದ್ದಾನೆ. ಮುಹೂರ್ತಮಾತ್ರದವರೆಗೆ ದಯಮಾಡಿ ಪ್ರತೀಕ್ಷಿಸಿರಿ.”

ಲಕ್ಷ್ಮಣನ ಈ ಮಾತನ್ನು ಕೇಳುತ್ತಲೇ ದುರ್ವಾಸರ ಮನಸ್ಸು ಕೋಪದಿಂದ ಕದಡಿಹೋಗುತ್ತದೆ. ಅವನನ್ನು ಕಣ್ಣಿನಿಂದಲೇ ದಹಿಸಿಬಿಡು ವರೋ ಎಂಬಂತೆ ಕೆಂಗಣ್ಣರಾಗಿ ಲಕ್ಷ್ಮಣನಿಗೆ ಹೇಳುತ್ತಾರೆ :

ಅಸ್ಮಿನ್ ಕ್ಷಣೇ ಮಾಂ ಸೌಮಿತ್ರೇ ರಾಮಾಯ ಪ್ರತಿವೇದಯ ।
ಅಸ್ಮಿನ್ ಕ್ಷಣೇ ಮಾಂ ಸೌಮಿತ್ರೇ ನ ನಿವೇದಯಸೇ ಯದಿ ॥೬॥

ವಿಷಯಂ ತ್ವಾಂ ಪುರಂ ಚೈವ ಶಪಿಷ್ಯೇ ರಾಘವಂ ತಥಾ ।
ಭರತಂ ಚೈವಂ ಸೌಮಿತ್ರೇ ಯುಷ್ಮಾಕಂ ಯಾ ಚ ಸಂತತಿಃ ।
ನ ಹಿ ಶಕ್ಷ್ಯಾಮ್ಯಹಂ ಭೂಯೋ ಮನ್ಯುಂ ಧಾರಯಿತುಂ ಹೃದಿ ॥

"ಲಕ್ಷ್ಮಣ! ಈ ಕ್ಷಣದಲ್ಲಿಯೇ ನೀನು, ನಾನು ಬಂದಿರುವುದನ್ನು ಶ್ರೀರಾಮನಿಗೆ ಹೇಳಲೇಬೇಕು. ಒಂದು ವೇಳೆ ನೀನೇನಾದರೂ ಹೇಳದಿದ್ದರೆ ನಿನ್ನನ್ನೂ, ಅಯೋಧ್ಯೆಯನ್ನೂ, ರಾಮನನ್ನೂ, ಭರತನನ್ನೂ, ನಿಮ್ಮ ವಂಶ ವನ್ನೂ ಹಾಳಾಗಿಹೋಗುವಂತೆ ಶಪಿಸಿಬಿಡುತ್ತೇನೆ. ನಿನ್ನ ನಿರಾಕರಣದಿಂದಾಗಿ ನನ್ನ ಹೃದಯದಲ್ಲುದ್ಭವಿಸಿರುವ ಕೋಪವನ್ನು ನನ್ನಿಂದ ತಡೆದು ಕೊಳ್ಳಲಾಗುತ್ತಿಲ್ಲ.

ಮಹಾತ್ಮರಾದ ದುರ್ವಾಸರ ಘೋರವಾದ ಈ ಮಾತನ್ನು ಕೇಳಿ ಮುಂದಿನ ಕ್ಷಣದಲ್ಲಿಯೇ ಅವರ ನಿಶ್ಚಿತವಾದ ಕ್ರಿಯೆಯೇನೆಂಬುದನ್ನು ತಿಳಿಯುವ ಲಕ್ಷ್ಮಣನು ಕ್ಷಣಕಾಲ ಚಿಂತಿಸಿ ತನ್ನ ಆಗಿನ ಕರ್ತವ್ಯವೇನೆಂದು ನಿರ್ಧರಿಸುತ್ತಾನೆ.

ಏಕಸ್ಯ ಮರಣಂ ಮೇಽಸ್ತು ಮಾ ಭೂತ್ಸರ್ವವಿನಾಶನಮ್ ।

"ನಾನೊಬ್ಬನು ಸತ್ತರೂ ಚಿಂತೆಯಿಲ್ಲ. ಸರ್ವವೂ ವಿನಾಶಹೊಂದು ವುದು ಬೇಡ."

ಹೀಗೆ ಮನಸ್ಸಿನಲ್ಲಿ ನಿಶ್ಚಯಿಸಿ ಶ್ರೀರಾಮನ ಬಳಿಗೆ ಹೋಗಿ ದುರ್ವಾ ಸರು ಬಂದಿರುವ ವಾರ್ತೆಯನ್ನು ತಿಳಿಸುತ್ತಾನೆ.

ಲಕ್ಷ್ಮಣನ ಮಾತನ್ನು ಕೇಳುತ್ತಲೇ ಶ್ರೀರಾಮನು ಕಾಲಪುರುಷನನ್ನು ಬೀಳ್ಕೊಟ್ಟು ಶೀಘ್ರವಾಗಿ ಹೊರಬಂದು ಮಹಾದ್ವಾರದಲ್ಲಿರುವ ಅತ್ರಿಯ ಪುತ್ರರಾದ ದುರ್ವಾಸರನ್ನು ಸಂದರ್ಶಿಸುತ್ತಾನೆ.

ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವರೋ ಎಂಬಂತಿದ್ದ ಮಹಾತ್ಮರಾದ ದುರ್ವಾಸರಿಗೆ ಶ್ರೀರಾಮನು ಅಭಿವಾದನಮಾಡಿ ನಮಸ್ಕರಿಸಿ ಕೈಮುಗಿದು ಕೊಂಡು 'ಕಿಂ ಕಾರ್ಯಂ ಮಹಾಮುನೇ! ಮಹಾಮುನಿಗಳೇ! ನನ್ನಿಂದ ಯಾವ ಕಾರ್ಯವಾಗಬೇಕಾಗಿದೆ? ದಯಮಾಡಿ ಹೇಳಿರಿ'–ಎಂದು ಪ್ರಾರ್ಥಿಸುತ್ತಾನೆ.

ಶ್ರೀರಾಮನು ಹೇಳುವ ಆ ಮಾತನ್ನು ಕೇಳಿ ಪ್ರಭುವಾದ ಮುನಿ ಶ್ರೇಷ್ಠರಾದ ದುರ್ವಾಸರು ಹೇಳುತ್ತಾರೆ :

"ಧರ್ಮವತ್ಸಲನೇ! ನನ್ನ ಈ ಮಾತನ್ನು ಕೇಳು.

ಅದ್ಯ ವರ್ಷಸಹಸ್ರಸ್ಯ ಸಮಾಪ್ತಿರ್ಮಮ ರಾಘವ ।
ಸೋಽಹಂ ಭೋಜನಮಿಚ್ಛಾಮಿ ಯಥಾಸಿದ್ಧಂ ತವಾನಘ ॥೧೩॥

ಅನಘನೇ! ನಾನು ವ್ರತದ ನಿಮಿತ್ತವಾಗಿ ಒಂದು ಸಾವಿರ ವರ್ಷ ಗಳಿಂದ ಉಪವಾಸಮಾಡುತ್ತಿದ್ದೇನೆ. ಆ ನನ್ನ ವ್ರತವು ಇಂದಿಗೆ ತಾನೇ ಮುಗಿ ದಿದೆ. ಆದುದರಿಂದ ಈ ಸಮಯದಲ್ಲಿ ನಿನ್ನ ಅರಮನೆಯಲ್ಲಿ ಯಾವ ಭೋಜ ನವು ಸಿದ್ಧವಾಗಿರುವುದೋ ಅದನ್ನು ಊಟಮಾಡಲು ಇಚ್ಛಿಸಿದ್ದೇನೆ."

ಮಹರ್ಷಿಗಳ ಈ ಮಾತನ್ನು ಕೇಳಿ ಶ್ರೀರಾಮನಿಗೆ ಬಹಳ ಸಂತೋಷ ವಾಗುತ್ತದೆ. ಸಿದ್ಧವಾಗಿದ್ದ ಅನ್ನವನ್ನು ಮುನಿಶ್ರೇಷ್ಠರಾದ ದುರ್ವಾಸರಿಗೆ ಯಥಾವಿಧಿಯಾಗಿ ಭೋಜನಮಾಡಿಸುತ್ತಾನೆ. ಶ್ರೀರಾಮನು ಆದರ ಪೂರ್ವಕವಾಗಿ ಬಡಿಸಿದ ಅಮೃತಸದೃಶವಾದ ಅನ್ನವನ್ನು ಊಟಮಾಡಿ ಮುನಿಶ್ರೇಷ್ಠರಾದ ದುರ್ವಾಸರು ಅತ್ಯಂತತೃಪ್ತರಾಗಿ 'ಸಾಧು ರಾಮ! ಸಾಧು!'–ಎಂದು ರಾಮನನ್ನು ಪ್ರಶಂಸಿಸಿ ತಮ್ಮ ಆಶ್ರಮಕ್ಕೆ ಹೊರಟು ಹೋಗುತ್ತಾರೆ.

ಮುನಿಶ್ರೇಷ್ಠರಾದ ದುರ್ವಾಸರು ತಮ್ಮ ಆಶ್ರಮಕ್ಕೆ ಹೊರಟುಹೋದ ನಂತರ ಲಕ್ಷ್ಮಣಾಗ್ರಜನಾದ ಶ್ರೀರಾಮನು ಕಾಲಪುರುಷನು ಹೇಳಿದ್ದ ಮಾತು ಗಳನ್ನು ಸ್ಮರಿಸಿ ಬಹಳ ದುಃಖಿತನಾಗುತ್ತಾನೆ. ಮುಂದಾಗುವ ಅತ್ಯಂತ ಭಯಂಕರವಾದ ಭ್ರಾತೃವಿಯೋಗದೃಶ್ಯವನ್ನು ಮನಸ್ಸಿನಲ್ಲಿಯೇ ಕಲ್ಪಿಸಿ ಕೊಂಡು ಶ್ರೀರಾಮನು ಬಹಳವಾಗಿ ಪರಿತಪಿಸುತ್ತಾನೆ. ದೀನಮನಸ್ಕನಾಗಿ

ತಲೆತಗ್ಗಿಸಿಕೊಂಡು ಕುಳಿತಿದ್ದ ಶ್ರೀರಾಮನಿಗೆ ಯಾವ ಮಾತನ್ನೂ ಆಡಲು ಸಾಧ್ಯವಾಗಲೇ ಇಲ್ಲ. ಬಳಿಕ ರಾಘವನು ಕಾಲಪುರುಷನ ಮಾತುಗಳನ್ನು ಬುದ್ಧಿಪೂರ್ವಕವಾಗಿ ವಿಚಾರಮಾಡಿ–'ನೈತದಸ್ತಿ' 'ಹೀಗಾಗಬಾರದಾಗಿತ್ತು'–ಎಂದು ನಿಶ್ಚಯಿಸಿ ಸುಮ್ಮನಿದ್ದುಬಿಡುತ್ತಾನೆ.

೧೦೫ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೬ನೆಯ ಸರ್ಗ

ಶ್ರೀರಾಮನು ತ್ಯಾಗಮಾಡಿದನಂತರ ಲಕ್ಷ್ಮಣನು ಸಶರೀರನಾಗಿ ಸ್ವರ್ಗಕ್ಕೆ ಹೋಗುವುದು

ಅವಾಙ್ಮುಖಮಥೋ ದೀನಂ ದೃಷ್ಟ್ವಾ ಸೋಮಮಿವಾಪ್ಲುತಮ್ ।
ರಾಘವಂ ಲಕ್ಷ್ಮಣೋ ವಾಕ್ಯಂ ಹೃಷ್ಟೋ ಮಧುರಮಬ್ರವೀತ್ ॥೧॥

ರಾಹುಗ್ರಸ್ತನಾದ ಚಂದ್ರನಂತೆ ಅತಿದೀನನಾಗಿ ತಲೆತಗ್ಗಿಸಿಕೊಂಡು ಕುಳಿತುಕೊಳ್ಳುವ ಶ್ರೀರಾಮನನ್ನು ನೋಡಿ ಪರಮಹೃಷ್ಟನಾಗುವ ಲಕ್ಷ್ಮಣನು ಮಾಧುರ್ಯದಿಂದ ಕೂಡಿದ ಈ ಮಾತುಗಳನ್ನು ಹೇಳುತ್ತಾನೆ :

ನ ಸಂತಾಪಂ ಮಹಾಬಾಹೋ ಮದರ್ಥಂ ಕರ್ತುಮರ್ಹಸಿ ।
ಪೂರ್ವನಿರ್ಮಾಣಬದ್ಧಾ ಹಿ ಕಾಲಸ್ಯ ಗತಿರೀದೃಶೀ ॥೨॥

"ಮಹಾಬಾಹುವೇ! ಅಣ್ಣ! ನೀನು ನನ್ನ ಸಲುವಾಗಿ ಸಂತಾಪಪಡುವ ಕಾರಣವಿಲ್ಲ. ಪೂರ್ವಜನ್ಮದ ಕರ್ಮಗಳಿಂದ ನಿಬದ್ಧವಾದ ನಮ್ಮೆಲ್ಲರ ಕಾಲಗತಿಯೂ ಇಂತಹುದೇ ಆಗಿರುತ್ತದೆ.

ಜಹಿ ಮಾಂ ಸೌಮ್ಯ ವಿಸ್ರಬ್ಧಂ ಪ್ರತಿಜ್ಞಾಂ ಪರಿಪಾಲಯ ।
ಹೀನಪ್ರತಿಜ್ಞಾಃ ಕಾಕುತ್ಸ್ಥ ಪ್ರಯಾನ್ತಿ ನರಕಂ ನರಾಃ ॥೩॥

ಸೌಮ್ಯನೇ! ಯಾವ ವಿಧವಾದ ಭಯವೂ ಇಲ್ಲದೆ ನನ್ನನ್ನು ನೀನು ಸಂಹರಿಸಿ ನಿನ್ನ ಪ್ರತಿಜ್ಞೆಯನ್ನು ಪರಿಪಾಲಿಸು. ಪ್ರತಿಜ್ಞೆಯನ್ನು ಪರಿಪಾಲಿಸದ ಮನುಷ್ಯನು ನರಕಕ್ಕೆ ಹೋಗುತ್ತಾನೆ.

ಯದಿ ಪ್ರೀತಿರ್ಮಹಾರಾಜ ಯದ್ಯನುಗ್ರಾಹ್ಯತಾ ಮಯಿ ।
ಜಹಿ ಮಾಂ ನಿರ್ವಿಶಙ್ಕಸ್ತ್ವಂ ಧರ್ಮಂ ವರ್ಧಯ ರಾಘವ ॥೪॥

ನಿನಗೆ ನನ್ನ ಮೇಲೆ ಅಚಲವಾದ ಪ್ರೀತಿಯಿರುವುದಾದರೆ, ನಿನ್ನಿಂದ ನಾನು ಅನುಗ್ರಹಿಸಲ್ಪಡುವವನಾಗಿದ್ದರೆ, ನಿನ್ನ ಕೃಪೆಗೆ ನಾನು ಪಾತ್ರನಾಗಿದ್ದರೆ ಯಾವ ವಿಧವಾದ ಶಂಕೆಯೂ ಇಲ್ಲದೆ ಈಗಲೇ ನನ್ನನ್ನು ಸಂಹರಿಸು. ನಿನ್ನ ಧರ್ಮವನ್ನು ವೃದ್ಧಿಗೊಳಿಸಿಕೋ. ಓ ಕಾಕುತ್ಸ್ಥ! ಪ್ರತಿಜ್ಞೆಯನ್ನು ಮುರಿದ ಜನರು ನರಕಕ್ಕೆ ಹೋಗುತ್ತಾರೆ."



ಲಕ್ಷ್ಮಣನು ಹೀಗೆ ಹೇಳಲು ಮನಸ್ಸಿನಲ್ಲಿ ದುಗುಡಗೊಂಡು ಶ್ರೀರಾಮನು ಒಡನೆಯೇ ಮಂತ್ರಿಗಳನ್ನೂ ಪುರೋಹಿತರಾದ ವಸಿಷ್ಠರನ್ನೂ ಕರೆಯಿಸಿ ಅವರ ಮಧ್ಯದಲ್ಲಿ ನಡೆದ ಸಮಾಚಾರಗಳೆಲ್ಲವನ್ನೂ ವಿಶದವಾಗಿ ಹೇಳುತ್ತಾನೆ. ತಾಪಸನು ಬಂದಿದ್ದುದನ್ನೂ, ಸಂಭಾಷಣೆಗೆ ಮೊದಲು ಅವನು

ಹಾಕಿದ್ದ ಷರತ್ತನ್ನೂ, ಸಂಭಾಷಣೆಯು ಮುಗಿಯುವ ಮೊದಲೇ ದುರ್ವಾಸರು ಬಂದು ಕುಪಿತರಾದುದನ್ನೂ, ಆ ಸಮಯದಲ್ಲಿ ವಂಶವನ್ನು ಅವರ ಶಾಪದಿಂದ ಉಳಿಸಲು ಲಕ್ಷ್ಮಣನು ತಾಪಸನು ಮಾತನಾಡುತ್ತಿದ್ದಾಗಲೇ ಒಳಕ್ಕೆ ಬಂದುದನ್ನೂ, ಈ ಕಾರಣದಿಂದ ತಾಪಸನ ನಿಬಂಧನೆಯಂತೆ ಲಕ್ಷ್ಮಣನು ವಧಾರ್ಹನಾಗಿರುವುದನ್ನೂ ಹೇಳುತ್ತಾನೆ :

ಶ್ರೀರಾಮನ ಅತಿದುಃಖಕರವಾದ ಈ ಮಾತನ್ನು ಕೇಳಿ ಮಂತ್ರಿಗಳೂ ಉಪಾಧ್ಯಾಯರೂ ಮೌನತಾಳುತ್ತಾರೆ. ಅವರ ಮಧ್ಯದಲ್ಲಿದ್ದ ಮಹಾತೇಜಸ್ವಿಗಳಾದ ಮತ್ತು ಪುರೋಹಿತರಾದ ವಸಿಷ್ಠರು ಹೇಳುತ್ತಾರೆ.

"ಮಹಾಬಾಹುವೇ! ಯಶೋವಂತನಾದ ಶ್ರೀರಾಮನೇ! ರೋಮಾಂಚಕರವಾದ ವಿನಾಶವನ್ನೂ ಮತ್ತು ನಿನ್ನ ಮತ್ತು ಲಕ್ಷ್ಮಣನ ವಿಯೋಗವನ್ನೂ ನಾನು ಈ ಮೊದಲೇ ಜ್ಞಾನದೃಷ್ಟಿಯಿಂದ ತಿಳಿದುಕೊಂಡಿದ್ದೆನು.

ತ್ಯಜೈನಂ ಬಲವಾನ್ಕಾಲೋ
ಮಾ ಪ್ರತಿಜ್ಞಾಂ ವೃಥಾ ಕೃಥಾಃ ।
ಪ್ರತಿಜ್ಞಾಯಾಂ ಹಿ ನಷ್ಟಾಯಾಂ
ಧರ್ಮೋ ಹಿ ವಿಲಯಂ ವ್ರಜೇತ್ ॥೯॥

ಕಾಲವು ಅತ್ಯಂತಪ್ರಬಲವಾದುದು. ಅದನ್ನು ಎದುರಿಸಿ ನಿಲ್ಲಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಆದುದರಿಂದ ಲಕ್ಷ್ಮಣನನ್ನು ನೀನು ತ್ಯಜಿಸುವುದೇ ಉಚಿತವಾಗಿದೆ. ಮಾಡಿದ ಪ್ರತಿಜ್ಞೆಯನ್ನು ವ್ಯರ್ಥಮಾಡಬೇಡ. ಪ್ರತಿಜ್ಞೆಯು ನಷ್ಟವಾಗಿಹೋದರೆ ಧರ್ಮವೇ ಲೋಪವಾಗಿಬಿಡುತ್ತದೆ.

ತತೋ ಧರ್ಮೇ ವಿನಷ್ಟೇ ತು ತ್ರೈಲೋಕ್ಯಂ ಸಚರಾಚರಮ್ ।
ಸದೇವರ್ಷಿಗಣಂ ಸರ್ವಂ ವಿನಶ್ಯೇತ್ತು ನ ಸಂಶಯಃ ॥೧೦॥

ಧರ್ಮವು ನಷ್ಟವಾಗಿಹೋದರೆ ಚರಾಚರಪ್ರಾಣಿಗಳಿಂದಲೂ ದೇವರ್ಷಿಗಣಗಳಿಂದಲೂ ಕೂಡಿರುವ ಈ ಮೂರು ಜಗತ್ತುಗಳೂ ವಿನಾಶ ಹೊಂದಿಯಾವು. ಇದರಲ್ಲಿ ಸಂಶಯವೇ ಇಲ್ಲ.

ಸ ತ್ವಂ ಪುರುಷಶಾರ್ದೂಲ ತ್ರೈಲೋಕ್ಯಸ್ಯಾಭಿಪಾಲನಾತ್ ।
ಲಕ್ಷ್ಮಣೇನ ವಿನಾ ಚಾದ್ಯ ಜಗತ್ಸ್ವಸ್ಥಂ ಕುರುಷ್ವ ಹ ॥೧೧॥

ಪುರುಷಶ್ರೇಷ್ಠನೇ! ನೀನು ಮೂರು ಲೋಕಗಳನ್ನೂ ಧರ್ಮಮೂಲವಾಗಿ ಪರಿಪಾಲಿಸುವ ದೃಷ್ಟಿಯಿಂದ ಲಕ್ಷ್ಮಣನನ್ನು ತ್ಯಾಗಮಾಡು. ಮುಂದೆ ನೀನು ಲಕ್ಷ್ಮಣನಿಲ್ಲದೆಯೇ ರಾಜ್ಯವನ್ನು ಪರಿಪಾಲಿಸುತ್ತಾ ಈ ಜಗತ್ತನ್ನು ಶಾಂತಿಯುಕ್ತವನ್ನಾಗಿಯೂ ಸುಖವಾಗಿರುವಂತೆಯೂ ಮಾಡು."

ಮಂತ್ರಿ-ಪುರೋಹಿತರೇ ಮೊದಲಾದವರು ಕುಳಿತುಕೊಳ್ಳುವ ಆ ಸಭಾಮಂದಿರದಲ್ಲಿ ವಸಿಷ್ಠರು ಹೇಳುವ ಧರ್ಮಸಮ್ಮತವಾದ ಮಾತನ್ನು ಕೇಳಿ ಆ ಪರಿಷತ್ತಿನ ಮಧ್ಯದಲ್ಲಿ ಶ್ರೀರಾಮನು ಲಕ್ಷ್ಮಣನಿಗೆ ಹೇಳುತ್ತಾನೆ :

ವಿಸರ್ಜಯೇ ತ್ವಾಂ ಸೌಮಿತ್ರೇ ಮಾ ಭೂದ್ಧರ್ಮವಿಪರ್ಯಯಃ ।
ತ್ಯಾಗೋ ವಧೋ ವಾ ವಿಹಿತಃ ಸಾಧೂನಾಂ ಹ್ಯುಭಯಂ ಸಮಮ್ ॥

"ಲಕ್ಷ್ಮಣ! ನಾನು ನಿನ್ನನ್ನು ತ್ಯಾಗಮಾಡುತ್ತೇನೆ. ಧರ್ಮಲೋಪವೆಂದಿಗೂ ಆಗಬಾರದು. ಸತ್ಪುರುಷರಿಗೆ ತ್ಯಾಗಮಾಡುವುದು ಅಥವಾ ವಧೆ ಮಾಡುವುದೂ ಒಂದೇ ಆಗುತ್ತದೆ. ಸತ್ಪುರುಷರನ್ನು ತ್ಯಾಗಮಾಡಿದರೂ ಅವರಿಗೆ ಮರಣದಂಡನೆಯನ್ನು ವಿಧಿಸಿದಂತೆಯೇ ಸರಿ."

ಶ್ರೀರಾಮನು ಹೀಗೆ ಹೇಳುತ್ತಲೇ ಲಕ್ಷ್ಮಣನ ಕಣ್ಣುಗಳಲ್ಲಿ ಕಂಬನಿಯು ತುಂಬಿಕೊಳ್ಳುತ್ತದೆ. ಅವನು ಅಲ್ಲಿಂದ ಒಡನೆಯೇ ಹೊರಟುಬಿಡುತ್ತಾನೆ. ಪುನಃ ಅವನು ತನ್ನ ಮನೆಗೂ ಹೋಗುವುದಿಲ್ಲ. ಸರಯೂನದಿಯ ತೀರಕ್ಕೆ ಹೋಗುತ್ತಾನೆ. ಶುದ್ಧಾಚಮನಮಾಡುತ್ತಾನೆ. ಕೈಮುಗಿದುಕೊಳ್ಳುತ್ತಾನೆ. ಸರ್ವೇಂದ್ರಿಯಗಳನ್ನೂ ಬಂಧಿಸಿ ಉಸಿರುಕಟ್ಟುತ್ತಾನೆ. ಅವನು ಯೋಗಯುಕ್ತನಾಗಿ ಶ್ವಾಸೋಚ್ಛ್ವಾಸಗಳನ್ನು ಬಂಧಿಸುವುದನ್ನು ನೋಡಿ ಇಂದ್ರಾದಿದೇವತೆಗಳೂ, ಅಪ್ಸರೆಯರೂ, ಋಷಿಗಳೂ ಅವನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತಾರೆ. ಜನಗಳ ದೃಷ್ಟಿಗೆ ಅಗೋಚರನಾಗಿ ಮಹಾಬಲನಾದ ಸಶರೀರನಾದ ಲಕ್ಷ್ಮಣನನ್ನು ಕರೆದುಕೊಂಡು ಇಂದ್ರನು ಸ್ವರ್ಗವನ್ನು ಪ್ರವೇಶಿಸುತ್ತಾನೆ.

ತತೋ ವಿಷ್ಣೋಶ್ಚತುರ್ಭಾಗಮಾಗತಂ ಸುಸತ್ತಮಾಃ ।
ಹೃಷ್ಟಾಃ ಪ್ರಮುದಿತಾಃ ಸರ್ವೇ ಪೂಜಯನ್ತಿ ಸ್ಮ ರಾಘವಮ್ ॥೧೮॥

ಮಹಾವಿಷ್ಣುವಿನ ಪೂರ್ಣಾಂಶದಲ್ಲಿ ನಾಲ್ಕನೆಯ ಒಂದು ಅಂಶದಿಂದ ಕೂಡಿದ್ದ ಲಕ್ಷ್ಮಣನು ಸ್ವರ್ಗಲೋಕಕ್ಕೆ ಬಂದುದನ್ನು ನೋಡಿ ಸುರಶ್ರೇಷ್ಠ

ರೆಲ್ಲರೂ ಆನಂದತುಂದಿಲರಾಗುತ್ತಾರೆ. ಅಂತೆಯೇ ಅವನನ್ನು ಪೂಜಿಸಿ ಸತ್ಕರಿಸುತ್ತಾರೆ.

೧೦೬ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೭ನೆಯ ಸರ್ಗ

ವಸಿಷ್ಠರ ಸಲಹೆಯಂತೆ ಶ್ರೀರಾಮನು ಪುರವಾಸಿಗಳನ್ನು ಕರೆದೊಯ್ಯಲು ವಿಚಾರಮಾಡುವುದು : ಕುಶ-ಲವರ ಪಟ್ಟಾಭಿಷೇಕ

ವಿಸೃಜ್ಯ ಲಕ್ಷ್ಮಣಂ ರಾಮೋ ದುಃಖಶೋಕಸಮನ್ವಿತಃ ।
ಪುರೋಧಸಂ ಮನ್ತ್ರಿಣಶ್ಚ ನೈಗಮಾಂಶ್ಚೇದಮಬ್ರವೀತ್ ॥೧॥

ಲಕ್ಷ್ಮಣನನ್ನು ಪರಿತ್ಯಜಿಸಿದನಂತರ ಶ್ರೀರಾಮನು ದುಃಖ-ಶೋಕಗಳಿಂದ ಸಮಾವೃತನಾಗಿ ಮಂತ್ರಿ-ಪುರೋಹಿತರನ್ನೂ, ಪ್ರಜೆಗಳನ್ನೂ ಕುರಿತು ಹೇಳುತ್ತಾನೆ :

ಅದ್ಯ ರಾಜ್ಯೇಽಭಿಷೇಕ್ಷ್ಯಾಮಿ
ಭರತಂ ಧರ್ಮವತ್ಸಲಮ್ ।
ಅಯೋಧ್ಯಾಯಾಃ ಪತಿಂ ವೀರಂ
ತತೋ ಯಾಸ್ಯಾಮ್ಯಹಂ ವನಮ್ ॥೨॥

"ಮಂತ್ರಿ-ಪುರೋಹಿತರೇ! ಪ್ರಜೆಗಳೇ! ಈಗಲೇ ನಾನು ಧರ್ಮವತ್ಸಲನಾದ, ವೀರನಾದ ಭರತನಿಗೆ ಪಟ್ಟಗಟ್ಟಿ ಅಯೋಧ್ಯೆಗೆ ಒಡೆಯನನ್ನಾಗಿ ಮಾಡಿ ಕಾಡಿಗೆ ಹೊರಟುಹೋಗುತ್ತೇನೆ.

ಈಗಲೇ ನೀವೆಲ್ಲರೂ ಸಾವಕಾಶವಾಗದಂತೆ ಪಟ್ಟಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳನ್ನು ತನ್ನಿರಿ. ಈಗಲೇ ನಾನು ಲಕ್ಷ್ಮಣನು ಹೋದ ಮಾರ್ಗವನ್ನೇ ಅನುಸರಿಸಿ ಹೊರಟುಹೋಗುತ್ತೇನೆ."

ಶ್ರೀರಾಮನು ಹೇಳುವ ಈ ಮಾತನ್ನು ಕೇಳಿ ಸಮಸ್ತರಾದ ಪ್ರಜೆಗಳೂ ನೆಲದ ಮೇಲೆ ತಲೆಯಿಟ್ಟುಕೊಂಡು ಮೃತಪ್ರಾಯರಂತಾಗುತ್ತಾರೆ. ಭರತನು ಕೂಡ ಶ್ರೀರಾಮನ ಮಾತನ್ನು ಕೇಳಿ ಮೂರ್ಛಿತನಾಗುತ್ತಾನೆ. ಸ್ವಲ್ಪಹೊತ್ತಿನ ನಂತರ ಎಚ್ಚರಗೊಂಡು ರಾಜ್ಯಪದವಿಯನ್ನೇ ನಿಂದಿಸುತ್ತಾ ಈ ಮಾತನ್ನು ಹೇಳುತ್ತಾನೆ :

ಸತ್ಯೇನಾಹಂ ಶಪೇ ರಾಜನ್ಸ್ವರ್ಗಭೋಗೇನ ಚೈವ ಹಿ ।
ನ ಕಾಮಯೇ ಯಥಾ ರಾಜ್ಯಂ ತ್ವಾಂ ವಿನಾ ರಘುನನ್ದನ ॥೬॥

"ರಾಘವ! ನಾನು ಶಪಥಮಾಡಿ ಹೇಳುತ್ತಿದ್ದೇನೆ. ನೀನಿಲ್ಲದೆ ನನಗೆ ರಾಜ್ಯವೂ ಬೇಕಾಗಿಲ್ಲ. ಸ್ವರ್ಗಭೋಗವೂ ಬೇಕಾಗಿಲ್ಲ.

ಇಮೌ ಕುಶೀಲವೌ ರಾಜನ್ನಭಿಷಿಚ್ಯ ನರಾಧಿಪ ।
ಕೋಸಲೇಷು ಕುಶಂ ವೀರಮುತ್ತರೇಷು ತಥಾ ಲವಮ್ ॥೭॥

ಈ ಕುಶೀ-ಲವರಿಗೆ ನೀನು ರಾಜ್ಯಾಭಿಷೇಕವನ್ನು ಮಾಡು. ದಕ್ಷಿಣ ಕೋಸಲರಾಜ್ಯಕ್ಕೆ ಕುಶನನ್ನೂ ಉತ್ತರಕೋಸಲರಾಜ್ಯಕ್ಕೆ ಲವನನ್ನೂ ರಾಜರನ್ನಾಗಿ ಮಾಡು.

ಶೀಘ್ರವಾಗಿ ಪ್ರಯಾಣಮಾಡುವ ದೂತರು ಈಗಲೇ ಶತ್ರುಘ್ನನ ಬಳಿಗೆ ಹೋಗಿ ನಮ್ಮ ಮಹಾಯಾತ್ರೆಯ ವೃತ್ತಾಂತವನ್ನು ಅವನಿಗೂ ತಿಳಿ ಸಲಿ. ಸಾವಕಾಶವಾಗುವುದು ಬೇಡ."

ಭರತನು ಹೇಳುವ ಈ ಮಾತನ್ನು ಕೇಳಿ ಪ್ರಜೆಗಳೆಲ್ಲರೂ ದುಃಖತಪ್ತರಾಗಿ ಅಧೋಮುಖರಾಗಿ ಕುಳಿತಿರುವುದನ್ನು ನೋಡಿ ವಸಿಷ್ಠರು ಹೇಳುತ್ತಾರೆ :

ವತ್ಸ ರಾಮ ಇಮಾಃ ಪಶ್ಯ
ಧರಣೀಂ ಪ್ರಕೃತೀರ್ಗತಾಃ ।
ಜ್ಞಾತ್ವೈಷಾಮೀಪ್ಸಿತಂ ಕಾರ್ಯಂ
ಮಾ ಚೈಷಾಂ ವಿಪ್ರಿಯಂ ಕೃಥಾಃ ॥೧೦॥

"ವತ್ಸ! ರಾಘವ! ಭೂಮಿಯ ಮೇಲೆ ಸತ್ತುಹೋದವರಂತೆಯೇ ಬಿದ್ದಿರುವ ಈ ನಿನ್ನ ಪ್ರಜೆಗಳನ್ನು ನೋಡು. ಇವರ ಅಭಿಪ್ರಾಯವೇನೆಂದು ತಿಳಿದು ಅದಕ್ಕೆ ಅನುಸಾರವಾಗಿ ವರ್ತಿಸುವುದು ನಿನಗೆ ಯೋಗ್ಯವಾಗಿದೆ. ಇವರಿಗೆ ಅಪ್ರಿಯವಾದ ಕಾರ್ಯವನ್ನೆಂದಿಗೂ ಮಾಡಬೇಡ."

ವಸಿಷ್ಠರ ಈ ಮಾತನ್ನು ಕೇಳಿ ಶ್ರೀರಾಮನು ತನ್ನ ಪ್ರಜೆಗಳೆಲ್ಲರನ್ನೂ ಸಾಂತ್ವನದ ಮಾತುಗಳಿಂದ ಮೇಲೆಬ್ಬಿಸುತ್ತಾನೆ ಮತ್ತು ಪ್ರಶ್ನಿಸುತ್ತಾನೆ.

"ಕಿಂ ಕರೋಮಿ? ನಾನು ನಿಮಗಾಗಿ ಯಾವ ಕಾರ್ಯವನ್ನು ಮಾಡಿಕೊಡಲಿ?"

ಶ್ರೀರಾಮನ ಈ ಮಾತನ್ನು ಕೇಳಿ ಪ್ರಜೆಗಳೆಲ್ಲರೂ ಏಕಕಂಠದಿಂದ ಹೇಳುತ್ತಾರೆ :

ಗಚ್ಛನ್ತಮನುಗಚ್ಛಾಮೋ ಯತ್ರ ರಾಮ ಗಮಿಷ್ಯಸಿ ||೧೨||

"ರಾಘವ! ನೀನು ಎಲ್ಲಿಗೆ ಹೋಗುವೆಯೋ ಅಲ್ಲಿಗೇ ನಾವೆಲ್ಲರೂ ನಿನ್ನನ್ನು ಅನುಸರಿಸಿ ಬರುತ್ತೇವೆ.

ಪೌರೇಷು ಯದಿ ತೇ ಪ್ರೀತಿರ್ಯದಿ ಸ್ನೇಹೋ ಹ್ಯನುತ್ತಮಃ |
ಸಪುತ್ರದಾರಾಃ ಕಾಕುತ್ಸ್ಥ ಸಮಂ ಗಚ್ಛಾಮ ಸತ್ಪಥಮ್ ||೧೩||

ನಿನಗೆ ಪ್ರಜೆಗಳಾದ ನಮ್ಮ ವಿಷಯದಲ್ಲಿ ಪ್ರೀತಿಯಿರುವುದಾದರೆ ಪರಮೋತ್ಕೃಷ್ಟವಾದ ಸ್ನೇಹವಿರುವುದಾದರೆ ನಿನ್ನ ಜೊತೆಯಲ್ಲಿ ಬರಲು ನಮಗೂ ಅನುಮತಿ ನೀಡು. ಪುತ್ರ-ಪತ್ನಿಯರಿಂದೊಡಗೂಡಿದ ನಾವೆ ಲ್ಲರೂ ಜೊತೆಯಲ್ಲಿಯೇ ಸನ್ಮಾರ್ಗದಲ್ಲಿ ಹೋಗೋಣ.

ತಪೋವನಂ ವಾ ದುರ್ಗಂ ವಾ ನದೀಮಮ್ಭೋನಿಧಿಂ ತಥಾ |
ವಯಂ ತೇ ಯದಿ ನ ತ್ಯಾಜ್ಯಾಃ ಸರ್ವಾನ್ನೋ ನಯ ಈಶ್ವರ ||೧೪||

ಈಶ್ವರನೇ! ಸ್ವಾಮಿಯೇ! ನೀನು ತಪೋವನಕ್ಕೆ ಹೋಗುವುದಾದರೆ ಅಲ್ಲಿಗೂ ನಮ್ಮನ್ನು ಕರೆದುಕೊಂಡು ಹೋಗು. ದುರ್ಗಮವಾದ ಪ್ರದೇಶಕ್ಕೋ, ಯಾವುದಾದರೂ ನದಿಗೋ ಅಥವಾ ಸಮುದ್ರಕ್ಕೋ ಹೋಗುವುದಾದರೆ ಅಲ್ಲಿಗೇ ನಮ್ಮನ್ನು ಕರೆದುಕೊಂಡು ಹೋಗು. ನಿನ್ನಲ್ಲಿಯೇ ಅಚಲವಾದ ಭಕ್ತಿಯನ್ನಿಟ್ಟಿರುವ ನಮ್ಮನ್ನು ನೀನು ಪರಿತ್ಯಾಗಮಾಡುವುದು ಉಚಿತ ವಲ್ಲವೆಂದು ಭಾವಿಸುವೆಯಾದರೆ ಹೀಗೆ ಮಾಡು. ನಮ್ಮನ್ನು ಬಿಟ್ಟು ಹೋಗಬೇಡ.

ಏಷಾ ನಃ ಪರಮಾ ಪ್ರೀತಿರೇಷ ನಃ ಪರಮೋ ವರಃ |
ಹೃದ್ಗತಾ ನಃ ಸದಾ ಪ್ರೀತಿಸ್ತವಾನುಗಮನೇ ನೃಪೋ ||೧೫||

ಇದರಿಂದಲೇ ನಮಗೆ ಅಮಿತವಾದ ಆನಂದವಾಗುತ್ತದೆ. ಇದನ್ನೇ ನಾವು ಪರಮೋತ್ಕೃಷ್ಟವಾದ ವರವೆಂದು ಭಾವಿಸುತ್ತೇವೆ. ನಿನ್ನನ್ನು ಅನುಸರಿಸಿಬರುವುದರಿಂದಲೇ ನಮ್ಮ ಹೃದಯಕ್ಕೆ ಪ್ರಸನ್ನತೆಯುಂಟಾಗುತ್ತದೆ. ಆನಂದವುಂಟಾಗುತ್ತದೆ."

ಪ್ರಜೆಗಳ ದೃಢವಾದ ಭಕ್ತಿಯನ್ನು ನೋಡಿ ಶ್ರೀರಾಮನು ಹಾಗೆಯೇ ಆಗಲೆಂದು ಹೇಳುತ್ತಾನೆ. ಶ್ರೀರಾಮನು ತನ್ನ ಮುಂದಿನ ಕರ್ತವ್ಯವೇನೆಂಬುದನ್ನು ನಿಶ್ಚಯಿಸಿ ಅಂದಿನ ದಿನವೇ ದಕ್ಷಿಣಕೋಸಲರಾಜ್ಯಕ್ಕೆ ಕುಶನನ್ನೂ ಉತ್ತರಕೋಸಲರಾಜ್ಯಕ್ಕೆ ಲವನನ್ನೂ ರಾಜರನ್ನಾಗಿ ಮಾಡಿ ಪಟ್ಟಾಭಿಷೇಕಮಾಡುತ್ತಾನೆ. ಅಭಿಷಿಕ್ತರಾದ ಮಹಾತ್ಮರಾದ ಕುಶ-ಲವರನ್ನು ಶ್ರೀರಾಮನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಗಾಢವಾಗಿ ಆಲಿಂಗಿಸಿ ಅವರ ನೆತ್ತಿಗಳನ್ನು ಪುನಃ ಪುನಃ ಆಘ್ರಾಣಿಸುತ್ತಾನೆ. ಆ ಇಬ್ಬರು ಮಕ್ಕಳಿಗೂ ಶ್ರೀರಾಮನು ಸಾವಿರಾರು ರಥಗಳನ್ನೂ, ಹತ್ತು ಸಾವಿರ ಆನೆಗಳನ್ನೂ, ಒಂದು ಲಕ್ಷ ಕುದುರೆಗಳನ್ನೂ ಹಂಚಿಕೊಡುತ್ತಾನೆ. ಹೇರಳವಾದ ರತ್ನಗಳಿಂದಲೂ, ಐಶ್ವರ್ಯದಿಂದಲೂ ಸಂಪನ್ನರಾಗಿದ್ದ ಹೃಷ್ಟ-ಪುಷ್ಟರಾದ ಪ್ರಜೆಗಳಿಂದ ಸಮಾವೃತರಾಗಿದ್ದ, ಸಹೋದರರಾದ ಕುಶೀ-ಲವರನ್ನು ಶ್ರೀರಾಮನು ಅವರವರ ರಾಜಧಾನಿಗೆ ಕಳುಹಿಸಿಕೊಡುತ್ತಾನೆ. ಮಕ್ಕಳಿಬ್ಬರಿಗೂ ಪಟ್ಟಾಭಿಷೇಕಮಾಡಿ ಅವರವರ ರಾಜಧಾನಿಗಳಿಗೆ ಕಳುಹಿಸಿ ಕೊಟ್ಟನಂತರ ಶ್ರೀರಾಮನು ಮಹಾತ್ಮನಾದ ಶತ್ರುಘ್ನನನ್ನು ಕರೆತರಲು ದೂತರನ್ನು ಕಳುಹಿಸುತ್ತಾನೆ.

೧೦೭ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೮ನೆಯ ಸರ್ಗ

ಶ್ರೀರಾಮನ ಜೊತೆಯಲ್ಲಿ ಅವನ ಅನುಜರೂ ಸುಗ್ರೀವನೇ ಮೊದಲಾದ ಋಕ್ಷ-ವಾನರರೂ ಪರಂಧಾಮಕ್ಕೆ ಹೋಗಲು ನಿಶ್ಚಯಿಸುವುದು : ವಿಭೀಷಣ, ಹನುಮಂತ, ಜಾಂಬವಂತ ಮತ್ತು ಮೈಂದ-ದ್ವಿವಿದರಿಗೆ ಭೂಲೋಕದಲ್ಲಿಯೇ ಇರಲು ಶ್ರೀರಾಮನು ಆದೇಶವನ್ನೀಯುವುದು

ತೇ ದೂತಾ ರಾಮವಾಕ್ಯೇನ ಚೋದಿತಾ ಲಘುವಿಕ್ರಮಾಃ ।
ಪ್ರಜಗ್ಮುರ್ಮಧುರಾಂ ಶೀಘ್ರಂ ಚಕ್ರುರ್ವಾಸಂ ನ ಚಾಧ್ವನಿ ॥೧॥

ಶ್ರೀರಾಮನ ಆಜ್ಞೆಯಿಂದ ಪ್ರಚೋದಿತರಾದ ಶೀಘ್ರಗಾಮಿಗಳಾದ

ದೂತರು ಬಹಳ ಶೀಘ್ರವಾಗಿ ಮಧುರಾಪಟ್ಟಣಕ್ಕೆ ಪ್ರಯಾಣಮಾಡುತ್ತಾರೆ. ಮಧ್ಯದಾರಿಯಲ್ಲಿ ಅವರೆಲ್ಲೂ ತಂಗದೇ ಪ್ರಯಾಣಮಾಡುತ್ತಾರೆ.

ಹೀಗೆ ಮೂರು ಹಗಲು ಮತ್ತು ಮೂರು ರಾತ್ರಿಗಳು (ಮೂರು ದಿವಸಗಳು) ಪ್ರಯಾಣಮಾಡಿ ಮಧುರಾಪಟ್ಟಣವನ್ನು ಸೇರಿ ಶತ್ರುಘ್ನನಿಗೆ ಅಯೋಧ್ಯೆಯಲ್ಲಿ ನಡೆದ ಎಲ್ಲ ವೃತ್ತಾಂತಗಳನ್ನೂ ಯಥಾವತ್ತಾಗಿ ಹೇಳುತ್ತಾರೆ. ಶ್ರೀರಾಮನ ಪ್ರತಿಜ್ಞೆ, ಲಕ್ಷ್ಮಣನ ಪರಿತ್ಯಾಗ, ಇಬ್ಬರು ಮಕ್ಕಳಿಗೂ ಶ್ರೀರಾಮನು ಪಟ್ಟಾಭಿಷೇಕಮಾಡಿದ್ದು, ಪ್ರಜೆಗಳೂ ಶ್ರೀರಾಮನನ್ನು ಅನು ಸರಿಸಿ ಹೋಗಲು ನಿಶ್ಚಯಿಸಿರುವುದು–ಈ ಎಲ್ಲ ವಿಷಯಗಳನ್ನೂ ಹೇಳಿದ ನಂತರ ಕುಶನ ವಿಷಯವಾಗಿ ಹೇಳುತ್ತಾರೆ :

"ಶತ್ರುಘ್ನ! ವಿಂಧ್ಯಪರ್ವತದ ತಪ್ಪಲಿನಲ್ಲಿ ಶ್ರೀರಾಮನು ಕುಶನಿಗಾಗಿ ಕುಶಾವತೀ ಎಂಬ ಹೆಸರಿನ ಪಟ್ಟಣವನ್ನು ನಿರ್ಮಾಣಮಾಡಿಸಿ ಅಲ್ಲಿಗೆ ಅವನನ್ನು ರಾಜನನ್ನಾಗಿ ಮಾಡಿ ಕಳುಹಿಸಿಕೊಟ್ಟಿದ್ದಾನೆ. ಅದೇ ರೀತಿಯಲ್ಲಿ ಲವನಿಗೂ ಶ್ರಾವಸ್ತಿ ಎಂಬ ಹೆಸರಿನಿಂದ ಪ್ರಸಿದ್ಧವಾದ ಪಟ್ಟಣವನ್ನು ಕಟ್ಟಿಸಿ ಅಲ್ಲಿಗೆ ಲವನನ್ನು ರಾಜನನ್ನಾಗಿಮಾಡಿ ಕಳುಹಿಸಿಕೊಟ್ಟಿದ್ದಾನೆ. ಈಗ ಶ್ರೀರಾಮ ಮತ್ತು ಭರತರು ಅಯೋಧ್ಯೆಯನ್ನು ಜನರಹಿತವನ್ನಾಗಿ ಮಾಡಿ ಎಲ್ಲ ಪ್ರಜೆಗಳೊಡನೆ ಸ್ವರ್ಗದ ಹಾದಿಯನ್ನು ಹಿಡಿದುಹೋಗಲು ವ್ಯವಸ್ಥೆ ಮಾಡುತ್ತಿದ್ದಾರೆ."

ಹೀಗೆ ರಾಜಸೇವಕರು ಮಹಾತ್ಮನಾದ ಶತ್ರುಘ್ನನಿಗೆ ಎಲ್ಲವನ್ನೂ ಹೇಳಿದನಂತರ ಶೀಘ್ರವಾಗಿ ಅಯೋಧ್ಯೆಗೆ ಹೊರಡುವಂತೆ ಅವಸರಪಡಿಸು ತ್ತಾರೆ. ತಮ್ಮ ಕುಲಕ್ಕೇ ಘೋರವಾದ ವಿನಾಶವು ಉಪಸ್ಥಿತವಾಗಿರುವುದನ್ನು ಕೇಳಿ ರಘುಕುಲತಿಲಕನಾದ ಶತ್ರುಘ್ನನು ಸಮಸ್ತಪ್ರಜೆಗಳನ್ನೂ ಕಾಂಚನ ಎಂಬ ಹೆಸರಿನ ಪುರೋಹಿತನನ್ನೂ ಕರೆಯಿಸಿ ಅಯೋಧ್ಯೆಯ ಸಮಾಚಾರ ವನ್ನು ಅವರೆಲ್ಲರಿಗೂ ಯಥಾವತ್ತಾಗಿ ತಿಳಿಸುತ್ತಾನೆ. ತನ್ನ ಅಣ್ಣಂದಿರೊಡನೆ ತನ್ನ ಶರೀರತ್ಯಾಗವೂ ಆಗುವುದೆಂಬುದನ್ನು ಪ್ರಜೆಗಳಿಗೆ ಸೂಚಿಸಿ ವೀರನಾದ ಶತ್ರುಘ್ನನು ತನ್ನ ಇಬ್ಬರು ಮಕ್ಕಳಿಗೂ ಪಟ್ಟಾಭಿಷೇಕಮಾಡುತ್ತಾನೆ. ಸಬಾಹುವೆಂಬ ಶತ್ರುಘ್ನನ ಮಗನು ಮಧುರಾಪಟ್ಟಣಕ್ಕೂ ಶತ್ರುಘಾತೀ ಎಂಬ ಎರಡನೆಯ ಮಗನು ವಿದಿಶಾದೇಶಕ್ಕೂ ರಾಜರಾಗುತ್ತಾರೆ. ಮಧುರಾ

ಪಟ್ಟಣದಲ್ಲಿದ್ದ ಚತುರಂಗಬಲವನ್ನು ಎರಡು ಭಾಗಮಾಡಿ ಮಕ್ಕಳಿಬ್ಬರಿಗೂ ಹಂಚಿಕೊಡುತ್ತಾನೆ. ಅಂತೆಯೇ ಐಶ್ವರ್ಯವನ್ನೂ ವಿಭಾಗಮಾಡಿಕೊಟ್ಟು ಅವರಿಬ್ಬರನ್ನೂ ಎರಡು ರಾಜಧಾನಿಗಳಲ್ಲಿ ಪ್ರತಿಷ್ಠಾಪಿಸುತ್ತಾನೆ.

ಹೀಗೆ ಸುಬಾಹುವನ್ನು ಮಧುರಾಪಟ್ಟಣಕ್ಕೂ ಶತ್ರುಘಾತಿಯನ್ನು ವಿದಿಶೆಗೂ ರಾಜರನ್ನಾಗಿ ಮಾಡಿ ಶತ್ರುಘ್ನನು ಏಕಮಾತ್ರರಥದಲ್ಲಿ ಕುಳಿತು ಅಯೋಧ್ಯೆಗೆ ಪ್ರಯಾಣಮಾಡುತ್ತಾನೆ.

ಅಯೋಧ್ಯೆಯಲ್ಲವನು ಯಜ್ಞೇಶ್ವರನಂತೆ ಪ್ರಜ್ವಲಿಸುತ್ತಿದ್ದ, ಸೂಕ್ಷ್ಮವಾದ ರೇಷ್ಮೆಯ ವಸ್ತ್ರವನ್ನುಟ್ಟಿದ್ದ, ಅವಿನಾಶಿಗಳಾದ ಋಷಿಗಳ ಮಧ್ಯದಲ್ಲಿ ಕುಳಿತಿದ್ದ, ಮಹಾತ್ಮನಾದ ಶ್ರೀರಾಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಕೈಮುಗಿದುಕೊಂಡು ಧರ್ಮವನ್ನೇ ಚಿಂತಿಸುತ್ತಾ ಅಣ್ಣನಿಗೆ ಹೇಳುತ್ತಾನೆ :

"ರಾಘವ! ನನ್ನ ಇಬ್ಬರು ಮಕ್ಕಳಿಗೂ ಪಟ್ಟಾಭಿಷೇಕಮಾಡಿ ಇಬ್ಬ ರಿಗೂ ರಾಜ್ಯವನ್ನು ಹಂಚಿಕೊಟ್ಟು ನಿನ್ನನ್ನೇ ಅನುಸರಿಸಿಹೋಗಬೇಕೆಂಬ ದೃಢನಿಶ್ಚಯದಿಂದ ನಾನಿಲ್ಲಿಗೆ ಬಂದಿರುವೆನೆಂದು ತಿಳಿ. ನನ್ನ ಈ ನಿಶ್ಚಯಕ್ಕೆ ಪ್ರತಿಯಾಗಿ ನೀನು ಏನನ್ನೂ ಹೇಳಬಾರದು ಮತ್ತು ಆಜ್ಞೆಯನ್ನೂ ಮಾಡಬಾರದು. ಅದರಲ್ಲಿಯೂ ವಿಶೇಷವಾಗಿ ನನ್ನಂತಹ ಸೇವಕನಿಂದ ನಿನ್ನ ಆಜ್ಞೆಯ ಉಲ್ಲಂಘನೆಯಾಗಬಾರದೆಂದು ನಾನು ಬಯಸುತ್ತೇನೆ."

ತನ್ನನ್ನನುಸರಿಸಿ ಬರಬೇಕೆನ್ನುವ ಶತ್ರುಘ್ನನ ದೃಢನಿಶ್ಚಯವನ್ನು ತಿಳಿದು ಶ್ರೀರಾಮನು ಅವನಿಗೆ ಹಾಗೆಯೇ ಆಗಲೆಂದು ಹೇಳುತ್ತಾನೆ.

ಶ್ರೀರಾಮನೊಡನೆ ಶತ್ರುಘ್ನನ ಮಾತುಮುಗಿಯುತ್ತಿದ್ದಂತೆಯೇ ಕಾಮರೂಪಿಗಳಾದ ಬಹುಸಂಖ್ಯಾತರಾದ ಋಕ್ಷ-ವಾನರ-ರಾಕ್ಷಸರು ಗುಂಪು-ಗುಂಪಾಗಿ ಶ್ರೀರಾಮನಲ್ಲಿಗೆ ಆಗಮಿಸುತ್ತಾರೆ. ಸುಗ್ರೀವನನ್ನು ಮುಂದಾಳಾಗಿ ಮಾಡಿಕೊಂಡು ಬರುವ ಆ ಋಕ್ಷ-ವಾನರ-ರಾಕ್ಷಸರು ಸ್ವರ್ಗಾಭಿಮುಖವಾಗಿ ಪ್ರಯಾಣಮಾಡಲು ಸಿದ್ಧನಾಗಿ ನಿಲ್ಲುವ ಶ್ರೀರಾಮನನ್ನು ಸಂದರ್ಶಿಸುವ ಸಲುವಾಗಿ ಆಗಮಿಸುತ್ತಾರೆ. ದೇವತೆಗಳ ಮಕ್ಕಳೂ, ಋಷಿಗಳ ಮಕ್ಕಳೂ, ಗಂಧರ್ವರ ಮಕ್ಕಳೂ ಆಗಿರುವ ಋಕ್ಷ-ವಾನರ-ರಾಕ್ಷಸರು ಶ್ರೀರಾಮನ

ಉಪಸಂಹಾರದ ವಾರ್ತೆಯನ್ನು ಕೇಳಿ ಅಲ್ಲಿಗೆ ಆಗಮಿಸಿ ಶ್ರೀರಾಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿ ಹೇಳುತ್ತಾರೆ :

"ಮಹಾರಾಜ! ನಾವು ಕೂಡ ನಿನ್ನ ಜೊತೆಯಲ್ಲಯೇ ಸ್ವರ್ಗಕ್ಕೆ ಬರುವ ಆಶಯದಿಂದ ಇಲ್ಲಿಗೆ ಆಗಮಿಸಿದ್ದೇವೆ. ನೀನೇನಾದರೂ ಇದಕ್ಕೆ ಒಪ್ಪಿಗೆ ಕೊಡದಿದ್ದರೆ ನಮ್ಮನ್ನು ಯಮದಂಡದಿಂದಲೇ ನೀನು ಪ್ರಹರಿಸಿ ಸಂಹರಿಸಿದೆಯೆಂದು ನಾವು ಭಾವಿಸುತ್ತೇವೆ."

ಈ ಮಧ್ಯದಲ್ಲಿ ಮಹಾಬಲನಾದ ಸುಗ್ರೀವನು ಕೂಡ ವೀರನಾದ ಶ್ರೀರಾಮನಿಗೆ ತಲೆಬಾಗಿ ನಮಸ್ಕರಿಸಿ ವಿಜ್ಞಾಪಿಸಿಕೊಳ್ಳುತ್ತಾನೆ.

ಅಭಿಷಿಚ್ಯಾಙ್ಗದಂ ವೀರಮಾಗತೋಽಸ್ಮಿ ನರೇಶ್ವರ ।
ತವಾನುಗಮನೇ ರಾಜನ್ವಿದ್ಧಿ ಮಾಂ ಕೃತನಿಶ್ಚಯಮ್ ॥೨೩॥

"ನರೇಶ್ವರನೇ! ಅಂಗದನಿಗೆ ಕಿಷ್ಕಿಂಧಾರಾಜ್ಯದ ಪಟ್ಟವನ್ನು ಕಟ್ಟಿ ನಿನ್ನನ್ನೇ ಅನುಸರಿಸಿ ಬರಬೇಕೆಂಬ ದೃಢನಿಶ್ಚಯಮಾಡಿ ನಾನಿಲ್ಲಿಗೆ ಬಂದಿರುವೆನೆಂದು ತಿಳಿ."

ಸುಗ್ರೀವನ ಈ ಮಾತನ್ನು ಕೇಳಿ ಸಂತೋಷಪಡಿಸುವವರಲ್ಲಿ ಶ್ರೇಷ್ಠ ನಾದ ಶ್ರೀರಾಮನು ಸುಗ್ರೀವನೊಡನಿರುವ ಸಖ್ಯವನ್ನು ಚಿಂತಿಸುತ್ತಾ ವಾನರೇಂದ್ರನಾದ ಸುಗ್ರೀವನಿಗೆ ಹೇಳುತ್ತಾನೆ :

ಸಖೇ ಶೃಣುಷ್ವ ಸುಗ್ರೀವ ನ ತ್ವಯಾಹಂ ವಿನಾಕೃತಃ ।
ಗಚ್ಛೇಯಂ ದೇವಲೋಕಂ ವಾ ಪರಮಂ ವಾ ಪದಂ ಮಹತ್ ॥೨೪॥

"ಪ್ರಿಯಸಖನೇ! ಸುಗ್ರೀವ! ನಾನು ಹೇಳುವುದನ್ನು ಕೇಳು. ನಿನ್ನನ್ನು ಬಿಟ್ಟು ನಾನು ದೇವಲೋಕಕ್ಕೂ ಹೋಗುವುದಿಲ್ಲ; ಪರಮಪದಕ್ಕೂ ಹೋಗುವುದಿಲ್ಲ."

ತನ್ನನ್ನೇ ಅನುಸರಿಸಿ ಬರಲು ಪ್ರಾರ್ಥಿಸುವ ಋಕ್ಷ-ವಾನರ-ರಾಕ್ಷಸ ರಿಗೂ ಶ್ರೀರಾಮನು 'ಬಾಢಂ' ಎಂದು ಹೇಳಿ ತನ್ನ ಒಪ್ಪಿಗೆಯನ್ನು ನೀಡುತ್ತಾನೆ.

ಅನಂತರ ಯಶೋವಂತನಾದ ಶ್ರೀರಾಮನು ರಾಕ್ಷಸೇಂದ್ರನಾದ ವಿಭೀಷಣನಿಗೆ ಹೇಳುತ್ತಾನೆ :

ಯಾವತ್ಪ್ರಜಾ ಧರಿಷ್ಯನ್ತಿ ತಾವತ್ತ್ವಂ ವೈ ವಿಭೀಷಣ ।
ರಾಕ್ಷಸೇನ್ದ್ರ ಮಹಾವೀರ್ಯ ಲಙ್ಕಾಸ್ಥಃ ಸ್ವಂ ಧರಿಷ್ಯಸಿ ॥೨೮॥

"ಮಹಾಪರಾಕ್ರಮಿಯೇ! ರಾಕ್ಷಸೇಂದ್ರನೇ! ವಿಭೀಷಣ! ಎಂದಿನ ವರೆಗೆ ಪ್ರಪಂಚದಲ್ಲಿ ಪ್ರಜೆಗಳು ಜೀವಿಸಿರುವರೋ ಅಂದಿನವರೆಗೂ ನೀನು ನಿನ್ನ ಶರೀರವನ್ನು ಧಾರಣೆಮಾಡಿಕೊಂಡು ಲಂಕೆಯಲ್ಲಿರು.

ಯಾವಚ್ಚನ್ದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠತಿ ಮೇದಿನೀ ।
ಯಾವಚ್ಚ ಮತ್ಕಥಾ ಲೋಕೇ ತಾವದ್ರಾಜ್ಯಂ ತವಾಸ್ತ್ವಿಹ ॥೨೯॥

ಎಲ್ಲಿಯವರೆಗೆ ಸೂರ್ಯ-ಚಂದ್ರರಿರುವರೋ, ಎಲ್ಲಿಯವರೆಗೆ ಈ ಜಗತ್ತಿರುವುದೋ, ಎಲ್ಲಿಯವರೆಗೆ ನನ್ನ ಕಥೆಯು ಲೋಕದಲ್ಲಿ ಪ್ರಚಲಿತ ವಾಗಿರುವುದೋ ಅಲ್ಲಿಯವರೆಗೂ ಲಂಕಾರಾಜ್ಯವು ನಿನ್ನದಾಗಿರಲಿ.

ನಾನು ಮಿತ್ರಭಾವದಿಂದ ಈ ಮಾತುಗಳನ್ನು ನಿನಗೆ ಹೇಳಿದ್ದೇನೆ. ಈ ಆಜ್ಞೆಯನ್ನು ಪರಿಪಾಲಿಸುವುದು ನಿನ್ನ ಕರ್ತವ್ಯವಾಗಿದೆ. ಇದಕ್ಕೆ ಪ್ರತಿಯಾಗಿ ಏನನ್ನೂ ಹೇಳಬೇಡ. ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸು.

ಮಹಾಬಲನಾದ ರಾಕ್ಷಸೇಂದ್ರನೇ! ನಿನಗೆ ಇನ್ನೂ ಕೆಲವು ವಿಷಯ ಗಳನ್ನು ಹೇಳಲಿಚ್ಛಿಸಿದ್ದೇನೆ.

ಆರಾಧಯ ಜಗನ್ನಾಥಮಿಕ್ಷ್ವಾಕುಕುಲದೈವತಮ್ ।
ಆರಾಧನೀಯಮನಿಶಂ ದೇವೈರಪಿ ಸವಾಸವೈಃ ॥೩೦॥

ಇಂದ್ರಪ್ರಮುಖರಾದ ದೇವತೆಗಳಿಂದಲೂ ಸತತವಾಗಿ ಆರಾಧಿಸಲ್ಪ ಡುತ್ತಿರುವ ಇಕ್ಷ್ವಾಕುಕುಲದವರಿಗೆ ಕುಲದೇವತೆಯಾಗಿರುವ ಜಗನ್ನಾಥನನ್ನು ಆರಾಧಿಸು."*

ರಾಕ್ಷಸರಾಜನಾದ ವಿಭೀಷಣನು ರಾಘವನ ಆಜ್ಞೆಯನ್ನು ಮನಸ್ಸಿನಲ್ಲಿ

---

* ಪದ್ಮಪುರಾಣದಲ್ಲಿ ಬರುವ ಇದೇ ಪ್ರಕರಣದಲ್ಲಿ ಹೀಗೆ ಹೇಳಿದೆ :

ತಾವದ್ರಮಸ್ವ ರಾಜ್ಯಸ್ಥಃ ಕಾಲೇ ಮಮ ಪದಂ ವ್ರಜ । ಇತ್ಯುಕ್ತ್ವಾ ಪ್ರದದೌ ತಸ್ಮೈ ಸ್ವವಿಶ್ಲೇಷಾಸಹಿಷ್ಣವೇ ॥ ಶ್ರೀರಙ್ಗಶಾಯಿನಂ ಸ್ವಾರ್ಚ್ಯಮಿಕ್ಷ್ವಾಕುಕುಲ ದೈವತಮ್ । ರಙ್ಗಂ ವಿಮಾನಮಾದಾಯ ಲಙ್ಕಾಂ ಪ್ರಾಯಾದ್ವಿಭೀಷಣಃ ॥ ಅಲ್ಲಿಯ ವರೆಗೂ ನೀನು ಭೂಮಿಯಲ್ಲಿದ್ದು ಅನಂತರ ನನ್ನ ಸಾನ್ನಿಧ್ಯವನ್ನು ಸೇರು–ಹೀಗೆ ಹೇಳಿ

ಧರಿಸಿ ಹಾಗೆಯೇ ಆಗಲೆಂದು ಶ್ರೀರಾಮನಿಗೆ ಹೇಳಿ ತನ್ನ ಒಪ್ಪಿಗೆಯನ್ನು ಸೂಚಿಸುತ್ತಾನೆ.

ವಿಭೀಷಣನಿಗೆ ಭೂಮಂಡಲದಲ್ಲಿಯೇ ಇರಲು ಆಜ್ಞೆಮಾಡಿದನಂತರ ಶ್ರೀರಾಮನು ಹನುಮಂತನಿಗೆ ಹೇಳುತ್ತಾನೆ.

ಜೀವಿತೇ ಕೃತಬುದ್ಧಿಸ್ತ್ವಂ ಮಾ ಪ್ರತಿಜ್ಞಾಂ ವೃಥಾ ಕೃಥಾಃ ॥೩೨॥

"ನೀನು ದೀರ್ಘಕಾಲದವರೆಗೂ ಜೀವಿಸಿರಬೇಕೆಂದು ದೃಢನಿಶ್ಚಯ ಮಾಡಿರುವೆ. ನಿನ್ನ ಆ ಪ್ರತಿಜ್ಞೆಯನ್ನು ಈಗ ಹುಸಿಮಾಡಬೇಡ.

ಮತ್ಕಥಾಃ ಪ್ರಚರಿಷ್ಯನ್ತಿ ಯಾವಲ್ಲೋಕೇ ಹರೀಶ್ವರ ।
ತಾವದ್ರಮಸ್ವ ಸುಪ್ರೀತೋ ಮದ್ವಾಕ್ಯಮನುಪಾಲಯನ್ ॥೩೩॥

ಕಪೀಶ್ವರನೇ! ಎಂದಿನವರೆಗೆ ನನ್ನ ಕಥೆಯು ಲೋಕದಲ್ಲಿ ಪ್ರಚಲಿತ ವಾಗಿರುವುದೋ ಅಂದಿನವರೆಗೂ ನೀನು ನನ್ನ ಆಜ್ಞೆಯನ್ನು ಪರಿಪಾಲಿಸುತ್ತಾ ಪ್ರಸನ್ನಚಿತ್ತನಾಗಿ ಓಡಾಡಿಕೊಂಡಿರು."

ಮಹಾತ್ಮನಾದ ರಾಘವನು ಹೀಗೆ ಹೇಳಲು ಹನುಮಂತನು ಪರಮ ಸಂತುಷ್ಟನಾಗಿ ಈ ಮಾತನ್ನು ಶ್ರೀರಾಮನಲ್ಲಿ ವಿಜ್ಞಾಪಿಸಿಕೊಳ್ಳುತ್ತಾನೆ.

ಯಾವತ್ತವ ಕಥಾ ಲೋಕೇ ವಿಚರಿಷ್ಯತಿ ಪಾವನೀ ।
ತಾವತ್ಸ್ಥಾಸ್ಯಾಮಿ ಮೇದಿನ್ಯಾಂ ತವಾಜ್ಞಾಮನುಪಾಲಯನ್ ॥೩೪॥

"ಪೂಜ್ಯನೇ! ಪ್ರಪಂಚದಲ್ಲಿ ಎಲ್ಲಿಯವರೆಗೆ ಪವಿತ್ರವಾದ ನಿನ್ನ ಕಥೆಯು ಪ್ರಚಾರದಲ್ಲಿರುವುದೋ ಅಲ್ಲಿಯವರೆಗೂ ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತಾ ಈ ಭೂಮಿಯಲ್ಲಿರುತ್ತೇನೆ."

ಜಾಮ್ಬವನ್ತಂ ತಥೋಕ್ತ್ವಾ ತು ವೃದ್ಧಂ ಬ್ರಹ್ಮಸುತಂ ತದಾ ।
ಮೈನ್ದಂ ಚ ದ್ವಿವಿದಂ ಚೈವ ಪಞ್ಚ ಜಾಮ್ಬವತಾ ಸಹ ॥೩೬॥
ಯಾವತ್ಕಲಿಶ್ಚ ಸಂಪ್ರಾಪ್ತಸ್ತಾವಜ್ಜೀವತ ಸರ್ವದಾ ॥೩೭॥

ತನ್ನ ಅಗಲುವಿಕೆಯನ್ನು ಸಹಿಸದ ವಿಭೀಷಣನಿಗೆ ಶ್ರೀರಂಗಶಾಯಿಯಾದ, ಅರ್ಚಾ ಮೂರ್ತಿಯಾದ, ಇಕ್ಷ್ವಾಕುಕುಲದೈವವಾದ ರಂಗನಾಥಮೂರ್ತಿಯನ್ನು ಕೊಟ್ಟನು. ಅದನ್ನೆತ್ತಿಕೊಂಡು ವಿಭೀಷಣನು ವಿಮಾನದಲ್ಲಿ ಲಂಕೆಗೆ ತೆರಳಿದನು.

ಅನಂತರ ಶ್ರೀರಾಮನು ಬ್ರಹ್ಮನ ಪುತ್ರನಾದ ಜಾಂಬವಂತನಿಗೂ, ಮೈಂದ-ದ್ವಿವಿದರಿಗೂ ಹೇಳುತ್ತಾನೆ :

"ಜಾಂಬವಂತನಿಂದ ಯುಕ್ತರಾದ ನೀವೈವರೂ (ಜಾಂಬವಂತ, ಹನುಮಂತ, ಮೈಂದ, ದ್ವಿವಿದ, ವಿಭೀಷಣ) ಪ್ರಳಯಕಾಲದವರೆಗೂ* ಜೀವಿಸಿರಿ."

ಈ ಐವರಿಗೂ ಶ್ರೀರಾಮನು ಹೀಗೆ ಹೇಳಿ ಉಳಿದ ಋಕ್ಷ-ವಾನರ-ರಾಕ್ಷಸರಿಗೆ ಹೇಳುತ್ತಾನೆ :

ಉವಾಚ ಬಾಢಂ ಗಚ್ಛಧ್ವಂ ಮಯಾ ಸಾರ್ಧಂ ಯಥೋದಿತಮ್ ।

"ನೀವೆಲ್ಲರೂ ಹೇಳಿದಂತೆ (ಅಪೇಕ್ಷಿಸಿದಂತೆ) ನನ್ನ ಜೊತೆಯಲ್ಲಿ ಹೊರಡಿರಿ."

೧೦೮ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೦೯ನೆಯ ಸರ್ಗ

ಪರಮಧಾಮಕ್ಕೆ ಹೋಗಲು ಹೊರಡುವ ಶ್ರೀರಾಮನ ಜೊತೆಯಲ್ಲಿ ಅಯೋಧ್ಯಾವಾಸಿಗಳೆಲ್ಲರೂ ಹೊರಡುವುದು

ಪ್ರಭಾತಾಯಾಂ ತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ।
ರಾಮಃ ಕಮಲಪತ್ರಾಕ್ಷಃ ಪುರೋಧಸಮಥಾಬ್ರವೀತ್ ॥೧॥

ರಾತ್ರಿಯು ಕಳೆದು ಬೆಳಗಾಗುತ್ತಲೇ ವಿಶಾಲವಕ್ಷನಾದ, ಮಹಾ ಯಶಸ್ವಿಯಾದ, ಕಮಲದಳಾಯತಾಕ್ಷನಾದ ಶ್ರೀರಾಮನು ಪುರೋಹಿತರಾದ ವಸಿಷ್ಠರಿಗೆ ಹೇಳುತ್ತಾನೆ :

"ಪ್ರಜ್ವಲಿಸುವ ನನ್ನ ಅಗ್ನಿಹೋತ್ರದ ಅಗ್ನಿಯು ಬ್ರಾಹ್ಮಣರೊಡನೆ

---

* **ಯಾವತ್ಕಲಿಶ್ಚ ಸಮ್ಪ್ರಾಪ್ತಃ** –ಇಲ್ಲಿ ಕಲಿ ಎಂದರೆ ಕಲಿಯುಗವಲ್ಲ. ಸರ್ವನಾಶ ಪ್ರಲಯಕಾಲ ಎಂದರ್ಥ. ಈ ಐವರೂ ಚಿರಂಜೀವಿಗಳೆಂದೂ ಆದುದರಿಂದಲೇ ಶ್ರೀರಾಮನು ಹೀಗೆ ಹೇಳಿದನೆಂದೂ ವ್ಯಾಖ್ಯಾನಕಾರರು ಹೇಳಿದ್ದಾರೆ. ಜಾಂಬವಂತನಿಗೆ ಚಿರಂಜೀವಿಯಾಗೆಂದು ಬ್ರಹ್ಮನ ವರವಿದೆ. ಮೈಂದ-ದ್ವಿವಿದರು ಅಶ್ವಿನೀದೇವತೆಗಳ ಮಕ್ಕಳು. ಅಮೃತಪ್ರಾಶನಮಾಡಿ ಅಮರರಾಗಿದ್ದರು. ಹನುಮಂತ-ವಿಭೀಷಣರು ಶ್ರೀರಾಮನ ಅನುಗ್ರಹದಿಂದ ಚಿರಂಜೀವಿಗಳಾದರು.

ಮುಂದೆ ಸಾಗಲಿ. ಮಹಾಪ್ರಯಾಣದ ಮಾರ್ಗದಲ್ಲಿ ವಾಜಪೇಯಯಾಗಕ್ಕೆ ಸಂಬಂಧಿಸಿದ ಶೋಭಾಯಮಾನವಾದ ಛತ್ರಿಯೂ ಹಿಡಿಯಲ್ಪಡಲಿ."

ಶ್ರೀರಾಮನು ಹೀಗೆ ಹೇಳಲು ಮಹಾತೇಜಸ್ವಿಗಳಾದ ವಸಿಷ್ಠರು ಮಹಾಪ್ರಸ್ಥಾನಕ್ಕಾಗಿ ಯಥೋಚಿತವಾದ ಸಮಸ್ತಧಾರ್ಮಿಕಕ್ರಿಯೆಗಳನ್ನೂ ವಿಧಿಪೂರ್ವಕವಾಗಿ ಮಾಡುತ್ತಾರೆ.

ಬಳಿಕ ಶ್ರೀರಾಮನು ಸೂಕ್ಷ್ಮವಾದ ವಸ್ತ್ರಗಳನ್ನು ಧರಿಸಿ ಎರಡು ಕೈಗಳಲ್ಲಿ ದರ್ಭೆಗಳನ್ನು ಹಿಡಿದು ಬ್ರಹ್ಮಲೋಕಗಮ್ಯವಾದ ವೇದಮಂತ್ರಗಳನ್ನು ಉಚ್ಚಾರಣೆಮಾಡುತ್ತಾ ಸರಯೂನದಿಯ ದಡಕ್ಕೆ ಹೋಗುತ್ತಾನೆ.

ಅವನು ಹೋಗುತ್ತಿರುವಾಗ ವೇದಮಂತ್ರೋಚ್ಚಾರಣೆಯನ್ನು ಬಿಟ್ಟು ಬೇರೆ ಯಾವ ಮಾತನ್ನೂ ಆಡುವುದಿಲ್ಲ. ಯಾರೊಡನೆಯೂ ಮಾತನಾಡುವುದಿಲ್ಲ. ನಿಶ್ಚೇಷ್ಟನಾಗಿರುತ್ತಾನೆ. ಹೀಗೆ ಲೌಕಿಕಸುಖವನ್ನು ಸಂಪೂರ್ಣವಾಗಿ ಪರಿತ್ಯಾಗಮಾಡಿ ಶ್ರೀರಾಮನು ದೇದೀಪ್ಯಮಾನನಾದ ಚಂದ್ರನಂತೆಯೇ ಬೆಳಗುತ್ತಾ ತನ್ನ ಅರಮನೆಯಿಂದ ಹೊರಡುತ್ತಾನೆ.

ರಾಮಸ್ಯ ದಕ್ಷಿಣೇ ಪಾರ್ಶ್ವೇ ಸಪದ್ಮಾ ಶ್ರೀರುಪಸ್ಥಿತಾ ।
ಸವ್ಯೇ ತು ಹ್ರೀರ್ಮಹಾದೇವೀ ವ್ಯವಸಾಯಸ್ತಥಾಗ್ರತಃ ॥೬॥

ಆ ಸಮಯದಲ್ಲಿ ಶ್ರೀರಾಮನ ಬಲಗಡೆಯಲ್ಲಿ ಪದ್ಮಹಸ್ತಳಾದ ಲಕ್ಷ್ಮೀದೇವಿಯು ಉಪಸ್ಥಿತಳಾಗಿರುತ್ತಾಳೆ. ಎಡಗಡೆಯಲ್ಲಿ ಭೂದೇವಿಯು ವಿರಾಜಿಸುತ್ತಿರುತ್ತಾಳೆ. ಮುಂಭಾಗದಲ್ಲಿ ವಿಷ್ಣುವು ಹೋಗುತ್ತಿರುತ್ತಾನೆ.

ಶರಾ ನಾನಾವಿಧಶ್ಚಾಪಿ ಧನುರಾಯತ್ತಮುತ್ತಮಮ್ ।
ತಥಾಯುಧಾಶ್ಚ ತೇ ಸರ್ವೇ ಯಯುಃ ಪುರುಷವಿಗ್ರಹಾಃ ॥೭॥

ನಾನಾಪ್ರಕಾರವಾದ ಬಾಣಗಳು, ವಿಶಾಲವಾದ ಮತ್ತು ಉತ್ತಮವಾದ ಧನುಸ್ಸು, ಇತರ ಅನೇಕ ಕತ್ತಿ-ಅಸ್ತ್ರ-ಶಸ್ತ್ರ ಇವೇ ಮುಂತಾದ ಆಯುಧಗಳು ಪುರುಷಶರೀರವನ್ನು ಧರಿಸಿ ಶ್ರೀರಾಮನನ್ನನುಸರಿಸಿ ಹೋಗುತ್ತಿರುತ್ತವೆ.

ವೇದಾ ಬ್ರಾಹ್ಮಣರೂಪೇಣ ಗಾಯತ್ರೀ ಸರ್ವರಕ್ಷಿಣೀ ।
ಓಙ್ಕಾರೋಽಥ ವಷಟ್ಕಾರಃ ಸರ್ವೇ ರಾಮಮನುವ್ರತಾಃ ॥೮॥

ನಾಲ್ಕು ವೇದಗಳೂ ಬ್ರಾಹ್ಮಣರೂಪವನ್ನು ಧರಿಸಿ ಶ್ರೀರಾಮನನ್ನು ಅನುಸರಿಸಿ ಹೋಗುತ್ತಿರುತ್ತವೆ. ಸಮಸ್ತರನ್ನೂ ರಕ್ಷಿಸುವ ಗಾಯತ್ರಿ ದೇವಿಯೂ, ಓಂಕಾರ-ವಷಟ್ಕಾರಗಳೂ ಭಕ್ತಿಭಾವದಿಂದ ಶ್ರೀರಾಮನನ್ನು ಅನುಸರಿಸಿ ಹೋಗುತ್ತಿರುತ್ತವೆ.

ಋಷಯಶ್ಚ ಮಹಾತ್ಮಾನಃ ಸರ್ವ ಏವ ಮಹೀಸುರಾಃ ।
ಅನ್ವಗಚ್ಛನ್ಮಹಾತ್ಮಾನಂ ಸ್ವರ್ಗದ್ವಾರಮಪಾವೃತಮ್ ॥೯॥

ಮಹಾತ್ಮರಾದ ಮಹರ್ಷಿಗಳೂ ಸಮಸ್ತರಾಜರೂ ಸ್ವರ್ಗಲೋಕದ ತೆರೆದಬಾಗಿಲಿನ ಸ್ವರೂಪದಲ್ಲಿದ್ದ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ.

ವೃದ್ಧರಿಂದಲೂ, ಬಾಲಕರಿಂದಲೂ, ದಾಸಿಯರಿಂದಲೂ, ಷಂಡರಿಂದಲೂ, ಸೇವಕರಿಂದಲೂ ಸಮಾವೃತರಾಗಿ ಅಂತಃಪುರದ ಸ್ತ್ರೀಯರೂ, ಸರಯೂನದಿಯ ತೀರಕ್ಕೆ ಹೋಗುವ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ. ಭರತ-ಶತ್ರುಘ್ನರೂ ತಮ್ಮ ಅಂತಃಪುರದ ಸ್ತ್ರೀಯರೊಡನೆ ಅಗ್ನಿಹೋತ್ರಾಗ್ನಿಯೊಡನೆ ಹೋಗುವ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ. ಮಹಾತ್ಮರಾದ ಬ್ರಾಹ್ಮಣರು ಅಗ್ನಿಹೋತ್ರದ ಅಗ್ನಿಯೊಡನೆಯೂ ಪತ್ನೀ-ಪುತ್ರರೊಡನೆಯೂ ಕೂಡಿಕೊಂಡು ಮಹಾಬುದ್ಧಿಶಾಲಿಯಾದ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ. ಸಮಸ್ತಮಂತ್ರಿಗಳೂ ಸೇವಕರೂ ತಮ್ಮ-ತಮ್ಮ ಪುತ್ರ-ಪಶು-ಬಂಧುಗಳೊಡನೆ ಮತ್ತು ಅನುಚರರೊಡನೆ ಆನಂದತುಂದಿಲರಾಗಿ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ.

ಶ್ರೀರಾಘವನ ಗುಣದಿಂದ ಮುಗ್ಧವಾದ ಹೃಷ್ಟ-ಪುಷ್ಟರಾದ ಜನರಿಂದ ಸಮಾವೃತವಾಗಿದ್ದ ಪ್ರಜಾಕೋಟಿಯು ಪರಮಧಾಮಕ್ಕೆ ಹೋಗುತ್ತಿರುವ ಶ್ರೀರಾಮನನ್ನು ಅನುಸರಿಸಿ ಹೋಗುತ್ತದೆ. ಪಕ್ಷಿಗಳಿಂದಲೂ, ಪಶುಗಳಿಂದಲೂ, ಬಂಧುಗಳಿಂದಲೂ ಕೂಡಿದ ಸಮಸ್ತ ಸ್ತ್ರೀ-ಪುರುಷರೂ ಮನಸ್ಸಿನಲ್ಲಿ ಯಾವ ವಿಧವಾದ ಕಲ್ಮಷವೂ ಇಲ್ಲದೆ ಪರಮಹೃಷ್ಟರಾಗಿ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ. ಹೃಷ್ಟ-ಪುಷ್ಟರಾದ ವಾನರ ಸಮೂಹವು ಸರಯೂನದಿಯಲ್ಲಿ ಸ್ನಾನಮಾಡಿ ಅತ್ಯಾನಂದದಿಂದ ಕಲ-ಕಲ ಧ್ವನಿಮಾಡುತ್ತಾ ಶ್ರೀರಾಮನನ್ನು ಅನುಸರಿಸಿ ಹೋಗುತ್ತದೆ. ಸರ್ವೇ

ರಾಮಮನುವ್ರತಮ್–ಸಮಸ್ತಜೀವಕೋಟಿಯೂ ರಾಮನಲ್ಲಿಯೇ ಲೀನವಾದ ಮನಸ್ಸುಳ್ಳದ್ದಾಗಿರುತ್ತದೆ.

ನ ತತ್ರ ಕಶ್ಚಿದ್ದೀನೋ ವಾ ವ್ರೀಡಿತೋ ವಾಪಿ ದುಃಖಿತಃ ।
ಹೃಷ್ಟಂ ಪ್ರಮುದಿತಂ ಸರ್ವಂ ಬಭೂವ ಪರಮಾದ್ಭುತಮ್ ॥೧೭॥

ಆ ಜನಸಮುದಾಯದಲ್ಲಿ ದೀನನಾದವನು ಒಬ್ಬನೂ ಇರುವುದಿಲ್ಲ. ಲಜ್ಜಿತನಾದವನು ಯಾರೂ ಇರುವುದಿಲ್ಲ. ದುಃಖಿತನಾದವನೂ ಇರುವುದಿಲ್ಲ. ಜೀವನದಲ್ಲಿ ಕಡೆಯ ಕಾಲವು ಉಪಸ್ಥಿತವಾಗಿರುವುದೆಂದು ತಿಳಿದಿದ್ದರೂ ಶ್ರೀರಾಮನ ಸಾನ್ನಿಧ್ಯದಿಂದಾಗಿ ಎಲ್ಲರೂ ಆನಂದತುಂದಿಲರಾಗಿರುತ್ತಾರೆ. ಇದು ಪರಮಾದ್ಭುತವಾಗಿ ಕಾಣುತ್ತದೆ.

ದ್ರಷ್ಟುಕಾಮೋಽಥ ನಿರ್ಯಾಂತಂ ರಾಮಂ ಜಾನಪದೋ ಜನಃ ।
ಯಃ ಪ್ರಾಪ್ತಃ ಸೋಽಪಿ ದೃಷ್ಟ್ವೈವ ಸ್ವರ್ಗಾಯಾನುಗತೋ ಮುದಾ ॥

ಪರಮಧಾಮಕ್ಕೆ ಹೋಗುವ ಶ್ರೀರಾಮನನ್ನು ನೋಡಲು ಕಾದಿದ್ದ ಜನರೂ ಅವನು ತಮ್ಮ ಬಳಿಗೆ ಬಂದೊಡನೆ ತಾವು ಪ್ರೇಕ್ಷಕರಾಗಿ ಬಂದವರೆಂಬುದನ್ನು ಮರೆತು ಅವನ ಜೊತೆಯಲ್ಲಿಯೇ ಪರಮಧಾಮಕ್ಕೆ ಹೊರಟೇ ಬಿಡುತ್ತಾರೆ. ಋಕ್ಷ-ವಾನರ-ರಾಕ್ಷಸರೂ ಅಯೋಧ್ಯಾಪುರವಾಸಿಗಳೂ ಪರಾಭಕ್ತಿಯಿಂದ ಕೂಡಿದವರಾಗಿ ಏಕಾಗ್ರಚಿತ್ತರಾಗಿ ಶ್ರೀರಾಮನನ್ನು ಅನುಸರಿಸಿ ಹೋಗುತ್ತಾರೆ. ಅಯೋಧ್ಯಾಪಟ್ಟಣದಲ್ಲಿದ್ದ ಭೂತಪ್ರೇತಾದಿ ಅದೃಶ್ಯಪ್ರಾಣಿಗಳು ಕೂಡ ಸ್ವರ್ಗಾಭಿಮುಖವಾಗಿ ಹೊರಡುವ ಶ್ರೀರಾಮನನ್ನು ಅನುಸರಿಸಿ ಹೋಗುತ್ತವೆ.

ಯಾನಿ ಪಶ್ಯನ್ತಿ ಕಾಕುತ್ಸ್ಥಂ ಸ್ಥಾವರಾಣಿ ಚರಾಣಿ ಚ ।
ಸರ್ವಾಣಿ ರಾಮಗಮನೇ ಹ್ಯನುಜಗ್ಮುರ್ಹಿ ತಾನ್ಯಪಿ ॥೨೧॥

ಕೇವಲ ಪ್ರಾಣಿಗಳೇ ಅಲ್ಲ, ಶ್ರೀರಾಮನು ಸ್ವರ್ಗಕ್ಕೆ ಹೋಗುವುದನ್ನು ಯಾವ ಯಾವ ಮರ-ಗಿಡ-ಬಳ್ಳಿಗಳು ನೋಡುತ್ತವೆಯೋ ಅಂತಹ ಸ್ಥಾವರಪ್ರಾಣಿಗಳೂ ರಾಮನನ್ನು ಅನುಸರಿಸಿ ಸ್ವರ್ಗಲೋಕಕ್ಕೆ ಹೋಗುತ್ತವೆ.

ನೋಚ್ಛ್ವಸತ್ತದಯೋಧ್ಯಾಯಾಂ ಸುಸೂಕ್ಷ್ಮಮಪಿ ದೃಶ್ಯತೇ ।
ತಿರ್ಯಗ್ಯೋನಿಗತಾಶ್ಚಾಪಿ ಸರ್ವೇ ರಾಮಮನುವ್ರತಾಃ ॥೨೨॥

ಆ ಸಮಯದಲ್ಲಿ ಅಯೋಧ್ಯೆಯಲ್ಲಿ ಉಸಿರಾಡುವ ಒಂದೇ ಒಂದು ಪ್ರಾಣಿಯೂ ಉಳಿದಿರುವುದಿಲ್ಲ. ಇರುವೆಯೇ ಮೊದಲಾದ ಸೂಕ್ಷ್ಮಪ್ರಾಣಿಗಳೂ ಉಳಿದಿರುವುದಿಲ್ಲ. ತಿರ್ಯಗ್ಯೋನಿಗಳಾದ ಸಮಸ್ತಜೀವಜಂತುಗಳೂ ಶ್ರೀರಾಮನನ್ನು ಅನುಸರಿಸಿ ಹೋಗುತ್ತವೆ.

೧೦೯ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೧೦ನೆಯ ಸರ್ಗ

ಶ್ರೀರಾಮನು ಅನುಜರೊಡನೆ ತನ್ನ ಸ್ವರೂಪವಾದ ಮಹಾವಿಷ್ಣುವಿನಲ್ಲಿ ಐಕ್ಯಹೊಂದುವುದು : ರಾಮನನ್ನು ಅನುಸರಿಸಿಹೋಗುವ ಸಮಸ್ತರಿಗೂ ಸಾಂತಾನಿಕಲೋಕಪ್ರಾಪ್ತಿ

ಅಧ್ಯರ್ಧಯೋಜನಂ ಗತ್ವಾ ನದೀಂ ಪಶ್ಚಾನ್ಮುಖಾಶ್ರಿತಾಮ್ ।
ಸರಯೂಂ ಪುಣ್ಯಸಲಿಲಾಂ ದದರ್ಶ ರಘುನನ್ದನಃ ॥೧॥

ಅಯೋಧ್ಯೆಯಿಂದ ಒಂದೂವರೆ ಯೋಜಗಳಷ್ಟು ದೂರ ಹೋದ ನಂತರ ಶ್ರೀರಾಮನು ಪಶ್ಚಿಮದಿಕ್ಕಿನಲ್ಲಿರುವ ಪುಣ್ಯೋದಕದಿಂದ ಕೂಡಿದ್ದ ಸರಯೂನದಿಯನ್ನು ಸಂದರ್ಶಿಸುತ್ತಾನೆ.

ಆ ನದಿಯು ಸುಳಿಗಳಿಂದ ಕೂಡಿರುತ್ತದೆ. ಅದರ ತೀರದಲ್ಲಿ ಎಲ್ಲ ಕಡೆಗಳಲ್ಲೂ ತಿರುಗಾಡಿ ಪರೀಕ್ಷಿಸಿ ಕಡೆಗೆ ತನ್ನ ಪ್ರಜೆಗಳೊಡನೆ ಉತ್ತಮವಾದೊಂದು ಸೋಪಾನಕ್ಕೆ ಶ್ರೀರಾಮನು ಹೋಗುತ್ತಾನೆ.

ಆ ಸಮಯಕ್ಕೆ ಸರಿಯಾಗಿ ಲೋಕಪಿತಾಮಹನಾದ ಬ್ರಹ್ಮನು ಸಮಸ್ತ ದೇವತೆಗಳೊಡನೆಯೂ ಮಹಾತ್ಮರಾದ ಋಷಿಗಳೊಡನೆಯೂ ಪರಿವೃತನಾಗಿ ಶ್ರೀರಾಮನು ಪರಂಧಾಮಕ್ಕೆ ಹೋಗಲು ಸಿದ್ಧನಾಗಿ ನಿಂತಿದ್ದ ಸ್ಥಳಕ್ಕೆ ಬರುತ್ತಾನೆ. ಬ್ರಹ್ಮನ ಜೊತೆಯಲ್ಲಿ ದಿವ್ಯವಾದ ಕೋಟಿ-ಕೋಟಿ ವಿಮಾನಗಳೂ ಬಂದಿರುತ್ತವೆ.

ಸ್ವಯಂಪ್ರಭೆಯಿಂದ ಕೂಡಿ ಬೆಳಗುವ, ಸ್ವರ್ಗದ ಪುಣ್ಯಪುರುಷರ ದಿವ್ಯತೇಜಸ್ಸಿನಿಂದ ಸಮಾವೃತವಾದ ಆ ನಭೋಮಂಡಲವು ಅತ್ಯಂತಶ್ರೇಷ್ಠವಾದ ಜ್ಯೋತಿರ್ಭೂತವಾಗಿ ಕಾಣುತ್ತಿರುತ್ತದೆ. ಪರಮ ಪವಿತ್ರವಾದ, ಸುಗಂಧಯುಕ್ತವಾದ ಸುಖಪ್ರದವಾದ ಗಾಳಿಯು ಬೀಸುತ್ತಿರುತ್ತದೆ. ದೇವತೆಗಳು ಸುರಿಸುವ ಪುಷ್ಪವೃಷ್ಟಿಯು ರಾಶಿ-ರಾಶಿಯಾಗಿ ಶ್ರೀರಾಮನ ಮೇಲೆ ಬೀಳುತ್ತದೆ.



ಗಂಧರ್ವಾಪ್ಸರೆಯರಿಂದ ಆಕಾಶವು ಸಮಲಂಕೃತವಾಗಿರುತ್ತದೆ. ನೂರಾರು ವಾದ್ಯಗಳು ಮೊಳಗುತ್ತಿರುತ್ತವೆ. ಆ ಸಮಯದಲ್ಲಿ ಶ್ರೀರಾಮ ಚಂದ್ರನು ಸರಯೂನದಿಯಲ್ಲಿ ಪ್ರವೇಶಮಾಡಲು ಅಡಿಗಳನ್ನಿಡುತ್ತಾನೆ. ಆಗ ಅಂತರಿಕ್ಷದಲ್ಲಿದ್ದ ಬ್ರಹ್ಮನು ಹೇಳುತ್ತಾನೆ :

ಆಗಚ್ಛ ವಿಷ್ಣೋ ಭದ್ರಂ ತೇ ದಿಷ್ಟ್ಯಾ ಪ್ರಾಪ್ತೋಽಸಿ ರಾಘವ ॥೮॥

"ಮಹಾವಿಷ್ಣುಸ್ವರೂಪನಾದ ರಾಘವನೇ! ನಿನಗೆ ಮಂಗಳವಾಗಲಿ. ನಮ್ಮೆಲ್ಲರ ಸೌಭಾಗ್ಯದ ಕಾರಣದಿಂದಾಗಿ ನೀನು ಪರಮಧಾಮಕ್ಕೆ ಆಗಮಿಸುತ್ತಿರುವೆ.

ಭ್ರಾತೃಭಿಃ ಸಹ ದೇವಾಭೈಃ ಪ್ರವಿಶಸ್ವ ಸ್ವಕಾಂ ತನುಮ್ ।
ಯಾಮಿಚ್ಛಸಿ ಮಹಾಬಾಹೋ ತಾಂ ತನುಂ ಪ್ರವಿಶ ಸ್ವಕಾಮ್ ॥೯॥

ಮಹಾಬಾಹುವೇ! ದೇವಸದೃಶರಾದ ಅನುಜರೊಡನೆ ನಿನ್ನ ಮೂಲಭೂತವಾದ ದಿವ್ಯಶರೀರವನ್ನು ಪ್ರವೇಶಿಸು. ನಿನಗೆ ಇಷ್ಟವಾದ ದೇಹವನ್ನು ಪ್ರವೇಶಿಸು.

ವೈಷ್ಣವೀಂ ತಾಂ ಮಹಾತೇಜೋ ಯದ್ವಾಕಾಶಂ ಸನಾತನಮ್ ।
ತ್ವಂ ಹಿ ಲೋಕಗತಿರ್ದೇವ ನ ತ್ವಾಂ ಕೇಚಿತ್ಪ್ರಜಾನತೇ ॥೧೦॥

ಋತೇ ಮಾಯಾಂ ವಿಶಾಲಾಕ್ಷೀಂ ತವ ಪೂರ್ವಪರಿಗ್ರಹಾಮ್ ।
ತ್ವಾಮಚಿನ್ತ್ಯಂ ಮಹದ್ಭೂತಮಕ್ಷಯಂ ಚಾಜರಂ ತಥಾ ।
ಯಾಮಿಚ್ಛಸಿ ಮಹಾತೇಜಸ್ತಾಂ ತನುಂ ಪ್ರವಿಶ ಸ್ವಯಮ್ ॥೧೧॥

ಮಹಾತೇಜಸ್ವಿಯಾದ ಪರಮೇಶ್ವರನೇ! ನಿನಗೆ ಇಚ್ಛೆಯಿರುವುದಾದರೆ ಆ ಪ್ರಸಿದ್ಧವಾದ ವೈಷ್ಣವದಿವ್ಯಮಂಗಳವಿಗ್ರಹದಲ್ಲಿ ಪ್ರವೇಶಮಾಡು. ಅಥವಾ ನಿನ್ನ ಸನಾತನವಾದ ಆಕಾಶಸ್ವರೂಪದಲ್ಲಿ ಹೋಗಿ ಸೇರಿಕೊ. ದೇವ! ನೀನೇ ಸಮಸ್ತಲೋಕಗಳಿಗೂ ಪರಮಾಶ್ರಯನಾಗಿರುವೆ. ನಿನ್ನ ಹಿಂದಿನ ಪತ್ನಿಯಾದ, ಯೋಗಮಾಯಾಸ್ವರೂಪಳಾದ, ವಿಶಾಲಾಕ್ಷಿಯಾದ ಸೀತಾದೇವಿಯ ಹೊರತಾಗಿ ಬೇರೆ ಯಾರಿಗೂ ನಿನ್ನ ನಿಜಸ್ವರೂಪವು ತಿಳಿಯದು. ಏಕೆಂದರೆ ನೀನು ಅಚಿಂತ್ಯನು. ಮಹಾಸತ್ತ್ವನು. ಅವಿನಾಶಿಯು. ಆದಿಮಧ್ಯಾಂತರಹಿತನು. ಜರಾ-ಮರಣಗಳಿಲ್ಲದವನು. ಈಗ ನೀನು ಯಾವ ಸ್ವರೂಪದಲ್ಲಿ ಪ್ರವೇಶಿಸಲು ಇಚ್ಛಿಪಡುವೆಯೋ ಆ ಸ್ವರೂಪದಲ್ಲಿ ಸೇರಿಕೋ."

ಪಿತಾಮಹನ ಈ ಮಾತನ್ನು ಕೇಳಿ ಮಹಾಮತಿಯಾದ ಶ್ರೀರಾಮನು ಒಂದು ನಿರ್ಧಾರಕ್ಕೆ ಬಂದವನಾಗಿ ಸಶರೀರನಾಗಿ ತನ್ನ ಅನುಜರೊಡನೆ ವೈಷ್ಣವತೇಜಸ್ಸಿನಲ್ಲಿ ಪ್ರವೇಶಿಸುತ್ತಾನೆ. ಬಳಿಕ ಅಗ್ನಿಮುಖರಾದ ದೇವತೆ

ಗಳೂ, ಇಂದ್ರಪ್ರಮುಖರಾದ ಮರುದ್ಗಣಗಳೂ, ಸಾಧ್ಯರೂ ವಿಷ್ಣುಮಯ ನಾದ ಶ್ರೀರಾಮನನ್ನು ಸ್ತುತಿಪ್ರಶಂಸೆಗಳಿಂದ ಸಂಪೂಜಿಸುತ್ತಾರೆ. ಬಳಿಕ ದೇವರ್ಷಿಗಳೂ, ಗಂಧರ್ವಾಪ್ಸರೆಯರೂ, ಗರುಡ-ನಾಗರೂ, ಯಕ್ಷ-ದೈತ್ಯ-ದಾನವ-ರಾಕ್ಷಸರೂ ಭಗವಂತನ ಗುಣಗಾನಮಾಡುತ್ತಾರೆ.

ಸರ್ವಂ ಪುಷ್ಟಂ ಪ್ರಮುದಿತಂ ಸುಸಂಪೂರ್ಣಮನೋರಥಮ್ ।
ಸಾಧು ಸಾಧ್ವಿತಿ ತೈರ್ದೇವೈಸ್ತ್ರಿದಿವಂ ಗತಕಲ್ಮಷಮ್ ॥೧೫॥

“ಪ್ರಭುವೇ! ನಿನ್ನ ಪದಾರ್ಪಣದಿಂದಾಗಿ ದೇವಲೋಕವಾಸಿಗಳ ಮನೋರಥವು ಪೂರ್ಣವಾಗಿ ಅವರು ಹೃಷ್ಟರೂ, ಪುಷ್ಟರೂ, ಆನಂದ ತುಂದಿಲರೂ ಆಗಿದ್ದಾರೆ. ಎಲ್ಲರ ಪಾಪ-ತಾಪಗಳೂ ನಷ್ಟವಾಗಿಹೋಗಿವೆ. ನೀನು ಮಾಡಿದ ಕಾರ್ಯವು ಅತ್ಯಂತ ಸಾಧುವಾಗಿದೆ.”

ಅನಂತರ ವಿಷ್ಣುರೂಪದಲ್ಲಿ ವಿರಾಜಮಾನನಾಗಿದ್ದ ಶ್ರೀರಾಮನು ಬ್ರಹ್ಮನಿಗೆ ಹೇಳುತ್ತಾನೆ :

ಏಷಾಂ ಲೋಕಂ ಜನೌಘಾನಾಂ ದಾತುಮರ್ಹಸಿ ಸುವ್ರತ ॥೧೬॥

“ಸುವ್ರತನೇ! ಪಿತಾಮಹ! ನನ್ನನ್ನನುಸರಿಸಿ ಬಂದಿರುವ ಈ ಜನ ಸಮುದಾಯಕ್ಕೆ ಉತ್ತಮವಾದ ಲೋಕಗಳನ್ನು ಅನುಗ್ರಹಿಸು.

ಇಮೇ ಹಿ ಸರ್ವೇ ಸ್ನೇಹಾನ್ಮಾಮನುಯಾತಾ ಮನಸ್ವಿನಃ ।
ಭಕ್ತಾ ಹಿ ಭಜಿತವ್ಯಾಶ್ಚ ತ್ಯಕ್ತಾತ್ಮಾನಶ್ಚ ಮತ್ಕೃತೇ ॥೧೭॥

ಇವರೆಲ್ಲರೂ ಸ್ನೇಹಪರವಶರಾಗಿ ನನ್ನ ಹಿಂದೆ ಬಂದಿದ್ದಾರೆ. ಪ್ರಶಸ್ತ ವಾದ ಮನಸ್ಸುಳ್ಳ ಈ ಪ್ರಜೆಗಳೆಲ್ಲರೂ ನನ್ನ ಭಕ್ತರೇ ಆಗಿದ್ದಾರೆ. ನನಗಾಗಿ ಇವರು ಸರ್ವಸ್ವವನ್ನೂ ಪರಿತ್ಯಾಗಮಾಡಿ ಬಂದಿದ್ದಾರೆ. ಆದುದರಿಂದ ಇವರು ಸರ್ವಥಾ ನನ್ನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ.”

ವಿಷ್ಣುವು ಹೇಳುವ ಈ ಮಾತನ್ನು ಕೇಳಿ ಲೋಕಗುರುವಾದ ಬ್ರಹ್ಮನು ಹೇಳುತ್ತಾನೆ :

“ಪ್ರಭುವೇ! ನಿನ್ನೊಡನೆ ಬಂದಿರುವ ಇವರೆಲ್ಲರೂ ‘ಸಾಂತಾನಿಕ’ ವೆಂಬ ಪುಣ್ಯಲೋಕಗಳಿಗೆ ಹೋಗುತ್ತಾರೆ.

ಯಚ್ಚ ತಿರ್ಯಗ್ಗತಂ ಕಿಂಚಿತ್ತ್ವಾಮೇವಮನುಚಿನ್ತಯತ್ ।
ಪ್ರಾಣಾಂಸ್ತ್ಯಕ್ಷ್ಯತಿ ಭಕ್ತ್ಯಾ ತತ್ಸಂತಾನೇಷು ನಿವತ್ಸ್ಯತಿ ।
ಸರ್ವೈರ್ಬ್ರಹ್ಮಗುಣೈರ್ಯುಕ್ತೇ ಬ್ರಹ್ಮಲೋಕಾದನನ್ತರೇ ॥೧೯॥

ತಿರ್ಯಗ್ಯೋನಿಗಳಲ್ಲಿ ಪಶು-ಪಕ್ಷಿಗಳಾಗಿ ಹುಟ್ಟಿದ ಪ್ರಾಣಿಗಳೂ ಕೂಡ ಭಕ್ತಿಯಿಂದ ನಿನ್ನನ್ನೇ ಧ್ಯಾನಮಾಡುತ್ತಾ ಪ್ರಾಣಗಳನ್ನು ತ್ಯಾಗಮಾಡಿದರೆ ಅವು ಅಂತಹ ಭಕ್ತಿಯ ಪ್ರಭಾವದಿಂದ ಸಾಂತಾನಿಕಲೋಕಗಳಲ್ಲಿ ವಾಸ ಮಾಡುತ್ತವೆ. ಹೀಗೆ ಬ್ರಹ್ಮಲೋಕದ ಸಮೀಪದಲ್ಲಿಯೇ ಇರುವ ಈ ಲೋಕವು ಬ್ರಹ್ಮಲೋಕದ ಸಮಸ್ತಗುಣಗಳಿಂದಲೂ ಕೂಡಿರುತ್ತದೆ.

ಕಪಿಗಳೂ ಕರಡಿಗಳೂ ಯಾವ ಯಾವ ದೇವತೆಗಳಿಂದ ಹುಟ್ಟಿದ್ದುವೋ ಆಯಾ ದೇವತೆಗಳಲ್ಲಿಯೇ ಸೇರಿಕೊಳ್ಳುತ್ತವೆ. ಅಂತೆಯೇ ಸುಗ್ರೀವನು ಸೂರ್ಯಮಂಡಲದಲ್ಲಿ ಸೇರಿಕೊಳ್ಳುತ್ತಾನೆ. ಸಮಸ್ತದೇವತೆಗಳೂ ನೋಡುತ್ತಿರುವಂತೆಯೇ ಋಕ್ಷ-ವಾನರರೆಲ್ಲರೂ ತಮ್ಮ-ತಮ್ಮ ಪಿತೃಗಳಲ್ಲಿ ಸೇರಿಕೊಳ್ಳುತ್ತಾರೆ.”

ದೇವೇಶ್ವರನಾದ ಬ್ರಹ್ಮನು ಹೀಗೆ ಹೇಳುತ್ತಿರಲು ಸರಯೂನದಿಯ ಗೋಪ್ರತಾರವೆಂಬ ಘಟ್ಟದಲ್ಲಿದ್ದ ಸಮಸ್ತಪ್ರಜೆಗಳೂ ಹರ್ಷಪೂರ್ಣರಾಗಿ ಆನಂದಾಶ್ರುವನ್ನು ಸುರಿಸುತ್ತಾ ಪ್ರವಹಿಸುತ್ತಿದ್ದ ಸರಯೂನದಿಯ ನೀರಿನಲ್ಲಿ ಮುಳುಗುತ್ತಾರೆ. ಹೀಗೆ ಸಂತೋಷಭರಿತರಾಗಿ ಯಾರು ಸರಯೂನದಿಯ ನೀರಿನಲ್ಲಿ ಮುಳುಗಿ ಮಾನುಷದೇಹವನ್ನು ಪರಿತ್ಯಾಗಮಾಡುವರೋ ಅವರೆಲ್ಲರೂ ದಿವ್ಯಶರೀರವನ್ನು ಧರಿಸಿ ದೇವವಿಮಾನಗಳಲ್ಲಿ ಕುಳಿತುಕೊಳ್ಳು ತ್ತಾರೆ. ನೂರಾರು-ಸಾವಿರಾರು ಸಂಖ್ಯೆಯಲ್ಲಿ ಶ್ರೀರಾಮನನ್ನು ಅನುಸರಿಸಿ ಹೋಗುವ ಪಶು-ಪಕ್ಷಿಗಳೂ ಕೂಡ ಸರಯೂನದಿಯಲ್ಲಿ ಮುಳುಗಿ ತೇಜೋಮಯವಾದ ಶರೀರವನ್ನು ಧರಿಸಿ ದಿವ್ಯಲೋಕಗಳಿಗೆ ಹೋಗುತ್ತವೆ. ದಿವ್ಯಶರೀರವನ್ನು ಧರಿಸಿ ದಿವ್ಯಾವಸ್ಥೆಯಲ್ಲಿದ್ದ ಅವುಗಳು ದೇವತೆಗಳಂತೆಯೇ ದೇದೀಪ್ಯಮಾನವಾಗಿ ಕಾಣುತ್ತವೆ. ಸ್ಥಾವರ-ಜಂಗಮಾತ್ಮಕವಾದ ಸಮಸ್ತ ಪ್ರಾಣಿಗಳೂ ಸರಯೂನದಿಯ ಬಳಿಗೆ ಹೋಗಿ ಅದರ ನೀರಿನಲ್ಲಿ ಮುಳುಗಿ ದಿವ್ಯಲೋಕಗಳಿಗೆ ಹೋಗುತ್ತವೆ. ಆ ಸಮಯದಲ್ಲಿ ಋಕ್ಷ-ವಾನರ-ರಾಕ್ಷಸ

ರಲ್ಲಿ ಯಾರೇ ಆಗಲೀ ತಮ್ಮ ಶರೀರಗಳನ್ನು ಸರಯೂನದಿಯಲ್ಲಿ ವಿಸರ್ಜಿಸಿದ್ದೇ ಆದರೆ ಅವರೆಲ್ಲರೂ ಸ್ವರ್ಗವನ್ನು ಪ್ರವೇಶಿಸುತ್ತಾರೆ.”

ಹೀಗೆ ಲೋಕಗುರುವಾದ ಬ್ರಹ್ಮನು ಶ್ರೀರಾಮನ ಆಣತಿಯಂತೆ ಜೊತೆಯಲ್ಲಿ ಬರುವ ಸಮಸ್ತರಿಗೂ ಸಾಂತಾನಿಕಲೋಕಗಳಲ್ಲಿ ಸ್ಥಾನಗಳನ್ನು ಕಲ್ಪಿಸಿಕೊಟ್ಟು ಹರ್ಷಾನಂದಭರಿತರಾದ ದೇವತೆಗಳೊಡನೆ ತನ್ನ ಪರಮ ಧಾಮಕ್ಕೆ ಹೋಗುತ್ತಾನೆ.

೧೧೦ನೆಯ ಸರ್ಗವು ಮುಗಿಯಿತು.

ಉತ್ತರಕಾಂಡ ೧೧೧ನೆಯ ಸರ್ಗ

ರಾಮಾಯಣಕಥೆಯ ಉಪಸಂಹಾರ ಮತ್ತು ರಾಮಾಯಣದ ಮಹಿಮೆ

ಏತಾವದೇತದಾಖ್ಯಾನಂ ಸೋತ್ತರಂ ಬ್ರಹ್ಮಪೂಜಿತಮ್ ।
ರಾಮಾಯಣಮಿತಿ ಖ್ಯಾತಂ ಮುಖ್ಯಂ ವಾಲ್ಮೀಕಿನಾ ಕೃತಮ್ ॥೧॥

ಬ್ರಹ್ಮನಿಂದಲೂ ಪುರಸ್ಕೃತವಾದ ವಾಲ್ಮೀಕಿಪ್ರಣೀತವಾದ ಉತ್ತರಕಾಂಡ ಸಹಿತವಾದ ರಾಮಾಯಣವೆಂಬ ಹೆಸರಿನ ಆಖ್ಯಾನವು ಇಲ್ಲಿಯವರೆಗಿದೆ.

ಹೀಗೆ ಶ್ರೀರಾಮನು ಹಿಂದಿನಂತೆಯೇ ತನ್ನ ವಿಷ್ಣುರೂಪದಲ್ಲಿ ಸೇರಿ ಸ್ವರ್ಗಲೋಕದಲ್ಲಿ ಪ್ರತಿಷ್ಠಿತನಾಗುತ್ತಾನೆ. ಆ ಮಹಾವಿಷ್ಣುವಿನ ಸ್ವರೂಪವೇ ಚರಾಚರಾತ್ಮಕವಾದ ತ್ರಿಭುವನಗಳನ್ನೂ ವ್ಯಾಪಿಸಿಕೊಂಡಿದೆ. ಆದಿಕಾವ್ಯವಾದ ಈ ರಾಮಾಯಣವನ್ನು ದೇವಲೋಕದಲ್ಲಿಯೂ ದೇವ-ಗಂಧರ್ವರೂ, ಸಿದ್ಧರೂ, ಮಹರ್ಷಿಗಳೂ ಪರಮಹೃಷ್ಟರಾಗಿ ಕೇಳುತ್ತಾರೆ.

ಇದಮಾಖ್ಯಾನಮಾಯುಷ್ಯಂ ಸೌಭಾಗ್ಯಂ ಪಾಪನಾಶನಮ್ ।
ರಾಮಾಯಣಂ ವೇದಸಮಂ ಶ್ರಾದ್ಧೇಷು ಶ್ರಾವಯೇದ್ಬುಧಃ ॥೪॥

ಈ ರಾಮಾಯಣದ ಆಖ್ಯಾನವು ಆಯುಷ್ಯವನ್ನೂ ಸೌಭಾಗ್ಯವನ್ನೂ ವರ್ಧಿಸತಕ್ಕುದು. ಪಾಪವನ್ನು ಹೋಗಲಾಡಿಸತಕ್ಕುದು. ವೇದಕ್ಕೆ ಸಮಾನ ವಾದುದು. ವಿದ್ವಾಂಸನಾದವನು ಶ್ರಾದ್ಧಸಮಯದಲ್ಲಿ ಇದನ್ನು ಪಾರಾಯಣ ಮಾಡಿ ನಿಮಂತ್ರಿತರು ಕೇಳುವಂತೆ ಮಾಡಬೇಕು.

ಅಪುತ್ರೋ ಲಭತೇ ಪುತ್ರಮಧನೋ ಲಭತೇ ಧನಮ್ ।
ಸರ್ವಪಾಪೈಃ ಪ್ರಮುಚ್ಯೇತ ಪಾದಮಪ್ಯಸ್ಯ ಯಃ ಪಠೇತ್ ॥೫॥

ಈ ರಾಮಾಯಣದ ಪಾರಾಯಣದಿಂದ ಪುತ್ರಹೀನನು ಪುತ್ರನನ್ನು ಪಡೆಯುತ್ತಾನೆ. ದರಿದ್ರನು ಐಶ್ವರ್ಯವನ್ನು ಪಡೆಯುತ್ತಾನೆ. ಪ್ರತಿದಿನವೂ ಒಂದು ಶ್ಲೋಕದ ಒಂದು ಪಾದವನ್ನಾದರೂ ಪಾರಾಯಣಮಾಡಿದವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಪಾಪಾನ್ಯಪಿ ಚ ಯಃ ಕುರ್ಯಾದಹನ್ಯಹನಿ ಮಾನವಃ ।
ಪಠತ್ಯೇಕಮಪಿ ಶ್ಲೋಕಂ ಪಾಪಾತ್ಸ ಪರಿಮುಚ್ಯತೇ ॥೬॥

ಅನುದಿನವೂ ಪಾಪಕಾರ್ಯಗಳನ್ನು ಮಾಡುತ್ತಿರುವವನು ಕೂಡ ರಾಮಾಯಣದ ಒಂದೇ ಒಂದು ಶ್ಲೋಕವನ್ನಾದರೂ ಶ್ರದ್ಧಾ-ಭಕ್ತಿಯುಕ್ತನಾಗಿ ಪಾರಾಯಣಮಾಡಿದರೆ ಅವನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ವಾಚಕಾಯ ಚ ದಾತವ್ಯಂ ವಸ್ತ್ರಂ ಧೇನುಹಿರಣ್ಯಕಮ್ ।
ವಾಚಕೇ ಪರಿತುಷ್ಟೇ ತು ತುಷ್ಟಾಃ ಸ್ಯುಃ ಸರ್ವದೇವತಾಃ ॥೭॥

ರಾಮಾಯಣಪ್ರವಚನವನ್ನು ಮಾಡುವವನಿಗೆ ವಸ್ತ್ರವನ್ನೂ, ಧೇನು ವನ್ನೂ, ಹಿರಣ್ಯವನ್ನೂ ದಾನವಾಗಿ ಕೊಡಬೇಕು. ಪ್ರವಚನಕಾರನು ತೃಪ್ತಿ ಹೊಂದಿದರೆ ಸಮಸ್ತದೇವತೆಗಳೂ ತೃಪ್ತರಾಗುತ್ತಾರೆ.

ಏತದಾಖ್ಯಾನಮಾಯುಷ್ಯಂ ಪಠನ್ರಾಮಾಯಣಂ ನರಃ ।
ಸಪುತ್ರಪೌತ್ರೋ ಲೋಕೇಽಸ್ಮಿನ್ಪ್ರೇತ್ಯ ಚೇಹ ಮಹೀಯತೇ ॥೮॥

ಆಯುಷ್ಯವನ್ನು ಹೆಚ್ಚಿಸುವ ಈ ರಾಮಾಯಣವನ್ನು ಪ್ರತಿನಿತ್ಯವೂ ಪಾರಾಯಣಮಾಡುವ ಮನುಷ್ಯನು ಈ ಲೋಕದಲ್ಲಿ ಪುತ್ರ-ಪೌತ್ರರನ್ನೂ ಪಡೆದುಕೊಂಡು ಸುಖಿಯಾಗಿದ್ದು ಅವಸಾನಾನಂತರದಲ್ಲಿ ಪರಲೋಕ ದಲ್ಲಿಯೂ ಮಹಿಮಾನ್ವಿತನಾಗುತ್ತಾನೆ.

ರಾಮಾಯಣಂ ಗೋವಿಸರ್ಗೇ ಮಧ್ಯಾಹ್ನೇ ವಾ ಸಮಾಹಿತಃ ।
ಸಾಯಾಹ್ನೇ ವಾಪರಾಹ್ಣೇ ಚ ವಾಚಯನ್ನಾವಸೀದತಿ ॥೯॥

ಯಾವನು ಪ್ರತಿದಿನವೂ ಏಕಾಗ್ರಚಿತ್ತನಾಗಿ ಪ್ರಾತಃಕಾಲದಲ್ಲಾಗಲೀ,

ಅಪರಾಹ್ಣದಲ್ಲಾಗಲೀ ಸಾಯಂಕಾಲದಲ್ಲೇ ಆಗಲೀ ರಾಮಾಯಣವನ್ನು ಪಾರಾಯಣಮಾಡುವವನೋ ಅಂತಹವನು ಯಾವಾಗಲೂ ದುಃಖಕ್ಕೆ ಭಾಗಿ ಯಾಗುವುದಿಲ್ಲ.

ಶ್ರೀರಾಮನು ಪರಂಧಾಮವನ್ನು ಹೊಂದಿದನಂತರ ರಮಣೀಯವಾದ ಅಯೋಧ್ಯಾಪಟ್ಟಣವು ಹಲವಾರು ವರ್ಷಗಳ ಕಾಲ ಜನಶೂನ್ಯವಾಗಿಯೇ ಇರುತ್ತದೆ. ಋಷಭನು ರಾಜನಾದನಂತರ ಅಲ್ಲಿ ಜನಗಳು ವಾಸ ಮಾಡಲು ಪ್ರಾರಂಭಿಸುತ್ತಾರೆ.

ಏತದಾಖ್ಯಾನಮಾಯುಷ್ಯಂ ಸಭವಿಷ್ಯಂ ಹಸೋತ್ತರಮ್ ।
ಕೃತವಾನ್ಪ್ರಚೇತಸಃ ಪುತ್ರಸ್ತದ್ಬ್ರಹ್ಮಾಪ್ಯನ್ವಮನ್ಯತ ॥೧೧॥

ಪ್ರಚೇತಸನ ಪುತ್ರನಾದ ವಾಲ್ಮೀಕಿಮಹರ್ಷಿಯು ಅಶ್ವಮೇಧಯಜ್ಞಾ ನಂತರ ಭವಿಷ್ಯಕಥಾಭಾಗದೊಡನೆ ಮತ್ತು ಉತ್ತರಕಾಂಡದೊಡನೆ ಈ ರಾಮಾಯಣವನ್ನು ರಚಿಸಿದನು. ಈ ಮಹಾಕಾವ್ಯದ ರಚನೆಗೆ ಬ್ರಹ್ಮನ ಅನು ಮೋದನೆಯೂ ಇದ್ದಿತು.

ಅಶ್ವಮೇಧಸಹಸ್ರಸ್ಯ ವಾಜಪೇಯಾಯುತಸ್ಯ ಚ ।
ಲಭತೇ ಶ್ರವಣಾದೇವ ಸರ್ಗಸ್ಯೈಕಸ್ಯ ಮಾನವಃ ॥೧೨॥

ಈ ರಾಮಾಯಣಮಹಾಕಾವ್ಯದ ಒಂದೇ ಒಂದು ಸರ್ಗವನ್ನು ಕೇಳಿ ದವನು ಸಾವಿರ ಅಶ್ವಮೇಧಗಳನ್ನು ಮಾಡಿದ ಮತ್ತು ಹತ್ತು ಸಾವಿರ ವಾಜ ಪೇಯಯಾಗಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಪ್ರಯಾಗಾದೀನಿ ತೀರ್ಥಾನಿ ಗಙ್ಗಾದ್ಯಾಃ ಸರಿತಸ್ತಥಾ ।
ನೈಮಿಷಾದೀನ್ಯರಣ್ಯಾನಿ ಕುರುಕ್ಷೇತ್ರಾದಿಕಾನ್ಯಪಿ ।
ಗತಾನಿ ತೇನ ಲೋಕೇಸ್ಮಿನ್ಯೇನ ರಾಮಾಯಣಂ ಶ್ರುತಮ್ ॥೧೩॥

ಯಾವನು ರಾಮಾಯಣವನ್ನು ಶ್ರದ್ಧಾ-ಭಕ್ತಿಗಳಿಂದ ಕೇಳುವನೋ ಅವನಿಗೆ ಪ್ರಯಾಗವೇ ಮೊದಲಾದ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿದ, ಗಂಗೆಯೇ ಮೊದಲಾದ ಪುಣ್ಯನದಿಗಳಲ್ಲಿ ಸ್ನಾನಮಾಡಿದ, ನೈಮಿಷಾರಣ್ಯ-ಕುರುಕ್ಷೇತ್ರಾದಿ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿದ ಫಲವು ಲಭಿಸುತ್ತದೆ.

ಹೇಮಭಾರಂ ಕುರುಕ್ಷೇತ್ರೇ ಗ್ರಸ್ತೇ ಭಾನೌ ಪ್ರಯಚ್ಛತಿ ।
ಯಶ್ಚ ರಾಮಾಯಣಂ ಲೋಕೇ ಶೃಣೋತಿ ಸದೃಶಾವುಭೌ ॥೧೪॥

ಸೂರ್ಯಗ್ರಹಣಕಾಲದಲ್ಲಿ ಒಂದು ಭಾರದಷ್ಟು* ಸುವರ್ಣವನ್ನು ಕುರುಕ್ಷೇತ್ರದಲ್ಲಿ ದಾನವಾಗಿ ಕೊಡುವವನಿಗ ಲಭಿಸುವ ಫಲವೂ ಮತ್ತು ರಾಮಾಯಣವನ್ನು ಅನುದಿನವೂ ಶ್ರದ್ಧಾ-ಭಕ್ತಿಯಿಂದ ಕೇಳುವವನಿಗೆ ಲಭಿಸುವ ಫಲವೂ ಒಂದೇ ಆಗಿರುತ್ತದೆ.

ಸಮ್ಯಕ್ ಶ್ರದ್ಧಾಸಮಾಯುಕ್ತಃ ಶೃಣುತೇ ರಾಘವೀಂ ಕಥಾಮ್ ।
ಸರ್ವಪಾಪಾತ್ಪ್ರಮುಚ್ಯೇತ ವಿಷ್ಣುಲೋಕಂ ಸ ಗಚ್ಛತಿ ॥೧೫॥

ಯಾವನು ಶ್ರದ್ಧಾಸಂಪನ್ನನಾಗಿ ಶ್ರೀರಾಮನ ಸಂಬಂಧವಾದ ಕಥೆಯನ್ನು ಕೇಳುವನೋ ಅವನು ಸಮಸ್ತಪಾಪಗಳಿಂದಲೂ ವಿಮುಕ್ತನಾಗಿ ವಿಷ್ಣುಲೋಕಕ್ಕೆ ಹೋಗುತ್ತಾನೆ.

ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಮ್ ।
ಯಃ ಶೃಣೋತಿ ಸದಾ ಭಕ್ತ್ಯಾ ಸ ಗಚ್ಛೇದ್ವೈಷ್ಣವೀಂ ತನುಮ್ ॥೧೬॥

ಪೂರ್ವಕಾಲದಲ್ಲಿ ವಾಲ್ಮೀಕಿಮಹರ್ಷಿಯಿಂದ ರಚಿಸಲ್ಪಟ್ಟ ಆದಿಕಾವ್ಯವಾದ ಈ ರಾಮಾಯಣವನ್ನು ಯಾವನು ಭಕ್ತಿಯಿಂದ ಕೇಳುವನೋ ಅವನು ಮಹಾವಿಷ್ಣುವಿನ ಸ್ವರೂಪವನ್ನೇ ಹೊಂದುತ್ತಾನೆ.

ಪುತ್ರದಾರಾಶ್ಚ ವರ್ಧನ್ತೇ ಸಮ್ಪದಃ ಸಂತತಿಸ್ತಥಾ ।
ಸತ್ಯಮೇತದ್ವಿದಿತ್ವಾ ತು ಶ್ರೋತವ್ಯಂ ನಿಯತಾತ್ಮಭಿಃ ॥೧೭॥

ಗಾಯತ್ರ್ಯಾಶ್ಚ ಸ್ವರೂಪಂ ತದ್ರಾಮಾಯಣಮನುತ್ತಮಮ್ ॥೧೮॥

ರಾಮಾಯಣವನ್ನು ಕೇಳುವುದರಿಂದ ಪತ್ನೀ-ಪುತ್ರರ ಪ್ರಾಪ್ತಿಯಾಗುತ್ತದೆ. ಐಶ್ವರ್ಯದ ಪ್ರಾಪ್ತಿಯಾಗುತ್ತದೆ. ಸಂತಾನದ ವೃದ್ಧಿಯಾಗುತ್ತದೆ. ಈ ಮಾತು ಸತ್ಯವೆಂದು ತಿಳಿದು ಏಕಾಗ್ರಚಿತ್ತರಾಗಿ ಇದನ್ನು

---

* ೧ ಭಾರ=೨,೦೦೦ ಪಲಗಳಷ್ಟು ತೂಕ :

೫ ಗುಲಗಂಜಿಗಳ ತೂಕ= ೧ ಆದ್ಯಮಾಪಕ	೧೬ ಆದ್ಯಮಾಪಗಳು= ೧ ಕರ್ಷ
೪ ಕರ್ಷಗಳು =೧ ಪಲ	೧೦೦ ಪಲಗಳು = ೧ ತೊಲೆ

೨೦ ತೊಲೆಗಳು ಅಥವಾ ೨,೦೦೦ ಪಲಗಳು = ೧ ಭಾರ

ಶ್ರವಣಮಾಡಬೇಕು. ಅತ್ಯಂತಶ್ರೇಷ್ಠವಾದ ಈ ರಾಮಾಯಣಕಾವ್ಯವು ಗಾಯತ್ರಿಯ ಸ್ವರೂಪವೇ ಆಗಿದೆ.

ಯಃ ಪಠೇಚ್ಛೃಣುಯಾನ್ನಿತ್ಯಂ ಚರಿತಂ ರಾಘವಸ್ಯ ಹ ।
ಭಕ್ತ್ಯಾ ನಿಷ್ಕಲ್ಮಷೋ ಭೂತ್ವಾ ದೀರ್ಘಮಾಯುರವಾಪ್ನುಯಾತ್ ॥೧೯॥

ಯಾವನು ಭಕ್ತಿಯಿಂದ ಅನುದಿನವೂ ಶ್ರೀರಾಮನ ಚರಿತ್ರೆಯನ್ನು ಕೇಳುವನೋ ಮತ್ತು ಪಾರಾಯಣಮಾಡುವನೋ ಅವನು ಕಲ್ಮಷರಹಿತನಾಗಿ ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಚಿನ್ತಯೇದ್ರಾಘವಂ ನಿತ್ಯಂ ಶ್ರೇಯಃ ಪ್ರಾಪ್ತುಂ ಯ ಇಚ್ಛತಿ ।
ಶ್ರಾವಯೇದಿದಮಾಖ್ಯಾನಂ ಬ್ರಾಹ್ಮಣೇಭ್ಯೋ ದಿನೇ ದಿನೇ ॥೨೦॥

ಯಾವನು ಶ್ರೇಯೋಭಿಲಾಷಿಯೋ ಅಂತಹವನು ಅನುದಿನವೂ ಶ್ರೀರಾಘವನನ್ನು ಧ್ಯಾನಮಾಡುತ್ತಲೇ ಇರಬೇಕು. ಬ್ರಾಹ್ಮಣರೆದುರಿನಲ್ಲಿ ಇದರ ಪಾರಾಯಣ-ಪ್ರವಚನಗಳನ್ನು ಮಾಡಬೇಕು.

ಯಸ್ತ್ವಿದಂ ರಘುನಾಥಸ್ಯ ಚರಿತಂ ಸಕಲಂ ಪಠೇತ್ ।
ಸೋಽಸುಕ್ಷಯೇ ವಿಷ್ಣುಲೋಕಂ ಗಚ್ಛತ್ಯೇವ ನ ಸಂಶಯಃ ॥೨೧॥

ಯಾವನು ಶ್ರೀರಾಮನ ಈ ಚರಿತ್ರೆಯನ್ನು ಆಮೂಲಾಗ್ರವಾಗಿ ಪಠಿಸುವನೋ ಅಂತಹವನು ಅಸುನೀಗಿದನಂತರ ವಿಷ್ಣುವಿನ ಲೋಕಕ್ಕೆ ಹೋಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಪಿತಾ ಪಿತಾಮಹಸ್ತಸ್ಯ ತಥೈವ ಪ್ರಪಿತಾಮಹಃ ।
ತತ್ಪಿತಾ ತತ್ಪಿತಾ ಚೈವ ವಿಷ್ಣುಂ ಯಾನ್ತಿ ನ ಸಂಶಯಃ ॥೨೨॥

ಅವನೊಬ್ಬನು ಮಾತ್ರವಲ್ಲ, ಅವನ ತಂದೆ ; ಅವನ ತಾತ ; ಅವನ ತಾತನ ತಂದೆ ; ತಾತನ ತಾತ (ಪಿತಾ-ಪಿತಾಮಹ-ಪ್ರಪಿತಾಮಹ-ವೃದ್ಧ ಪ್ರಪಿತಾಮಹ) ಮೊದಲಾಗಿ ಸರ್ವರೂ ವಿಷ್ಣುಲೋಕಕ್ಕೆ ಹೋಗುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ.

ಚತುರ್ವರ್ಗಪ್ರದಂ ನಿತ್ಯಂ ಚರಿತಂ ರಾಘವಸ್ಯ ತು ।
ತಸ್ಮಾದ್ಯತ್ನವತಾ ನಿತ್ಯಂ ಶ್ರೋತವ್ಯಂ ಪರಮಂ ಸದಾ ॥೨೩॥

ಶ್ರೀರಾಘವನ ಈ ಚರಿತ್ರೆಯು ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳನ್ನು ನೀಡುವುದು. ಆದುದರಿಂದ ಪ್ರತಿನಿತ್ಯವೂ ಪ್ರಯತ್ನಪೂರ್ವಕವಾಗಿ ಈ ಶ್ರೇಷ್ಠವಾದ ಕಾವ್ಯವನ್ನು ಕೇಳಬೇಕು.

ಶೃಣ್ವನ್ರಾಮಾಯಣಂ ಭಕ್ತ್ಯಾ ಯಃ ಪಾದಂ ಪದಮೇವ ವಾ ।
ಸ ಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ ॥೨೪॥

ಯಾವನು ರಾಮಾಯಣಕಾವ್ಯಶ್ಲೋಕದ ಒಂದು ಪಾದವನ್ನಾಗಲೀ, ಪದವನ್ನಾಗಲೀ ಭಕ್ತಿಭಾವದಿಂದ ಕೇಳುವನೋ ಅವನು ಬ್ರಹ್ಮಧಾಮಕ್ಕೆ ಹೋಗಿ ಸದಾ ಬ್ರಹ್ಮನಿಂದಲೂ ಗೌರವಿಸಲ್ಪಡುತ್ತಾನೆ.

ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥೨೫॥

ಹೀಗೆ ಈ ಪುರಾತನವಾದ ಆಖ್ಯಾನವನ್ನು ನೀವೆಲ್ಲರೂ ವಿಶ್ವಾಸ ಪೂರ್ವಕವಾಗಿ ಶ್ರವಣಮಾಡಿರಿ. ಪಾರಾಯಣಮಾಡಿರಿ. ನಿಮಗೆ ಮಂಗಳ ವಾಗಲಿ. ಭಗವಂತನಾದ ಮಹಾವಿಷ್ಣುವಿನ ಬಲವು ವೃದ್ಧಿಹೊಂದಲಿ. ಮಹಾವಿಷ್ಣುವಿಗೆ ಜಯವಾಗಲಿ. ಶ್ರೀರಾಮನಿಗೆ ಜಯವಾಗಲಿ. ಶ್ರೀರಾಮ ಜಯರಾಮ ಜಯ ಜಯ ರಾಮ.

೧೧೧ನೆಯ ಸರ್ಗವು ಮುಗಿಯಿತು.

ಉತ್ತರಕಾಂಡವು ಮುಗಿಯಿತು.

ಹನ್ನೊಂದನೆಯ ಸಂಪುಟವು ಮುಗಿಯಿತು.

ಶ್ರೀಮದ್ವಾಲ್ಮೀಕಿರಾಮಾಯಣವು ಮುಗಿಯಿತು.

ಹರಿಃ ಓಂ
ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಸೀತಾ-ಲಕ್ಷ್ಮಣ-ಭರತ-ಶತ್ರುಘ್ನ-ಹನೂಮತ್ಸಮೇತ
ಶ್ರೀರಾಮಚನ್ದ್ರಾರ್ಪಣಮಸ್ತು
ಓಂ ತತ್ಸತ್

ಮಹರ್ಷಿ ವಾಲ್ಮೀಕಿ

ನಮ್ಮ ಹಲವಾರು ವಾಚಕರು ವಾಲ್ಮೀಕಿಯ ಜನ್ಮಚರಿತವನ್ನು ಪ್ರಕಟಿಸಬೇಕೆಂದು ಪತ್ರಗಳನ್ನು ಬರೆದಿರುತ್ತಾರೆ. ಮಹಾಭಾರತದಲ್ಲಿ ವ್ಯಾಸರ ಜನ್ಮಚರಿತ್ರೆ ಬರುತ್ತದೆ. ಆದರೆ ವಾಲ್ಮೀಕಿರಾಮಾಯಣದಲ್ಲಿ ವಾಲ್ಮೀಕಿ ಚರಿತ್ರೆಯು ಬರುವುದಿಲ್ಲ. ಆದರೆ ತಾವು ಯಾರೆಂಬುದನ್ನು ಹೇಳಿಕೊಂಡಿ ರುವ ಪ್ರಕರಣವು ಉತ್ತರಕಾಂಡದಲ್ಲಿ ಬರುತ್ತದೆ. ಅದನ್ನು ಮುಂದೆ ವಿಮರ್ಶಿಸಲಾಗುವುದು. ಅಧ್ಯಾತ್ಮರಾಮಾಯಣದಲ್ಲಿ ತತ್ತ್ವಸಂಗ್ರಹ ರಾಮಾಯಣದಲ್ಲಿ, ಸ್ಕಾಂದಪುರಾಣದ ಅವಂತಿಖಂಡದಲ್ಲಿ ವಾಲ್ಮೀಕಿಯ ಕಥೆಯು ಬರುತ್ತದೆ. ತತ್ತ್ವಸಂಗ್ರಹರಾಮಾಯಣದಲ್ಲಿ ಬರುವ ವಾಲ್ಮೀಕಿಗಳ ಚರಿತ್ರೆಯನ್ನು ಯಥಾವತ್ತಾಗಿ ಇಲ್ಲಿ ಕೊಡಲಾಗಿದೆ.

ತತ್ತ್ವಸಂಗ್ರಹರಾಮಾಯಣ

ಅಯೋಧ್ಯಾಕಾಂಡ ೨೨ನೆಯ ಸರ್ಗ

ಶ್ರೀರಾಮನೊಡನೆ ವಾಲ್ಮೀಕಿಮಹರ್ಷಿಗಳ ಸಮಾಗಮ

ಶ್ರೀರಾಮನು ಸೀತಾ-ಲಕ್ಷ್ಮಣರ ಸಮೇತನಾಗಿ ಚಿತ್ರಕೂಟಪರ್ವತಕ್ಕೆ ಬರುತ್ತಾನೆ.

ತತ್ರ ಗತ್ವಾ ಸಮಾಸೀನಂ ವಾಲ್ಮೀಕಿಂ ಮುನಿಸತ್ತಮಮ್ ।
ನನಾಮ ಶಿರಸಾ ರಾಮೋ ಲಕ್ಷ್ಮಣೇನ ಚ ಸೀತಯಾ ॥೬॥

ಚಿತ್ರಕೂಟಪರ್ವತಕ್ಕೆ ಹೋಗಿ ಅಲ್ಲಿಯ ಆಶ್ರಮವೊಂದರಲ್ಲಿ ಸುಖಾಸೀನರಾಗಿ ಕುಳಿತಿದ್ದ ಮುನಿಶ್ರೇಷ್ಠರಾದ ವಾಲ್ಮೀಕಿಮಹರ್ಷಿಗಳನ್ನು ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ನಮಸ್ಕರಿಸಿದನು.

ಲೋಕಸುಂದರನಾದ, ರಮಾನಾಥನಾದ, ಜಟಾಮಂಡಲದಿಂದ ಸಮಲಂಕೃತನಾಗಿದ್ದ, ಜಾನಕೀ-ಲಕ್ಷ್ಮಣರೊಡನಿದ್ದ, ಮನ್ಮಥಸದೃಶನಾಗಿದ್ದ, ಕಮನೀಯವಾದ ಕಮಲಸದೃಶವಾದ ಕಣ್ಣುಗಳುಳ್ಳವನಾಗಿದ್ದ ಶ್ರೀರಾಮನನ್ನು ಕಂಡು ವಾಲ್ಮೀಕಿಗಳು ಅವನನ್ನು ವಿಸ್ಮಯದಿಂದ ಎವೆಯಿಕ್ಕದೇ ನೋಡುತ್ತಾ ಹರ್ಷದಿಂದ ಮೇಲೆದ್ದು ಆಲಿಂಗಿಸಿಕೊಂಡು, ಆನಂದಬಾಷ್ಪದಿಂದ ತುಂಬಿದ ಕಣ್ಣುಗಳುಳ್ಳವನಾಗಿ ಭಕ್ತಿಯಿಂದ ಕೂಡಿ ಅವನನ್ನು ಅರ್ಘ್ಯ-ಪಾದ್ಯಾದಿಗಳಿಂದ ಸಂಪೂಜಿಸಿದರು. ಹೀಗೆ ಫಲ-ಮೂಲಾದಿಗಳಿಂದ

ಸತ್ಕೃತನಾದ ಶ್ರೀರಾಮನು ವಿನಯದಿಂದ ಕೈಮುಗಿದುಕೊಂಡು ಮಹರ್ಷಿ ಗಳಿಗೆ ಹೇಳಿದನು :

"ಮಹರ್ಷಿಗಳೇ! ತಂದೆಯ ಆಜ್ಞೆಯನ್ನು ಪುರಸ್ಕರಿಸಿ ನಾವು ಮೂವರೂ ದಂಡಕಾರಣ್ಯಕ್ಕೆ ಬಂದಿರುತ್ತೇವೆ. ಈ ವಿಷಯವನ್ನು ತ್ರಿಕಾಲಜ್ಞಾನಿಗಳಾದ ತಾವು ತಿಳಿದೇ ಇರುವಿರಿ. ಆದುದರಿಂದ ಇದರ ಕಾರಣವನ್ನು ನಾನು ಹೇಳುವ ಅಗತ್ಯವಿಲ್ಲ. ಈ ಅರಣ್ಯದಲ್ಲಿ ಸುಖವಾಗಿರಲು ಯಾವ ಸ್ಥಾನವು ಪ್ರಶಸ್ತವಾಗಿರುವುದೋ ಅಂತಹ ಒಂದು ಸ್ಥಾನವನ್ನು ಸೂಚಿಸಿರಿ. ತಾವು ಹೇಳಿದ ಸ್ಥಳದಲ್ಲಿ ಸೀತೆಯೊಡನೆ ನಾನು ಸ್ವಲ್ಪಕಾಲ ತಂಗಿರುವೆನು."

ಹೀಗೆ ಹೇಳಿದ ಶ್ರೀರಾಮನಿಗೆ ವಾಲ್ಮೀಕಿಗಳು ನಸು-ನಗುತ್ತಾ ಹೇಳುತ್ತಾರೆ:

ತ್ವಮೇವ ಸರ್ವಲೋಕಾನಾಂ ನಿವಾಸಸ್ಥಾನಮುತ್ತಮಮ್ ।
ತವಾಪಿ ಸರ್ವಭೂತಾನಿ ನಿವಾಸಸದನಾನಿ ಹಿ ॥

"ರಾಘವ! ಸಮಸ್ತಲೋಕಗಳಿಗೂ ನೀನೇ ಮುಖ್ಯವಾದ ಆಶ್ರಯ ಸ್ಥಾನವಾಗಿರುವೆ. ನಿನಗೆ ಸಮಸ್ತಪ್ರಾಣಿಗಳೂ ನಿವಾಸಸ್ಥಾನಗಳಾಗಿವೆ.

ಹೀಗೆ ನಾನು ನಿನಗೆ ಸಾಧಾರಣವಾದ ಸ್ಥಾನವು ಯಾವುದೆಂಬುದನ್ನು ಹೇಳಿದ್ದೇನೆ. ನೀನು 'ಸೀತಾಸಹಿತನಾಗಿ ವಾಸಮಾಡಬೇಕು' ಎಂದು ವಿಶೇಷ ರೀತಿಯಲ್ಲಿ ಹೇಳಿದೆಯಾದಕಾರಣ ನಿನಗೆ ನಿಯತವಾದ ಮಂದಿರವು ಯಾವುದೆಂಬುದನ್ನು ಹೇಳುವೆನು ; ಕೇಳು.

ಶಾನ್ತಾನಾಂ ಸಮಚಿತ್ತಾನಾಂ ಮಧ್ಯಸ್ಥಾನಾಂ ಚ ಜನ್ತುಷು ।
ತ್ವಾಮೇವ ಭಜತಾಂ ನಿತ್ಯಂ ಹೃದಯಂ ತೇ ಹಿ ಮನ್ದಿರಮ್ ॥೧೬॥

ಶಾಂತರಾಗಿಯೂ, ಸಮಚಿತ್ತರಾಗಿಯೂ, ಸಕಲಪ್ರಾಣಿಗಳಲ್ಲಿಯೂ ಉದಾಸೀನರಾಗಿಯೂ ಇದ್ದುಕೊಂಡು ಸರ್ವದಾ ನಿನ್ನನ್ನೇ ಭಜಿಸತಕ್ಕವರ ಹೃದಯವೇ ನಿನಗೆ ವಾಸಸ್ಥಾನವು.

ಧರ್ಮಾಧರ್ಮಾನ್ಪರಿತ್ಯಜ್ಯ ತ್ವಾಮೇವ ಭಜತೋಽನಿಶಮ್ ।
ಸೀತಯಾ ಸಹಿತಸ್ಯಾರ್ಯ ಮನಸ್ತೇ ಸುಖಮನ್ದಿರಮ್ ॥೧೭॥

ಸಮಸ್ತಧರ್ಮಾಧರ್ಮಗಳನ್ನು ಪರಿತ್ಯಜಿಸಿ ಸರ್ವದಾ ನಿನ್ನನ್ನೇ ಭಜಿ

ಸುತ್ತಿರುವ ಭಕ್ತನ ಹೃದಯವು ಸೀತಾಸಹಿತನಾದ ನಿನಗೆ ಸುಖನಿವಾಸ ಸ್ಥಾನವು.

ತ್ವನ್ಮನ್ತ್ರಜಾಪಕೋ ಯಸ್ತು ತ್ವಾಮೇವ ಶರಣಂ ಗತಃ ।
ನಿರ್ದ್ವನ್ದ್ವೋ ನಿಃಸ್ಪೃಹಸ್ತಸ್ಯ ಹೃದಯಂ ತೇ ಸುಮನ್ದಿರಮ್ ॥೧೮॥

ಯಾವ ಪುರುಷನು ನಿನ್ನ ಮಂತ್ರವನ್ನೇ ಜಪಿಸುತ್ತಾ ನಿನ್ನನ್ನೇ ಮೊರೆಹೊಕ್ಕವನಾಗಿ ದ್ವಂದ್ವಾತೀತನಾಗಿಯೂ, ನಿಃಸ್ಪೃಹನಾಗಿಯೂ ಇರುವನೋ ಅಂತಹವನ ಹೃದಯವೇ ನಿನಗೆ ಮನೆಯು.

ನಿರಹಙ್ಕಾರಿಣಃ ಶಾನ್ತಾಃ ರಾಗದ್ವೇಷವಿವರ್ಜಿತಾಃ ।
ಸಮಲೋಷ್ಟಾಶ್ಮಕನಕಾಃ ತೇಷಾಂ ತೇ ಹೃದಯಂ ಗೃಹಮ್ ॥೧೯॥

ಅಹಂಕಾರಶೂನ್ಯರಾಗಿಯೂ, ಶಾಂತರಾಗಿಯೂ, ರಾಗ-ದ್ವೇಷರಹಿತರಾಗಿಯೂ, ಕಲ್ಲು-ಮಣ್ಣು-ಚಿನ್ನಗಳಲ್ಲಿ ಸಮಬುದ್ಧಿಯುಳ್ಳವರಾಗಿಯೂ ಇರುವವರ ಹೃದಯವು ನಿನ್ನ ಮನೆಯಾಗಿದೆ.

ತ್ವಯಿ ದತ್ತಮನೋಬುದ್ಧಿಃ ಯಃ ಸನ್ತುಷ್ಟಃ ಸದಾ ಭವೇತ್ ।
ತ್ವಯಿ ಸನ್ನ್ಯಸ್ತಕರ್ಮಾ ಯಃ ತನ್ಮನಸ್ತೇ ಶುಭಂ ಗೃಹಮ್ ॥೨೦॥

ಯಾವನು ನಿನ್ನಲ್ಲಿ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಲೀನಗೊಳಿಸಿ ಸರ್ವದಾ ಸಂತುಷ್ಟನಾಗಿರುವನೋ ತಾನು ಮಾಡುವ ಸಮಸ್ತಕರ್ಮಗಳನ್ನೂ ನಿನಗೇ ಅರ್ಪಿಸುವನೋ ಅಂತಹವನ ಮನಸ್ಸು ನಿನಗೆ ಶುಭಕರವಾದ ಮನೆಯಾಗಿರುವುದು.

ಯೋ ನ ದ್ವೇಷ್ಟ್ಯಪ್ರಿಯಂ ಪ್ರಾಪ್ಯ ಪ್ರಿಯಂ ಪ್ರಾಪ್ಯ ನ ಹೃಷ್ಯತಿ ।
ಸರ್ವಂ ಮಾಯೇತಿ ನಿಶ್ಚಿತ್ಯ ತ್ವಾ ಭಜೇತ್ತನ್ಮನೋ ಗೃಹಮ್ ॥೨೧॥

ಯಾವನು ಅಪ್ರಿಯವಾದುದು ಸಂಭವಿಸಿದಾಗ ಅದನ್ನು ದ್ವೇಷಿಸುವುದಿಲ್ಲವೋ, ಪ್ರಿಯವಾದುದು ಸಂಭವಿಸಿದರೆ ಹರ್ಷಿಸುವುದೂ ಇಲ್ಲವೋ, ಪ್ರಿಯಾಪ್ರಿಯಗಳೆರಡೂ ಮಾಯೆಯೆಂದು ನಿಶ್ಚಯಿಸಿ ನಿನ್ನನ್ನು ಭಜಿಸುವನೋ ಅಂತಹವನ ಮನಸ್ಸೇ ನಿನಗೆ ಮನೆಯಾಗಿರುವುದು.

ಷಡ್ಭಾವಾದಿವಿಕಾರಾನ್ಯೋ ದೇಹೇ ಪಶ್ಯತಿ ನಾತ್ಮನಿ ।
ಕ್ಷುತ್ತೃಡ್ಭಯಂ ಸುಖಂ ದುಃಖಂ ಪ್ರಾಣಬುದ್ಧ್ಯೋರ್ನಿರೀಕ್ಷತೇ ॥೨೨॥

ಆತ್ಮಾನಂ ಸರ್ವದಾ ಪಶ್ಯೇತ್ಸತ್ಯಜ್ಞಾನಾದಿ ಲಕ್ಷಣಮ್ ।
ಸಂಸಾರಧರ್ಮೈರ್ನಿರ್ಮುಕ್ತಃ ತಸ್ಯ ತೇ ಮಾನಸಂ ಗೃಹಮ್ ॥೨೩॥

ಯಾವ ಪುರುಷನು ಜನನಾದಿಷಡ್ಭಾವವಿಕಾರಗಳು ದೇಹಕ್ಕೆ ಮಾತ್ರವೇ ಎಂದೂ ಆತ್ಮನಿಗಿಲ್ಲವೆಂದೂ ತಿಳಿಯುವನೋ, ಹಸಿವು-ಬಾಯಾರಿಕೆ-ಭಯ-ಸುಖ-ದುಃಖಗಳು ಪ್ರಾಣ-ಬುದ್ಧಿಗಳಿಗೆ ಸಂಬಂಧಪಟ್ಟುವುಗಳೆಂದೂ ಆತ್ಮನಿಗಲ್ಲವೆಂದೂ ತಿಳಿಯುವನೋ, ಸರ್ವದಾ ಸರ್ವತ್ರ ಆತ್ಮನು ಸತ್ಯಜ್ಞಾನಾನಂದರೂಪನಾಗಿರುವನೆಂದು ನೋಡುತ್ತಿರುವನೋ, ಸಕಲಸಂಸಾರಧರ್ಮಗಳಿಂದಲೂ ಮುಕ್ತನಾಗಿರುವನೋ ಅಂತಹವನ ಮನಸ್ಸೇ ನಿನಗೆ ವಾಸದ ಮನೆಯು.

ಪಶ್ಯನ್ತಿ ಯೇ ಸರ್ವಗುಹಾಶಯಸ್ಥಂ
ತ್ವಾಂ ಚಿದ್ಘನಂ ಸತ್ಯಮನನ್ತಮೇಕಮ್ ।
ನಭೋಪಮಂ ಸರ್ವಗತಂ ವರೇಣ್ಯಂ
ತೇಷಾಂ ಹೃದನ್ತೇ ಸಹಸೀತಯಾ ವಸ ॥೨೪॥

ರಾಘವ! ಯಾರು ನಿನ್ನನ್ನು ಸರ್ವಾಂತರ್ಯಾಮಿಯೆಂದೂ, ಜ್ಞಾನಸ್ವರೂಪನೆಂದೂ, ಸತ್ಯನೆಂದೂ, ಅನಂತನೆಂದೂ, ಅದ್ವಿತೀಯನೆಂದೂ, ಆಕಾಶದಂತೆ ನಿರ್ಲೇಪನೆಂದೂ, ಸರ್ವಗತನೆಂದೂ, ಪ್ರಶಸ್ತತಮನೆಂದೂ ತಿಳಿಯುವರೋ ಅಂತಹವರ ಹೃದಯದಲ್ಲಿ ನೀನು ಸೀತೆಯೊಡನೆ ವಾಸ ಮಾಡಿಕೊಂಡಿರು.

ನಿರನ್ತರಾಭ್ಯಾಸದೃಢೀಕೃತಾತ್ಮನಾಂ
ತ್ವತ್ಪಾದಸೇವಾಪರಿನಿಷ್ಠಿತಾನಾಮ್ ।
ತ್ವನ್ನಾಮಕೀರ್ತ್ಯಾ ಹತಕಿಲ್ಬಿಷಾಣಾಂ
ಸೀತಾಸಮೇತಸ್ಯ ಗೃಹಂ ಹೃದಬ್ಜಮ್ ॥೨೫॥

ನಿರಂತರವಾದ ಅಭ್ಯಾಸದಿಂದ ನಿನ್ನನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಿನ್ನ ಪಾದಸೇವೆಯಲ್ಲಿ ನಿಷ್ಠರಾಗಿ ನಿನ್ನ ದಿವ್ಯನಾಮಸಂಕೀರ್ತನದಿಂದ ಪಾಪಗಳನ್ನು ಕಳೆದುಕೊಂಡಿರತಕ್ಕವರ ಹೃದಯಕಮಲವೇ ಸೀತಾಸಹಿತನಾದ ನಿನಗೆ ನಿಲಯವು.

ವ್ಯತ್ಯಸ್ತಾದಪಿ ತೇ ನಾಮ್ನೋ ಬ್ರಹ್ಮರ್ಷಿತ್ವಮಗಾಂ ಯತಃ ।
ನೀಚೋಽಪಿ ರಾಮ ತೇ ನಾಮ್ನೋ ಮಹಿಮಾ ಕೇನ ವರ್ಣ್ಯತೇ ॥೨೬॥

ರಾಮಭದ್ರ! ನಾನು ಪರಮನೀಚನಾಗಿದ್ದರೂ 'ರಾಮ' ಎಂಬುದನ್ನು 'ಮರಾ' ಎಂದು ಹಿಂದು-ಮುಂದಾಗಿ ಹೇಳಿಕೊಂಡು ಜಪಮಾಡಿದರೂ ನಿನ್ನ ನಾಮದ ಮಹಿಮೆಯಿಂದ ಬ್ರಹ್ಮರ್ಷಿಯೇ ಆದೆನಲ್ಲವೇ! ಹೀಗಿರುವಾಗ ನಿನ್ನ ಮಹಿಮೆಯನ್ನು ವರ್ಣಿಸಲು ಯಾರಿಗೆ ತಾನೇ ಶಕ್ಯವಿದೆ?"

ಹೀಗೆ ತತ್ತ್ವಜ್ಞರಾದ ವಾಲ್ಮೀಕಿಗಳು ಶ್ರೀರಾಮನನ್ನು ಸ್ತೋತ್ರಮಾಡಿ ಪುನಃ ಹೇಳಿದರು :

ಮಯಿ ಪ್ರೀತ್ಯಾ ಸದಾರೋಽಸ್ಮಿನ್ ಚಿತ್ರಕೂಟೇ ವಸಾಚಲೇ ॥೨೭॥

"ನನ್ನ ಮೇಲೆ ಪ್ರೀತಿಯಿಟ್ಟು ನೀನು ಈ ಚಿತ್ರಕೂಟದಲ್ಲಿ ಪತ್ನೀಸಹಿತ ನಾಗಿ ವಾಸಮಾಡಿಕೊಂಡಿರು."

ಭಕ್ತಪರಾಧೀನನಾದ ಶ್ರೀರಾಮನು–'ಸಾಧು ; ನೀನು ಹೇಳಿದ್ದು ಸಮೀಚೀನವಾಗಿದೆ'–ಎಂದು ಹೇಳಿ ವಾಲ್ಮೀಕಿಯ ಮಾತನ್ನು ಅಂಗೀಕರಿಸಿ ಲೋಕಾನುಗ್ರಹಾರ್ಥವಾಗಿ ಆ ಚಿತ್ರಕೂಟಪರ್ವತದಲ್ಲಿಯೇ ಸಂತೋಷದಿಂದ ವಾಸಮಾಡಿಕೊಂಡಿದ್ದನು. ಈಗಲೂ ಕೂಡ ಆ ಚಿತ್ರಕೂಟಪರ್ವತದ ಶಿಖರದಲ್ಲಿ ಶ್ರೀರಾಮನು ಸೀತಾ-ಲಕ್ಷ್ಮಣಸಹಿತನಾಗಿ ತನ್ನ ಭಕ್ತರಿಗೆ ದರ್ಶನ ಮಾತ್ರದಿಂದ ಭುಕ್ತಿ-ಮುಕ್ತಿಗಳನ್ನು ದಯಪಾಲಿಸುತ್ತಾ ಸುಖವಾಗಿ ವಾಸ ಮಾಡಿಕೊಂಡಿರುವನು."

ಪಾರ್ವತಿಯು ಹೇಳುತ್ತಾಳೆ :

ಮನ್ನಾಥ ಕರುಣಾಸಿನ್ಧೋ ರಾಮವ್ಯತ್ಯಸ್ತನಾಮತಃ ।
ನೀಚೋಽಪಿ ಮುಕ್ತತಾಂ ಪ್ರಾಪ್ತಃ ಕಥಂ ತದ್ಬ್ರೂಹಿ ಶಙ್ಕರ ॥೩೦॥

"ನನ್ನೊಡೆಯನೇ! ಕರುಣಾಸಾಗರನೇ! ಶಂಕರನೇ! ಶ್ರೀರಾಮನ ನಾಮವನ್ನು ವ್ಯತ್ಯಸ್ತವಾಗಿ ಜಪಿಸಿ ನೀಚನೂ ಮುಕ್ತಿಹೊಂದಿದನೆಂಬುವುದು ಹೇಗೆ? ದಯಮಾಡಿ ಹೇಳು.

ವಾಲ್ಮೀಕಿಯು ಪೂರ್ವದಲ್ಲಿ ಯಾರಾಗಿದ್ದನು?–ಎಂಬುದನ್ನು ವಿಶೇಷ ವಾಗಿ ಹೇಳು. ಶ್ರೀರಾಮಕಥೆಯೆಂಬ ಅಮೃತವನ್ನು ಪಾನಮಾಡುವ ವಿಷಯದಲ್ಲಿ ನನಗೆ ಎಷ್ಟಾದರೂ ತೃಪ್ತಿಯುಂಟಾಗುವುದಿಲ್ಲ."

ಈಶ್ವರನು ಹೇಳುತ್ತಾನೆ :

"ಸುರಾಧೀಶಳೇ! ನೀನು ಚೆನ್ನಾಗಿ ಪ್ರಶ್ನೆಮಾಡಿದೆ. ನಿನಗೆ ಶ್ರೀರಾಮನ ಕಥೆಯು ಅತಿಪ್ರಿಯವಾದುದು. ಸಕಲಪಾಪಗಳನ್ನೂ ನಾಶಮಾಡತಕ್ಕ ಆ ಶ್ರೀರಾಮನ ಕಥೆಯನ್ನು ಈಗ ನಾನು ನಿನಗೆ ಹೇಳುವೆನು. ಸಾವಧಾನ ಚಿತ್ತಳಾಗಿ ಕೇಳು.

ಬೇಡರ ವಂಶದಲ್ಲಿ ಹುಟ್ಟಿದ್ದ ವಾಲ್ಮೀಕಿಮಹರ್ಷಿಯ ಪೂರ್ವ ವೃತ್ತಾಂತವನ್ನು ಪ್ರಾಜ್ಞರು ಹೀಗೆ ಹೇಳುತ್ತಾರೆ.

ಹಿಂದೊಮ್ಮೆ ಭೂಮಂಡಲದಲ್ಲಿ ಹನ್ನೆರಡು ವರ್ಷಗಳ ಕಾಲ ಅನಾ ವೃಷ್ಟಿಯುಂಟಾಯಿತು. ಆಗ ಸಮಸ್ತವಾದ ಓಷಧಿಗಳೂ ಎಲ್ಲ ಕಡೆ ಯಲ್ಲಿಯೂ ಕ್ಷಯಿಸಿಹೋಗಿರಲಾಗಿ, ಜಗತ್ತೆಲ್ಲವೂ ಜೀವನರಹಿತವಾಗಲು, ಸಕಲಪ್ರಾಣಿಗಳಿಗೂ ಪ್ರಾಣಸಂಕಟವು ಒದಗಿಬರಲಾಗಿ ಮಹಾತೇಜಸ್ವಿಗಳಾದ ಸಪ್ತರ್ಷಿಗಳು ಹಿಮವತ್ಪರ್ವತಕ್ಕೆ ಹೋಗುತ್ತಿದ್ದರು. ಆಗ ಮಧ್ಯಮಾರ್ಗದಲ್ಲಿ ಗಹನವಾದೊಂದು ಅರಣ್ಯವು ಸಿಕ್ಕಿತು. ಅಲ್ಲಿ ಝಿಲ್ಲರಿಗಳೆಂಬ ಪಕ್ಷಿಗಳು ಧ್ವನಿಮಾಡುತ್ತಿದ್ದುವು. ಕಳ್ಳ-ಕಾಕರರಿಂದಲೂ ಆ ಅರಣ್ಯವು ವ್ಯಾಪ್ತ ವಾಗಿದ್ದಿತು. ಕಾಡಾನೆಗಳೂ, ಕರಡಿಗಳೂ, ಕೋತಿಗಳೂ, ಕ್ರೂರವಾದ ಮೃಗಗಳೂ, ಜಿಂಕೆಗಳೂ, ಹಂದಿಗಳೂ, ಸಾರಂಗಗಳೂ ಆ ಕಾಡಿನಲ್ಲಿ ತುಂಬಿದ್ದುವು. ದೇವಾಸುರರು ಕೂಡ ಆ ಅರಣ್ಯದೊಳಗೆ ಪ್ರವೇಶಿಸಲು ಅಸಮರ್ಥರಾಗಿದ್ದರು. ಅಂತಹ ಆ ಕಾಡಿನಲ್ಲಿ ಚೋರರಿಗೆ ಒಡೆಯನಾದ, ಅತ್ಯಂತಪ್ರಭಾವಶಾಲಿಯಾದ, ಕಳ್ಳತನದ ಮಾರ್ಗವನ್ನು ಚೆನ್ನಾಗಿ ತಿಳಿದು ಕೊಂಡಿದ್ದ, ತನ್ನ ಕರ್ಮದಲ್ಲಿ ಏಕಾಗ್ರಚಿತ್ತನಾಗಿದ್ದ, ನಿರ್ಭಯನಾಗಿಯೂ, ಅತಿಕ್ರೂರನಾಗಿಯೂ, ಕಠಿನವಾದ ಆಶಯವುಳ್ಳವನಾಗಿಯೂ ಇದ್ದ ಒಬ್ಬ ಬೇಡರವನಿದ್ದನು. ಅವನು ಅತ್ಯಂತ ನಿರ್ದಯನಾಗಿದ್ದನು. ಧರ್ಮರಹಿತ ನಾಗಿದ್ದನು. ಪ್ರಾಣಿಗಳನ್ನು ಹಿಂಸೆಮಾಡುವುದರಲ್ಲಿಯೂ ಕೊಲ್ಲುವುದ

ರಲ್ಲಿಯೂ ತತ್ಪರನಾಗಿದ್ದನು. ದೀರ್ಘಕಾಯನೂ ದೀರ್ಘಬಾಹುವೂ ಆಗಿದ್ದನು. ಚೋರರಿಗೆ ಉಚಿತವಾದ ವೇಷವನ್ನು ಧರಿಸಿದ್ದನು. ಕಿವಿಯ ವರೆಗೂ ಬಾಣವನ್ನು ಸೆಳೆದಿದ್ದು ಮೆಲ್ಲ-ಮೆಲ್ಲನೆ ಪೊದೆಗಳ ಅಂಚಿನಲ್ಲಿ ಹೆಜ್ಜೆಯಿಡುತ್ತಾ ಆ ಬೇಡನು ಸಾಕ್ಷಾತ್ ಮೃತ್ಯುದೇವತೆಯೋಪಾದಿಯಲ್ಲಿ ಅಲ್ಲಿಗೆ ಆಗಮಿಸಿದನು. ಅಲ್ಲವನು ಪ್ರಕಾಶಮಾನವಾದ ಶರೀರಗಳನ್ನು ಹೊಂದಿದ್ದ, ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ, ಜಪಮಾಲಿಕೆಗಳನ್ನು ಕೈಗಳಲ್ಲಿ ಹಿಡಿದಿದ್ದ, ಮಹಾಭಾಗ್ಯ ಶಾಲಿಗಳಾದ ಸಪ್ತರ್ಷಿಗಳನ್ನು ನೋಡಿದನು. ಮಹಾಭಾಗ್ಯಶಾಲಿಗಳಾಗಿದ್ದ ಆ ಮುನಿಗಳನ್ನು ಕಂಡು ಬೇಡನಿಗೆ ಮಹಾನಂದವಾಯಿತು.

ಅದ್ಯೈತಾನ್ವಿಪ್ರವೇಷಸ್ಥಾನ್ಮಹಾದ್ರವ್ಯಾಪಹಾರಿಣಃ ।
ಮಮಚಾಪಚ್ಯುತೈರ್ಬಾಣೈರ್ಹನಿಷ್ಯೇ ನೇಹ ಸಂಶಯಃ ॥೪೩॥

"ಬ್ರಾಹ್ಮಣರ ವೇಷವನ್ನು ಧರಿಸಿ ಧನವನ್ನು ಅಪಹರಿಸಿಕೊಂಡು ಹೋಗುತ್ತಿರುವ ಇವರನ್ನೀಗಲೇ ನಾನು ನನ್ನ ಧನುಸ್ಸಿನಿಂದ ಚ್ಯುತವಾಗುವ ಬಾಣಗಳಿಂದ ಸಂಹರಿಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ದ್ರವ್ಯಂ ಬಹುಸುಲಭಂ ಮೇ ಕುಟುಮ್ಬಭರಣಕ್ಷಮಮ್ ।

ನನ್ನ ಸಂಸಾರವನ್ನು ಕಾಪಾಡಲು ಸಾಕಾಗುವ ಅಪಾರದ್ರವ್ಯವು ಈಗ ನನಗೆ ಸುಲಭವಾಗಿ ಸಿಕ್ಕಿಬಿಟ್ಟಿದೆ."

ಹೀಗೆ ಯೋಚಿಸಿ ಬೇಡನು ಸಪ್ತರ್ಷಿಗಳಿಗೆ ಎದುರಾಗಿ ಹೋದನು. ಮಹಾಭಾಗ್ಯಶಾಲಿಗಳಾದ ಸಪ್ತರ್ಷಿಗಳು ಹಠಾತ್ತಾಗಿ ತಾವು ಹೋಗುತ್ತಿದ್ದ ಹಾದಿಯನ್ನು ನಿರೋಧಿಸಿ ನಿಂತ ಲೋಕಪೀಡಕನಾದ ಯಮರಾಜನಂತೆಯೇ ಕಾಣುತ್ತಿದ್ದ ಬೇಡನನ್ನು ನೋಡಿ ಮುಂದೇನು ಮಾಡಬೇಕೆಂಬುದರ ವಿಷಯ ವಾಗಿ ತಮ್ಮ-ತಮ್ಮಲ್ಲಿಯೇ ಮಾತನಾಡಿಕೊಂಡರು.

ಕಿಮತ್ರ ಕರಣೀಯಂ ನಃ ಚೋರೋಽಯಂ ಸಮುಪಾಗತಃ ॥೪೬॥

"ಕಳ್ಳನೀಗ ನಮಗೆದುರಾಗಿ ಬಂದುಬಿಟ್ಟಿದ್ದಾನೆ. ಈಗ ನಾವೇನು ಮಾಡೋಣ?"

ಹೀಗೆ ಮಾತನಾಡಿಕೊಳ್ಳುತ್ತಿದ್ದ ಆ ಮಹರ್ಷಿಗಳನ್ನು ನೋಡಿ ಶಠ

ನಾದ ಮತ್ತು ಕ್ರೂರಿಯಾದ ಆ ಬೇಡನು 'ಛಿನ್ದಿ-ಭಿನ್ದಿ-ಕತ್ತರಿಸಿಹಾಕು-ಒಡೆದುಹಾಕು'–ಮುಂತಾಗಿ ಪ್ರಾಕೃತವಾದ ಶಬ್ದಗಳನ್ನು ಗುಡುಗುತ್ತಾ ಮುನಿಗಳನ್ನು ಸಂಹರಿಸುವ ಸಲುವಾಗಿ ಅವರ ಸಮೀಪಕ್ಕೆ ಧಾವಿಸಿದನು. ಮಹಾಭಯಂಕರನಾದ ಆ ಬೇಡನನ್ನು ನೋಡಿ ಮುನಿಗಳ ಮನಸ್ಸಿನಲ್ಲಿಯೂ ನಡುಕವುಂಟಾಯಿತು. ಆದರೂ ಧೈರ್ಯತಂದುಕೊಂಡು ಸಮಾಧಾನದ ಮಾತನ್ನು ಉದ್ಗರಿಸಿದರು.

ನ ಹ್ಯಾಪದಿ ವಿಮುಹ್ಯನ್ತೇ ಕುಶಲಾ ಬುದ್ಧಿಜೀವಿನಃ ।
ಯೇನಕೇನಾಪ್ಯುಪಾಯೇನ ಪ್ರತರನ್ತಿ ಮನೀಷಿಣಃ ॥೬೯॥

"ಕುಶಲರಾದ ಬುದ್ಧಿಜೀವಿಗಳಾದ ವಿದ್ವಾಂಸರು ಆಪತ್ಕಾಲದಲ್ಲಿ ವಿಮೋಹಗೊಳ್ಳುವುದಿಲ್ಲ. ಯಾವುದಾದರೂ ಒಂದು ಉಪಾಯದಿಂದ ಒದಗಿರುವ ಆಪತ್ತಿನಿಂದ ಪಾರಾಗುತ್ತಾರೆ."

ಹೀಗೆ ಯೋಚಿಸಿ ಆ ಬೇಡನು ಕೇಳಿಸಿಕೊಳ್ಳುವಂತೆಯೇ ವೈರಾಗ್ಯ ಸಹಿತವಾದ ಈ ಮಾತುಗಳನ್ನು ಅವನಿಗೆ ವೈರಾಗ್ಯವನ್ನು ಬೋಧಿಸುವ ಸಲುವಾಗಿ ಹೇಳತೊಡಗಿದರು :

ಸ್ವಲ್ಪಮಪ್ಯಾಪದಂ ಪ್ರಾಪ್ಯ ನೀಚಾಃ ಪರಿಭವನ್ತಿ ಹಿ ।
ಪದ್ಮಪತ್ರಸ್ಥಜಲವಜ್ಜೀವಿತಂ ಚಞ್ಚಲಂ ಸ್ಮೃತಮ್ ॥೭೦॥

"ನೀಚರಾದವರು ಅಲ್ಪವಾದ ಆಪತ್ತು ಒದಗಿಬಂದರೂ ಉತ್ಸಾಹ ಹೀನರಾಗಿಬಿಡುತ್ತಾರೆ. ಜೀವಿತವು ಕಮಲದ ಎಲೆಯ ಮೇಲಿರುವ ನೀರಿನ ತೊಟ್ಟಿನಂತೆ ಅತಿಚಂಚಲವಾದುದು.

ತಾದೃಶಂ ಚ ಶರೀರಂ ಜಲಬುದ್ಬುದಸನ್ನಿಭಮ್ ।
ಭೋಗಾಶ್ಚ ವಿವಿಧಾಕಾರಾಃ ದೃಶ್ಯನ್ತೇ ವೈದ್ಯುತೋಪಮಾಃ ॥೭೧॥

ಶರೀರವೂ ಹಾಗೆಯೇ ನೀರಿನ ಗುಳ್ಳೆಗೆ ಸಮಾನವಾದುದು. ನಾನಾ ವಿಧವಾದ ಭೋಗಗಳೂ ಮಿಂಚಿನ ಹೊಳಪಿನಂತೆ ಕ್ಷಣಕಾಲಮಾತ್ರ ತೋರಿ ಮರೆಯಾಗುತ್ತವೆ.

ಅಭ್ರಚ್ಛಾಯಾಃ ಶ್ರಿಯಃ ಸರ್ವಾಃ ಚಞ್ಚಲಾಶ್ಚ ಕ್ಷಯಿಷ್ಣವಃ ।
ಯೌವನಂ ಗತ್ವರಂ ಶೀಘ್ರಂ ಆಯುಶ್ಚಾತೀವ ಚಞ್ಚಲಮ್ ॥೭೨॥

ಸಕಲವಿಧವಾದ ಸಂಪತ್ತುಗಳೂ ಮೇಘದ ನೆರಳಿನಂತೆ ಕ್ಷಣಕಾಲ ಮಾತ್ರ ಕಾಣಿಸಿಕೊಂಡು ಹೊರಟುಹೋಗತಕ್ಕುವುಗಳು. ವಿನಾಶವಾಗ ತಕ್ಕುವುಗಳು. ಯೌವನವೂ ಬೇಗ ಕಳೆದುಹೋಗುತ್ತದೆ. ಆಯುಷ್ಯವೂ ಅತಿಚಂಚಲವಾದುದು.

ಶರೀರಂ ಜರ್ಝರಂ ದುಷ್ಟಂ ತಾಪತ್ರಯವಿದೂಷಿತಮ್ ।
ಶೋಕದಂ ದುಃಖದಂ ಕ್ರೂರಂ ಪಾತ್ರಂ ಮೂತ್ರಪುರೀಷಯೋಃ ॥೫೪॥

ಅಸ್ಥಿಸ್ತಮ್ಭಂ ಸ್ನಾಯುಬದ್ಧಂ ಮಾಂಸಕ್ಷತಜಲೇಪನಮ್ ।
ಚರ್ಮಾವನದ್ಧಂ ದುರ್ಗನ್ಧಿ ಶೋಕಮನ್ದಿರಮಾತುರಮ್ ॥೫೫॥

ಅಶುಚಿಸ್ರಾವಿ ಸಚ್ಛಿದ್ರಂ ಪಿತ್ತಶ್ಲೇಷ್ಮವಿದೂಷಿತಮ್ ।
ಅಧರ್ಮಂ ಚರತಾಂ ನೂನಂ ಪರಲೋಕೋ ಹಿ ಭಜ್ಯತೇ ॥೫೬॥

ಪರಲೋಕವಿಹೀನಾನಾಂ ನರಕೇ ನಿಯತಾ ಸ್ಥಿತಿಃ ।
ನರಕಾನುಭವಾದನ್ಯತ್ಕಿಮಶ್ರೇಯೋ ಭವೇನ್ನೃಣಾಮ್ ॥೫೭॥

ಶರೀರವೆಂಬುದು ಎಂದಿಗಾದರೂ ಜರ್ಝರಿತವಾಗಿ (ಗಳಿತವಾಗಿ) ಹೋಗತಕ್ಕುದು. ಅತಿದುಷ್ಟವಾದುದು. ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿ ಭೌತಿಕಗಳೆಂಬ ಮೂರು ವಿಧವಾದ ತಾಪತ್ರಯಗಳಿಂದ ದೂಷಿತವಾದುದು. ಒಳಗಿರುವ ಜೀವನಿಗೆ ಶೋಕ-ದುಃಖಪ್ರದವಾದುದು. ಅತಿಕ್ರೂರವಾದುದು. ಮಲ-ಮೂತ್ರಗಳಿಗೆ ಪಾತ್ರವಾಗಿರತಕ್ಕುದು. ಮೂಳೆಗಳೇ ಈ ಶರೀರದ ಸ್ತಂಭದ ರೂಪದಲ್ಲಿವೆ. ನರಗಳಿಂದ ಈ ಶರೀರವು ನಿಬದ್ಧವಾಗಿದೆ. ರಕ್ತ-ಮಾಂಸಗಳಿಂದ ಲೇಪಿತವಾಗಿದೆ. (ತುಂಬಿಹೋಗಿದೆ.) ಮೇಲೆ ಚರ್ಮದ ಹೊದ್ದಿಕೆಯಿರುವುದರಿಂದ ಒಳಗಿನ ಹೊಲಸು ಕಾಣುತ್ತಿಲ್ಲ. ಆದರೂ ಬೆವರಿನ ದುರ್ಗಂಧವು ಹೊರಸೂಸುತ್ತಿರುತ್ತದೆ. ಶರೀರವು ಶೋಕ-ದುಃಖ ಗಳಿಗೆ ತವರುಮನೆ ಇದ್ದಂತೆ. ಜೀವನಪೂರ್ತಿಯಾಗಿ ಯಾವುದಾದರೂ ರೋಗದಿಂದ ಗ್ರಸ್ತವಾಗಿರುತ್ತದೆ. ಅಶುಚಿಯಾದ ಮಲ-ಮೂತ್ರಗಳನ್ನು ಸುರಿಸುತ್ತಲೇ ಇರುತ್ತದೆ. ಈ ಶರೀರವು ಅನೇಕ ಒಡಕುಗಳಿಂದ ಕೂಡಿದೆ. ಪಿತ್ತದಿಂದಲೂ ಶ್ಲೇಷ್ಮದಿಂದಲೂ ದೂಷಿತವಾಗಿದೆ. ಇಂತಹ ಶರೀರದ ಪೋಷಣೆಗಾಗಿ ಅಧರ್ಮವನ್ನು ಆಚರಿಸುವವರ ಪರಲೋಕವು ಭಗ್ನವಾಗಿ

ಹೋಗುತ್ತದೆ. ಪರಲೋಕದಿಂದ ವಂಚಿತರಾದವರು ನರಕದಲ್ಲಿಯೇ ನಿರಂತರವಾಗಿ ಉಳಿಯಬೇಕಾಗುತ್ತದೆ. ಮನುಷ್ಯನಾದವನಿಗೆ ನರಕವಾಸಕ್ಕಿಂತಲೂ ಮಿಗಿಲಾದ ಅಶ್ರೇಯಸ್ಸು ಬೇರೆ ಯಾವುದು ತಾನೇ ಇದೆ?

ಬ್ರಾಹ್ಮಣದ್ರವ್ಯಹರಣಾದ್ಬ್ರಾಹ್ಮಣಾನಾಂ ವಿಹಿಂಸನಾತ್ ।
ಬ್ರಾಹ್ಮಣಕ್ಷೋಭಕರಣಾತ್ಕಿಮನ್ಯತ್ಪಾತಕಂ ನೃಣಾಮ್ ॥೫೮॥

ಮನುಷ್ಯನಾದವನಿಗೆ ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದಕ್ಕಿಂತಲೂ, ಬ್ರಾಹ್ಮಣರನ್ನು ಹಿಂಸಿಸುವುದಕ್ಕಿಂತಲೂ ಮತ್ತು ಬ್ರಾಹ್ಮಣರನ್ನು ಕ್ಷೋಭೆಗೊಳಿಸುವುದಕ್ಕಿಂತಲೂ ಮಿಗಿಲಾದ ಪಾಪವು ಬೇರೆ ಯಾವುದು ತಾನೇ ಇದೆ?

ಬ್ರಹ್ಮಹತ್ಯಾಸುರಾಪಾನಸ್ತೇಯ ಗುರ್ವಙ್ಗನಾಗಮಃ ।
ವಿಪ್ರವಿತ್ತಾಪಹರಣಾತ್ಕಲಾಂ ನಾರ್ಹನ್ತಿ ಷೋಡಶೀಮ್ ॥೫೯॥

ಬ್ರಹ್ಮಹತ್ಯೆಯಾಗಲೀ, ಸುರಾಪಾನವಾಗಲೀ, ಕಳ್ಳತನವಾಗಲೀ, ಗುರುಪತ್ನೀಸಮಾಗಮವಾಗಲೀ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ಪಾಪಕ್ಕೆ ತುಲನೆಮಾಡಿದರೆ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ಪಾಪದ ಹದಿನಾರನೆಯ ಒಂದಂಶವೂ ಆಗಲಾರದು. ಬ್ರಾಹ್ಮಣನ ಸ್ವತ್ತನ್ನು ಅಪಹರಿ ಸಿದ ಪಾಪವು ಬ್ರಹ್ಮಹತ್ಯಾ-ಸುರಾಪಾನಾದಿಗಳನ್ನು ಮಾಡುವುದರಿಂದ ಪ್ರಾಪ್ತವಾಗುವ ಪಾಪಕ್ಕಿಂತಲೂ ಅತ್ಯಧಿಕವಾದುದು.

ವಿಪ್ರವಿತ್ತಾಗ್ನಿಕೇನೋ ಹಿ ಧರ್ಮಪರ್ವತಮಾಲಿಕಾಮ್ ।
ಸಮೂಲಂ ಸ್ಪರ್ಶನಾದೇವ ಭಸ್ಮಶೇಷಂ ಕರಿಷ್ಯತಿ ॥೬೦॥

ಬ್ರಾಹ್ಮಣದ್ರವ್ಯಾಪಹಾರವೆಂಬ ಪಾಪರೂಪವಾದ ಅಗ್ನಿಯೊಂದೇ ಧರ್ಮರೂಪವಾದ ಪರ್ವತವನ್ನೂ ಸ್ಪರ್ಶಮಾತ್ರದಿಂದಲೇ ಬುಡಸಹಿತವಾಗಿ ಸುಟ್ಟುಹಾಕುವುದು. ಬ್ರಾಹ್ಮಣನ ದ್ರವ್ಯಾಪಹಾರದಿಂದ ಪ್ರಾಪ್ತವಾಗುವ ಪಾಪವು ಅಪಾರವಾದ ಧರ್ಮ-ಕರ್ಮಗಳ ಫಲವನ್ನೂ ನಾಶಗೊಳಿಸುತ್ತದೆ."

ಹೀಗೆ ಆ ಸಪ್ತರ್ಷಿಗಳು ಬೇಡನಿಗೆ ಕೇಳಿಸುವಂತೆ ಈ ಮಾತುಗಳನ್ನು ಹೇಳಿ ಅನಂತರ ಅವನನ್ನೇ ಹತ್ತಿರಕ್ಕೆ ಕರೆದು ಅವನಿಗೆ ಹೇಳಿದರು :

ತ್ವಯಾ ಪರಿಜನಸ್ಯಾರ್ಥೇ ಕ್ರಿಯತೇ ಪಾಪಮನ್ವಹಮ್ ।
ತಮಾಮನ್ತ್ರ್ಯ ತತ್ಪಾಪಭಾಕ್ತ್ವಂ ತಸ್ಯಾಸ್ತಿ ವಾ ನ ವಾ ॥೬೧॥

"ವ್ಯಾಧ! ನೀನು ನಿನ್ನ ಪರಿಜನರ ಸಲುವಾಗಿ ಪ್ರತಿನಿತ್ಯವೂ ಪಾಪ ಕರ್ಮಗಳನ್ನು ಮಾಡುತ್ತಲೇ ಇರುವೆ. ನೀನು ಪಾಪಕರ್ಮದ ಮೂಲಕವಾಗಿ ಸಂಗ್ರಹಿಸಿದ ಧನಕ್ಕೆ ಪಾಲುದಾರರಾಗುವಂತೆ ನೀನು ಮಾಡುತ್ತಿರುವ ಪಾಪಕ್ಕೂ ನಿನ್ನ ಪರಿಜನರು ಪಾಲುದಾರರಾಗುತ್ತಾರೆಯೇ ಎಂಬುದನ್ನು ಅವರಿಂದಲೇ ಕೇಳಿ ತಿಳಿದುಕೊಂಡು ಬಾ."

ಮಹರ್ಷಿಗಳ ಈ ಮಾತನ್ನು ಕೇಳಿ ಕ್ರೂರನಾಗಿದ್ದ ಬೇಡನೂ ಅಕ್ರೂರ ನಾದನು. ಧರ್ಮೋಪದೇಶಶ್ರವಣದಿಂದ ಮೃದುತ್ವವನ್ನು ಹೊಂದಿದನು.

ಮಹತಾಂ ಸನ್ನಿಧಾನಂ ಹಿ ಮೃದುತ್ವಸ್ಯಾಸ್ಯಕಾರಣಮ್ ।
ಹೇತುಸ್ತತ್ಸನ್ನಿಧಾನಸ್ಯ ಪ್ರಾಗ್ಜನ್ಮಸುಕೃತಂ ಪರಮ್ ॥೬೪॥

ಮಹಾತ್ಮರ ಸಾನ್ನಿಧ್ಯವೇ ಈ ಮೃದುತ್ವಕ್ಕೆ ಕಾರಣವು. ಹಿಂದೆ ಮಾಡಿದ ಸುಕೃತವೇ ಮಹಾತ್ಮರ ಸಾನ್ನಿಧ್ಯವು ಸಿಕ್ಕಲು ಕಾರಣವಾಯಿತು.

ಅಸಾರೇ ದಗ್ಧಸಂಸಾರೇ ಸಾರಮೇತಚ್ಚತುಷ್ಟಯಮ್ ।
ಗಙ್ಗಾ ಚ ತುಲಸೀಸೇವಾ ಸತ್ಸಙ್ಗೋ ಹರಿಕೀರ್ತನಮ್ ॥೬೫॥

ಕೇವಲ ನಿಸ್ಸಾರವಾಗಿರುವ ಈ ಸಂಸಾರದಲ್ಲಿ ಗಂಗಾನದಿ, ತುಲಸೀ ಸೇವೆ, ಸತ್ಸಹವಾಸ, ಭಗವನ್ನಾಮಸಂಕೀರ್ತನೆ—ಈ ನಾಲ್ಕೇ ಸಾರಭೂತ ವಾದುವುಗಳು.

ಸಙ್ಗಪ್ರಕರ್ಷಾತ್ಖಲು ದೌಷ್ಟ್ಯನಾಶಃ
ತದ್ದೌಷ್ಟ್ಯನಾಶಾತ್ಖಲು ಚಿತ್ತಶುದ್ಧಿಃ ।
ತಚ್ಚಿತ್ತಶುದ್ಧೇಃ ಖಲು ಪುಣ್ಯಕರ್ಮ
ಸಾ ಪುಣ್ಯಕರ್ಮಾ ಸುಖಮೇತಿ ನಾಕಮ್ ॥೬೬॥

ಹೀಗೆ ಸಾಧುಗಳ ಸಹವಾಸದಿಂದ ದುಷ್ಟತೆಯ ನಾಶವಾಗುವುದು. ದೌಷ್ಟ್ಯದ ನಾಶದಿಂದ ಚಿತ್ತಶುದ್ಧಿಯುಂಟಾಗುವುದು. ಚಿತ್ತಶುದ್ಧಿಯಿಂದ ಪುಣ್ಯಕರ್ಮಗಳನ್ನು ಮಾಡಲು ಪ್ರೇರಣೆಯು ಸಿಕ್ಕುವುದು. ಪುಣ್ಯಕರ್ಮಗಳನ್ನು ಮಾಡಿದವನು ಸುಖವಾಗಿ ಸ್ವರ್ಗಕ್ಕೆ ಹೋಗುತ್ತಾನೆ.

೨೨ನೆಯ ಸರ್ಗವು ಮುಗಿಯಿತು.

ಬೇಡನ ಪಾಪವನ್ನು ಹಂಚಿಕೊಳ್ಳಲು ಪತ್ನೀ-ಪುತ್ರರ ನಿರಾಕರಣೆ

ಈಶ್ವರನು ಹೇಳುತ್ತಾನೆ :

ಇತ್ಥಂ ಧರ್ಮೇಣ ಮಾರ್ಗೇಣ ಬೋಧಿತಶ್ಚೋರಪುಙ್ಗವಃ ।
ಋಷೀನ್ನತ್ವಾ ಪ್ರಕರ್ಷೇಣ ಬಭಾಷೇ ವಚನಂ ಶುಭಮ್ ॥೧॥

ಹೀಗೆ ಧರ್ಮಯುಕ್ತವಾದ ಮಾರ್ಗದಿಂದ ಎಚ್ಚರಗೊಳಿಸಲ್ಪಟ್ಟ ಆ ಚೋರರಾಜನು ಆ ಸಪ್ತರ್ಷಿಗಳಿಗೂ ನಮಸ್ಕಾರಮಾಡಿ ಶುಭಕರವಾದ ಈ ಮಾತನ್ನು ಹೇಳಿದನು :

"ಮುನಿಶ್ರೇಷ್ಠರೇ! ನಿಮ್ಮ ಅಭಿಪ್ರಾಯದಂತೆ ನಾನೀಗಲೇ ನನ್ನ ಮನೆಗೆ ಹೋಗಿ ನನ್ನ ಪತ್ನೀ-ಪುತ್ರರೊಡನೆ ಹೀಗೆ ಹೇಳುವೆನು :

ಮಯಾ ತು ಭವತಾಮರ್ಥೇ ಕ್ರಿಯತೇ ಪಾಪಮುಲ್ಬಣಮ್ ।
ತದ್ಭಾಗಹಾರಿಣೋ ಯೂಯಂ ನ ವಾ ಶೀಘ್ರಮಿಹೋಚ್ಯತಾಮ್ ॥

'ನಾನು ನಿಮ್ಮ ಸಲುವಾಗಿ (ನಿಮ್ಮ ಭರಣ-ಪೋಷಣಾರ್ಥವಾಗಿ) ಅತ್ಯಧಿಕವಾದ ಪಾಪವನ್ನು ಮಾಡುತ್ತಿರುವೆನು. ಈ ಪಾಪದಲ್ಲಿ ನೀವು ಭಾಗಿಗಳಾಗುವಿರೋ–ಇಲ್ಲವೋ ಬೇಗ ಹೇಳಿರಿ.'

ಈ ನನ್ನ ಪ್ರಶ್ನೆಗೆ ಅವರೇನು ಹೇಳುವರೆಂಬುದನ್ನು ಕೇಳಿಕೊಂಡು ಪುನಃ ನಿಮ್ಮ ಬಳಿಗೆ ಬರುವೆನು. ಅಲ್ಲಿಯವರೆಗೂ ನೀವು ಇಲ್ಲಿಯೇ ಇರಬೇಕು. ನಾನು ಬರುವವರೆಗೂ ನೀವು ಇಲ್ಲಿಯೇ ಇರುವಿರೆಂಬುದಕ್ಕೆ ಪ್ರಮಾಣವೇನು? ನಿಮಗೆ ನಿಮ್ಮ ಪ್ರಾಣಗಳ ಮೇಲೆ ಪ್ರೀತಿಯಿದ್ದಲ್ಲಿ ಇಲ್ಲಿಂದ ನೀವು ಒಂದು ಹೆಜ್ಜೆಯನ್ನೂ ಮುಂದಿಡಬಾರದು. ನೀವು ಬ್ರಾಹ್ಮಣರಾಗಿರುವುದರಿಂದ ನನಗೆ ನಿಮ್ಮ ವಿಷಯದಲ್ಲಿ ಸಂದೇಹವಿಲ್ಲ. ಆದರೂ ನೀವದನ್ನು ಪ್ರಮಾಣೀಕರಿಸಿ ಹೇಳಬೇಕು."

ಬೇಡನು ಹೀಗೆ ಹೇಳಲು ಅವನಿಗೆ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ ಏಳುಮಂದಿ ಋಷಿಪುಂಗವರೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಪ್ರಮಾಣೀಕರಿಸಿ ಹೇಳಿದರು :

ಮೊದಲು ವಸಿಷ್ಠರು ಹೇಳುತ್ತಾರೆ :

ಸಪ್ತಾಹಂ ಪ್ರಾತರಸ್ನಾತುಃ ಯಾವದ್ಭವತಿ ಪಾತಕಮ್ ।
ತಾವದ್ಭವತು ಮೇ ಪಾಪಂ ಯದ್ಯುತ್ಸೃಜ್ಯ ವ್ರಜೇ ಪರಮ್ ॥೬॥

"ವ್ಯಾಧನೇ! ನಾನು ಈ ಸ್ಥಳವನ್ನು ಬಿಟ್ಟು ಒಂದು ಹೆಜ್ಜೆ ಮುಂದೆ ಹೋದರೂ ಏಳು ದಿವಸಗಳು ಪ್ರಾತಃಸ್ನಾನವನ್ನು ಮಾಡದೇ ಇರುವವನಿಗೆ ಯಾವ ಪಾಪವು ಸಂಘಟಿಸುವುದೋ ಅಂತಹ ಪಾಪವು ನನಗೆ ಸಂಘಟಿಸಲಿ."

ವಿಶ್ವಾಮಿತ್ರರು ಹೇಳುತ್ತಾರೆ :

ಏಕಮಾಪೋದಕಂ ಪೀತ್ವಾ ಶೂದ್ರಗ್ರಾಮನಿವಾಸಿನಃ ।
ವಿಪ್ರಸ್ಯ ಪಾತಕಂ ಯಾವತ್ತಾವನ್ಮೇಽಸ್ತು ಗತೇ ಮಯಾ ॥೭॥

"ನಾನೇನಾದರೂ ಇಲ್ಲಿಂದ ಹೊರಟೆನಾದರೆ ಶೂದ್ರಗ್ರಾಮದಲ್ಲಿರುವ ಒಂದೇಬಾವಿಯ ನೀರನ್ನು ಕುಡಿದುಕೊಂಡು ಜೀವನನಿರ್ವಹಿಸುವ ಬ್ರಾಹ್ಮಣನಿಗೆ ಎಷ್ಟು ಪಾಪವು ಬರುವುದೋ ಅಷ್ಟು ಪಾಪವು ನನಗೆ ಪ್ರಾಪ್ತವಾಗಲಿ."

ಗೌತಮರು ಹೇಳುತ್ತಾರೆ :

ವೈಶ್ವದೇವಮಕೃತ್ವಾ ತು ಭುಙ್ಕ್ತೇ ಯಸ್ತು ದ್ವಿಜಾಧಮಃ ।
ತಸ್ಯ ವಿಪ್ರಸ್ಯ ಯತ್ಪಾಪಂ ತನ್ಮಮ ಸ್ಯಾತ್ಪರಂ ಗತೇ ॥೮॥

"ನಾನೇನಾದರೂ ಇಲ್ಲಿಂದ ಒಂದು ಹೆಜ್ಜೆ ಮುಂದಿಟ್ಟೆನಾದರೆ ವೈಶ್ವದೇವವನ್ನು ಮಾಡದೇ ಭೋಜನಮಾಡುವ ಬ್ರಾಹ್ಮಣನಿಗೆ ಯಾವ ಪಾಪವು ಬರುವುದೋ ಅಂತಹ ಪಾಪವು ನನಗೂ ಪ್ರಾಪ್ತವಾಗಲಿ."

ಜಮದಗ್ನಿಗಳು ಹೇಳುತ್ತಾರೆ :

ಶ್ರೋತ್ರಿಯಂ ವೃತ್ತಿಹೀನಂ ತು ಸೀದನ್ತಂ ವ್ರತಕರ್ಶಿತಮ್ ।
ದೃಷ್ಟ್ವೋಪೇಕ್ಷೇತ ಯಃ ಸ್ವಾಮೀ ತತ್ಪಾಪಂ ಮೇ ಪದಂ ಗತೇ ॥೯॥

"ನಾನೇನಾದರೂ ಇಲ್ಲಿಂದ ಒಂದು ಹೆಜ್ಜೆ ಮುಂದಿಟ್ಟೆನಾದರೆ ಶ್ರೋತ್ರಿಯನಾಗಿಯೂ ವ್ರತನಿಷ್ಠನಾಗಿಯೂ ಇರುವವನು ಜೀವನಕ್ಕೆ ದಾರಿಯಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿಯೂ ಉಪೇಕ್ಷೆಮಾಡುವ ರಾಜನಿಗೆ

ಯಾವ ಪಾಪವು ಬರುವುದೋ ಅಂತಹುದೇ ಪಾಪವು ನನಗೂ ಪ್ರಾಪ್ತವಾಗಲಿ.”

ಭರದ್ವಾಜರು ಹೇಳುತ್ತಾರೆ :

ವಿಭವೇ ಸತಿ ಮೃಷ್ಟಾನ್ನಂ ಯೋ ಭುಙ್ಕ್ತೇಽಸಾಕ್ಷಿಕಂ ದ್ವಿಜಃ ।
ತಸ್ಯ ವಿಪ್ರಸ್ಯ ಯತ್ಪಾಪಂ ತನ್ಮಮಸ್ಯಾತ್ಪರಂ ಗತೇ ॥೧೦॥

“ನಾನು ಇಲ್ಲಿಂದ ಒಂದು ಹೆಜ್ಜೆಯನ್ನು ಮುಂದಿಟ್ಟುದೇ ಆದರೆ ದ್ರವ್ಯ ಸಂಪತ್ತಿಯಿದ್ದರೂ ಯಾವ ಬ್ರಾಹ್ಮಣನು ಯಾರೊಬ್ಬರಿಗೂ ಭೋಜನ ಮಾಡಿಸದೆ ಯಾರೊಬ್ಬರಿಗೂ ಕಾಣದಂತೆ ತಾನೊಬ್ಬನೇ ಮೃಷ್ಟಾನ್ನವನ್ನು ಭುಂಜಿಸುವನೋ ಅಂತಹವನಿಗೆ ಪ್ರಾಪ್ತವಾಗಬಹುದಾದ ಪಾಪವು ನನಗೂ ಪ್ರಾಪ್ತವಾಗಲಿ.”

ಕಶ್ಯಪರು ಹೇಳುತ್ತಾರೆ :

ಮಾತರಂ ಪಿತರಂ ಚಾಪಿ ಯೋ ನ ಸ್ಮರತಿ ದುಃಖಿತೌ ।
ಪ್ರತಿಕ್ಷಣಂ ಚ ಭವತಿ ತನ್ಮೇ ಭವತು ಪಾತಕಮ್ ॥೧೧॥

“ನಾನು ಇಲ್ಲಿಂದ ಒಂದು ಹೆಜ್ಜೆ ಮುಂದೆ ಹೋದೆನಾದರೆ ಯಾವ ಮನುಷ್ಯನು ದುಃಖಿಸುತ್ತಿರುವ ತನ್ನ ತಂದೆ-ತಾಯಿಗಳನ್ನು ಸ್ಮರಿಸುವುದಿಲ್ಲವೋ ಅಂತಹವನಿಗೆ ಪ್ರತಿಕ್ಷಣದಲ್ಲಿಯೂ ಪ್ರಾಪ್ತವಾಗುವ ಪಾಪವು ನನಗೂ ಪ್ರಾಪ್ತವಾಗಲಿ.”

ಅತ್ರಿಗಳು ಹೇಳುತ್ತಾರೆ :

ಸೂರ್ಯಸ್ಯಾಭಿಮುಖೋ ಯಸ್ತು ಮೇಹತೇ ಮೃದ್ವಿವರ್ಜಿತಃ ।
ತಸ್ಯ ವಿಪ್ರಸ್ಯ ಯತ್ಪಾಪಂ ತನ್ಮಮಾಸ್ತು ಪರಂ ಗತೇ ॥೧೨॥

“ನಾನು ಇಲ್ಲಿಂದ ಒಂದು ಹೆಜ್ಜೆಯನ್ನು ಮುಂದಿಟ್ಟುದೇ ಆದರೆ ಯಾವ ಬ್ರಾಹ್ಮಣನು ಸೂರ್ಯನಿಗೆ ಎದುರಾಗಿ ಕುಳಿತು ಮಲ-ಮೂತ್ರ ವಿಸರ್ಜನೆಯನ್ನು ಮಾಡುವನೋ ಮೃತ್ತಿಕಾಶೌಚರಹಿತನಾಗಿರುವನೋ ಅಂತಹವನಿಗೆ ಪ್ರಾಪ್ತವಾಗುವ ಪಾಪವು ನನಗೂ ಪ್ರಾಪ್ತವಾಗಲಿ.”

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

"ಪಾರ್ವತಿ! ಹೀಗೆ ಹೇಳಿದ ಸಪ್ತರ್ಷಿಗಳ ಮಾತನ್ನು ಕೇಳಿ ಕ್ರೂರಿ ಯಾದ ಆ ವ್ಯಾಧನು ಅವರ ಮಾತಿನಲ್ಲಿ ವಿಶ್ವಾಸವನ್ನಿಟ್ಟು ತನ್ನ ಊರಿಗೆ ಹೋದನು.

ಬೇಡನ ಆ ಊರು ಅತಿಭಯಂಕರವಾಗಿ ಧ್ವನಿಮಾಡುತ್ತಿರುವ ಘೋರ ರೂಪಿಗಳಾದ, ಅತಿದಾರುಣರಾದ, ತಮ್ಮ ಜಾತಿಗೆ ತಕ್ಕಂತೆ ಮಹಾಕ್ರೂರ ವಾದ ವೇಷ-ಭೂಷಣಗಳನ್ನು ತೊಟ್ಟಿದ್ದ, ಹೆದೆಯೇರಿಸಿದ ಬಿಲ್ಲುಗಳನ್ನು ಹಿಡಿದಿದ್ದ, ಪ್ರಾಣಿಗಳ ಪ್ರಾಣಗಳನ್ನು ಅಪಹರಿಸುವುದರಲ್ಲಿ ಆಸಕ್ತರಾಗಿದ್ದ ವ್ಯಾಧರಿಂದ ತುಂಬಿಹೋಗಿದ್ದಿತು. ಅವರ ದರ್ಶನಮಾತ್ರದಿಂದಲೇ ಹೇಡಿಗಳ ಎದೆಯು ಒಡೆದುಹೋಗುತ್ತಿದ್ದಿತು. ಆ ಊರು ಮೂಳೆಗಳನ್ನು ಜಗಿಯುತ್ತಿದ್ದ ಹಲವಾರು ನಾಯಿಗಳಿಂದ ವ್ಯಾಪ್ತವಾಗಿದ್ದಿತು. ಕಾಡುಹಂದಿಗಳೂ ಊರುಹಂದಿಗಳೂ ಅಲ್ಲಿ ಸ್ವೇಚ್ಛೆಯಿಂದ ಓಡಾಡುತ್ತಿದ್ದುವು.

ಅಲ್ಲಲ್ಲಿ ಬಿದ್ದಿರುತ್ತಿದ್ದ ಮಾಂಸದ ಚೂರುಗಳನ್ನು ತಿನ್ನುವುದಕ್ಕಾಗಿ ಹದ್ದುಗಳೂ ರಣಹದ್ದುಗಳೂ ಹಾರಾಡುತ್ತಿದ್ದುವು. ವ್ಯಾಧರು ಕಾಡಿನಿಂದ ಬೇಟೆಯಾಡಿ ತಂದ ಸಾವಿರಾರು ಮೃಗಗಳಿಂದ ಆ ಊರು ತುಂಬಿಹೋಗಿ ದ್ದಿತು. ರೆಕ್ಕೆ-ಪುಕ್ಕಗಳಿಲ್ಲದ ಪಕ್ಷಿಗಳಿಂದ ಆ ಊರಿನ ನೆಲವು ಮುಚ್ಚಿ ಹೋಗಿದ್ದಿತು. ರೆಕ್ಕೆ-ಪುಕ್ಕಗಳಿಂದ ವಿಹೀನವಾದ ಆ ಪಕ್ಷಿಗಳು ನೆಲದ ಮೇಲೆ ವಿಲಿ-ವಿಲಿಗುಟ್ಟುತ್ತಾ ಹೊರಳಾಡುತ್ತಿದ್ದುವು. 'ಛಿನ್ದಿ-ಭಿನ್ದಿ-ಕತ್ತರಿಸು, ಒಡೆದುಹಾಕು'–ಎಂಬ ಮಾತುಗಳೇ ಆ ಊರಿನಲ್ಲಿ ಸರ್ವತ್ರ ಕೇಳಿಬರುತ್ತಿ ದ್ದಿತು. 'ಕತ್ತರಿಸು. ಒಡೆದು ಹಾಕು'–ಎಂಬ ಶಬ್ದಗಳಿಗೆ ಆ ಊರು ತವರುಮನೆಯಾಗಿದ್ದಿತು. ಅಲ್ಲಿಯ ಆ ಭಯಂಕರದೃಶ್ಯವನ್ನು ನೋಡಿದರೆ ರೋಮಾಂಚನವಾಗುತ್ತಿದ್ದಿತು. ಕೆಲವೆಡೆಗಳಲ್ಲಿ ಮಾಂಸವು ರಾಶಿ-ರಾಶಿ ಯಾಗಿ ಬಿದ್ದಿದ್ದಿತು. ಕೆಲವು ಕಡೆಗಳಲ್ಲಿ ರೆಕ್ಕೆಗಳಿಲ್ಲದ ಪಕ್ಷಿಗಳ ರಾಶಿಯೇ ಇದ್ದಿತು. ಊರ ಮೇಲ್ಭಾಗದ ಆಕಾಶದಲ್ಲಿ ಮಾಂಸದ ಆಸೆಯಿಂದ ಹಲವಾರು ಪಕ್ಷಿಗಳು ಹಾರಾಡುತ್ತಿದ್ದುವು. ಅಂತಹ ಹಲವಾರು ಮನೆ ಗಳಿಂದ ವಿರಾಜಿಸುತ್ತಿದ್ದ ತನ್ನ ಊರನ್ನು ವ್ಯಾಧನು ಸೇರಿದನು. ಎಲ್ಲೆಲ್ಲಿ

ತಿರುಗಿದರೂ ಮಾಂಸದ ದುರ್ಗಂಧದ ವಾಸನೆಯು ಮೂಗಿನ ಹೊಳ್ಳೆಗಳನ್ನು ಭೇದಿಸುತ್ತಿದ್ದಿತು. ಮಾಂಸದ ಆ ದುರ್ಗಂಧವು ಮದ್ಯದ ವಾಸನೆಯಿಂದಲೂ ಮೇದಸ್ಸಿನ ವಾಸನೆಯಿಂದಲೂ ಮಿಶ್ರಿತವಾಗಿದ್ದಿತು. ದೀರ್ಘವಾದ ಕತ್ತಿಗಳನ್ನೂ, ಪಟ್ಟಿಶಗಳನ್ನೂ, ಧನುರ್ಬಾಣಗಳನ್ನೂ ಹಿಡಿದಿದ್ದ ಕಾವಲುಗಾರರು ಆ ಊರನ್ನು ರಕ್ಷಿಸುತ್ತಿದ್ದರು. ಆದುದರಿಂದ ಆ ಊರು ಇತರರಿಂದ ಪ್ರವೇಶಿಸಲು ಅಸಾಧ್ಯವಾಗಿದ್ದು ಸಾಕ್ಷಾತ್ ಯಮನ ಪಟ್ಟಣದಂತೆಯೇ ಕಾಣುತ್ತಿದ್ದಿತು. ಅಂತಹ ತನ್ನ ಊರನ್ನು ಪ್ರವೇಶಿಸಿದ ನಂತರ ವ್ಯಾಧನು ತನ್ನ ಮನೆಯೊಳಗೆ ಹೋದನು. ಪರಿವಾರದವರು ವ್ಯಾಧನನ್ನು ಸಮಾದರಿಸಿದರು. ಅನಂತರ ವ್ಯಾಧನು ಅತಿವಿಚಿತ್ರವಾದ ಮೇಲುವಸ್ತ್ರಗಳಿಂದಲೂ ತೆರೆಗಳಿಂದಲೂ ಶೋಭಿಸುತ್ತಿದ್ದ ದಿವ್ಯವಾದ ಹಾಸಿಗೆಯ ಮೇಲೆ ಸುಖವಾಗಿ ಕುಳಿತುಕೊಂಡನು. ಆ ಸಮಯದಲ್ಲಿ ಅವನ ಪತ್ನಿಯು ಪತಿಗೆ ತಾಂಬೂಲವನ್ನು ಕೊಟ್ಟು ಬೀಸಣಿಗೆಯಿಂದ ಗಾಳಿಯನ್ನು ಬೀಸುತ್ತಾ ಉಪಚರಿಸುತ್ತಿದ್ದಳು. ಹೀಗೆ ಏಕಾಂತದಲ್ಲಿ ತನ್ನನ್ನು ಉಪಚರಿಸಲು ಬಂದ ಪತ್ನಿಯನ್ನು ಕುರಿತು ತನ್ನ ಮನಸ್ಸಿನಲ್ಲಿದ್ದುದನ್ನು ಪ್ರಶ್ನಿಸಲು ಉಪಕ್ರಮಿಸಿದನು.

ಸತ್ಯಂ ವದಾತ್ರ ಸುದತಿ ಮಿಥ್ಯಾವಾಕ್ಯಂ ನ ಮೇ ಪ್ರಿಯಮ್ ।
ಮಿಥ್ಯಾವಾದಾತ್ಪರೋ ದೋಷೋ ನ ಭೂತೋ ನ ಭವಿಷ್ಯತಿ ॥೨೪॥

"ಸುಂದರವಾದ ದಂತಪಂಕ್ತಿಯುಳ್ಳವಳೇ! ನಾನೀಗ ಕೇಳಲಿರುವ ಪ್ರಶ್ನೆಗೆ ನೀನು ನಿಜವಾದ ಉತ್ತರವನ್ನೇ ಹೇಳಬೇಕು. ನೀನು ನನ್ನನ್ನು ಸಮಾಧಾನಗೊಳಿಸುವ ಸಲುವಾಗಿ ಸುಳ್ಳುಹೇಳಿದರೆ ಅದು ನನಗೆ ಪ್ರಿಯವಾಗುವುದಿಲ್ಲ. ಲೋಕದಲ್ಲಿ ಸುಳ್ಳುಹೇಳಿಕೆಗಿಂತಲೂ ಹೆಚ್ಚಿನ ದೋಷವು ಹಿಂದೆಯೂ ಯಾವುದೂ ಇರಲಿಲ್ಲ ; ಮುಂದೂ ಕೂಡ ಇರಲು ಸಾಧ್ಯವಿಲ್ಲ. ಮಿಥ್ಯಾವಾದವೆಂಬುದು ಎಲ್ಲ ಕಾಲಗಳಲ್ಲಿಯೂ ಅತ್ಯಂತದೋಷಾವಹವಾದುದು.

ಸತ್ಯಂ ಹಿ ಸರ್ವಜನ್ತೂನಾಂ ಧರ್ಮಮೂಲಂ ಪರಂ ಸ್ಮೃತಮ್ ।
ಸತ್ಯಹೀನಃ ಕೃತೋ ಧರ್ಮೋ ನಿಷ್ಫಲೋ ಭವತಿ ಪ್ರಿಯೇ ॥೨೫॥

ಸತ್ಯವೇ ಸಮಸ್ತಪ್ರಾಣಿಗಳ ಧರ್ಮಾಚರಣೆಗೂ ಮೂಲಭೂತವಾದುದೆಂದು ಶಾಸ್ತ್ರಗಳು ಹೇಳುತ್ತವೆ. ಮಿಥ್ಯಾವಾದಿಯು ಮಾಡುವ ಯಾವುದೇ ಧರ್ಮಕಾರ್ಯವು ಕೂಡ ಫಲರಹಿತವಾಗುತ್ತದೆ.

ಸತ್ಯೇನ ಸ್ವರ್ಗಮಾಪ್ನೋತಿ ವೈಕುಂಠಂ ಚ ಶಿವಾಲಯಮ್ ।
ತಸ್ಮಾತ್ಸತ್ಯಸಮೋ ಧರ್ಮೋ ನಾಸ್ತಿ ಲೋಕತ್ರಯೇಽಪಿ ಚ ॥೨೬॥

ಸತ್ಯನಿಷ್ಠೆಯಿಂದಲೇ ಪುರುಷನು ಸ್ವರ್ಗವನ್ನೂ, ವೈಕುಂಠವನ್ನೂ, ಕೈಲಾಸವನ್ನೂ ಹೊಂದುವನು. ಆದುದರಿಂದ ಸತ್ಯಕ್ಕೆ ಸಮಾನವಾದ ಧರ್ಮವು ಮೂರು ಲೋಕಗಳಲ್ಲಿಯೂ ಬೇರೊಂದಿಲ್ಲ. ಆದುದರಿಂದ ನೀನು ಸತ್ಯವನ್ನು ಹೇಳು.

ಸ್ತ್ರೀಣಾಮಮಾಯಯಾ ಭಕ್ತಿಃ ಪತಿಲೋಕವಿಧಾಯನೀ ।
ಮಾಯಾವತೀನಾಂ ಸ್ತ್ರೀಣಾಂ ಹಿ ದಾನಧರ್ಮವ್ರತಾದಿಕಮ್ ।
ಸದ್ಯೋ ನಿಷ್ಫಲತಾಂ ಯಾತಿ ದಾನಮಶ್ರೋತ್ರಿಯೇ ಯಥಾ ॥೨೮॥

ಸ್ತ್ರೀಯರಿಗೆ ನಿಷ್ಕಾಪಟ್ಯದಿಂದ ಕೂಡಿದ ಪತಿಭಕ್ತಿಯೇ ಪತಿಸಾಲೋಕ್ಯವನ್ನು ಹೊಂದಿಸುತ್ತದೆ. ಪತಿಗೆ ವಂಚನೆಮಾಡಿ ದಾನ-ಧರ್ಮವ್ರತಾದಿಗಳನ್ನು ಆಚರಿಸತಕ್ಕವರಿಗೆ ಅವರು ಮಾಡುವ ದಾನ-ಧರ್ಮಾದಿಗಳೆಲ್ಲವೂ ಶ್ರೋತ್ರಿಯನಲ್ಲದವನಿಗೆ ಕೊಟ್ಟ ದಾನದಂತೆ ನಿಷ್ಫಲವಾಗುತ್ತದೆ.

ತಸ್ಮಾತ್ಪತ್ಯೌ ಸುವಿಶ್ವಾಸಂ ಕಾರಯೇತ ಪತಿವ್ರತಾ ॥೨೯॥

ಆದುದರಿಂದ ಪತಿವ್ರತೆಯಾದವಳು ತನ್ನ ಪತಿಯಲ್ಲಿ ಕಪಟವಿಲ್ಲದ ಭಕ್ತಿ-ಪ್ರೀತಿಗಳುಳ್ಳವಳಾಗಿರಬೇಕು.

ಸುಂದರಿ! ನಾನು ನಿಮಗಾಗಿ ನಿಮ್ಮ ಭರಣ-ಪೋಷಣೆಗಾಗಿ ಅನೇಕ ವಿಧವಾದ ಪಾಪಕಾರ್ಯಗಳನ್ನು ಮಾಡಿರುವೆನು. ಸತ್ಕರ್ಮಗಳನ್ನು ತ್ಯಜಿಸಿರುವೆನು. ಇದರಲ್ಲಿ ಸಂಶಯವೇ ಇಲ್ಲ.

ಕೃಷಿತೋ ಭಾರತಶ್ಚೈವ ಸೇವಾಕರ್ಮರತೇನ ಚ ।
ವಾಣಿಜ್ಯೇನಾಪಿ ಯತ್ಪಾಪಂ ವಞ್ಚನಾರವಮಾನತಃ ॥೩೦॥

ಭೂಮಿಯನ್ನು ಉಳುವಾಗಲೂ, ಹೊರೆಯನ್ನು ಹೊರುವಾಗಲೂ,

ಇತರರ ಸೇವೆಯನ್ನು ಮಾಡುವಾಗಲೂ, ವ್ಯಾಪಾರವನ್ನು ಮಾಡುವಾಗಲೂ ಜನರನ್ನು ವಂಚಿಸಿ ಇತರರಿಗೆ ಅಪಮಾನಮಾಡಿ ನಾನು ಬಹಳವಾಗಿ ಪಾಪಗಳನ್ನು ಮಾಡಿರುವೆನು.

ವಿಶ್ವಾಸಘಾತಕೇನಾಪಿ ದ್ವಾರಂ ದ್ವಾರಂ ಚ ಯಾಚನಾತ್ ।
ಅಭಕ್ಷ್ಯಭಕ್ಷಣೈಶ್ಚೈವ ಬಹವೋ ಮೇ ನಿಷೂದಿತಾಃ ॥೩೧॥

ಅನೇಕವೇಳೆ ವಿಶ್ವಾಸಘಾತಕನಾಗಿ ಜನರನ್ನು ನಂಬಿಸಿ ಮೋಸಮಾಡಿದ್ದೇನೆ. ಮನೆ-ಮನೆಗೂ ಹೋಗಿ ಭಿಕ್ಷೆಬೇಡಿದ್ದೇನೆ. ತಿನ್ನಬಾರದುದನ್ನು ತಿಂದಿದ್ದೇನೆ. ದ್ರವ್ಯಾಪಹರಣಕ್ಕಾಗಿ ಅನೇಕರನ್ನು ಕೊಂದಿದ್ದೇನೆ.

ಧನಂ ಬಹು ಗೃಹೀತಂ ಹಿ ಚೋರಮಾರ್ಗರತೇನ ಚ ।
ತಸ್ಮಾದಾಢ್ಯತರಶ್ಚಾಸ್ಮಿ ಚೋರಪುಙ್ಗವತಾಂ ಗತಃ ॥೩೨॥

ಇತ್ತೀಚೆಗೆ ನಾನು ಕಳ್ಳತನದ ಮಾರ್ಗದಿಂದ ಅಪಾರದ್ರವ್ಯವನ್ನು ಸಂಪಾದಿಸಿದ್ದೇನೆ. ಕಳ್ಳರಿಗೆಲ್ಲಾ ಶ್ರೇಷ್ಠನಾಗಿರುವ (ದೊರೆಯಾಗಿರುವ) ನಾನು ಅತ್ಯಂತ ಧನಿಕನೂ ಆಗಿದ್ದೇನೆ.

ನಾನು ಇಷ್ಟು ಪಾಪಕೃತ್ಯಗಳನ್ನು ಮಾಡಿ ಸಂಪಾದಿಸಿದ ದ್ರವ್ಯದಿಂದಲೇ ಈಗ ನೀನು ಸಮಸ್ತವಾದ ಸುಖೋಪಭೋಗಗಳನ್ನೂ ಅನುಭವಿಸುತ್ತಾ ಸರ್ವಾಭರಣಭೂಷಿತೆಯಾಗಿ ವಿರಾಜಿಸುತ್ತಿರುವೆ. ಸಾಮಾನ್ಯಮನುಷ್ಯರಿಗೆ ದುರ್ಲಭವಾದ ಭೋಗಗಳನ್ನೂ ಅನುಭವಿಸುತ್ತಿರುವೆ. ನಿನ್ನಂತೆಯೇ ನಿನ್ನ ಮಕ್ಕಳೂ ಸಮಸ್ತವಾದ ಸುಖಗಳನ್ನೂ ಅನುಭವಿಸುತ್ತಿರುವರು.

ಮಯಾ ಕೃತಮಿದಂ ತೇದ್ಯ ಪಾಪಿನಾ ಪಾಪಕರ್ಮಣಾ ।
ಮತ್ಕೃತಸ್ಯ ಹಿಪಾಪಸ್ಯ ಭಾಗಂ ಸ್ವೀಕುರು ಭಾಮಿನಿ ॥೩೪॥

ಪಾಪಿಯಾದ ನಾನು ಅನೇಕವಿಧವಾದ ಪಾಪಕರ್ಮಗಳನ್ನು ಮಾಡಿ ನಿನಗೆ ಈ ಎಲ್ಲ ಸುಖೋಪಭೋಗಗಳನ್ನೂ ಒದಗಿಸಿಕೊಟ್ಟಿರುವೆನು. ಭಾಮಿನಿಯೇ! ಸುಖೋಪಭೋಗಗಳಿಗೆ ಭಾಗಿಯಾಗಿರುವಂತೆಯೇ ನಾನು ಮಾಡಿರುವ ಪಾಪದಲ್ಲಿಯೂ ನೀನು ಸಹಭಾಗಿನಿಯಾಗು. ಪಾಪದ ಒಂದು ಭಾಗವನ್ನು ನೀನೂ ಸ್ವೀಕರಿಸು.”

ಪತಿಯು ಹೀಗೆ ಹೇಳಲು ಅವನ ಪತ್ನಿಯು ಉತ್ತರಿಸಿದಳು :

ತ್ವಯಾ ಕ್ಷೇಮಕೃತಾ ನಾಥ ಪುತ್ರಾಣಾಂ ಜ್ಞಾತಿನಾಂ ಮಮ ।
ವೃತ್ತ್ಯರ್ಥಂ ಯತ್ಕೃತಂ ಪಾಪಂ ತಸ್ಮಾತ್ತ್ವಂ ಕಾರಣಂ ಮತಮ್ ॥

"ಪತಿದೇವ! ನನಗೂ, ನನ್ನ ಮಕ್ಕಳಿಗೂ, ಜ್ಞಾತಿಬಾಂಧವರಿಗೂ ಕ್ಷೇಮವನ್ನು ಕಲ್ಪಿಸುವುದಕ್ಕೋಸ್ಕರ ಮತ್ತು ಜೀವನಾರ್ಥವಾಗಿ ವೃತ್ತಿಯನ್ನು ಅವಲಂಬಿಸಿ ನೀನು ಯಾವ ಪಾಪಕಾರ್ಯಮಾಡಿರುವೆಯೋ ಅದಕ್ಕೆ ನೀನೇ ಕಾರಣಭೂತನಾಗಿರುವೆ.

ಏಕೇನ ಕ್ರಿಯತೇ ಪಾಪಂ ಫಲಮನ್ಯೇನ ಭುಜ್ಯತೇ ।
ವಿರುದ್ಧಮೇತಚ್ಛಾಸ್ತ್ರೇಷು ನ ಮನೀಷಿಪ್ರಸಮ್ಮತಮ್ ॥೩೬॥

ಒಬ್ಬನು ಪಾಪಮಾಡುವುದು ಮತ್ತೊಬ್ಬನು ಅದರ ಫಲವನ್ನು ಅನುಭವಿಸುವುದು–ಎಂಬುದು ಶಾಸ್ತ್ರಗಳಿಗೆ ವಿರುದ್ಧವಾದ ವಿಷಯವಾಗಿದೆ. ಇದನ್ನು ವಿದ್ವಾಂಸರಾದವರು ಎಂದಿಗೂ ಒಪ್ಪುವುದಿಲ್ಲ.

ಪತ್ನ್ಯಾಃ ಪುತ್ರಸ್ಯ ಶಿಷ್ಯಸ್ಯ ಪಾಪಭಾಗ್ಭವತೇ ಗುರುಃ ।
ಶಿಕ್ಷಾರ್ಹ ಶಿಕ್ಷಣಾಭಾವೇ ಮೋಹಸ್ನೇಹನಿಬನ್ಧನಾತ್ ॥೩೭॥

ಲೋಕದಲ್ಲಿ ಶಿಕ್ಷಿಸಬೇಕಾದ ಸಮಯದಲ್ಲಿ ಮೋಹದಿಂದಲೋ ಸ್ನೇಹದಿಂದಲೋ ಶಿಕ್ಷಿಸದಿದ್ದರೆ ಪತ್ನಿಯ ಪಾಪಕ್ಕೆ ಪತಿಯೂ, ಮಗನ ಪಾಪಕ್ಕೆ ತಂದೆಯೂ, ಶಿಷ್ಯನ ಪಾಪಕ್ಕೆ ಗುರುವೂ ಭಾಗಿಗಳಾಗುತ್ತಾರೆ. ಹೀಗೆ ಕಿರಿಯರು ಮಾಡಿದ ಪಾಪಕ್ಕೆ ಹಿರಿಯರು ಭಾಗಿಗಳಾಗುವರೆಂಬುದಕ್ಕೆ ಶಾಸ್ತ್ರವಚನವಿದೆ. ಹಿರಿಯರು ಮಾಡಿದ ಪಾಪವನ್ನು ಕಿರಿಯರು ಹಂಚಿ ಕೊಳ್ಳಬೇಕೆಂಬುದಕ್ಕೆ ಶಾಸ್ತ್ರವಚನವಿಲ್ಲ.

ಪತಿರ್ಧರ್ಮಾಂಶಭಾಙ್ನಿತ್ಯಂ ಸಹಧರ್ಮಚರೀ ಪತೀ ।
ನ ಪತ್ನ್ಯಾ ಧರ್ಮಚಾರಸ್ಯ ಸೋಂಽಶಭಾಗ್ಭವತೇ ಪತಿಃ ॥೩೮॥

ಸಹಧರ್ಮಚರಿಯಾಗಿರುವ ಸತೀಸಾಧ್ವಿಯು ಪತಿಯು ಮಾಡುವ ಧರ್ಮಕಾರ್ಯಗಳ ಫಲಕ್ಕೆ ಸಹಭಾಗಿನಿಯಾಗುತ್ತಾಳೆ. ಆದರೆ ಪತ್ನಿಯು ಮಾಡಿದ ಧರ್ಮಾಚರಣೆಯ ಫಲದ ಭಾಗವನ್ನು ಪತಿಯು ಎಂದಿಗೂ ಪಡೆಯಲಾರನು.

ಕರ್ತಾ ಕಾರಯಿತಾ ಚೈವ ಪ್ರೇರಕಶ್ಚಾನುಮೋದಕಃ ।
ಸುಕೃತೇ ದುಷ್ಕೃತೇ ಚೈವ ಚತ್ವಾರಃ ಸಮಭಾಗಿನಃ ।
ಕರ್ತೃಕಾರಯಿತೃತ್ವಾದೌ ಸ್ತ್ರೀಣಾಂ ನಾಸ್ತ್ಯಧಿಕಾರಿತಾ ॥೩೯॥

ಪಾಪ ಅಥವಾ ಪುಣ್ಯಕರ್ಮವನ್ನು ಮಾಡುವವನು, ಮಾಡಿಸುವವನು, ಪ್ರೇರಿಸುವವನು ಮತ್ತು ಅನುಮೋದಿಸುವವನು–ಈ ನಾಲ್ವರೂ ಪಾಪ-ಪುಣ್ಯಕರ್ಮಫಲಗಳಲ್ಲಿ ಸಹಭಾಗಿಗಳಾಗುತ್ತಾರೆ. ಆದರೆ ಹೆಂಗಸಿಗೆ ಮಾಡುವುದರಲ್ಲಾಗಲೀ ಮಾಡಿಸುವುದರಲ್ಲಾಗಲೀ ಅಧಿಕಾರವೇ ಇಲ್ಲ.

ಗೃಹನಾಥೇನ ಯದ್ದತ್ತಂ ತದೇವ ಪರಮಂ ಸುಖಮ್ ।
ತಸ್ಮಾತ್ತ್ವತ್ಕೃತಪಾಪಸ್ಯ ನ ಮೇ ಭಾಗಾಪಹಾರಿತಾ ।
ತ್ವದಧೀನಾ ವಯಂ ಸರ್ವೇ ರಕ್ಷಣೇ ಶಿಕ್ಷಣೇಽಪಿ ವಾ ॥೪೦॥

ಮನೆಗೆ ಯಜಮಾನನಾದವನು ಏನುಕೊಡುವನೋ ಅದೇ ನಮಗೆ ಪರಮಸುಖದಾಯಕವು. ಹೀಗಿರುವುದರಿಂದ ನೀನು ಮಾಡಿದ ಪಾಪದಲ್ಲಿ ನನಗೆ ಭಾಗವಿಲ್ಲ. ಶಿಕ್ಷೆಗಾಗಲೀ, ರಕ್ಷಣೆಗಾಗಲೀ ನಾವೆಲ್ಲರೂ ನಿನಗೆ ಅಧೀನ ರಾಗಿರುವೆವು."

ಪತ್ನಿಯು ಹೇಳಿದ ಈ ಮಾತುಗಳನ್ನು ಕೇಳಿದನಂತರ ಚೋರಾಗ್ರೇಸರನು ವಿನೀತನೂ, ಗುಣವಂತನೂ, ರೂಪವಂತನೂ, ಅಲಂಕಾರಶೋಭಿತನೂ ಆಗಿದ್ದ ಮಗನನ್ನು ಪ್ರಶ್ನಿಸಿದನು :

ಮಯಾ ಪಾಪಾನಿ ಚೀರ್ಣಾನಿ ಬ್ರಹ್ಮಹತ್ಯಾಶತಾನಿ ಚ ।
ಸುರಾಪಾನಾದಿಪಾಪಾನಿ ಸ್ವರ್ಣಸ್ತೇಯಾನ್ಯನೇಕಶಃ ॥೪೩॥

ಉಪಪಾಪಾನಿ ಸರ್ವಾಣಿ ಕೃತಾನಿ ಭವತಾಂ ಕೃತೇ ।
ಯಾನಿ ಯಾನಿ ಚ ಪಾಪಾನಿ ಸರ್ವಾಣ್ಯಾಚರಿತಾನಿ ಮೇ ॥೪೪॥

"ಪುತ್ರ! ನಾನೂ ನಿಮ್ಮೆಲ್ಲರನ್ನೂ ಭರಿಸಿ–ಪೋಷಿಸುವ ಸಲುವಾಗಿ ಅನೇಕ ಮಹಾಪಾಪಗಳನ್ನೂ ನೂರಾರು ಬ್ರಹ್ಮಹತ್ಯೆಗಳನ್ನೂ ಮಾಡಿದ್ದೇನೆ. ಸುರಾಪಾನಮಾಡಿದ್ದೇನೆ. ಚಿನ್ನವನ್ನೂ ಅನೇಕ ಬಾರಿ ಕದ್ದಿದ್ದೇನೆ. ಮಹಾಪಾಪಗಳಲ್ಲದೆ ಹಲವಾರು ಪ್ರಕಾರದ ಉಪಪಾತಕಗಳನ್ನೂ ಮಾಡಿದ್ದೇನೆ.

ಭುವಿಯಲ್ಲಿ ಎಷ್ಟು ಬಗೆಯ ಪಾಪಗಳಿವೆಯೋ ಅಷ್ಟನ್ನೂ ಮಾಡಿ ಮುಗಿಸಿದ್ದೇನೆ.

ಗಣ್ಯನ್ತೇ ಪಾಂಸವೋ ಭೂಮೇಃ ಗಣ್ಯನ್ತೇ ಜಲಬಿನ್ದವಃ ।
ಮತ್ಕೃತಸ್ಯ ತು ಪಾಪಸ್ಯ ಗಣನಾ ನೈವ ವಿದ್ಯತೇ ॥೪೫॥

ಭೂಮಿಯಲ್ಲಿರುವ ಧೂಳಿನ ಕಣಗಳನ್ನಾದರೂ ಎಣಿಸಬಹುದು. ನೀರಿನ ತುಂತುರುಗಳನ್ನಾದರೂ ಎಣಿಕೆಮಾಡಬಹುದು. ಆದರೆ ನಾನು ಮಾಡಿರುವ ಪಾಪಗಳನ್ನು ಎಣಿಸುವ ಸಾಧ್ಯತೆಯೇ ಇಲ್ಲ.

ನಿಮ್ಮ ಭರಣ-ಪೋಷಣಗಳ ಸಲುವಾಗಿಯೇ ನಾನು ಈ ಅಪಾರವಾದ ಪಾಪಗಳನ್ನು ಮಾಡಿರುವುದರಿಂದ ನನ್ನ ಪಾಪದಲ್ಲಿ ನೀನೂ ಸ್ವಲ್ಪ ಭಾಗವನ್ನು ತೆಗೆದುಕೊ. ಇದರಿಂದಾಗಿ ನನ್ನ ಪಾಪದ ಹೊರೆಯು ಕಡಿಮೆಯಾಗುತ್ತದೆ. ಅನಂತರ ನಾನು ನನ್ನಲ್ಲುಳಿದಿರುವ ಪಾಪವನ್ನು ಪರಿಹರಿಸಿಕೊಳ್ಳಲು ಪ್ರಯತ್ನಮಾಡುತ್ತೇನೆ.”

ತಂದೆಯ ಮಾತನ್ನು ಕೇಳಿ ಮಗನು ಹೇಳುತ್ತಾನೆ :

ನಾಹಂ ಹರಿಷ್ಯೇ ಪಾಪಸ್ಯ ಭಾಗಲೇಶಂ ಹಿ ತಾದೃಶಮ್ ।
ತಚ್ಛ್ರುತ್ವಾ ಹೃದಯಂ ದೀರ್ಣಂ ಕರ್ಣೌ ಮೇ ಬಧಿರೀಕೃತೌ ॥

“ಅಪ್ಪ! ನೀನು ಮಾಡಿರುವ ಅಷ್ಟು ಗುರುತರವಾದ ಪಾಪದಲ್ಲಿ ಲೇಶಾಂಶವನ್ನಾದರೂ ತೆಗೆದುಕೊಳ್ಳಲು ನಾನು ಇಷ್ಟಪಡುವುದಿಲ್ಲ. ನೀನು ಸಂಚಿಸಿಕೊಂಡಿರುವ ಪಾಪಗಳ ಹೆಸರುಗಳನ್ನು ಕೇಳಿಯೇ ನನ್ನ ಎದೆಯೊಡೆಯಿತು. ಕಿವಿಗಳು ಕಿವುಡಾದುವು.

ಪೋಷ್ಯೋಽಹಂ ಪೋಷಕಸ್ತ್ವಂ ಹಿ ಪೋಷ್ಯಪೋಷಕತಾಂ ಗತೌ ।
ಪುತ್ರೋಽಹಂ ಜನಕಸ್ತ್ವಂ ಹಿ ಕಾರ್ಯಕಾರಣತಾಂ ಗತೌ ॥೪೮॥

ಏತೇಷಾಂ ಫಲಭೋಕ್ತಾ ತ್ವಂ ನಾನ್ಯಃ ಶಿಷ್ಯಃ ಸುತಃ ಸ್ತ್ರಿಯಃ ।
ತ್ವಯಾ ಪರಿಜನಸ್ಯಾರ್ಥೇ ಪಾಪಂ ಕೃತಮನೇಕಧಾ ।
ತ್ವಮೇವ ತೇನ ದಗ್ಧೋಽಸಿ ಗಮಿಷ್ಯನ್ತಿ ಫಲಾದನಾಃ ॥೪೯॥

ತಸ್ಮಾತ್ಪಾಪಂ ನ ಕುರ್ವನ್ತಿ ಪುತ್ರಾದ್ಯರ್ಥಂ ಸುಬುದ್ಧಯಃ ।
ಧರ್ಮ್ಯಮೇವಂ ವದನ್ತಿಸ್ಮ ತತ್ತ್ವಜ್ಞಾಃ ಶಾಸ್ತ್ರವೇದಿನಃ ॥೫೦॥

ತಂದೆಯೇ! ನಾನು ಪೋಷ್ಯನು. ನೀನು ಪೋಷಕನು. ನಮ್ಮಿಬ್ಬರಿಗೂ ಪೋಷ್ಯ-ಪೋಷಕ ಸಂಬಂಧವಿದೆ. ನಾನು ಮಗನೆಂದೂ ನೀನು ತಂದೆ ಯೆಂದೂ ಇಟ್ಟುಕೊಂಡರೆ ನಾವಿಬ್ಬರೂ ಕಾರ್ಯ-ಕಾರಣಭೂತರಾಗುವೆವು. ಹೀಗಿರುವುದರಿಂದ ನೀನು ಮಾಡಿರುವ ಆ ಮಹಾಪಾಪಗಳ ಫಲವನ್ನು ನೀನೊಬ್ಬನೇ ಅನುಭವಿಸಬೇಕಲ್ಲದೇ ಶಿಷ್ಯರಾಗಲೀ, ಪುತ್ರರಾಗಲೀ, ಭಾರ್ಯೆಯರಾಗಲೀ ಅನುಭವಿಸಲಾರರು. ನೀನು ನಿನ್ನ ಬಂಧುಗಳ ಭರಣ-ಪೋಷಣೆಗಳಿಗಾಗಿ ಅನೇಕವಿಧವಾದ ಪಾಪಗಳನ್ನೇ ಮಾಡಿರಬಹುದು. ಅದ ರಿಂದ ನೀನೇ ವಿನಾಶಹೊಂದುವೆ. ಪಾಪಕರ್ಮಗಳಿಂದ ನೀನು ಆರ್ಜಿಸಿದ ಧನ-ಕನಕ-ವಸ್ತು-ವಾಹನಗಳನ್ನು ಉಪಭೋಗಿಸಿದ ನಿನ್ನ ಪರಿಜನರು ಅವರ ಪಾಡಿಗೆ ಅವರು ಹೊರಟುಹೋಗುತ್ತಾರೆ. ಆದುದರಿಂದ ಬುದ್ಧಿವಂತನಾದ ವನು ಪುತ್ರರನ್ನು ವಿಶೇಷರೀತಿಯಿಂದ ಸಂರಕ್ಷಿಸುವುದಕ್ಕಾಗಲೀ ಬಂಧುಗಳ ಭರಣ-ಪೋಷಣೆಗಳಿಗಾಗಲೀ ಪಾಪಕರ್ಮಗಳನ್ನು ಮಾಡುವುದಿಲ್ಲವೆಂದು ತತ್ತ್ವಜ್ಞರಾದ ಶಾಸ್ತ್ರಗಳನ್ನು ತಿಳಿದಿರುವ ವಿದ್ವಾಂಸರು ಧರ್ಮಸಮ್ಮತವಾದ ಮಾತನ್ನೇ ಹೇಳಿದ್ದಾರೆ.”

ಮಹಾತೇಜಸ್ವಿಯಾದ ಮಗನ ಈ ಮಾತನ್ನು ಕೇಳಿ ಬೇಡನು ತನ್ನ ಜನ್ಮವನ್ನೂ, ತನ್ನ ವಂಶವನ್ನೂ, ಜ್ಞಾತಿಗಳನ್ನೂ, ಬಂಧುಗಳನ್ನೂ, ಬಹಳ ವಾಗಿ ನಿಂದಿಸಿದನು ಮತ್ತು ತಾನು ಅದುವರೆಗೂ ಮಾಡಿದ ಪಾಪಕೃತ್ಯ ಗಳನ್ನೆಲ್ಲಾ ನೆನೆದು ಬಹಳವಾಗಿ ದುಃಖಿಸಿದನು. ತನ್ನ ಪಾಪಗಳನ್ನು ಪತ್ನೀ-ಪುತ್ರರಿಗೆ ಹಂಚಿಕೊಡಬೇಕೆಂದು ಮಾಡಿದ ಸಂಕಲ್ಪವು ನೆರವೇರದೇ ಇದ್ದುದರಿಂದ ಭ್ರಷ್ಟಸಂಕಲ್ಪನಾದ ಆ ವ್ಯಾಧನು ಪರ್ವತೋಪಮವಾಗಿದ್ದ ಪಾಪಗಳನ್ನು ತಾನೇ ಪರಿಹರಿಸಿಕೊಳ್ಳುವುದಕ್ಕೋಸ್ಕರ ಮನೆಯಿಂದ ಒಡನೆಯೇ ಹೊರಟುಬಿಟ್ಟನು. ಹಾದಿಯಲ್ಲಿ ಹೋಗುತ್ತಿದ್ದಾಗ ಆ ಚೋರನು ಚಿಂತಿಸತೊಡಗಿದನು.

“ಅಯ್ಯೋ! ನನ್ನ ಈ ಜನ್ಮವೆಲ್ಲವೂ ನಷ್ಟವಾಗಿಹೋಯಿತು.

ಸಂಸಾರದಲ್ಲಿ ಮುಳುಗಿಹೋಗಿದ್ದ ನಾನು ಕಾರ್ಯಾಕಾರ್ಯಗಳನ್ನೇ ತಿಳಿಯದೇಹೋದೆನು. ಧರ್ಮಹೀನನಾದ ಮಹಾಪಾಪಿಷ್ಠನಾದ ನನಗೆ ಈ ಜನ್ಮವೇ ವ್ಯರ್ಥವಾಗಿಹೋಯಿತು. ನಾನೀಗ ಏನುಮಾಡಲಿ ; ಎಲ್ಲಿಗೆ ಹೋಗಲಿ ; ಏನು ಮಾಡಿದರೆ ನನ್ನ ಈ ಪಾಪಗಳೆಲ್ಲವೂ ಕಳೆದು ಸುಕೃತವು ಲಭಿಸುತ್ತದೆ? ನಾನು ನನ್ನ ಪರಿಜನರನ್ನು ಸುಖವಾಗಿಟ್ಟಿರಬೇಕೆಂದು ಹಲವಾರು ಪಾಪಕರ್ಮಗಳನ್ನು ಮಾಡಿದೆನು. ಅದರ ಫಲವಾಗಿ ಸಂಕಟಪಡುತ್ತಿರುವವನು ನಾನೊಬ್ಬನೇ. ಅವರೆಲ್ಲರೂ ನಾನು ಸಂಪಾದಿಸಿದ ಐಶ್ವರ್ಯವನ್ನು ಮಾತ್ರವೇ ಅನುಭವಿಸಿ ತಮ್ಮ ಪಾಡಿಗೆ ತಾವು ಹೊರಟುಹೋದರು.

ಧರ್ಮಃ ಸಹಾಯಃ ಸರ್ವೇಷಾಂ ಪರಲೋಕಂ ಹಿ ಗಚ್ಛತಾಮ್ ।
ಬನ್ಧುರ್ಮಿತ್ರಂ ಕಲತ್ರಂ ಚ ಪುತ್ರಾಸ್ತತ್ಪರಿಪನ್ಥಿನಃ ॥೫೭॥

ಪರಲೋಕದಲ್ಲಿ ಸದ್ಗತಿಯನ್ನು ಹೊಂದಬೇಕೆನ್ನುವವರಿಗೆ ಧರ್ಮವೊಂದೇ ಸಹಾಯಭೂತವಾಗುತ್ತದೆ. ಬಂಧುಗಳು, ಮಿತ್ರರು, ಹೆಂಡತಿ-ಮಕ್ಕಳು ಇವರೆಲ್ಲರೂ ಶತ್ರುಗಳೇ ಸರಿ.

ಪಞ್ಚೇನ್ದ್ರಿಯವಶಂ ನಿತಾಃ ಕಲತ್ರೇಣಾಪಿ ನಿರ್ಜಿತಾಃ ।
ಭೋಗಲಮ್ಪಟಮಾಪನ್ನಾಃ ತೇ ವೈ ನಿರಯಗಾಮಿನಃ ॥೫೮॥

ಇಂದ್ರಿಯಪರವಶರಾಗಿ, ಹೆಂಗಸರಿಗೆ ಅಧೀನರಾಗಿ, ಭೋಗಲಂಪಟರಾಗಿರತಕ್ಕವರು ಅವಸಾನಾನಂತರದಲ್ಲಿ ನರಕಕ್ಕೆ ಹೋಗುತ್ತಾರೆ.

ಈ ಹಿಂದೆ ಯಾರ ದರ್ಶನಮಾತ್ರದಿಂದಲೇ ನನ್ನ ಮನಸ್ಸಿಗೆ ಶಾಂತಿಯು ಸಿಕ್ಕಿತೋ ಅಂತಹ ವೇದಪಾರಂಗತರಾದ ಬ್ರಾಹ್ಮಣರನ್ನೇ ನಾನೀಗ ಶರಣುಹೊಂದುತ್ತೇನೆ.

ತೇ ವೈ ತಾರಯಿತುಂ ಶಕ್ತಾಃ ಶರಣಾಗತಮಾನವಾನ್ ।
ಪತಿತಾನೂ ರಚೇಷ್ಟಾನ್ವಾ ಬ್ರಾಹ್ಮಣಾ ಮೃದುಮಾನಸಾಃ ॥೬೦॥

ಮೃದುವಾದ ಮನಸ್ಸುಳ್ಳ ಆ ಬ್ರಾಹ್ಮಣರು ಶರಣಾಗತರಾಗುವ ಮನುಷ್ಯರು ಕ್ರೂರಿಗಳಾಗಿರಲೀ, ಪತಿತರಾಗಿರಲೀ ಅವರನ್ನು ರಕ್ಷಣೆ ಮಾಡಲು ಸಮರ್ಥರಾಗಿರುತ್ತಾರೆ.”

ವ್ಯಾಘ್ರದಂತೆ ಭಯಂಕರನಾಗಿದ್ದ, ಭಯಂಕರವಾದ ಧನುಸ್ಸನ್ನು ಹಿಡಿದಿದ್ದ ವ್ಯಾಧನು ಹೀಗೆ ಯೋಚಿಸುತ್ತಾ ಸಪ್ತರ್ಷಿಗಳಿದ್ದೆಡೆಗೆ ಬಂದನು. ಘೋರರೂಪನಾದ ಚೋರನು ತಮ್ಮ ಬಳಿಗೆ ಬರುತ್ತಿರುವುದನ್ನು ನೋಡಿ ಕಾತರಗೊಂಡ ಮನಸ್ಸಿನಿಂದ ಕೂಡಿದ್ದ ಸಪ್ತರ್ಷಿಗಳು ಶ್ರೀರಾಮನನ್ನು ಶರಣುಹೊಂದಿದರು.

೨೩ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೪ನೆಯ ಸರ್ಗ

ಸಪ್ತರ್ಷಿ ಸ್ತೋತ್ರ

ಈಶ್ವರನು ಉಮೆಗೆ ಹೇಳುತ್ತಾನೆ :

ಸ್ವ ಸ್ವಮಾನಸಕಾತರ್ಯಂ ಆಲೋಚ್ಯ ಸ್ವ ಸ್ವಮಾನಸಮ್ ।
ಶಿಕ್ಷಯನ್ತಸ್ತತೋ ರಾಮಂ ತುಷ್ಟುವುಸ್ತೇ ಪೃಥಕ್ ಪೃಥಕ್ ॥೧॥

"ಉಮೆ! ಸಪ್ತರ್ಷಿಗಳು ತಮ್ಮ-ತಮ್ಮ ಮನಸ್ಸಿನಲ್ಲುಂಟಾದ ಕಾತುರಕ್ಕೆ ಕಾರಣವನ್ನು ತಾವೇ ಯೋಚಿಸುತ್ತಾ ಉದ್ವೇಗಗೊಂಡಿದ್ದ ಮನಸ್ಸನ್ನು ತಡೆಹಿಡಿದು ಪ್ರತ್ಯೇಕ-ಪ್ರತ್ಯೇಕರಾಗಿ ಶ್ರೀರಾಮನನ್ನು ಸ್ತೋತ್ರ ಮಾಡಲು ಉಪಕ್ರಮಿಸಿದರು.

ಕಶ್ಯಪರು ಸ್ತೋತ್ರಮಾಡುತ್ತಾರೆ :

ನಿತ್ಯ ಕಿಂ ಧಾವಸಿ ಚಲವಿಷಯಾನನುಭವಿತುಂ ಸುಖಲೇಶಾಭಾಸಾನ್ ಉರುತರದುಃಖಾನತಿದುಃಸಾಧ್ಯಾನತ್ಯನ್ತಾಯಾಸಾನಾಂ ಹೇ ಮೂಲಾನ್ । ನ್ಯಗ್ರಭಯಂಕರ ರೌರವಾದಿನರಕಗತಿಹೇತೂ ನೇತಾ ನಪಿ ಪರಿಹರತ ಸೀತಾಪತಿಮಾಶು ಪರಿಚರೇಶಂ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೨॥

"ಎಲೈ ಚಂಚಲವಾದ ಮನಸ್ಸೇ! ನೀನು ವಿಷಯಸುಖಗಳನ್ನು ಅನುಭವಿಸುವುದಕ್ಕಾಗಿ ಸರ್ವದಾ ಹೀಗೇಕೆ ಓಡಾಡುವೆ? ಈ ವಿಷಯ ಸುಖಗಳ ಸ್ವರೂಪವನ್ನು ಚೆನ್ನಾಗಿ ಯೋಚಿಸು. ಇವು ಸುತರಾಂ ನಿಜವಾದ ಸುಖಗಳಲ್ಲ. ಸುಖಲೇಶವಿರುವಂತೆ ತೋರುತ್ತದೆ. ವಿಷಯಸುಖಗಳನ್ನು ಪಡೆಯುವುದಕ್ಕಾಗಿ ಹೆಚ್ಚು ದುಃಖವನ್ನೇ ಅನುಭವಿಸಬೇಕಾಗುತ್ತದೆ.

ಅತ್ಯಂತಶ್ರಮಪಡಬೇಕಾಗುತ್ತದೆ. ಆಯಾಸಪಡಬೇಕಾಗುತ್ತದೆ. ಕಡೆಯಲ್ಲಿ ವಿಷಯಸುಖಗಳಿಗಾಗಿ ಮಾಡುವ ಕರ್ಮಗಳೆಲ್ಲವೂ ಪಾಪಹೇತುಗಳಾಗುತ್ತವೆ. ಇದರಿಂದ ರೌರವಾದಿ ನರಕಗಳ ಪ್ರಾಪ್ತಿಯಾಗುವುದು. ಆದುದರಿಂದ ಪಾಪಕ್ಕೆ ಕಾರಣವಾಗುವ ಈ ವಿಷಯಸುಖಗಳನ್ನು ಸಾಧಿಸಿಕೊಳ್ಳುವ ಯೋಚನೆಯನ್ನು ಬಿಟ್ಟು ಶ್ರೀರಾಮನನ್ನು ಮೊರೆಹೋಗು. ಸೀತಾಪತಿಯನ್ನು ಸೇವಿಸು. ಆ ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು.

ಶ್ರಿತಚಿನ್ತಾಮಣಿಮತಿಕರುಣಾಕರ-
ಮರಿಹರಮುರುತರಶರಕೋದಣ್ಡಮ್ ।
ಭೋಶ್ಚೇತಃ ಶ್ರೀರಾಮಂ ಭಜ ಶರಣಂ
ಭಜ ರಘುರಾಮಂ ಭಜ ಶರಣಮ್ ॥೩॥

ಎಲೈ ಮನಸ್ಸೇ! ಆಶ್ರಿತರಿಗೆ ಚಿಂತಾಮಣಿಯೂ, ಅತ್ಯಂತ ದಯಾನಿಧಿಯೂ, ಶತ್ರುನಾಶಕನೂ, ಶ್ರೇಷ್ಠವಾದ ಧನುರ್ಬಾಣಗಳನ್ನು ಹೊಂದಿರುವವನೂ ಆಗಿರುವ ಶ್ರೀರಾಮನನ್ನು ಆಶ್ರಯಿಸು. ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು. ಅವನಿಗೆ ಶರಣಾಗತನಾಗು."

ಅತ್ರಿಗಳು ಸ್ತೋತ್ರಮಾಡುತ್ತಾರೆ :

ಬಹುವಿಧಪಾಪವಶಾದಿಹ ನಾನಾಯೋನಿಷು ಜನ್ಮಮೃತಿ ಯಾತೋ ದೇಹೀ ದೈವಾದುತ್ತಮಮಾನುಷಪೌರುಷವಿಪ್ರದೇಹ ವಿದ್ಯಾಸಂಪನ್ನೋಽಪಿ ಬ್ರಹ್ಮಣಿ ಪರಮೋ ವಿಮುಖೋ ದುಃಖೀ ದುರ್ವಿಷಯೈಷೀ ನಶ್ಯತಿ ತೃಣಕಬಳಸ್ವೀಕರಣೇ ಕಾಲೇ ಪಶುರಿವ ರೋಮನ್ಥಂ ಕುರ್ವನ್ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೪॥

"ತಾನು ಮಾಡಿದ ಅನೇಕವಿಧವಾದ ಪಾಪಗಳಿಗೆ ಅಧೀನನಾಗಿ ಈ ಲೋಕದಲ್ಲಿರುವ ನಾನಾಯೋನಿಗಳಲ್ಲಿ ಜನ್ಮವನ್ನು ತಾಳಿ ಮರಣಹೊಂದುತ್ತಾ ದೈವಯೋಗದಿಂದ ಮನುಷ್ಯಜನ್ಮವನ್ನು ಅದರಲ್ಲಿಯೂ ಪುರುಷಜನ್ಮವನ್ನು ಅದರಲ್ಲಿಯೂ ಬ್ರಾಹ್ಮಣಜನ್ಮವನ್ನು ಪಡೆದಿದ್ದರೂ, ವಿದ್ಯಾಸಂಪನ್ನನಾಗಿದ್ದರೂ ಆ ಪರಬ್ರಹ್ಮನಲ್ಲಿ ವಿಮುಖನಾಗಿ ದುಃಖಪಡುತ್ತಾ ದುಷ್ಟವಾದ

ವಿಷಯಸುಖಗಳನ್ನು ಅಪೇಕ್ಷಿಸುತ್ತಾ ಹುಲ್ಲುತಿನ್ನುವ ಸಮಯದಲ್ಲಿ ಮೆಲುಕು ಹಾಕುವ ಹಸುವಿನಂತೆ ತನ್ನ ಕರ್ತವ್ಯದಲ್ಲಿ ವಿಮುಖನಾಗಿ ವಿನಾಶಹೊಂದುತ್ತಾನೆ. ಆದುದರಿಂದ ಎಲೈ ಮನಸ್ಸೇ! ನೀನು ಹಾಗೆ ಮಾಡದೆ ಶ್ರೀರಾಮನನ್ನು ಆಶ್ರಯಿಸು. ರಘುರಾಮನ ಸೇವೆಮಾಡು. ಭಕ್ತವತ್ಸಲನಾದ ಶ್ರೀರಾಮನಿಗೆ ಶರಣುಹೋಗು."

ಭರದ್ವಾಜರು ಪ್ರಾರ್ಥನೆಮಾಡುತ್ತಾರೆ :

ಉಪರ್ಯುಪರಿ ಮನೋರಥಜಾಲಂ ವಿದ್ವಾನಪಿ ಕಾಮಯತೇ ಯತತೇ । ಪುತ್ರಮಿತ್ರಕಳತ್ರಾದಿಷು ನಿರ್ವೇದಂ ನೈವ ಯಾತಿ ರಾಮ-ಕಾಮೀ । ವಿದ್ಯಾಸಂಪತ್ಕುಲಧನಸೌಭಾಗ್ಯಯೌವನಗರ್ವಪರ್ವತಾಧಿ-ರೂಢೋ ಮೂಢಃ । ಪಶ್ಚಾದನ್ಧೇ ತಮಸಿ ಪತೇದವಶೋಽನ್ಧ ಇವ ಭೋಶ್ಚೇತಃ । ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೫॥

"ಎಂತಹ ವಿದ್ವಾಂಸನಾಗಿದ್ದರೂ ಮೇಲೆ-ಮೇಲೆ ಮನೋರಥದ ಪರಂಪರೆಯನ್ನು ಅಪೇಕ್ಷಿಸುತ್ತಲೇ ಇರುತ್ತಾನೆ. ಪುತ್ರ-ಮಿತ್ರ-ಕಳತ್ರಾದಿ ಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತಾನೆ. ಸರ್ವದಾ ಕಾಮೋಪಭೋಗಗಳನ್ನು ಬಯಸುತ್ತಿರುತ್ತಾನೆ. ಪ್ರಾಪಂಚಿಕಸುಖದಿಂದ ವೈರಾಗ್ಯವನ್ನೇ ಹೊಂದುವುದಿಲ್ಲ. ವಿದ್ಯೆ-ಸಂಪತ್ತು-ಕುಲ-ಧನ-ಸೌಭಾಗ್ಯ ಇವುಗಳಿಂದ ಉಂಟಾಗುವ ಗರ್ವವೆಂಬ ಪರ್ವತದ ಮೇಲೆ ಹತ್ತಿ ಕುಳಿತಿರುವ ಆ ಮೂಢನು ಕುರುಡನು ಹಳ್ಳದಲ್ಲಿ ಬೀಳುವಂತೆ-ತನ್ನ ಪ್ರಯತ್ನವಿಲ್ಲದೆಯೇ ಅಂಧತಮಸ್ಸಿನಲ್ಲಿ ಬೀಳುತ್ತಾನೆ. ಆದುದರಿಂದ ಎಲೈ ಮನಸ್ಸೇ! ನೀನು ಶ್ರೀರಾಮನನ್ನು ಶರಣುಹೊಂದು. ಶ್ರೀರಘುರಾಮನನ್ನು ಆಶ್ರಯಿಸು."

ವಿಶ್ವಾಮಿತ್ರರು ಶ್ರೀರಾಮನನ್ನು ಪ್ರಾರ್ಥಿಸುತ್ತಾರೆ :

ಅರಿಷಡ್ವರ್ಗಂ ಜಹಿ ತೃಷ್ಣಾಮಪಿ ಮಾಯಾವಿಲಸಿತಮಿದಮಿತಿ ಬುದ್ಧ್ವಾ। ದುರ್ಜನಸಂಗತಿಮತಿದೂರೀಕುರು ಸಜ್ಜನಮಾಶ್ರಯ ಭೋಃ । ಪರಧನಪರದಾರಾಭಿರತಿಂ ತ್ಯಜ ಪಾರಲೌಕಿಕಧರ್ಮಂ

ಪರಿಚರ ಪದ್ಮಾಪತಿಪದಪದ್ಮಂ ಸೇವಯ ಬನ್ಧಮುಕ್ತಯೇ ಭೋ ಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೬॥

"ಎಲೈ ಮನಸ್ಸೇ! ಈ ಪ್ರಪಂಚವೆಲ್ಲವೂ ಮಾಯಾವಿಲಾಸವೆಂದು ತಿಳಿದುಕೊಂಡು ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯ ಗಳೆಂಬ ಆರು ಶತ್ರುಗಳನ್ನೂ ದುರಾಸೆಯನ್ನೂ ಬಿಟ್ಟುಬಿಡು. ದುರ್ಜನರ ಸಂಗವನ್ನು ದೂರಮಾಡು. ಸತ್ಪುರುಷರನ್ನು ಆಶ್ರಯಿಸು. ಇತರರ ಸ್ವತ್ತಿಗೆ ಮತ್ತು ಪರಪತ್ನಿಯರಿಗೆ ಆಸೆಪಡಬೇಡ. ಪರಲೋಕಕ್ಕೆ ಸಾಧನಭೂತವಾದ ಸತ್ಕರ್ಮಗಳನ್ನು ಮಾಡು. ಸಂಸಾರಬಂಧಮುಕ್ತಿಗಾಗಿ ಲಕ್ಷ್ಮೀಪತಿಯ ಪಾದಕಮಲಗಳನ್ನು ಸರ್ವದಾ ಸೇವಿಸು. ಶ್ರೀರಾಮನನ್ನು ಆಶ್ರಯಿಸು. ರಘುರಾಮನನ್ನು ಶರಣುಹೊಂದು."

ಗೌತಮರು ಪ್ರಾರ್ಥಿಸುತ್ತಾರೆ :

ಕರ್ಣಾಕರ್ಣಯ ವೈದೇಹೀವರ ವರ್ಣನೀಯ ಗುಣಚರಿತಂ। ನಯನಾಲೋಕಯ ನಲಿನನಯನಮುಖಸುನ್ದರೇನ್ದುಬಿಮ್ಬಮ್ ।ಮಸ್ತಕ ಸಂಸ್ತುತಮಹಿಮಾನಂ ನಮ ಕಸ್ತೂರೀನಿಕರಾಕಾರಂ। ಹರಿಮರ್ಚಯ ಹಸ್ತಯುಗಾವನೀಪಾಲನಮಿನಕುಲ ರತ್ನಮ್। ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೭॥

"ಎಲೈ ಕಿವಿಯೇ! ನೀನು ಆ ಸೀತಾಪತಿಯ ಪ್ರಶಸ್ತವಾದ ಗುಣ ಚರಿತ್ರವನ್ನು ಕೇಳು. ಎಲೈ ನೇತ್ರವೇ! ನೀನು ಆ ಪುಂಡರೀಕಾಕ್ಷನ ಮುಖವೆಂಬ ಸುಂದರವಾದ ಚಂದ್ರಬಿಂಬವನ್ನು ನೋಡು. ಎಲೈ ಶಿರಸ್ಸೇ! ನೀನು ಪ್ರಶಸ್ತಮಹಿಮನಾದ ಕಸ್ತೂರೀಸಮಾನವರ್ಣನಾದ ಆ ರಘುಪತಿಯನ್ನು ನಮಸ್ಕರಿಸು. ಎಲೈ ಹಸ್ತಯುಗ್ಮವೇ! ಸೂರ್ಯವಂಶರತ್ನನಾಗಿ ರಾಜಾಧಿ ರಾಜನಾಗಿ ಅವತರಿಸಿದ ಶ್ರೀಹರಿಯನ್ನು ಪೂಜಿಸು. ಎಲೈ ಮನಸ್ಸೇ! ನೀನು ಶ್ರೀರಾಮನನ್ನು ಆಶ್ರಯಿಸು."

ಜಮದಗ್ನಿಗಳು ಸ್ತೋತ್ರಮಾಡುತ್ತಾರೆ :

ಪರಾಪವಾದಂ ಪರಿಹರ ಜಿಹ್ವೇ ಪಾರುಷ್ಯಂ ಚಾನೃತಮಪಿ ಮಾ ವದ। ಸಂಕೀರ್ತಯ ಸಂಕೀರ್ತಯ ಶ್ರೀಕೇಶವ ನಾರಾಯಣ ಕೃಷ್ಣ ಗೋವಿಂದ ನೃಹರೇ। ವೈಕುಂಠಾಧಿಪ ದಾಮೋದರ ಬುಧ ಮಾನಸಮನ್ದಿರ ಸೀತಾವಲ್ಲಭ ದಶರಥರಾಜನನ್ದನೇತಿ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೮॥

"ಎಲೈ ನಾಲಿಗೆಯೇ! ನೀನು ಇತರರ ಮೇಲೆ ದೋಷಾರೋಪಣೆ ಮಾಡುವುದನ್ನು ನಿಲ್ಲಿಸು. ಕಠಿನವಾದ ಮತ್ತು ಸುಳ್ಳಿನ ಮಾತನ್ನು ಹೇಳ ಬೇಡ. ಶ್ರೀಕೇಶವ! ನಾರಾಯಣ! ಕೃಷ್ಣ! ಗೋವಿಂದ! ನರಹರೇ! ವೈಕುಂಠನಾಯಕ! ದಾಮೋದರ! ಯೋಗಿಮನೋನಿಲಯ! ಸೀತಾವಲ್ಲಭ! ದಾಶರಥೇ! ಎಂದು ಸರ್ವದಾ ಪುನಃ-ಪುನಃ ಕೀರ್ತನಮಾಡುತ್ತಿರು. ಎಲೈ ಮನಸ್ಸೇ! ನೀನು ಶ್ರೀರಾಮನನ್ನು ಮೊರೆಹೋಗು. ರಘು ರಾಮನನ್ನು ಶರಣುಹೊಂದು."

ವಸಿಷ್ಠರು ಸ್ತೋತ್ರಮಾಡುತ್ತಾರೆ :

ನಿತ್ಯಾನನ್ದಸತ್ಯಮನನ್ತಂ ಬ್ರಹ್ಮಪರಾತ್ಪರಮದ್ವಯಮಮಲಂ ನಿತ್ಯಂ ಬುದ್ಧಂ ಶುದ್ಧಂ ಶಾನ್ತಂ ಶಾಶ್ವತಮಪ್ರಮೇಯಮನಾ-ದ್ಯನ್ತಮ್। ಸರ್ವಾಸಾಮುಪನಿಷದಾಮರ್ಥಃ ಸ ಶ್ರೀರಾಮಃ ಸೀತಾಪತಿರಿತಿ ಹರಿಹರಚತುರಾನನಾದಿಭಿರ್ಗೀಯತೇ ಯಸ್ತಸ್ಯ ದಾಸೋಽಹಂ ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘು ರಾಮಂ ಭಜ ಶರಣಮ್। ಶ್ರಿತಚಿನ್ತಾಮಣಿಮತಿಕರುಣಾಕರಮರಿ ಹರಮುರುತರಶರಕೋದಣ್ಡಂ। ಭೋಶ್ಚೇತಃ ಶ್ರೀರಾಮಂ ಭಜ ಶರಣಂ ಭಜ ರಘುರಾಮಂ ಭಜ ಶರಣಮ್ ॥೯॥

"ಯಾವ ಸೀತಾಪತಿಯಾದ ಶ್ರೀರಾಮನು ನಿತ್ಯಾನಂದ, ಸತ್ಯ, ಅನಂತ, ಪರಬ್ರಹ್ಮ, ಪರಾತ್ಪರ, ಅದ್ವೈತ, ಅಮಲ, ನಿತ್ಯ, ಬುದ್ಧ, ಶುದ್ಧ, ಶಾಂತ, ಶಾಶ್ವತ, ಅಪ್ರಮೇಯ, ಅನಾದ್ಯಂತ, ಸರ್ವೋಪನಿಷ ದ್ಗೋಚರ–ಎಂಬುದಾಗಿ ಬ್ರಹ್ಮ-ವಿಷ್ಣು-ಮಹೇಶ್ವರಾದಿಗಳಿಂದ ಸ್ತುತಿಸಲ್ಪಡು

ವನೋ ಅವನಿಗೆ ನಾನು ದಾಸನು. ಎಲೈ ನನ್ನ ಮನಸ್ಸೇ! ನೀನು ರಾಮನನ್ನು ಆಶ್ರಯಿಸು. ರಘುಕುಲತಿಲಕನಾದ ಶ್ರೀರಾಮನನ್ನು ಸೇವಿಸು. ಅವನಿಗೆ ಶರಣಾಗತನಾಗು. ಆಶ್ರಿತರಿಗೆ ಚಿಂತಾಮಣಿಯೂ, ಅತ್ಯಂತದಯಾ ನಿಧಿಯೂ, ಶತ್ರುನಾಶಕನೂ, ಶ್ರೇಷ್ಠವಾದ ಧನುರ್ಬಾಣಗಳನ್ನು ಹಿಡಿದಿರು ವವನೂ ಆಗಿರುವ ಶ್ರೀರಾಮನನ್ನು ಸೇವಿಸು. ಅವನಿಗೆ ಶರಣಾಗತನಾಗು."

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

"ಪಾರ್ವತಿ! ಹೀಗೆ ಭಕ್ತಿಭಾವದಿಂದ ವಿನಮ್ರರಾಗಿದ್ದ ಸಪ್ತರ್ಷಿಗಳು ಶ್ರೀರಾಮಚಂದ್ರನನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಸ್ತೋತ್ರಮಾಡಿ ಆರ್ತರ ದುಃಖ ವೆಂಬ ಅಂಧಕಾರಕ್ಕೆ ಸೂರ್ಯಪ್ರಾಯನಾಗಿರುವ ಶ್ರೀರಾಮನಿಗೆ ಪ್ರಪನ್ನರಾಗಿ ಶ್ರೀರಾಮನ ಚರಣಕಮಲಗಳಲ್ಲಿಯೇ ನಿಷ್ಠೆಯನ್ನಿಟ್ಟುಕೊಂಡು ಮೌನಿಗಳಾಗಿ ನಿಂತಿದ್ದರು. ಅನಂತರ ದಯಾಸಾಗರನೂ, ಮಂದಹಾಸದಿಂದ ಕೂಡಿದ ವನೂ, ಶಾಂತನೂ, ವನಮಾಲೆಯಿಂದ ಶೋಭಿತನೂ, ಪೀತಾಂಬರ ಧರನೂ, ಆದಿದೇವನೂ, ಸೀತಾ-ಲಕ್ಷ್ಮಣಯುಕ್ತನೂ, ಆಜಾನುಬಾಹುವೂ, ಸರ್ವಜ್ಞನೂ, ಭಕ್ತರಿಗೆ ಅಭಯವನ್ನು ನೀಡುವವನೂ, ವಿಶಾಲಹೃದಯನೂ, ವಿರಾಜಮಾನವಾದ ಕೌಸ್ತುಭಮಣಿಯಿಂದ ಶೋಭಿಸುವ ಕಂಠದಿಂದ ಕೂಡಿ ರುವವನೂ, ಸರ್ವಾಭರಣಭೂಷಿತನೂ, ಪುಂಡರೀಕಾಕ್ಷನೂ, ಇಂದ್ರನೀಲ ಮಣಿ ಸದೃಶದೇಹನೂ, ಲಕ್ಷ್ಮಣನಿಂದ ಅನುಸರಿಸಲ್ಪಟ್ಟವನೂ, ಖಡ್ಗ ಹಸ್ತನೂ, ಧನುರ್ಬಾಣ-ತೂಣೀರಗಳನ್ನು ಹಿಡಿದಿರುವವನೂ, ಬಲಗೈಯಲ್ಲಿ ಲೀಲೆಯಿಂದ ಬಾಣವನ್ನು ತಿರುಗಿಸುತ್ತಿರುವವನೂ, ಸರ್ವಸಮರ್ಥನೂ, ದುರಾತ್ಮರಾದವರಿಗೆ ಕಣ್ಣಿನಿಂದ ನೋಡುವುದಕ್ಕೂ ಮನಸ್ಸಿನಿಂದ ಎದುರಿಸು ವುದಕ್ಕೂ ಅಸಾಧ್ಯನಾದವನೂ ಆದ ಭಗವಂತನಾದ ಮಹಾತೇಜಸ್ಸಿನಿಂದ ಸಂಪನ್ನನಾದ ಶ್ರೀರಾಮನು ಮುನಿಗಳ ಸ್ತೋತ್ರಕ್ಕೆ ಪ್ರಸನ್ನನಾಗಿ ಸೀತಾ-ಲಕ್ಷ್ಮಣರೊಡನೆ ಕಾಣಿಸಿಕೊಂಡನು. ತಮ್ಮ ಮುಂದೆ ಪ್ರತ್ಯಕ್ಷನಾಗಿ ನಿಂತಿರುವ ಶ್ರೀರಾಮನನ್ನು ನೋಡಿ ನಿರಾತಂಕರಾದ ಸಪ್ತರ್ಷಿಗಳು ಶ್ರೀರಾಮನ ಧ್ಯಾನದಿಂದ ತಮ್ಮ ಆಪತ್ತನ್ನು ಕಳೆದುಕೊಂಡು ಚಿತ್ತಸ್ವಾಸ್ಥ್ಯವನ್ನು ಹೊಂದಿದರು. ಪೂತಾತ್ಮರಾದ ಸಪ್ತರ್ಷಿಗಳು ಶ್ರೀರಾಮನ ಸಂದರ್ಶನದಿಂದ

ಮೋಹವನ್ನು ನೀಗಿದವರಾಗಿ ಬಾಹ್ಯಪ್ರಪಂಚವನ್ನೇ ಸಂಪೂರ್ಣವಾಗಿ ಮರೆತು ಶ್ರೀರಾಮನಲ್ಲಿಯೇ ನಿಯತವಾದ ಮನಸ್ಸಿನಿಂದ ಕೂಡಿದವರಾಗಿ ಸರ್ವತ್ರ ಶ್ರೀರಾಮನನ್ನೇ ನೋಡತೊಡಗಿದರು. ಈ ರೀತಿಯಾಗಿ ಚರಾಚರ ಗುರುವಾದ ಪರಮಾತ್ಮನನ್ನು ಕಂಡು ಅವನ ದಿವ್ಯದರ್ಶನದಿಂದ ಪರಮಾ ನಂದಭರಿತರಾದರು. ಆಲಸ್ಯವಿಲ್ಲದಿದ್ದ ಚೋರನೂ ಕೂಡ ಭೃತ್ಯವರ್ಗದವ ರಿಂದ ಮಾರ್ಗವನ್ನು ವಿಸ್ತಾರಗೊಳಿಸಿ ಸಪ್ತರ್ಷಿಗಳ ಸಮೀಪಕ್ಕೆ ಬಂದನು. ಆದರೆ ಅವನಿಗೆ ಆ ಸಮಯದಲ್ಲಿ ಮನಸ್ಸಿಗೆ ಯಾವುದೂ ಬೇಕಾಗಿರಲಿಲ್ಲ. ಮಹರ್ಷಿಗಳನ್ನು ನೋಡಿದೊಡನೆಯೇ ಅವರಿಗೆ ಸಾಷ್ಟಾಂಗಪ್ರಣಾಮಮಾಡಿ ಮೇಲೆದ್ದು ಕೈಜೋಡಿಸಿಕೊಂಡು ನಿಂತು ಅವರೊಡನೆ ಹೇಳಿದನು :

"ಮಹರ್ಷಿಗಳೇ! ನಾನು ಇಲ್ಲಿಂದ ನನ್ನ ಊರಿಗೆ ಹೋಗಿ ಅಲ್ಲಿದ್ದ ನನ್ನ ಹೆಂಡತಿ-ಮಕ್ಕಳು-ಅಳಿಯು-ಸಹೋದರ-ಮಗಳು-ಸಹೋದರಿ-ಸಹೋದರರ ಪುತ್ರರು–ಇವರೇ ಮುಂತಾದ ಸಮಸ್ತಬಂಧುಗಳನ್ನೂ ನೀವು ಹೇಳಿದಂತೆಯೇ ಪ್ರಶ್ನಿಸಿದೆನು. ಆದರೆ ಅವರೆಲ್ಲರೂ ಏಕಕಂಠದಿಂದ–'ನ ವಯಂ ಪಾಪಭಾಗಿನಃ ನಾವು ನಿನ್ನ ಪಾಪದಲ್ಲಿ ಭಾಗಿಗಳಾಗುವುದಿಲ್ಲ'– ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು.

ಪುತ್ರಮಿತ್ರಕಳತ್ರಾದಿಬನ್ಧುಪೋಷಣತತ್ಪರಃ ।
ತ್ವಂ ತು ದುಃಖಸ್ಯ ಪಾಪಸ್ಯ ಶ್ರಮಸ್ಯಾಪಿ ಸಭಾಜನಮ್ ॥೨೩॥

'ನೀನು ಪುತ್ರ-ಮಿತ್ರ-ಕಳತ್ರರನ್ನು ಪೋಷಿಸುವುದಕ್ಕಾಗಿ ಅನೇಕ ಪಾಪಕರ್ಮಗಳನ್ನು ಮಾಡಿರಬಹುದು. ಪಾಪದ ದುಃಖಕ್ಕೂ ಮತ್ತು ಶ್ರಮಕ್ಕೂ ನೀನೇ ಪಾತ್ರನೇ ಹೊರತು ನಮಗೆ ಅದರ ಸಂಬಂಧವಿಲ್ಲ.'

ಅವರು ಹೇಳಿದ ಈ ಮಾತನ್ನು ಕೇಳಿ ನಾನು ಬಹಳವಾಗಿ ಭಯ ಗೊಂಡೆನು. ನಾನು ಇದುವರೆಗಿನ ಕಾರ್ಯವೆಲ್ಲವೂ ವ್ಯರ್ಥವಾಯಿತೆಂದು ಭಾವಿಸಿಕೊಂಡೆನು. ನಾನು ಇದುವರೆಗೆ ಮಾಡಿರುವ ಅಪಾರವಾದ ಪಾಪ ಕರ್ಮಗಳನ್ನು ಸ್ಮರಿಸುತ್ತಾ ಆ ನಮ್ಮ ಊರಿನಿಂದ ಒಡನೆಯೇ ಹೊರಟು ಬಂದೆನು. ಯಾವಾಗ ನನಗೆ ಪುಣ್ಯಾತ್ಮರಾದ ತಮ್ಮ ದರ್ಶನವಾಯಿತೋ ಆಗಿನಿಂದಲೇ ನನ್ನಲ್ಲಿದ್ದ ದುಷ್ಟಭಾವವು ದೂರವಾಯಿತು.

ಸತಾಂ ಸನ್ನಿಧಿರೇವಾತ್ರ ಕಾರಣಂ ವೀತರಾಗಿಣಾಮ್ ।
ವೇಧಾರಸಪ್ರಭಾವೇನ ಸ್ಯಾದಯಃ ಕಾಞ್ಚನಂ ಯಥಾ ॥೨೬॥

ನನ್ನ ಈ ದುಷ್ಟಭಾವವು ದೂರವಾದುದಕ್ಕೆ ರಾಗ-ದ್ವೇಷಗಳನ್ನು ವರ್ಜಿಸಿರುವ ತಮ್ಮಂತಹವರ ಸಾನ್ನಿಧ್ಯವೇ ಮುಖ್ಯಕಾರಣವಾಗಿದೆ. ಸ್ಪರ್ಶ ರಸದ ಪ್ರಭಾವದಿಂದ ಕಬ್ಬಿಣವೂ ಚಿನ್ನವಾಗುವುದಲ್ಲವೇ?

ಕೃತಸಜ್ಜನಸಂಸರ್ಗಃ ಕ್ರೂರೋಽಪಿ ಮೃದುತಾಂ ವ್ರಜೇತ್ ।
ಯಥಾ ವಿಧುಕರಸ್ಪರ್ಶಾನ್ಮೃದುಃ ಕಾನ್ತಶಿಲಾ ಭವೇತ್ ॥೨೭॥

ಚಂದ್ರನ ಕಿರಣಸಂಪರ್ಕದಿಂದ ಚಂದ್ರಕಾಂತಶಿಲೆಯು ಮೃದುವಾಗಿ ಬಿಡುವಂತೆ ಸತ್ಪುರುಷರ ಸಹವಾಸದಿಂದ ಕ್ರೂರಿಯೂ ಮೃದುವಾಗಿಬಿಡು ತ್ತಾನೆ.

ಅಹೋ ಸಜ್ಜನಮಾಹಾತ್ಮ್ಯಂ ತದ್ರೂಪಂ ಭಜತೇ ಖಲಃ ।
ಅಪಿ ತದ್ದರ್ಶನಸ್ಪರ್ಶಸಲ್ಲಾಪೈರ್ಭೃಙ್ಗಕೀಟವತ್ ॥೨೮॥

ಸತ್ಪುರುಷರ ಮಹಿಮೆಯು ಅತ್ಯಾಶ್ಚರ್ಯಕರವಾದುದು. ಅವರ ದರ್ಶನ-ಸ್ಪರ್ಶನ-ಸಂಭಾಷಣೆಗಳಿಂದ ಭ್ರಮರಕೀಟನ್ಯಾಯಾನುಸಾರವಾಗಿ* ನೀಚನೂ ಅವರಂತೆಯೇ ಸಜ್ಜನನಾಗುವನು.

ಪುಣ್ಯಲಭ್ಯೋ ಹಿ ಸತ್ಸಙ್ಗಃ ತದಭಾವೇ ಕಥಂ ನು ಸಃ ।
ಕಿಞ್ಚಿನ್ಮೇ ಪ್ರಾಗ್ಭವೇ ಪುಣ್ಯಂ ಅಸ್ತಿ ಸತ್ಸಙ್ಗಕಾರಣಮ್ ॥೨೯॥

ಲೋಕದಲ್ಲಿ ಸತ್ಪುರುಷರ ಸಹವಾಸವು ಕೇವಲ ಪುಣ್ಯದಿಂದ ಲಭಿಸು ವುದು. ಆ ಪುಣ್ಯವಿಲ್ಲದಿದ್ದರೆ ಸತ್ಸಂಗವು ಹೇಗೆ ತಾನೇ ಲಭಿಸುತ್ತದೆ? ನನಗೆ ಸತ್ಸಂಗಕ್ಕೆ ಕಾರಣಭೂತವಾದ ಜನ್ಮಾಂತರದ ಪುಣ್ಯವು ಇದ್ದಿರಲೇಬೇಕು.

ಹೀಗಿರುವುದರಿಂದಲೇ ಅತಿನೀಚಜನ್ಮನಾದ ನಾನು ಅತಿಪುಣ್ಯಕರವಾದ

---

* ದುಂಬಿಯಿಂದ ತನ್ನ ಗೂಡಿಗೆ ತಂದು ಕೂಡಿಹಾಕಲ್ಪಟ್ಟಿರುವ ಹುಳುವು ಭಯ ದಿಂದ ದುಂಬಿಯನ್ನೇ ನಿರಂತರವಾಗಿ ಚಿಂತಿಸುತ್ತ ದುಂಬಿಯೇ ಆಗಿಬಿಡುವುದು.

ಸತ್ಸಂಗವನ್ನು ಪಡೆದೆನು. ಸಂಸಾರಸಾಗರವನ್ನು ದಾಟಲು ಇಚ್ಛಿಸುವವರಿಗೆ ಸರ್ವತ್ರ ಪುಣ್ಯವೇ ಕಾರಣವಾಗುತ್ತದೆ.

ಆದುದರಿಂದ ಮುನಿಶ್ರೇಷ್ಠರೇ! ನಾನು ಮಾಡಿರುವ ಎಲ್ಲ ಪಾಪ ಗಳಿಗೂ ಪರಿಹಾರವನ್ನು ತಿಳಿಸಿ ರಕ್ಷಿಸುವವರು ನೀವೇ ಆಗಿರುವಿರಿ. ನಾನು ನನ್ನ ಪಾಪಗಳನ್ನು ಕಳೆದುಕೊಳ್ಳಲು ಅಪೇಕ್ಷಿಸಿದ್ದೇನೆ. ಆದುದರಿಂದಲೇ ನಿಮ್ಮನ್ನು ಶರಣುಹೊಂದಿದ್ದೇನೆ."

ತಾನು ಮಾಡಿದ ಅಪಾರವಾದ ಪಾಪಕ್ಕಾಗಿ ಪಶ್ಚಾತ್ತಾಪಪಡುತ್ತಿದ್ದ ಆ ಚೋರನು ಹೀಗೆ ಆ ಸಮಸ್ತಮುನಿಗಳಿಗೂ ಹೇಳಿ ಮತ್ತೆ-ಮತ್ತೆ ಪ್ರದಕ್ಷಿಣೆ-ನಮಸ್ಕಾರಗಳನ್ನು ಮಾಡುತ್ತಾ ವಸಿಷ್ಠರನ್ನು ಉದ್ದೇಶಿಸಿ ಈ ಮಾತನ್ನು ಹೇಳಿದನು :

"ಬ್ರಾಹ್ಮಣೋತ್ತಮರೇ! ಈ ಮಹರ್ಷಿಗಳೆಲ್ಲರೂ ಇಲ್ಲಿಯೇ ಇರಲಿ. ನೀವು ನನಗೆ ಪಾಪಪರಿಹಾರಕವಾದ ಯಾವುದಾದರೂ ಮಂತ್ರವನ್ನು ಉಪ ದೇಶಿಸಿರಿ."

ವಸಿಷ್ಠರು ಹೇಳುತ್ತಾರೆ :

"ನೀನು ಜಾತಿಯಲ್ಲಿ ಬೇಡನಾಗಿರುವೆ. ಅದರಲ್ಲಿಯೂ ವಿಶೇಷವಾಗಿ ಚೋರನೂ ಆಗಿರುವೆ. ಈ ಎರಡು ಕಾರಣಗಳಿಂದಲೂ ನೀನು ಪತಿತ ನಾಗಿರುವೆ.

ವಿದ್ವಾನ್ ವಿನೀತಃ ಶುದ್ಧಾತ್ಮಾ ಶ್ರದ್ಧಾವಾನಾಸ್ತಿಕಃ ಶುಚಿಃ ।
ದೃಢಃ ಕರ್ಮಾಭಿನಿರತಃ ಉಪದೇಶಂ ಸಮರ್ಹತಿ ॥೩೫॥

ಲೋಕದಲ್ಲಿ ವಿನೀತನಾಗಿಯೂ, ಪರಿಶುದ್ಧನಾಗಿಯೂ, ಶ್ರದ್ಧಾವಂತ ನಾಗಿಯೂ, ಆಸ್ತಿಕನಾಗಿಯೂ, ಶುಚಿಯಾಗಿಯೂ, ಸ್ಥಿರಚಿತ್ತನಾಗಿಯೂ, ಕರ್ಮನಿಷ್ಠನಾಗಿಯೂ ಇರುವ ವಿದ್ವಾಂಸನೇ ಉಪದೇಶಕ್ಕೆ ಯೋಗ್ಯನು.

ಕ್ವ ಮಾಂಸಂ ಕ್ವ ಚ ಸಾ ಭಕ್ತಿಃ ಕ್ವ ಮದ್ಯಂ ಕ್ವಾಚ್ಯುತಾರ್ಚನಮ್ ।
ಮದ್ಯಮಾಂಸರತಾನಾಂ ಹಿ ದೂರೇ ತಿಷ್ಠತಿ ಚಾಚ್ಯುತಃ ॥೩೬॥

ವ್ಯಾಧನೇ! ಮಾಂಸವೆಲ್ಲಿ ; ಭಕ್ತಿಯೆಲ್ಲಿ? ಮದ್ಯವೆಲ್ಲಿ ; ಅಚ್ಯುತನ

ಪೂಜೆಯೆಲ್ಲಿ? ಒಂದಕ್ಕೊಂದಕ್ಕೆ ಸಂಬಂಧವಿರುವುದೇ? ಮದ್ಯಮಾಂಸರತ ರಾದವರಿಗೆ ಅಚ್ಯುತನು ದೂರವಾಗಿಯೇ ನಿಲ್ಲುತ್ತಾನೆ.

ಆದುದರಿಂದ ಪರಲೋಕದಲ್ಲಿ ಸದ್ಗತಿಯನ್ನಪೇಕ್ಷಿಸುವ ತಪೋಜ್ಞಾನ ಸಂಪನ್ನನು ಪರಲೋಕನಾಶಕವಾದ ಉಪದೇಶವನ್ನೆಂದಿಗೂ ಮಾಡಬಾರದು."

ವ್ಯಾಧನು ಹೇಳುತ್ತಾನೆ :

"ಭೂಸುರೋತ್ತಮರೇ! ನಾನಂತೂ ನಿಮಗೆ ಶಿಷ್ಯನಾಗಿಬಿಟ್ಟಿದ್ದೇನೆ. ಗುರುಗಳೇ! ನಾನೀಗ ದೃಢಚಿತ್ತನಾಗಿಯೂ, ದೃಢಾಚಾರನಾಗಿಯೂ, ನಿಮ್ಮಲ್ಲಿಯೇ ದೃಢವಾದ ಭಕ್ತಿಯುಳ್ಳವನಾಗಿಯೂ ಇರುವೆನು. ಈ ದುಃಖ ಕರವಾದ ಸಂಸಾರವೆಂಬ ಸಮುದ್ರದಿಂದ ನನ್ನನ್ನು ದಾಟಿಸಿರಿ.

ಕೃಪಾಳವೋ ಹಿ ಸರ್ವತ್ರ ದಯಾಂ ಕುರ್ವನ್ತಿ ದೇಹಿಷು ॥೬೯॥

ಕೃಪಾಶಾಲಿಯಾದವರು ಯಾವ ವಿವೇಚನೆಯನ್ನೂ ಮಾಡದೆ ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಕೃಪೆದೋರುವರಲ್ಲವೇ?

ಈಗ ನೀವೇ ಜ್ಞಾನದೃಷ್ಟಿಯಿಂದ ಯೋಚಿಸಿ ನನಗೆ ಯೋಗ್ಯವಾದ ಮಂತ್ರವನ್ನು ಉಪದೇಶಿಸಬೇಕು. ನಿಮ್ಮ ಜೊತೆಯಲ್ಲಿರುವ ಈ ಎಲ್ಲ ಬ್ರಾಹ್ಮಣರೂ ಲೋಕಮರ್ಯಾದೆಯನ್ನು ಪರಿಪಾಲಿಸತಕ್ಕ ನಿಮ್ಮನ್ನೇ ಈ ಕಾರ್ಯಕ್ಕೆ ನಿರ್ದೇಶಿಸುತ್ತಿದ್ದಾರೆ. ಅವರೆಲ್ಲರೂ ನಿಮಗೆ ಅಧೀನರು. ಯಾವ ಕಾರ್ಯವನ್ನು ಅವರು ಸ್ವತಂತ್ರವಾಗಿ ಮಾಡುವುದಿಲ್ಲ. ಮಹಾಬುದ್ಧಿ ಶಾಲಿಗಳೇ! ನಾನೀಗ ಕೃತಕೃತ್ಯನಾಗಿದ್ದೇನೆ. ನನ್ನನ್ನು ಸಂರಕ್ಷಿಸಿರಿ.

ಕೃತವಿದ್ಯಾಗಮಾನಾಂ ಹಿ ವಿಪ್ರಾಣಾಮಗ್ನಿವರ್ಚಸಾಮ್ ।
ಆಪತ್ಕಾಲೇ ನ ಮರ್ಯಾದಾ ಕೃತ್ಯಾಕೃತ್ಯವಿಚಾರಣಾ ॥೭೨॥

ವಿದ್ಯಾವಂತರಾಗಿಯೂ ತೇಜಸ್ವಿಗಳಾಗಿಯೂ ಇರುವ ಬ್ರಾಹ್ಮಣರಿಗೆ ಆಪತ್ಕಾಲದಲ್ಲಿ ಲೋಕಮರ್ಯಾದೆಯೂ ಕೃತ್ಯಾಕೃತ್ಯವಿಚಾರವೂ ಇರುವು ದಿಲ್ಲ.

ಅತಿಘೋರವಾಗಿಯೂ, ಭಯಂಕರವಾಗಿಯೂ, ಪ್ರಾಣರಕ್ಷಕರಿಲ್ಲ ದೆಯೂ ಇರುವ ಈ ಕಾಡಿನಲ್ಲಿ ನಿಮಗೆ ಆಪತ್ಕಾಲವು ಒದಗಿಬಂದಿದೆ.

ನಿಮ್ಮೆಲ್ಲರ ಆಯುಷ್ಯವೂ ನನ್ನ ಅಧೀನದಲ್ಲಿದೆ. ಈ ಅರಣ್ಯದಲ್ಲಿ ನನ್ನನ್ನು ಬಿಟ್ಟು ಬೇರೆ ಯಾರೂ ನಿಮ್ಮ ರಕ್ಷಣೆಗೆ ಬರಲಾರರು.”

ಹೀಗೆಂದು ಹೇಳಿ ಆ ಬೇಡನು ಸಪ್ತರ್ಷಿಗಳನ್ನು ದೊಣ್ಣೆಯಿಂದ ಪ್ರಹರಿಸಲು ಪ್ರಾರಂಭಿಸಿದನು. ಶತ್ರುವನ್ನೂ ಮಿತ್ರನನ್ನೂ ಸಮನಾಗಿ ಭಾವಿಸಿದ್ದ ಬ್ರಹ್ಮಜ್ಞಾನಿಗಳಾಗಿದ್ದ ಮಹರ್ಷಿಗಳು ವ್ಯಾಧನ ವರ್ತನೆಯನ್ನು ನೋಡಿ ಗಹ-ಗಹಿಸಿ ನಕ್ಕರು.

೨೪ನೆಯ ಸರ್ಗವು ಮುಗಿಯಿತು.

‘ಮರಾ’ ಮಂತ್ರದ ಉಪದೇಶ

ಶಿವನು ಪಾರ್ವತಿಗೆ ಹೇಳುತ್ತಾನೆ :

ತತಃ ಸರ್ವೇ ಸಮಾಗಮ್ಯ ವಸಿಷ್ಠಂ ವಾಕ್ಯಮಬ್ರುವನ್ ।
ಯಥಾ ತರೇಮ ಸರ್ವೇ ಹಿ ಚೋರಾದ್ವ್ಯಾಘ್ರಸಮಾದ್ವಯಮ್ ।
ಕುಶಲಃ ಸರ್ವಕಾರ್ಯೇಷು ತಥಾ ನೀತಿರ್ವಿಧೀಯತಾಮ್ ॥೧॥

“ಪಾರ್ವತಿ! ಅನಂತರ ಎಲ್ಲ ಋಷಿಗಳೂ ವಸಿಷ್ಠರ ಬಳಿಗೆ ಬಂದು ಹೇಳಿದರು :

“ವಸಿಷ್ಠರೇ! ವ್ಯಾಘ್ರಸದೃಶನಾಗಿರುವ ಈ ವ್ಯಾಧನಿಂದ ನಾವು ತಪ್ಪಿಸಿಕೊಳ್ಳುವುದೆಂತು? ನೀವು ಎಲ್ಲ ಕಾರ್ಯಗಳಲ್ಲಿಯೂ ಕುಶಲಿಗಳಾಗಿರುವಿರಿ. ಇವನಿಂದ ನಮಗೆ ಅಪಾಯವು ಉಂಟಾಗದ ರೀತಿಯಲ್ಲಿ ಯಾವುದಾದರೂ ಉಪಾಯವನ್ನು ಕಂಡುಹಿಡಿಯಿರಿ.”

ಮುನಿಗಳೆಲ್ಲರೂ ಹೀಗೆ ಹೇಳಲು ವಸಿಷ್ಠರು ಉತ್ತರಿಸಿದರು :

ಆಪತ್ಕಾಲೇ ತು ಸಮ್ಪ್ರಾಪ್ತೇ ಸ್ಮರ್ತವ್ಯೋ ಹರಿರೀಶ್ವರಃ ।
ಆಪದಸ್ತಸ್ಯ ನಶ್ಯನ್ತಿ ಸತಿ ಸೂರ್ಯೇ ತಮೋ ಯಥಾ ॥೩॥

“ಮುನಿಗಳೇ! ಆಪತ್ಕಾಲವು ಒದಗಿಬಂದಾಗ ಸರ್ವಲೋಕೇಶ್ವರನಾದ ಹರಿಯನ್ನು ಸ್ಮರಿಸಬೇಕು. ಹೀಗೆ ಸ್ಮರಿಸುವವನಿಗೆ ಸೂರ್ಯೋದಯವಾದೊಡನೆಯೇ ಅಂಧಕಾರವು ತೊಲಗುವಂತೆ ಸಮಸ್ತವಿಪತ್ತುಗಳೂ ದೂರವಾಗು ತ್ತವೆ.

ಈ ಅರಣ್ಯವೀಗ ಚೋರರಿಂದ ಆವೃತವಾಗಿದೆ. ಅತಿಭಯಂಕರವಾಗಿದೆ. ವ್ಯಾಘ್ರ-ಮೃಗಾದಿಗಳಿಂದಲೂ ವ್ಯಾಪ್ತವಾಗಿದೆ. ನಿರ್ಜನವಾಗಿದೆ. ಇಂತಹ ಸಮಯದಲ್ಲಿ ನಾವು ಅವಶ್ಯವಾಗಿ ರಘುನಂದನನನ್ನು ಸ್ಮರಿಸಬೇಕು. ಧನುರ್ಬಾಣಗಳನ್ನು ಧರಿಸಿರುವವನೂ, ಮಹಾವೀರನೂ, ಮೇಘಶ್ಯಾಮಲ ಮೂರ್ತಿಯೂ, ಮಹಾಬಲನೂ, ರಾಕ್ಷಸಾಂತಕನೂ, ಮಹಾತೇಜಸ್ವಿಯೂ, ರಾವಣಸಂಹಾರಕನೂ, ಸಕಲಲೋಕಪ್ರಭುವೂ, ಅಹಲ್ಯಾಶಾಪವಿಮೋಚಕನೂ, ಪವಿತ್ರವಾದ ಪಾದಕಮಲಗಳುಳ್ಳವನೂ, ದುಷ್ಟರಾಕ್ಷಸಸಂಹಾರಕನೂ, ಮಹಾಬಲಪರಾಕ್ರಮಿಯೂ, ಮಹಾಬಲಶಾಲಿಯೂ, ಹತ ಶತ್ರುವೂ, ಧರ್ಮಸಂಸ್ಥಾಪಕನೂ, ಉದಾರಹೃದಯನೂ, ಸರ್ವದುಷ್ಟ ಸಂಹಾರಕನೂ, ಸರ್ವೋಪದ್ರವವಿನಾಶಕನೂ, ಸಕಲವಿಧವಾದ ಆಧಿಗಳನ್ನೂ ವ್ಯಾಧಿಗಳನ್ನೂ ಪರಿಹರಿಸತಕ್ಕವನೂ, ಸರ್ವಪಾಪವಿನಾಶಕನೂ, ಭಕ್ತರಿಗೆ ಅಭಯವನ್ನು ಕೊಡತಕ್ಕವನೂ ಆಗಿರುವ ಶ್ರೀರಾಮನು ನಿರ್ಜನವಾದ ಮತ್ತು ಭಯಂಕರವಾದ ಈ ಅರಣ್ಯದಲ್ಲಿ ನಮಗೆ ರಕ್ಷಕನಾಗಲಿ.

ಆಪದಾಮಪಹರ್ತಾರಂ
ದಾತಾರಂ ಸರ್ವಸಂಪದಾಮ್ ।
ಲೋಕಾಭಿರಾಮಂ ಶ್ರೀರಾಮಂ
ಭೂಯೋ ಭೂಯೋ ನಮಾಮ್ಯಹಮ್ ॥೯॥

ಭಕ್ತರ ಆಪತ್ತುಗಳನ್ನು ಪರಿಹರಿಸತಕ್ಕವನೂ, ಸಕಲಸಂಪತ್ತುಗಳನ್ನು ಕೊಡತಕ್ಕವನೂ, ಸರ್ವಲೋಕಮನೋಹರನೂ ಆಗಿರುವ ಶ್ರೀರಾಮನಿಗೆ ನಾನು ಪುನಃ ಪುನಃ ನಮಸ್ಕರಿಸುತ್ತೇನೆ.

ಅಗ್ರತಃ ಪೃಷ್ಠತಶ್ಚೈವ ಪಾರ್ಶ್ವತಶ್ಚ ಮಹಾಬಲೌ ।
ಆಕರ್ಣಪೂರ್ಣಧನ್ವಾನೌ ರಕ್ಷೇತಾಂ ರಾಮಲಕ್ಷ್ಮಣೌ ॥೧೦॥

ಕರ್ಣಪರ್ಯಂತವಾಗಿ ಧನುಸ್ಸಿನ ಶಿಂಜಿನಿಯನ್ನು ಸೆಳೆದು ಹಿಡಿದಿರುವ ಮಹಾಬಲಿಷ್ಠರಾದ ರಾಮ-ಲಕ್ಷ್ಮಣರು ಮುಂದೆ-ಹಿಂದೆ ಮತ್ತು ಅಕ್ಕ-ಪಕ್ಕಗಳಲ್ಲಿ ನಮ್ಮನ್ನು ರಕ್ಷಿಸಲಿ.

ಸ್ಮೃತ್ವಾ ನಾರಾಯಣಂ ದೇವಂ ಗಜೋಽಪಿ ಚ್ಛಿನ್ನಬನ್ಧನಃ ।
ಕಿಂಪುನರ್ಮಾನವಾ ರಾಮಂ ಜ್ಞಾತ್ವಾ ಸಞ್ಛಿನ್ನಬನ್ಧನಾಃ ॥೧೧॥

ಶ್ರೀಮನ್ನಾರಾಯಣನನ್ನು ಸ್ಮರಿಸಿದ ಮಾತ್ರದಿಂದಲೇ ಆನೆಗೂ ಕೂಡ ಬಂಧನದಿಂದ ಮೋಕ್ಷವು ಲಭಿಸಿತು. ಹೀಗಿರುವಾಗ ಮನುಷ್ಯರು ಶ್ರೀರಾಮನನ್ನು ಸ್ಮರಿಸಿ ಬಂಧನದಿಂದ ಮುಕ್ತರಾಗುವರೆಂಬುದರಲ್ಲಿ ಆಶ್ಚರ್ಯವೇನಿದೆ?"

ಪ್ರಾಣಾಪತ್ತಿಗೆ ಒಳಗಾಗಿದ್ದ ಮಹರ್ಷಿಗಳು ಹೀಗೆ ಯೋಚಿಸಿ ಆತ್ಮರಕ್ಷಣೆಗಾಗಿ ಶ್ರೀರಾಮನನ್ನು ಶರಣುಹೊಂದಿದರು. ತದೇಕಚಿತ್ತರಾಗಿ ಧ್ಯಾನ ಮಾಡುತ್ತಿದ್ದ ವಸಿಷ್ಠಮಹರ್ಷಿಗಳಿಗೆ ಅರಣ್ಯ-ವೃಕ್ಷ-ಲತೆ–ಎಲ್ಲವೂ ಬ್ರಹ್ಮಮಯವಾಗಿ ಕಂಡಿತು. ಹೀಗೆ ವಸಿಷ್ಠರು ಧ್ಯಾನಯೋಗದ ಮೂಲಕವಾಗಿ ಸರ್ವಾತ್ಮನಾದ ಶ್ರೀರಾಮನನ್ನು ಸಂದರ್ಶಿಸಿದರು.

ರಾಘವಾನುಗ್ರಹೇಣೈವ ಮರೇತಿದ್ವ್ಯಕ್ಷರಂ ಶುಭಮ್ ।
ಗಗನೋದೀರಿತಂ ಶಬ್ದಂ ಶುಶ್ರಾವ ಸ ತದಾ ಮುನಿಃ ॥೧೪॥

ವಸಿಷ್ಠಮಹರ್ಷಿಗಳು ಕೇವಲ ಶ್ರೀರಾಮನ ಅನುಗ್ರಹದಿಂದಲೇ ಆಕಾಶದ ಕಡೆಯಿಂದ ಕೇಳಿಬಂದ ಎರಡಕ್ಷರಗಳಿಂದ ಕೂಡಿದ ಶುಭಕರವಾದ 'ಮರಾ' ಎಂಬ ಶಬ್ದವನ್ನು ಕೇಳಿದರು.

ಧ್ಯಾನಯೋಗದಲ್ಲಿ ಶ್ರೀರಾಮನ ಲೋಕವನ್ನೇ ಹೊಂದಿದ್ದ ವಸಿಷ್ಠಮಹರ್ಷಿಗಳು ಆ ದಿವ್ಯಶಬ್ದವನ್ನು ಕೇಳುತ್ತಲೇ ಬಹಿರ್ಮುಖರಾಗಿ ತಮ್ಮ ಸುತ್ತಲೂ ಇದ್ದ ಮುನಿಗಳಿಗೆ ಹೇಳಿದರು :

ಶ್ರುತಃ ಶಬ್ದೋ ಮಯಾ ವಿಪ್ರಾಃ ಮರೇತಿದ್ವ್ಯಕ್ಷರೋಽಧುನಾ ।
ತತೋ ವದನ್ತು ಮುನಯಃ ಕಿಂ ಕೃತಂ ಸುಕೃತಂ ಭವೇತ್ ॥೧೬॥

"ಬ್ರಾಹ್ಮಣಶ್ರೇಷ್ಠರೇ! ನಾನು ಧ್ಯಾನಯೋಗದಲ್ಲಿದ್ದಾಗ 'ಮರಾ' ಎಂಬ ಎರಡಕ್ಷರಗಳಿಂದ ಕೂಡಿದ ಶುಭಕರವಾದ ಶಬ್ದವು ನನ್ನಿಂದ ಕೇಳಲ್ಪಟ್ಟಿತು. ಈಗ ನಾವು ಏನು ಮಾಡಿದರೆ ಒಳ್ಳೆಯದಾಗುವುದೋ ಅದನ್ನು ನೀವೆಲ್ಲರೂ ಸಮಾಲೋಚಿಸಿ ಹೇಳಿರಿ."

ಮುನಿಗಳು ಹೇಳುತ್ತಾರೆ :

“ವಸಿಷ್ಠಮಹರ್ಷಿಗಳೇ! ತಮಗೇ ಎಲ್ಲವೂ ಗೊತ್ತಿದೆ. ನೀವು ಬುದ್ಧಿವಂತರಲ್ಲಿ ಶ್ರೇಷ್ಠರಾದವರು. ಆದರೂ ನೀವು ಕೇಳಿದ್ದಕ್ಕೆ ಉತ್ತರವಾಗಿ ನಮ್ಮೆಲ್ಲರಿಗೂ ಹಿತಕರವಾಗಿರುವ ಈ ಮಾತನ್ನು ಹೇಳುವೆವು.

ಆಪನ್ನೋ ಯಸ್ತು ಪುರುಷೋ ನಿರಾಲಮ್ಬೋ ಜಿಜೀವಿಷುಃ ।
ತಾಮಾಪದಂ ಸನ್ತರೇತ ಯೇನಕೇನಾಪಿ ಕರ್ಮಣಾ ॥೧೮॥

ಯಾವ ಮನುಷ್ಯನು ಆಪತ್ತಿಗೆ ಗುರಿಯಾಗಿ ಬೇರಾವ ಅವಲಂಬನೆಯೂ ಇಲ್ಲದೇ ಇರುವನೋ ಅಂತಹವನು ಬದುಕುವ ಇಚ್ಛೆಯುಳ್ಳವನಾಗಿದ್ದರೆ ಯಾವ ಕಾರ್ಯವನ್ನಾದರೂ ಮಾಡಿ ಆ ವಿಪತ್ತಿನಿಂದ ಪಾರಾಗಬೇಕು.

ಈಗ ನಾವಾದರೋ ಪ್ರಾಣಾಂತಿಕವಾದ ವಿಪತ್ತಿಗೆ ಒಳಗಾಗಿದ್ದೇವೆ. ಈ ಸಮಯದಲ್ಲಿ ಶ್ರೀರಾಮನ ಅನುಗ್ರಹದಿಂದಲೇ ನಿಮಗೆ ದಿವ್ಯವಾದ ‘ಮರಾ’ ಎಂಬ ಶಬ್ದವು ಕೇಳಿಬಂದಿರುವುದು.

ಮರೇತಿ ಯಃ ಶ್ರುತಃ ಶಬ್ದಃ ತ್ವಯಾ ಬ್ರಹ್ಮನ್ಮಹಾಮುನೇ ।
ತಮೇವ ತಸ್ಯೋಪದಿಶ ಮುಕ್ತೋ ಭವತು ಪಾತಕೀ ॥೨೦॥

‘ಮರಾ’ ಎಂಬ ಯಾವ ಶಬ್ದವನ್ನು ಶ್ರೀರಾಮನ ಅನುಗ್ರಹದಿಂದಲೇ ನೀವು ಕೇಳಿದಿರೋ ಆ ಶಬ್ದವನ್ನೇ ವ್ಯಾಧನಿಗೆ ಉಪದೇಶಿಸಿರಿ. ಅದರಿಂದಲೇ ಆ ಪಾತಕಿಯು ಪಾಪಗಳಿಂದ ಮುಕ್ತನಾಗಲಿ.”

ವಸಿಷ್ಠರು ಹೇಳುತ್ತಾರೆ :

ಅಹಮದ್ಯೈವ ದಾಸ್ಯಾಮಿ ಮನ್ತ್ರಮೇತದುದೀರಿತಮ್ ।
ನಾನ್ಯತ್ರ ವಿನಿಯೋಗೋಽಸ್ತಿ ಮನ್ತ್ರಸ್ಯಾಸ್ಯ ಮುನೀಶ್ವರಾಃ ॥೨೧॥

“ಮುನೀಶ್ವರರೇ! ಆಕಾಶದಿಂದ ಹೊರಬಂದ ಈ ಮಂತ್ರವನ್ನು ನಾನೀಗಲೇ ಇವನಿಗೆ ಉಪದೇಶಿಸುತ್ತೇನೆ. ಈ ಮಂತ್ರಕ್ಕೆ ಮತ್ತೆಲ್ಲೂ ವಿನಿಯೋಗವಿಲ್ಲ.”

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

"ಪಾರ್ವತಿ! ಹೀಗೆಂದು ಮುನಿಗಳಿಗೆ ಹೇಳಿ ಬುದ್ಧಿಶಾಲಿಗಳಾದ ವಸಿಷ್ಠರು ಸಾಕ್ಷಾತ್ ಮೃತ್ಯುದೇವತೆಯೋ ಎಂಬಂತೆ ಕಾಣುತ್ತಿದ್ದು ತಮ್ಮ ಬಳಿಗೆ ಉಪದೇಶಾರ್ಥವಾಗಿ ಬಂದಿರುವ ಅತಿಕ್ರೂರನಾಗಿದ್ದ ಚೋರನನ್ನು ಕಂಡು ಅವನನ್ನು ತಮ್ಮ ಹತ್ತಿರಕ್ಕೆ ಕರೆದು ಭಯರಹಿತವಾದ ಮನಸ್ಸಿನಿಂದ ಹೇಳಿದರು:

"ಚೋರ! ಚೋರ! ಬೇಗ ಬಾ. ಮಂತ್ರವನ್ನಪೇಕ್ಷಿಸಿರುವ ನೀನು ಅತ್ಯಂತ ಗುಣಶಾಲಿಯಾಗಿರುವೆ. ನಿನ್ನ ಅಪೇಕ್ಷೆಯಂತೆ ನಾನೀಗ ನಿನಗೆ ಮಂತ್ರೋಪದೇಶಮಾಡುತ್ತೇನೆ. ಇದನ್ನು ನೀನು ಜಪಿಸಿದೆಯಾದರೆ ಅಮೃತತ್ತ್ವವನ್ನೇ ಪಡೆಯುವೆ."

ಮಹಾತ್ಮರಾದ ವಸಿಷ್ಠರು ಹೀಗೆ ಹೇಳಿದೊಡನೆಯೇ ಚೋರನು ಅತ್ಯಂತಸಂಭ್ರಮದಿಂದ ವಸಿಷ್ಠರಿಗೆ ಪ್ರಣಾಮಮಾಡಿದನು.

"ಮಹರ್ಷಿಗಳೇ! ನಿಮ್ಮ ಕರುಣೆಗೆ ಪಾತ್ರನಾದ ನಾನು ನಿಶ್ಚಯವಾಗಿಯೂ ಧನ್ಯನೇ ಸರಿ. ನಿಮ್ಮಿಂದ ನಾನು ಅನುಗೃಹೀತನಾಗಿದ್ದೇನೆ.

ಸಾಧೂನಾಂ ಸಮಚಿತ್ತಾನಾಂ ನ ಹಿ ವೈಷಮ್ಯಧೀಃ ಕ್ವಚಿತ್ ॥೨೬॥

ಸಮಚಿತ್ತರಾಗಿರುವ ಸಾಧುಗಳಿಗೆ ಯಾವಾಗಲೂ ಪಕ್ಷಪಾತದ ಬುದ್ಧಿಯಿರುವುದಿಲ್ಲ.

ಸೂರ್ಯಾಚನ್ದ್ರಮಸೋಃ ಪಾದಾಃ ಪವಿತ್ರಂ ಕುರ್ವತೇ ಜಗತ್ ।
ಏವಂ ಸನ್ತೋ ಮಹಾತ್ಮಾನಃ ಪಾವಯನ್ತಿ ಜಗತ್ತ್ರಯಮ್ ॥೧೨೭॥

ಸೂರ್ಯ-ಚಂದ್ರರ ಕಿರಣಗಳು ಯಾವ ಪಕ್ಷಪಾತವೂ ಇಲ್ಲದೆ ಜಗತ್ತನ್ನು ಪವಿತ್ರಗೊಳಿಸುವಂತೆ ಮಹಾತ್ಮರಾದ ಸತ್ಪುರುಷರು ಯಾವ ತಾರತಮ್ಯವೂ ಇಲ್ಲದೆ ತಮ್ಮ ಉಪದೇಶಗಳಿಂದ ಮೂರು ಲೋಕಗಳನ್ನೂ ಪವಿತ್ರಗೊಳಿಸುತ್ತಾರೆ.

ಬ್ರಾಹ್ಮಣರಾದ ನೀವೆಲ್ಲಿ? ಗೋಮಾಂಸಭಕ್ಷಕರಾದ ನಾವೆಲ್ಲಿ? ಆದರೂ ಯಾವನಾದರೂ ಶರಣಾಗತನಾಗಿ ಪಂಡಿತರಲ್ಲಿಗೆ ಹೋದರೆ

ಯಾವ ವಿಧವಾದ ತಾರತಮ್ಯವೂ ಇಲ್ಲದೆ ದಯೆಯನ್ನು ತೋರುತ್ತಾರೆ. ಮಹಾತ್ಮರೇ! ನಿಮ್ಮ ಕೃಪಾದೃಷ್ಟಿಯು ನನ್ನ ಮೇಲೆ ಬಿದ್ದ ಮಾತ್ರದಿಂದಲೇ ನನ್ನ ಪಾಪಗಳೆಲ್ಲವೂ ನಷ್ಟವಾಗಿಹೋದುವು. ನನ್ನ ಜನ್ಮವು ಸಾಫಲ್ಯವನ್ನು ಹೊಂದಿತು. ಈ ಭುವಿಯಲ್ಲಿ ನಾನಿಂದು ಸಿದ್ಧನೇ ಆಗಿಬಿಟ್ಟಿದ್ದೇನೆ. ಸಂಸಾರಸಾಗರವನ್ನು ದಾಟಿಬಿಟ್ಟಿದ್ದೇನೆ. ಪರಮಪದವನ್ನು ಪಡೆದು ಕೊಂಡಿದ್ದೇನೆ. ಪ್ರಳಯಕಾಲದವರೆಗೂ ನನ್ನ ಯಶಸ್ಸು ಲೋಕದಲ್ಲಿ ಹರಡಿಕೊಂಡಿರುತ್ತದೆ. ಮೂಜಗದಲ್ಲಿಯೂ ನಾನು ಪ್ರಸಿದ್ಧಿಹೊಂದುವೆನು.

ಮಹರ್ಷಿಗಳೇ! ನಾನೀಗ ನಿಮಗಾಗಿ ಏನುಮಾಡಲಿ? ಯಾವುದನ್ನು ತಮಗೆ ತಂದುಕೊಡಲಿ? ಈ ನನ್ನ ದೇಹವು ನಿಮಗೆ ಅಧೀನವಾಗಿದೆ. ನನ್ನ ಪ್ರಾಣ ಮತ್ತು ಜೀವಿತಗಳೂ ತಮಗೇ ಸಮರ್ಪಿತವಾಗಿವೆ.

ನಾನು ಹುಟ್ಟಿದಾಗಿನಿಂದ ಸಂಗ್ರಹಿಸಿಟ್ಟುಕೊಂಡಿರುವ ಅಮಂಗಳಕರ ವಾದ ಪಾಪಗಳೆಲ್ಲವೂ ಗುರುಗಳ ಪಾದಗಳಿಗೆ ನಮಸ್ಕಾರಮಾಡುವುದ ರಿಂದಲೇ ಲಯವಾಗಿ ಹೋಗುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಗುರುಪಾದೋದಕೇನೈವ ದುಸ್ತರಂ ಭವಸಾಗರಮ್ ।
ತರನ್ತಿ ಶುದ್ಧಹೃದಯಾಃ ಗುರುಸೇವಾಹತೈನಸಃ ॥೩೩॥

ಶುದ್ಧಾಂತಃಕರಣವುಳ್ಳವರು ಗುರುಪಾದೋದಕಪಾನದಿಂದಲೂ ಗುರು ಗಳ ಸೇವೆಯಿಂದಲೂ ನಷ್ಟವಾದ ಪಾಪವುಳ್ಳವರಾಗಿ ದುಸ್ತರವಾದ ಸಂಸಾರ ಸಾಗರವನ್ನು ದಾಟುತ್ತಾರೆ.

ಗುರೂಣಾಂ ಚರಣಾಮ್ಭೋಜಂ ಯೇಽರ್ಚಯನ್ತಿ ಸದಾ ಹೃದಿ ।
ತೇಷಾಂ ನಶ್ಯನ್ತಿ ವಿಪದೋ ಭಜನ್ತೇ ಸರ್ವಸಮ್ಪದಃ ॥೩೪॥

ಗುರುಗಳ ಚರಣಕಮಲಗಳನ್ನು ಹೃನ್ಮಂದಿರದಲ್ಲಿರಿಸಿಕೊಂಡು ಯಾರು ಪೂಜೆಮಾಡುವವರೋ ಅಂತಹವರಿಗೆ ಒದಗಿಬರುವ ಸಮಸ್ತವಿಪತ್ತುಗಳೂ ನಾಶಹೊಂದುತ್ತವೆ. ಸಮಸ್ತವಾದ ಸಂಪತ್ತುಗಳೂ ಅವರನ್ನು ಸೇವಿಸುತ್ತವೆ.

ಗುರುರೇವ ಪರಂ ಬ್ರಹ್ಮ ಗುರುರೇವ ಸ್ವದೇವತಾ ।
ಗುರುರ್ವಿತ್ತಂ ಗುರುಸ್ತತ್ತ್ವಂ ನಾಸ್ತಿ ತತ್ತ್ವಂ ಗುರೋಃ ಪರಮ್ ॥

ಗುರುವೇ ಪರಬ್ರಹ್ಮವು. ಗುರುವೇ ಆತ್ಮದೇವತೆಯು. ಗುರುವೇ ವಿತ್ತವು. ಗುರುವೇ ತತ್ತ್ವವು. ಗುರುವಿಗಿಂತ ಬೇರೆಯಾದ ತತ್ತ್ವವೇ ಬೇರೊಂದಿಲ್ಲ.

ತಸ್ಮಾತ್ಸರ್ವಪ್ರಯತ್ನೇನ ಕರ್ತವ್ಯಂ ಗುರುಪೂಜನಮ್ ।
ಸದ್ಗುರೋಃ ಪೂಜನಾದೇವ ತತ್ತ್ವಂ ಕರತಲೇ ಸ್ಥಿತಮ್ ॥೩೭॥

ಆದುದರಿಂದ ಸರ್ವಪ್ರಯತ್ನದಿಂದಲೂ ಗುರುಪೂಜೆಯನ್ನು ಮಾಡಬೇಕು. ಸದ್ಗುರುವಿನ ಪೂಜೆಯಿಂದಲೇ ಪರತತ್ತ್ವವು ಕರತಲಾಮಲಕವಾಗುವುದು.

ಭವಾನ್ಯದಿ ಗುರೋರ್ಮಹ್ಯಂ ಆತರಂ ಭವಸಾಗರಮ್ ।
ಗೋಷ್ಪದೀಕೃತ್ಯ ದುಸ್ತಾರಂ ಹನುಮಾನ್ ಸಾಗರಂ ಯಥಾ ॥೩೮॥

ನೀವೇನಾದರೂ ನನಗೆ ಗುರುಗಳಾದರೆ ಹನುಮಂತನು ದಾಟಲು ಅಸಾಧ್ಯವಾಗಿದ್ದ ಮಹಾಸಾಗರವನ್ನು ಗೋಷ್ಪಾದದಂತೆ ಮಾಡಿಕೊಂಡು ದಾಟಿದಂತೆ ನಾನು ಈ ಸಂಸಾರಸಾಗರವನ್ನು ಬಹಳ ಸುಲಭವಾಗಿ ದಾಟುತ್ತೇನೆ.”

ಚೋರನು ಹೀಗೆ ಹೇಳಿದುದನ್ನು ಕೇಳಿ ಮಹರ್ಷಿಗಳಾದ ವಸಿಷ್ಠರಿಗೆ ಇವನು ಸಂಸಾರದಲ್ಲಿ ಆಸಕ್ತನಾಗಿರುವನೋ ವಿರಕ್ತನಾಗಿರುವನೋ ಎಂಬ ವಿಷಯದಲ್ಲಿ ಸಂಶಯವುಂಟಾಗಿ ತಮ್ಮಲ್ಲಿಯೇ ಆಲೋಚಿಸಿದರು.

ನ ಹೀದೃಶಾನಿ ವಾಕ್ಯಾನಿ ಚೋರಸ್ಯಾಸಕ್ತಚೇತಸಃ ।
ಚೋರಾಣಾಂ ಧನಹಾರಿತ್ವಂ ನ ತು ತತ್ತ್ವಪ್ರಭಾಷಣಮ್ ॥೩೯॥

ಸಂಸಾರದಲ್ಲಿಯೇ ಆಸಕ್ತರಾದ ಚೋರರು ಇಂತಹ ಮಾತುಗಳನ್ನೆಂದಿಗೂ ಆಡುವುದಿಲ್ಲ. ಕಳ್ಳರಿಗೆ ಧನಾಪಹರಣವು ಸ್ವಭಾವಗುಣವಾಗಿರುತ್ತದೆ. ತತ್ತ್ವದ ಸಂಬಂಧವಾಗಿ ಮಾತನಾಡುವುದು ಅವರ ಸ್ವಭಾವಗುಣವಾಗಿರುವುದಿಲ್ಲ.

ಇವನು ಮಹಾಮುನಿಯಂತೆ ಶಾಸ್ತ್ರೋಕ್ತವಾದ ತತ್ತ್ವವನ್ನು ಹೇಳು

ತ್ತಿರುವನು. ಇವನ ಬಾಯಿಂದ ಇಂತಹ ಮಾತುಗಳು ಹೊರಡುತ್ತಿರುವುದ ರಿಂದ ಇವನು ವಿರಕ್ತನೇ ಇರಬಹುದೆಂದು ನನಗೆ ತೋಚುತ್ತಿದೆ.

ವಚನಾದ್ಧೃದಯಂ ಗ್ರಾಹ್ಯಂ ದುಷ್ಟಂ ಶಿಷ್ಟಂ ಚ ಭಾಷಿತಾತ್ ।
ಯದಸ್ತಿ ಹೃದಯೇ ಲೋಕೇ ವಾಚಾ ವಕ್ತಿ ತದೇವ ಸಃ ॥೪೧॥

ಒಬ್ಬ ಮನುಷ್ಯನ ಹೃದಯವು ದುಷ್ಟವೋ ಅಥವಾ ಶಿಷ್ಟವೋ ಎಂಬುದನ್ನು ಅವನ ಬಾಯಿಂದ ಹೊರಡುವ ಮಾತಿನಿಂದ ಗ್ರಹಿಸಬಹು ದಾಗಿದೆ. ಲೋಕದಲ್ಲಿ ಮನುಷ್ಯನು ಅವನ ಹೃದಯದಲ್ಲಿ ಯಾವುದಿರು ವುದೋ ಅದನ್ನೇ ಬಾಯಿಂದ ಹೇಳುತ್ತಾನೆ.

ಇಂತಹ ಶುಭಕರವಾದ ಮಾತನ್ನು ಹೇಳುತ್ತಿರುವ ಇವನು ವಿರಕ್ತನೇ ಇರಬೇಕು. ವೈರಾಗ್ಯವನ್ನೇ ಆಶ್ರಯಿಸಿರುವ ಇವನಿಗೆ ಸಿದ್ಧಿಯಾಗುವುದರಲ್ಲಿ ಸಂಶಯವೇ ಇಲ್ಲ.

ಈ ವ್ಯಾಧನು ಹಿಂದೆ ಬ್ರಾಹ್ಮಣನಾಗಿದ್ದನು. ಆ ಜನ್ಮದಲ್ಲಿ ಮಾಡಿದ ಪಾಪದಿಂದಾಗಿ ಈಗ ವ್ಯಾಧನಾಗಿ ಹುಟ್ಟಿದ್ದಾನೆ. ಅನಾಚಾರಮಾಡುವುದರಿಂದ ವಿಚಿತ್ರವಾದ ಜನ್ಮಗಳು ಪ್ರಾಪ್ತವಾಗುವುದೆಂಬುದನ್ನು ನಾವು ಕೇಳಿದ್ದೇವೆ. ಹಿಂದಿನ ಜನ್ಮದಲ್ಲಿ ಅವನು ಮಾಡಿದ ಪುಣ್ಯವು ಪ್ರಬಲವಾಗಿದ್ದರೆ ಅದೇ ಅವನಿಗೆ ತಾರಕವಾಗುತ್ತದೆ. ಹಿಂದೆ ಇವನು ಬ್ರಾಹ್ಮಣನಾಗಿದ್ದಾಗ ಪುಣ್ಯದ ಅಭಾವವಿದ್ದುದರಿಂದ ಪಾಪಕರ್ಮಗಳನ್ನೇ ಮಾಡುತ್ತಿದ್ದುದರಿಂದ ಈ ವಿಧವಾದ ದುರ್ಬುದ್ಧಿಯು ಇದುವರೆಗೂ ಇವನಲ್ಲಿದ್ದಿತು.

ಮಾಯಾವಿನಾಂ ತು ಸರ್ವೇಷಾಂ ಮಾಯಾಮೇವ
ಪ್ರಯೋಜಯೇತ್ ॥

ಮೋಸಗಾರರಾದವರಿಗೆಲ್ಲರಿಗೂ ಮೋಸವನ್ನೇ ಮಾಡಬೇಕು. ಆದರೆ ಈ ಚೋರನು ಮೋಸಗಾರನೂ ಅಲ್ಲ; ಕಪಟಿಯೂ ಅಲ್ಲ. ಆದುದರಿಂದ ನಾನು ಇವನಿಗೆ ಆಕಾಶದಿಂದ ಪ್ರಾಪ್ತವಾಗಿರುವ ಮಂತ್ರವನ್ನು ಉಪದೇಶಿಸು ತ್ತೇನೆ.”

ಹೀಗೆ ಮನಸ್ಸಿನಲ್ಲಿ ಪರ್ಯಾಲೋಚಿಸಿ ವಸಿಷ್ಠಮಹರ್ಷಿಗಳು ಹಿಂದೆ ಆಕಾಶದಲ್ಲಿ ಕೇಳಿಬಂದ ‘ಮರಾ’ ಎಂಬೆರಡಕ್ಷರಗಳ ಮಹಾಮಂತ್ರವನ್ನು

ಸ್ಮರಿಸಿಕೊಂಡು ಆ ಮಹಾಮಂತ್ರವನ್ನು ಜಿತೇಂದ್ರಿಯನೂ ಮತ್ತು ಪ್ರಸನ್ನನೂ ಆಗಿದ್ದ ವ್ಯಾಧನಿಗೆ ಉಪದೇಶಿಸಿದರು.

೨೫ನೆಯ ಸರ್ಗವು ಮುಗಿಯಿತು.

ವ್ಯಾಧಮುನಿಯನ್ನು ತಪಸ್ಸಿನಿಂದ ವಿಮುಖನನ್ನಾಗಿ ಮಾಡಲು ಪತ್ನೀ-ಪುತ್ರರ ಪ್ರಯತ್ನ

ಶಿವನು ಪಾರ್ವತಿಗೆ ಹೇಳುತ್ತಾನೆ :

ತತಃ ಸ ತಿಮಿರಂ ಭಿತ್ವಾ ಬಭೌ ಸೂರ್ಯ ಇವೋದಿತಃ ।
ಉಪದೇಶಮನುಪ್ರಾಪ್ಯ ವಸಿಷ್ಠಾದೃಷಿಸತ್ತಮಾತ್ ॥೧॥

"ಪಾರ್ವತಿ! ಋಷಿಶ್ರೇಷ್ಠರಾದ ವಸಿಷ್ಠಮಹರ್ಷಿಗಳಿಂದ ವ್ಯಾಧನು ಮಂತ್ರೋಪದೇಶವನ್ನು ಪಡೆದೊಡನೆಯೇ ಅಂಧಕಾರವನ್ನು ಭೇದಿಸಿ ಕೊಂಡು ಹೊರಬಂದ ಸೂರ್ಯನೋಪಾದಿಯಲ್ಲಿ ಜಾಜ್ವಲ್ಯಮಾನವಾದ ತೇಜಸ್ಸಿನಿಂದ ಬೆಳಗತೊಡಗಿದನು. ಅಮಿತವಾದ ಆನಂದವನ್ನು ಪಡೆದು ವ್ಯಾಧನು ಕುಣಿಯತೊಡಗಿದನು.

ಜಿತಾ ಲೋಕಾ ಮಯಾ ಸರ್ವೇ ಪಾಪನಿರ್ಹರಣಂ ಕೃತಮ್ ।
ಚತುರ್ದಶಸು ಲೋಕೇಷು ಪಾತ್ರಭೂತೋಽಸ್ಮಿ ಸಾಮ್ಪ್ರತಮ್ ॥೨॥

"ಸಮಸ್ತಲೋಕಗಳನ್ನೂ ನಾನು ಜಯಿಸಿಬಿಟ್ಟೆನು. ಸಮಸ್ತವಾದ ಪಾಪಗಳನ್ನೂ ಕಳೆದುಕೊಂಡೆನು. ಹದಿನಾಲ್ಕು ಲೋಕಗಳಲ್ಲಿಯೂ ಎಲ್ಲರ ಪ್ರಶಂಸೆಗೂ ಪಾತ್ರನಾದೆನು."

ಹೀಗೆ ಹೇಳುತ್ತಾ ಆ ಚೋರನು ಮುಂದೆ ತನ್ನ ಕರ್ತವ್ಯವೇನೆಂಬು ದನ್ನು ಮನಗೊಂಡನು.

ಸಾವಿರಾರು ನಾರುಮಡಿಗಳನ್ನೂ, ನೂರಾರು ಹೂಜಿಗಳನ್ನೂ, ಅತ್ಯಂತ ಪ್ರಕಾಶಮಾನವಾಗಿದ್ದ ಲಕ್ಷ ಮುತ್ತಿನಹಾರಗಳನ್ನೂ, ರುದ್ರಾಕ್ಷಿಗಳ ಮಹಾ ಮಾಲೆಗಳನ್ನೂ, ಶುಭ್ರವಾಗಿರುವ ನೂರು ಪಟ್ಟೆವಸ್ತ್ರಗಳನ್ನೂ, ಪೀತಾಂಬರ ಗಳನ್ನೂ, ಹವಳಗಳಿಂದ ಮಿಶ್ರವಾಗಿರುವ ಜಪಮಾಲೆಗಳನ್ನೂ, ಕೇವಲ ಅಕ್ಷಮಾಲೆಗಳನ್ನೂ, ತಾಮ್ರದ ಪಾತ್ರೆಗಳನ್ನೂ, ವ್ಯಾಘ್ರಾಜಿನ-ಕೃಷ್ಣಾಜಿನ

ಗಳನ್ನೂ, ಮಣಿಗಳಿಂದ ಭೂಷಿತವಾದ ಸುವರ್ಣಮಯವಾದ ಯಜ್ಞೋಪವೀತಗಳನ್ನೂ, ದೇಶೀಯಮಣಿರತ್ನಗಳನ್ನೂ, ಕೋಟಿ-ಕೋಟಿ ಸಂಖ್ಯಾತವಾದ ಸುವರ್ಣನಾಣ್ಯಗಳನ್ನೂ, ನವರತ್ನಗಳನ್ನೂ ಬೇಡನು ಗುರುಗಳಾದ ವಸಿಷ್ಠರಿಗೆ ಗುರುದಕ್ಷಿಣೆಯನ್ನಾಗಿ ಕೊಟ್ಟು ಕೃತಾರ್ಥನಾದನು.

ವಸಿಷ್ಠಪ್ರಮುಖರಾದ ಮಹರ್ಷಿಗಳು ಚೋರನಿಗಿದ್ದ ಚಿತ್ತಶುದ್ಧಿಯನ್ನೂ, ವೈರಾಗ್ಯವನ್ನೂ, ವಿವೇಕವನ್ನೂ, ಔದಾರ್ಯವನ್ನೂ ನೋಡಿ ಅಚ್ಚರಿಗೊಂಡರು. ಶಿಷ್ಯನು ಕೊಟ್ಟ ಗುರುದಕ್ಷಿಣೆಯನ್ನು ತೆಗೆದುಕೊಂಡ ನಂತರ ವಸಿಷ್ಠಪ್ರಮುಖರಾದ ಮಹರ್ಷಿಗಳು ದುರ್ಗಮವಾಗಿದ್ದ ಆ ಅರಣ್ಯವನ್ನು ದಾಟಿ ಹಿಮಾಚಲಪರ್ವತಕ್ಕೆ ಹೊರಟುಹೋದರು.

ಅನಂತರ ವಸಿಷ್ಠರಿಂದ ಮಂತ್ರೋಪದೇಶವನ್ನು ಪಡೆದ ಆ ಚೋರನು ಸಮಸ್ತಪಾಪಗಳನ್ನೂ ಕಳೆದುಕೊಂಡು ತಪಸ್ಸುಮಾಡಲು ನಿಶ್ಚಯಿಸಿದನು. ಮಹಾನದಿಯಲ್ಲಿ ಸ್ನಾನಮಾಡಿ, ಉತ್ತಮವಾದ ವಲ್ಕಲವನ್ನೂ ಕೃಷ್ಣಾಜಿನ-ವ್ಯಾಘ್ರಾಜಿನಗಳನ್ನೂ ಧರಿಸಿ, ಕೈಯಲ್ಲಿ ಪವಿತ್ರವಾದ ದರ್ಭೆಯನ್ನಿಟ್ಟು ಕೊಂಡು, ಸ್ವಲ್ಪವೂ ಆಲಸ್ಯವಿಲ್ಲದೆ ಅಭ್ಯಂಗನಾದಿಗಳನ್ನು ವಿಸರ್ಜಿಸಿ ನೆಲದ ಮೇಲೆ ಮಲಗುತ್ತಾ ಜಿತೇಂದ್ರಿಯನಾಗಿ ಪರಮಹಿತರಾದ ವಸಿಷ್ಠರು ಉಪದೇಶಿಸಿದ ಮಂತ್ರವನ್ನು ಜಪಿಸಲು ಉಪಕ್ರಮಿಸಿದನು. ದೃಢಮನಸ್ಕನಾಗಿದ್ದ ಆ ಚೋರನಿಗೆ ಶ್ರಮವಾಗಲೀ, ಮನಸ್ಸಿನಲ್ಲಿ ಖೇದವಾಗಲೀ, ತಪಶ್ಚರಣೆಯು ಸಾಕೆಂಬ ಭಾವನೆಯಾಗಲೀ, ಬೇಸರವಾಗಲೀ ಉಂಟಾಗಲೇ ಇಲ್ಲ. ಹಾಗೆ ಅನವರತವಾಗಿ ತಪಸ್ಸುಮಾಡುತ್ತಿದ್ದಾಗ ಚೋರನು ಫಲ- ಮೂಲಗಳನ್ನೂ, ಕೆಲವು ಕಾಲ ಕಾಯಿಪಲ್ಯಗಳನ್ನೂ, ಕೆಲವು ಕಾಲ ನೀರನ್ನೂ, ಕೆಲವು ಕಾಲ ತರಗೆಲೆಗಳನ್ನೂ ತಿನ್ನುತ್ತಾ ಕೆಲವು ಕಾಲ ಕೇವಲ ವಾಯುಭಕ್ಷನಾಗಿಯೂ ಇರುತ್ತಿದ್ದನು.

ಪಞ್ಚೇನ್ದ್ರಿಯಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಬಾಹ್ಯಂ ವಿಸ್ಮೃತ್ಯ ಪವನಂ ಜಿತ್ವಾ ಜಪ್ಯಂ ಜಜಾಪ ಸಃ ॥೧೬॥

ಪಂಚೇಂದ್ರಿಯಗಳನ್ನೂ ನಿಗ್ರಹಿಸಿ, ಮನಸ್ಸನ್ನು ತನ್ನ ಹೃದಯ

ದೊಳಗೆ ನಿರೋಧಿಸಿ, ಬಾಹ್ಯವಿಷಯಗಳೆಲ್ಲವನ್ನೂ ಮರೆತು ಶ್ವಾಸೋಚ್ಛ್ವಾಸಗಳನ್ನು ತಡೆದು ಮಂತ್ರವನ್ನು ಜಪಿಸುತ್ತಿದ್ದನು.

ಚೋರನು ಬಹಳ ದಿವಸಗಳವರೆಗೆ ಮನೆಗೆ ಹಿಂದಿರುಗದಿರಲು ಅವನ ಪತ್ನೀ-ಪುತ್ರ-ಬಂಧುಗಳು ಹೇಳತೊಡಗಿದರು :

ಧನಾಶಾಪಾಶಸಮ್ಬದ್ಧಃ ಚೋರೋ ಯಾತಃ ಕ್ವಚಾಧುನಾ ।
ಧಿಗ್ಧನೇಚ್ಛಾಂ ಪಿಶುನತಾಂ ದೇವಾನಾಮಪಿ ದುಃಖದಾಮ್ ॥೧೭॥

ಧನಂ ಹಿ ಸರ್ವಜನ್ತೂನಾಂ ಅಮೃತಿಪ್ರೇಮಕಾರಣಮ್ ।
ಸುವರ್ಣಪ್ರಾಣಯೋರ್ಮಧ್ಯೇ ಸುವರ್ಣಂ ಶ್ರೇಷ್ಠಮುಚ್ಯತೇ ॥೧೮॥

ಪ್ರಾಣಾನಪಿ ಪರಿತ್ಯಜ್ಯ ಸ್ವರ್ಣಾಯ ಯತತೇ ಯತಃ ।
ವೇಧಾ ದ್ವೇಧಾ ಭ್ರಮಂ ಚಕ್ರೇ ಕಾನ್ತಾಸು ಕನಕೇಷು ಚ ॥೧೯॥

ತಾಸು ತೇಷ್ವಪ್ಯನಾಸಕ್ತಃ ಸಾಕ್ಷಾದ್ಭರ್ಗೋ ನರಾಕೃತಿಃ ॥೨೦॥

ಅರ್ಥಾನಾಮಾರ್ಜನೇ ದುಃಖಂ ಆರ್ಜಿತಾನಾಂ ತು ರಕ್ಷಣೇ ।
ನಾಶೇ ದುಃಖಂ ವ್ಯಯೇ ದುಃಖಂ ಧಿಗರ್ಥಂ ಕ್ಲೇಶದಂ ಸದಾ ॥೨೧॥

“ನಮ್ಮ ಚೋರರಾಜನು ಧನಾಶೆಯೆಂಬ ಪಾಶದಿಂದ ಬದ್ಧನಾಗಿ ಎಲ್ಲಿಗೆ ಹೊರಟು ಹೋಗಿದ್ದಾನೆ? ಧನೇಚ್ಛೆಗೆ ಧಿಕ್ಕಾರವಿರಲಿ. ಧನದ ಈ ಆಶೆಯು ದೇವತೆಗಳಿಗೂ ದುಃಖವುಂಟುಮಾಡುವುದಾಗಿದೆ. ಸಮಸ್ತಪ್ರಾಣಿಗಳಿಗೂ ಧನದ ಮೇಲಿನ ಪ್ರೀತಿಯು ಸಾಯುವವರೆಗೂ ಇರುತ್ತದೆ. ಸುವರ್ಣ ಮತ್ತು ಪ್ರಾಣಗಳ ತುಲನೆಯಲ್ಲಿ ಸುವರ್ಣವೇ ಪ್ರಿಯತಮವಾದುದೆಂದು ಭಾವಿಸುತ್ತಾರೆ. ಈ ಕಾರಣದಿಂದಲೇ ಪ್ರಾಣಗಳನ್ನಾದರೂ ಒತ್ತೆಯಿಟ್ಟು ಜನರು ಚಿನ್ನವನ್ನು ಸಂಗ್ರಹಿಸಲು ಪ್ರಯತ್ನಿಸುತ್ತಾರೆ. ಬ್ರಹ್ಮನು ಮನುಷ್ಯರಿಗೆ ಕಾಂತೆಯಲ್ಲಿಯೂ ಮತ್ತು ಕನಕದಲ್ಲಿಯೂ ಎರಡು ವಿಧವಾದ ಭ್ರಮೆಯನ್ನು ಕಲ್ಪಿಸಿರುವನು. ಇವೆರಡರಲ್ಲಿಯೂ ಆಸಕ್ತಿಯಿಲ್ಲದವನು ಮನುಷ್ಯರೂಪದಲ್ಲಿರುವ ಸಾಕ್ಷಾತ್ ಪರಮೇಶ್ವರನೆಂದೇ ಭಾವಿಸಬೇಕಾಗುತ್ತದೆ. ಧನವನ್ನು ಸಂಪಾದಿಸುವಾಗಲೂ ದುಃಖ. ಸಂಪಾದಿಸಿದುದನ್ನು ರಕ್ಷಿಸುವಾಗಲೂ ದುಃಖವು ತಪ್ಪಿದ್ದಲ್ಲ. ಅದು ನಾಶವಾದರೂ

ದುಃಖವಾಗುತ್ತದೆ. ವ್ಯಯವಾದರೂ ದುಃಖವಾಗುತ್ತದೆ. ಅಂತಹ ಕ್ಲೇಶ ದಾಯಕವಾದ ಧನಕ್ಕೆ ಧಿಕ್ಕಾರವಿರಲಿ.

ಆಶಾ ಲೋಭಃ ಸ್ಮಯೋ ಗರ್ವೋ ಮದೋ ದಮ್ಭೋತಿಮಾನಿತಾ ।
ತಿರಸ್ಕಾರೋ ಜನೇ ಕ್ರೋಧಃ ಪಾಪಂ ಚ ದ್ರವ್ಯಮಾಶ್ರಿತಮ್ ॥೨೨॥

ಆಶೆ, ಲೋಭ, ಅಹಂಕಾರ, ಗರ್ವ, ಮದ, ದಂಭ, ಅತಿಮಾನ, ಜನರಲ್ಲಿ ತಿರಸ್ಕಾರ, ಕ್ರೋಧ–ಇವೆಲ್ಲವೂ ಧನವನ್ನೇ ಆಶ್ರಯಿಸಿರುವುವು."

ಎಂದು ಯೋಚಿಸುತ್ತಾ ಚೋರನ ಬಂಧುಗಳು ಅವನಿಗೆ ಹಿತ ವನ್ನುಂಟುಮಾಡುವ ಅಪೇಕ್ಷೆಯಿಂದ ಅವನಿಗೆ ಬೇಕಾಗುವ ಸಮಸ್ತಸಾಮಗ್ರಿ ಗಳನ್ನೂ ತೆಗೆದುಕೊಂಡು ಅವನಿರುವ ಕಡೆಗೆ ಹೊರಟರು. ಅತಿಭಯಂಕರ ವಾಗಿಯೂ, ಘೋರವಾಗಿಯೂ ಇದ್ದ ಅರಣ್ಯವನ್ನೆಲ್ಲಾ ಹುಡುಕಿ ಅರಣ್ಯದ ಒಂದೆಡೆಯಲ್ಲಿ ರಹಸ್ಯವಾಗಿರುವ ಪ್ರದೇಶದಲ್ಲಿ ಸ್ಥಿರಾಸನನಾಗಿ ತಪಸ್ಸು ಮಾಡುತ್ತಿದ್ದ ಆ ವ್ಯಾಧನನ್ನು ಅವನ ಬಂಧುಗಳು ನೋಡಿದರು. ಆ ಸಮಯ ದಲ್ಲಿ ವ್ಯಾಧನು ವಲ್ಕಲಾಜಿನಗಳಿಂದ ಆಚ್ಛಾದಿತನಾಗಿ ಮರವೊಂದರ ಬುಡ ದಲ್ಲಿದ್ದನು. ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಕುಶಾಸನದಲ್ಲಿ ಕುಳಿತಿದ್ದನು. ಗುರು ಗಳು ಉಪದೇಶಿಸಿದ್ದಂತೆ ತಾರಕಮಂತ್ರವನ್ನು ಜಪಿಸುತ್ತಿದ್ದನು. ರಾಮನಲ್ಲಿ ತನ್ನ ಮನಸ್ಸನ್ನೂ ಬುದ್ಧಿಯನ್ನೂ ಸಮರ್ಪಿಸಿ ಹೃದಯದಲ್ಲಿ ರಾಘವನನ್ನು ಧ್ಯಾನಿಸುತ್ತಿದ್ದನು. ಅಂತಹ ಸ್ಥಿತಿಯಲ್ಲಿದ್ದ ವ್ಯಾಧನನ್ನು ನೋಡಿ ಅವನ ಪರಿವಾರದವರು ಸಂಶಯಗ್ರಸ್ತರಾದರು.

ನಾಯಂ ಮದೀಯೋ ಶಬರೋ ವೇಷಭಾಷಣಭೀಷಣಃ ।

"ಇವನು ನಮ್ಮ ರಾಜನಲ್ಲ. ನಮ್ಮ ಶಬರರಾಜನು ವೇಷದಲ್ಲೂ, ಮಾತಿನಲ್ಲೂ ಅತಿಭಯಂಕರನಾಗಿದ್ದನು. ಇವನಾದರೋ ಅತಿಸೌಮ್ಯ ನಾಗಿರುವನು."

ಪುನಃ ಚಿಂತಿಸಿ ಹೇಳಿದರು :

ಅಯಮೇವ ಮದೀಯಃ ಸ್ಯಾತ್ಪ್ರೀತಿರೇವಾತ್ರ ಕಾರಣಮ್ ॥

"ಇವನು ನಮ್ಮವನೇ ಆಗಿರಬೇಕು. ಇವನನ್ನು ನೋಡಿದರೆ ನಮಗೆ ಪ್ರೀತಿಯುಂಟಾಗುತ್ತಿದೆ. ಇವನು ನಮ್ಮವನಾಗಿರದಿದ್ದರೆ ಇವನ ವಿಷಯ

ದಲ್ಲಿ ನಮಗೆ ಪ್ರೀತಿಯು ಹುಟ್ಟುತ್ತಿರಲಿಲ್ಲ. ಆದುದರಿಂದ ಇವನು ನಮ್ಮ ರಾಜನೇ ಆಗಿರಬೇಕು."

ಹೀಗೆ ಯೋಚಿಸಿ ಎಲ್ಲರೂ ಅವನ ಸಮೀಪಕ್ಕೆ ಹೋದರು. ಅನಂತರ ವ್ಯಾಧನ ಪತ್ನೀ-ಪುತ್ರ-ಬಂಧುಗಳೇ ಮೊದಲಾದವರು ಆಲಿಂಗನ-ನಮಸ್ಕಾರ-ಮಂಗಳಾಶಾಸನಸ್ತೋತ್ರಗಳಿಂದ ವ್ಯಾಧನಿಗೆ ಸಂತೋಷವನ್ನುಂಟು ಮಾಡಲು ಪ್ರಯತ್ನಿಸುತ್ತಾ ಹೇಳಿದರು :

ಪುತ್ರಾನ್ ಪೌತ್ರಾನ್ಪ್ರಪೌತ್ರಾಂಶ್ಚ ಭಾರ್ಯಾಬನ್ಧುಸುಹೃಜ್ಜನಾನ್ ।
ಪಶ್ಯ ಸಮ್ಮಾನಯ ಕ್ಷಿಪ್ರಂ ಯಥಾನ್ಯಾಯಂ ಮಹಾಮತೇ ॥೩೦॥

"ಮಹಾಮತಿಯೇ! ನಿನ್ನ ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಮರಿ ಮಕ್ಕಳನ್ನೂ ಭಾರ್ಯೆಯನ್ನೂ, ಬಂಧುಗಳನ್ನೂ, ಸುಹೃಜ್ಜನರನ್ನೂ ನೋಡು. ಇವರೆಲ್ಲರನ್ನೂ ಯಥಾಯೋಗ್ಯವಾಗಿ ಸಮ್ಮಾನಿಸು.

ತ್ವದಧೀನಾ ವಯಂ ಸರ್ವೇ ಬಹುಧಾ ಪೋಷಿತಾಸ್ತ್ವಯಾ ।
ತ್ವಾಂ ವಿನಾ ಕಥಮಸ್ಮಾಕಂ ಜೀವನಂ ಸಂಭವಿಷ್ಯತಿ ॥೩೧॥

ನಾವೆಲ್ಲರೂ ನಿನ್ನ ಅಧೀನದಲ್ಲಿದ್ದೇವೆ. ನೀನೇ ನಮ್ಮೆಲ್ಲರನ್ನೂ ಚೆನ್ನಾಗಿ ಪೋಷಿಸಿರುವೆ. ನೀನಿಲ್ಲದೆ ನಾವು ಹೇಗೆ ತಾನೇ ಜೀವಿಸಿರಲು ಸಾಧ್ಯ ವಾಗುವುದು?

ತಪಶ್ಚರನ್ತಿ ಮುನಯೋ ಬ್ರಾಹ್ಮಣಕ್ಷತ್ರಿಯಾದಯಃ ।
ನಾಸ್ತಿ ಕಿಂ ತೇ ತಪಃ ಕರ್ತುಂ ಭೋಗಭಾಗ್ಯವತಃ ಸುಖಮ್ ॥೩೨॥

ಬ್ರಾಹ್ಮಣ-ಕ್ಷತ್ರಿಯರೇ ಮೊದಲಾದವರು ಮುನಿಗಳಾಗಿ ತಪಸ್ಸನ್ನಾಚರಿಸುವರು. ಸಕಲಭೋಗಭಾಗ್ಯಗಳಿಂದಲೂ ಯುಕ್ತನಾಗಿರುವ ನಿನಗೆ ತಪಸ್ಸುಮಾಡಲು ಯಾವ ಸುಖದಲ್ಲಿ ಕೊರತೆಯುಂಟಾಗಿದೆ?

ದರಿದ್ರಸ್ಯ ತಪಃ ಕೃತ್ಯಂ ತೀರ್ಥಕ್ಷೇತ್ರನಿಷೇವಣಮ್ ।
ಶ್ರೀಮತಾಂ ನ ತಪಃ ಕೃತ್ಯಂ ನ ತೀರ್ಥಂ ನಾಸ್ತಿ ಪೂಜನಮ್ ॥೩೩॥

ದರಿದ್ರನಾದವನು ತಪಸ್ಸು, ತೀರ್ಥಯಾತ್ರೆ ಮುಂತಾದುವನ್ನು ಮಾಡುವುದು ಯುಕ್ತವಾಗಿದೆ. ನಿನ್ನಂತಹ ಶ್ರೀಮಂತರಿಗೆ ತಪಸ್ಸು, ತೀರ್ಥ ಯಾತ್ರೆ, ಪೂಜೆ ಇತ್ಯಾದಿಗಳ ಆವಶ್ಯಕತೆಯಿಲ್ಲ.

ನ ಹೀದೃಶಂ ಕರ್ಮ ಲೋಕೇ ಪುಲಿನ್ದಾನಾಂ ಪ್ರದೃಶ್ಯತೇ ।
ಮೃಗಯಾಚೋರಕರ್ಮಾಭ್ಯಾಂ ವಯಂ ಜೀವಾಮಹೇ ಪ್ರಭೋ ॥

ಲೋಕದಲ್ಲಿ ಯಾವ ಬೇಡರೂ ನಿನ್ನಂತೆ ತಪಸ್ಸಿನಲ್ಲಿ ಕುಳಿತುಕೊಂಡಿರುವುದು ಕಂಡುಬಂದಿಲ್ಲ. ನಾವು ಯಾವಾಗಲೂ ಬೇಟೆಯಾಡುವುದು, ಕಳ್ಳತನ ಇವೇ ಮುಂತಾದ ಕಾರ್ಯಗಳಿಂದ ಜೀವನವನ್ನು ನಿರ್ವಹಿಸುವೆವು.

ಶಬರೇಷು ಕ್ವ ಸಂನ್ಯಾಸೋ ಮ್ಲೇಚ್ಛವರ್ಗೇ ಕ್ವ ಸೌಹೃದಮ್ ।
ಪುಲ್ಕಲೇಷು ಕ್ವ ವಾ ಸತ್ಯಂ ಕದರ್ಯೇಷು ಕ್ವ ಭೋಗಿತಾ ॥೩೫॥

ಬೇಡರಲ್ಲಿ ಸಂನ್ಯಾಸವೆಲ್ಲಿಯದು? ಮ್ಲೇಚ್ಛರಲ್ಲಿ ಮೈತ್ರಿಯೆಲ್ಲಿಯದು? ಪುಲ್ಕಸರಲ್ಲಿ ಸತ್ಯವೆಲ್ಲಿಯದು? ಕೃಪಣರಿಗೆ ಸುಖಾನುಭಾವವೆಲ್ಲಿ ಬಂದೀತು?

ಗೃಹಾಶ್ರಮಂ ಪ್ರಶಂಸನ್ತಿ ದೇವಾ ಅಪಿ ಮಹರ್ಷಯಃ ।
ಮುನಯಃ ಪಿತರಶ್ಚೈವ ಯತಯೋ ಬ್ರಹ್ಮವಾದಿನಃ ॥೩೬॥

ಸಮಸ್ತದೇವತೆಗಳೂ, ಮುನಿಗಳೂ, ಮಹರ್ಷಿಗಳೂ, ಪಿತೃಗಳೂ, ಯತಿಗಳೂ, ಬ್ರಹ್ಮವಾದಿಗಳೂ ಗೃಹಸ್ಥಾಶ್ರಮವೇ ಸರ್ವೋತ್ತಮವಾದ ಆಶ್ರಮವೆಂದು ಪ್ರಶಂಸೆಮಾಡುತ್ತಾರೆ.

ಗೃಹಾಶ್ರಮವಿಹೀನಾನಾಂ ಧರ್ಮೋ ನಿರವಲಮ್ಬನಃ ।
ತಸ್ಮಾದ್ಗೃಹಂ ಪರಿತ್ಯಜ್ಯ ನ ಪಾರಿವ್ರಾಜ್ಯಮರ್ಹಸಿ ॥೩೭॥

ಗೃಹಸ್ಥಾಶ್ರಮವಿಲ್ಲದವರಿಗೆ ಧರ್ಮವು ಅವಲಂಬನೆಯಿಲ್ಲದಾಗುವುದು. ಆದುದರಿಂದ ಗೃಹಸ್ಥಾಶ್ರಮವನ್ನು ತ್ಯಜಿಸಿ ಪರಿವ್ರಾಜಕನಾಗುವುದು ನಿನಗೆ ಖಂಡಿತವಾಗಿಯೂ ಉಚಿತವೆನಿಸುವುದಿಲ್ಲ.

ಆದುದರಿಂದ, ಮೇಲೇಳು ; ನಿನಗೆ ಮಂಗಳವಾಗಲಿ. ಹೀಗೆ ತಡಮಾಡುವುದರಿಂದ ನಿನ್ನ ಮನಸ್ಸಿಗೆ ಯಾವ ಸಮಾಧಾನವು ತಾನೇ ಸಿಕ್ಕುತ್ತದೆ? ಸ್ವರ್ಗಭೋಗಸದೃಶವಾದ ಭೋಗಗಳನ್ನು ಅನುಭವಿಸು. ನಿನ್ನನ್ನೇ ಅವಲಂಬಿಸಿರುವ ನಮ್ಮೆಲ್ಲರನ್ನೂ ಪರಿಪಾಲಿಸು."

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

"ಪಾರ್ವತಿ! ಹೀಗೆ ಆ ವ್ಯಾಧನ ಬಂಧುಗಳು ಹೇಳುತ್ತಿದ್ದರೂ ವೈರಾಗ್ಯದಲ್ಲಿಯೇ ದೃಢವಾದ ಮನಸ್ಸನ್ನು ಹೊಂದಿದ್ದ ಮಹಾತ್ಮನಾದ ಆ ವ್ಯಾಧನಿಗೆ ಕಿವಿಗೆ ಬಟ್ಟೆಯನ್ನು ತುರುಕಿಕೊಂಡ ರೀತಿಯಲ್ಲಿ ಅವರಾಡಿದ ಯಾವ ಮಾತುಗಳೂ ಕೇಳಲೇ ಇಲ್ಲ."

೨೬ನೆಯ ಸರ್ಗವು ಮುಗಿಯಿತು.

ತಪೋಭಂಗಕ್ಕಾಗಿ ಇಂದ್ರನ ಪ್ರಯತ್ನ

ಈಶ್ವರನು ಹೇಳುತ್ತಾನೆ :

ತತೋ ಬನ್ಧುಜನಾಃ ಸರ್ವೇ ಚಿನ್ತಾಸಂಪ್ಲುತಮಾನಸಾಃ ।
ಹಾ ಕಷ್ಟಮಿತಿ ನಿಶ್ಚಿತ್ಯ ಪುನರ್ವಕ್ತುಂ ಸಮಾಹಿತಾಃ ॥೧॥

ಪಾರ್ವತಿ! ವ್ಯಾಧನ ಬಂಧುಗಳೆಲ್ಲರೂ ಚಿಂತಾಮಗ್ನರಾದರು. ಕಷ್ಟವೊದಗಿತೆಂದು ಪರಿತಪಿಸಿದರು. ಆದರೂ ನಿರುತ್ಸಾಹಿಗಳಾಗದೆ ಪುನಃ ವ್ಯಾಧನನ್ನು ತಪಸ್ಸಿನಿಂದ ವಿಮುಖನ್ನಾಗಿಮಾಡಲು ಪ್ರಯತ್ನಿಸತೊಡಗಿದರು.

ಕೇನ ಪುಣ್ಯವತಾ ಧೂರ್ತ ವಂಚಿತೋಽಸಿ ಮಹಾತ್ಮನಾ ।
ಕೇನ ದತ್ತಂ ಚ ಭವತೇ ಭ್ರಮಕಾರಣಮೌಷಧಮ್ ॥೨॥

"ಧೂರ್ತನೇ! ಯಾವ ಮಹಾತ್ಮನಾದ ಪುಣ್ಯಶಾಲಿಯು ನಿನ್ನನ್ನು ವಂಚಿಸಿರುವನು? ಹೀಗೆ ಬುದ್ಧಿಭ್ರಮಣೆಯಾಗುವಂತೆ ಯಾವನು ನಿನಗೆ ಔಷಧಿಯನ್ನು ಕೊಟ್ಟಿರುವನು?

ಚೋರಬಾಧಾನಿವೃತ್ತ್ಯರ್ಥಂ ವಂಚಿತೋಽಸಿ ದುರಾತ್ಮನಾ ।
ಮಣಿಮನ್ತ್ರೌಷಧಾನಾಂ ಹಿ ಪ್ರಭಾವೋಽಚಿನ್ತ್ಯವೈಭವಃ ॥೩॥

ಯಾವನೋ ದುರಾತ್ಮನು ಚೋರಬಾಧೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಿನ್ನನ್ನು ಹೀಗೆ ವಂಚಿಸಿದ್ದಾನೆ. ನಿಶ್ಚಯವಾಗಿಯೂ ಮಣಿ-ಮಂತ್ರ-ಔಷಧಿಗಳ ಪ್ರಭಾವವು ಅಚಿಂತನೀಯವಾದುದು."

ಪಾರ್ವತಿ! ಬಂಧುಗಳೆಲ್ಲರೂ ಸೇರಿ ಹೀಗೆ ಮಾತನಾಡಿಕೊಳ್ಳುತ್ತಿದ್ದರೂ ಮಂತ್ರ-ಜಪದಲ್ಲಿಯೇ ತತ್ಪರನಾಗಿ ಮಂತ್ರಾಧಿದೇವತೆಯಲ್ಲಿಯೇ ಮನಸ್ಸನ್ನು ಸ್ಥಿರಗೊಳಿಸಿದ್ದ ಆ ವ್ಯಾಧನಿಗೆ ಬಂಧುಗಳು ಹೇಳಿದ ಯಾವ ಮಾತುಗಳೂ ಕಿವಿಯನ್ನು ಹೊಗಲೇ ಇಲ್ಲ. ಮಂತ್ರಪುನಶ್ಚರಣೆಯಿಂದಾದ ಪರಮಾನಂದದಲ್ಲಿ ಮುಳುಗಿಹೋಗಿದ್ದ ಆ ವ್ಯಾಧನಿಗೆ ತನ್ನ ಹಿಂದಿನ ವ್ಯವಹಾರಗಳೆಲ್ಲವೂ ಸಂಪೂರ್ಣವಾಗಿ ಮರೆತೇಹೋಗಿದ್ದುವು. ಆದುದರಿಂದ ಬಂಧುಗಳು ಹೇಳಿದ ಯಾವ ಮಾತುಗಳೂ ಅವನ ಕಿವಿಗಳೊಳಗೆ ನುಸುಳಲಿಲ್ಲ. ಇದರಿಂದ ವ್ಯಥಿತರಾದ ಅವನ ಬಂಧುಗಳೆಲ್ಲರೂ ಪುನಃ ಹೇಳತೊಡಗಿದರು.

"ವ್ಯಾಧರಾಜ! ಏಳು, ಎದ್ದೇಳು, ನಿನಗೆ ಮಂಗಳವಾಗಲಿ. ನಿನ್ನ ಬಳಿಗೆ ಬಂದಿರುವ ನಿನ್ನ ಬಂಧುಗಳನ್ನು ನೋಡು.

ಕಾಲಾನ್ತರಸುಖಂ ಪ್ರೇಕ್ಷ್ಯ ಸ್ಥಿರಭೋಗಂ ಪರಿತ್ಯಜನ್ ।
ಸಮ್ಭ್ರಾನ್ತ ಇವ ನೋ ಭಾಸಿ ಬದ್ಧಮೌನೋಽತಿದುಃಖಿತಃ ।
ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾರ್ಥಮಟಸೇ ಕಥಮ್ ॥೮॥

ಮುಂದೆ ಯಾವಾಗಲೋ ಪ್ರಾಪ್ತವಾಗುವ ಒಂದು ಸುಖವನ್ನು ನಿರೀಕ್ಷಿಸಿ ಈಗ ಸಿದ್ಧವಾಗಿರುವ ಸ್ಥಿರವಾದ ಸುಖವನ್ನು ಬಿಟ್ಟು ಮೌನವನ್ನು ತಾಳಿ ಬಹಳ ದುಃಖವನ್ನು ಅನುಭವಿಸುತ್ತಿರುವೆ. ಕಟುವಾದ ಮೌನವನ್ನು ಧರಿಸಿರುವ ನಿನ್ನನ್ನು ನೋಡಿದರೆ ನಿನಗೆ ಬುದ್ಧಿಭ್ರಮಣೆಯಾಗಿರುವಂತೆ ನಮಗೆ ತೋರುತ್ತಿದೆ. ಸಿದ್ಧವಾಗಿರುವ ಅನ್ನವನ್ನು ಪರಿತ್ಯಜಿಸಿ ಭಿಕ್ಷೆ ಮಾಡಲೇಕೆ ಹೊರಟಿರುವೆ?

ದುರ್ಮತಿಯೇ! ಸ್ವರ್ಗಸೌಖ್ಯವನ್ನು ಪಡೆಯಲು ನಿನ್ನಿಂದ ಶಕ್ಯವೇ?

ಕ್ವ ಸ್ವರ್ಗಂ ಕ್ವ ವಯಂ ಮೂರ್ಖಾಃ
ಮೂರ್ಖೈಃ ಸ್ವರ್ಗಂ ಸುದುರ್ಲಭಃ ।
ಮೂರ್ಖಾಃ ಸ್ವಾಚಾರವಿಭ್ರಷ್ಟಾಃ
ನೀಚಾ ದುಷ್ಕೃತಿಕಾರಿಣಃ ॥೯॥

ಆ ಸ್ವರ್ಗವೆಲ್ಲಿ? ಮೂರ್ಖರಾದ ನಾವೆಲ್ಲಿ? ಮೂರ್ಖರಿಗೆ ಸ್ವರ್ಗವು

ಖಂಡಿತವಾಗಿಯೂ ಸಿಕ್ಕುವುದಿಲ್ಲ. ಮೂರ್ಖರಾದವರು ತಮ್ಮ ಆಚಾರದಿಂದ ಭ್ರಷ್ಟರಾಗಿಯೂ, ಪರಮನೀಚರಾಗಿಯೂ, ಪಾಪಕರ್ಮಗಳನ್ನು ಆಚರಿಸ ತಕ್ಕವರಾಗಿಯೂ ಇರುತ್ತಾರೆ.

ಕಾಲಾನುಚಿತಧರ್ಮಂ ಯಃ ಕರೋತಿ ಪುರುಷಾಧಮಃ ।
ನ ತಸ್ಯ ಫಲತೇ ಕರ್ಮ ತಪ್ತ ಲೋಹಸ್ಥ ಬೀಜವತ್ ॥೧೦॥

ಯಾವ ಪುರುಷಾಧಮನು ಕಾಲಕ್ಕೆ ಅನುಚಿತವಾದ ಧರ್ಮವನ್ನು ಆಚರಿಸುವನೋ ಅಂತಹವನು ಮಾಡಿದ ಕರ್ಮವು ಕಾಯ್ದಕಬ್ಬಿಣದ ಮೇಲೆ ಬೀಜವನ್ನು ಬಿತ್ತಿದಂತೆ ನಿಷ್ಫಲವಾಗುತ್ತದೆ."

ಈಶ್ವರನು ಹೇಳುತ್ತಾನೆ :

"ಪಾರ್ವತಿ! ಹೀಗೆ ಆ ವ್ಯಾಧನ ಬಂಧುಗಳು ಹೇಳುತ್ತಿರುವಾಗ ಆ ಬೇಡರ ಮಧ್ಯದಲ್ಲಿದ್ದ ವೃದ್ಧನಾದ ಬೇಡನು ಅವರೆಲ್ಲರನ್ನೂ ಕುರಿತು ಹೇಳಿದನು:

"ಬಂಧುಗಳೇ! ಇವನು ಸನ್ಮಾರ್ಗದಲ್ಲಿಯೇ ಇದ್ದುಕೊಂಡು ಹೋಗಲಿ. ನಾವು ಮನೆಗೆ ಹೊರಟುಹೋಗೋಣ.

ನಿರ್ಬನ್ಧೋ ನಾತ್ರ ಕರ್ತವ್ಯಃ ಪರಧ್ಯಾನಸಮನ್ವಿತೇ ॥೧೨॥

ಪರಮಾತ್ಮನ ಧ್ಯಾನದಲ್ಲಿಯೇ ನಿಷ್ಠನಾಗಿರುವ ಇವನನ್ನು ನಾವು ನಿರ್ಬಂಧಿಸುವುದು ಉಚಿತವಾಗಿ ಕಾಣುವುದಿಲ್ಲ."

ವೃದ್ಧಶಬರನ ಈ ಮಾತನ್ನು ಕೇಳಿ ಉಳಿದ ಬೇಡರೆಲ್ಲರೂ ತಮ್ಮ ಜಾತಿಯನ್ನೇ ನಿಂದಿಸುತ್ತಾ ತಮ್ಮ-ತಮ್ಮ ಮನೆಗಳಿಗೆ ಹೊರಟುಹೋದರು.

ಇತ್ತಲಾಗಿ ವ್ಯಾಧನ ತಪಸ್ಸಿನ ವೇಗವು ದಿನ-ದಿನಕ್ಕೂ ಹೆಚ್ಚುತ್ತಿದ್ದಿತು. ಇದರಿಂದ ಭಯಗೊಂಡ ಪ್ರಾಣಿಗಳು ವ್ಯಾಧನಿಗೆ ಸಂತೋಷ ವನ್ನುಂಟುಮಾಡುವ ಸಲುವಾಗಿ ಅವನ ಸೇವೆಮಾಡತೊಡಗಿದುವು. ವ್ಯಾಧನ ತಪಸ್ಸಿನ ತೀವ್ರತೆಯಿಂದಾಗಿ ಪೃಥಿವೀ-ವಾಯು-ಆಕಾಶ-ಅಪ್ಪು-ತೇಜಸ್ಸು ಈ ಐದು ಭೂತಗಳೂ ತಮ್ಮ ಧರ್ಮಗಳನ್ನು ತ್ಯಜಿಸತೊಡಗಿದುವು. ಕಠಿಣ

ವಾಗಿದ್ದ ಭೂಮಿಯು ವ್ಯಾಧನಿಗೆ ಮೃದುವಾಗಿ ಪರಿಣಮಿಸಿತು. ಅವನಿದ್ದ ವನವು ಚೈತ್ರರಥಸದೃಶವಾಯಿತು. ಫಲ-ಪುಷ್ಪವೃಕ್ಷಗಳಿಂದ ತುಂಬಿಹೋಗಿದ್ದಿತು. ಎಲ್ಲ ಋತುಗಳಲ್ಲೂ ಹೂಗಳು ಬಿಡುವ ಗಿಡ-ಮರ-ಬಳ್ಳಿಗಳು ಆ ವನದಲ್ಲಿದ್ದುವು. ಪ್ರತಿಯೊಂದು ಪುಷ್ಪದಲ್ಲಿಯೂ ಮಕರಂದವು ತುಂಬಿರುತ್ತಿದ್ದಿತು. ಆ ವೃಕ್ಷಗಳು ಬುಡದಿಂದ ತುದಿಯವರೆಗೂ ಪುಷ್ಪಗಳಿಂದಲೂ, ಫಲಗಳಿಂದಲೂ ಮತ್ತು ಮೊಗ್ಗುಗಳಿಂದಲೂ ತುಂಬಿಹೋಗಿದ್ದು ಅವುಗಳ ಭಾರಕ್ಕೆ ಬಗ್ಗಿಹೋಗಿದ್ದುವು. ಎಲ್ಲ ಕಾಲಗಳಲ್ಲಿಯೂ ಸುಖವನ್ನುಂಟು ಮಾಡುವ ಕಲ್ಪವೃಕ್ಷಕ್ಕೆ ಸಮಾನವಾದ ಇಂತಹ ವೃಕ್ಷಗಳನ್ನು ಭೂದೇವಿಯು ವ್ಯಾಧಮುನಿಯ ಸುತ್ತಲೂ ಸೃಷ್ಟಿಸಿ ನಿರಾತಂಕಳಾದಳು. ಆದಿತ್ಯ-ಅಗ್ನಿ ಇವೇ ಮುಂತಾದ ತೇಜಸ್ಸುಗಳು ತಮ್ಮ ತೀಕ್ಷ್ಣತೆಯನ್ನು ವಿಸರ್ಜಿಸಿ ಮೃದುತ್ವದಿಂದಲೂ ಕಾಂತಿಯಿಂದಲೂ ಕೂಡಿ ವ್ಯಾಧಮುನಿಯನ್ನು ಸೇವಿಸುತ್ತಿದ್ದುವು. ಜಲವೂ ಕೂಡ ತನ್ನಲ್ಲಿದ್ದ ಕಶ್ಮಲತೆಯನ್ನು ಕಳೆದುಕೊಂಡು ನಿರ್ಮಲವೂ ಸುಶೀತಲವೂ ಆಗಿ ಪರಿವರ್ತನೆಹೊಂದಿತು. ಆಳದಲ್ಲಿದ್ದ ನೀರು ಸುಲಭವಾಗಿ ಕೈಗೆ ಎಟುಕುವಂತೆ ಮೇಲಕ್ಕೆ ಬಂದು ಋಷಿಯನ್ನು ಸೇವಿಸುತ್ತಿದ್ದಿತು. ವಾಯುವು ತನ್ನ ಪ್ರಚಂಡರೂಪವನ್ನು ಬಿಟ್ಟು ಮೃದುವೂ ಶೀತಲವೂ ಆಗಿ ಬೀಸತೊಡಗಿತು. ಆಕಾಶವು ಸುಮಧುರವಾದ ಶಬ್ದವನ್ನು ಆ ಆಶ್ರಮದಲ್ಲಿ ಪ್ರಕಟಪಡಿಸಿತು.

ಹೀಗೆಯೇ ಹಲವಾರುವರ್ಷಗಳು ಕಳೆದನಂತರ ಸ್ಥಾಣುವಿನಂತೆ ಕುಳಿತಿದ್ದ ಅವನನ್ನು ಮೋಟುಮರವೆಂದು ಭಾವಿಸಿ ಪಕ್ಷಿಗಳು ಅವನ ಮೇಲೆ ಗೂಡುಕಟ್ಟಿಕೊಂಡು ವಾಸಮಾಡತೊಡಗಿದುವು. ನೊಣಗಳೂ, ಸೊಳ್ಳೆಗಳೂ, ಇರುವೆಗಳೂ ಅವನನ್ನು ಕಚ್ಚಿ ತಿನ್ನುತ್ತಿದ್ದುವು. ಹೀಗೆ ಕಾಲಾನುಕ್ರಮವಾಗಿ ವ್ಯಾಧಮುನಿಯು ಜರ್ಝರಿತವಾದ ಶರೀರವುಳ್ಳವನಾದರೂ ಜ್ಞಾನೇಂದ್ರಿಯಗಳನ್ನೂ ಕರ್ಮೇಂದ್ರಿಯಗಳನ್ನೂ ನಿಗ್ರಹಿಸಿ ಸ್ವಲ್ಪವೂ ಅಲುಗಾಡದೆ ಧ್ಯಾನಾಸಕ್ತನಾಗಿ ಕುಳಿತಿದ್ದನು. ರಾಮನ ಮಂತ್ರದಲ್ಲಿಯೇ ಲೀನವಾಗಿ ಹೋಗಿದ್ದ ಮನಸ್ಸಿನಿಂದ ಕೂಡಿ ತಪಸ್ಸನ್ನು ಮಾಡುತ್ತಿದ್ದ ಆ ಮುನಿಗೆ ಅನೇಕ ಸಾವಿರ ವರ್ಷಗಳು ಕ್ಷಣಗಳಂತೆ ಕಳೆದುಹೋದುವು. ನಿರಾಹಾರಿಯಾಗಿದ್ದ ವ್ಯಾಧನ ಘೋರವಾದ ತಪಸ್ಸಿನಿಂದ ದೇವತೆಗಳಿಗೆ ತಮ್ಮ ಸ್ಥಾನಭ್ರಂಶವಾಗಿ

ಬಿಡಬಹುದೆಂಬ ಭಯವುಂಟಾಯಿತು. ಹೀಗೆ ಭಯಗೊಂಡ ದೇವತೆಗಳು ಒಟ್ಟಾಗಿ ಸೇರಿ ವ್ಯಾಧನ ತಪಸ್ಸಿಗೆ ವಿಘ್ನವನ್ನುಂಟುಮಾಡಲು ಪ್ರಯತ್ನಿಸಿದರು. ಆ ಸಮಯದಲ್ಲಿ ದೇವೇಂದ್ರನು ರಂಭೆಯೇ ಮೊದಲಾದ ಅಪ್ಸರೆಯರನ್ನೂ ಗಾಯನದಲ್ಲಿ ಕುಶಲರಾದ ಮತ್ತು ವೀಣಾವಾದನದಲ್ಲಿ ಪಾರಂಗತರಾದ ಗಂಧರ್ವರನ್ನೂ ಕರೆಯಿಸಿದನು.

ಇಂದ್ರನ ಆಹ್ವಾನದಂತೆ ರಂಭೆ, ತಿಲೋತ್ತಮೆ, ಮೇನಕೆ, ಉರ್ವಶಿ, ಸುಕೇಶಿ, ಚಂದ್ರವದನೆ, ಚಂದ್ರಲೇಖೆ, ಮದಾಲಸೆ, ಸುಂದರನೇತ್ರಿಯಾದ ಚಂದ್ರಲೇಖೆ, ಮನೋಹರವಾದ ಕೇಶರಾಶಿಯಿಂದ ಕೂಡಿದ್ದ ಪುಂಜಿಕಸ್ಥಲಿ ಇವರೇ ಮುಂತಾದ ಸುಂದರಯುವತಿಯರೂ, ಗಾಯಕರಾದ ಗಂಧರ್ವರೂ, ವಸಂತನೂ, ಮನ್ಮಥನೂ, ಮಲಯಮಾರುತನೂ, ಇತರ ದೇವತೆಗಳೂ, ಭ್ರಾಂತವಾದ ಮನಸ್ಸಿನಿಂದ ಕೂಡಿದವರಾಗಿ ಇಂದ್ರನ ಬಳಿಗೆ ಬಂದು ಪ್ರಶ್ನಿಸಿದರು :

"ಇಂದ್ರದೇವ!ನಮ್ಮನ್ನೇಕೆ ಆಹ್ವಾನಿಸಿದೆ? ಯಾವ ಕಾರ್ಯವನ್ನು ನಾವೀಗ ಮಾಡಬೇಕಾಗಿದೆ. ಅದೇನು ಮಹಾಕಾರ್ಯವೇ? ಅಲ್ಪ ಕಾರ್ಯವೇ? ಈ ವಿಷಯವನ್ನು ದಯಮಾಡಿ ಹೇಳು."

"ದೇವತೆಗಳೇ! ಗಂಧರ್ವಾಪ್ಸರೆಯರೇ! ವಿಜಯನೆಂಬ ಚೋರನು ಶಮ-ದಮಸಂಪನ್ನನಾಗಿ, ಆಹಾರವನ್ನು ಬಿಟ್ಟು, ಇಂದ್ರಿಯಗಳನ್ನು ನಿಗ್ರಹಿಸಿ ಅತಿಕಠೋರವಾದ ತಪಸ್ಸನ್ನು ಮಾಡುತ್ತಿದ್ದಾನೆ. ಅವನ ಉಗ್ರವಾದ ತಪಸ್ಸಿನಿಂದ ಹದಿನಾಲ್ಕು ಲೋಕಗಳೂ ಭಯಗೊಂಡಿವೆ. ಸಮಸ್ತ ಲೋಕಗಳಿಗೂ ಹಿತವನ್ನುಂಟುಮಾಡುವ ಸಲುವಾಗಿ ನೀವೀಗಲೇ ಸಾವಕಾಶ ಮಾಡದೆ ಅಲ್ಲಿಗೆ ಹೋಗಿರಿ. ಅಲ್ಲಿಗೆ ಹೋಗಿ ಮನ್ಮಥನ ಸಹಾಯದಿಂದಲೂ ಮತ್ತು ಮಹಾತ್ಮನಾದ ವಸಂತನ ಸಹಾಯದಿಂದಲೂ ಅಪ್ಸರೆಯರು ಅವನ ತಪಸ್ಸಿಗೆ ವಿಘ್ನವನ್ನುಂಟುಮಾಡಲಿ. ಎಲ್ಲ ವಿಧವಾದ ಸಾಧನ-ಸಂಪತ್ತಿಗಳೊಡನೆ ಇತರರ ಸಹಾಯವನ್ನೂ ಪಡೆದು ಯಾವುದಾದರೂ ಉಪಾಯದಿಂದ ತಪೋಧನನಾದ ವಿಜಯನನ್ನು ಪ್ರಲೋಭನೆಗೊಳಿಸಿ ಅವನು ತಪಸ್ಸನ್ನು ಮುಂದುವರಿಸದಂತೆ ಮಾಡಲಿ."

ಪಾರ್ವತಿ! ಇಂದ್ರನ ಆ ಮಾತನ್ನು ಕೇಳಿ ಎಲ್ಲ ಅಪ್ಸರೆಯರೂ ಇಂದ್ರನಿಗೆ ಜಯವಾಗಲೆಂದು ಹರಸಿ ಶಕ್ರನ ಅರಮನೆಯಿಂದ ವ್ಯಾಧ ಮುನಿಯು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಹೊರಟುಹೋದರು. ಅಪ್ಸರ ಸ್ತ್ರೀಯರೂ ಮತ್ತು ಇತರ ದೇವತೆಗಳೂ ವಿಮಾನವೇ ಮೊದಲಾದ ವಾಹನಗಳಲ್ಲಿ ಕುಳಿತು ಚಿತ್ತಾಕರ್ಷಕಗಳಾದ ಸಾಮಗ್ರಿಗಳನ್ನು ತೆಗೆದುಕೊಂಡು ವಿಜಯನ ಆಶ್ರಮಕ್ಕೆ ಬಂದರು. ಆರು ಋತುಗಳಿಂದಲೂ ಆವಿರ್ಭೂತವಾಗಿದ್ದ ನಂದನವನದಂತೆಯೇ ಇದ್ದ ವಿಜಯನ ಆ ಆಶ್ರಮಪ್ರದೇಶವನ್ನು ನೋಡಿ ದೇವತೆಗಳು ಅಚ್ಚರಿಗೊಂಡರು. ಅನಂತರ ಅಪ್ಸರೆಯರೂ ಮತ್ತು ಇತರ ದೇವತೆಗಳೂ ಸಮಸ್ತಭೋಗಗಳಿಂದಲೂ ಪರಿಪೂರ್ಣವಾಗಿದ್ದ ಆ ಆಶ್ರಮಪ್ರದೇಶದಲ್ಲಿ ಸರ್ವಾಲಂಕಾರಭೂಷಿತೆಯರಾಗಿ ಶೃಂಗಾರದ ಹಾವ-ಭಾವಗಳನ್ನು ತೋರುತ್ತಾ ದಿವ್ಯವಾದ ಮಾಲೆಗಳನ್ನೂ ಮತ್ತು ವಸ್ತ್ರಗಳನ್ನೂ ಧರಿಸಿ ದಿವ್ಯವಾದ ಚಂದನವನ್ನು ಪೂಸಿಕೊಂಡು ವಿಹರಿಸ ತೊಡಗಿದರು.

ಆ ಅಪ್ಸರೆಯರೆಲ್ಲರೂ ಆಕರ್ಷಕವಾದ ಸಾಧನಗಳೊಡನೆ ದರ್ಪ ಯುಕ್ತರಾಗಿ ನಾಮುಂದು-ತಾಮುಂದು ಎಂದು ಹೇಳುತ್ತಾ ವಿಜಯನ ಆಶ್ರಮವನ್ನು ಪ್ರವೇಶಿಸಿದರು. ಶ್ರೀರಾಮನಿಂದಲೇ ರಕ್ಷಿಸಲ್ಪಡುತ್ತಿದ್ದ ಆ ದಿವ್ಯ ವಾದ ವನವನ್ನು ನೋಡಿ ಅಲ್ಲಿದ್ದ ದಿವ್ಯವಾದ ಫಲಗಳನ್ನು ತಿಂದು ಅವರು ಅಚ್ಚರಿಗೊಂಡರು. ರಸಾಯನವನ್ನೂ ಅಮೃತಸದೃಶವಾದ ಜೇನುತುಪ್ಪವನ್ನೂ ಪುನಃ ಪುನಃ ಪಾನಮಾಡುತ್ತಾ ದರ್ಪದಿಂದಲೂ ಅಹಂಕಾರದಿಂದಲೂ ಕೂಡಿದವರಾಗಿ ವ್ಯಾಧಮುನಿಯನ್ನು ಪ್ರಲೋಭಿಸತೊಡಗಿದರು. ಅದೇ ಸಮ ಯಕ್ಕೆ ಸರಿಯಾಗಿ ಶ್ರೀರಾಮನೇ ಒಂದು ಮಾಯೆಯನ್ನು ನಿರ್ಮಿಸಿ ಅಪ್ಸರ ಸ್ತ್ರೀಯರನ್ನು ವಿಮೋಹಗೊಳಿಸಿದನು. ಬ್ರಹ್ಮೇಂದ್ರ-ರುದ್ರರೂ ಮೂಗುದಾರ ಹಾಕಿದ ಎತ್ತುಗಳಂತೆ ಪರಮಾತ್ಮನ ಆ ಮಾಯೆಗೆ ವಶೀಭೂತರಾದರು. ಹೀಗಿರುವಾಗ ಇತರರ ವಿಷಯವಾಗಿ ಹೇಳತಕ್ಕುದ್ದೇನಿದೆ? ಶ್ರೀರಾಮನ ಮಾಯೆಯ ಪ್ರಭಾವದಿಂದಾಗಿ ಆ ವನವೆಲ್ಲವೂ ದೇವತೆಗಳಿಗೆ ರಾಮಮಯ

ವಾಗಿ ಕಂಡಿತು. ಪ್ರತಿವೃಕ್ಷದಲ್ಲಿಯೂ ಅಪ್ಸರೆಯರಿಗೆ ಶ್ರೀರಾಮನೇ ಕಾಣು ತ್ತಿದ್ದನು.

ಸ್ಮಿತವಕ್ತ್ರಂ ವಿಶಾಲಾಕ್ಷಂ ಸ್ನಿಗ್ಧಗಾತ್ರಮನೋಹರಮ್ ।
ಇನ್ದ್ರನೀಲಘನಶ್ಯಾಮಂ ವನಮಾಲಾದಿಶೋಭಿತಮ್ ॥೪೮॥

ಧನುರ್ಬಾಣಧರಂ ವೀರಂ ಭಕ್ತಾನುಗ್ರಹತತ್ಪರಮ್ ।
ತ್ರೈಲೋಕ್ಯಮೋಹನಾಕಾರಂ ಪುಂಸಾಮಪಿ ವಿಮೋಹನಮ್ ॥೪೯॥

ದೃಷ್ಟ್ವಾ ರಾಮಂ ಮಹಾಬಾಹುಂ ಸಾಕ್ಷಾನ್ಮನ್ಮಥಮನ್ಮಥಮ್ ।
ಸರ್ವಾಃ ಪ್ರಚಲಿತಾ ನಾರ್ಯೋ ರಾಮಾಲಿಙ್ಗನಕಾಂಕ್ಷಯಾ ॥೫೦॥

ಮಂದಹಾಸವನ್ನು ಬೀರುತ್ತಿದ್ದ, ವಿಶಾಲಾಕ್ಷನಾದ, ಮನೋಹರವಾದ ಶರೀರಕಾಂತಿಯಿಂದ ವಿರಾಜಿಸುತ್ತಿದ್ದ, ಇಂದ್ರನೀಲದಂತೆ ಶ್ಯಾಮಲವರ್ಣ ದವನಾಗಿದ್ದ, ವನಮಾಲೆಯಿಂದ ಶೋಭಿಸುತ್ತಿದ್ದ, ಧನುರ್ಬಾಣಗಳನ್ನು ಧರಿ ಸಿದ್ದ, ವೀರನಾದ, ಭಕ್ತಾನುಗ್ರಹತತ್ಪರನಾದ, ತ್ರೈಲೋಕ್ಯಮೋಹಕವಾದ ರೂಪವನ್ನು ಧರಿಸಿದ್ದ, ಪುರುಷರಿಗೂ ಮೋಹಜನಕನಾಗಿದ್ದ, ಮಹಾಭುಜ ನಾದ, ಮನ್ಮಥನಿಗೂ ಮನ್ಮಥನಾಗಿದ್ದ, ಕಡುಚೆಲುವನಾಗಿದ್ದ, ಶ್ರೀರಾಮನನ್ನು ನೋಡಿ ಸಮಸ್ತಸ್ತ್ರೀಯರೂ ಅವನನ್ನು ಆಲಿಂಗಿಸಿಕೊಳ್ಳಲು ಮುಂದಾದರು. ಹೀಗೆ ಶ್ರೀರಾಮನನ್ನು ಕಂಡೊಡನೆಯೇ ಕಾಮಪೀಡಿತರಾದ ಅಪ್ಸರೆಯರು ಅವನನ್ನು ಆಲಿಂಗಿಸಿಕೊಂಡು ಅಧಿಕವಾದ ಆನಂದವನ್ನು ಪಡೆಯುವ ಆಸೆಯಿಂದ ನಾಚಿಕೆಯನ್ನು ಬಿಟ್ಟು ಅವನ ಬಳಿಗೆ ಓಡಿದರು.

ರಾಮನನ್ನು ಆಲಿಂಗಿಸಿಕೊಳ್ಳಲು ಒಂದು ಮರದಿಂದ ಮತ್ತೊಂದು ಮರಕ್ಕೂ-ಒಂದು ಲತಾಗೃಹದಿಂದ ಮತ್ತೊಂದು ಲತಾಗೃಹಕ್ಕೂ ಓಡಿ ಹೋಗುತ್ತಿದ್ದ ಆ ಸ್ತ್ರೀಯರು ರಾಮನೆಂಬ ಭ್ರಾಂತಿಯಿಂದ ಪರಸ್ಪರವಾಗಿ ಸ್ತ್ರೀಯರನ್ನೇ ಆಲಿಂಗಿಸಿಕೊಂಡು ಹಿಗ್ಗುತ್ತಿದ್ದರು. ಆ ಸಮಯದಲ್ಲಿ ಶ್ರೀರಾಮನು ಕೆಲವು ಕಡೆ ಕಾಣಿಸಿಕೊಳ್ಳುತ್ತಿದ್ದನು. ಕೆಲವು ಕಡೆ ಮರೆ ಯಾಗುತ್ತಿದ್ದನು. ಕೆಲವು ಕಡೆಗಳಲ್ಲಿ ಹಲವಾರು ರೂಪಗಳನ್ನು ಧರಿಸಿರು ತ್ತಿದ್ದನು. ಕೆಲವರ ತೋಳುಗಳಿಗೆ ಸಿಕ್ಕಿಬಿದ್ದವನಂತೆ ನಟಿಸುತ್ತಿದ್ದನು. ಕೆಲವು

ಸಮಯಗಳಲ್ಲಿ ಬಹಳ ದೂರದಲ್ಲಿರುವಂತೆಯೂ ಮರುಕ್ಷಣದಲ್ಲಿಯೇ ಹತ್ತಿರದಲ್ಲಿರುವಂತೆಯೂ ಕಾಣಿಸಿಕೊಳ್ಳುತ್ತಿದ್ದನು.

ಮುನಿಮಾನಸಸಂಚಾರೋ ಹ್ಯಲಭ್ಯಃ ಸನಕಾದಿಭಿಃ ।
ರಾಮಃ ಕಥಂ ಚ ನಾರೀಣಾಂ ಲಭ್ಯೋ ಭವತಿ ಸುನ್ದರಿ ॥೫೭॥

ಸುಂದರಿಯೇ!ಪಾರ್ವತಿ! ಯಾವನು ಮುನಿಗಳ ಮನಸ್ಸಿನಲ್ಲಿ ಮಾತ್ರ ಸಂಚರಿಸುವನೋ, ಸನಕಾದಿಗಳಿಗೂ ದುರ್ಲಭನೋ–ಅಂತಹ ರಾಮನು ಕಾಮುಕಿಯರಾದ ಸ್ತ್ರೀಯರಿಗೆ ಹೇಗೆ ತಾನೇ ಸಿಕ್ಕಿಯಾನು?

ಹೀಗೆ ವಿಶ್ವರೂಪಧರನಾದ ಪರಮಾತ್ಮನಾದ ಶ್ರೀರಾಮನನ್ನು ನೋಡಿದ ಮಾತ್ರದಿಂದಲೇ ಇತರರ ಪ್ರಯೋಜನಕ್ಕಾಗಿ ಬಂದಿದ್ದ ಅಪ್ಸರೆಯರಿಗೆ ಅತ್ಯಂತಮಹತ್ತರವಾದ ಶ್ರೀರಾಮದರ್ಶನವೆಂಬ ಲಾಭವಾಯಿತು.

ಸಕಲವೇದಾಂತಶಾಸ್ತ್ರಗೋಚರನಾದ ಶ್ರೀರಮಾಪತಿಯನ್ನು ಸಾಕ್ಷಾತ್ತಾಗಿ ನೋಡಿದ ಆ ಸ್ತ್ರೀಯರಿಗೆ ಯದ್ಯಪಿ ಜ್ಞಾನಪ್ರಾಪಕವಾದ ಕರ್ಮಗಳನ್ನೂ ವೇದೋಕ್ತಕರ್ಮಗಳನ್ನೂ ಮಾಡುವ ಅಧಿಕಾರವಿಲ್ಲದಿದ್ದರೂ ಜನನ-ಮರಣಾದಿಗಳಿಂದ ಬಿಡುಗಡೆಯಾಯಿತಲ್ಲವೇ! ಅನಂತರ ಆ ಸ್ತ್ರೀಯರು ಬಹಳ ಶ್ರಮದಿಂದಲೂ ಶ್ರೀರಾಮನನ್ನು ಬಹಿರಂಗದಲ್ಲಿ ತಬ್ಬಿಕೊಳ್ಳಲು ಸಾಧ್ಯವಾಗದೇ ಅಂತರಂಗದಲ್ಲಿಯೇ ಅವನನ್ನು ಧ್ಯಾನಿಸಿ ಆಲಿಂಗಿಸಿಕೊಂಡು ತಮ್ಮ ಕಾಮತೃಷೆಯನ್ನು ಪೂರೈಸಿಕೊಂಡರು.

ರಾಮ ಏವ ಪರಂ ಬ್ರಹ್ಮ ರಾಮಾದನ್ಯನ್ನ ವಿದ್ಯತೇ ।
ರಾಮ ಏವ ಜಗತ್ಸರ್ವಂ ರಾಮ ಏವಾಸ್ಯ ಶಿಕ್ಷಕಃ ॥೫೮॥

"ರಾಮನೇ ಪರಬ್ರಹ್ಮನು. ರಾಮನನ್ನು ಬಿಟ್ಟು ಬೇರೆ ದೈವವೇ ಇಲ್ಲ. ಸಮಸ್ತಜಗತ್ತೂ ರಾಮಮಯವೇ ಆಗಿದೆ. ಶ್ರೀರಾಮನೇ ಈ ಸಮಸ್ತಜಗತ್ತಿಗೂ ಶಿಕ್ಷಕನೂ ಆಗಿದ್ದಾನೆ."

ಹೀಗೆ ಭಾವಿಸಿದರಾದರೂ ಆ ಸ್ತ್ರೀಯರು ತಪಸ್ಸುಮಾಡುತ್ತಿದ್ದ ವಿಜಯನೆಂಬ ವ್ಯಾಧನ ಸಮೀಪದಲ್ಲಿ ನರ್ತನಮಾಡುತ್ತಿದ್ದರು. ದೇವೇಂದ್ರನ ಸಭೆಯಲ್ಲಿ ವಾದ್ಯಗಳನ್ನು ಬಾರಿಸುವಂತೆ ಅಲ್ಲಿಯೂ ವಾದ್ಯಗಳನ್ನು ಬಾರಿಸ ತೊಡಗಿದರು. ಹೀಗೆ ಅಪ್ಸರಸ್ತ್ರೀಯರೆಲ್ಲರೂ ಅಲ್ಲಿ ನೃತ್ಯಮಾಡುತ್ತಿರಲು

ವಿಜಯವ್ಯಾಧನೊಬ್ಬನನ್ನು ಬಿಟ್ಟು ಉಳಿದ ಪ್ರಾಣಿಗಳೆಲ್ಲವೂ ಅವರ ನೃತ್ಯಗಳಲ್ಲಿಯೂ ಗಾನಗಳಲ್ಲಿಯೂ ಆಸಕ್ತವಾದುವು.

ಮುನಿಯ ಮುಂದೆ ತಮ್ಮ ನೃತ್ಯ-ಗಾನಗಳು ವ್ಯರ್ಥವಾದುದನ್ನು ಕಂಡು 'ನಾವು ವೃಥಾ ಶ್ರಮಿಸಿದೆವು'–ಎಂಬ ಭಾವನೆಯಿಂದ ಆ ಎಲ್ಲ ಅಪ್ಸರಸ್ತ್ರೀಯರೂ ನೃತ್ಯ-ಗಾನಗಳನ್ನು ನಿಲ್ಲಿಸಿ ಬಹಳ ದೂರಕ್ಕೆ ಹೋದರು. ಆಗಲಾದರೂ ಕಣ್ಣುತೆರೆಯುವನೋ ಎಂಬ ಆಕಾಂಕ್ಷೆಯಿಂದ ದೂರದಿಂದಲೇ ವಿಜಯನನ್ನು ನೋಡತೊಡಗಿದರು.

ಪಾರ್ವತಿ! ಯಾವ ಶ್ರೀರಾಮನ ಭಕ್ತರು ಇತರ ದೇವತೆಗಳ ಭಕ್ತರಂತಲ್ಲದೆ ಅವನ ಸ್ಮೃತಿಮಾತ್ರದಿಂದಲೇ ಅವನ ದಿವ್ಯಸಾನ್ನಿಧ್ಯವನ್ನು ಪಡೆಯುವರೋ-ಅಂತಹ ರಾಮಭಕ್ತರಿಗೆ ಯಾವ ವಿಘ್ನಗಳು ತಾನೇ ಏನು ಮಾಡಿಯಾವು? ಅನಂತರ ಆ ಎಲ್ಲ ಅಪ್ಸರೆಯರೂ, ಋಷಿಯು ಶಾಪ ಕೊಟ್ಟಾನೆಂಬ ಭಯದಿಂದ ಅಲ್ಲಿಂದ ಹೊರಟು ಇಂದ್ರನ ಅರಮನೆಗೆ ಹೋಗಿ ಅವನಿಗೆ ಎಲ್ಲವನ್ನೂ ವಿಜ್ಞಾಪಿಸಿದರು.

೨೭ನೆಯ ಸರ್ಗವು ಮುಗಿಯಿತು.

ಅಯೋಧ್ಯಾಕಾಂಡ ೨೮ನೆಯ ಸರ್ಗ

ಇಂದ್ರನ ಪರಾಭವ ಮತ್ತು ಸಪ್ತರ್ಷಿಗಳ ಆಗಮನ

ಈಶ್ವರನು ಹೇಳುತ್ತಾನೆ :

ಅಥ ತಾಸಾಂ ವಚಃ ಶ್ರುತ್ವಾ ಶಕ್ರಃ ಸಂತ್ರಸ್ತಮಾನಸಃ ।
ಬೃಹಸ್ಪತಿಂ ಸುರಾಚಾರ್ಯಂ ವಚನಂ ಚೇದಮಬ್ರವೀತ್ ॥೧॥

ಪಾರ್ವತಿ! ಇಂದ್ರನು ಅಪ್ಸರೆಯರ ಮಾತನ್ನು ಕೇಳಿ ಭಯಗೊಂಡು ದೇವಗುರುವಾದ ಬೃಹಸ್ಪತಿಗೆ ಹೇಳಿದನು :

ಕಥಂ ತತ್ರ ವಿಜೇಷ್ಯಾಮಃ ಕಥಂ ತತ್ರ ಪರಾಭವಃ ।
ಕಥಂ ಸುಖಂ ಭವೇದತ್ರ ದೇವಾನಾಂ ವದ ನೋ ಗುರೋ ॥೨॥

"ಬೃಹಸ್ಪತಿಯೇ! ನಾವು ಈ ವ್ಯಾಧಮುನಿಯನ್ನು ಜಯಿಸುವುದು ಹೇಗೆ? ಅವನನ್ನು ಯಾವ ರೀತಿಯಲ್ಲಿ ಪರಾಭವಗೊಳಿಸಬಹುದು? ಈ ಸಂದರ್ಭದಲ್ಲಿ ದೇವತೆಗಳಿಗೆ ಹೇಗೆ ಸುಖವುಂಟಾಗುವುದು? ದಯಮಾಡಿ ಹೇಳು."

ಬೃಹಸ್ಪತಿಯು ಹೇಳುತ್ತಾನೆ :

“ಮಹೇಂದ್ರ! ಆ ತಪಸ್ವಿಯ ದೆಸೆಯಿಂದ ದೇವತೆಗಳಿಗೆ ಯಾವ ಭಯವೂ ಇಲ್ಲ. ಅವನು ವಲ್ಮೀಕದಿಂದ (ಹುತ್ತ) ಹುಟ್ಟಿದ ದೇಹವುಳ್ಳ ವನಾಗಿ ವಾಲ್ಮೀಕಿಯೆಂಬ ಪ್ರಸಿದ್ಧನಾದ ಬ್ರಹ್ಮರ್ಷಿಯಾಗಿ ರಾಮಾಯಣ ವೆಂಬ ಸರ್ವೋತ್ತಮವಾದ ಗ್ರಂಥಕ್ಕೆ ಕರ್ತೃವಾಗುವನು.”

ಪಾರ್ವತಿ! ಬೃಹಸ್ಪತಿಯ ಆ ಮಾತನ್ನು ಕೇಳಿ ಇಂದ್ರನು ಶಾಂತ ಚಿತ್ತನಾದನು.

ಪಾರ್ವತಿಯು ಪರಮೇಶ್ವರನನ್ನು ಪ್ರಶ್ನಿಸುತ್ತಾಳೆ :

ವಲ್ಮೀಕಾತ್ಸ ಕಥಂ ಜಜ್ಞೇ ಸ್ವದೇಹೇನೈವ ಮಾನವಃ ।
ವೃತ್ತ್ಯಾ ಕಯಾ ವಾಜೀವತ್ಸ ಕಥಂ ವಾಲ್ಮೀಕಿನಾಮಭಾಕ್ ॥೫॥

“ಪ್ರಿಯನೇ! ಮನುಷ್ಯನಾಗಿದ್ದ ಅವನು ಹುತ್ತದಿಂದ ಹೇಗೆ ಪುನಃ ಹುಟ್ಟಿದನು? ಅದುವರೆಗೂ ಅವನು ಯಾವ ವೃತ್ತಿಯಿಂದ ಜೀವಿಸುತ್ತಿದ್ದನು? ಅವನಿಗೆ ವಾಲ್ಮೀಕಿಯೆಂಬ ಹೆಸರು ಬರಲು ಕಾರಣವೇನು?”

ಈಶ್ವರನು ಹೇಳುತ್ತಾನೆ :

“ಪಾರ್ವತಿ! ಸಮಸ್ತಲೋಕಗಳಿಗೂ ಪ್ರಭುವಾದ ಶ್ರೀರಾಮನೇ ಅವನ ರಕ್ಷಣೆಗಾಗಿಯೂ, ಮಹಾತ್ಮನೊಬ್ಬನ ಪ್ರಾದುರ್ಭಾವಕ್ಕಾಗಿಯೂ, ಇರುವೆ, ನೊಣ, ಹಾವು ಮುಂತಾದ ಜಂತುಗಳು ಮುಟ್ಟದೇ ಇರುವುದಕ್ಕಾಗಿಯೂ ತಪಸ್ಸುಮಾಡುತ್ತಿದ್ದ ವಿಜಯವ್ಯಾಧನ ಸುತ್ತಲೂ ಹುತ್ತವೊಂದನ್ನು ಕಲ್ಪಿಸಿದನು. ಹುತ್ತದ ಮಧ್ಯದಲ್ಲಿರುವವರಿಗೆ ಯಾವ ವಿಧವಾದ ಭಯವು ಯಾವಾಗಲೂ ಇರುವುದಿಲ್ಲ. ಮಳೆ-ಗಾಳಿಗಳ ಭಯವೂ ಇರುವುದಿಲ್ಲ. ಹುತ್ತದ ಮಧ್ಯದಲ್ಲಿದ್ದ ವಿಜಯವ್ಯಾಧನಿಗೆ ಯಾವ ಬಾಧೆಯೂ ಇಲ್ಲದಂತೆ ತಪಸ್ಸುಮಾಡಲು ಸಾಧ್ಯವಾಯಿತು.

ಹೀಗೆ ಹುತ್ತದಲ್ಲಿ ಕುಳಿತು ತಪಸ್ಸುಮಾಡುತ್ತಿದ್ದ ವ್ಯಾಧನಿಗೆ ಅನೇಕ ಯುಗಗಳೂ ಮನ್ವಂತರಗಳೂ ಕಳೆದುಹೋದುವು. ಬಹಳ ಕಾಲವು ಕಳೆದ ನಂತರ ಹಿಮವತ್ಪರ್ವತಕ್ಕೆ ಹೋಗಿದ್ದ ಸಪ್ತರ್ಷಿಗಳು ಪುನಃ ಭೂಲೋಕ

ವನ್ನು ನೋಡುವುದಕ್ಕಾಗಿ ಬರುತ್ತಿದ್ದರು. ಪ್ರತಿಯೊಬ್ಬ ಮುನಿಯನ್ನೂ ಅರುವತ್ತು ಸಾವಿರ ಶಿಷ್ಯರು ಅನುಸರಿಸಿಕೊಂಡು ಬರುತ್ತಿದ್ದರು. ಅವರೆಲ್ಲರೂ ಬಹಳ ದೂರ ನಡೆದನಂತರ ವ್ಯಾಧನು ತಪಸ್ಸುಮಾಡುತ್ತಿದ್ದ ಉತ್ತಮವಾದ ವನವನ್ನು ಕಂಡರು. ಅಲ್ಲಿಯ ವೃಕ್ಷಗಳಲ್ಲಿ ಹಣ್ಣುಗಳು ಬಿಟ್ಟಿರುವುದನ್ನು ನೋಡಿದರೆ ಅದೇನು ದೇವತೆಗಳ ನಂದನವನದಲ್ಲಿರುವ ಕಲ್ಪವೃಕ್ಷವೋ ಎಂಬ ಭಾವನೆಯು ಉಂಟಾಗುತ್ತಿದ್ದಿತು. ಅಲ್ಲಿ ಸಮಸ್ತರಿಗೂ ಮನಸ್ಸು ಶಾಂತವಾಗಿರುತ್ತಿದ್ದಿತು. ಈರ್ಷ್ಯೆಯಾಗಲೀ ಮತ್ಸರವಾಗಲೀ ಯಾರ ಮನ ಸ್ಸನ್ನೂ ಮುಟ್ಟುತ್ತಿರಲಿಲ್ಲ.

ವ್ಯಾಧನ ತಪಸ್ಸಿನಿಂದ ಭಯಗೊಂಡ ಪಂಚಭೂತಗಳು ಆ ವನವನ್ನು ಹಾಗೆ ನಿರ್ಮಿಸಿದ್ದುವು. ಸಮಸ್ತಮುನಿಶ್ರೇಷ್ಠರೂ ಅಂತಹ ಅನುಪಮವಾದ ಅರಣ್ಯಕ್ಕೆ ಬಂದರು. ಅಲ್ಲಿಗೆ ಬಂದೊಡನೆಯೇ ಅವರ ಮಾರ್ಗಾಯಾಸವು ಪರಿಹಾರವಾಯಿತು. ಅನಂತರ ಅವರೆಲ್ಲರೂ ಮರದ ಬುಡಗಳನ್ನೇ ಮನೆಗಳನ್ನಾಗಿ ಮಾಡಿಕೊಂಡು ತಮ್ಮ-ತಮ್ಮ ಯೋಗ್ಯತೆಗೂ ಬುದ್ಧಿವಿಭವಕ್ಕೂ ತಕ್ಕಂತೆ ವಾಸಮಾಡುತ್ತಿದ್ದರು. ಅನಂತರ ಶ್ರೀರಾಮನು ತನ್ನ ಭಕ್ತನ ಆಶ್ರಮಕ್ಕೆ ಅತಿಥಿಗಳು ಬಂದಿರುವುದನ್ನು ಕಂಡು ಅವರ ಸತ್ಕಾರಕ್ಕೆ ಬೇಕಾದ ಸಾಮಗ್ರಿಗಳನ್ನು ಒಡನೆಯೇ ನಿರ್ಮಿಸಿದನು. ಪ್ರತಿಯೊಬ್ಬ ಮುನಿಯ ಗೃಹದಲ್ಲಿಯೂ ಫಲ-ಮೂಲ-ಮಧು-ನೀವಾರ-ಅಕ್ಕಿ-ತುಪ್ಪ-ಮೊಸರು-ಕಾಯಿಪಲ್ಯ, ನಾನಾವಿಧವಾದ ಪ್ರಶಸ್ತವಾದ ತೈಲ-ಹಿಂಗು-ಜೀರಿಗೆ, ಅಡಿಗೆಮಾಡಿಕೊಳ್ಳಲು ಬೇಕಾದ ದೊಡ್ಡ-ದೊಡ್ಡ ಪಾತ್ರೆಗಳು, ಬಾಳೆಎಲೆ-ಏಲಕ್ಕಿ-ಮೆಣಸು, ಅಕ್ಕಿ ಇವೆಲ್ಲವೂ ಇಡಲ್ಪಟ್ಟಿದ್ದುವು. ಅಡಿಗೆಯ ಸಾಮಗ್ರಿಗಳೆಲ್ಲವನ್ನೂ ನೋಡಿ ಇವುಗಳನ್ನು ಸಿದ್ಧಪಡಿಸಿದವರು ಯಾರೆಂದು ತಿಳಿಯದೆ ಮುನಿಗಳೆಲ್ಲರೂ ವಿಸ್ಮಿತರಾದರು. ಅನಂತರ ಅವರೆಲ್ಲರೂ ಜಪವನ್ನೂ, ದೇವರಪೂಜೆಯನ್ನೂ, ಪಾಕಯಜ್ಞವನ್ನೂ, ಪಂಚಮಹಾಯಜ್ಞಗಳನ್ನೂ, ಅತಿಥಿಸತ್ಕಾರವನ್ನೂ ನೆರವೇರಿಸಿ ಭೋಜನಮಾಡಿದರು. ಅಂತೆಯೇ ಶುದ್ಧಾತ್ಮರಾದ ಆ ಮುನಿಗಳು ಸಾಯಂಕಾಲ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮುಗಿಸಿ ಪರಮಾತ್ಮನನ್ನು ಧ್ಯಾನಿಸುತ್ತಾ ನಿದ್ರಾವಶರಾದರು ನಿದ್ರಿಸುತ್ತಿದ್ದ ಆ ಮುನಿಗಳೆಲ್ಲರೂ ತಮ್ಮ ಕನಸಿನಲ್ಲಿ ಜಿತಕ್ರೋಧನಾದ,

ಧರ್ಮಾತ್ಮನಾದ, ದಯಾಪರನಾದ ವ್ಯಾಧನು ತಪಸ್ಸುಮಾಡುತ್ತಿದ್ದುದನ್ನು ಕಂಡರು. ತಪಸ್ಸಿದ್ಧಿಯ ಮಹಿಮೆಯಿಂದ ಅವನು ಸಾಕ್ಷಾತ್ ಯಜ್ಞೇಶ್ವರ ನಂತೆಯೇ ಪ್ರಜ್ವಲಿಸುತ್ತಿದ್ದನು. ಮನಸ್ಸು, ಮಾತು ಮತ್ತು ಕರ್ಮಗಳಿಂದ ಶ್ರೀರಾಮನ ತಾದಾತ್ಮ್ಯವನ್ನೇ ಅವನು ಹೊಂದಿದ್ದನು. ಈರ್ಷ್ಯೆಯನ್ನು ಸಂಪೂರ್ಣವಾಗಿ ತ್ಯಜಿಸಿದ್ದನು. ಅವನಲ್ಲಿ ಪಾಪದ ಲೇಶವೂ ಇರಲಿಲ್ಲ. ಸರ್ವದಾ ರಾಮಮಂತ್ರವನ್ನು ಜಪಿಸುತ್ತಿದ್ದನು. ಅವನ ಶರೀರದಲ್ಲಿ ಮೂಳೆ-ಚರ್ಮಗಳು ಮಾತ್ರವೇ ಇದ್ದು ಅವನು ಒಂದೇ ಕಲೆಯಿಂದ ವಿರಾಜಿಸುವ ಶುಕ್ಲಪಕ್ಷದ ದ್ವಿತೀಯಾಚಂದ್ರನಂತೆ ಕಾಣುತ್ತಿದ್ದನು. ಪುಟಕ್ಕೆ ಹಾಕಿದ ಚಿನ್ನದಂತೆ ನಿರ್ಮಲನಾಗಿದ್ದನು. ತನ್ನ ಹೃನ್ಮಂದಿರದಲ್ಲಿ ಯಾವಾಗಲೂ ಶ್ರೀರಾಮನನ್ನೇ ಅವನು ನೋಡುತ್ತಿದ್ದನು. ಅವನ ಹೃನ್ಮಂದಿರದಲ್ಲಿದ್ದ ಶ್ರೀರಾಮನು ಸೀತಾಸಮೇತನಾಗಿದ್ದನು. ಪೀತಾಂಬರವನ್ನುಟ್ಟಿದ್ದನು. ಸಿಂಹಾಸನದಲ್ಲಿ ಕುಳಿತಿದ್ದನು. ಪಾದಯುಗಳವನ್ನು ಹನುಮಂತನು ಸೇವಿಸುತ್ತಿದ್ದನು. ಸುಗ್ರೀವ-ವಿಭೀಷಣರು ಪಾರ್ಶ್ವಗಳಲ್ಲಿ ದಂಡಗಳನ್ನು ಹಿಡಿದು ನಿಂತಿದ್ದರು. ಮುಕ್ತಾಮಯವಾದ ಶ್ವೇತಚ್ಛತ್ರವನ್ನು ಹಿಡಿದು ಭರತನು ಶ್ರೀರಾಮನನ್ನು ಸೇವಿಸುತ್ತಿದ್ದನು. ಕಿರಿಯನಾದ ಲಕ್ಷ್ಮಣನು ಎಡಗೈಯಲ್ಲಿ ಧನುಸ್ಸನ್ನು ಹಿಡಿದು ಬಲಗೈಯಿಂದ ಬೀಸಣಿಗೆಯನ್ನು ಹಿಡಿದು ಗಾಳಿಬೀಸುತ್ತಿದ್ದನು. ಶ್ರೀರಾಮನು ಕನ್ನೈದಿಲೆಗೂ ಮತ್ತು ದೂರ್ವೆಗೂ ಸದೃಶವಾದ ದೇಹವುಳ್ಳವನಾಗಿದ್ದನು. ಮಂದಸ್ಮಿತನಾಗಿದ್ದನು. ಪ್ರಶಸ್ತವಾದ ಅವಯವಗಳಿಂದ ಕೂಡಿದ್ದನು. ವಿಶಾಲಾಕ್ಷನೂ ಮಹಾಭುಜನೂ ಆಗಿದ್ದನು. ಹಾರಕೇಯೂರಾಂಗದ-ಮಕುಟಗಳನ್ನೂ, ವಿಚಿತ್ರವಾದ ರತ್ನಾಭರಣಗಳನ್ನೂ ಧರಿಸಿದ್ದನು. ವೀರಲಕ್ಷ್ಮೀಸಮೇತನಾಗಿದ್ದನು. ರಣಧೀರನಾಗಿದ್ದನು. ವೀರಾಸನದಲ್ಲಿ ಕುಳಿತಿದ್ದನು. ಮಂದಾರಪುಷ್ಪಗಳಿಂದ ಸಮಲಂಕೃತನಾಗಿದ್ದನು. ದಿವ್ಯವಾದ ಗಂಧವನ್ನು ಪೂಸಿಕೊಂಡಿದ್ದನು. ನೀಲವಾದ ಮುಂಗುರುಳಿನಿಂದ ಆಚ್ಛಾದಿತವಾದ ಮುಖವುಳ್ಳವನಾಗಿದ್ದನು. ಸನಕನೇ ಮೊದಲಾದ ಮಹಾಮುನಿಗಳಿಂದ ಸ್ತುತಿಸಲ್ಪಡುತ್ತಿದ್ದನು. ಸರ್ವಲಕ್ಷಣಸಂಪನ್ನನಾಗಿದ್ದನು. ಭಕ್ತಾನುಗ್ರಹತತ್ಪರನಾಗಿದ್ದನು. ಇಂತಹ ಶ್ರೀರಾಮನನ್ನು ಸರ್ವದಾ ಧ್ಯಾನಿಸುತ್ತಿದ್ದ ವ್ಯಾಧನನ್ನು ಮುನಿಗಳು ಕನಸ್ಸಿನಲ್ಲಿ ಕಂಡರು. ಅವನ ಬಳಿಯಲ್ಲಿಯೇ

ವರವನ್ನು ದಯಪಾಲಿಸಲು ಸಿದ್ಧನಾಗಿ ನಿಂತಿದ್ದ ಶ್ರೀರಾಮನನ್ನು ಮಹರ್ಷಿಗಳು ಸ್ವಪ್ನದಲ್ಲಿ ಕಂಡರು. ಇಂತಹ ಅದ್ಭುತವಾದ ದೃಶ್ಯವನ್ನು ಕನಸಿನಲ್ಲಿ ಕಂಡ ಆ ಮಹರ್ಷಿಗಳು ಆನಂದತುಂದಿಲರಾದರು. ಹೀಗೆ ರಾಮನ ದರ್ಶನದ ಆನಂದದಿಂದ ಕೂಡಿದ್ದ ಭಾವಿತಾತ್ಮರಾದ ಆ ಮಹರ್ಷಿಗಳಿಗೆ ಆ ರಾತ್ರಿಯು ಒಂದು ಕ್ಷಣದಂತೆ ಕಳೆದುಹೋಯಿತು. ಬೆಳಗಾಗುತ್ತಲೇ ಅವರೆಲ್ಲರೂ ಸ್ನಾನ-ಸಂಧ್ಯಾಗ್ನಿಹೋತ್ರಾದಿಗಳನ್ನು ಮುಗಿಸಿಕೊಂಡು ರಾತ್ರಿಯಲ್ಲಿ ಶ್ರೀರಾಮನ ದರ್ಶನದಿಂದ ಉಂಟಾದ ಆನಂದವನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಾ ಸಭೆಸೇರಿದರು. ಜ್ಞಾನನಿಷ್ಠರಾದ ಆ ಮುನಿಗಳೆಲ್ಲರೂ ಸಭೆ ಸೇರಿದಾಗ ದಿವ್ಯಜ್ಞಾನಸಂಪನ್ನರಾದ ಮಹಾತೇಜಸ್ವಿಗಳಾಗಿದ್ದ ನಾರದರು ಅಲ್ಲಿಗೆ ಆಗಮಿಸಿದರು. ಮಹರ್ಷಿಗಳನ್ನು ಕಂಡೊಡನೆಯೇ ಮುನಿಗಳೆಲ್ಲರೂ ಮೇಲೆದ್ದು ನಮಸ್ಕರಿಸಿ ವಿನಯಪೂರ್ವಕವಾಗಿ ಪ್ರಶ್ನಿಸಿದರು :

ಕಸ್ಯೇದಮಾಶ್ರಮಪದಂ ಕಃ ಶ್ರೇಷ್ಠೋಽತ್ರ ಮಹಾಮುನಿಃ ।
ತಪಃ ಕಸ್ಯೇದಮತುಲಂ ಯೇನೇದಂ ನಿರ್ಮಿತಂ ವನಮ್ ॥೩೮॥

"ಮುನಿವರ್ಯರೇ! ಈ ಆಶ್ರಮವು ಯಾರದು? ಇಲ್ಲಿರುವ ಶ್ರೇಷ್ಠನಾದ ಈ ಮಹಾಮುನಿಯು ಯಾರು? ದಿವ್ಯವಾದ ಈ ವನವನ್ನು ಯಾರು ನಿರ್ಮಿಸಿದರು? ಅಸದೃಶವಾದ ಈ ತಪಸ್ಸನ್ನು ಯಾರು ಮಾಡುತ್ತಿದ್ದಾರೆ?

ನಿನ್ನೆ ರಾತ್ರಿ ನಿದ್ರೆಯ ಕಡೆಯ ಭಾಗದಲ್ಲಿ ನಾವು ಅತ್ಯಾಶ್ಚರ್ಯಕರವಾದ ಸ್ವಪ್ನವನ್ನು ಕಂಡೆವು. 'ರಾಮ' 'ರಾಮ' ಎಂಬ ಮಧುರವೂ ಸರ್ವೋತ್ತಮವೂ ಆದ ಮಂತ್ರವನ್ನು ಕೇಳಿದೆವು. ಯಜ್ಞೇಶ್ವರನಂತೆ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ, ರಾಮನಾಮಜಪವನ್ನು ಮಾಡುತ್ತಿದ್ದ, ಎರಡನೆಯ ರಾಮನಂತೆಯೇ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಮುನಿಯನ್ನು ನಾವು ಕನಸಿನಲ್ಲಿ ಕಂಡೆವು. ಹೀಗೆ ಜಪಮಾಡುತ್ತಿದ್ದ ಮುನಿಯ ಮುಂದೆ ಪ್ರಸನ್ನವದನನಾಗಿ ವರವನ್ನು ಕೊಡಲು ಸಿದ್ಧನಾಗಿ ನಿಂತಿದ್ದ ಶ್ರೀಹರಿಯೂ ನಮಗೆ ಕಾಣಿಸಿದನು. ಹೀಗೆಯೇ ನಮಗೆ ಇಲ್ಲಿ ಪ್ರತಿದಿನವೂ ಅದ್ಭುತವಾದ ಸ್ವಪ್ನವಾಗುತ್ತಿರುತ್ತದೆ. 'ರಾಮ-ರಾಮ'–ಎಂಬ ಸುಮಧುರವಾದ ಶಬ್ದವೂ ಕೇಳಿಬರುತ್ತಿರುತ್ತದೆ. ಆದರೆ ಆ ಮುನಿಯು ಎಲ್ಲಿದ್ದಾನೆಂಬುದು ನಮ್ಮ

ಕಣ್ಣಿಗೆ ಗೋಚರಿಸುತ್ತಿಲ್ಲ. ಆದುದರಿಂದ ದಯಮಾಡಿ ಇದರ ರಹಸ್ಯ ವೇನೆಂಬುದನ್ನು ಹೇಳಿರಿ.''

ಹೀಗೆ ಸಪ್ತರ್ಷಿಗಳಿಂದ ಪ್ರಶ್ನಿಸಲ್ಪಟ್ಟ ದಿವ್ಯಜ್ಞಾನಿಗಳಾದ ನಾರದ ಮಹರ್ಷಿಗಳು ಮುನಿಗಳ ಸನ್ನಿಧಿಯಲ್ಲಿ ಆ ಆಶ್ರಮದ ಕಥೆಯನ್ನು ಹೇಳಲು ಉಪಕ್ರಮಿಸಿದರು.

೨೮ನೆಯ ಸರ್ಗವು ಮುಗಿಯಿತು.

ವ್ಯಾಧಮುನಿಯ ತಪಸ್ಸಿದ್ಧಿ: ವ್ಯಾಧನು ವಾಲ್ಮೀಕಿಯಾದುದು

ನಾರದರು ಹೇಳುತ್ತಾರೆ :

ಪುರಾ ಕೈಲಾಸಮಗಮಂ ಶಙ್ಕರಸ್ಯ ದಿದೃಕ್ಷಯಾ ।
ತತ್ರ ಪ್ರಸಙ್ಗಾದ್ದೇವೇಶಃ ಕಥಾಂ ಕಾಞ್ಚಿಚ್ಚಿವೋಽಬ್ರವೀತ್ ॥೧॥

"ಋಷಿಪುಂಗವರೇ? ಹಿಂದೊಮ್ಮೆ ಶಂಕರನನ್ನು ಸಂದರ್ಶಿಸಲು ಕೈಲಾಸಪರ್ವತಕ್ಕೆ ಹೋಗಿದ್ದೆನು. ಅಲ್ಲಿ ಪ್ರಾಸಂಗಿಕವಾಗಿ ಪರಶಿವನು ನನಗೆ ಒಂದು ಕಥೆಯನ್ನು ಹೇಳಿದನು :

"ನಾರದ! ಭೂಲೋಕದಲ್ಲಿ ರಾವಣನೆಂಬ ಮಹಾದುರಾತ್ಮನೊಬ್ಬನು ಜನಿಸುವನು. ಅವನಿಂದ ಪೀಡಿತರಾದ ದೇವತೆಗಳು ಮಹಾವಿಷ್ಣುವನ್ನು ಸ್ತೋತ್ರಮಾಡುತ್ತಾರೆ. ಮಹಾವಿಷ್ಣುವು ದೇವತೆಗಳಿಗೆ ಅಭಯವನ್ನಿತ್ತು ತ್ರಿಮೂರ್ತಿಗಳ ಅಂಶದಿಂದ ದಶರಥನ ಮಗನಾದ ರಾಮನಾಗಿ ಭುವಿಯಲ್ಲಿ ಅವತರಿಸುವನು. ತಂದೆಯ ಆಜ್ಞೆಯಂತೆ ಅರಣ್ಯಕ್ಕೆ ಹೋಗಿ ದಂಡಕಾ ರಣ್ಯದಲ್ಲಿ ಅನೇಕ ರಾಕ್ಷಸರನ್ನು ಸಂಹರಿಸುವನು.

ಅನಂತರ ಮಹಾಬಲನಾದ ಶ್ರೀರಾಮನು ಸೇತುವೆಯನ್ನು ಕಟ್ಟಿಸಿ ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ರಾವಣನನ್ನು ಸಂಹರಿಸುವನು. ಬಳಿಕ ಲಂಕೆಯನ್ನು ಬಿಟ್ಟು ಕಪಿಸೈನ್ಯದೊಡನೆಯೂ ರಾಕ್ಷಸಸೈನ್ಯದೊಡನೆಯೂ ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯಾಪಟ್ಟಣಕ್ಕೆ ಬರುವನು. ಅನಂತರ ವೃದ್ಧರಾದ ಮಂತ್ರಿಗಳೂ ಮತ್ತು ಪುರೋಹಿತರೂ ಶ್ರೀರಾಮನನ್ನು ಸಿಂಹಾ ಸನದ ಮೇಲೆ ಕುಳ್ಳಿರಿಸಿ ಪಟ್ಟಾಭಿಷೇಕಮಾಡುವರು. ಹಲವಾರು ವರ್ಷ

ಗಳವರೆಗೆ ಶ್ರೀರಾಮನು ಧರ್ಮನಿರತನಾಗಿ ನಿಷ್ಕಂಟಕವಾದ ರಾಜ್ಯವನ್ನಾಳು ತ್ತಿರುವನು. ಹೀಗೆ ಶ್ರೀರಾಮನು ಹನ್ನೊಂದುಸಾವಿರ ವರ್ಷಗಳವರೆಗೆ ಧರ್ಮ ದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದು ಬ್ರಹ್ಮಲೋಕವನ್ನು ಸೇರುವನು.

ಶ್ರೀರಾಮನ ಈ ಚರಿತ್ರೆಯು ಪರಮಪವಿತ್ರವಾದುದು. ಪಾಪನಾಶಕ ವಾದುದು. ಪುಣ್ಯತಮವಾದುದು. ವೇದಕ್ಕೆ ಸಮನಾದುದು. ಅಂತಹ ಶ್ರೀರಾಮನು ಚರಿತ್ರೆಯನ್ನು ಮುಂದೆ ವಾಲ್ಮೀಕಿಯೆಂಬ ಮಹರ್ಷಿಯು ರಚಿ ಸುವನು. ವಸಿಷ್ಠಮಹರ್ಷಿಯ ಉಪದೇಶದಿಂದ ಮಹಾಬುದ್ಧಿವಂತನಾಗಿ ಆದಿಕವಿಯಾಗುವ ಅವನು ವಲ್ಮೀಕದಿಂದ ಪುನಃ ಜನ್ಮವನ್ನು ಪಡೆದು ಬ್ರಾಹ್ಮಣನಾಗುವನು. ಶ್ರೀರಾಮಮಂತ್ರಪುನಶ್ಚರಣೆಯ ಪ್ರಭಾವದಿಂದ ಅವನು ಮುಂದೆ ಬ್ರಹ್ಮರ್ಷಿಯೂ ಆಗುವನು."

ಹೀಗೆ ನಾನು ಪರಮೇಶ್ವರನಿಂದಲೇ ಈ ಹುತ್ತದ ಸಂಬಂಧವಾದ ಕಥೆ ಯನ್ನು ಕೇಳಿದ್ದೆನು. ಹುತ್ತದ ಸಮೀಪದಲ್ಲಿ ನೀವು ಹೇಗೆ 'ರಾಮ-ರಾಮ' ಎಂಬ ಸುಮಧುರವಾದ ಶಬ್ದವನ್ನು ಕೇಳುತ್ತಿರುವಿರೋ ಹಾಗೆಯೇ ನಾನೂ ಹಿಂದೆ ಇಂತಹ ಸುಮಧುರಶಬ್ದವನ್ನೇ ಈ ಹುತ್ತದ ಬಳಿ ಕೇಳಿದ್ದೇನೆ."

ನಾರದರು ಹೀಗೆ ಹೇಳಿದನಂತರ ಅಶರೀರವಾಣಿಯು ಹೇಳಿತು :

ವಲ್ಮೀಕಂ ಶೋಧ್ಯತಾಂ ವಿಪ್ರಾಃ ತೇನ ಶ್ರೇಯೋ ಭವಿಷ್ಯತಿ ॥೧೨॥

"ಬ್ರಾಹ್ಮಣಶ್ರೇಷ್ಠರೇ! ನೀವು ಈ ಹುತ್ತವನ್ನು ಶೋಧಿಸಿರಿ. ನಿಮಗೆ ಶ್ರೇಯಸ್ಸುಂಟಾಗುತ್ತದೆ."

ಅಶರೀರವಾಣಿಯ ಆ ಮಾತನ್ನು ಕೇಳಿ ವಸಿಷ್ಠರೇ ಮೊದಲಾದ ಮಹರ್ಷಿಗಳು ಹುತ್ತವನ್ನು ಅಗೆದರು. ಆ ಹುತ್ತವು ಭಗ್ನವಾಗುತ್ತಿದ್ದಂತೆ ಅದರೊಳಗೆ ಕುಳಿತಿದ್ದ ಪ್ರಜ್ವಲಿಸುವ ತೇಜಸ್ಸಿನಿಂದ ಸಂಪನ್ನನಾಗಿದ್ದ ಮುನಿ ಯನ್ನು ನೋಡಿದರು. ಆ ಮುನಿಯು ಪುಟಕ್ಕೆಹಾಕಿದ ಚಿನ್ನದ ಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದನು. ಪುಟಕ್ಕೆ ಹಾಕಿದ ಚಿನ್ನದಂತೆ ನಿಷ್ಕಳಂಕನಾಗಿ ಪರಿಶುದ್ಧನಾಗಿದ್ದನು. ಸರ್ವರಿಗೂ ಅಪೇಕ್ಷಣೀಯನಾಗಿ ದ್ದನು. ನಿಷ್ಕಲ್ಮಷನಾಗಿದ್ದನು. ತಪಸ್ಸಿನ ಮೂರ್ತಿಮತ್ತಾದ ಸ್ವರೂಪವೇ ಆಗಿದ್ದನು. ತಪಸ್ಸಿನಿಂದ ಸಮಸ್ತದಿಕ್ಕುಗಳನ್ನೂ ಬೆಳಗುತ್ತಿದ್ದನು. ಗುರು

ವಿನ ಪಾದಗಳಲ್ಲಿಯೇ ದೃಷ್ಟಿಯನ್ನಿಟ್ಟು 'ರಾಮ-ರಾಮ' ಎಂದು ಸರ್ವದಾ ಜಪಮಾಡುತ್ತಿದ್ದನು. ತನ್ನ ಅಂತರಂಗದಲ್ಲಿ ಸೀತಾ-ಲಕ್ಷ್ಮಣ-ಭರತ-ಶತ್ರುಘ್ನ-ಹನೂಮತ್ಸಮೇತನಾಗಿದ್ದ, ಕನಕಾಂಗದ-ಕೇಯೂರ-ಕಟಕ-ಕಂಕಣಾದಿಗಳಿಂದ ವಿಭೂಷಿತನಾಗಿದ್ದ, ದೀರ್ಘಬಾಹುವಾದ, ವಿಶಾಲನೇತ್ರನಾದ, ಸುಂದರಾಂಗನಾದ, ಮಂದಸ್ಮಿತನಾದ ಶ್ರೀರಾಮಮೂರ್ತಿಯನ್ನು ಮೆಲ್ಲ-ಮೆಲ್ಲನೆ ಪೂಜಿಸುತ್ತಿದ್ದನು. ರಾಮಸಾಲೋಕ್ಯಗತನಾಗಿ ಬಹಿರ್ವಿಷಯಗಳೆಲ್ಲವನ್ನೂ ಮರೆತಿದ್ದನು. ಜಟೆಯನ್ನೂ ನಾರುಮಡಿಯನ್ನೂ ಧರಿಸಿದ್ದನು. ಪದ್ಮಾಸನದಲ್ಲಿ ಕುಳಿತಿದ್ದನು. ಅಂತಹ ಅದ್ಭುತಾಕಾರನಾದ ಮುನಿಯನ್ನು ಕಂಡೊಡನೆಯೇ ವಸಿಷ್ಠಮಹರ್ಷಿಗಳು ಅವನ ಬಳಿಗೆ ಹೋಗಿ ಸ್ತೋತ್ರಗಳಿಂದಲೂ ಸಾಮೋಕ್ತಿಗಳಿಂದಲೂ ಮಹರ್ಷಿಯನ್ನು ಎಚ್ಚರಗೊಳಿಸಲು ಪ್ರಯತ್ನಿಸಿದರು. ಬ್ರಹ್ಮಾನಂದದಲ್ಲಿಯೇ ತಲ್ಲೀನನಾಗಿದ್ದ ಮಹರ್ಷಿಯು ಬಹಿರ್ಮುಖನಾಗಲೇ ಇಲ್ಲ. ಅವನನ್ನು ಎಚ್ಚರಗೊಳಿಸಲು ಪ್ರಯತ್ನಿಸುತ್ತಿದ್ದ ಮಹರ್ಷಿಗಳಿಗೆ ಶ್ರಮವಾಯಿತೇ ಹೊರತು ಬಹಿರ್ಮುಖಗೊಳಿಸಲು ಸಾಧ್ಯವಾಗಲೇ ಇಲ್ಲ. ಧೀಮಂತನಾದ ಆ ಮುನಿಯನ್ನು ಬಹಿರ್ಮುಖಗೊಳಿಸುವ ಉಪಾಯವೂ ಅವರಿಗೆ ತಿಳಿಯಲಿಲ್ಲ.

"ಇವನು ನಾವು ಹೇಳುತ್ತಿರುವುದನ್ನು ಕೇಳುತ್ತಲೂ ಇಲ್ಲ ; ನಮ್ಮ ಕಡೆಗೆ ನೋಡುತ್ತಲೂ ಇಲ್ಲ. ಇವನನ್ನು ಬಹಿರ್ಮುಖಗೊಳಿಸಲು ಬೇರೆ ಯಾವ ಸಾಧನವಿದೆ?"–ಎಂದು ವಸಿಷ್ಠಪ್ರಮುಖರಾದ ಮುನಿಗಳು ಯೋಚಿಸುತ್ತಿರಲಾಗಿ ಇಂದ್ರನೊಡನೆ ಸಮಸ್ತದಿಕ್ಪಾಲಕರೂ, ದೇವತೆಗಳೂ, ಮುನಿಗಳೂ, ವೈಕುಂಠನಿಲಯನಾದ ಹರಿಯೂ, ಕೈಲಾಸವಾಸಿಯಾದ ಶಿವನೂ ಸತ್ಯಲೋಕದಲ್ಲಿದ್ದ ಚತುರ್ಮುಖಬ್ರಹ್ಮನೂ ದೇವತೆಗಳೊಡನೆ ಅಲ್ಲಿಗೆ ಆಗಮಿಸಿದರು. ಅವರೆಲ್ಲರೂ ತದೇಕಚಿತ್ತನಾಗಿದ್ದ ಬ್ರಹ್ಮಾನಂದದಲ್ಲಿ ಮುಳುಗಿಹೋಗಿದ್ದ ಮುನಿಯನ್ನು ನೋಡಿ ವಿಸ್ಮಿತರಾದರು. ಅವರು ಕೂಡ ಮುನಿಯನ್ನು ಬಹಿರ್ಮುಖಗೊಳಿಸುವುದರಲ್ಲಿ ವಿಮುಖರಾದರು. ಕಡೆಗೆ ಬುದ್ಧಿವಂತರಲ್ಲಿ ಶ್ರೇಷ್ಠರಾದ ವಸಿಷ್ಠಮಹರ್ಷಿಗಳಿಗೆ ಬಹಳವಾಗಿ ಯೋಚಿಸಿದ ನಂತರ ಒಂದು ಉಪಾಯವು ಹೊಳೆಯಿತು :

ವಿಶ್ವಾಸೋಽಸ್ತಿ ಗುರಾವಸ್ಯ ಪುರೈತದ್ವನಚಾರಿಣಃ ।

ಇದಾನೀಮಪಿ ಧೀರಸ್ಯ ಸ ಧರ್ಮಃ ಕ್ವ ಗಮಿಷ್ಯತಿ ।
ಗುರುಸ್ತವಾಗ್ರತೋಽಸ್ಮೀತಿ ವದಿಷ್ಯಾಮಿ..........

"ಹಿಂದೆ ಈ ಅರಣ್ಯದಲ್ಲಿಯೇ ಸಂಚರಿಸುತ್ತಿದ್ದ ಇವನ ಸ್ವಭಾವವು ನನಗೆ ಚೆನ್ನಾಗಿ ತಿಳಿದಿದೆ. ಇವನಿಗೆ ಗುರುವಿನಲ್ಲಿ ಮಹಾವಿಶ್ವಾಸವಿದೆ. ಈಗಲೂ ಕೂಡ 'ಗುರುಭಕ್ತಿ' ಎಂಬ ಆ ಧರ್ಮವು ಇವನಲ್ಲಿ ಇಲ್ಲದಿರು ವುದು ಹೇಗೆ ಸಾಧ್ಯ? ಆದುದರಿಂದ 'ನಿನ್ನ ಗುರುವಾದ ನಾನು ಇಲ್ಲಿಗೆ ಬಂದಿರುವೆನು'–ಎಂದು ನಾನೀಗ ಇವನಿಗೆ ಹೇಳುವೆನು. ಗುರುಭಕ್ತನಾಗಿ ರುವ ಇವನು ಒಡನೆಯೇ ಪ್ರತಿಕ್ರಿಯಿಸದೇ ಇರಲಾರನು."

ವಸಿಷ್ಠರ ಆ ಉಪಾಯಕ್ಕೆ ದೇವತೆಗಳೂ ಸಮ್ಮತಿಸುತ್ತಾ ಹೇಳಿದರು :

"ವಸಿಷ್ಠರೇ! ಈ ತಪಸ್ವಿಯು ಬಹಿರ್ಮುಖನಾಗುವ ರೀತಿಯಲ್ಲಿ ನೀವೇ ಇವನನ್ನು ಜಾಗ್ರತಗೊಳಿಸಿರಿ. ಸ್ಥಾಣುವಿನಂತಿರುವ ಇವನನ್ನು ಬಹಿರ್ಮುಖಗೊಳಿಸಲು ಬೇರೆ ಯಾರಿಂದಲೂ ಸಾಧ್ಯವಾಗುವುದಿಲ್ಲ."

ದೇವತೆಗಳ ಆ ಮಾತನ್ನು ಕೇಳಿ ಜಪಮಾಡುವವರಲ್ಲಿ ಶ್ರೇಷ್ಠರಾದ ವಸಿಷ್ಠರು ತಮ್ಮ ಶಿಷ್ಯನನ್ನು ಎಚ್ಚರಗೊಳಿಸುತ್ತಾ ಹೇಳಿದರು :

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ತಪ್ತಂ ತೇ ಸುಮಹತ್ತಪಃ ।
ಗುರುರಸ್ಮ್ಯಾಗತಃ ಶಿಷ್ಯ ಮಮ ಪೂಜಾ ವಿಧೀಯತಾಮ್ ॥೩೨॥

"ಶಿಷ್ಯನೇ ! ಏಳು! ಎದ್ದೇಳು. ನಿನಗೆ ಮಂಗಳವಾಗಲಿ. ನೀನು ಮಹತ್ತರವಾದ ತಪಸ್ಸನ್ನು ಆಚರಿಸಿರುವೆ. ನಿನ್ನ ಗುರುವಾದ ನಾನಿಲ್ಲಿಗೆ ಬಂದಿರುವೆನು. ನನ್ನನ್ನು ಯಥಾವಿಧಿಯಾಗಿ ಸತ್ಕರಿಸು."

ವಸಿಷ್ಠರೇ ಸಾಕ್ಷಾತ್ತಾಗಿ ಆ ಹೇಳಿದ ಮಾತನ್ನು ಕೇಳಿ ವ್ಯಾಧ ಮುನಿಯು ಎರಡು ಕಣ್ಣುಗಳನ್ನೂ ಬಿಟ್ಟು ಮೇಲೆದ್ದು ವಸಿಷ್ಠರಿಗೆ ನಮಸ್ಕರಿಸುತ್ತಾ ಹೇಳಿದನು:

"ಗುರುಗಳೇ! ನಿಮಗೆ ನಮಸ್ಕಾರಮಾಡುತ್ತೇನೆ. ನಿಮ್ಮ ದರ್ಶನವು ಯಾರಿಗೂ ದುರ್ಲಭವೇ ಸರಿ. ನಾನು ವಿಶೇಷವಾಗಿ ಪುಣ್ಯಮಾಡಿರುವುದ

ರಿಂದ ತಮ್ಮ ದಿವ್ಯದರ್ಶನವು ನನಗೆ ಲಭಿಸಿದೆ. ಅಂತೆಯೇ ನಮಸ್ಕರಿಸುವ ಸುಯೋಗವು ಲಭಿಸಿದೆ.

ಧನ್ಯೋಽಹಂ ಕೃತಕೃತ್ಯೋಽಹಂ ಪುಣ್ಯೋಽಹಂ ತವ ದರ್ಶನಾತ್ ।
ಯದಸ್ತಿ ಕೃತ್ಯಂ ಕರ್ಮೇಹ ಶಾಧಿ ಮಾಂ ಕಿಂಕರಂ ಗುರೋ ॥೩೫॥

ಗುರುಗಳೇ! ನಿಮ್ಮ ದರ್ಶನದಿಂದ ನಾನು ಧನ್ಯನಾದೆನು. ಕೃತಕೃತ್ಯನಾದೆನು. ನಾನೇ ಪುಣ್ಯಶಾಲಿಯು. ಈಗ ತಮಗೆ ನಾನೇನು ಮಾಡಿಕೊಡಬೇಕಾಗಿದೆ? ಸೇವಕನಾಗಿರುವ ನನಗೆ ಆಜ್ಞಾಪಿಸಿರಿ."

ವ್ಯಾಧಮುನಿಯು ಹೀಗೆ ಹೇಳುತ್ತಿರಲಾಗಿ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ದೇವ-ದುಂದುಭಿಗಳು ಮೊಳಗಿದುವು. ಅಪ್ಸರೆಯರು ನೃತ್ಯಮಾಡತೊಡಗಿದರು. ಎಲ್ಲೆಡೆಯಲ್ಲಿಯೂ ಸುಖಾವಹವಾದ ಮಂದಮಾರುತವು ಬೀಸತೊಡಗಿತು. ಹತ್ತು ದಿಕ್ಕುಗಳೂ ನಿರ್ಮಲವಾಗಿ ಕಾಣುತ್ತಿದ್ದುವು.

ಆ ಸಮಯದಲ್ಲಿ ಮಹಾತೇಜಸ್ವಿಯೂ, ಶಂಖ-ಚಕ್ರ-ಗದಾಧರನೂ, ಉತ್ಪತ್ತಿ-ಸ್ಥಿತಿ-ಸಂಹಾರಗಳಿಗೆ ಕಾರಣಭೂತನೂ, ಪರಾತ್ಪರನೂ, ವನಮಾಲೆಯನ್ನು ಧರಿಸಿರುವವನೂ, ಪೀತಾಂಬರಧರನೂ, ನೀಲಮೇಘಶ್ಯಾಮನೂ, ಸಕಲದೇವಪೂಜಿತನೂ, ಸುರಾಸುರರಿಗೂ ಗುರುವಾಗಿರತಕ್ಕವನೂ, ಬ್ರಹ್ಮ-ರುದ್ರಾದಿಗಳಿಂದ ವಂದಿಸಲ್ಪಡತಕ್ಕವನೂ, ಶ್ರೀಮಂತನೂ, ಕೌಸ್ತುಭಮಣಿಯಿಂದ ವಿರಾಜಿಸುವ ವಕ್ಷಃಸ್ಥಳವುಳ್ಳವನೂ, ಮಿಂಚಿನಂತೆ ಹೊಳೆಯುತ್ತಿರುವ ಮಹಾಲಕ್ಷ್ಮಿಯಿಂದ ಕೂಡಿರುವವನೂ ಆದ ಶ್ರೀಮಹಾವಿಷ್ಣುವು ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಆ ಮುನಿಯ ಎದುರಿನಲ್ಲಿ ನಿಂತು ಎಲ್ಲ ದೇವತೆಗಳೂ ಕೇಳುತ್ತಿದ್ದಂತೆ ಈ ಮಾತನ್ನು ಹೇಳಿದನು :

"ಯಾವ ಮುನಿಯ ಇಂತಹ ತಪಸ್ಸಿನಿಂದ ಮೇಲ್ಭಾಗದ ಏಳು ಲೋಕಗಳೂ ಕೆಳಭಾಗದ ಏಳು ಲೋಕಗಳೂ ತಿರಸ್ಕೃತವಾಗಿರುವುವೋ, ಇಂದ್ರನೇ ಮೊದಲಾದ ಸಮಸ್ತದಿಕ್ಪಾಲಕರೂ ಭಯಗೊಂಡಿರುವರೋ, ಯಾವನು ತನ್ನ ತಪಸ್ಸಿನಿಂದ ಮತ್ತೊಂದು ಬ್ರಹ್ಮಾಂಡವನ್ನೇ ಸೃಷ್ಟಿಸಬಲ್ಲನೋ, ಘೋರವಾಗಿ ತಪಸ್ಸುಮಾಡುತ್ತಿದ್ದ ಯಾವನಿಗೆ ವಲ್ಮೀಕದಿಂದ ಪುನರ್ಜನ್ಮವು ಲಭಿಸಿತೋ ಅಂತಹ ಈ ತಪಸ್ವಿಯು ಬ್ರಹ್ಮರ್ಷಿತ್ವವನ್ನು ಹೊಂದಿ ವಾಲ್ಮೀಕಿಯೆಂಬ

ಹೆಸರಿನಿಂದ ಪ್ರಸಿದ್ಧನಾಗಲಿ. ಇವನು ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗುವನು. ಇವನ ನಾಲಿಗೆಯ ತುದಿಯಲ್ಲಿ ಸರಸ್ವತಿಯು ನೃತ್ಯಮಾಡಲಿ. ಇವನ ವಾಕ್ಕು ಸುಮಧುರವಾಗಿರುತ್ತದೆ. ಮಹಾಮತಿಯಾದ ಇವನು ರಾಮಾಯಣಮಹಾಕಾವ್ಯವನ್ನು ರಚಿಸುವನು. ವೇದವೇದ್ಯನಾದ, ಪರಮಾತ್ಮನಾದ ನಾನು ರಾಮನಾಗಿ ಅವತರಿಸಿದಾಗ ವೇದವೇ ಇವನ ಮುಖದಿಂದ ರಾಮಾಯಣರೂಪವಾಗಿ ಪ್ರವಹಿಸುವುದು. ಆ ರಾಮಾಯಣದ ಪ್ರತಿಯೊಂದು ಅಕ್ಷರವೂ ಪಾಪಾತ್ಮರ ಸಮಸ್ತಪಾಪಗಳನ್ನೂ ಹೋಗಲಾಡಿಸುವುದು.

ಭಕ್ತ್ಯಾ ರಾಮಾಯಣಂ ಯೇನ ಪಠಿತಂ ಶ್ರುತಿಗೋಚರಮ್ ।
ಜೀವನ್ಮುಕ್ತೋ ಭವೇತ್ಸದ್ಯಃ ಪಾಪಮಾತ್ರವಿನಾಶನಮ್ ॥೪೫॥

ಯಾವನು ಭಕ್ತಿಪೂರ್ವಕವಾಗಿ ರಾಮಾಯಣವನ್ನು ಪಾರಾಯಣ ಮಾಡುವನೋ ಅಥವಾ ಶ್ರವಣಮಾಡುವನೋ-ಅವನು ಆ ಕ್ಷಣದಲ್ಲಿಯೇ ಜೀವನ್ಮುಕ್ತನಾಗುವನು. ಅವನ ಸಮಸ್ತಪಾಪಗಳೂ ಆ ಕ್ಷಣದಲ್ಲಿಯೇ ವಿನಾಶಹೊಂದುವುವು.

ದುರ್ಭೋಜನದುರಾಲಾಪದುಷ್ಪ್ರತಿಗ್ರಹಸಮ್ಭವಮ್ ।
ದುಸ್ಸಙ್ಗದುರ್ಜನಾಲಾಪ ಸಂಭೂತಂ ದುಷ್ಟಸೇವಯಾ ॥೪೬॥

ಬ್ರಹ್ಮಹತ್ಯಾಸುರಾಪಾನಗುರುತಲ್ಪಾದಿಸಮ್ಭವಮ್ ।
ಪರಪೀಡನಸಮ್ಭೂತಂ ದುಷ್ಟಸ್ತ್ರೀಸಙ್ಗ ಸಮ್ಭವಮ್ ॥೪೭॥

ಸರ್ವಪಾಪವಿನಿರ್ಮುಕ್ತೋ ರಾಹುಮುಕ್ತಃ ಶಶೀ ಯಥಾ ॥೪೮॥

ರಾಮಾಯಣವನ್ನು ಪಾರಾಯಣಮಾಡುವವನು ಮತ್ತು ಶ್ರವಣ ಮಾಡುವವನು-ದುಷ್ಟಾನ್ನಭೋಜನ, ದುಷ್ಟಾಲಾಪ, ದುಷ್ಟಪರಿಗ್ರಹ, ದುಷ್ಟ ಸಹವಾಸ, ದುರ್ಜನರೊಡನೆ ಸರಸ-ಸಲ್ಲಾಪ, ದುಷ್ಟರ ಸೇವೆ, ಬ್ರಹ್ಮಹತ್ಯೆ, ಸುರಾಪಾನ, ಗುರುತಲ್ಪಗಮನ, ಪರಪೀಡನ, ದುಷ್ಟಸ್ತ್ರೀಸಮಾಗಮ ಮುಂತಾದುವುಗಳಿಂದ ಸಂಭವಿಸುವ ಸಮಸ್ತಪಾಪಗಳಿಂದಲೂ ವಿಮುಕ್ತನಾಗಿ ರಾಹುವಿನಿಂದ ಮುಕ್ತನಾದ ಚಂದ್ರನಂತೆ ವಿರಾಜಿಸುವನು. ಅವಸಾನಾನಂತರ ಸಮಸ್ತಪುಣ್ಯಲೋಕಗಳಲ್ಲಿಯೂ, ವೈಕುಂಠ-ಕೈಲಾಸ-ಸತ್ಯಲೋಕಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸಿಕೊಂಡಿರುವನು."

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

"ಶ್ರೀಹರಿಯು ಹೀಗೆ ಹೇಳಲು ಅವನ ಮಾತನ್ನು ನಾನೂ ಅನುಮೋದಿಸಿದೆನು. ಅಲ್ಲಿದ್ದ ಸಮಸ್ತದೇವತೆಗಳೂ ಅನುಮೋದಿಸಿದರು. ಪುನಃ ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು. ಶ್ರೀಹರಿಯು ಹೀಗೆ ವ್ಯಾಧಮುನಿಗೆ ವರವನ್ನಿತ್ತು ಅವನ ಶರೀರದ ಮೇಲೆ ಬೆಳೆದಿದ್ದ ಬಿದಿರುಮೆಳೆಯನ್ನು ನೋಡಿ ಅದು ಮಹಾಸಾರವುಳ್ಳದೆಂದು ಭಾವಿಸಿ ಅದರಿಂದ ಮೂರು ಧನುಸ್ಸುಗಳನ್ನು ನಿರ್ಮಿಸಿದನು. ಅದರ ಮೊದಲನೆಯ ಖಂಡವು ವೈಷ್ಣವಧನುಸ್ಸಾಯಿತು. ಎರಡನೆಯದು ಶೈವಧನುಸ್ಸಾಯಿತು. ಮೂರನೆಯದು ಗಾಂಡೀವಧನುಸ್ಸಾಯಿತು. ಇದು ಆ ಧನುಸ್ಸುಗಳ ಸೃಷ್ಟಿನಿರ್ಣಯವಾಗಿದೆ. ಶ್ರೀರಾಮನು ಭಾರ್ಗವನಿಂದ ತೆಗೆದುಕೊಂಡುದು ವೈಷ್ಣವಧನುಸ್ಸು. ಶ್ರೀರಾಮನಿಂದ ವಿವಾಹಕಾಲದಲ್ಲಿ ಭಂಗವಾದುದು ಶೈವಧನುಸ್ಸು. ಪಾರ್ಥನ ಕೈಸೇರಿದುದು ಗಾಂಡೀವಧನುಸ್ಸು. ಹೀಗೆ ಮಹಾವಿಷ್ಣುವಿನಿಂದ ವರವನ್ನು ಪಡೆದ ವಾಲ್ಮೀಕಿಮಹಾಮುನಿಯು ಅವನ ಮುಂದೆ ಕೈಜೋಡಿಸಿಕೊಂಡು ನಿಂತು ಅವ್ಯಯನಾದ ಆ ಶ್ರೀಹರಿಯನ್ನು ಪರಿ-ಪರಿಯಾಗಿ ಸ್ತುತಿಸಿದನು. ವಾಲ್ಮೀಕಿ ಮಹರ್ಷಿಯಿಂದ ಮಾಡಲ್ಪಟ್ಟ ಸ್ತೋತ್ರವನ್ನು ಕೇಳಿ ಮಹಾವಿಷ್ಣುವು ಜ್ಞಾನನಿಷ್ಠನಾದ ವಾಲ್ಮೀಕಿಗೆ ಇನ್ನೂ ಅನೇಕವಾದ ವರಗಳನ್ನು ಕೊಟ್ಟು ಸಕಲ ದೇವತೆಗಳೊಡನೆ ವೈಕುಂಠಲೋಕಕ್ಕೆ ಹೊರಟುಹೋದನು.

ಅನಂತರ ವಾಲ್ಮೀಕಿಮಹರ್ಷಿಯು ತಮಸಾನದಿಯ ತೀರಕ್ಕೆ ಬಂದು ಅಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು ವಾಸಮಾಡುತ್ತಾ ಸರ್ವದಾ ಶ್ರೀರಾಮನನ್ನೇ ಭಜಿಸುತ್ತಾ ತನ್ನ ತಪಸ್ಸಿನಿಂದ ಮುನಿ-ದೇವ-ಮನುಷ್ಯರಲ್ಲಿ ಪ್ರಸಿದ್ಧನಾದನು. ಮಹಾಮುನಿಯು ರಾಮಾಯಣಕಥೆಯನ್ನು ರಚಿಸಬೇಕೆಂಬ ಆಸೆಯಿಂದ ಶ್ರೀರಾಮನ ಸಂಕ್ಷಿಪ್ತಕಥೆಯನ್ನು ನಾರದಮುನಿಗಳಿಂದ ತಿಳಿದುಕೊಂಡು ಕಾಲವನ್ನು ನಿರೀಕ್ಷಿಸುತ್ತಾ ಸುಖದಿಂದ ಕಾಲಕಳೆಯುತ್ತಿದ್ದನು.

ಪಾರ್ವತಿ! ಹೀಗೆ ಹಿಂದು-ಮುಂದಾಗಿ ಜಪಿಸಿದರೂ ಶ್ರೀರಾಮನ ನಾಮಸ್ಮರಣೆಯಿಂದ ಅಂತಹ ನೀಚನಾದ ವ್ಯಾಧನೂ ಮುನಿಶ್ರೇಷ್ಠನಾದನು. ಹೀಗಿರುವಾಗ ಅದನ್ನು ಕ್ರಮವಾಗಿ ಜಪಮಾಡುವವರಿಗೆ ಪ್ರಾಪ್ತವಾಗುವ

ಫಲವೆಷ್ಟೆಂಬುದನ್ನು ನಾನು ಹೇಳಲು ಸಮರ್ಥನಾಗಿಲ್ಲ. ಶ್ರೀಮಹಾ ವಿಷ್ಣುವಿನ ಸಕಲನಾಮಗಳೂ ಕ್ರಮವಾಗಿ ಉಚ್ಚರಿಸಲ್ಪಟ್ಟರೆ ಫಲವನ್ನು ಕೊಡುವುವು. ಆದರೆ ಶ್ರೀರಾಮನಾಮವು ಕ್ರಮವಾಗಿರಲಿ ; ಅಕ್ರಮವಾಗಿರಲಿ–ಹೇಗೆ ಜಪಿಸಿದರೂ ಮೋಕ್ಷಫಲವನ್ನು ಕೊಡುತ್ತದೆ. ಸಾವಿರನಾಮ ಗಳನ್ನು ಜಪಿಸಿದರೂ ಫಲವು ವಿಷ್ಣುವಿನ ಒಂದೇ ಮುಖದಿಂದ ಬರುವುದು. ಆದರೆ ರಾಮನಾಮವನ್ನು ಜಪಿಸಿದರೆ ರಾಮನಂತೆಯೇ ಸರ್ವತೋಮುಖವಾದ ಫಲವು ಲಭಿಸುವುದು. ಪ್ರಪಂಚದಲ್ಲಿ ಸಮಸ್ತಶಬ್ದಗಳೂ ಹಿಂದು- ಮುಂದಾಗಿ ಉಚ್ಚರಿಸಲ್ಪಟ್ಟರೆ ನಿಷ್ಫಲಗಳಾಗುವುವು. ಆದರೆ ರಾಮನಾಮವನ್ನು ಕ್ರಮವಾಗಿಯೇ ಉಚ್ಚರಿಸಿದರೂ ಹಿಂದು-ಮುಂದಾಗಿ ಉಚ್ಚರಿಸಿದರೂ ಫಲವನ್ನು ಕೊಡುವುದು. ಕಬ್ಬಿನ ಜಲ್ಲೆಯೂ ಹಿಂದೆ ಜಗಿದರೂ ಮುಂದೆ ಜಗಿದರೂ ಮಧುರರಸವನ್ನೇ ನೀಡುವಂತೆ ರಾಮನಾಮವು ಹೇಗೇ ಹೇಳಲ್ಪಟ್ಟರೂ ಮುಕ್ತಿಯ ಫಲವನ್ನು ಕೊಡುತ್ತದೆ. 'ರಾಮ' ಎಂಬ ಶಬ್ದವನ್ನು ವ್ಯತ್ಯಸ್ತವಾಗಿ ಮರಾ ಎಂದು ಉಚ್ಚರಿಸಿದರೆ ಅದರಲ್ಲಿರುವ ಅಕಾರ-ಆಕಾರ-ಮಕಾರಗಳು ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಹೇಳುವುವು. 'ರ' ಎಂಬ ಅಕ್ಷರದಿಂದ ತ್ರಿಮೂರ್ತಿಗಳಿಗೂ ಕಾರಣಭೂತ ವಾದ ಪರಬ್ರಹ್ಮವು ಹೇಳಲ್ಪಡುವುದು. ರಾಮನಾಮಕ್ಕೆ ಸಮವಾಗಿ ಪಾಪ ಪರಿಹಾರಕವಾದ ಇತರ ಮಂತ್ರವಾಗಲೀ ನಾಮವಾಗಲೀ ಯಾವುದೊಂದೂ ಇಲ್ಲ. ಈ ವಿಷಯದಲ್ಲಿ ವಾಲ್ಮೀಕಿಮಹರ್ಷಿಯೇ ನಿದರ್ಶನಭೂತನು. ವಿಶ್ವಾಮಿತ್ರಾದಿಗಳು ವೇದಾಭ್ಯಾಸಗಳಿಂದಲೂ, ವೇದೋಕ್ತಕರ್ಮಾನುಷ್ಠಾನ ಗಳಿಂದಲೂ, ನಾನಾವಿಧವಾದ ತಪಸ್ಸುಗಳಿಂದಲೂ ಬಹಳ ಪ್ರಯಾಸಪಟ್ಟು ಬ್ರಾಹ್ಮಣ್ಯವನ್ನು ಪಡೆದುಕೊಂಡರು. ಅಷ್ಟು ದುಷ್ಟನಾಗಿದ್ದ ಕಿರಾತನು ಅಂತಹ ಬ್ರಾಹ್ಮಣ್ಯವನ್ನು ಹಿಂದು-ಮುಂದಾಗಿ ಜಪಮಾಡಿದ ರಾಮನಾಮ ಜಪದಿಂದಲೇ ಸಿದ್ಧಿಸಿಕೊಂಡನು. ಅವನು ಇದಕ್ಕಾಗಿ ಬೇರೆ ಯಾವ ಸಾಧನ ವನ್ನೂ ಮಾಡಲಿಲ್ಲ.

ಚಣ್ಡಾಲಂ ಪತಿತಂ ಮ್ಲೇಚ್ಛಂ ಕಿರಾತಂ ಚಾಪಿ ಪಾಪಿನಮ್ ।
ಶೋಧಯೇದ್ರಾಮನಾಮ್ನೈವ ಲೋಹಂ ಸಿದ್ಧರಸೋ ಯಥಾ ॥೩೬॥

ಚಂಡಾಲನನ್ನಾಗಲೀ, ಪತಿತನನ್ನಾಗಲೀ, ಮ್ಲೇಚ್ಛನನ್ನಾಗಲೀ,

ಕಿರಾತನನ್ನಾಗಲೀ, ಮಹಾಪಾಪಮಾಡಿದವನ್ನೇ ಆಗಲೀ–ರಾಮನಾಮ ಜಪವು-ಸಿದ್ಧರಸವು ಲೋಹವನ್ನು ಶುದ್ಧಿಮಾಡುವಂತೆ–ಶುದ್ಧಿಗೊಳಿಸು ತ್ತದೆ.

ಸ್ನಾನ-ದಾನ-ಜಪ-ಹೋಮ-ವೇದಾಧ್ಯಯನ-ತರ್ಪಣಕಾಲಗಳಲ್ಲಿಯೂ, ಶೀನು ಬಂದ ಕಾಲದಲ್ಲಿಯೂ, ಪೆಟ್ಟುಬಿದ್ದ ಸಮಯದಲ್ಲಿಯೂ ಶ್ರೀರಾಮನನ್ನೇ ಸರ್ವದಾ ಸ್ಮರಿಸುತ್ತಿರಬೇಕು.

ಸ್ಮರಣಂ ರಾಮ ರಾಮೇತಿ ಶರಣಂ ಪಾಪಿನಾಮಲಮ್ ।
ಕರಣಂ ಮುಕ್ತಿಮಾರ್ಗಸ್ಯ ತರಣಂ ಭವವಾರಿಧೇಃ ॥೩೮॥

ರಾಮ-ರಾಮ ಎಂಬ ನಾಮವೇ ಪಾಪಿಷ್ಠರಿಗೆ ಶರಣ್ಯವಾಗುವುದು. ಮುಕ್ತಿಮಾರ್ಗಕ್ಕೆ ಉಪಕರಣವಾಗುವುದು. ಸಂಸಾರಸಾಗರವನ್ನು ದಾಟಲು ನೌಕೆಯಾಗುವುದು.

'ಪಾಪಿಷ್ಠರೇ! ಸುಖವಾಗಿ ಉಚ್ಚರಿಸಬಹುದಾದ ಮತ್ತು ಅತ್ಯಂತ ಸುಖಪ್ರದವಾದ ರಾಮನಾಮವಿರುವಾಗ ನೀವೇಕೆ ನರಕಕ್ಕೆ ಬಂದಿರಿ?"– ಎಂದು ಯಮಲೋಕಕ್ಕೆ ಹೋಗುವ ಪಾಪಿಗಳನ್ನು ನೋಡಿ ಯಮನು ಧಿಕ್ಕರಿಸುತ್ತಾನೆ.

ಲೋಕದಲ್ಲಿ ಜನರು ಜಪಮಾಡಲಿ, ಯಜ್ಞಮಾಡಲಿ, ತೀರ್ಥಯಾತ್ರೆಗಳನ್ನಾದರೂ ಮಾಡಲಿ, ಸಕಲವೇದಗಳನ್ನೂ ಪಠಿಸಲಿ–ರಾಮನಾಮ ಜಪ ಮಾಡದಿದ್ದರೆ ಅಂತಹವರಿಗೆ ಸಿದ್ಧಿಯುಂಟಾಗುವುದಿಲ್ಲ. ನಿರಹಂಕಾರಿಗಳೂ, ಶಾಂತರೂ, ಮಮಕಾರವಿಲ್ಲದವರೂ, ವೀತರಾಗರೂ, ದಂಭಹೀನರೂ ಆದ ಜನರು ಧ್ಯಾನಾರೂಢರಾಗಿ ಶ್ರೀರಾಮನನ್ನು ಸಾಕ್ಷಾತ್ಕರಿಸಿಕೊಳ್ಳುವರು. ಜಾತಿ, ಆಶ್ರಮ, ವಯಸ್ಸು, ಅವಸ್ಥೆ, ದೇಹ–ಮುಂತಾದುವಲ್ಲಿ ವಿಶೇಷವಾದ ಅಭಿಮಾನವನ್ನು ಇಟ್ಟುಕೊಂಡಿರತಕ್ಕವರಿಗೆ–ಸೂರ್ಯನ ದರ್ಶನವು ಗೂಬೆಗೆ ರುಚಿಸದಂತೆ–ರಾಮನಾಮವು ರುಚಿಸುವುದಿಲ್ಲ. ದುರ್ಲಭವಾದ ಮನುಷ್ಯ ಜನ್ಮವನ್ನು ಹೊಂದಿಯೂ ಯಾವನು ಶ್ರೀರಾಮನನ್ನು ಸ್ಮರಿಸುವುದಿಲ್ಲವೋ ಅವನ ಆ ಜನ್ಮವು ಪಶುತುಲ್ಯವಾಗಿ ವ್ಯರ್ಥವಾಗುವುದು.

ವಿಪ್ರೋ ವಾ ನೀಚಯೋನಿರ್ವಾ ನಾರೀ ವಾ ಭಕ್ತಿಭಾವತಃ ।
ಯೋ ರಾಮಂ ಸತತಂ ಧ್ಯಾಯೇತ್ಸ ಧನ್ಯಃ ಪಙ್ಕ್ತಿಪಾವನಃ ॥

ಬ್ರಾಹ್ಮಣನಾಗಲೀ, ನೀಚಜಾತಿಯವನಾಗಲೀ, ಸ್ತ್ರೀಯಾಗಲೀ ಯಾರು ಭಕ್ತಿಭರಿತರಾಗಿ ಸರ್ವದಾ ಶ್ರೀರಾಮನನ್ನು ಧ್ಯಾನಿಸುವರೋ–ಅವರೇ ಧನ್ಯರು; ಅವರೇ ಪಂಕ್ತಿಪಾವನರು.

ಪಾರ್ವತಿ! ಶ್ರೀರಾಮನ ನಾಮದ ಪ್ರಭಾವವನ್ನು ನನ್ನ ಬುದ್ಧಿಗೆ ತೋಚಿದಷ್ಟು ನಿನಗೆ ವಿವರಿಸಿ ಹೇಳಿರುವೆನು. ರಾಮನಾಮವನ್ನು ಜಪ ಮಾಡುವವನು ಭವಸಾಗರವನ್ನು ದಾಟಿಯೇ ದಾಟುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ನಾನು ಹೇಳಿದಂತೆ ಅಂತಹ ಪ್ರಭಾವಶಾಲಿಯಾದ ವಾಲ್ಮೀಕಿಯು ಶ್ರೀರಾಮನಲ್ಲಿ ಅನನ್ಯಭಕ್ತಿಯುಳ್ಳವನಾಗಿದ್ದನು. ಆದುದರಿಂದಲೇ ಚಿತ್ರಕೂಟದಲ್ಲಿದ್ದ ವಾಲ್ಮೀಕಿಗಳ ಆಶ್ರಮದಲ್ಲಿ ಶ್ರೀರಾಮನು ಅತ್ಯಂತಸಂತೋಷದಿಂದ ವಾಸಮಾಡಿಕೊಂಡಿದ್ದನು.

ವಾಲ್ಮೀಕಿಗಳ ಕಥೆ

(ಅಧ್ಯಾತ್ಮರಾಮಾಯಣದಲ್ಲಿರುವಂತೆ)

ಅಯೋಧ್ಯಾಕಾಂಡ ೬ನೆಯ ಸರ್ಗ

ವಾಲ್ಮೀಕಿಗಳೇ ತಮ್ಮ ಕಥೆಯನ್ನು ಶ್ರೀರಾಮನಿಗೆ ಹೇಳುತ್ತಾರೆ :

ರಾಮ ತ್ವನ್ನಾಮಮಹಿಮಾ ವರ್ಣ್ಯತೇ ಕೇನ ವಾ ಕಥಮ್ ।
ಯತ್ಪ್ರಭಾವಾದಹಂ ರಾಮ ಬ್ರಹ್ಮರ್ಷಿತ್ವಮವಾಪ್ತವಾನ್ ॥೬೪॥

ಅಹಂ ಪುರಾ ಕಿರಾತೇಷು ಕಿರಾತೈಃ ಸಹ ವರ್ಧಿತಃ ।
ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಃ ಸದಾ ॥೬೫॥

ರಾಘವ! ನಿನ್ನ ನಾಮದ ಮಹಿಮೆಯನ್ನು ವರ್ಣಿಸಲು ಯಾರಿಂದ ತಾನೇ ಶಕ್ಯವಿದೆ? ಆ ರಾಮನಾಮಮಂತ್ರಜಪದ ಮಹಿಮೆಯಿಂದಲೇ ನಾನು ಬ್ರಹ್ಮರ್ಷಿತ್ವವನ್ನು ಪಡೆದುಕೊಂಡೆನು.

ನಾನು ಹಿಂದೆ ಕಿರಾತರ ಗ್ರಾಮದಲ್ಲಿಯೇ ಜೀವಿಸುತ್ತಿದ್ದೆನು. ಕಿರಾತ

ರೊಡನೆಯೇ ಬೆಳೆದೆನು. ಹುಟ್ಟಿನಿಂದ ಮಾತ್ರವೇ ಬ್ರಾಹ್ಮಣನಾಗಿದ್ದ ನಾನು ಯಾವಾಗಲೂ ಶೂದ್ರವ್ಯವಹಾರದಲ್ಲಿಯೇ ನಿರತನಾಗಿರುತ್ತಿದ್ದೆನು. ಕಾಮುಕನಾಗಿದ್ದ ನಾನು ಶೂದ್ರಸ್ತ್ರೀಯನ್ನೇ ಮದುವೆಯಾಗಿ ಅವಳಲ್ಲಿ ಹಲವಾರು ಮಕ್ಕಳನ್ನು ಪಡೆದೆನು. ಅನಂತರ ಕಳ್ಳರೊಡನೆ ಸೇರಿ ನಾನು ದೊಡ್ಡ ಕಳ್ಳನೇ ಆದೆನು. ಯಾವಾಗಲೂ ಬೇಟೆಗಾಗಿ ಧನುರ್ಬಾಣಗಳನ್ನು ಹಿಡಿದಿರುತ್ತಿದ್ದು ಎಲ್ಲ ಪ್ರಾಣಿಗಳಿಗೂ ಯಮಪ್ರಾಯನಾಗಿದ್ದೆನು.

ಹೀಗೆಯೇ ನಾನು ಪ್ರಾಣಿಗಳನ್ನು ಕೊಲ್ಲುತ್ತಾ ಅರಣ್ಯದಲ್ಲಿ ತಿರುಗಾಡುತ್ತಿದ್ದಾಗ ದಟ್ಟವಾಗಿದ್ದ ಆ ಅರಣ್ಯದಲ್ಲಿ ಏಳು ಋಷಿಗಳನ್ನು ಕಂಡೆನು. ಅವರು ನಿಶ್ಚಯವಾಗಿಯೂ ಸೂರ್ಯಾಗ್ನಿಗಳಂತೆ ತಮ್ಮ ತೇಜಸ್ಸಿನಿಂದ ದೇದೀಪ್ಯಮಾನರಾಗಿ ಪ್ರಕಾಶಿಸುತ್ತಿದ್ದರು. ಅವರಲ್ಲಿದ್ದ ಐಶ್ವರ್ಯವನ್ನು ದೋಚಬೇಕೆಂದು ಆಸೆಯಾಗಿ ಅವರನ್ನೇ ಹಿಂಬಾಲಿಸಿ ಹೋಗುತ್ತಾ ನಿಲ್ಲಿರೆಂದು ಕೂಗಿ ಹೇಳಿದೆನು. ತಿರುಗಿನೋಡಿದ ಅವರು ನನಗೆ ಹೇಳಿದರು :

"ಬ್ರಾಹ್ಮಣಾಧಮನೇ! ನೀನೇಕೆ ನಮ್ಮನ್ನು ಅನುಸರಿಸಿ ಬರುತ್ತಿರುವೆ?"–ಅದಕ್ಕುತ್ತರವಾಗಿ ನಾನು ಹೇಳಿದೆನು :

"ಬ್ರಾಹ್ಮಣಶ್ರೇಷ್ಠರೇ! ನನ್ನ ಮನೆಯಲ್ಲಿ ಹಸಿವಿನಿಂದ ಬಳಲುತ್ತಿರುವ ಮಕ್ಕಳು-ಮರಿಗಳಿದ್ದಾರೆ. ಹೆಂಡತಿಯಿದ್ದಾಳೆ. ಅವರಿಗಾಗಿ ನಾನು ಧನವನ್ನು ಸಂಗ್ರಹಿಸಬೇಕಾಗಿದೆ. ಆದುದರಿಂದ ನಿಮ್ಮಲ್ಲಿರುವ ಐಶ್ವರ್ಯವನ್ನು ತೆಗೆದುಕೊಳ್ಳಲು ನಾನು ನಿಮಗೆ ನಿಲ್ಲಲು ಹೇಳುತ್ತಿದ್ದೇನೆ. ನನ್ನ ಹೆಂಡತಿ-ಮಕ್ಕಳನ್ನು ಸಂರಕ್ಷಿಸುವ ಸಲುವಾಗಿಯೇ ನಾನು ಕಾಡು-ಮೇಡುಗಳಲ್ಲಿ ಅಲೆದಾಡುತ್ತಿದ್ದೇನೆ."

ನನ್ನ ಮಾತನ್ನು ಕೇಳಿ ಮುನಿಗಳು ಹೇಳಿದರು : "ನೀನೀಗಲೇ ಹೋಗಿ ನಿನ್ನ ಹೆಂಡತಿ-ಮಕ್ಕಳನ್ನು ಪ್ರತ್ಯೇಕವಾಗಿ ಕಂಡು ಪ್ರಶ್ನಿಸು :

ಯೋ ಯೋ ಮಯಾ ಪ್ರತಿದಿನಂ ಕ್ರಿಯತೇ ಪಾಪಸಞ್ಚಯಃ ।
ಯೂಯಂ ತದ್ಭಾಗಿನಃ ಕಿಂ ವಾ ನೇತಿ ವೇತಿ ಪೃಥಕ್ ಪೃಥಕ್ ॥೨೭॥

"ನಿಮ್ಮ ಭರಣ-ಪೋಷಣೆಗಳಿಗಾಗಿ ನಾನು ಪ್ರತಿನಿತ್ಯವೂ ಬಹುವಿಧವಾದ ಪಾಪಕಾರ್ಯಗಳನ್ನು ಮಾಡುತ್ತಿರುವೆನು. ನಾನು ತಂದ ಐಶ್ವರ್ಯ

ದಲ್ಲಿ ಭಾಗಿಗಳಾಗುವಂತೆ ನೀವು ನನ್ನ ಪಾಪದಲ್ಲಿಯೂ ಭಾಗವನ್ನು ತೆಗೆದು ಕೊಳ್ಳುವಿರಾ? ಅಥವಾ ತೆಗೆದುಕೊಳ್ಳುವುದಿಲ್ಲವೇ?"

ಹೀಗೆ ಪ್ರಶ್ನಿಸು. ಅವರು ಹೇಳುವ ಉತ್ತರವನ್ನು ತಿಳಿದು ಬರುವ ವರೆಗೂ ನಾವು ಇಲ್ಲಿಯೇ ಇರುವೆವು."

ಋಷಿಗಳಿಗೆ ಹಾಗೆಯೇ ಆಗಲೆಂದು ಹೇಳಿ ಮನೆಗೆ ಹೋಗಿ ನನ್ನ ಪಾಪದಲ್ಲಿ ಸಮಭಾಗಿಗಳಾಗುವಿರಾ? ಎಂದು ಪತ್ನೀ-ಪುತ್ರರನ್ನು ಪ್ರಶ್ನಿ ಸಿದೆನು. ಅದಕ್ಕುತ್ತರವಾಗಿ ಅವರು :

ಪಾಪಂ ತವೈವ ತತ್ಸರ್ವಂ ವಯಂ ತು ಫಲಭಾಗಿನಃ ॥೭೪॥

"ನೀನು ಮಾಡಿದ ಪಾಪವು ನಿನಗೆ. ಅದಕ್ಕೆ ನಾವು ಭಾಗಿಗಳಲ್ಲ. ನೀನು ತರುವ ಐಶ್ವರ್ಯಕ್ಕೆ ನಾವು ಸಹಭಾಗಿಗಳು."

ಅವರ ಆ ಮಾತನ್ನು ಕೇಳಿ ನನಗೆ ಅತಿಯಾದ ಪಶ್ಚಾತ್ತಾಪವುಂಟಾಯಿತು. ಒಡನೆಯೇ ನಾನು ದಯಾಪೂರ್ಣಹೃದಯರಾಗಿದ್ದ ಋಷಿಗಳಿದ್ದೆಡೆಗೆ ಧಾವಿಸಿದೆನು. ಅವರ ಸಂದರ್ಶನಮಾತ್ರದಿಂದಲೇ ನನ್ನ ಅಂತಃಕರಣದ ಶುದ್ಧಿಯಾಯಿತು. ಧನುರ್ಬಾಣಗಳನ್ನು ವಿಸರ್ಜಿಸಿ ಅವರ ಮುಂದೆ ದೀರ್ಘ ದಂಡ ನಮಸ್ಕಾರಮಾಡಿದೆನು.

ರಕ್ಷಧ್ವಂ ಮಾಂ ಮುನಿಶ್ರೇಷ್ಠಾ ಗಚ್ಛಂತಂ ನಿರಯಾರ್ಣವಮ್ ॥

"ಮುನಿಶ್ರೇಷ್ಠರೇ! ನರಕಸಮುದ್ರದಲ್ಲಿ ಮುಳುಗಿಹೋಗುತ್ತಿರುವ ನನ್ನನ್ನು ರಕ್ಷಿಸಿರಿ"–ಎಂದು ಅವರನ್ನು ಅಂಗಲಾಚಿ ಬೇಡಿಕೊಳ್ಳುತ್ತಾ ನಮಸ್ಕಾರಮಾಡಿದ ನನ್ನನ್ನು ನೋಡಿ ಮುನಿಶ್ರೇಷ್ಠರಾದ ಸಪ್ತರ್ಷಿಗಳು ಹೇಳಿದರು :

"ಏಳು! ಎದ್ದೇಳು! ನಿನಗೆ ಮಂಗಳವಾಗಲಿ. ಸತ್ಪುರುಷರ ಸಮಾಗಮವು ಸಫಲವಾಗುತ್ತದೆ. ನಾವು ನಿನಗೆ ಸ್ವಲ್ಪ ಉಪದೇಶಮಾಡುತ್ತೇವೆ. ಅದರಿಂದಲೇ ನೀನು ಮುಕ್ತನಾಗುವೆ." ಹೀಗೆ ಹೇಳಿ ಸಪ್ತರ್ಷಿಗಳು ಪರಸ್ಪರ ವಾಗಿ ಸಮಾಲೋಚಿಸಿದರು.

"ಇವನು ದುಶ್ಚರಿತನಾದ ಬ್ರಾಹ್ಮಣಾಧಮನಾಗಿದ್ದಾನೆ. ಸತ್ಪುರು

ಷರು ಇಂತಹವನನ್ನು ಖಂಡಿತವಾಗಿಯೂ ತಿರಸ್ಕರಿಸಲೇಬೇಕು. ಆದರೆ ಇವನು ನಮಗೆ ಶರಣಾಗತನಾಗಿದ್ದಾನೆ. ಇವನಿಗೆ ಮೋಕ್ಷಮಾರ್ಗವನ್ನು ಉಪದೇಶಿಸಿ ಪ್ರಯತ್ನಪೂರ್ವಕವಾಗಿ ಸಂರಕ್ಷಿಸುವುದು ನಮ್ಮ ಕರ್ತವ್ಯ ವಾಗಿದೆ."

"ರಾಘವ! ಹೀಗೆ ಅವರು ನಿಶ್ಚಯಿಸಿ ನಿನ್ನ ಶುಭನಾಮವನ್ನು ಹಿಂದು-ಮುಂದಾಗಿ ನನಗೆ ಉಪದೇಶಿಸಿದರು. 'ಮರಾ' ಎಂಬ ಈ ಪದವನ್ನು ಏಕಾಗ್ರವಾದ ಮನಸ್ಸಿನಿಂದ ಸರ್ವದಾ ಜಪಿಸುತ್ತಿರಬೇಕೆಂದು ಆದೇಶಿಸಿದರು. ನಾವು ಇಲ್ಲಿಗೆ ಪುನಃ ಬರುವವರೆಗೂ ನೀನು ಈ ನಾಮವನ್ನು ಜಪಿಸುತ್ತಿರ ಬೇಕೆಂದೂ ಹೇಳಿ ದಿವ್ಯದರ್ಶನರಾದ ಆ ಮುನಿಗಳು ಹೊರಟುಹೋದರು. ನಾನು ಅವರು ಉಪದೇಶಿಸಿದಂತೆಯೇ ಮಂತ್ರವನ್ನು ಜಪಿಸಲು ಪ್ರಾರಂಭಿ ಸಿದೆನು. ಏಕಾಗ್ರವಾದ ಮನಸ್ಸಿನಿಂದ ಆ ಮಹಾಮಂತ್ರವನ್ನು ಜಪಿಸುತ್ತಿದ್ದ ನಾನು ಬಹಿರ್ವ್ಯಾಪಾರಗಳನ್ನೇ ಸಂಪೂರ್ಣವಾಗಿ ಮರೆತುಬಿಟ್ಟೆನು. ನಾನು ಹೀಗೆಯೇ ಹಲವಾರು ವರ್ಷಗಳ ಕಾಲ ಅಲುಗಾಡದೇ ಮಂತ್ರಜಪಮಾಡು ತ್ತಿದ್ದೆನು. ಸರ್ವಸಂಗವಿಹೀನನಾಗಿದ್ದ ನನ್ನ ಮೇಲೆ ಕಾಲಾನುಕ್ರಮವಾಗಿ ದೊಡ್ಡದೊಂದು ಹುತ್ತವೂ ಬೆಳೆಯಿತು. ಸಾವಿರ ಯುಗಗಳು ಕಳೆದನಂತರ ಪುನಃ ಆ ಸಪ್ತರ್ಷಿಗಳು ನನ್ನ ಬಳಿಗೆ ಬಂದರು. ನಾನು ಹುತ್ತದಲ್ಲಿದ್ದುದನ್ನು ನೋಡಿ ನನ್ನನ್ನು ಹೊರಬರುವಂತೆ ಆಜ್ಞಾಪಿಸಿದರು. ಮಂಜಿನಿಂದ ಹೊರ ಬರುವ ಸೂರ್ಯನಂತೆ ನಾನು ಹುತ್ತದಿಂದ ಒಡನೆಯೇ ಹೊರಬಂದೆನು. ನನ್ನನ್ನು ನೋಡಿದೊಡನೆಯೇ ಸಪ್ತರ್ಷಿಗಳು ಹೇಳಿದರು : "ಮುನೀಶ್ವರನೇ! ನೀನು ವಲ್ಮೀಕದಿಂದ ಹುಟ್ಟಿ ಎರಡನೆಯ ಜನ್ಮವನ್ನು ಪಡೆದಿರುವೆ. ಈ ಕಾರಣದಿಂದಾಗಿ ನೀನು 'ವಾಲ್ಮೀಕಿ'–ಎಂಬ ಹೆಸರಿನಿಂದ ಪ್ರಸಿದ್ಧ ನಾಗುವೆ"–ಎಂದು ಹೇಳಿ ಅವರೆಲ್ಲರೂ ಸ್ವರ್ಗಕ್ಕೆ ಹೊರಟುಹೋದರು. ರಘುಕುಲೋತ್ತಮನೇ! ನಿಶ್ಚಯವಾಗಿಯೂ ನಾನು ನಿನ್ನ ದಿವ್ಯನಾಮದ ಪ್ರಭಾವದಿಂದಲೇ ಇಂತಹ ಸ್ಥಿತಿಯನ್ನು ಪಡೆದುಕೊಂಡಿರುವೆನು." ವಾಲ್ಮೀಕಿ ಗಳು ಹೀಗೆ ಹೇಳಿ ಚಿತ್ರಕೂಟಕ್ಕೆ ಹೋಗುವ ಮಾರ್ಗದಲ್ಲಿ ತನ್ನ ಆಶ್ರಮಕ್ಕೆ ಬಂದ ರಾಮ-ಲಕ್ಷ್ಮಣ-ಸೀತೆಯರನ್ನು ಸತ್ಕರಿಸಿದರು.

ಈ ಕಥೆಯೇ ತತ್ತ್ವಸಂಗ್ರಹರಾಮಾಯಣದಲ್ಲಿ ವಿಸ್ತಾರವಾಗಿ ಬಂದಿದೆ.

ಪದ್ಮಪುರಾಣದಲ್ಲಿ ವಾಲ್ಮೀಕಿಚರಿತ್ರೆ

ಪ್ರಾಚೀನಕಾಲದಲ್ಲಿ ಭೃಗುವಂಶೋತ್ಪನ್ನನಾದ ಅಗ್ನಿಶರ್ಮನೆಂಬ ಬ್ರಾಹ್ಮಣನು ಸಂಗದೋಷದಿಂದ ಚೋರವೃತ್ತಿಯನ್ನು ಆಶ್ರಯಿಸಿ ಡಕಾಯಿತನಾಗಿದ್ದನು. ಚಿಕ್ಕ ವಯಸ್ಸಿನಲ್ಲಿಯೇ ಕಾರಣಾಂತರದಿಂದ ತಂದೆ-ತಾಯಿಗಳು ಆ ಮಗುವನ್ನು ಕಾಡಿನಲ್ಲಿ ಪರಿತ್ಯಜಿಸಿದುದರಿಂದ ಆ ಮಗುವು ದರೋಡೆಕೋರರ ಮಧ್ಯದಲ್ಲಿಯೇ ಬೆಳೆದು ವಿದ್ಯಾಸಂಸ್ಕಾರಗಳಿಂದ ವಿಹೀನವಾಗಿ ಸಾಕುತಂದೆ-ತಾಯಿಗಳ ವೃತ್ತಿಯನ್ನೇ ಆಶ್ರಯಿಸಿತು. ತನ್ನ ಪರಿವಾರದ ಪಾಲನೆ-ಪೋಷಣೆಗಳಿಗಾಗಿ ಕ್ರೂರವಾದ ವೃತ್ತಿಯನ್ನು ಆಶ್ರಯಿಸಿದ್ದು-ರತ್ನಾಕರನೆಂದು ಕರೆಯಲ್ಪಡುತ್ತಿದ್ದ ಆ ಡಕಾಯಿತನು ಒಂದು ದಟ್ಟವಾದ ಕಾಡಿನ ಪಕ್ಕದಲ್ಲಿ ಹಾದುಹೋಗುವ ದಾರಿಯ ಸಮೀಪದಲ್ಲಿ ಬಿಡಾರ ಹೂಡಿದ್ದನು. ದಾರಿಹೋಕರನ್ನು-ಅವರ ಬಳಿ ಏನಿದೆ ಎಂಬುದನ್ನು ಕೂಡ ಗಮನಿಸದೆ ನಿರ್ದಯವಾಗಿ ಕೊಂದು ಸಿಕ್ಕಿದುದನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದನು. ದಾರಿಹೋಕರಲ್ಲಿ ದ್ವಿಜಾತಿಯವರೂ ಇದ್ದರು. ಅವರ ಯಜ್ಞೋಪವೀತಗಳೇ ಏಳೂವರೆ ಎತ್ತಿನ ಬಂಡಿಗಳನ್ನು ತುಂಬುವಷ್ಟಾಗಿತ್ತು.

ಆ ಮಾರ್ಗವು ಯಾತ್ರಿಗಳಿಗೆ ಮೃತ್ಯುದ್ವಾರವೇ ಆಗಿದ್ದಿತು. ಪಥಿಕರ ಆ ಘೋರಸಂಕಟವನ್ನು ನೋಡಿ ದೇವರ್ಷಿಗಳಾದ ನಾರದರಿಗೆ ಪರಿತಾಪವುಂಟಾಯಿತು. ಡಕಾಯಿತ ರತ್ನಾಕರನ ಪೂರ್ವಪುಣ್ಯವೋ ಎಂಬಂತೆ ದೇವರ್ಷಿಗಳು ಆ ಮಾರ್ಗದಲ್ಲಿಯೇ ಹೊರಟರು. ರತ್ನಾಕರನು ಶಸ್ತ್ರವನ್ನೆತ್ತಿಕೊಂಡು ಅವರನ್ನೂ ಅಡ್ಡಗಟ್ಟಿದನು. ನಾರದರು ಹೇಳಿದರು–"ತಮ್ಮ ! ನನ್ನ ಮೇಲೆ ವ್ಯರ್ಥವಾಗಿ ಏಕೆ ಕೋಪಗೊಳ್ಳುತ್ತಿರುವೆಯಪ್ಪ? ನನ್ನ ಮೇಲೆ ಶಸ್ತ್ರವನ್ನೇಕೆ ಎತ್ತಿರುವೆ? ನಿನ್ನ ವಿಷಯದಲ್ಲಿ ನಾನು ತಪ್ಪೇನು ಮಾಡಿದೆ? ನಿನಗೇನು ಬೇಕು?" ಡಕಾಯಿತ ರತ್ನಾಕರನು ಕೆಂಗಣ್ಣನಾಗಿ ಗರ್ಜಿಸಿದನು– "ನನಗೆ ನಿನ್ನ ಪ್ರಾಣಬೇಕು. ನಿನ್ನ ತಂಬೂರಿ, ಬಟ್ಟೆ ಮತ್ತು ನಿನ್ನ ಹತ್ತಿರ ಇನ್ನೂ ಏನೇನಿದೆಯೋ ಅದೆಲ್ಲಾ ಬೇಕು." ನಾರದರು ಹೇಳುತ್ತಾರೆ–" ಈ ನಿರಂತರ ಜೀವಹತ್ಯೆಮಾಡಿ ಪಾಪ ಕಟ್ಟಿಕೊಳ್ಳದೆಯೇ ಫಲ-ಮೂಲಗಳಿಂದಲೇ ಹೊಟ್ಟೆಹೊರೆದುಕೊಳ್ಳಬಹುದಲ್ಲವೇ?" ರತ್ನಾಕರನು ವ್ಯಂಗ

ವಾಗಿ ಹೇಳಿದನು–"ಹಾಗೇನು? ಆದರೆ ನನ್ನ ತಂದೆ-ತಾಯಿಯರ ಹೆಂಡತಿ-ಮಕ್ಕಳ ಹೊಟ್ಟೆಯನ್ನು ಯಾರು ತುಂಬುವರು? ನೀನು ತುಂಬುವೆಯಾ?" ನಾರದರು ನಕ್ಕು ಹೇಳಿದರು–"ತಮ್ಮ! ನೀನು ಯಾರಿಗೋಸ್ಕರ ಇಷ್ಟು ಪಾಪ ಮಾಡುತ್ತಿರುವೆಯೋ ಅವರಾರೂ ನಿನ್ನ ಪಾಪದ ಫಲವನ್ನು ಭೋಗಿಸುವುದರಲ್ಲಿ ಭಾಗಿಗಳಾಗುವುದಿಲ್ಲ. ನಿನ್ನ ಪಾಪದ ಫಲವನ್ನು ನೀನೊಬ್ಬನೇ ಅನುಭವಿಸಬೇಕು."

ದೇವರ್ಷಿಗಳ ತೇಜಸ್ಸು ಮತ್ತು ಅವರ ಧ್ವನಿಯಲ್ಲಿ ತುಂಬಿ-ತುಳುಕುತ್ತಿದ್ದ ದಯೆ ಆ ಕ್ರೂರ ಡಕಾಯಿತನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಲಾರಂಭಿಸಿತು. ರತ್ನಾಕರ ಡಕಾಯಿತನು ತನ್ನ ಜೀವನದಲ್ಲಿ ಪ್ರಾಯಶಃ ಪ್ರಥಮ ಬಾರಿಗೆ ವಿಚಲಿತನಾದನು. "ಅದು ಹೇಗೆ ಸಾಧ್ಯ? ನೀನು ಹೇಳಿದಂತೆ ನಾನು ಮಾಡುವುದು ಪಾಪವೇ ಆಗಿದ್ದರೆ, ಅಂತಹ ಕರ್ಮದಿಂದ ನಾನು ಸಂಪಾದಿಸಿದ ಧನದಿಂದ ಸುಖವನ್ನು ಅನುಭವಿಸುವವರು–ನನ್ನ ಪಾಪದ ಫಲವನ್ನು ಕೂಡ ಅನುಭವಿಸಲೇಬೇಕು."

ನಾರದರು ಅನುಕಂಪದಿಂದ ಕೂಡಿದ ನಗೆಯೊಂದಿಗೆ ಹೇಳಿದರು–"ಎಂತಹ ಮುಗ್ಧನಪ್ಪ ನೀನು! ಪಾಪದ ಫಲವನ್ನು ಅನುಭವಿಸಲು ಯಾರೂ ಒಪ್ಪುವುದಿಲ್ಲ. ನನ್ನ ಮಾತಿನಲ್ಲಿ ನಂಬಿಕೆಯಿಲ್ಲದಿದ್ದರೆ ಮನೆಗೆ ಹೋಗಿ ನಿನ್ನವರನ್ನು ಕೇಳಿ ನೋಡು." ಡಾಕುವು ಶಸ್ತ್ರವನ್ನು ಸಂಭಾಳಿಸಿಕೊಳ್ಳುತ್ತಾ ಹೇಳಿದನು–"ಜೋಗಿ ಬಾಬಾ! ನನ್ನನ್ನು ಮೂರ್ಖನನ್ನಾಗಿ ಮಾಡಲು ನೋಡಬೇಡ. ನಾನು ಬೆನ್ನು ತಿರುಗಿಸಿದೊಡನೆಯೇ ನೀನು ಪರಾರಿಯಾಗಲು ಯೋಚಿಸಿರುವಿಯೇನು?" ನಾರದರು ಒಂದು ಮರದ ಹತ್ತಿರ ಹೋಗಿ ನಿಂತು ಹೇಳಿದರು–"ಈ ಮರಕ್ಕೆ ನನ್ನನ್ನು ಬಿಗಿಯಾಗಿ ಕಟ್ಟಿ ಹಾಕಿ ಹೋಗು."

ಡಕಾಯಿತ ರತ್ನಾಕರನಿಗೆ ಆ ಮಾತು ಸರಿಯೆನಿಸಿತು. ನಾರದರನ್ನು ಬಳ್ಳಿಗಳಿಂದ ಆ ಮರಕ್ಕೆ ಬಿಗಿಯಾಗಿ ಬಿಗಿದು ಶೀಘ್ರವಾಗಿ ಮನೆಗೆ ಓಡಿದನು. ಮೊದಲು ತನ್ನ ಸಾಕುತಂದೆಯ ಬಳಿಗೆ ಹೋಗಿ ಕೇಳಿದನು–"ಅಪ್ಪ! ನಾನು ದಾರಿಹೋಕರನ್ನು ಕೊಂದು ಅವರಲ್ಲಿದ್ದ ಸಾಮಗ್ರಿಗಳನ್ನು ಲೂಟಿ

ಮಾಡಿ ತಂದು ಪರಿವಾರದ ಭರಣ-ಪೋಷಣೆಗಳನ್ನು ಮಾಡುತ್ತಿರುವುದು ನಿನಗೆ ಗೊತ್ತೇ ಇದೆ. ನಾನು ನಿತ್ಯವೂ ಮಾಡುತ್ತಿರುವ ಈ ಪಾಪದ ಫಲದಲ್ಲಿ ನಿಮಗೂ ಪಾಲಿದೆಯಲ್ಲವೇ?" ತಂದೆ ಒಮ್ಮೆ ಕೆಮ್ಮಿ ಗಂಟಲು ಸರಿಮಾಡಿ ಕೊಂಡು ಮಗನೆಡೆಗೆ ನೋಡಿ ಹೇಳಿದನು–"ಮಗು! ನಾನು ನಿನ್ನನ್ನು ಸಾಕಿದೆ. ಚಿಕ್ಕವನಿಂದ ದೊಡ್ಡವನನ್ನಾಗಿ ಮಾಡಿದೆ. ಈಗ ನೀನು ಸಮರ್ಥನಾದೆ. ನಾನೀಗ ಮುದುಕನಾಗಿದ್ದೇನೆ. ನಮ್ಮನ್ನು ನೋಡಿಕೊಳ್ಳುವುದು ನಿನ್ನ ಕರ್ತವ್ಯ. ನೀನು ಹೇಗೆ ದುಡ್ಡು ಸಂಪಾದಿಸುವೆಯೋ ಅದರ ಗೊಡವೆ ನನಗೇಕೆ? ನಿನ್ನ ಪಾಪದಲ್ಲಿ ನಾನೇಕೆ ಭಾಗಿದಾರನಾಗಲಿ?" ಆಘಾತ ಹೊಂದಿದ ರತ್ನಾಕರನು ತನ್ನ ಸಾಕುತಾಯಿಯ ಬಳಿಗೆ ಹೋಗಿ ಕೇಳಲು ಅವಳೂ ತಂದೆಯಂತೆಯೇ ಉತ್ತರವನ್ನಿತ್ತಳು. ಡಕಾಯಿತ ರತ್ನಾಕರನು ತನ್ನ ಹೆಂಡತಿಯ ಬಳಿಗೆ ಹೋಗಿ ಕೇಳಿದನು. ಅವಳು–"ನೋಡಿ! ನಿಮ್ಮ ಮತ್ತು ಗುರು-ಹಿರಿಯರ ಸೇವೆಮಾಡುವುದು, ಮನೆ-ಮಂದಿಯನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ. ಆ ಕರ್ತವ್ಯವನ್ನು ನಾನು ಮಾಡು ತ್ತಿರುವೆನು. ನನ್ನನ್ನು ಕಾಪಾಡುವುದು ನಿಮ್ಮ ಕರ್ತವ್ಯ. ಅದನ್ನು ನೀವು ಮಾಡುತ್ತಿರುವಿರಿ. ಅದಕ್ಕಾಗಿ ಧನವನ್ನು ಹೇಗೆ ಸಂಪಾದಿಸುತ್ತೀರೋ ಅದು ನನಗೆ ಗೊತ್ತಿಲ್ಲ. ಗೊತ್ತಾಗಲೂ ಬೇಕಿಲ್ಲ. ನಿಮ್ಮ ಪಾಪಕ್ಕೂ, ನನಗೂ ಯಾವ ಸಂಬಂಧವೂ ಇಲ್ಲ." ನಿರಾಶನಾದ ರತ್ನಾಕರನು ತನ್ನ ಮಗನನ್ನು ಕೇಳಲು ಅವನು ಹೇಳಿದನು-"ಈಗ ನಾನು ಚಿಕ್ಕವನು. ನನ್ನ ಭರಣ- ಪೋಷಣೆಗಳ ಭಾರ ನಿಮ್ಮದು. ನಾನು ದೊಡ್ಡವನಾಗಿ ಸಂಪಾದಿಸಲು ಅರ್ಹನಾದಾಗ, ನೀನು ಮುದುಕನಾಗಿ ಅಸಮರ್ಥನಾದಾಗ ನಾನು ನಿಮ್ಮ ಗಳ ಭರಣ-ಪೋಷಣಗಳನ್ನು ಮಾಡುತ್ತೇನೆ. ಇದು ಪರಸ್ಪರಸಹಾಯದ ಮಾತು. ನಿಮ್ಮ ಪಾಪ ನಿಮ್ಮದು. ಅದರಲ್ಲಿ ಭಾಗಿಯಾಗಲು ನಾನು ಇಷ್ಟಪಡುವುದಿಲ್ಲ."

ಡಕಾಯಿತ ರತ್ನಾಕರನ ಕಣ್ಣುಗಳಿಗೆ ಕತ್ತಲಿಟ್ಟಂತಾಯಿತು. ಯಾರಿ ಗೋಸ್ಕರ ತಾನಿಷ್ಟು ಪಾಪಮಾಡಿದೆನೋ ಅವರಾರೂ ತನ್ನ ಪಾಪದ ದಾರುಣಫಲದಲ್ಲಿ ಭಾಗಿಗಳಾಗಲು ಸಿದ್ಧರಿಲ್ಲವಲ್ಲ! ಪಶ್ಚಾತ್ತಾಪದ ಜ್ವಾಲೆ ಯಿಂದ ಬೆಂದುಹೋದ ಹೃದಯದಿಂದ ಕೂಡಿ ಹಿಂದಿರುಗಿ ನಾರದರೆಡೆಗೆ

ಓಡಿದನು. ಅವರನ್ನು ಬಿಗಿದಿದ್ದ ಬಳ್ಳಿಗಳನ್ನು ಕತ್ತರಿಸಿ ಎಸೆದು, ಅವರ ಕಾಲಿಗೆ ಬಿದ್ದನು. ಹೃದಯದೊಂದಿಗೆ ಅವನ ಮೈಯೂ ನಡುಗುತ್ತಿತ್ತು.

ದೇವರ್ಷಿಗಳು ದಯೆಯಿಂದಲೂ, ಅನುಕಂಪದಿಂದಲೂ, ಕೂಡಿದ ದೃಷ್ಟಿಯಿಂದ ಅವನನ್ನು ನೋಡಿ ಹೇಳಿದರು–"ನೀನು ರಾಮನಾಮವನ್ನು ಜಪಿಸಪ್ಪ. ಬೇರೆ ಯಾವುದೇ ಮಾರ್ಗವಿಲ್ಲ." ಹತ್ಯಾನಿಷ್ಠುರಹೃದಯಿಯ ಪಾಪನಿಷ್ಠುರವಾಣಿ ಆ ಪವಿತ್ರನಾಮವನ್ನು ಉಚ್ಚರಿಸಲು ಹಿಂತೆಗೆಯಿತೇನೋ ಎಂಬಂತೆ ರತ್ನಾಕರನ ನಾಲಿಗೆಯು ತಡವರಿಸಿತು. ದೇವರ್ಷಿಗಳು ಅಷ್ಟು ಸುಲಭವಾಗಿ ಸೋಲನ್ನೊಪ್ಪಿಕೊಳ್ಳುವವರಲ್ಲ. ಒಮ್ಮೆ ಅವರ ಸಂಪರ್ಕಕ್ಕೆ ಬಂದು ಅವರ ಕೃಪೆಗೆ ಪಾತ್ರರಾದವರು ಭಗವಂತನಿಂದ ದೂರವಾಗಲು ಸಾಧ್ಯವೇ ಇಲ್ಲ. ಅವರು ಪ್ರೇಮಭರಿತವಾಣಿಯಿಂದ ಹೇಳಿದರು–"ಚಿಂತೆ ಯಿಲ್ಲ. 'ಮರಾ-ಮರಾ'–ಎಂದು ಜಪಿಸು."

ಡಕಾಯಿತ ರತ್ನಾಕರನು ಅಲ್ಲಿಯೇ ಮರದ ಕೆಳಗೆ ಕುಳಿತನು. ತನ್ನ ಉದ್ಧಾರದ ಉತ್ಕಟ ಆಕಾಂಕ್ಷೆಯು ಅವನಿಗೆ ಎಷ್ಟಿತ್ತೆಂದರೆ : ತನಗೆ ಉಪದೇಶಿಸಿದ ದೇವರ್ಷಿಗಳು ಯಾವಾಗ ಅಲ್ಲಿಂದ ಹೊರಟುಹೋದರು ಎಂಬುದೂ ಅವನಿಗೆ ತಿಳಿಯಲಿಲ್ಲ. ತನ್ನನ್ನೇ-ತನ್ನ ಶರೀರವನ್ನೇ ಮರೆತು ಜಪದಲ್ಲಿ ಮುಳುಗಿಹೋದನು. ದಿನ-ತಿಂಗಳು-ವರ್ಷಗಳು ಉರುಳಿ ಹೋದುವು. ರತ್ನಾಕರನ ಮೈಮೇಲೆ ಹುತ್ತವು ಬೆಳೆಯಿತು.

ಅಂತಹ ಕಠೋರ ತಪಸ್ಸನ್ನು ನೋಡಿ ಆಶ್ಚರ್ಯಗೊಂಡ ಸೃಷ್ಟಿಕರ್ತನು ಹಂಸಾರೂಢನಾಗಿ ಅಲ್ಲಿಗೆ ಬಂದು ತನ್ನ ಕಮಂಡಲುವಿನ ದಿವ್ಯಜಲದಿಂದ ಆ ಹುತ್ತವನ್ನು ಪ್ರೋಕ್ಷಿಸಿದನು. ಆ ಅಮೃತಜಲದ ಪ್ರೋಕ್ಷಣೆಯಿಂದ ಹುತ್ತವು ಕರಗಿ-ರಾಮನಾಮಜಪದಿಂದ ಪೂತನಾದ ದಿವ್ಯವಾದ ರೂಪ- ವರ್ಣಗಳಿಂದ ಕೂಡಿದ ಶರೀರದಿಂದ ಪ್ರಕಾಶಿಸುತ್ತಾ ಹುತ್ತದಿಂದೆದ್ದು ಬಂದ ಆ ತಪಸ್ವಿಯು ಬ್ರಹ್ಮದೇವನಿಗೆ ಸಾಷ್ಟಾಂಗಪ್ರಣಾಮಮಾಡಿದನು. 'ವಲ್ಮೀಕ'ದಿಂದ ಹುಟ್ಟಿದ ಭೃಗುವಂಶೋತ್ಪನ್ನನಾದ ಬ್ರಾಹ್ಮಣನು ಮುಂದೆ ವಾಲ್ಮೀಕಿಯೆಂದೇ ಪ್ರಸಿದ್ಧನಾಗಿ ಭಗವಂತನಾದ ಶ್ರೀರಾಮನ ನಿರ್ಮಲವಾದ ಯಶೋಗಾನವನ್ನು ಮಾಡಿ ಆದಿಕವಿಯೆಂದು ಪ್ರಸಿದ್ಧನಾದನು.

ವಾಲ್ಮೀಕಿರಾಮಾಯಣದಲ್ಲಿ

ವಾಲ್ಮೀಕಿರಾಮಾಯಣದಲ್ಲಿ ಶ್ರೀರಾಮನು ಚಿತ್ರಕೂಟಕ್ಕೆ ಹೋಗುವ ಮೊದಲು ವಾಲ್ಮೀಕಿಗಳನ್ನು ಸಂದರ್ಶಿಸುವನು. ಆದರೆ ಅವರ ಕಥಾ ಪ್ರಸಂಗವು ಬರುವುದಿಲ್ಲ. ಉತ್ತರಕಾಂಡದಲ್ಲಿ ಒಂದು ಕಡೆ ಅಪರೋಕ್ಷವಾಗಿ ವಾಲ್ಮೀಕಿಗಳು ತಮ್ಮನ್ನು 'ಭಾರ್ಗವ'–ಎಂದು ಕರೆದುಕೊಂಡಿದ್ದಾರೆ.

ಸಂನಿಬದ್ಧಂ ಹಿ ಶ್ಲೋಕಾನಾಂ ಚತುರ್ವಿಂಶತ್ಸಹಸ್ರಕಮ್ ।
ಉಪಾಖ್ಯಾನಶತಂ ಚೈವ ಭಾರ್ಗವೇಣ ತಪಸ್ವಿನಾ ॥೨೫॥

-ಉತ್ತರ-ಸರ್ಗ ೯೪

ಇದಕ್ಕೆ ಅನುಸಾರವಾಗಿ ಮಹಾಭಾರತದ ಶಾಂತಿಪರ್ವದಲ್ಲಿಯೂ ವಾಲ್ಮೀಕಿಗಳನ್ನು ಭಾರ್ಗವರೆಂದು ಕರೆದಿರುವ ಪ್ರಸಂಗವು ಬರುತ್ತದೆ.

ಶ್ಲೋಕಶ್ಚಾಯಂ ಪುರಾ ಗೀತೋ ಭಾರ್ಗವೇಣ ಮಹಾತ್ಮನಾ ।
ಆಖ್ಯಾತೇ ರಾಮಚರಿತೇ ನೃಪತಿಂ ಪ್ರತಿ ಭಾರತ ।
ರಾಜಾನಂ ಪ್ರಥಮಂ ವಿನ್ದೇತ್ತತೋ ಭಾರ್ಯಾಂ ತತೋ ಧನಮ್ ॥

-ಶಾಂತಿ ಅಧ್ಯಾಯ ೫೭

ಪುನಃ ವಾಲ್ಮೀಕಿಗಳು ಶ್ರೀರಾಮನ ಸನ್ನಿಧಿಯಲ್ಲಿ ಸೀತಾದೇವಿಯ ಪಾವಿತ್ರ್ಯವನ್ನು ದೃಢೀಕರಿಸುವಾಗ ತಾವು ಪ್ರಚೇತಸನ ಹತ್ತನೆಯ ಮಗನೆಂದು ಹೇಳಿಕೊಂಡಿದ್ದಾರೆ.

ಪ್ರಚೇತಸೋಽಹಂ ದಶಮಃ ಪುತ್ರೋ ರಾಘವನನ್ದನ ।
ನ ಸ್ಮರಾಮ್ಯನೃತಂ ವಾಕ್ಯಮಿಮೌ ತು ತವ ಪುತ್ರಕೌ ॥೧೯॥

-ಉತ್ತರ-ಸರ್ಗ ೯೬

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥

ಈ ಧ್ಯಾನಶ್ಲೋಕದಲ್ಲಿಯೂ ವಾಲ್ಮೀಕಿಗಳನ್ನು ಪ್ರಾಚೇತಸರೆಂದು ಕರೆದಿದ್ದಾರೆ. ಈ ಹಿಂದೆ ಬಂದಿರುವ ಕಥೆಗಳಲ್ಲಿ ವಾಲ್ಮೀಕಿಗಳು ಭಾರ್ಗವ ರೆಂದಾಗಲೀ, ಪ್ರಾಚೇತಸರೆಂದಾಗಲೀ ಎಲ್ಲಿಯೂ ಹೇಳಿಲ್ಲ.

ಭಾರ್ಗವಶಬ್ದಕ್ಕೆ ಒಬ್ಬ ವ್ಯಾಖ್ಯಾನಕಾರರು ಕಾವ್ಯನಿರ್ಮಾಣದಲ್ಲಿ ಶುಕ್ರರಿಗೆ ಸಮಾನನಾದುದರಿಂದ ವಾಲ್ಮೀಕಿಗಳಿಗೆ ಭಾರ್ಗವರೆಂದು ಹೆಸರು ಬಂದಿತೆಂದು ಹೇಳಿದ್ದಾರೆ. 'ಪ್ರಾಚೇತಸರು' ಎಂಬ ಹೆಸರೂ ಬಂದಿರುವುದರಿಂದ ಇವರಿಗೆ ಭಾರ್ಗವ ಎಂಬ ಹೆಸರಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಪ್ರಚೇತಸ್ ಎಂದರೆ ವರುಣ. ವರುಣನ ಮಕ್ಕಳು ಭಾರ್ಗವರು. ಭೃಗುರ್ವೈ ವಾರುಣಿಃ ಎಂಬ ಉಪನಿಷದ್ವಾಕ್ಯವೂ ಇದೆ. ಆದುದರಿಂದ ಪ್ರಾಚೇತಸರು ಭಾರ್ಗವರೇ. ಇವರ ವಂಶಾನುಕ್ರಮವು ಹೀಗೆ ಬರುತ್ತದೆ.

ಮನುಸ್ಮೃತಿಯಲ್ಲಿ ಬ್ರಹ್ಮನು ಹೇಳುತ್ತಾನೆ.

ಅಹಂ ಪ್ರಜಾಃ ನಿಸೃಕ್ಷುಸ್ತು ತಪಸ್ತಪ್ತ್ವಾ ಸುದುಶ್ಚರಮ್ ।
ಪತೀನ್ ಪ್ರಜಾನಾಮಸೃಜಂ ಮಹರ್ಷೀನಾದಿತೋ ದಶ ॥೧೩೪॥

ನಾನು ಪ್ರಜಾಸೃಷ್ಟಿಯ ಇಚ್ಛೆಯಿಂದ ಸುದುಷ್ಕರವಾದ ತಪಸ್ಸನ್ನು ಮಾಡಿ ಹತ್ತು ಮಂದಿ ಮಹರ್ಷಿಸ್ವರೂಪರಾದ ಪ್ರಜಾಪತಿಗಳನ್ನೇ ಸೃಷ್ಟಿಸಿದೆನು.

ಮರೀಚಿರತ್ರ್ಯಙ್ಗೀರಸಂ ಪುಲಸ್ತ್ಯಂ ಪುಲಹಂ ಕ್ರತುಮ್ ।
ಪ್ರಚೇತಸಂ ವಸಿಷ್ಠ ಚ ಭೃಗುಂ ನಾರದಮೇವ ಚ ॥ (ಮನು ೧೩೫)

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಸಿಷ್ಠ, ಭೃಗು ಮತ್ತು ನಾರದ–ಎಂಬುವವರೇ ಆ ಹತ್ತು ಮಂದಿ ಮಹರ್ಷಿಸ್ವರೂಪರಾದ ಪ್ರಜಾಪತಿಗಳು.

ಮಹಾಭಾರತದ ಸಂಭವಪರ್ವದ ೭೫ನೆಯ ಅಧ್ಯಾಯದಲ್ಲಿ ಪ್ರಚೇತಸನಿಗೆ ಹತ್ತು ಮಂದಿ ಪುಣ್ಯಜನರೆಂಬ ಪುತ್ರರಿದ್ದರೆಂದು ಹೇಳಿದೆ.

ದಶ ಪ್ರಚೇತಸಃ ಪುತ್ರಾಃ ಸನ್ತಃ ಪುಣ್ಯಜನಾಃ ಸ್ಮೃತಾಃ ।

ಪ್ರಾಚೇತಸನೇ ವಾಲ್ಮೀಕಿಯೆಂದು ಮಾರ್ಕಂಡೇಯಪುರಾಣದಲ್ಲಿ ಸ್ಪಷ್ಟವಾಗಿ ಹೇಳಿದೆ.

ಉವಾಚ ಪ್ರಣತೋ ವಾಕ್ಯಂ ವಾಲ್ಮೀಕಂ ಚ ತಪೋಧನಮ್ ।
ಪ್ರಾಚೇತಸ ಮಹಾಭಾಗ ಶ್ರೀರಾಮಸ್ಯ ಕಥಾಂ ಶುಭಾಮ್ ।
ಕಥಯಸ್ವ ಮಹಾಬುದ್ಧೇ ರಾಮಸ್ಯ ಪರಮಾತ್ಮನಃ ॥

ಶಿವರಾಮಾಯಣದಲ್ಲಿ ಬ್ರಹ್ಮನಿಗೆ ಹತ್ತು ಮಂದಿ ಮಾನಸಪುತ್ರರಿದ್ದ ರೆಂದೂ, ಒಂಬತ್ತು ಮಂದಿ ಸೃಷ್ಟಿಕರ್ತೃಗಳಾದ ಪ್ರಜಾಪತಿಗಳಾದರೆಂದೂ ಹತ್ತನೆಯವನು ಶತಕೋಟಿಸಂಖ್ಯಾತವಾದ ಶ್ಲೋಕಗಳನ್ನೊಳಗೊಂಡ ರಾಮಾಯಣವನ್ನು ರಚಿಸಿದನೆಂದೂ ಹೇಳಿದೆ.

ಪುರಾ ಸ್ವಾಯಮ್ಭುವೋ ಹ್ಯಾಸೀತ್ ಪ್ರಾಚೇತಸ ಮಹಾದ್ಯುತಿಃ ।
ಬ್ರಹ್ಮಾತ್ಮಜಸ್ತು ಬ್ರಹ್ಮರ್ಷಿಃ ತೇನ ರಾಮಾಯಣಂ ಕೃತಮ್ ॥

ಶತಕೋಟಿಪ್ರವಿಸ್ತೀರ್ಣಂ ನಾನಾಕಲ್ಪಸಮುದ್ಧತಮ್ ।
ಸ ಕದಾಚಿದ್ಬ್ರಹ್ಮಲೋಕೇ ಧಾತಾರಂ ಚಾಪ್ಯನಿನ್ದತ ॥

ಸ್ವಸುತಾಗ್ರಹಣಾತ್ತೇನ ಶಪ್ತ ಆಪ ನಿಷಾದತಾಮ್ ।
ಚಮತ್ಕಾರಪುರೇ ಭೂತ್ವಾ ಭಾರ್ಗವಾನ್ವಯಸಮ್ಭವಃ ।
ಲೋಹಜಙ್ಘೋ ದ್ವಿಜೋ ಹ್ಯಾಸೀತ್ ಋಕ್ಷನಾಮಾನ್ತರೋಹಿ ಸಃ ।
ಮಾತಾಪಿತ್ರೋಃ ಸೇವಯಾ ಸ ಕಞ್ಚಿತ್ಕಾಲಂ ಗೃಹೇ ವಸನ್ ॥

ಭಾರ್ಯಾಂ ಪತಿವ್ರತಾಂ ಸಾಧ್ವೀಂ ತಾಂ ಪರಿತ್ಯಜ್ಯ ಸ ದ್ವಿಜಃ ।
ಬ್ರಾಹ್ಮೀಂ ವೃತ್ತಿಂ ಪರಿತ್ಯಜ್ಯ ಚೋರಕರ್ಮ ಸಮಾಚರತ್ ।
ನಾರದೇನೋಪದಿಷ್ಟಸ್ತು ತಪೋನಿಷ್ಠಾಂ ಸಮಾಶ್ರಿತಃ ॥

ವಲ್ಮೀಕಮಭವತ್ತಸ್ಯ ಶರೀರೇ ನಾರದಾಜ್ಞಯಾ ।
ವಲ್ಮೀಕನಿರ್ಗಮಾದ್ಬ್ರಹ್ಮಾ ವಾಲ್ಮೀಕಿರಿತಿ ಚಾಬ್ರವೀತ್ ॥

ಹಿಂದೆ ಸ್ವಾಯಂಭುವಪ್ರಾಚೇತಸ ಮಹಾಮುನಿಯು ಬ್ರಹ್ಮನ ಮಗ ನಾಗಿ ಹುಟ್ಟಿದ್ದನು. ಅವನು ಶತಕೋಟಿಸಂಖ್ಯಾತವಾದ ಅತ್ಯಂತ ವಿಸ್ತಾರ ವಾದ ರಾಮಾಯಣವನ್ನು ರಚಿಸಿದನು. ಅದು ಹಲವಾರು ಕಲ್ಪಗಳಲ್ಲಿ ನಡೆದ ರಾಮಾಯಣದ ಸಂಕಲನವೇ ಆಗಿದ್ದಿತು. ಒಮ್ಮೆ ಪ್ರಾಚೇತಸನು ಬ್ರಹ್ಮನ ಲೋಕದಲ್ಲಿ ಮಗಳಾದ ಸರಸ್ವತಿಯನ್ನೇ ಪಾಣಿಗ್ರಹಣಮಾಡಿ ಕೊಂಡುದಕ್ಕಾಗಿ ಬ್ರಹ್ಮನನ್ನು ನಿಂದಿಸಿದನು. ಅದರಿಂದ ಕುಪಿತನಾದ ಬ್ರಹ್ಮನ ಶಾಪಕ್ಕೆ ಗುರಿಯಾಗಿ ಪ್ರಾಚೇತಸನು ನಿಷಾದನಾದನು. ನಿಷಾದ ನಾಗುವ ಮೊದಲು ಅವನು ಚಮತ್ಕಾರಪುರದಲ್ಲಿ ಭಾರ್ಗವವಂಶದಲ್ಲಿ ಲೋಹಜಂಘನೆಂಬ ಬ್ರಾಹ್ಮಣನಾಗಿ ಹುಟ್ಟಿದನು. ಋಕ್ಷ ಎಂಬುದು ಅವನ

ಮತ್ತೊಂದು ಹೆಸರಾಗಿದ್ದಿತು. ಕೆಲವು ದಿವಸಗಳವರೆಗೆ ಲೋಹಜಂಘನು ಮಾತಾ-ಪಿತೃಗಳ ಸೇವೆಯನ್ನು ಮಾಡಿಕೊಂಡು ಮನೆಯಲ್ಲಿಯೇ ಇದ್ದನು. ಅನಂತರ ಅವನು ಪತಿವ್ರತೆಯೂ, ಸಾಧ್ವಿಯೂ ಆಗಿದ್ದ ಭಾರ್ಯೆಯನ್ನೂ, ಬ್ರಹ್ಮವೃತ್ತಿಯನ್ನೂ ಪರಿತ್ಯಜಿಸಿ ಕಳ್ಳತನಮಾಡಲು ಉಪಕ್ರಮಿಸಿದನು. ಹಲವಾರು ದಿವಸಗಳು ಕಳೆದನಂತರ ಅವನು ನಾರದನ ಉಪದೇಶದಂತೆ ತಪಸ್ಸಿನಲ್ಲಿ ತೊಡಗಿದನು. ವರ್ಷಗಳು ಉರುಳಿದಂತೆ ಅವನ ಸುತ್ತಲೂ ಹುತ್ತವು ಬೆಳೆದುಕೊಂಡಿತು. ಬಹಳ ಕಾಲಾನಂತರ ನಾರದರ ಆಜ್ಞೆಯಂತೆ ಹುತ್ತದಿಂದ ಹೊರಗೆ ಬಂದುದರಿಂದ ಬ್ರಹ್ಮನು ಅವನಿಗೆ ವಾಲ್ಮೀಕಿಯೆಂದು ಹೆಸರಿಸಿದನು.

ವಿಷ್ಣುಪುರಾಣದಲ್ಲಿ ಋಕ್ಷನೆಂಬ ಭಾರ್ಗವನೇ ವಾಲ್ಮೀಕಿಯಾದನೆಂದು ಹೇಳಿದೆ.

ಋಕ್ಷೋಽಭೂದ್ಭಾರ್ಗವಸ್ತಸ್ಮಾದ್ವಾಲ್ಮೀಕಿರ್ಯೋಽಭಿಧೀಯತೇ ॥

ಬ್ರಹ್ಮವೈವರ್ತಪುರಾಣದಲ್ಲಿ ವಲ್ಮೀಕದಲ್ಲಿ ಹುಟ್ಟಿದ ಕಾರಣ ವಾಲ್ಮೀಕಿಯಾದನೆಂದು ಬ್ರಹ್ಮನು ಹೇಳಿದ್ದಾನೆ.

ಅಥಾಬ್ರವೀನ್ಮಹಾತೇಜಾ ಬ್ರಹ್ಮಾ ಲೋಕಪಿತಾಮಹಃ ।
ವಲ್ಮೀಕಪ್ರಭವೋ ಯಸ್ಮಾತ್ತಸ್ಮಾದ್ವಾಲ್ಮೀಕಿರಿತ್ಯಸೌ ॥

ಕಲ್ಪಾಂತರವು ಕಳೆದ ನಂತರ ಸೃಷ್ಟಿಕರ್ತೃವಿನ ನೂತನಸೃಷ್ಟಿಯ ವಿಧಾನದಲ್ಲಿ ಬ್ರಹ್ಮನ ಚೇತಸ್ಸಿನಿಂದ ಯಾವ ಮಗನು ಹುಟ್ಟಿದನೋ ಅವನು ಬ್ರಹ್ಮನ ಪ್ರಕೃಷ್ಟವಾದ ಚಿತ್ತದಿಂದ ಆವಿರ್ಭವಿಸಿದ ಕಾರಣ ಪ್ರಚೇತನೆಂದು ಕರೆಯಲ್ಪಟ್ಟನೆಂದು ಬ್ರಹ್ಮವೈವರ್ತಪುರಾಣದಲ್ಲಿ ಹೇಳಿದೆ. ಪ್ರಚೇತನು ಬ್ರಹ್ಮನ ಮಾನಸಪುತ್ರನೆಂದು ಅಲ್ಲಿ ಹೇಳಿದೆ.

ಕತಿಕಲ್ಪಾನ್ತರೇಽತೀತೇ ಸ್ರಷ್ಟುಃ ಸೃಷ್ಟಿವಿಧೌ ಪುನಃ ।
ಯಃ ಪುತ್ರಶ್ಚೇತಸೋ ಧಾತುಃ ಬಭೂವ ಮುನಿಪುಙ್ಗವಃ ।
ತೇನ ಪ್ರಚೇತಾ ಇತಿ ಚ ನಾಮ ಚಕ್ರೇ ಪಿತಾಮಹಃ ॥

ಸ್ಕಾಂದಪುರಾಣದ ವೈಷ್ಣವಖಂಡದ ವೈಶಾಖಮಾಹಾತ್ಮ್ಯೆಯಲ್ಲಿ ವಾಲ್ಮೀಕಿಗಳ ಕಥೆಯನ್ನು ಹೀಗೆ ಹೇಳಿದೆ :

ವ್ಯಾಧನೊಬ್ಬನು ಶಂಖನೆಂಬ ಬ್ರಾಹ್ಮಣನನ್ನು ಬಂಧಿಸಿ ಅವನ ಕುಂಡಲ, ಛತ್ರ, ಪಾದರಕ್ಷೆ ಇವೇ ಮುಂತಾದುವುಗಳನ್ನು ಅವನಿಂದ ಕಸಿದುಕೊಂಡು ಕಳುಹಿಸಿಬಿಡುತ್ತಾನೆ. ಅತಿಯಾದ ಬಿಸಿಲಿನ ಕಾರಣ ಶಂಖ ಬ್ರಾಹ್ಮಣನ ಕಾಲು ಸುಡುತ್ತಿದ್ದುದನ್ನು ಗಮನಿಸಿ ಮರುಕಗೊಂಡ ವ್ಯಾಧನು ಹರಿದು ಹೋಗಿದ್ದ ತನ್ನ ಪಾದರಕ್ಷೆಯನ್ನೇ ಅವನಿಗೆ ಕೊಡುತ್ತಾನೆ. ಅಷ್ಟರಿಂದಲೇ ತೃಪ್ತನಾದ ಶಂಖನು ಅವನನ್ನು ಆಶೀರ್ವದಿಸುತ್ತಾನೆ ಮತ್ತು ರಾಮನಾಮದ ಉಪದೇಶವನ್ನೂ ಮಾಡುತ್ತಾನೆ. ಮತ್ತು ಮುಂದೆ ವಾಲ್ಮೀಕಿಯೆಂಬ ಹೆಸರಿನಿಂದ ಪ್ರಸಿದ್ಧನಾಗುವೆಯೆಂದೂ ಹೇಳುತ್ತಾನೆ.

ಪ್ರಭಾಸಖಂಡದ ದೇವಿಕಾಮಾಹಾತ್ಮ್ಯೆಯಲ್ಲಿ:

ಪಾರ್ವತೀ-ಪರಮೇಶ್ವರರ ಸಂವಾದದಲ್ಲಿಯೂ ವಾಲ್ಮೀಕಿಯ ಕಥೆಯು ಬರುತ್ತದೆ. ಶಮೀಮುಖನೆಂಬ ಬ್ರಾಹ್ಮಣನಿಗೆ ವೈಶಾಖನೆಂಬ ಹೆಸರಿನ ಮಗನಿರುತ್ತಾನೆ. ಮಾತಾ-ಪಿತೃಗಳ ಸೇವೆಯನ್ನು ಬಿಟ್ಟು ಬೇರೆ ಏನನ್ನೂ ಮಾಡುವ ಇಚ್ಛೆಯು ಅವನಿಗಿರುವುದಿಲ್ಲ. ಅವನು ದರೋಡೆ ಮಾಡುತ್ತಾ ತಂದೆ-ತಾಯಿಗಳನ್ನೂ ಪತ್ನಿಯನ್ನೂ ರಕ್ಷಣೆ ಮಾಡುತ್ತಿರುತ್ತಾನೆ. ಒಮ್ಮೆ ಮಾರ್ಗದಲ್ಲಿ ಅವನಿಗೆ ತೀರ್ಥಯಾತ್ರಾಪರಾಯಣರಾದ ಸಪ್ತರ್ಷಿಗಳು ಸಿಕ್ಕುತ್ತಾರೆ. ಅಂಗಿರಸರೊಡನೆ ಅವನು ಮಾತನಾಡುತ್ತಾನೆ. ಅವರ ಸಲಹೆಯಂತೆ ತಾನು ಮಾಡುತ್ತಿರುವ ಪಾಪದ ಹಂಚಿಕೆಯ ವಿಷಯವಾಗಿ ತಂದೆ-ತಾಯಿಗಳನ್ನು ಕೇಳಲು ಅವರು ಹೀಗೆ ಉತ್ತರಿಸುತ್ತಾರೆ.

"ಬಾಲ್ಯದಲ್ಲಿ ಯಾವ ಪ್ರತ್ಯುಪಕಾರದ ನಿರೀಕ್ಷೆಯೂ ಇಲ್ಲದೆ ನಾವು ನಿನ್ನನ್ನು ಸಾಕಿ ಸಲಹಿದೆವು. ಆದುದರಿಂದ ವೃದ್ಧಾಪ್ಯದಲ್ಲಿ ನಮ್ಮನ್ನು ನೀನು ರಕ್ಷಿಸುವುದು ನಿನ್ನ ಕರ್ತವ್ಯವಾಗಿದೆ. ಅದು ಹೊರತಾಗಿ ನಿನ್ನ ಪಾಪದಲ್ಲಿ ನಾವು ಭಾಗಿಗಳಾಗುವುದಿಲ್ಲ."

ತಂದೆ-ತಾಯಿಗಳ ಮಾತನ್ನು ಕೇಳಿ ವೈಶಾಖನಿಗೆ ವೈರಾಗ್ಯವುಂಟಾಗುತ್ತದೆ. ಅಂಗಿರಸರು ಅವನಿಗೆ ಮಂತ್ರಜಪಮಾಡಲು ಹೇಳುತ್ತಾರೆ. ಹಲವಾರು ವರ್ಷಗಳು ಕಳೆದನಂತರ ಗುರುಭಕ್ತನಾದ ಅವನಿಗೆ ದೇವಿಕಾ

ಸರೋವರದ ತಟದಲ್ಲಿ ಸಮಾಧಿಯಾಗುತ್ತದೆ. ಸಮಾಧಿಯಾದೆಡೆಯಲ್ಲಿ ಒಂದು ಹುತ್ತವು ಬೆಳೆಯುತ್ತದೆ. ಸಾವಿರ ವರ್ಷಗಳು ಕಳೆದ ನಂತರ ಪುನಃ ಅಲ್ಲಿಗೆ ಬಂದ ಋಷಿಗಳು ಅವನನ್ನು ಹುತ್ತದಿಂದ ಹೊರಕ್ಕೆ ತೆಗೆಯುತ್ತಾರೆ. ಸುಪ್ತವಾದ ಅವನ ಶರೀರವನ್ನು ಯೋಗಸಂಬಂಧವಾದ ಔಷಧಿಗಳಿಂದ ಮರ್ದಿಸುತ್ತಾರೆ. ಋಷಿಗಳ ಆಶೀರ್ವಾದಗಳಿಂದ ಅವನೇ ವಾಲ್ಮೀಕಿಯಾಗು ತ್ತಾನೆ. ಅವನ ನಾಲಿಗೆಯ ಮೇಲೆ ಸರಸ್ವತಿಯು ಸ್ವಚ್ಛಂದವಾಗಿ ವಿಹರಿಸು ತ್ತಾಳೆ. ಆದರಿಂದಲೇ ಅವನು ರಾಮಾಯಣವನ್ನು ರಚಿಸುತ್ತಾನೆ.

ಕೃತ್ತಿವಾಸೀಯ ರಾಮಾಯಣದಲ್ಲಿ ವ್ಯಾಧನ ಹೆಸರನ್ನು ರತ್ನಾಕರ ನೆಂದು ಹೇಳಿದೆ. ಅವನ ತಂದೆಯ ಹೆಸರು ಚ್ಯವನ. (ಭೃಗುವಂಶದಲ್ಲಿ ಒಂಬತ್ತನೆಯವನು.) ನಾರದ ಮತ್ತು ಬ್ರಹ್ಮರು ಅವನನ್ನು ಸಂಧಿಸುತ್ತಾರೆ. ಬ್ರಹ್ಮನ ಆದೇಶದಂತೆ ರತ್ನಾಕರನು ಸ್ನಾನಮಾಡಲು ನದಿಗೆ ಹೋಗುತ್ತಾನೆ. ರತ್ನಾಕರನ ದೃಷ್ಟಿಪಾತವಾದೊಡನೆಯೇ ನದಿಯು ಇಂಗಿಹೋಗುತ್ತದೆ. ಅನಂತರ ಬ್ರಹ್ಮನು ರತ್ನಾಕರನಿಗೆ ರಾಮನಾಮವನ್ನು ಉಪದೇಶಿಸುತ್ತಾನೆ. ರತ್ನಾಕರನಿಗೆ ರಾಮಮಂತ್ರವನ್ನು ಉಚ್ಚರಿಸಲು ಸಾಧ್ಯವಾಗದೆ 'ಮರಾ' 'ಮರಾ'–ಎಂದೇ ಜಪಮಾಡಿ ಸಿದ್ಧಿಯನ್ನು ಪಡೆಯುತ್ತಾನೆ.

ಹೀಗೆ ವಾಲ್ಮೀಕಿರಾಮಾಯಣದಲ್ಲಿ ಅವರ ಕಥೆಯಿಲ್ಲದಿದ್ದರೂ ಪುರಾಣಗಳಲ್ಲಿ ವಾಲ್ಮೀಕಿಗಳ ನಾನಾವಿಧವಾದ ಕಥೆಗಳಿವೆ. ಅವೆಲ್ಲವೂ ಕಲ್ಪಾಂತರಗಳಲ್ಲಾದುವೆಂದೂ ಆದುದರಿಂದ ಯಾವ ಕಥೆಯನ್ನೂ ನಿರಾಕರಿ ಸುವ ಕಾರಣವಿಲ್ಲವೆಂಬುದೂ ವಿದ್ವಾಂಸರ ಅಭಿಪ್ರಾಯವಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ವಾಲ್ಮೀಕಿಗಳನ್ನು ಭಾರ್ಗವ-ಪ್ರಾಚೇತಸ–ಎಂಬುದಾಗಿ ಹೆಸರಿಸಿರುವುದೇ ಹೊರತು ಅವರು ದಸ್ಯುಗಳಾಗಿದ್ದರೆಂಬ ಅಂಶವು ಕಂಡು ಬರುವುದಿಲ್ಲ.

ಲವ-ಕುಶರ ಯುದ್ಧಪ್ರಸಂಗ

ಉತ್ತರರಾಮಾಯಣದಲ್ಲಿ ಲವ-ಕುಶರು ಅಶ್ವಮೇಧದ ಕುದುರೆಯನ್ನು ಹಿಂಬಾಲಿಸಿ ಬರುತ್ತಿದ್ದ ಶ್ರೀರಾಮನ ಸೈನ್ಯದೊಡನೆ ಸೆಣೆಸಾಡಿದರೆಂಬುದೂ ಅವರೆಲ್ಲರನ್ನೂ ಪರಾಜಯಗೊಳಿಸದರೆಂಬುದೂ ಜಗತ್ಪ್ರಸಿದ್ಧವಾದ ಕಥೆಯಾಗಿದೆ. ಆದರೆ ಈ ಕಥೆಯು ವಾಲ್ಮೀಕಿರಾಮಾಯಣದಲ್ಲಿ ಬರುವುದಿಲ್ಲ. ಈ ಕಥೆಗೆ ಮೂಲಾಧಾರವು ಯಾವುದೆಂಬುದೂ ತಿಳಿಯದು. ಶ್ರೀರಾಮನ ಚರಿತ್ರೆಯ ಪ್ರತ್ಯಕ್ಷದರ್ಶಿಗಳಾದ ವಾಲ್ಮೀಕಿಗಳಂತೂ ಲವ-ಕುಶರ ಕಾಳಗದ ವಿಷಯವನ್ನು ಹೇಳಿಲ್ಲ.

ಲವ-ಕುಶರ ಕಾಳಗದ ವಿಷಯವು ಜೈಮಿನೀಯ ಅಶ್ವಮೇಧಪರ್ವ ದಲ್ಲಿ ಬರುತ್ತದೆ. ವ್ಯಾಸರು ಮಹಾಭಾರತವನ್ನು ವೈಶಂಪಾಯನ, ಜೈಮಿನಿ, ಸುಮಂತು, ಪೈಲ-ಎಂಬ ತಮ್ಮ ನಾಲ್ವರು ಶಿಷ್ಯರಿಗೂ ಉಪದೇಶಿಸಿದರು. ಮುಂದೆ ಜನಮೇಜಯನು ನಡೆಸಿದ ಸರ್ಪಯಾಗದ ಪ್ರಕರಣದಲ್ಲಿ ವ್ಯಾಸ ಶಿಷ್ಯರಾದ ವೈಶಂಪಾಯನರು ವಿರಾಮಕಾಲದಲ್ಲಿ ಜನಮೇಜಯನಿಗೆ ಭಾರತ ಸಂಹಿತೆಯನ್ನು ಹೇಳಿದರು. ಆಗ ವ್ಯಾಸರೂ ಅಲ್ಲಿ ಉಪಸ್ಥಿತರಾಗಿದ್ದರು. ಈ ಮಹಾಭಾರತಕಥೆಯನ್ನು ಉಗ್ರಶ್ರವಸೌತಿಗಳು ಶೌನಕಾದಿಮಹರ್ಷಿಗಳಿಗೆ ಹೇಳಿದರು. ಈಗ ಪ್ರಚಲಿತವಾಗಿರುವ ಮಹಾಭಾರತವು ಅದೇ ಆಗಿದೆ.

ವೈಶಂಪಾಯನರಂತೆಯೇ ಜೈಮಿನಿ-ಸುಮಂತು-ಪೈಲರೂ ವ್ಯಾಸರು ಉಪದೇಶಿಸಿದ ಮಹಾಭಾರತವನ್ನು ಪ್ರತ್ಯೇಕವಾಗಿಯೇ ರಚಿಸಿದರೆಂದು ಕಿಂವದಂತಿ ಇದೆ. ಸುಮಂತು-ಪೈಲರು ರಚಿಸಿದ ಭಾರತದ ಕುರುಹು ಕೂಡ ಎಲ್ಲಿಯೂ ಲಭ್ಯವಿಲ್ಲ. ಆದರೆ ಜೈಮಿನಿಗಳು ರಚಿಸಿದ ಮಹಾಭಾರತದಲ್ಲಿ ಅಶ್ವಮೇಧಪರ್ವವು ಮಾತ್ರ ಬೆಳಕಿಗೆ ಬಂದಿದೆ. ಜೈಮಿನಿಗಳು ರಚಿಸಿರುವ ಅಶ್ವಮೇಧಪರ್ವಕ್ಕೂ ವೈಶಂಪಾಯನರು ರಚಿಸಿರುವ ಅಶ್ವಮೇಧಪರ್ವಕ್ಕೂ ಬಹಳಷ್ಟು ವ್ಯತ್ಯಾಸವಿದೆ. ವ್ಯಾಸರೇ ಇಬ್ಬರಿಗೂ ಉಪದೇಶಕರಾಗಿರುವಾಗ ವ್ಯತ್ಯಾಸಬರಲು ಕಾರಣವೇನೆಂಬುದು ತಿಳಿಯದು. ಶೈಲಿಯು ಬೇರೆಯಾಗ ಬಹುದೇ ಹೊರತು ಕಥಾವಸ್ತುವು ಬೇರೆಯಾಗಲು ಸಾಧ್ಯವಿಲ್ಲ. ಅಶ್ವಮೇಧ ಪರ್ವದ ಮೊದಲಿನ ಮತ್ತು ಕಡೆಯ ಶ್ಲೋಕಗಳನ್ನು ಪರಿಶೀಲಿಸಿದರೆ ಜೈಮಿನಿ ಗಳೂ ಪೂರ್ಣಭಾರತವನ್ನು ರಚಿಸಿರುವಂತೆಯೇ ಕಾಣುತ್ತದೆ.

ಜೈಮಿನಿಗಳೂ ಜನಮೇಜಯನಿಗೆ ಭಾರತವನ್ನು ಹೇಳುತ್ತಾರೆ :

ಕಥಂ ಯುಧಿಷ್ಠಿರಃ ಪ್ರೀತೋ ಮಮ ಪೂರ್ವಪಿತಾಮಹಃ ।
ಹಯಮೇಧಂ ಕ್ರತುವರಂ ಚಕ್ರೇ ಬನ್ಧುಭಿರನ್ವಿತಃ ॥

ಹಿಂದಿನಿಂದ ಕಥೆಯು ಅನುವರ್ತಿತವಾಗದಿದ್ದರೆ ಹಠಾತ್ತಾಗಿ ಹೀಗೆ ಪ್ರಶ್ನೆಮಾಡಲು ಸಾಧ್ಯವಿರುತ್ತಿರಲಿಲ್ಲ. ಆದುದರಿಂದ ಹಿಂದಿನ ಪ್ರಕರಣ ದಿಂದಲೇ ಇಲ್ಲಿ ಕಥೆಯು ಅನುವರ್ತಿತವಾಗಿದೆ. ಕಡೆಯಲ್ಲಿ ಕೂಡ ಪರ್ವವು ಹೀಗೆಯೇ ಸಮಾಪ್ತವಾಗುತ್ತದೆ.

ಅಷ್ಟಾದಶ ಚ ಪರ್ವಾಣಿ ಕಥಿತಾನಿ ವಿಶಾಂಪತೇ ।
ಆತಶ್ಚಾಶ್ರಮವಾಸಾಖ್ಯಂ ಪರ್ವಂ ರಾಜನ್ ಶೃಣುಷ್ವ ತತ್ ॥

ಈ ಶ್ಲೋಕದಿಂದ ಜೈಮಿನಿಗಳೂ ಹದಿನೆಂಟು ಪರ್ವಗಳಿಂದ ಕೂಡಿ ರುವ ಮಹಾಭಾರತವನ್ನು ರಚಿಸಿದ್ದರೆಂದು ಊಹಿಸಬಹುದಾಗಿದೆ. ಆದರೆ ಪ್ರಸಕ್ತ ಅಶ್ವಮೇಧಪರ್ವವೊಂದನ್ನು ಬಿಟ್ಟು ಬೇರಾವ ಪರ್ವವೂ ಲಭ್ಯವಿಲ್ಲ.

ವೈಶಂಪಾಯನರು ಮಹಾಭಾರತದಲ್ಲಿ ಹೇಳಿರುವ ರಾಮೋಪಾಖ್ಯಾನ ದಲ್ಲಿ ಉತ್ತರಕಾಂಡದ ಪ್ರಸ್ತಾಪವಿಲ್ಲ. ಶ್ರೀರಾಮನ ಪಟ್ಟಾಭಿಷೇಕದವರೆಗೆ ಮಾತ್ರವೇ ಶ್ರೀರಾಮೋಪಾಖ್ಯಾನವಿದೆ.

ಪದ್ಮಪುರಾಣದ ಪಾತಾಳಖಂಡದಲ್ಲಿಯೂ ಲವ-ಕುಶರ ಕಾಳಗದ ಕಥೆಯು ಬರುತ್ತದೆ.

ಜೈಮಿನಿಭಾರತದಲ್ಲಿರುವ ಲವ-ಕುಶರ ಕಥೆಯನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ.

ಜೈಮಿನಿಭಾರತದ ಕಥೆಯ ಹಿನ್ನೆಲೆ

ಜೈಮಿನಿಗಳು ಜನಮೇಜಯನಿಗೆ ಮಹಾಭಾರತದ ಕಥೆಯನ್ನು ಯಜ್ಞ ವಿರಾಮಕಾಲದಲ್ಲಿ ಹೇಳುತ್ತಿರುತ್ತಾರೆ. ಧರ್ಮರಾಜನು ಅಶ್ವಮೇಧಯಾಗ ಮಾಡಿದ ಕಥಾಪ್ರಸಂಗವು ಪ್ರಾರಂಭವಾಗುತ್ತದೆ. ಯುಧಿಷ್ಠಿರನ ಅಶ್ವ ಮೇಧಾಶ್ವವು ಮಣಿಪುರಕ್ಕೆ ಬರುತ್ತದೆ. ಅಲ್ಲಿ ಅರ್ಜುನನ ಮಗನಾದ ಬಭ್ರು

ವಾಹನನು ರಾಜ್ಯವನ್ನಾಳುತ್ತಿರುತ್ತಾನೆ. ಜೈಮಿನಿಗಳು ಜನಮೇಜಯನಿಗೆ ಕಥೆಯನ್ನು ಮುಂದುವರಿಸಿ ಹೇಳುತ್ತಾ ಶ್ರೀರಾಮನಿಗೂ ಕುಶನಿಗೂ ಯುದ್ಧವು ನಡೆದಂತೆ-ಬಭ್ರುವಾಹನಿಗೂ ಅರ್ಜುನನಿಗೂ ಯುದ್ಧವು ನಡೆಯಿತೆಂದು ಹೇಳುತ್ತಾರೆ. ಆಗ ಜನಮೇಜಯನು ಶ್ರೀರಾಮನಿಗೂ ಕುಶನಿಗೂ ನಡೆದ ಯುದ್ಧವಾರ್ತೆಯನ್ನು ತಿಳಿಸಬೇಕೆಂದು ಜೈಮಿನಿಗಳನ್ನು ಪ್ರಾರ್ಥಿಸುತ್ತಾನೆ.

"ಮಹರ್ಷಿಗಳೇ! ಶ್ರೀರಾಮನ ಕಥೆಯು ಸರ್ವಪಾಪನಾಶಕವಾದುದು. ಶ್ರೀರಾಮನನ್ನು ಅವನ ಮಗನು ಯುದ್ಧದಲ್ಲಿ ಹೇಗೆ ಜಯಿಸಿದನು? ಶ್ರೀರಾಮನು ಕುಶನನ್ನು ತನ್ನ ಮಗನೆಂದು ಅರಿಯದಿರಲು ಕಾರಣವೇನು? ಈ ಎಲ್ಲ ವಿಷಯಗಳನ್ನೂ ನನಗೆ ವಿಸ್ತಾರವಾಗಿಯೇ ಹೇಳಿರಿ."

"ಮಹಾರಾಜ! ಹಿಂದೆ ನಡೆದ ಶ್ರೀರಾಮನ ಅಶ್ವಮೇಧಯಾಗದ ಪ್ರಸಂಗವನ್ನು ವಿಸ್ತಾರವಾಗಿ ಹೇಳುವೆನು ; ಕೇಳು :

ಶ್ರೀರಾಮನು ಮಹಾಬಲಶಾಲಿಗಳಾದ ರಾವಣ-ಕುಂಭಕರ್ಣ-ಇಂದ್ರ ಜಿತರನ್ನೂ, ಅವರ ಅನುಯಾಯಿಗಳಾದ ರಾಕ್ಷಸರನ್ನೂ ಸಂಹರಿಸಿ ಅಗ್ನಿ ಯಿಂದ ಪರಿಶುದ್ಧಳಾದ ಸೀತಾದೇವಿಯೊಡನೆಯೂ, ಹನುಮಂತನೇ ಮೊದ ಲಾದ ಕಪಿಶ್ರೇಷ್ಠರೊಡನೆಯೂ, ಶೂರನಾದ ವಿಭೀಷಣನೊಡನೆಯೂ ಮಹಾತ್ಮನಾದ ಲಕ್ಷ್ಮಣನೊಡನೆಯೂ ಅಯೋಧ್ಯಾಪಟ್ಟಣಕ್ಕೆ ಬಂದು ಸೇರಿ ದನು. ಆ ಸಮಯದಲ್ಲಿ ವಸಿಷ್ಠಪ್ರಮುಖರಾದ ಬ್ರಾಹ್ಮಣರು ಸ್ವಸ್ತಿವಾಚನ ಗಳಿಂದ ಶ್ರೀರಾಮನನ್ನು ಎದುರ್ಗೊಂಡರು. ಮುನಿಶ್ರೇಷ್ಠರನ್ನು ಕಂಡು ಶ್ರೀರಾಮನು ಎಲ್ಲರಿಗೂ ನಮಸ್ಕರಿಸಿದನು. ಸೀತಾ-ಲಕ್ಷ್ಮಣರೂ ನಮಸ್ಕರಿಸಿ ದರು. ಶ್ರೀರಾಮನು ಕೈಕೇಯೀ-ಸುಮಿತ್ರೆಯರಿಗೆ ನಮಸ್ಕರಿಸಿದನಂತರ ಭರತ-ಶತ್ರುಘ್ನರೊಡನೆ ತಾಯಿಯಾದ ಕೌಸಲ್ಯಾದೇವಿಯ ಬಳಿಗೆ ಬಂದನು. ಅವಳು ಬಹಳ ದುಃಖಿತಳಾಗಿದ್ದಳು. ಪತಿಯು ಗತಿಸಿದ ದುಃಖದಿಂದಲೂ ಪರಿತಪಿಸುತ್ತಿದ್ದಳು. ಶರೀರವು ಮಲಿನವಾಗಿದ್ದಿತು. ಶ್ರೀರಾಮನನ್ನು ಕಂಡೊಡನೆಯೇ ಕೌಸಲ್ಯೆಯು ಬಡವನು ನಿಧಿಯನ್ನು ಕಂಡಂತೆ ಸಂತೋಷದಿಂದ ಹಿರಿಹಿಗ್ಗಿ ಅವನನ್ನು ಬಾಚಿ ತಬ್ಬಿಕೊಂಡು ಅವನ ತಲೆಯ

ಮೇಲೆ ಆನಂದಬಾಷ್ಪಗಳನ್ನು ಸುರಿಸಿದಳು. ಪೊದೆಯಾಗಿದ್ದ ಜಡೆಯನ್ನು ಕಂಡು ಒಡನೆಯೇ ಅವನಿಗೆ ಸ್ನಾನಮಾಡಿಸಿದಳು. ಮೈದಡವುತ್ತಿದ್ದ ಕೌಸಲ್ಯೆಗೆ ಅವನ ಶರೀರದಲ್ಲಿ ಗಾಯಗಳಾಗಿದ್ದುದು ಕಂಡುಬಂದಿತು. ದುಃಖಿಸುತ್ತಾ ಹೇಳಿದಳು :

"ರಾಘವ! ನಿನ್ನನ್ನು ವಸಿಷ್ಠಾದಿಮಹರ್ಷಿಗಳು ಆಯುಧಗಳಿಂದ ಭೇದಿಸಲ್ಪಡತಕ್ಕವನಲ್ಲವೆಂದೂ ನೀರಿನಿಂದ ನೆನೆಸಲ್ಪಡತಕ್ಕವನಲ್ಲವೆಂದೂ ಹೇಳಿದ್ದರು. ಆದರೆ ನಿನಗೆ ಇಷ್ಟು ಗಾಯಗಳಾಗಿರುವುದರಿಂದ ಅವರ ಮಾತೆಲ್ಲವೂ ವ್ಯರ್ಥವಾದಂತೆಯೇ ಆಯಿತು. ಹಾಗೂ ಕೆಲವರು ನಿನ್ನನ್ನು ಶಿವಭಕ್ತನೆಂದೂ ಹೇಳುತ್ತಾರೆ. ಆದುದರಿಂದ ಶಿವಭಕ್ತನಾದ ರಾವಣನು ಬಿಟ್ಟ ಬಾಣಗಳಿಗೆ ನೀನು ನಿನ್ನ ಶರೀರದಲ್ಲಿ ಜಾಗಮಾಡಿಕೊಟ್ಟೆಯೆಂದು ಭಾವಿಸುವೆನು."

ಹೀಗೆ ದುಃಖಿಸುತ್ತಿದ್ದರೂ ಕೌಸಲ್ಯೆಗೆ ಶ್ರೀರಾಮನ ಸ್ಪರ್ಶವು ದಿವ್ಯ ಜ್ಞಾನವನ್ನು ಪಡೆದ ಬ್ರಾಹ್ಮಣನಂತೆ-ಮಹಾನಂದವನ್ನುಂಟುಮಾಡಿತು. ಅಂತೆಯೇ ಆಕೆಯ ಸ್ಪರ್ಶದಿಂದ ಶ್ರೀರಾಮನ ವ್ಯಥೆಯೆಲ್ಲವೂ ನಿವಾರಣೆ ಯಾಯಿತು. ಶ್ರೀರಾಮನು ತಾಯಿಗೆ ನಮಸ್ಕರಿಸಿ ಬಂಧುಗಳ ಕುಶಲ ಪ್ರಶ್ನೆ ಮಾಡಿದನು. ಅನಂತರ ತಮ್ಮಂದಿರೊಡನೆ ಶೈಲ-ವನ-ಕಾನನಗಳಿಂದ ಕೂಡಿದ ಭೂಮಿಯನ್ನು ಪರಿಪಾಲಿಸುತ್ತಾ ಅಯೋಧ್ಯೆಯಲ್ಲಿ ಸುಖ-ಸಂತೋಷಗಳಿಂದ ಕಾಲಕಳೆಯುತ್ತಿದ್ದನು. ಅವನ ರಾಜ್ಯದಲ್ಲಿ ಪ್ರಜೆ ಗಳು ಸುಖವಾಗಿದ್ದರು. ಬ್ರಾಹ್ಮಣರು ವೇದಪರಾಯಣರಾಗಿದ್ದರು. ಕರುಗಳು ತೃಪ್ತಿಯಾಗುವವರೆಗೂ ಹಾಲು ಕುಡಿದು ವಿಚರಿಸುತ್ತಿದ್ದುವು. ಕರುಗಳು ಕುಡಿದು ಉಳಿದ ಹಾಲನ್ನು ಮಾತ್ರವೇ ಗೋಪಾಲಕರು ಕರೆದು ಕೊಳ್ಳುತ್ತಿದ್ದರು. ಅದೂ ಕೂಡ ಯಥೇಚ್ಛವಾಗಿರುತ್ತಿದ್ದಿತು. ಗಿಡ-ಮರ- ಬಳ್ಳಿಗಳು ಸರ್ವದಾ ಫಲ-ಪುಷ್ಪಗಳಿಂದ ತುಂಬಿರುತ್ತಿದ್ದುವು. ದುಷ್ಕಾಲ ದೋಷಗಳನ್ನು ನಾಶಮಾಡುತ್ತಾ ಓಷಧಿಗಳೆಲ್ಲವೂ ಫಲಿಸುತ್ತಿದ್ದುವು. ಯಾಜಕರು ಸರಯೂನದಿಯ ತೀರದಲ್ಲಿ ಯಜ್ಞಗಳನ್ನು ನಡೆಸುತ್ತಿದ್ದರು. ಹೀಗೆ ಶ್ರೀರಾಮನು ಮೂರು ಅಗ್ನಿಗಳಿಗೆ ಸಮಾನರಾದ ಅನುಜರೊಡನೆ ಕೂಡಿಕೊಂಡು ಸಂತೋಷಭರಿತನಾಗಿ ರಾಜ್ಯವನ್ನಾಳುತ್ತಿದ್ದನು.

ಹೀಗೆ ಶ್ರೀರಾಮನು ಹತ್ತುಸಾವಿರ ವರ್ಷಗಳವರೆಗೆ ರಾಜ್ಯಭಾರಮಾಡಿದನು. ಆದರೆ ಸೀತಾದೇವಿಯಲ್ಲಿ ಅವನಿಗೆ ಮಕ್ಕಳಾಗಲಿಲ್ಲ. ಬಹಳ ಕಾಲದ ಮೇಲೆ ಸೀತೆಯು ಗರ್ಭವತಿಯಾದಳು. ಆದರೆ ಅವಳು ಶ್ರವಣನಕ್ಷತ್ರದ ಕೊನೆಯ ಪಾದದಲ್ಲಿ (ಚರಲಗ್ನದಲ್ಲಿ) ಗರ್ಭಧಾರಣೆಯನ್ನು ಮಾಡಿದ್ದುದರಿಂದ ಆ ಗರ್ಭವು ತಾಯಿಗೆ ದೇಶಾಂತರಪ್ರಾಪಕವಾಗಿದ್ದಿತು.

ಸೀತೆಯು ಗರ್ಭವತಿಯಾದನಂತರ ನಾಲ್ಕುತಿಂಗಳವರೆಗೆ ಶ್ರೀರಾಮನು ಸೀತೆಯೊಡನೆ ವಿನೋದವಾಗಿ ಕಾಲಕಳೆದನು. ಐದನೆಯ ತಿಂಗಳು ಪ್ರಾರಂಭವಾಗುತ್ತಲೇ ಶ್ರೀರಾಮನಿಗೆ-ಲಕ್ಷ್ಮಣನು ಸೀತಾದೇವಿಯನ್ನು ಭಾಗೀರಥೀನದಿಯ ತೀರದಲ್ಲಿ ಬಿಟ್ಟುಬಂದಂತೆಯೂ ಅಲ್ಲವಳು ಅನಾಥಳಂತೆ ರೋದಿಸುತ್ತಿದ್ದಂತೆಯೂ-ಸ್ವಪ್ನವಾಯಿತು. ಅಚ್ಚರಿಗೊಂಡ ಶ್ರೀರಾಮನು ಬೆಳಗಾಗುತ್ತಲೇ ಮೇಲೆದ್ದು ಸ್ನಾನ-ಸಂಧ್ಯಾವಂದನಾದಿಗಳನ್ನು ಮುಗಿಸಿಕೊಂಡು ವಸಿಷ್ಠರ ಬಳಿಗೆ ಹೋಗಿ ನಮಸ್ಕರಿಸಿ ಹೇಳಿದನು :

"ಮುನಿಶ್ರೇಷ್ಠರೇ! ಸೀತೆಯು ಭಾಗೀರಥೀನದಿಯ ತೀರಪ್ರದೇಶದಲ್ಲಿ ರೋದಿಸುತ್ತಿದ್ದಂತೆ ಸ್ವಪ್ನವನ್ನು ಕಂಡೆನು. ಅವಳೀಗ ಗರ್ಭವತಿಯಾಗಿದ್ದಾಳೆ. ಅವಳ ಗರ್ಭವಿಘ್ನಶಾಂತ್ಯರ್ಥವಾಗಿ ಪುನ್ನಕ್ಷತ್ರಯುಕ್ತವಾದ ಯಾವುದಾದರೂ ಶುಭದಿವಸದಲ್ಲಿ ಪುಂಸವನಕರ್ಮವನ್ನು ನಡೆಸಲು ಅನುಮತಿಸಿರಿ."

"ರಾಘವ! ಸೂರ್ಯನು ಪುಷ್ಯನಕ್ಷತ್ರದಲ್ಲಿರುವಾಗ ಶುದ್ಧಪಂಚಮಿಯಲ್ಲಿ ಪುಂಸವನಕರ್ಮವು ನಡೆಯಬೇಕು. ಆದುದರಿಂದ ಕೃಷ್ಣಪಕ್ಷವು ಕಳೆದು ಆ ಮುಹೂರ್ತವು ಪ್ರಾಪ್ತವಾಗುವವರೆಗೂ ಶಾಂತ್ಯರ್ಥವಾಗಿ ಬ್ರಾಹ್ಮಣಸಂತರ್ಪಣೆಯನ್ನು ನಡೆಸುತ್ತಿರು."

ಶ್ರೀರಾಮನು ಹಾಗೆಯೇ ಆಗಲೆಂದು ಹೇಳಿ ಲಕ್ಷ್ಮಣನಿಗೆ ಹೇಳಿದನು :

"ಸೌಮಿತ್ರೇ! ವಸಿಷ್ಠರು ಹೇಳಿದಂತೆ ಸೀತೆಯ ಪುಂಸವನವು ಶುದ್ಧ ಪಂಚಮಿಯಂದು ನಡೆಯಲಿದೆ. ಅಷ್ಟರಲ್ಲಿ ನೀನು ಹೋಗಿ ಸೀತೆಯ ತಂದೆಯಾದ ಜನಕರಾಜನನ್ನೂ ಋಷಿಗಳೊಡನೆ ವಿಶ್ವಾಮಿತ್ರರನ್ನೂ ಕರೆದುಕೊಂಡು ಬಾ."

ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಅಣ್ಣನಿಗೆ ನಮಸ್ಕರಿಸಿ ಹೊರಟುಹೋದನು.

ಬಳಿಕ ಶ್ರೀರಾಮನು ಪುಂಸವನಕ್ರಿಯೆಗಾಗಿ ಶಿಲ್ಪಿಗಳ ಮೂಲಕ ಎರಡು ಹರಿದಾರಿಗಳಷ್ಟು ಉದ್ದವೂ ಮತ್ತು ಅಗಲವೂ ಇದ್ದು ಚಚ್ಚೌಕವಾಗಿದ್ದ ಮಂಟಪವನ್ನು ಕಟ್ಟಿಸಿದನು. ಆ ಮಂಟಪದಲ್ಲಿ ವಸಿಷ್ಠರು ಮನೋಹರವಾದ ಅಗ್ನಿಕುಂಡವನ್ನು ರಚಿಸಿ ಕರ್ಮಾಂಗಗಳಾದ ಅತ್ತಿಯ ಹಣ್ಣಿನ ರಸ, ಮುಳ್ಳುಹಂದಿಯ ಮುಳ್ಳು, ಮೂರು ಮಡಿಕೆಯಾಗಿ ಸುತ್ತಿದ ಹಸಿಯ ನೂಲಿನ ಸಿಂಬಿ, ಚೌಕವಾದ ಅತ್ತಿಯ ಮರದ ಮಣೆ, ವೀಣೆ ಮೊದಲಾದ ಪದಾರ್ಥಗಳನ್ನು ಸಿದ್ಧಪಡಿಸಿದರು. ಆ ವೇಳೆಗೆ ಜನಕನೂ-ಶಿಷ್ಯ ಸಮೇತರಾಗಿ ವಿಶ್ವಾಮಿತ್ರರೂ ಆಗಮಿಸಿದರು. ಅವರೆಲ್ಲರನ್ನೂ ಶ್ರೀರಾಮನು ಯಥಾಯೋಗ್ಯವಾಗಿ ಪೂಜಿಸಿ ಸತ್ಕರಿಸಿದನು. ಮುಹೂರ್ತವು ಸನ್ನಿಹಿತ ವಾಗುತ್ತಲೇ ವಸಿಷ್ಠರು ಸೀತಾಸಮೇತನಾಗಿ ಮಂಟಪಕ್ಕೆ ಬರುವಂತೆ ಶ್ರೀರಾಮನಿಗೆ ಹೇಳಿದರು. ಪುರೋಹಿತರ ಆಣತಿಯಂತೆ ಶ್ರೀರಾಮನು ಸೀತಾಸಮೇತನಾಗಿ ಮಂಗಳಸ್ನಾನಮಾಡಿ ವೇದಶಾಸ್ತ್ರಪಾರಂಗತರಾದ, ಸದಾಚಾರಸಂಪನ್ನರಾದ, ಕರ್ಮಜ್ಞರಾದ ಬ್ರಾಹ್ಮಣರಿಂದ ಸಮಲಂಕೃತ ವಾಗಿದ್ದ ಮಂಟಪವನ್ನು ಪ್ರವೇಶಿಸಿದನು. ಬಳಿಕ ವಸಿಷ್ಠರು ಶ್ರೀರಾಮ ನಿಂದ ಕ್ರಮವಾಗಿ ಚರು-ತಿಲ-ಆಜ್ಯಗಳ ಆಹುತಿಗಳನ್ನು ಮಾಡಿಸಿ ಶಾಂತ್ಯುದಕದಿಂದ ಶ್ರೀರಾಮನಿಗೆ ಅಭಿಷೇಕಮಾಡಿದರು. ಹಾಗೆಯೇ ಸೀತಾದೇವಿಯ ಮುಡಿಯ ಮೇಲೆ ದಾರದ ಸಿಂಬಿಯನ್ನಿಟ್ಟು ಅತ್ತಿಯ ಹಣ್ಣಿನ ರಸವನ್ನು ಆ ಸಿಂಬಿಯೊಳಗೆ ಸುರಿಯುವಂತೆ ಶ್ರೀರಾಮನಿಗೆ ಹೇಳಿದರು. ಅತ್ತಿಯ ಹಣ್ಣಿನ ರಸವನ್ನು ತಲೆಯಲ್ಲಿ ಧರಿಸಿದ ಸೀತಾದೇವಿಯು ಬ್ರಹ್ಮಾಂಡವನ್ನೇ ಧರಿಸದವಳಂತೆ ಪ್ರಕಾಶಿಸಿದಳು. ವೀಣಾವಾದ್ಯಪ್ರವೀಣನಾದ ಭರತನು ಗರ್ಭದಲ್ಲಿರುವ ಶಿಶುವಿಗೆ ವೀಣೆಯನ್ನು ಕಲಿಸುತ್ತಿರುವನೋ ಎಂಬಂತೆ ಸೀತಾದೇವಿಯ ಮುಂದೆ ವೀಣೆಯನ್ನು ಬಾರಿಸಿದನು. ಹೀಗೆ ಪುಂಸವನಕರ್ಮವು ಯಥಾವಿಧಿಯಾಗಿ ಮುಗಿದನಂತರ ಶ್ರೀರಾಮನು ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಗೊಳಿಸಿ ಸುವರ್ಣನಾಣ್ಯಗಳನ್ನೂ, ವಸ್ತ್ರಗಳನ್ನೂ, ಭೂಷಣಗಳನ್ನೂ, ಅಶ್ವ-ರಥಗಳನ್ನೂ ದಾನಮಾಡಿದನು.

ಜನಕನು ಅಳಿಯನಾದ ಶ್ರೀರಾಮನಿಗೆ ನಿಷ್ಕಂಟಕವಾದ ರಾಜ್ಯವನ್ನೇ ಒಪ್ಪಿಸಿಕೊಟ್ಟು ವಿಶ್ವಾಮಿತ್ರರೊಡನೆ ಅರಣ್ಯಕ್ಕೆ ತೆರಳಿದನು.

ಕೆಲವು ದಿನಗಳು ಕಳೆದನಂತರ ಶ್ರೀರಾಮನು ಒಂದು ರಾತ್ರಿ ಸೀತೆಯನ್ನು ಪ್ರಶ್ನಿಸಿದನು : "ಜಾನಕಿ!ನಿನಗೆ ಯಾವ ಬಯಕೆ ಇದೆಯೆಂಬುದನ್ನು ತಿಳಿಸು. ಈ ಸಮಯದಲ್ಲಿ ನಾನು ಅದನ್ನು ನೆರವೇರಿಸಿಕೊಡುತ್ತೇನೆ."

"ಪ್ರಾಣನಾಥ! ನಿನ್ನ ಅನುಗ್ರಹದಿಂದ ನಾನು ಯಾವಾಗಲೂ ಪೂರ್ಣಕಾಮಳಾಗಿರುವೆನು. ನನಗೆ ಯಾವುದಕ್ಕೂ ಕೊರತೆಯಿಲ್ಲ. ಆದರೂ ಈ ಸಮಯದಲ್ಲಿ ನನಗೆ ಭಾಗೀರಥೀನದಿಯ ತೀರದಲ್ಲಿ ಕೃಷ್ಣಾಜಿನಗಳನ್ನು ಧರಿಸಿರುವ ಋಷಿಪತ್ನಿಯರ ಬಳಿಗೆ ಹೋಗಿಬರಬೇಕೆಂಬ ಮತ್ತು ಅವರಿಗೆ ನಮಸ್ಕರಿಸಿ ಅವರ ಆಶೀರ್ವಾದಗಳನ್ನು ಪಡೆದು ಬರಬೇಕೆಂಬ ಬಯಕೆಯುಂಟಾಗಿದೆ."

"ಮಂಗಳಾಂಗಿಯೇ! ಹದಿನಾಲ್ಕು ವರ್ಷಗಳ ವನವಾಸ ಮಾಡಿದರೂ ನಿನಗೆ ತೃಪ್ತಿಯೇ ಆಗಲಿಲ್ಲವೇ? ಪುನಃ ಅರಣ್ಯಕ್ಕೆ ಹೋಗಲು ಬಯಸಿರುವೆಯಾ? ಆಗಬಹುದು. ನಿನ್ನ ಬಯಕೆಯನ್ನು ಈಡೇರಿಸದಿರಲು ಇಚ್ಛಿಸುವುದಿಲ್ಲ. ನಾಳೆಯೇ ನೀನು ಭಾಗೀರಥೀತೀರಕ್ಕೆ ಹೋಗುವೆಯಂತೆ."

ರಾತ್ರಿಯು ಕಳೆಯುವುದರಲ್ಲಿದ್ದಿತು. ದೇಶದ ನಾನಾಭಾಗಗಳಿಂದ ವರದಿಗಳನ್ನೊಪ್ಪಿಸಲು ಗೂಢಚಾರರು ಆಗಮಿಸಿದರು. ತನ್ನ ವಿಷಯವಾಗಿ, ತನ್ನ ಪತ್ನಿಯ ವಿಷಯವಾಗಿ, ಸಹೋದರರ ವಿಷಯವಾಗಿ ಜನರು ಎಂತಹ ಮಾತನ್ನು ಆಡಿಕೊಳ್ಳುತ್ತಿರುವರೆಂದು ಶ್ರೀರಾಮನು ಗೂಢಚಾರರನ್ನು ಪ್ರಶ್ನಿಸಿದನು. ಒಂದು ವೇಳೆ ಪ್ರಜೆಗಳು ಕೆಟ್ಟಮಾತುಗಳನ್ನಾಡಿದರೂ ಅದನ್ನು ನಿರ್ಭಯವಾಗಿ ಹೇಳುವಂತೆ ಗೂಢಚಾರರಿಗೆ ಆದೇಶವನ್ನಿತ್ತನು. ಗೂಢಚಾರರು ಒಬ್ಬೊಬ್ಬರಾಗಿ ತಾವು ಕೇಳಿ ತಿಳಿದ ಸಮಾಚಾರಗಳನ್ನು ಹೇಳತೊಡಗಿದರು.

"ಪ್ರಭುವೇ! ನಿನ್ನ ಕೀರ್ತಿ-ಪ್ರತಾಪಗಳನ್ನು ಎಲ್ಲೆಲ್ಲಿಯೂ ಎಲ್ಲರೂ ಪ್ರಶಂಸೆಮಾಡುತ್ತಿದ್ದಾರೆ. ಇಂತಹ ರಾಜನು ಸಿಕ್ಕಿದುದು ಸೌಭಾಗ್ಯವೆಂದೇ ಎಲ್ಲ ಪ್ರಜೆಗಳೂ ಭಾವಿಸಿದ್ದಾರೆ. ರಾಜನ ದರ್ಶನಮಾತ್ರದಿಂದಲೇ ಪ್ರಜೆಗಳ

ದುಷ್ಕೃತವು ಪರಿಹಾರವಾಗುತ್ತದೆ. ಹೀಗಿರುವಾಗ ರಾಜನಲ್ಲಿ ದುಷ್ಕೃತ್ಯವಿರಲು ಹೇಗೆ ತಾನೇ ಸಾಧ್ಯವಾಗುತ್ತದೆ?"–ಎಂದು ಮುಂತಾಗಿ ಪ್ರಜೆಗಳು ಹೇಳುತ್ತಿದ್ದರು. ಎಲ್ಲೆಡೆಗಳಲ್ಲಿಯೂ ಇಂತಹ ಪ್ರಶಂಸೆಯ ಮಾತನ್ನೇ ನಾವು ಕೇಳುತ್ತಿದ್ದೆವು. ನಾವು ಅರ್ಧರಾತ್ರಿಯಲ್ಲಿ ಸಂಚರಿಸುತ್ತಿರುವಾಗ ಒಬ್ಬ ಅಗಸನ ಮನೆಯಲ್ಲಿ ನಾವು ವಿಚಿತ್ರವಾದ ಒಂದು ಮಾತನ್ನು ಕೇಳಿದೆವು.

ಈ ಪಟ್ಟಣದ ಒಬ್ಬ ಅಗಸನು ತನ್ನ ಹೆಂಡತಿಯಮೇಲೆ ಕೋಪಿಸಿ ಕೊಂಡು ಅವಳನ್ನು ಮನೆಯಿಂದ ಓಡಿಸಿದ್ದನು. ಅವಳು ತನ್ನ ತೌರುಮನೆ ಯಲ್ಲಿ ನಾಲ್ಕು ದಿವಸಗಳಿದ್ದಳು. ಅವಳ ತಂದೆಗೆ ಅವಳನ್ನು ತನ್ನ ಮನೆ ಯಲ್ಲಿ ಇಟ್ಟುಕೊಳ್ಳುವುದು ಉಚಿತವೆನಿಸಲಿಲ್ಲ. ಅದು ವೇದಾಗಮಗಳ ಸಂಪ್ರ ದಾಯಕ್ಕೆ ವಿರುದ್ಧವಾದ ಸಂಪ್ರದಾಯವೆನ್ನಿಸಿತು. ಒಡನೆಯೇ ಅವನು ಮಗಳಿಗೆ ಸಮಾಧಾನ ಹೇಳಿ ಅವಳನ್ನು ಅಳಿಯನ ಮನೆಗ ಕರೆತಂದನು. ಆದರೆ ಅಳಿಯನಿಗೆ ಹೆಂಡತಿಯ ಮೇಲಿನ ಕೋಪವಿನ್ನೂ ಇಳಿದಿರಲಿಲ್ಲ. ಕೋಪೋದ್ರಿಕ್ತನಾದ ಅಗಸನು ಕಟುವಾದ ಈ ಮಾತನ್ನು ಮಾವನಿಗೆ ಹೇಳಿದನು :

"ರಾಕ್ಷಸನ ಮನೆಯಲ್ಲಿದ್ದ ಸೀತೆಯನ್ನು ಕರೆತಂದು ತನ್ನ ಮನೆಗೆ ಸೇರಿಸಿಕೊಂಡ ಆ ರಾಮನೆಂದು ನನ್ನನ್ನು ತಿಳಿದಿರೋ! ಅವನು ದೊರೆ ಯೆಂಬ ಅಧಿಕಾರದ ದರ್ಪದಿಂದ ಯಾವ ಲಕ್ಷ್ಯವೂ ಇಲ್ಲದೇ ಹೀಗೆ ಮಾಡಿದ ಮಾತ್ರಕ್ಕೆ ನಾನೂ ಹಾಗೆ ಮಾಡುವೆನೇ? ನಾನು ಇವಳನ್ನು ಖಂಡಿತ ವಾಗಿಯೂ ನನ್ನ ಮನೆಗೆ ಸೇರಿಸಿಕೊಳ್ಳುವುದಿಲ್ಲ" ಎಂದು ಆ ರಜಕನು ಮಾವನಿಗೆ ಖಡಾ-ಖಂಡಿತವಾಗಿ ಹೇಳಿಬಿಟ್ಟನು. ಆ ಮಾತನ್ನು ಕೇಳಿದ ಮಾವನು ಪ್ರತಿಯಾಗಿ ಯಾವ ಮಾತನ್ನೂ ಆಡಲಿಲ್ಲ. ಅವನನ್ನು ಸಮಾಧಾನಪಡಿಸಲೂ ಸಮರ್ಥನಾಗಲಿಲ್ಲ. ಈ ದೃಶ್ಯವನ್ನು ನಾನು ಪ್ರತ್ಯಕ್ಷವಾಗಿ ಕಂಡೆನು."

ಶ್ರೀರಾಮನು ಗೂಢಚಾರರ ಮಾತನ್ನು ವಿವರವಾಗಿ ಕೇಳಿ ಅವರನ್ನು ಕಳುಹಿಸಿಕೊಟ್ಟು ತನ್ನಲ್ಲಿಯೇ ಯೋಚಿಸತೊಡಗಿದನು.

"ಸೀತೆಯು ಅಗ್ನಿಪ್ರವೇಶಮಾಡಿ ಪರಿಶುದ್ಧಳಾಗಿ ಹೊರಬಂದರೂ

ಲೋಕನಿಂದೆಗೆ ಪಾತ್ರಳಾಗಿದ್ದಾಳೆ. ಈಗ ನನ್ನ ಕರ್ತವ್ಯವೇನು? ಲೋಕಾಪ ವಾದಕ್ಕೆ ಹೆದರಿ ಪರಮಪಾವನೆಯಾದ ಸೀತೆಯನ್ನು ಪರಿತ್ಯಾಗಮಾಡಲೇ? ಹಾಗೆ ಮಾಡಿದರೆ ಮುಖ್ಯವಾದ ಆಚಾರಪದ್ಧತಿಯನ್ನು ವರ್ಜಿಸಿದ ಶ್ರೋತ್ರಿಯನಂತೆಯೂ–ವೇದವನ್ನು ತ್ಯಜಿಸಿದ ಬ್ರಾಹ್ಮಣನಂತೆಯೂ–ಆಗು ವೆನು. ಆದರೂ ಸೀತೆಯನ್ನು ತ್ಯಜಿಸದೇ ಬೇರೆಯ ಮಾರ್ಗವೇ ಇಲ್ಲ. ರಾಜನು ಪ್ರಜೆಗಳಿಗೆ ಆದರ್ಶನಾಗಿರಬೇಕು" ಎಂದು ನಿಶ್ಚಯಿಸಿದನು.

ಬೆಳಗಾಗುತ್ತಲೇ ಲಕ್ಷ್ಮಣ-ಭರತ-ಶತ್ರುಘ್ನರನ್ನು ಕರೆಯಿಸಿದನು. ಅವರು ಬಂದೊಡನೆಯೇ ಖಿನ್ನಮನಸ್ಕನಾಗಿ ಕುಳಿತಿದ್ದ ಶ್ರೀರಾಮನನ್ನು ನೋಡಿದರು. ದುಃಖದ ಕಾರಣವನ್ನು ಕೇಳಲು ಶ್ರೀರಾಮನು ಮೆಲ್ಲನೆ ಹೇಳಿದನು :

"ಸೋದರರರೇ! ಪಾಷಂಡಿಗಳು ಶ್ರುತಿಯನ್ನು ನಿಂದಿಸುವಂತೆ–ನನ್ನ ಪತ್ನಿಯನ್ನು ಜನರು ನಿಂದಿಸುತ್ತಿರುವರು. ಸಂಸಾರದ ಭಯದಿಂದ ಯೋಗಿಯು ಮಮತೆಯನ್ನು ತ್ಯಜಿಸುವಂತೆ–ಲೋಕಾಪವಾದಕ್ಕೆ ಹೆದರಿರುವ ನಾನು ಸೀತೆಯನ್ನು ಪರಿತ್ಯಾಗಮಾಡಲು ನಿಶ್ಚಯಿಸಿದ್ದೇನೆ."

ಶ್ರೀರಾಮನ ಆ ಮಾತನ್ನು ಕೇಳಿ ಮೂವರು ಅನುಜರಿಗೂ ವಜ್ರಾ ಘಾತವಾದಂತಾಯಿತು. ದುಃಖಪೀಡತನಾದ ಭರತನು ಹೇಳಿದನು.

"ಅಣ್ಣ! ನಿನ್ನ ಈ ಕಾರ್ಯವು ಚಂಡಾಲರ ಅಧೀನದಲ್ಲಿದ್ದ ಗೋವನ್ನು ಕರೆತಂದು ಬಳಿಕ ಚಂಡಾಲರ ವಶದಲ್ಲಿದ್ದಿತೆಂಬ ಕಾರಣದಿಂದ ಆ ಗೋವನ್ನು ವಿಸರ್ಜಿಸುವಂತೆ–ರಾಕ್ಷಸರ ವಶದಲ್ಲಿದ್ದ ಸೀತೆಯನ್ನು ಅವರೆಲ್ಲರನ್ನೂ ಸಂಹ ರಿಸಿ ಕರೆತಂದ ಬಳಿಕ ರಾಕ್ಷಸರ ವಶದಲ್ಲಿದ್ದಳೆಂಬ ಕಾರಣದಿಂದ ನೀನೀಗ ಅವಳನ್ನು ಪರಿತ್ಯಜಿಸುತ್ತಿರುವೆ. ಇದು ಸಾಧುವಾಗಿ ಕಾಣುವುದಿಲ್ಲ. ಹಿಂದಿನ ದನ್ನು ಜ್ಞಾಪಿಸಿಕೊ. ಚಿತೆಯನ್ನು ಹೊತ್ತಿಸಿದ್ದಾಯಿತು. ಜ್ವಾಲೆಯು ಆಕಾಶ ವನ್ನು ವ್ಯಾಪಿಸುತ್ತಿದ್ದಿತು. ಸಾಧ್ವಿಯಾದ ಸೀತಾದೇವಿಯು ಅಗ್ನಿಪ್ರವೇಶ ಮಾಡಿದಳು. ಆ ಸಮಯದಲ್ಲಿ ವಿಮಾನಾರೂಢನಾಗಿ ನಮ್ಮ ತಂದೆಯು ಬಂದು 'ರಾಘವ! ಪತಿವ್ರತೆಯಾದ ಈ ಸೀತೆಯು ಪರಮಪಾವನಳು. ಇವಳಿಂದ ನಮ್ಮ ಕುಲವೆಲ್ಲವೂ ಪವಿತ್ರವಾಗಿದೆ. ನಮ್ಮ ಕುಲದಲ್ಲಿ ಪುತ್ರ

ಶೋಕದಿಂದ ಮೃತರಾದವೆಲ್ಲರಿಗೂ ಉತ್ತಮಗತಿಯುಂಟಾಗಿದೆ'–ಎಂದು ಹೇಳಿದನು. ಅಣ್ಣ! ಇದನ್ನು ನೀನು ಮರೆತೆಯಾ? ಆ ಸಮಯದಲ್ಲಿ ಬ್ರಹ್ಮಾದಿದೇವತೆಗಳೂ ನಿನಗೆ ಹೇಳಿದರು :

ರಾಘವ! ಸೀತೆಯು ಅಗ್ನಿಶುದ್ಧಳಾಗಿ ಮೊಗ್ಗಿನ ದಂಡೆಯಂತಿರುವಳು. ದೇವತೆಗಳ ಆ ಮಾತನ್ನಾದರೂ ಜ್ಞಾಪಿಸಿಕೋ. ಈ ಸಮಯದಲ್ಲಿ ನಿನ್ನ ಮನಸ್ಸು ಅತ್ಯಂತಕಠಿಣವಾಗಿರುವಂತೆ ಕಾಣುತ್ತಿದೆ."

ಶ್ರೀರಾಮನು ಉತ್ತರಿಸಿದನು :

"ಭರತ! ನೀನು ಹೇಳುತ್ತಿರುವುದು ಸತ್ಯ. ಜಾನಕಿಯು ಪರಿಶುದ್ಧಳು. ಆದರೂ ಲೋಕಾಪವಾದವೆಂಬುದು ಸಹಿಸಿಕೊಳ್ಳಲು ಅಶಕ್ಯವಾದುದು. ಅದು ರಾಜರ ಯಶಸ್ಸನ್ನು ಹಾಳುಮಾಡಿಬಿಡುತ್ತದೆ. ಕೀರ್ತಿಹೀನರಾಗಿ ಬದುಕುವವರು ಸತ್ತಂತೆಯೇ ಸರಿ. ಲೋಕದಲ್ಲಿ ಪುರೂರವ, ಹರಿಶ್ಚಂದ್ರ, ನಹುಷ, ಪೃಥು-ಮೊದಲಾದ ರಾಜಶ್ರೇಷ್ಠರು ಪ್ರಖ್ಯಾತರಾಗಿ ಯಶಸ್ಸನ್ನು ಪಡೆದಿರುವರು. ಮಾಂಧಾತ, ಸಗರ, ಅಂಬರೀಷ, ಭಗೀರಥ, ಋತುಪರ್ಣ, ನಳ-ಇವರೇ ಮುಂತಾದ ರಾಜರು ತಮ್ಮ ಕೀರ್ತಿಯನ್ನು ದಿಗಂತದವರೆಗೂ ಬೆಳಗಿದರು. ಮನುಷ್ಯರಿಗೆ ಕೀರ್ತಿಗೆ ಸಮನಾದುದು ಯಾವುದೂ ಇಲ್ಲ. ಕೀರ್ತಿಯಿಂದಲೇ ಪಾಪಪರಿಹಾರವಾಗುತ್ತದೆ. ಪುಣ್ಯಪ್ರಾಪ್ತಿಯಾಗುತ್ತದೆ. ಸ್ವರ್ಗವೇ ಮೊದಲಾದ ಪುಣ್ಯಲೋಕಗಳೂ ಲಭಿಸುತ್ತವೆ. ಲೋಕದಲ್ಲಿ ಯಾವನ ಅಪಕೀರ್ತಿಯು ಜನರಲ್ಲಿ ಹರಡುವುದೋ ಅವನ ಜನ್ಮವೂ, ಜೀವಿತವೂ ವ್ಯರ್ಥವೇ ಸರಿ. ಒಂದು ಮುಹೂರ್ತಕಾಲವಾದರೂ ಸದಾಚಾರಸಂಪನ್ನನೆಂದೆನಿಸಿಕೊಂಡು ಬದುಕಿದ್ದರೆ ಸಾಕು. ಅಪಕೀರ್ತಿಯನ್ನು ಪಡೆದು ಯುಗಾಂತದವರೆಗೆ ಜೀವಿಸಿದರೂ ಪ್ರಯೋಜನವಿಲ್ಲ. ಕಾಗೆ-ಗೂಬೆ ಮೊದಲಾದ ಹಕ್ಕಿಗಳೂ ಬಹಳ ಕಾಲ ಬದುಕಿರುವುವು. ಅದರಿಂದೇನು ಫಲ? ಕೀರ್ತಿಯನ್ನು ಪಡೆಯದವನ ಬಾಳೂ ಹಾಗೆಯೇ ಸರಿ. ಪ್ರಾಣಾಪ್ತರೇ ಆಗಿದ್ದರೂ ಅವರಿಂದ ಅಪಯಶಸ್ಸು ಉಂಟಾದರೆ ಪತ್ನೀ-ಪುತ್ರರೆಂಬ ವಿವೇಚನೆಯೇ ಇಲ್ಲದೇ ಅವರನ್ನು ತ್ಯಜಿಸಬೇಕಾಗುತ್ತದೆ. ಪೂರ್ವದಲ್ಲಿ ಶಿಬಿಯು ತನ್ನ ಮಾತನ್ನುಳಿಸಿಕೊಂಡು ಕೀರ್ತಿಯನ್ನು ಸಂಪಾದಿಸುವ ಸಲುವಾಗಿ ಇಂದ್ರನಿಗೆ ತನ್ನ ದೇಹದ ಮಾಂಸವನ್ನೇ ಸಮರ್ಪಿಸಿದ

ನೆಂಬುದು ಲೋಕಪ್ರಸಿದ್ಧವಾಗಿದೆ. ಜೀಮೂತವಾಹನನು ಗರುಡನಿಗೆ ತನ್ನ ಪ್ರಾಣಗಳನ್ನೇ ಅರ್ಪಿಸಿದನು. ದಧೀಚಿಯು ತನ್ನ ಬೆನ್ನಿನ ಮೂಳೆ ಯನ್ನೇ ಕೊಟ್ಟು ಕೀರ್ತಿಮಂತನಾದನು. ಆದುದರಿಂದ ನಾನೀಗ ಹಾವು ಪೊರೆಯನ್ನು ಕಳಚಿಹಾಕುವಂತೆ–ಸೀತೆಯನ್ನು ಪರಿತ್ಯಜಿಸುವೆನು. ಭರತ! ನಾನು ಬದುಕಿರಬೇಕೆಂಬ ಅಪೇಕ್ಷೆಯು ನಿನಗಿದ್ದ ಪಕ್ಷದಲ್ಲಿ ನನ್ನ ಮಾತಿಗೆ ನೀನು ಬದಲು ಮಾತನಾಡಬಾರದು.”

ಶ್ರೀರಾಮನು ಹೀಗೆ ಹೇಳಿದರೂ ಲಕ್ಷ್ಮಣನಿಗೆ ದುಃಖವನ್ನೂ ಕೋಪ ವನ್ನೂ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ದುಃಖದಿಂದ ಬಿಸಿಯಾದ ಕಂಬನಿಗಳನ್ನು ಸುರಿಸುತ್ತಾ ಅಬ್ಬರಿಸಿ ಹೇಳಿದನು :

“ಅಣ್ಣ! ಲೋಕಾಪವಾದಕ್ಕಾಗಿ ಪರಮಪಾವನೆಯಾದ ಸೀತೆಯನ್ನು ಬಿಡುವುದೇ? ಸೀತೆಯನ್ನು ದೂಷಿಸುವ ಪಾಪಿಗಳನ್ನು ನಾನು ಈಗಲೇ ಸಂಹರಿಸಿಬಿಡುವೆನು. ಯವನರು ವೇದವನ್ನು ದೂಷಿಸುವರೆಂದು ಬ್ರಾಹ್ಮಣರು ವೇದಗಳನ್ನು ತ್ಯಾಗಮಾಡುವರೇ? ಈ ವಿಷಯವನ್ನು ಪುನಃ ವಿಚಾರ ಮಾಡಿ ನೋಡಣ್ಣ!”

ಸೀತೆಯನ್ನು ಯಾವುದೇ ಕಾರಣದಿಂದಲೂ ಪರಿತ್ಯಜಿಸಬಾರದೆಂಬ ಅಭಿಪ್ರಾಯವನ್ನೇ ಶತ್ರುಘ್ನನೂ ಸೂಚಿಸಿದನು. ಶ್ರೀರಾಮನು ಅನುಜರ ಮಾತುಗಳನ್ನು ಕೇಳಿದನಂತರ ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಪುನರುಚ್ಚರಿಸಿದನು :

“ಅನುಜರೇ! ನಾನು ಲೋಕಾಪವಾದದ ಭೀತಿಯಿಂದ ಪ್ರಾಣವನ್ನೇ ತೊರೆದೇನು! ನಿಮ್ಮೆಲ್ಲರನ್ನೂ ಪರಿತ್ಯಾಗ ಮಾಡಿಯೇನು, ಹೀಗಿರುವಾಗ ಸೀತೆಯ ವಿಷಯದಲ್ಲಿ ಹೇಳುವುದೇನಿದೆ? ಈ ಸಮಯದಲ್ಲಿ ಅವಳನ್ನು ಪರಿತ್ಯಾಗಮಾಡುವುದು ಅನಿವಾರ್ಯವಾಗಿದೆ.”

ಶ್ರೀರಾಮನ ಆ ಮಾತನ್ನು ಕೇಳಿ ಭರತ-ಶತ್ರುಘ್ನರು ತಮ್ಮ ಮನೆಗಳಿಗೆ ತೆರಳಿದರು. ಲಕ್ಷ್ಮಣನೊಬ್ಬನೇ ಶ್ರೀರಾಮನ ಸಮೀಪದಲ್ಲಿ ಉಳಿದು ಕೊಂಡನು. ಅವನೊಬ್ಬನೇ ಬಳಿಯಲ್ಲಿರುವುದನ್ನು ಗಮನಿಸಿ ಶ್ರೀರಾಮನು

ಸೀತೆಯನ್ನು ಭಾಗೀರಥೀನದಿಯ ತೀರದಲ್ಲಿ ಬಿಟ್ಟುಬರುವಂತೆ ಲಕ್ಷ್ಮಣನಿಗೆ ಆಜ್ಞೆಮಾಡಿದನು. ಲಕ್ಷ್ಮಣನಿಗೆ ಮನಸ್ಸಿಲ್ಲದಿದ್ದರೂ ರಾಮನ ಆಜ್ಞೆಯನ್ನು ಮೀರಲು ಸಾಧ್ಯವಾಗಲಿಲ್ಲ. ಸಾರಥಿಗೆ ರಥವನ್ನು ತರಲು ಹೇಳಿ ರಥವು ಸಿದ್ಧವಾಗಿ ಬಂದನಂತರ ಅದರಲ್ಲಿ ಕುಳಿತು ಸೀತಾದೇವಿಯ ಅರಮನೆಗೆ ಹೋಗಿ ನಮಸ್ಕರಿಸಿದನು. ತನ್ನ ಬಾಡಿದ ಮುಖವನ್ನು ಅವಳಿಗೆ ತೋರಲಿಲ್ಲ. ಆದರೆ ಸೀತಾದೇವಿಯು ಹಿರಿಹಿಗ್ಗಿದಳು. ತನ್ನ ಪತಿಯು ತನ್ನ ಬಯಕೆಯನ್ನು ನಡೆಸಿಕೊಡಲು ಲಕ್ಷ್ಮಣನನ್ನು ಕಳುಹಿಸಿರುವನೆಂದು ಭಾವಿಸಿದಳು. ಹಾಗೆಯೇ ತನ್ನ ಅಭಿಪ್ರಾಯವನ್ನೂ ವ್ಯಕ್ತಪಡಿಸಿದಳು :

"ಲಕ್ಷ್ಮಣ! ನನ್ನ ಪತಿಯು ನನ್ನ ಬಯಕೆಯನ್ನು ಇಂದೇ ಈಡೇರಿಸಿ ಕೊಡುವುದಾಗಿ ಹೇಳಿದ್ದನು. ಅದರಂತೆಯೇ ನಿನ್ನನ್ನು ಕಳುಹಿಸಿರುವನೆಂದು ಭಾವಿಸುತ್ತೇನೆ. ಮುನಿಗಳಿಗೂ, ಮುನಿಪತ್ನಿಯರಿಗೂ ಕೊಡುವುದಕ್ಕಾಗಿ ವಿಚಿತ್ರವಸ್ತುಗಳನ್ನೂ ಸುಗಂಧದ್ರವ್ಯಗಳನ್ನೂ ತೆಗೆದುಕೊಳ್ಳುವೆನು."

ಲಕ್ಷ್ಮಣನು ಸೀತೆಯ ಮಾತನ್ನು ಕೇಳಿ ಮನನೊಂದು ಆಕೆಗೆ ಕಂಡರೂ ಕಾಣದಂತೆ ಕಣ್ಣೀರು ಸುರಿಸುತ್ತಾ–'ಹಾಗೆಯೇ ಮಾಡು. ಬೇಕಾದ ವಸ್ತುಗಳನ್ನು ತೆಗೆದುಕೋ'–ಎಂದನು.

ಬಳಿಕ ಸೀತೆಯು ದುಕೂಲವಸ್ತ್ರಗಳನ್ನೂ, ಕೃಷ್ಣಾಜಿನಗಳನ್ನೂ, ಬಗೆ-ಬಗೆಯ ಭಕ್ಷ್ಯಗಳನ್ನೂ, ರತ್ನಖಚಿತವಾದ ಶ್ರೀರಾಮನ ಪಾದುಕೆ ಗಳನ್ನೂ ರಥದಲ್ಲಿಟ್ಟುಕೊಂಡು ಅತ್ತೆಯ ಅನುಮತಿಯನ್ನು ಪಡೆಯಲು ಕೌಸಲ್ಯಾದೇವಿಯ ಅರಮನೆಗೆ ಹೋದಳು. ಕೌಸಲ್ಯೆಯನ್ನು ಕಂಡು ನಮಸ್ಕರಿಸಿ ಹೇಳಿದಳು :

"ತಾಯೇ! ಭಾಗೀರಥೀನದಿಯ ತೀರದಲ್ಲಿ ವಿಹರಿಸಬೇಕೆಂದು ನನಗೆ ಬಯಕೆಯಾಗಿದೆ. ನನ್ನ ಮೈದುನನಾದ ಲಕ್ಷ್ಮಣನು ನನ್ನನ್ನು ಕರೆದೊಯ್ಯಲು ಬಂದಿರುವನು. ನಿನ್ನ ಅನುಜ್ಞೆಯನ್ನು ಪಡೆಯುವ ಸಲುವಾಗಿ ಬಂದಿರುವೆನು."

"ಕೋಮಲಾಂಗಿಯೇ! ಬಹಳ ಕಾಲಾನಂತರ ಸಿಕ್ಕಿರುವ ರಾಜ್ಯ

ಸುಖವನ್ನು ಬಿಟ್ಟು ಮುಳ್ಳುಗಿಡಗಳಿಂದಲೂ ಹಂದಿ-ಹುಲಿ-ಸಿಂಹ–ಇವೇ ಮೊದಲಾದ ಕಾಡಿನ ಪ್ರಾಣಿಗಳಿಂದಲೂ ತುಂಬಿರುವ, ಗಾಳಿ-ಬಿಸಿಲು-ಮಳೆಗಳ ಬಾಧೆಯಿಂದ ಕೂಡಿರುವ, ಕಠಿಣಹೃದಯರಾದವರಿಗೆ ಮಾತ್ರವೇ ಪ್ರವೇಶಕ್ಕೆ ಯೋಗ್ಯವಾಗಿರುವ ಅರಣ್ಯಕ್ಕೆ ನೀನೊಬ್ಬಳೇ ಹೇಗೆ ಹೋಗುವೆ? ಶ್ರೀರಾಮನನ್ನು ಬಿಟ್ಟು ನೀನು ಕಾಡಿಗೆ ಹೋಗುವುದು ಖಂಡಿತವಾಗಿಯೂ ಉಚಿತವಾಗಿ ಕಾಣುವುದಿಲ್ಲ. ಅರಮನೆಯಲ್ಲಿದ್ದರೂ ಸುಕೋಮಲೆಯಾದ ನಿನ್ನ ತುಟಿಗಳು ಪ್ರಾತಃಕಾಲದಲ್ಲಿಯೇ ಒಣಗುತ್ತವೆ. ಇಂತಹ ಕೋಮಲಾಂಗಿಯಾದ ನೀನು ಖಂಡಿತವಾಗಿಯೂ ಕಾಡಿಗೆ ಹೋಗಬೇಡ."

"ನನ್ನ ಪತಿಯು ಕಾಡಿನಲ್ಲಿದ್ದಾಗ ಸರ್ವದಾ ಶತ್ರುಗಳ ವಿನಾಶ ದಲ್ಲಿಯೇ ನಿರತನಾಗಿರುತ್ತಿದ್ದನು. ಯುದ್ಧದಲ್ಲಿ ಮೃತರಾಗಿದ್ದ ಅನೇಕ ಕೋಟಿ ಕಪಿಗಳನ್ನು ತನ್ನ ಪ್ರಭಾವದಿಂದ ಬದುಕಿಸಿದನು. ಅವನನ್ನು ನೆನೆದ ಮಾತ್ರದಿಂದಲೇ ಕಾಡಿನಲ್ಲಿ ನನ್ನ ಕಷ್ಟಗಳೆಲ್ಲವೂ ದೂರವಾಗುವುವು. ರಾಮನಾಮವನ್ನು ಸರ್ವದಾ ಜಪಿಸುತ್ತಿರುವ ನನ್ನ ತುಟಿಗಳು ಎಂದಾದರೂ ಒಣಗುವುವೇ? ನಾನು ಕರಣತ್ರಯಗಳಿಂದಲೂ ನಿಮ್ಮ ಸೇವೆಯನ್ನು ಮಾಡಿದ್ದೇನೆ. ಈ ಕಾರಣದಿಂದಲೂ ನನಗೆ ಕಾಡಿನಲ್ಲಿ ಯಾವ ವಿಧವಾದ ಉಪದ್ರವವೂ ಉಂಟಾಗುವುದಿಲ್ಲ. ನಿಮಗೆ ನಮಸ್ಕರಿಸುವೆನು. ನನಗೆ ಆಶೀರ್ವಾದಮಾಡಿರಿ."-ಎಂದು ಹೇಳಿ ಸೀತೆಯು ಕೌಸಲ್ಯಾದೇವಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದು ಕೈಕೇಯೀ-ಸುಮಿತ್ರೆಯರ ಅರಮನೆಗೂ ಹೋಗಿ ಅವರಿಗೂ ನಮಸ್ಕರಿಸಿ ಅಪ್ಪಣೆಯನ್ನು ಪಡೆದು ಲಕ್ಷ್ಮಣನಿದ್ದೆಡೆಗೆ ತೆರಳಿದಳು.

ಲಕ್ಷ್ಮಣನು ರಥನ್ನು ಸಿದ್ಧಪಡಿಸಿದನು. ಸೀತೆಯು ಅತ್ಯಾನಂದದಿಂದಲೇ ರಥವನ್ನು ಹತ್ತಿದಳು. ಲಕ್ಷ್ಮಣನು ಬಹಳ ದುಃಖದಿಂದಲೇ ಸಾರಥಿಗೆ ರಥವನ್ನು ನಡೆಸುವಂತೆ ಹೇಳಿದನು. ಅರಣ್ಯದ ಕಡೆಗೆ ರಥವು ಹೊರಟಿತು.

ಸೀತೆಯು ಅರಣ್ಯಕ್ಕೆ ಪ್ರಯಾಣಮಾಡುತ್ತಿದ್ದಾಗ ಅಯೋಧ್ಯಾಪಟ್ಟಣವೇ ದುಃಖಾಕ್ರಾಂತವಾಗಿರುವಂತೆ ಕಂಡುಬಂದಿತು. ಪ್ರಯಾಣದ ಹಾದಿಯಲ್ಲಿ ಅನೇಕವಿಧವಾದ ಅಪಶಕುನಗಳೂ ಕಾಣಿಸಿಕೊಂಡುವು. ನರಿಗಳು

ಎದುರಿಗೇ ಬಂದು ಭಯಂಕರವಾಗಿ ಊಳಿಡತೊಡಗಿದುವು. ಸೀತಾದೇವಿಯ ಬಲಗಣ್ಣು ಅದುರತೊಡಗಿತು. ಇಂತಹ ದುಶ್ಶಕುನಗಳನ್ನು ಕಂಡು ವಿಸ್ಮಿತಳಾದ ಸೀತಾದೇವಿಯು ಲಕ್ಷ್ಮಣನಿಗೆ ಹೇಳಿದಳು :

"ಲಕ್ಷ್ಮಣ! ಈ ದುರ್ನಿಮಿತ್ತಗಳನ್ನು ನೋಡು! ನರಿಗಳೂ ಇತರ ಮೃಗಗಳೂ ದಾರಿಗೆ ಅಡ್ಡಲಾಗಿ ನಿಂತು ಭಯಂಕರವಾಗಿ ಕೂಗಿಕೊಳ್ಳುತ್ತಿವೆ. ಶ್ರೀರಾಮನಿಗೆ ಮಂಗಳವಾಗಲಿ. ಕೌಸಲ್ಯೆಗೆ ಹರ್ಷಪ್ರದನಾದ ಶ್ರೀರಾಮನಿಗೆ ಶುಭವಾಗಲಿ. ಅವನು ದೀರ್ಘಾಯುವಾಗಲಿ. ಶಾಶ್ವತವಾಗಿ ರಾಜ್ಯವನ್ನಾಳಲಿ. ಸರ್ವರಿಗೂ ಸುಖಪ್ರದನಾಗಲಿ."

ರಥವು ಮುಂದೆ ಸಾಗಿತು. ಶ್ರೀರಾಮನ ಕೀರ್ತಿಯಂತೆ ಶುಭ್ರವರ್ಣದಿಂದ ಕೂಡಿದ ಪ್ರವಾಹದಿಂದ ಜಗತ್ತಿನ ಪಾಪಗಳನ್ನು ಸತತವಾಗಿ ನಿವಾರಣೆ ಮಾಡುತ್ತಿದ್ದ ದೇವನದಿಯಾದ ಗಂಗೆಯನ್ನು ನೋಡಿ ಸೀತೆಯು ತನ್ನ ಜನ್ಮವು ಸಫಲವಾಯಿತೆಂದು ಭಾವಿಸಿದಳು.

ಲಕ್ಷ್ಮಣನು ರಥದಿಂದಿಳಿದು ನಾವೆಯೊಳಗೆ ಸೀತೆಯನ್ನು ಕುಳ್ಳಿರಿಸಿ ತಾನೂ ಹತ್ತಿ ಭಾಗೀರಥೀನದಿಯ ಮತ್ತೊಂದು ದಡವನ್ನು ಸೇರಿದನು. ಅನಂತರ ಇಬ್ಬರೂ ನಾವೆಯಿಂದ ಇಳಿದು ಗಂಗೆಯಲ್ಲಿ ಸ್ನಾನಮಾಡಿ ವಸ್ತ್ರಗಳನ್ನುಟ್ಟು ಮುಂದೆ ಪ್ರಯಾಣಮಾಡಿ ಅರಣ್ಯದ ಮಧ್ಯಭಾಗಕ್ಕೆ ಹೋದರು. ನಂದಿ, ಕಗ್ಗಲಿ, ನೆಲ್ಲಿ-ಇವೇ ಮುಂತಾದ ವೃಕ್ಷಗಳಿಂದಲೂ ಕ್ರೂರವಾದ ಮೃಗ-ಪಕ್ಷಿಗಳಿಂದಲೂ ಕೂಡಿದ್ದ ಆ ಅರಣ್ಯವು ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ಹಳೆಯದಾಗಿದ್ದ ಅಶ್ವತ್ಥವೃಕ್ಷದ ಪೊಟರೆಗಳಲ್ಲಿ ಕಾಗೆಗಳು 'ಕಾ ಕಾ' ಎಂದು ಕೂಗಿಕೊಳ್ಳುತ್ತಿದ್ದುವು. ಸರ್ಪಗಳು ಫೂತ್ಕಾರಮಾಡುತ್ತಿದ್ದುವು. ಹುಲಿಗಳು ಮೃಗಗಳನ್ನು ಹಿಡಿಯಲು ಸಂಚುಹಾಕಿಕೊಂಡು ಯೋಗಿಗಳಂತೆ ನಿಶ್ಚಲವಾಗಿ ಕುಳಿತಿದ್ದುವು. ಅಂತಹ ಘೋರಾರಣ್ಯವನ್ನು ಕಂಡ ಸೀತಾದೇವಿಯು ಭಯಭೀತಳಾಗಿ ಲಕ್ಷ್ಮಣನಿಗೆ ಹೇಳಿದಳು :

"ಲಕ್ಷ್ಮಣ! ಇಲ್ಲಿ ನಾನು ಋಷ್ಯಾಶ್ರಮಗಳನ್ನೂ, ಸಾಧ್ವಿಯರಾದ ತಪಸ್ವಿನಿಯರನ್ನೂ, ಮೌಂಜಿ-ಕೃಷ್ಣಾಜಿನಗಳನ್ನು ಧರಿಸಿ ಜಟಾಧಾರಿಗಳಾಗಿರುವ ಋಷಿಗಳನ್ನೂ, ಋಷಿಪುತ್ರರನ್ನೂ ಕಾಣುತ್ತಿಲ್ಲ. ಅಗ್ನಿಹೋತ್ರದ

ಹೊಗೆಯೂ ಕಾಣುತ್ತಿಲ್ಲ. ಎಲ್ಲೆಲ್ಲಿ ನೋಡಿದರೂ ಗಹನವಾದ ವೃಕ್ಷಗಳಿಂದ ತುಂಬಿರುವ ಅರಣ್ಯವೇ ಕಾಣಿಸುತ್ತಿದೆ. ಬರೀ ಪಕ್ಷಿಗಳ ಧ್ವನಿಯು ಕೇಳಿ ಬರುತ್ತಿರುವುದೇ ಹೊರತು ವೇದಪಾಠವು ಕೇಳಿಬರುತ್ತಿಲ್ಲ. ಶ್ರೀರಾಮನನ್ನು ಬಿಟ್ಟು ಬಂದಿರುವ ನನಗೆ ವೇದಪಾಠವು ಹೇಗೆ ತಾನೇ ಕೇಳಿಸುವುದು? ಮುನಿಗಳೂ, ಮುನಿಪತ್ನಿಯರೂ, ಮುನಿಕುಮಾರರೂ ಈ ಕಾರಣದಿಂದಲೇ ನನಗೆ ಕಾಣಿಸುತ್ತಿಲ್ಲವೆಂದು ತೋರುತ್ತದೆ. ಪರಿಶುದ್ಧವಾದ ಆಶ್ರಮವಾಸಿಗಳು ಶುದ್ಧಾತ್ಮರಿಗೆ ಮಾತ್ರವೇ ದರ್ಶನವನ್ನೀಯುತ್ತಾರೆ. ಶ್ರೀರಾಮನಿಂದ ರಹಿತಳಾಗಿರುವ ನಾನು ಶುದ್ಧಾತ್ಮಳಾಗಿಲ್ಲ. ಈ ಕಾರಣದಿಂದಲೇ ಅವರು ನನಗೆ ಕಾಣಿಸುತ್ತಿಲ್ಲ."

ಸೀತಾದೇವಿಯ ಆ ಮಾತನ್ನು ಕೇಳಿ ಲಕ್ಷ್ಮಣನು ದುಃಖಾಕ್ರಾಂತನಾಗಿ ಕಣ್ಣೀರು ಸುರಿಸುತ್ತಾ ಹೇಳಿದನು :

"ದೇವಿ! ಋಷ್ಯಾಶ್ರಮಗಳು ಇನ್ನೂ ದೂರದಲ್ಲಿವೆ. ಮೆಲ್ಲ-ಮೆಲ್ಲನೆ ಹೆಜ್ಜೆಯಿಡು. ಶ್ರೀರಾಮನು ಲೋಕಾಪವಾದಕ್ಕಾಗಿ ನಿನ್ನನ್ನು ಪರಿತ್ಯಜಿಸಿರುವನು. ಆದ ಕಾರಣ ನಿನ್ನನ್ನು ಕಾಡಿನಲ್ಲಿ ಬಿಟ್ಟುಬರುವಂತೆ ನನಗೆ ಆದೇಶವನ್ನಿತ್ತಿರುವನು. ಇದೇ ಸಮಯಕ್ಕೆ ಸರಿಯಾಗಿ ನಿನಗೆ ಗಂಗಾನದಿಯನ್ನು ನೋಡಬೇಕೆನ್ನುವ ಬಯಕೆಯೂ ಉಂಟಾಯಿತು. ಈಗ ನಾನೇನು ಮಾಡಲಿ?"

ಲಕ್ಷ್ಮಣನ ಮಾತನ್ನು ಕೇಳುತ್ತಲೇ ಗಗನದಿಂದ ರೋಹಿಣೀನಕ್ಷತ್ರವು ಕೆಳಕ್ಕೆ ಬೀಳುವಂತೆ–ಸೀತಾದೇವಿಯು ಮೂರ್ಛಿತಳಾಗಿ ಬಿದ್ದಳು. ಕತ್ತರಿಸಿದ ಬುಡವುಳ್ಳ ಬಳ್ಳಿಯಂತೆಯೂ, ಹಾವುಕಚ್ಚಿದ ಕನ್ಯೆಯಂತೆಯೂ ನಿಶ್ಚೇತನಳಾಗಿ ಬಿದ್ದ ಸೀತಾದೇವಿಯನ್ನು ನೋಡಿ ಭಯಗೊಂಡ ಲಕ್ಷ್ಮಣನು ಆಕೆಯ ಮುಖಕ್ಕೆ ತನ್ನ ಕೈಯನ್ನೇ ನೆರಳಾಗುವಂತೆ ಹಿಡಿದು ಮತ್ತೊಂದು ಕೈಯಿಂದ ವಸ್ತ್ರದಿಂದಲೇ ಗಾಳಿಯನ್ನು ಬೀಸುತ್ತಾ ಗದ್ಗದಕಂಠದಿಂದ ಹೇಳಿದನು :

"ನಾನು ಶ್ರೀರಾಮನ ಸೇವೆಯನ್ನು ಮಾಡಿರುವುದು ಸತ್ಯವಾಗಿದ್ದಲ್ಲಿ ಜಾನಕಿಯು ಬೇಗನೇ ಎಚ್ಚರಗೊಳ್ಳಲಿ."

ಲಕ್ಷ್ಮಣನು ಹೀಗೆ ಹೇಳುತ್ತಿದ್ದಂತೆಯೇ ಸೀತಾದೇವಿಯು ಎಚ್ಚರ ಗೊಂಡು ಕಣ್ಣುಗಳನ್ನು ತೆರೆಯುತ್ತಾ ಹೇಳಿದಳು :

"ಲಕ್ಷ್ಮಣ! ನೀನು ಹಿಂದೆ ನನ್ನನ್ನು ಜನಸ್ಥಾನದಲ್ಲಿ ಬಿಟ್ಟು ಹೋದಂತೆ ಈಗಲೂ ಈ ಘೋರವಾದ ಕಾಡಿನಲ್ಲಿ ನನ್ನನ್ನು ಬಿಟ್ಟುಹೋಗುವೆಯಾ? ದಂಡಕಾರಣ್ಯದಲ್ಲಿ ವಿರಾಧನ ಕೈಗೆ ಸಿಕ್ಕಿದ್ದ ನನ್ನನ್ನು ನೀನು ರಕ್ಷಿಸಿದೆ. ನನಗಾಗಿ ಸುಂದರವಾದ ಪರ್ಣಶಾಲೆಯನ್ನು ನಿರ್ಮಿಸಿ ಶುದ್ಧವಾದ ಕಂದ-ಮೂಲಗಳಿಂದ ನನ್ನನ್ನು ಉಪಚರಿಸುತ್ತಿದ್ದೆ. ನನ್ನ ಮುಂಭಾಗದಲ್ಲಿ ರಾಮನೂ ಹಿಂಭಾಗದಲ್ಲಿ ನೀನೂ ಇರುತ್ತಿದ್ದು ನನ್ನನ್ನು ಸರ್ವಕಾಲದಲ್ಲಿಯೂ ರಕ್ಷಿಸುತ್ತಿದ್ದಿರಿ. ಇಂದು ನಾನು ಯಾವುದೇ ಅಪರಾಧವನ್ನು ಮಾಡದಿದ್ದರೂ ರಾಜೀವಲೋಚನನಾದ ಶ್ರೀರಾಮನು ನನ್ನನ್ನು ಪರಿತ್ಯಜಿಸಿರುವನು. ಇದರಿಂದ ನಾನು ಬಹಳ ದುಃಖಿತಳಾಗಿದ್ದೇನೆ. ನನ್ನ ಪತಿಗೆ ನಾನು ಕರಣತ್ರಯಗಳಿಂದಲೂ ಯಾವ ಅಪರಾಧವನ್ನೂ ಮಾಡಿರುವುದಿಲ್ಲ. ಸುಮ ನೋಹರವಾದ ಅವನ ಪಾದಗಳನ್ನು ನಾನು ಸರ್ವದಾ ಮನಸ್ಸಿನಲ್ಲಿ ಧ್ಯಾನಿಸುತ್ತಲೇ ಇರುವೆನು. ವಿಶಾಲಾಕ್ಷನಾದ, ಚಂದ್ರಮುಖನಾದ, ಕುಂಡಲಗಳಿಂದ ಪ್ರಕಾಶಿಸುವ ಶ್ರೀರಾಮನನ್ನು ನಾನು ಈ ಅರಣ್ಯದಲ್ಲಿ ಹೇಗೆ ಕಾಣಲಿ?

ಕಾಕಪಕ್ಷಧರನಾದ ಶ್ರೀರಾಮನು ನಿನ್ನೊಡನೆಯೂ ವಿಶ್ವಾಮಿತ್ರರೊಡ ನೆಯೂ ಮಿಥಿಲೆಗೆ ಬಂದು ಶೈವಧನುಸ್ಸನ್ನು ಮುರಿದು ನನ್ನ ಪಾಣಿಗ್ರಹಣ ಮಾಡಿದನು. ನನಗಾಗಿ ಕಪಿಗಳ ಸ್ನೇಹವನ್ನು ಮಾಡಿದನು. ನನ್ನ ವಿರಹವನ್ನು ತಾಳಲಾರದೇ ಅರಣ್ಯದಲ್ಲಿರುವ ವೃಕ್ಷಗಳನ್ನೇ ಆಲಿಂಗಿಸಿಕೊಳ್ಳುತ್ತಿದ್ದನು. ಅಂತಹ ಶ್ರೀರಾಮನು ಈಗ ನನ್ನನ್ನು ಪರಿತ್ಯಜಿಸಿದ್ದಾನೆ. ಇದು ನಿಶ್ಚಯವಾಗಿಯೂ ಜನ್ಮಾಂತರದ ಕರ್ಮವಿಪಾಕದ ಫಲವೇ ಆಗಿರಬಹುದು. ಇದರಲ್ಲಿ ಯಾರೂ ದೋಷಿಗಳಲ್ಲ. ಲಕ್ಷ್ಮಣ! ನೀನು ಪರಾಧೀನನಾಗಿರುವು ದರಿಂದ ಬೇಗನೆ ಅಯೋಧ್ಯೆಗೆ ಹೊರಟುಹೋಗು. ಗರ್ಭದಲ್ಲಿದ್ದಾಗಲೂ, ಲಂಕೆಯಲ್ಲಿದ್ದಾಗಲೂ ಸಂರಕ್ಷಿಸಿದ ದೈವವೇ ಈಗಲೂ ನನ್ನನ್ನು ಸಂರಕ್ಷಿಸು ವುದು. ನನಗಾಗಿ ನೀನು ದುಃಖಿಸುವ ಕಾರಣವಿಲ್ಲ. ಕಾಡಿನಲ್ಲಿ ಅಲೆ ದಾಡುತ್ತಾ ಅವರ ಪಾದಸ್ಮರಣೆಮಾಡುತ್ತಿರುವೆನೆಂದು ನನ್ನ ಅತ್ತೆಯಾದ ಕೌಸಲ್ಯೆಗೆ ಹೇಳು. ವಿವೇಕಿಯಾಗಿದ್ದರೂ ಶ್ರೀರಾಮನು ನನ್ನನ್ನು ಕಾಡಿ

ಗಟ್ಟಿದನು. ಅದಿರಲಿ ; ಲಕ್ಷ್ಮಣ! ರಾಮನು ಈ ಕಾರ್ಯಕ್ಕೆ ಕರುಣಾಳುವಾದ ನಿನ್ನನ್ನು ಹೇಗೆ ನಿಯಮಿಸಿದನು? ಕಠಿಣಹೃದಯನೂ ಭ್ರಾತೃಘಾತುಕನೂ ಆದ ಸುಗ್ರೀವನನ್ನಾಗಲೀ, ಅಣ್ಣನಾದ ರಾವಣನಿಗೆ ದ್ರೋಹ ಬಗೆದ ವಿಭೀಷಣನನ್ನಾಗಲೀ ಕಳುಹಿಸಬಹುದಾಗಿದ್ದಿತು. ಯಾವನು ಯಾವ ಕಾರ್ಯದಲ್ಲಿ ಸಮರ್ಥನೋ–ಅಂತಹವನನ್ನು ಅಂತಹ ಕಾರ್ಯಕ್ಕೆ ನಿಯಮಿಸಬೇಕು. ಹೀಗಿರುವಾಗ ರಾಘವನು ಕರುಣಾಮೂರ್ತಿಯಾದ ನಿನ್ನನ್ನು ಇಂತಹ ಕ್ರೂರವಾದ ಕಾರ್ಯಕ್ಕೆ ನಿಯಮಿಸಿದುದು ಸರಿಯಲ್ಲ. ಹೇಗಾದರೂ ಆಗಲೀ-ನೀನು ದುಃಖಿಸಬೇಡ. ತಡಮಾಡಿ ಹೋದರೆ ನಿಮ್ಮಣ್ಣನು ನಿನ್ನ ಮೇಲೆಯೂ ಕೋಪಕೊಂಡಾನು. ಈಗಲೇ ನೀನು ಅಯೋಧ್ಯೆಗೆ ಹಿಂದಿರುಗು. ನಿನಗೆ ಮಂಗಳವಾಗಲಿ."

ಸೀತೆಯ ಮಾತನ್ನು ಕೇಳಿ ಲಕ್ಷ್ಮಣನು ಬಹಳವಾಗಿ ದುಃಖಿಸುತ್ತಾ ಅವಳನ್ನು ಪ್ರದಕ್ಷಿಣೆಮಾಡಿ ನಮಸ್ಕರಿಸಿ ಪುನಃ ಹೇಳಿದನು :

"ತಾಯೇ! ವನಾಭಿಮಾನೀದೇವತೆಗಳು ನಿನ್ನನ್ನು ರಕ್ಷಿಸಲಿ. ಶ್ರೀರಾಮನಿಗೆ ಅಧೀನನಾಗಿರುವ ನಾನಿನ್ನು ಹೊರಡುವೆನು."

ಲಕ್ಷ್ಮಣನ ಕಾಲುಗಳು ಮುನ್ನಡೆಯುತ್ತಿದ್ದರೂ ಮನಸ್ಸು ಮತ್ತು ಕಣ್ಣುಗಳು ಸೀತಾದೇವಿಯತ್ತಲೇ ಸರಿಯುತ್ತಿದ್ದುವು. ಸೀತಾದೇವಿಯು ಲಕ್ಷ್ಮಣನನ್ನೇ ನೋಡುತ್ತಾ ಸ್ತಬ್ಧಳಾಗಿ ನಿಂತಿದ್ದಳು. ಅವನು ಕಣ್ಮರೆಯಾದ ನಂತರ ಸೀತೆಯು ಪುನಃ ಮೂರ್ಛಿತಳಾಗಿ ಕೆಳಕ್ಕೆ ಬಿದ್ದಳು. ಲಕ್ಷ್ಮಣನು ಗಂಗಾನದಿಯನ್ನು ದಾಟಿ ಅಯೋಧ್ಯೆಗೆ ರಥದಲ್ಲಿ ತೆರಳಿದನು.

ಸ್ವಲ್ಪಹೊತ್ತಿನ ನಂತರ ಸೀತೆಯು ಎಚ್ಚರಗೊಂಡಳು. 'ನಾನು ಜನಕರಾಜನ ವಂಶದಲ್ಲಿ ಹುಟ್ಟಿದವಳು. ರಘುವಂಶಕ್ಕೆ ಸೇರಿದವಳು. ಪುರುಷೋತ್ತಮನಾದ ಶ್ರೀರಾಮನ ಧರ್ಮಪತ್ನಿಯು. ಇಂತಹ ನಾನು ಈ ಘೋರಾರಣ್ಯದಲ್ಲಿ ತ್ಯಜಿಸಲ್ಪಟ್ಟಿದ್ದೇನೆ. ನಾನೆಂತಹ ಪಾಪವನ್ನೆಸಗಿರಬಹುದು? ಅಯ್ಯೋ!' ಮುಂತಾಗಿ ಹೇಳಿಕೊಂಡು ಪರಿತಪಿಸಿದಳು. ಶೂನ್ಯವಾಗಿದ್ದ ದಿಕ್ಕುಗಳನ್ನು ಕಂಡು ಭಯಗೊಂಡವಳಾಗಿ ಪುನಃ ಮೂರ್ಛೆಹೋದಳು. ಸೀತಾದೇವಿಯು ವಿಲಪಿಸುತ್ತಿರುವುದನ್ನು ಕಂಡು ತಾವರೆಯ ದಂಟನ್ನು ತಿನ್ನು

ತ್ತಿದ್ದ ಹಂಸಪಕ್ಷಿಯೊಂದು ತಿನ್ನುವುದನ್ನು ಬಿಟ್ಟು ಭಯಂಕರವಾಗಿ ಧ್ವನಿ ಮಾಡಿತು. ಹುಲ್ಲಿನ ಚಿಗುರನ್ನು ತಿನ್ನುತ್ತಿದ್ದ ಜಿಂಕೆಗಳು ಸ್ತಬ್ಧವಾಗಿ ನಿಂತುವು. ನವಿಲುಗಳು ಕುಣಿಯುವುದನ್ನು ನಿಲ್ಲಿಸಿದುವು. ಪಕ್ಷಿಗಳು ಆಹಾರತಿನ್ನುವುದನ್ನು ಬಿಟ್ಟು ರೆಕ್ಕೆಗಳಿಂದ ಆಕೆಗೆ ನೆಳಲನ್ನುಂಟುಮಾಡಿ ದುವು. ಜಲಚರಪಕ್ಷಿಗಳು ಆಕೆಯ ಮೇಲೆ ನೀರು ಚಿಮುಕಿಸುತ್ತಿದ್ದುವು. ಚಮರೀಮೃಗಗಳು ಬಾಲಗಳಿಂದ ಗಾಳಿಬೀಸುತ್ತಿದ್ದುವು. ವಾಯುವು ನದಿಯ ಮೇಲೆ ಬೀಸುತ್ತಾ ಹೂಗಳನ್ನು ತಂದು ಸುವಾಸನೆಯಿಂದ ಕೂಡಿ ಆಕೆಯನ್ನು ಪೂಜಿಸುತ್ತಿದ್ದನು. ಮಂದಮಾರುತವು ಬೀಸುತ್ತಿರಲಾಗಿ ಮೂರ್ಛೆಯಿಂದ ಎಚ್ಚೆತ್ತ ಸೀತಾದೇವಿಯು ಹಲುಬತೊಡಗಿದಳು :

"ಅಯ್ಯೋ! ಪ್ರಾಣಗಳನ್ನಾದರೂ ತೊರೆದುಬಿಡೋಣವೆಂದರೆ ಭ್ರೂಣಹತ್ಯಾಪಾಪದ ಭಯವು ಪೀಡಿಸುತ್ತಿದೆಯಲ್ಲಾ! ಏನು ಮಾಡಲಿ! ಎಲ್ಲಿಗೆ ಹೋಗಲಿ! ನನ್ನನ್ನು ಈ ಗಹನವಾದ ಕಾಡಿನಲ್ಲಿ ಯಾರು ರಕ್ಷಿಸುವರು?"

ಮೆಲ್ಲನೆ ಮೇಲೆದ್ದು ಹೆಜ್ಜೆಯಿಡತೊಡಗಿದಳು. ಕ್ಷಣ-ಕ್ಷಣಕ್ಕೂ ತತ್ತರಿಸಿ ಬೀಳುತ್ತಿದ್ದಳು. ಚೂಪಾದ ಮುಳ್ಳುಗಳು ಕಾಲುಗಳಲ್ಲಿ ಹೊಕ್ಕು ಸುಕೋಮಲೆಯಾದ ಸೀತಾದೇವಿಗೆ ಅಪಾರವ್ಯಥೆಯನ್ನು ಉಂಟುಮಾಡುತ್ತಿ ದ್ದುವು. ಆಕೆಯ ಕಾಲುಗಳಲ್ಲಿ ರಕ್ತವು ಒಸರತೊಡಗಿತು. ಹೀಗೆ ದುಃಖಾ ಕ್ರಾಂತಳಾಗಿ ಸೀತಾದೇವಿಯು ಆ ಮಹಾರಣ್ಯದಲ್ಲಿ ತಡವರಿಸಿಕೊಂಡು ಮುಗ್ಗರಿಸಿಕೊಂಡು ನಡೆದು ಹೋಗುತ್ತಿದ್ದಾಗ ಶಿಷ್ಯರೊಡನಿದ್ದ ವಾಲ್ಮೀಕಿ ಮಹರ್ಷಿಗಳು ದುಃಖಪರಿತಪ್ತಳಾಗಿದ್ದ ಸೀತಾದೇವಿಯನ್ನು ಕಂಡರು.

ಅಲಕ್ಷ್ಯದಿಂದ ದೂಷಿತವಾದ ತಪಸ್ಸಿದ್ಧಿಯಂತೆ–ದುಃಖಿತೆಯೂ, ದೀನೆಯೂ ಆಗಿದ್ದ ಸೀತಾದೇವಿಯನ್ನು ನೋಡಿ ವಾಲ್ಮೀಕಿಗಳು ಪ್ರಶ್ನಿಸಿದರು :

"ಕಲ್ಯಾಣೀ! ನೀನು ಯಾರು? ಯಾರ ಮಗಳು? ಯಾರ ಪತ್ನಿಯು? ಈ ನಿರ್ಜನವಾದ ಅರಣ್ಯಕ್ಕೆ ಬರಲು ಕಾರಣವೇನು? ವಿಶದವಾಗಿ ಹೇಳು ಮಗಳೇ!"

ಮಹರ್ಷಿಗಳನ್ನು ಕಂಡ ಸೀತಾದೇವಿಯು ಅವರಿಗೆ ಒಡನೆಯೇ ನಮಸ್ಕರಿಸಿ ಹೇಳಿದಳು :

"ಬ್ರಾಹ್ಮಣೋತ್ತಮರೇ! ನಾನು ಜನಕನ ಮಗಳು. ದಶರಥನ ಸೊಸೆ. ಶ್ರೀರಾಮನ ಪತ್ನಿಯು. ನಾನು ಯಾವಾಗಲೂ ಪತಿಯೇ ದೈವವೆಂದು ಭಾವಿಸಿ ಪತಿಪರಾಯಣೆಯಾಗಿದ್ದೆನು. ಆದರೂ ನನ್ನನ್ನು ಶ್ರೀರಾಮನು ಪರಿತ್ಯಜಿಸಿರುವನು."

ವಾಲ್ಮೀಕಿಗಳು ಸೀತಾದೇವಿಯನ್ನು ಸಮಾಧಾನಗೊಳಿಸುತ್ತಾ ಹೇಳಿದರು:

"ಸುವ್ರತಳೇ! ದುಃಖಿಸಬೇಡ. ಯಶೋವಂತರಾದ ಇಬ್ಬರು ಮಕ್ಕಳನ್ನು ನೀನು ಪಡೆಯುವೆ. ಜನಕನ ಗೌರವಕ್ಕೆ ಪಾತ್ರನಾದ ವಾಲ್ಮೀಕಿ ಎಂಬ ಮುನಿಯು ನಾನು. ನನ್ನ ಆಶ್ರಮವು ಫಲ-ಪುಷ್ಪಗಳ ಸಮೃದ್ಧಿಯಿರುವ ವೃಕ್ಷಗಳಿಂದ ಸಮಾವೃತವಾಗಿದ್ದು ಅತ್ಯಂತಮನೋಹರವಾಗಿರುವುದು. ನನ್ನ ಆಶ್ರಮದ ಸಮೀಪದಲ್ಲಿಯೇ ನಿನಗೊಂದು ಪರ್ಣಶಾಲೆಯನ್ನು ಕಲ್ಪಿಸಿಕೊಡುವೆನು. ಅಲ್ಲಿ ನಿನಗೆ ಸುಖಪ್ರಸವವಾಗುವುದು."

ಬೇಸಗೆಯ ತಾಪದಿಂದ ಬಳಲಿದ ನವಿಲುಪಕ್ಷಿಯು ಗುಡುಗಿನ ಶಬ್ದವನ್ನು ಕೇಳುತ್ತಲೇ ಆನಂದಪಡುವಂತೆ–ವಾಲ್ಮೀಕಿಗಳ ಮಾತನ್ನು ಕೇಳಿ ಅತಿ ದುಃಖಿತೆಯಾಗಿದ್ದ ಸೀತಾದೇವಿಯು ಸಂತಸಗೊಂಡಳು. ವಾಲ್ಮೀಕಿಗಳು ಸೀತಾದೇವಿಯನ್ನು ಹೀಗೆ ಸಮಾಧಾನಗೊಳಿಸಿ ಆಕೆಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದರು.

ಅವರ ಆಶ್ರಮದ ಪರಿಸರದಲ್ಲಿ ಸಿಂಹಗಳೂ-ಹುಲಿಗಳೂ ಗೋವುಗಳೊಡನೆ ಕೂಡಿಕೊಂಡು ಕ್ರೀಡಿಸುತ್ತಿದ್ದುವು ಮುಂಗುಸಿಗಳೂ, ಸರ್ಪಗಳೂ, ನವಿಲುಗಳೂ ಒಟ್ಟಾಗಿ ಸೇರಿ ಆಟವಾಡುತ್ತಿದ್ದುವು. ಸರೋವರದಲ್ಲಿದ್ದ ಬಕಪಕ್ಷಿಗಳು ಮೀನುಗಳನ್ನು ತಿನ್ನುತ್ತಿರಲಿಲ್ಲ. ಅಂತಹ ಹಲವಾರು ಅಚ್ಚರಿಗಳಿಂದ ಕೂಡಿದ ವಾಲ್ಮೀಕಿಗಳ ಆಶ್ರಮಕ್ಕೆ ಸೀತಾದೇವಿಯು ಆಗಮಿಸಿದಳು. ಅಲ್ಲಿದ್ದ ಮುನಿಗಳಿಗೂ ಮುನಿಪತ್ನಿಯರಿಗೂ ನಮಸ್ಕರಿಸಿದಳು. ವಾಲ್ಮೀಕಿ ಮಹರ್ಷಿಗಳ ಆಶಯದಂತೆ ಮುನಿಕುಮಾರರು ಸುಂದರವಾದ ಪರ್ಣಶಾಲೆಯನ್ನು ಅವಳ ನಿವಾಸಕ್ಕಾಗಿ ನಿರ್ಮಿಸಿದರು. ವಾಲ್ಮೀಕಿಗಳ ಆಣತಿ

ಯಂತೆ ಸೀತೆಯು ಅಲ್ಲಿ ವಾಸಮಾಡತೊಡಗಿದಳು. ಮುನಿಪತ್ನಿಯರು ಆದರದಿಂದ ಕೊಡುತ್ತಿದ್ದ ಹಣ್ಣು-ಹಂಪಲುಗಳನ್ನು ತಿನ್ನುತ್ತಿದ್ದಳು. ವಿರಾಮದ ವೇಳೆಗಳಲ್ಲಿ ವಾಲ್ಮೀಕಿಗಳಿಂದ ಪುಣ್ಯಕಥೆಗಳನ್ನು ಕೇಳುತ್ತಾ ಸಂತೋಷದಿಂದಲೇ ಕಾಲಕಳೆಯುತ್ತಿದ್ದಳು. ಆಕೆಗೆ ನವಮಾಸಗಳು ತುಂಬಿದುವು. ಶುಭದಿನದ ಅರ್ಧರಾತ್ರಿಯಲ್ಲಿ, ಶುಭಮುಹೂರ್ತದಲ್ಲಿ ಸೀತಾದೇವಿಯು ಇಬ್ಬರು ಗಂಡುಮಕ್ಕಳಿಗೆ ಜನ್ಮವನ್ನಿತ್ತಳು. ಪ್ರಸವವಿಜ್ಞಾನದಲ್ಲಿ ನಿಷ್ಣಾತರಾಗಿದ್ದ ಮುನಿಪತ್ನಿಯರು ಅವಳನ್ನು ಯಥೋಚಿತವಾಗಿ ಉಪಚರಿಸಿದರು. ಸೀತಾದೇವಿಯು ಅವಳಿಮಕ್ಕಳನ್ನು ಪಡೆದಳೆಂಬ ವಾರ್ತೆಯು ತಿಳಿದೊಡನೆಯೇ ಋಷಿಪತ್ನಿಯರು ಮಂಗಳದ ಹಾಡುಗಳನ್ನು ಹಾಡತೊಡಗಿದರು. ಆ ಮಕ್ಕಳ ತೇಜಸ್ಸಿನಿಂದ ಪರ್ಣಶಾಲೆಯೇ ಬೆಳಗತೊಡಗಿತು. ದಿಕ್ಕುಗಳು ನಿರ್ಮಲವಾದುವು. ಸುವಾಸನೆಯಿಂದ ಕೂಡಿದ ಮಂದಮಾರುತವು ಬೀಸತೊಡಗಿತು. ಹೋಮಾಗ್ನಿಯು ಪ್ರದಕ್ಷಿಣಾಕಾರವಾಗಿ ಉರಿಯತೊಡಗಿತು.

ಶಿಷ್ಯರು ಓಡಿಹೋಗಿ ವಿಷಯವನ್ನು ವಾಲ್ಮೀಕಿಗಳಿಗೆ ಹೇಳಿದರು. ಒಡನೆಯೇ ಮಹರ್ಷಿಗಳು ಕುಶಗಳನ್ನೂ-ಲವಗಳೆಂಬ ಭೇದಿಸಿದ ದರ್ಭೆಯ ತುಂಡುಗಳನ್ನೂ ತೆಗೆದುಕೊಂಡು ಮಕ್ಕಳಿದ್ದ ಕಡೆಗೆ ಧಾವಿಸಿ ಬಂದರು. ಮಕ್ಕಳಿಗೆ ಕುಶ-ಲವಗಳಿಂದ ಪವಿತ್ರೋದಕವನ್ನು ಸಂಪ್ರೋಕ್ಷಿಸಿ ಆ ಮಕ್ಕಳಿಗೆ ಕುಶ-ಲವರೆಂದೇ ಹೆಸರಿಟ್ಟು ಜಾತಕರ್ಮ-ನಾಮಕರಣಸಂಸ್ಕಾರಗಳನ್ನು ನೆರವೇರಿಸಿದರು. ಸೀತೆಯ ಮಕ್ಕಳಿಬ್ಬರೂ ಸೂರ್ಯ-ಚಂದ್ರರಂತೆ ದಿನ-ದಿನಕ್ಕೂ ಅಭಿವೃದ್ಧಿಹೊಂದುತ್ತಿದ್ದರು. ಮಹರ್ಷಿಗಳು ಕುಶ-ಲವರಿಗೆ ಹನ್ನೆರಡು ವರ್ಷಗಳು ತುಂಬುತ್ತಲೆ ಉಪನಯನವನ್ನು ಮಾಡಿದರು. ಉಪನಯನ ಸಮಾರಂಭದಲ್ಲಿ ವಾಲ್ಮೀಕಿಗಳು ವಸಿಷ್ಠರಿಂದ ಕಾಮಧೇನುವನ್ನು ತಂದು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದರು. ವಾಲ್ಮೀಕಿಗಳ ಪ್ರಾರ್ಥನೆಯಂತೆ ಕಾಮಧೇನುವು ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಗಳನ್ನು ಕ್ಷಣಮಾತ್ರದಲ್ಲಿ ಸಿದ್ಧಗೊಳಿಸಿತು. ಅಂತಹ ಅನುಪಮವಾದ ಮೃಷ್ಟಾನ್ನವನ್ನು ಭುಂಜಿಸಿದ ಬ್ರಾಹ್ಮಣರು ಅತ್ಯಂತ ತೃಪ್ತಿ ಹೊಂದಿದರು.

ಉಪನೀತರಾದ ಕುಶ-ಲವರು ವಾಲ್ಮೀಕಿಗಳ ಬಳಿಯಲ್ಲಿ ಸಾಂಗ ವೇದಾಧ್ಯಯನವನ್ನು ಮಾಡಿದರು. ಹಾಗೆಯೇ ಸುಸ್ವರದಿಂದ ಶ್ರೀರಾಮನ ಚರಿತ್ರೆಯನ್ನು ಹಾಡಲೂ ಕಲಿತರು. ಲವನು ತಾಳವನ್ನು ಬಾರಿಸುತ್ತಿದ್ದನು. ಕುಶನು ವೀಣೆಯನ್ನು ನುಡಿಸುತ್ತಿದ್ದನು. ತಾಳ-ವೀಣೆಗಳ ಹಿನ್ನೆಲೆಯಲ್ಲಿ ಕುಶ-ಲವರು ಸುಮಧುರವಾಗಿ ರಾಮಾಯಣವನ್ನು ಹಾಡುತ್ತಿದ್ದರು. ವಾಲ್ಮೀಕಿಮಹರ್ಷಿಗಳು ಕುಶ-ಲವರಿಗೆ ಧನುರ್ವಿದ್ಯೆಯನ್ನು ಕಲಿಸಿ ಮೌರ್ವಿ ಯಿಂದ ಯುಕ್ತವಾಗಿದ್ದ ಅತ್ಯಂತದೃಢವಾಗಿದ್ದ ಧನುಸ್ಸನ್ನು ದಯಪಾಲಿಸಿದರು. ರೈಭ್ಯನೆಂಬ ಮಹರ್ಷಿಯು ಅವರಿಗೆ ಅಕ್ಷಯತೂಣೀರಗಳನ್ನು ಅನು ಗ್ರಹಿಸಿಕೊಟ್ಟನು. ಕೆಲವು ಮಹರ್ಷಿಗಳು ತಮ್ಮ ತಪಸ್ಸಿನಿಂದ ಆರ್ಜಿಸಿದ ಅಸ್ತ್ರಗಳನ್ನು ಉಪದೇಶಿಸಿದರು. ಕೆಲವರು ಕಿರೀಟ-ಕವಚಗಳನ್ನೂ ಕತ್ತಿ-ಗುರಾಣಿಗಳನ್ನೂ ಕೊಟ್ಟರು. ಹೀಗೆ ಆ ಕುಮಾರರು ಋಷಿಗಳು ಆಶೀರ್ವದಿಸಿ ಕೊಟ್ಟ ಧನುರ್ಬಾಣಗಳನ್ನೂ ಕವಚಗಳನ್ನೂ ಧರಿಸಿ ಕಾಕಪಕ್ಷಧರರಾಗಿ ಆಶ್ರಮದ ಭೂಮಿಯಲ್ಲಿ ಸಂಚರಿಸುತ್ತಿದ್ದರು. ಇಬ್ಬರು ಬಾಲಕರೂ ತಾಯಿಗೆ ಬೇಕಾದ ಕಂದ-ಮೂಲ-ಫಲಗಳನ್ನು ತಂದುಕೊಡುತ್ತಾ ಅವಳ ಸೇವೆಯನ್ನು ಸತತವಾಗಿ ಮಾಡುತ್ತಿದ್ದರು. ಬಾಲಕರ ಸೇವೆಯಿಂದ ಸೀತಾದೇವಿಯು ಪರಮಪ್ರೀತಳಾದಳು.

ಇತ್ತಲಾಗಿ ಸೀತೆಯನ್ನು ಕಾಡಿಗೆ ಕಳುಹಿಸಿದ ನಂತರ ಶ್ರೀರಾಮನು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು. ಆದರೂ ಅವನ ಮನಸ್ಸಿಗೆ ನೆಮ್ಮದಿ ಯಿರಲಿಲ್ಲ. ಅವನ ಮನಸ್ಸು ಬ್ರಹ್ಮಹತ್ಯಾಚಿಂತೆಯಿಂದ ಕಲುಷಿತವಾಗಿದ್ದಿತು. ಆ ದೋಷದ ನಿವಾರಣೆಗಾಗಿ ಅಶ್ವಮೇಧಯಾಗವನ್ನು ಮಾಡಲು ಅಪೇಕ್ಷಿಸಿದನು. ವಸಿಷ್ಠ, ವಿಶ್ವಾಮಿತ್ರ, ಗಾಲವ, ವಾಮದೇವಾದಿ ಮುನಿ ಗಳನ್ನು ಕರೆಯಿಸಿ ಅಶ್ವಮೇಧಯಾಗದ ವಿಧಿ-ವಿಧಾನಗಳ ವಿಷಯವಾಗಿ ಪ್ರಶ್ನಿಸಿದನು.

"ಮುನಿಶ್ರೇಷ್ಠರೇ! ನಾನು ಅಶ್ವಮೇಧಯಾಗವನ್ನು ಮಾಡಲು ಅಪೇಕ್ಷಿಸಿರುವೆನು. ಅದರ ವಿಧಿಯೇನು? ಎಂತಹ ಲಕ್ಷಣವಿರುವ ಕುದುರೆ ಯನ್ನು ಆರಿಸಿ ತರಬೇಕು? ಯಾವ ಯಾವ ದಾನಗಳನ್ನು ಕೊಡಬೇಕು? ಯಾವ ವ್ರತವನ್ನು ಆಚರಿಸಬೇಕು? ಎಲ್ಲವನ್ನೂ ವಿಶದವಾಗಿ ಹೇಳಿರಿ."

ವಸಿಷ್ಠರು ಹೇಳಿದರು :

"ರಾಘವ! ನೀನು ಮಾಡಲು ಅಪೇಕ್ಷಿಸಿರುವ ಯಾಗವು ಅತಿಕಷ್ಟ ಸಾಧ್ಯವಾದುದು. ಕುದುರೆಯ ಮೈಬಣ್ಣವು ನೈದಿಲೆಯಂತಿರಬೇಕು. ಚಂದ್ರನಂತೆ ಪ್ರಕಾಶಮಾನವಾಗಿರಬೇಕು. ಹಳದೀಬಣ್ಣದ ಬಾಲವಿರಬೇಕು. ಕಿವಿಗಳು ಕಪ್ಪಾಗಿರಬೇಕು. ಇಂತಹ ಕುದುರೆಯನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ದೇಶಾದ್ಯಂತ ಸಂಚರಿಸಲು ಬಿಡಬೇಕು. ಕುದುರೆಯನ್ನು ಬಿಡುವುದೇ ಯಜ್ಞದ ಆರಂಭವು. ಕುದುರೆಯು ದೇಶ-ವಿದೇಶಗಳಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವಾಗ ಅದನ್ನು ಯಾರಾದರೂ ಬಂಧಿಸಿದರೆ-ಬಂಧಿಸಿ ದವರೊಡನೆ ಯುದ್ಧಮಾಡಿ ಅವರನ್ನು ಪರಾಜಯಗೊಳಿಸಿ ಅವರಿಂದ ಕುದುರೆಯನ್ನು ಬಿಡಿಸಿಕೊಂಡು ಬರಬೇಕಾಗುವುದು. ಆ ಸಮಯದಲ್ಲಿ ವೇದ ಪಾರಂಗತರಾದ ಸಾವಿರ ಬ್ರಾಹ್ಮಣರಿಗೆ ಒಬ್ಬೊಬ್ಬರಿಗೂ ಒಂದೊಂದು ಆನೆ, ಒಂದೊಂದು ರಥ, ಹತ್ತು ಉತ್ತಮವಾದ ಕುದುರೆಗಳು, ಒಂದು ಭಾರದ ತೂಕ ಚಿನ್ನ, ಸುವರ್ಣಾಭರಣಯುಕ್ತವಾದ ನೂರು ಗೋವುಗಳು, ಒಂದು ಸೇರು ಮುತ್ತು, ನಾಲ್ಕು ಮಂದಿ ಸೇವಕರು–ಇವೆಲ್ಲವನ್ನೂ ದಾನವಾಗಿ ಕೊಟ್ಟು ಸತ್ಕರಿಸಬೇಕು. ರಾಘವ! ಇವೆಲ್ಲವನ್ನೂ ನೀನು ಮಾಡಬಲ್ಲೆ. ಆದರೆ ಯಜ್ಞಕರ್ಮದಲ್ಲಿ ಸಹಧರ್ಮಿಣಿಯಾದ ಪತ್ನಿಯೊಡನೆ ಅಸಿಪತ್ರವ್ರತವನ್ನು ಮಾಡಬೇಕು. ಪತ್ನಿಯನ್ನು ತ್ಯಜಿಸಿರುವ ನೀನು ಈ ವ್ರತವನ್ನು ಹೇಗೆ ಆಚರಿಸಬಲ್ಲೆ?"

"ವಸಿಷ್ಠಮಹರ್ಷಿಗಳೇ! ಜಾನಕಿಗೆ ಅನುರೂಪವಾದ ಸುವರ್ಣ ಪ್ರತಿಮೆಯನ್ನು ಮಾಡಿಸಿ ಅದನ್ನೇ ಪತ್ನಿಯ ಸ್ಥಾನದಲ್ಲಿಟ್ಟುಕೊಂಡು ತಾವು ಹೇಳಿದಂತೆ ಅಸಿಪತ್ರವ್ರತವನ್ನಾಚರಿಸುವೆನು. ಇತರ ಋಷಿಗಳೊಡನೆ ಅಶ್ವ ಮೇಧಯಾಗಕ್ಕೆ ಸಿದ್ಧತೆಗಳನ್ನು ಮಾಡಿರಿ. ಅಶ್ವಶಾಲೆಯಲ್ಲಿರುವ ಕುದುರೆಗಳಲ್ಲಿ ಲಕ್ಷಣಯುಕ್ತವಾದ ಮನೋಹರವಾದ ಅಶ್ವಮೇಧ್ಯಾಶ್ವವನ್ನು ಹುಡುಕಿ ತನ್ನಿರಿ. ನನಗೆ ಯಜ್ಞದೀಕ್ಷೆಯನ್ನು ಕೊಡಿರಿ."

ಶ್ರೀರಾಮನ ಮಾತನ್ನು ಕೇಳಿದ ವಸಿಷ್ಠರು ಅಶ್ವಶಾಲೆಯಲ್ಲಿ ಲಕ್ಷಣ ಸಂಪನ್ನವಾದ ಕುದುರೆಯನ್ನು ಹುಡುಕಿ ತರುವಂತೆ ಶಿಷ್ಯರಿಗೆ ಹೇಳಿದರು. ಸ್ವಲ್ಪ ಹೊತ್ತಿನಲ್ಲಿಯೇ ಅಂತಹ ಕುದುರೆಯು ವಸಿಷ್ಠರ ಬಳಿಗೆ ತರಲ್ಪಟ್ಟಿತು.

ಆ ಕುದುರೆಯ ಮುಖವು ಹಸುವಿನ ಹಾಲಿನಂತೆ ಶುಭ್ರವಾಗಿದ್ದಿತು. ಅದಕ್ಕೆ ಕುಂಕುಮದಂತೆ ಕೆಂಪಾದ ಕೇಸರಗಳಿದ್ದುವು. ಅದರ ಒಂದು ಕಿವಿಯು ಕಪ್ಪಾಗಿದ್ದಿತು. ಇಂತಹ ಸರ್ವಲಕ್ಷಣಸಂಪನ್ನವಾದ ಕುದುರೆಯನ್ನು ನೋಡಿ ಆಶ್ಚರ್ಯಭರಿತರಾದ ವಸಿಷ್ಠರು ಅಶ್ವಮೇಧಯಜ್ಞಾಂಗವಾಗಿ ಬ್ರಾಹ್ಮಣ ರನ್ನು ಪೂಜಿಸಿ ಅವರೆಲ್ಲರಿಗೂ ಯಥೇಚ್ಛವಾಗಿ ದಾನಗಳನ್ನು ಕೊಟ್ಟರು. ಬಳಿಕ ಶ್ರೀರಾಮನು ವಸಿಷ್ಠರ ನಿರ್ದೇಶದಂತೆ ಸುವರ್ಣಸೀತೆಯೊಡನೆ ಯಜ್ಞ ದೀಕ್ಷೆಯನ್ನು ಕೈಗೊಂಡು ಅಶ್ವಮೇಧದ ಕುದುರೆಯನ್ನು ಪರಿಮಳಗಂಧ ದಿಂದಲೂ, ಪುಷ್ಪಮಾಲೆಗಳಿಂದಲೂ ಅಲಂಕರಿಸಿದನು.

'ಕೌಸಲ್ಯೆಯು ಏಕವೀರಮಾತೆಯು. ಆಕೆಯ ಮಗನಾದ ಶ್ರೀರಾಮನು ಬಹಾಬಲಿಷ್ಠನು. ಅವನೇ ಈ ಕುದುರೆಯನ್ನು ಬಿಟ್ಟಿರುವನು. ಶ್ರೀರಾಮನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳದ ಬಲಿಷ್ಠರಾದ ರಾಜರು ಈ ಕುದುರೆಯನ್ನು ಕಟ್ಟಬಹುದು'–ಎಂಬ ವಾಕ್ಯಗಳನ್ನು ಚಿನ್ನದ ತಗಡಿನಲ್ಲಿ ಬರೆಯಿಸಿ ಕುದುರೆಯ ಹಣೆಗೆ ಕಟ್ಟಲಾಯಿತು. ಅದರ ರಕ್ಷಣೆಗೆ ಶತ್ರುಘ್ನನು ಮೂರು ಅಕ್ಷೌಹಿಣೀಸೈನ್ಯದೊಡನೆ ಹೊರಟನು.

ಶತ್ರುಘ್ನನ ಕಾವಲಿನಲ್ಲಿ ಹೊರಟ ಆ ಕುದುರೆಯು ವಿನೋದದಿಂದ ಸಂಚರಿಸುತ್ತಾ ಸ್ವಲ್ಪ ದಿವಸಗಳಲ್ಲಿಯೇ ಹಲವಾರು ದೇಶಗಳನ್ನೂ, ಪಟ್ಟಣ ಗಳನ್ನೂ, ವನೋಪವನಗಳನ್ನೂ ದಾಟಿತು. ಹಲವಾರು ದೇಶದ ರಾಜರು ಕುದುರೆಯನ್ನು ಪುರಸ್ಕರಿಸಿ ಕಪ್ಪಕಾಣಿಕೆಗಳನ್ನು ಕೊಟ್ಟರು. ಬಲಿಷ್ಠರಾದ ಕೆಲವರು ಕುದುರೆಯನ್ನು ಕಟ್ಟಿ ಶತ್ರುಘ್ನನೊಡನೆ ಯುದ್ಧಮಾಡಿ ಪರಾ ಜಯವನ್ನು ಹೊಂದಿ ಕುದುರೆಯನ್ನು ಬಿಟ್ಟು ಅದರ ಜೊತೆಗೆ ಅಪಾರವಾದ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಹಾಗೆಯೇ ಆ ಕುದುರೆಯು ದೇಶ-ದೇಶಗಳಲ್ಲಿ ಸುತ್ತಾಡುತ್ತಾ ವಾಲ್ಮೀಕಿಗಳ ದಿವ್ಯಾಶ್ರಮವನ್ನು ಪ್ರವೇಶಿಸಿತು. ಆ ಸಮಯದಲ್ಲಿ ವಾಲ್ಮೀಕಿಮಹರ್ಷಿಗಳು ಆಶ್ರಮದಲ್ಲಿರಲಿಲ್ಲ. ಯಜ್ಞಾರ್ಥವಾಗಿ ವರುಣನ ಲೋಕಕ್ಕೆ ಹೋಗಿದ್ದರು.

ವಾಲ್ಮೀಕಿಗಳ ಆಶ್ರಮವಿದ್ದ ಅರಣ್ಯವು ಫಲ-ಪುಷ್ಪಗಳಿಂದ ನಿಬಿಡವಾದ ಗಿಡ-ಮರ-ಬಳ್ಳಿಗಳಿಂದ ಕೂಡಿದ್ದು ನಯನಮನೋಹರವಾಗಿದ್ದಿತು. ಲವನು ಆ ವನದ ರಕ್ಷಕನಾಗಿದ್ದನು. ಗರಿಕೆಯ ಹುಲ್ಲನ್ನು ಮೇಯುತ್ತಿದ್ದ

ಕುದುರೆಯ ಬಳಿಗೆ ಹೋಗಿ ಹಣೆಯಲ್ಲಿದ್ದ ಚಿನ್ನದ ಪಟ್ಟಿಯಲ್ಲಿದ್ದುದನ್ನು ಓದಿದನು.

'ಕೌಸಲ್ಯೆಯು ಏಕವೀರಮಾತೆಯು. ಆಕೆಯ ಮಗನಾದ ಶ್ರೀರಾಮನು ಮಹಾಬಲಿಷ್ಠನು. ಅವನೇ ಈ ಕುದುರೆಯನ್ನು ಬಿಟ್ಟಿರುವನು. ಶ್ರೀರಾಮನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳದ ರಾಜರು ಈ ಕುದುರೆಯನ್ನು ಕಟ್ಟಬಹುದು'–ಎಂದು ಅದರಲ್ಲಿ ಬರೆದಿದ್ದಿತು. ಒಡನೆಯೇ ಲವನು "ನಮ್ಮ ತಾಯಿಯೇನು ಬಂಜೆಯೇ! ಅವಳೂ ಏಕವೀರಜನನಿಯಲ್ಲವೇ?"–ಎಂದೆನ್ನುತ್ತಾ ಆ ಕುದುರೆಯನ್ನು ಹಿಡಿದು ಅದರ ಕುತ್ತಿಗೆಗೆ ತಾನು ಹೊದೆದಿದ್ದ ಅಂಗವಸ್ತ್ರವನ್ನೇ ಬಿಗಿದು ಎಳೆತಂದು ಬಾಳೆಯ ಗಿಡಕ್ಕೆ ಬಿಗಿದನು. ಲವನ ಸಾಹಸವನ್ನು ನೋಡಿ ಮುನಿಕುಮಾರರಿಗೆ ಭಯವಾಯಿತು.

"ಲವಕುಮಾರ! ಶ್ರೀರಾಮನ ಕುದುರೆಯನ್ನು ಹೀಗೆ ಕಟ್ಟಿಹಾಕಬೇಡ. ಅಶ್ವರಕ್ಷಕರು ನಿನ್ನನ್ನೂ ಕುದುರೆಯ ಜೊತೆಯಲ್ಲಿಯೇ ಸೆಳೆದುಕೊಂಡು ಹೋಗಿಬಿಡುತ್ತಾರೆ. ಒಡನೆಯೇ ಬಿಟ್ಟುಬಿಡು."

ಲವನು ಋಷಿಕುಮಾರರ ಮಾತನ್ನು ತಿರಸ್ಕರಿಸುತ್ತಾ ಕೋಪದಿಂದ ಹೇಳಿದನು :

"ಮುನಿಕುಮಾರರೇ! ನೀವಾದರೋ ಋಷಿಪತ್ನಿಯರ ಹೊಟ್ಟೆಯಲ್ಲಿ ಹುಟ್ಟಿರುವವರು. ನಿಮಗೆ ಭಯವು ಸ್ವಾಭಾವಿಕ. ನಾನಾದರೋ ಕ್ಷತ್ರಿಯಾಣಿಯಾದ ಸೀತೆಯ ಹೊಟ್ಟೆಯಲ್ಲಿ ಹುಟ್ಟಿದ್ದೇನೆ. ಕುದುರೆಯನ್ನು ಕಟ್ಟಿದ ನಂತರ ಭಯದಿಂದ ಅದನ್ನು ಬಿಟ್ಟುಬಿಡುವುದಕ್ಕೆ ನಾನೇನು ಕ್ರಿಮಿಯೇ? ಹಾಗೆ ಬಿಡುವುದಕ್ಕಿಂತ ಯುದ್ಧದಲ್ಲಿ ಮರಣವೇ ನನಗೆ ಶ್ರೇಯಸ್ಕರವು."

ಸ್ವಲ್ಪ ಹೊತ್ತಿನಲ್ಲಿಯೇ ಕುದುರೆಯನ್ನು ಹಿಂಬಾಲಿಸಿ ಬರುತ್ತಿದ್ದ ಶತ್ರುಘ್ನನ ಚತುರಂಗಬಲವೂ ವಾಲ್ಮೀಕಿಗಳ ಆಶ್ರಮಭೂಮಿಯನ್ನು ಪ್ರವೇಶಿಸಿತು. ಕುದುರೆಯು ಸ್ವಲ್ಪಹೊತ್ತು ಕಾಣಲಿಲ್ಲ. ಅಲ್ಲಲ್ಲಿ ಹುಡುಕಾಡಲಾಗಿ ಬಾಳೆಯ ಗಿಡಕ್ಕೆ ಕಟ್ಟಿರುವ ಕುದುರೆಯು ಕಂಡುಬಂದಿತು. ಅದನ್ನು ಕಟ್ಟಿಹಾಕಿದವರು ಯಾರೆಂದು ಅಲ್ಲಿದ್ದ ಋಷಿಕುಮಾರರನ್ನು ಸೈನಿಕಪ್ರಮುಖರು ಕೇಳಿದರು. ಬ್ರಾಹ್ಮಣವಟುಗಳು ಮಾವಿನಮರದ ಕೆಳಗೆ ನಿರ್ಭಯನಾಗಿ

ನಿಂತಿದ್ದ ಲವನನ್ನು ತೋರಿಸದರು. ಅವನನ್ನು ನೋಡುತ್ತಲೇ ಸೈನಿಕ ಪ್ರಮುಖರು ಅವನೊಬ್ಬ ಮೂರ್ಖಬಾಲಕನೆಂದು ಭಾವಿಸಿ ಹೇಳಿದರು :

"ಆ ಬಾಲಕನಿಗೆ ನಮ್ಮ ಬಲವೆಷ್ಟೆಂಬುದು ತಿಳಿಯದು. ಹುಡುಗಾಟ ವಾಡುತ್ತಿದ್ದಾನೆ. ಅದನ್ನು ನೀವಾದರೂ ಈಗಲೇ ಬಿಟ್ಟುಬಿಡಿ."

ಹೀಗೆ ಹೇಳುತ್ತಿದ್ದಾಗಲೇ ಧನುರ್ಬಾಣಗಳನ್ನು ಹಿಡಿದಿದ್ದ ಲವನು ಮುಂದೆ ಬಂದು "ಗರ್ವಿಷ್ಠರಾಗಿ ಮಾತನಾಡುತ್ತಿರುವಿರಲ್ಲವೇ? ಗರ್ವದಿಂದ ಕುದುರೆಯನ್ನು ಬಿಡಿಸಿಕೊಂಡು ಹೋಗುವ ಸಾಧ್ಯತೆಯಿಲ್ಲ. ನನ್ನೊಡನೆ ಯುದ್ಧಮಾಡಿ ನನ್ನನ್ನು ಜಯಿಸಿದನಂತರವೇ ಕುದುರೆಯನ್ನು ಬಿಡಿಸಿಕೊಂಡು ಹೋಗಲು ಸಾಧ್ಯ" ಎಂದು ಅಬ್ಬರಿಸಿದನು.

ಬಾಲಕನು ಹೇಳಿದ ಮಾತಿಗೆ ರಾಜಭಟರು ಲಕ್ಷ್ಯವನ್ನೇ ಕೊಡಲಿಲ್ಲ. ಕುದುರೆಯನ್ನು ಬಿಚ್ಚಿಕೊಳ್ಳುವುದಕ್ಕೆ ಹೋಗಿ ಅಂಗವಸ್ತ್ರವನ್ನು ಬಿಡಿಸತೊಡಗಿದರು. ನಿಮಿಷಾರ್ಧದಲ್ಲಿ ಲವನು ಕುದುರೆಯ ಹಗ್ಗವನ್ನು ಬಿಚ್ಚುತ್ತಿದ್ದವರ ಕೈಗಳನ್ನು ನಿಶಿತವಾದ ಬಾಣಗಳಿಂದ ತುಂಡರಿಸಿದನು.

ಕೈಗಳನ್ನು ಕಳೆದುಕೊಂಡ ಯೋಧರು 'ಹೊಡೆಯಿರಿ. ಬಾಣಗಳಿಂದ ಪ್ರಹರಿಸಿರಿ'-ಎಂದು ಕೂಗಾಡತೊಡಗಿದರು. ಸುತ್ತಲೂ ಇದ್ದ ಯೋಧರು ಕ್ಷಣಮಾತ್ರದಲ್ಲಿ ಲವನ ಮೇಲೆ ಬಾಣಗಳ ಮಳೆಗರೆಯತೊಡಗಿದರು. ಹಲವಾರು ಯೋಧರು ಶಕ್ತ್ಯಾಯುಧ-ಪಾಶಾಯುಧಗಳನ್ನೂ ಪ್ರಹರಿಸಿದರು. ಆದರೆ ಆ ಬಾಣಗಳೊಂದೂ ಲವನ ಸಮೀಪಕ್ಕೂ ಬರಲಿಲ್ಲ. ಯೋಗಿಯು ಸಂಸಾರಬಂಧನವನ್ನು ಕಡಿದುಹಾಕುವಂತೆ–ಲವನು ಆ ಬಾಣಗಳೆಲ್ಲವನ್ನೂ ಕತ್ತರಿಸಿಹಾಕಿದನು. ಮರುಕ್ಷಣದಲ್ಲಿಯೇ-ಪ್ರತಿಯೊಬ್ಬ ಯೋಧನನ್ನೂ ಐದೈದು ಬಾಣಗಳಿಂದ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಲವನ ಬಾಣಗಳ ಲಕ್ಷ್ಯಕ್ಕೆ ಸಿಕ್ಕಿ ಆನೆಗಳು ಸೊಂಡಿಲುಗಳನ್ನು ಕಳೆದುಕೊಂಡುವು. ಮಾವಟಿಗರು ಅಸುನೀಗಿದರು. ಲವನ ಸತತವಾದ ಬಾಣಪ್ರಹಾರಗಳಿಂದ ಆನೆಗಳ ಮೇಲಿದ್ದ ಧ್ವಜಗಳೂ, ರತ್ನಗಂಬಳಿಗಳಿಂದ ಕೂಡಿದ ಹೌದಾಗಳೂ ಕೆಳಕ್ಕುರುಳಿದುವು. ಅನಂತರ ರಥಸೈನಿಕರು ಲವನನ್ನು ಸುತ್ತುಗಟ್ಟಿ ಬಾಣಗಳನ್ನು ಲವನ ಮೇಲೆ ಸುರಿಸಿದರು. ಮರುಕ್ಷಣದಲ್ಲಿಯೇ ಲವನು ತನ್ನ

ಕೈಚಳಕದಿಂದ ಸ್ವರ್ಣಖಚಿತವಾದ ರಥಗಳ ಚಕ್ರಗಳನ್ನೂ ಮರಗಳನ್ನೂ ಕತ್ತರಿಸಿ ಸಾರಥಿಗಳನ್ನೂ ಕೆಳಗುರುಳಿಸಿ ಕುದುರೆಗಳನ್ನೂ ಸಂಹರಿಸಿದನು. ಅನೇಕ ರಥಿಗಳು ಲವನ ಬಾಣಗಳ ಪ್ರಹಾರಕ್ಕೆ ಸಿಕ್ಕಿ ಪ್ರಾಣಗಳನ್ನು ತೊರೆದರು. ಕೆಲವರು ಓಡಿಹೋದರು. ಹಾಗೆಯೇ ಲವಕುಮಾರನು ಅಶ್ವಸೈನಿಕರನ್ನೂ ಪದಾತಿಗಳನ್ನೂ ಧ್ವಂಸಮಾಡಿದನು. ಒಬ್ಬ ಬಾಲಕನಿಂದ ತನ್ನ ಚತುರಂಗ ಬಲವೂ ನಾಶವಾಗುತ್ತಿರುವುದನ್ನು ಕಂಡು ಶತ್ರುಘ್ನನಿಗೆ ಕೋಪವು ಉಕ್ಕೇರಿ ಬಂದಿತು. ರಥಾರೂಢನಾಗಿ ಧನುಷ್ಟೇಂಕಾರಮಾಡುತ್ತಾ 'ನಿಲ್ಲು-ನಿಲ್ಲೆಂದು' ಗರ್ಜಿಸುತ್ತಾ ಲವನಿಗೆ ಎದುರಾಗಿ ಬಂದು ನಿಂತನು. ಶತ್ರುಘ್ನನು ತನ್ನೆದು ರಾಗಿ ಬಂದು ನಿಲ್ಲುತ್ತಲೇ ಲವನು ಸ್ವಲ್ಪವಾದರೂ ಎದೆಗುಂದದೇ ಶತ್ರುಘ್ನನ ವಕ್ಷಃಸ್ಥಳಕ್ಕೆ ಒಂದು ಬಾಣವನ್ನೂ ಅವನ ನಾಲ್ಕು ಕುದುರೆಗಳಿಗೆ ನಾಲ್ಕು ಬಾಣಗಳನ್ನೂ ಪ್ರಹರಿಸಿ-ಒಂದು ಬಾಣದಿಂದ ಧ್ವಜವನ್ನೂ, ಪ್ರಹರಿಸಿದನು. ನಾಲ್ಕು ಬಾಣಗಳಿಂದ ಶತ್ರುಘ್ನನ ರಥದ ಚಕ್ರಗಳ ಕಡಾಣಿಗಳನ್ನೂ ಧ್ವಂಸ ಮಾಡಿ ಮತ್ತೊಂದು ಬಾಣದಿಂದ ಶತ್ರುಘ್ನನ ಧನುಸ್ಸಿನ ಮೌರ್ವಿಯನ್ನೇ ಕತ್ತರಿಸಿದನು. ಒಡನೆಯೇ ಶತ್ರುಘ್ನನು ಬಿಲ್ಲಿಗೆ ಮತ್ತೊಂದು ಹುರಿಯನ್ನು ಬಿಗಿದು ಬಾಣಗಳನ್ನೂ ಭಲ್ಲಗಳನ್ನೂ ಲವನ ಮೇಲೆ ಪ್ರಯೋಗಿಸಿದನು. ಹಾಗೆ ಪ್ರಯೋಗಿಸಿದ ಬಾಣಗಳಲ್ಲಿ ಮೂರು ಬಾಣಗಳು ಲವನ ಹಣೆಗೆ ಚುಚ್ಚಿಕೊಂಡುವು. ಶತ್ರುಘ್ನನ ಬಾಣಪ್ರಹಾರವನ್ನು ಅಪಹಾಸ್ಯಮಾಡಿ ನಗುತ್ತಾ ಲವನು ಹೇಳಿದನು : "ಶೂರವೀರನೇ! ನೀನು ಬಿಟ್ಟ ಬಾಣಗಳ ಪ್ರಹಾರವು ನನಗೆ ಕಮಲಪುಷ್ಪಗಳ ಸ್ಪರ್ಶಸುಖವನ್ನುಂಟುಮಾಡಿದೆ. ನಿನ್ನ ಶಕ್ತಿಯು ಇಷ್ಟು ಮಾತ್ರಕ್ಕೇ ಸೀಮಿತವಾಗಿರುವುದೆಂದು ಭಾವಿಸುತ್ತೇನೆ"–ಎಂದೆನ್ನುತ್ತಾ ಹರಿತವಾದ ನಾಲ್ಕು ಬಾಣಗಳನ್ನು ಪ್ರಯೋಗಿಸಿ ಶತ್ರುಘ್ನನ ರಥದ ನಾಲ್ಕು ಕುದುರೆಗಳನ್ನೂ ಯಮಪುರಿಗೆ ಕಳುಹಿಸಿಕೊಟ್ಟನು. ಒಂದು ಬಾಣದಿಂದ ಸಾರಥಿಯ ತಲೆಯನ್ನು ಅಪಹರಿಸಿದನು. ಎರಡು ಬಾಣಗಳಿಂದ ಎತ್ತರವಾಗಿದ್ದ ಧ್ವಜವನ್ನು ಕೆಳಗುರುಳಿಸಿ ಪುನಃ ಎರಡು ಬಾಣಗಳಿಂದ ಶತ್ರುಘ್ನನ ಧನುಸ್ಸನ್ನು ತುಂಡರಿಸಿದನು. ಅದರಿಂದ ಕುಪಿತನಾದ ಶತ್ರುಘ್ನನು ಮತ್ತೊಂದು ಧನುಸ್ಸನ್ನು ಕೈಗೆತ್ತಿಕೊಂಡು ಹೆದೆಯೇರಿಸಿ

ಗೃಧ್ರಪಕ್ಷಿಯ ರೆಕ್ಕೆಗಳಿಂದ ಅಲಂಕೃತವಾಗಿದ್ದ ಬಾಣವನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿ ಹೇಳಿದನು :

"ಎಲವೋ ಬಾಲಕ! ಈಗಲೇ ಓಡಿಹೋಗು. ಇಲ್ಲದಿದ್ದರೆ ಈ ಬಾಣಪ್ರಹಾರದಿಂದ ನೀನು ಮೃತನಾಗುವೆ. ನಿನ್ನ ಮೇಲಿನ ಅನುಕಂಪದಿಂದ ಬಾಧಿತನಾಗಿರುವ ನಾನು ನಿನಗೆ ಈ ಸೂಚನೆಯನ್ನು ಕೊಡುತ್ತಿದ್ದೇನೆ."

ಶತ್ರುಘ್ನನ ಆ ಮಾತಿಗೆ ಲವನು ಓಡಿಯೂ ಹೋಗಲಿಲ್ಲ. ಉತ್ತರಿಸಲೂ ಇಲ್ಲ. ಕ್ಷಣಮಾತ್ರದಲ್ಲಿ ಶತ್ರುಘ್ನನು ಹೆದೆಯೇರಿಸಿದ್ದ ಬಾಣವನ್ನೇ ಎರಡಾಗಿ ಕತ್ತರಿಸಿದನು. ಪುಣ್ಯವು ಕಳೆದನಂತರ ಜೀವಿಗಳು ಸ್ವರ್ಗದಿಂದ ಕೆಳಕ್ಕೆ ಬೀಳುವಂತೆ-ಆ ಬಾಣವು ಬಿದ್ದುಹೋಯಿತು. ಆಶ್ಚರ್ಯಚಕಿತನಾದ ಶತ್ರುಘ್ನನು ಮತ್ತೊಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು ಹೆದೆಯೇರಿಸಿದನು. ಪ್ರಯೋಗಿಸುವುದರೊಳಗಾಗಿಯೇ ಯಮಸದೃಶವಾಗಿದ್ದ ಆ ಬಾಣವನ್ನು ಲವನು ಕತ್ತರಿಸಿದನು.

ಆ ಸಮಯದಲ್ಲಿ ಶತ್ರುಘ್ನನು ಬೇರೆ ಮಾರ್ಗವಿಲ್ಲದೆ ಲವಣಾಸುರನನ್ನು ಸಂಹರಿಸಿದ್ದ ಅಜೇಯವಾದ ಧನುರ್ಬಾಣಗಳನ್ನು ಕೈಗೆತ್ತಿಕೊಂಡು "ಈಗ ನೀನು ಖಂಡಿತವಾಗಿಯೂ ಮರಣಹೊಂದುವೆ"–ಎಂದೆನ್ನುತ್ತಾ ಲವನ ಮೇಲೆ ಆ ಬಾಣವನ್ನು ಪ್ರಯೋಗಿಸಿದನು. ಅದು ಅಮೋಘವಾದ ಬಾಣ ವೆಂಬುದು ಲವನಿಗೆ ತಿಳಿಯಿತು. "ಈ ಸಮಯದಲ್ಲಿ ನಮ್ಮ ಅಣ್ಣನಾದ ಕುಶನು ಇಲ್ಲಿ ಇದ್ದಿದ್ದರೆ ಈ ಬಾಣದಿಂದಲೂ ನನಗೆ ಭಯವಿರುತ್ತಿರಲಿಲ್ಲ"– ಎಂದು ಹೇಳುತ್ತಾ ಸ್ವಲ್ಪವಾದರೂ ಧೈರ್ಯಗೆಡದೆ ಧನುಸ್ಸಿನಲ್ಲಿ ಅಮೋಘ ವಾದ ಬಾಣವೊಂದನ್ನು ಹೂಡಿ ಹೇಳಿದನು : "ನಮ್ಮ ತಾಯಿಯಾದ ಸೀತಾ ದೇವಿಯ ಸತ್ಯನಿಷ್ಠೆಯ ಪ್ರಭಾವದಿಂದಲೂ ಪಾತಿವ್ರತ್ಯದ ಪ್ರಭಾವದಿಂದಲೂ ಈ ಬಾಣದಿಂದ ನಾನು ಎದುರಾಳಿಯ ಬಾಣವನ್ನು ಕತ್ತರಿಸಿಯೇ ತೀರುವೆನು." ಹೀಗೆ ಹೇಳಿ ಬಿಟ್ಟ ಬಾಣವು ನಿಶ್ಚಯವಾಗಿಯೂ ಶತ್ರುಘ್ನನ ಬಾಣವನ್ನು ಅರ್ಧಕ್ಕೆ ಸರಿಯಾಗಿ ಕತ್ತರಿಸಿತು. ಆದರೆ ಬಾಣದ ತುದಿಯ ಭಾಗವು ಕೆಳಕ್ಕೆ ಬಿದ್ದಿತೇ ಹೊರತು ಉಳಿದ ಭಾಗವು ಬೀಳಲೇ ಇಲ್ಲ. ಅದೇ ರಭಸದಿಂದಲೇ ಮುನ್ನುಗ್ಗಿ ಬಂದು ಲವನ ಧನುಸ್ಸನ್ನೂ ಮತ್ತು ವಕ್ಷಃಸ್ಥಳವನ್ನೂ ಭೇದಿಸಿತು. ಬಾಣದ ಪ್ರಹಾರದಿಂದಾಗಿ ರಕ್ತದಿಂದ ತೋಯ್ದು

ಹೋಗಿದ್ದ ಲವನು ಮೂರ್ಛಿತನಾಗಿ ಕೆಳಕ್ಕೆಬಿದ್ದನು. ಶತ್ರುಘ್ನನ ಕಡೆಯ ಸೈನಿಕರು ಜಯಘೋಷಗಳನ್ನು ಮಾಡಿದರು. ಶಂಖಗಳನ್ನು ಊದುತ್ತಾ ಭೇರಿಗಳನ್ನು ಬಾರಿಸಿದರು. ಶತ್ರುವನ್ನು ಪರಾಯಗೊಳಿಸಿದನಂತರ ಶತ್ರುಘ್ನನ ಕಡೆಯ ಸೈನಿಕರು ಕುದುರೆಯನ್ನು ಬಿಚ್ಚಿಕೊಂಡರು. ಅದು ಹಿಂದಿನಂತೆ ಉಪವನದಲ್ಲಿ ಹುಲ್ಲುಮೇಯುತ್ತಾ ಸುತ್ತಾಡತೊಡಗಿತು. ಬಳಿಕ ದಯಾಳುವಾದ ಶತ್ರುಘ್ನನೇ ಲವನನ್ನು ಕೈಯಿಂದ ಹಿಡಿದೆಬ್ಬಿಸಿದನು. ರಾಮನ ಪ್ರತಿಕೃತಿಯಂತೆಯೇ ಇದ್ದ ಆ ಬಾಲಕನನ್ನು ನೋಡಿ ಶತ್ರುಘ್ನನಿಗೆ ಅಚ್ಚರಿಯಾಯಿತು. ಅಂತೆಯೇ ಅವನು ತನ್ನ ಸೇವಕರಿಗೆ ಹೇಳಿದನು :

"ರಾಜಭಟರೇ! ಈ ಬಾಲಕನು ನಮ್ಮ ಅಣ್ಣನಾದ ಶ್ರೀರಾಮನಂತೆಯೇ ಕಾಣುತ್ತಿದ್ದಾನೆ. ಇವನಿಗೆ ಈಗಲೇ ಶೈತ್ಯೋಪಚಾರಮಾಡಿರಿ."

ಒಡನೆಯೇ ರಾಜಭಟರು ಶೈತ್ಯೋದಕವನ್ನು ತಂದು ಲವನ ಮೇಲೆ ಚಿಮುಕಿಸಿದರು. ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿಕೊಂಡ ಲವನನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ಅಯೋಧ್ಯಾಪಟ್ಟಣಕ್ಕೆ ಪ್ರಯಾಣಹೊರಟರು.

ಜನಮೇಜಯನು ಜೈಮಿನಿಗಳನ್ನು ಪ್ರಶ್ನಿಸುತ್ತಾನೆ :

ಮಹರ್ಷಿಗಳೇ! ಲವನನ್ನು ಶತ್ರುಘ್ನನು ಸೆರೆಹಿಡಿದುಕೊಂಡು ಹೋಗುವಾಗ ಅವನ ಅಣ್ಣನಾದ ಕುಶನು ಇರಲಿಲ್ಲವೇ? ಎಲ್ಲಿಗೆ ಹೋಗಿದ್ದನು? ಸೀತೆಗೂ ಈ ವಿಷಯವು ತಿಳಿಯಲಿಲ್ಲವೇ? ಲವನು ಸೆರೆಸಿಕ್ಕಿದನೆಂದು ತಿಳಿದನಂತರ ಕುಶನೇನು ಮಾಡಿದನು? ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಹೇಳಿರಿ :

ಜೈಮಿನಿಗಳು ಹೇಳುತ್ತಾರೆ :

"ಜನಮೇಜಯ! ಕುಶನ ಕಥೆಯು ಸಕಲಪಾಪಪರಿಹಾರಕವು. ಅವನ ಚರಿತ್ರೆಯನ್ನು ವಿಶದವಾಗಿಯೇ ಹೇಳುವೆನು. ಕುದುರೆಯು ಹೊರಟಿತು. ಶತ್ರುಘ್ನನ ಕಡೆಯ ಮಹಾರಥರು ಲವನನ್ನು ಸೆರೆಹಿಡಿದುಕೊಂಡು ಕುದುರೆಯನ್ನು ಅನುಸರಿಸಿ ಹೊರಟರು. ರಾಜಭಟರು ಲವನನ್ನು ಸೆರೆಹಿಡಿದು ಕರೆದೊಯ್ಯುತ್ತಲೇ ದುಃಖತಪ್ತರಾದ ಋಷಿಕುಮಾರರು ಸೀತೆಯ ಬಳಿಗೆ ಬಂದು ಅಳುತ್ತಳುತ್ತಾ ಹೇಳಿದರು :

"ಅಮ್ಮ! ನಾವು ಬೇಡವೆಂದರೂ ಲವನು ಒಬ್ಬ ರಾಜನ ಕುದುರೆಯನ್ನು ಕಟ್ಟಿಹಾಕಿದನು. ಈ ಕಾರಣದಿಂದ ಲವನಿಗೂ ಆ ರಾಜನ ಸೈನ್ಯಕ್ಕೂ ಘೋರಯುದ್ಧವಾಯಿತು. ರಾಜಸೈನಿಕರನ್ನು ಪರಾಜಯಗೊಳಿಸಿದರೂ ಲವನು ಬಹಳವಾಗಿ ಬಳಲಿದ್ದನು. ಆ ಸಮಯದಲ್ಲಿ ಯಾವನೋ ಶೂರನೊಬ್ಬನು ಲವನ ಧನುರ್ಬಾಣಗಳನ್ನು ಕತ್ತರಿಸಿ ಲವನನ್ನು ಗಾಯ ಗೊಳಿಸಿ ಅವನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟುಹೋದನು."

ಆ ಮಾತುಗಳನ್ನು ಕೇಳುತ್ತಲೇ ಸೀತೆಯು ಸ್ತಂಭೀಭೂತಳಾದಳು. ಕ್ಷಣಕಾಲ ಅವಳ ಬಾಯಿಂದ ಮಾತುಗಳೇ ಹೊರಡಲಿಲ್ಲ. ಅನಂತರ ಸ್ವಲ್ಪ ಚೇತರಿಸಿಕೊಂಡು "ನಾನು ಮಾತು-ಮನಸ್ಸು ಮತ್ತು ಕೃತಿಗಳಿಂದ ಶ್ರೀರಾಮನಲ್ಲಿಯೇ ತತ್ಪರಳಾಗಿ ಇರುವುದು ಸತ್ಯವಾಗಿದ್ದರೆ ನನ್ನ ಮಗನಾದ ಲವನು ಯುದ್ಧದಲ್ಲಿ ಜಯಶೀಲನಾಗಲಿ. ನನ್ನ ಜ್ಯೇಷ್ಠಪುತ್ರನು ಬರುವವರೆಗೂ ಲವನು ಸಜೀವನಾಗಿರಲಿ. ಪಾಪಿಷ್ಠರಾದ ಆ ರಾಜಸೈನಿಕರು ಏಕಾಕಿಯಾಗಿದ್ದ ಬಾಲಕನಾದ ನನ್ನ ಪುತ್ರನನ್ನು ಹೃದಯಶೂನ್ಯರಾಗಿ ಘೋರವಾದ ಬಾಣಗಳಿಂದ ಪ್ರಹರಿಸಿದ್ದಾರೆ."ಮುಂತಾಗಿ ಹೇಳಿಕೊಂಡು ಹಲುಬಿದಳು.

"ಲವಕುಮಾರನೇ! ನೀನೆಂದೂ ನನ್ನ ಆಜ್ಞೆಯನ್ನು ಮೀರಿದವನಲ್ಲ. ನನ್ನನ್ನು ಕೇಳದೇ ಇಂದೇಕೆ ಅವರೊಡನೆ ಯುದ್ಧಕ್ಕೆ ಹೋದೆ? ನೀನು ಹನ್ನೆರಡು ವರ್ಷಗಳಿಂದ ಕಂದ-ಮೂಲ-ಫಲಗಳನ್ನು ಭಕ್ಷಿಸಿಕೊಂಡು ವಿಚಕ್ಷಣ ನಾಗಿದ್ದೆ. ಇಂದೇಕೇ ಹೀಗೆ ಮಾಡಿದೆಯೋ ತಿಳಿಯದು. ಕಡುಪಾಪಿಗಳಾದ ಅವರು ನಿರ್ದಯರಾಗಿ ನಿನ್ನನ್ನು ಬಾಣಗಳಿಂದ ಪ್ರಹರಿಸಿದ್ದಾರೆ. ನಿನ್ನ ಶರೀರಾದ್ಯಂತವಾಗಿ ಗಾಯಗಳಾಗಿರಬಹುದು. ಇದನ್ನು ನಾನು ಹೇಗೆ ತಾನೇ ಸಹಿಸಿಕೊಳ್ಳಲಿ? ಈ ಸಮಯದಲ್ಲಿ ಈ ನನ್ನ ದುಃಖವನ್ನು ತೋಡಿಕೊಳ್ಳಲು ತಂದೆಯಾದ ವಾಲ್ಮೀಕಿಗಳಾಗಲೀ ನಿನ್ನ ಅಣ್ಣನಾದ ಕುಶನಾಗಲೀ ಆಶ್ರಮದಲ್ಲಿ ಇಲ್ಲವಲ್ಲಾ? ನಾನೇನು ಮಾಡಲಿ?"

ಸೀತೆಯು ಹೀಗೆ ಪರಿತಪಿಸುತ್ತಿರಲು ಕುಶನು ಕಾಡಿನಿಂದ ಸಮಿತ್ಕುಶ ಗಳನ್ನು ತೆಗೆದುಕೊಂಡು ಆಶ್ರಮಕ್ಕೆ ಬಂದನು. ಅವನು ಬರುತ್ತಿರುವಾಗಲೇ

ಅನೇಕವಿಧವಾದ ದುಃಶಕುನಗಳನ್ನು ಗಮನಿಸಿದನು. ಮೃಗಗಳು ಭಯಂಕರವಾಗಿ ಅರಚುತ್ತಾ ಹೋಗುತ್ತಿದ್ದುವು. ಎಡಗಣ್ಣು ಅದುರುತ್ತಿದ್ದಿತು. ಕಣ್ಣುಗಳಿಂದ ನೀರು ಸುರಿಯತೊಡಗಿತು. ಇಂತಹ ದುಃಶಕುನಗಳನ್ನು ಕಂಡ ಕುಶನು ಶ್ರೀಮನ್ನಾರಾಯಣನನ್ನು ಮನಸ್ಸಿನಲ್ಲಿ ನೆನೆಯುತ್ತಾ ಆಶ್ರಮದ ಬಳಿಗೆ ಬಂದನು. ಸಾಮಾನ್ಯವಾಗಿ ಕುಶನು ಆಶ್ರಮದ ಬಳಿಗೆ ಬರುತ್ತಲೇ ಲವನು ಅವನನ್ನು ಎದುರುಗೊಳ್ಳಲು ಹೋಗುತ್ತಿದ್ದನು. ಆದರೆ ಅಂದು ಲವನ ಸುಳಿವೇ ಕಾಣಲಿಲ್ಲ. ಅದರಿಂದ ಕುಶನು ಮತ್ತಷ್ಟು ಭ್ರಾಂತನಾದನು. ಒಡನೆಯೇ ತಾಯಿಯ ಬಳಿಗೆ ಬಂದು ಬಿಕ್ಕಿ-ಬಿಕ್ಕಿ ಅಳುತ್ತಿದ್ದ ತಾಯಿಯನ್ನು ಕಂಡು ಪ್ರಶ್ನಿಸಿದನು :

"ಏಕಮ್ಮಾ ಅಳುತ್ತಿರುವೆ? ಲವನೆಲ್ಲಿ ಹೋಗಿದ್ದಾನೆ?"

ಸೀತೆಯು ಮುನಿಕುಮಾರರು ಹೇಳಿದ ಎಲ್ಲ ವಿಷಯಗಳನ್ನೂ ಕುಶನಿಗೆ ಹೇಳಿದಳು.

"ಕುಶ! ಲವನು ಇದುವರೆಗೂ ಜೀವದಿಂದ ಉಳಿದಿರುವನೋ ಇಲ್ಲವೋ ತಿಳಿಯದು. ನನಗಂತೂ ಬಹಳ ಭಯವಾಗುತ್ತಿದೆ. ಮಹಾವಿಷ್ಣುವು ತನ್ನ ಭಕ್ತರನ್ನು ಭವಬಂಧನದಿಂದ ಬಿಡಿಸುವಂತೆ ಈಗ ನೀನೇ ಲವನನ್ನು ರಾಜಬಂಧನದಿಂದ ಬಿಡಿಸಿಕೊಂಡು ಬರಬೇಕಾಗಿದೆ."

ತಾಯಿಯ ಮಾತನ್ನು ಕೇಳುತ್ತಲೇ ಕುಶನು ಕೋಪದಿಂದ ಕೆಂಗಣ್ಣನಾದನು. ಹುಬ್ಬುಗಳು ಗಂಟಿಕ್ಕಿದುವು. "ನನ್ನ ಬಾಣಗಳ ಪ್ರಹಾರಗಳಿಂದ ಹೊರಚಿಮ್ಮುವ ಶತ್ರುಗಳ ಶರೀರದ ರಕ್ತವನ್ನು ಭೂಮಿಯು ಹೀರಿಕೊಳ್ಳುತ್ತದೆ. ಶತ್ರುಗಳಿಗೆ ಇಂದ್ರ-ವರುಣ-ಕುಬೇರ-ಯಮ-ಯಕ್ಷರೇ ಸಹಾಯಕರಾಗಿ ಬಂದರೂ ಅವರೆಲ್ಲರನ್ನೂ ಎದುರಿಸಿ ಪರಾಜಯಗೊಳಿಸಿ ಲವನನ್ನು ಕರೆತರುವೆನು. ಶತ್ರುಗಳು ದೇವತೆಗಳೇ ಆಗಿದ್ದರೂ ಅವರನ್ನೂ ಧ್ವಂಸಮಾಡಿ ಲವನನ್ನು ಕರೆತರುತ್ತೇನೆ. ಇನ್ನು ನೀನು ದುಃಖಿಸುವ ಕಾರಣವಿಲ್ಲ. ಯುದ್ಧಕ್ಕೆ ಬೇಕಾದ ಧನುರ್ಬಾಣಗಳನ್ನೂ, ಕತ್ತಿ-ಗುರಾಣಿಗಳನ್ನೂ, ಕಿರೀಟ-ಕವಚಗಳನ್ನೂ ತಂದುಕೊಡಮ್ಮಾ!"

ಮಗನ ಮಾತನ್ನು ಕೇಳಿ ತಾಯಿಯು ಎಲ್ಲವನ್ನೂ ಸಿದ್ಧಪಡಿಸಿ

ಕೊಟ್ಟಳು. ಕವಚ-ಕಿರೀಟಗಳನ್ನೂ, ಧನುರ್ಬಾಣಗಳನ್ನೂ, ಕತ್ತಿ-ಗುರಾಣಿಗಳನ್ನೂ ಧರಿಸಿದ ಕುಶನು ತಾಯಿಗೆ ನಮಸ್ಕರಿಸಿದನು. ತಾಯಿಯ ಆಶೀರ್ವಾದವನ್ನು ಪಡೆದು ಧನುಸ್ಸನ್ನು ಟೇಂಕರಿಸುತ್ತಾ ಮದಿಸಿದ ಆನೆಗಳ ಗುಂಪಿನೊಳಗೆ ನುಸುಳಲಪೇಕ್ಷಿಸುವ ಸಿಂಹದ ಮರಿಯಂತೆ-ಶತ್ರುಗಳ ಸೈನ್ಯವನ್ನು ಭೇದಿಸುವ ಸಲುವಾಗಿ ಹೊರಟನು. ಶತ್ರುಗಳನ್ನು ದೂರದಿಂದ ಕಾಣುತ್ತಲೇ ಕುಶನು ಕೂಗಿ ಹೇಳಿದನು :

"ರಾಜಸೈನಿಕರೇ! ನಿಲ್ಲಿರಿ! ನಿಮ್ಮಲ್ಲಿ ಶಕ್ತಿಯಿರುವುದಾದರೆ ನನ್ನೊಡನೆ ಯುದ್ಧಮಾಡಿ ಕುದುರೆಯನ್ನೂ ಲವನನ್ನೂ ಒಯ್ಯಿರಿ. ಇಲ್ಲವಾದರೆ ನನ್ನ ತಮ್ಮನಾದ ಲವನನ್ನು ಬಿಟ್ಟುಬಿಡಿರಿ. ವೀರ ಕುಶನನ್ನು ನೀವು ಪರಾಜಯಗೊಳಿಸದೆ ಮುನ್ನಡೆಯಲು ಸಾಧ್ಯವಿಲ್ಲ."

ಆರ್ಭಟದ ಆ ಮಾತನ್ನು ಕೇಳಿದೊಡನೆಯೇ ಅಯೋಧ್ಯೆಯ ಸೈನಿಕರು ಭಯದಿಂದ ವಿಹ್ವಲರಾದರು.

"ಕತ್ತಿ-ಗುರಾಣಿಗಳನ್ನೂ ಧನುರ್ಬಾಣಗಳನ್ನೂ ಧರಿಸಿ ಬರುತ್ತಿರುವ ಈ ವೀರನು ಯಾರಿರಬಹುದು? ನಮಗಂತೂ ಇವನು ಯಮನಂತೆಯೇ ಕಾಣುತ್ತಿರುವನು." ಎಂದು ಸೈನಿಕರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದರು. ಬಿರುಗಾಳಿಯಿಂದ ಹೊಡೆಯಲ್ಪಟ್ಟ ವೃಕ್ಷಗಳಂತೆ ರಥದ ಮೇಲಿದ್ದ ಧ್ವಜಗಳು ಹೊಯಲಾಡತೊಡಗಿದುವು. ರಣಹದ್ದುಗಳು ಸೇನಾಪ್ರಮುಖರ ಕಿರೀಟಗಳನ್ನು ಅಪ್ಪಳಿಸುತ್ತಿದ್ದುವು. ಬಾಣಗಳು ತಾವಾಗಿಯೇ ಬತ್ತಳಿಕೆಗಳಿಂದ ಹೊರಬರುತ್ತಿದ್ದುವು. ರಭಸವಾಗಿ ಬೀಸುತ್ತಿದ್ದ ಬಿರುಗಾಳಿಯಿಂದ ಮೇಲೆದ್ದ ಧೂಳಿಯು ಆಕಾಶವನ್ನೆಲ್ಲಾ ಆವರಿಸಿ ಸೂರ್ಯನೇ ಕಾಣಿಸದಂತಾಯಿತು.

ಬೆನ್ನಟ್ಟಿ ಬರುತ್ತಿದ್ದ ಕುಶನನ್ನು ನೋಡಿ ಶತ್ರುಘ್ನನು ಸೇನಾಪತಿಗೆ ಹೇಳಿದನು :

"ಸೇನಾಪತಿಯೇ! ನಮ್ಮನ್ನು ಬೆನ್ನಟ್ಟಿ ಬರುತ್ತಿರುವ ಆ ಬಾಲಕನನ್ನು ಎದುರಿಸಿ ಯುದ್ಧಮಾಡುತ್ತಿರು. ಆ ವೇಳೆಗೆ ನಾನೂ ಸೈನ್ಯವನ್ನು ಯುದ್ಧಕ್ಕೆ ಸಜ್ಜುಗೊಳಿಸುವೆನು."

"ಸುವ್ರತನೇ! ನಿನ್ನ ಅನುಗ್ರಹವೊಂದಿದ್ದರೆ ನಾನೇ ಆ ಬಾಲಕನನ್ನು ಸಂಹರಿಸುವೆನು"–ಎಂದು ಹೇಳುತ್ತಾ ಸೇನಾಪತಿಯು ಕುಶನ ಸಮ್ಮುಖಕ್ಕೆ ಹೋಗಿ ಅವನನ್ನು ಹತ್ತು ಬಾಣಗಳಿಂದ ಪ್ರಹರಿಸಿದನು. ಮರುಕ್ಷಣದಲ್ಲಿಯೇ ಕುಶನು ತನ್ನೆದುರಾಗಿ ಬಂದ ಹತ್ತು ಬಾಣಗಳನ್ನೂ ಕತ್ತರಿಸಿ ಅತ್ಯಂತಕುಪಿತನಾಗಿ ಸೇನಾಪತಿಯ ರಥದ ಕುದುರೆಗಳನ್ನೂ ನಾಲ್ಕು ಬಾಣಗಳಿಂದ ಸಂಹರಿಸಿ ಅವನ ಸಾರಥಿಯ ತಲೆಯನ್ನು ಮತ್ತೊಂದು ಬಾಣದಿಂದ ಕೆಳಗುರುಳಿಸಿದನು. ಹಾಗೆಯೇ ಹಲವಾರು ಬಾಣಗಳಿಂದ ಸೇನಾಪತಿಯು ಕುಳಿತಿದ್ದ ರಥವನ್ನು ಧ್ವಂಸಮಾಡಿ ಪದಾತಿಯಾಗಿ ನಿಂತಿದ್ದ ಅವನ ಬಿಲ್ಲನ್ನೂ ಕವಚವನ್ನೂ ಒಂದೊಂದು ಬಾಣಗಳಿಂದ ಕತ್ತರಿಸಿದುದಲ್ಲದೇ ಹೊಳೆವ ಕುಂಡಲಗಳಿಂದಲೂ, ಮೀಸೆಗಳಿಂದಲೂ ಕೂಡಿದ್ದ ಮುಖವನ್ನು ಮತ್ತೊಂದು ತೀಕ್ಷ್ಣವಾದ ಬಾಣದಿಂದ ಪ್ರತ್ಯೇಕಿಸಿಬಿಟ್ಟನು. ಸೇನಾಪತಿಯು ಮೃತನಾಗಲಾಗಿ ಅಯೋಧ್ಯೆಯ ಸೈನ್ಯದಲ್ಲಿ ದೊಡ್ಡ ಕೋಲಾಹಲವೇ ಉಂಟಾಯಿತು.

ಸೇನಾಪತಿಯು ಮೃತನಾದುದನ್ನು ಕಂಡು ಅವನ ಸಹೋದರನಾದ ನಗನೆಂಬ ಶೂರನು ಆನೆಯನ್ನೇರಿ ಬಂದು ಶಕ್ತ್ಯಾಯುಧದಿಂದ ಕುಶನನ್ನು ಬಲವಾಗಿ ಪ್ರಹರಿಸಿದನು. ಸಿಡಿಲಿನಂತೆ ಶಬ್ದಮಾಡುತ್ತಾ ಬೆಂಕಿಯ ಜ್ವಾಲೆಗಳೊಡನೆ ಬರುತ್ತಿದ್ದ ಆ ಶಕ್ತ್ಯಾಯುಧವನ್ನು ಮಹಾಬಲನಾದ ಸೀತಾಪುತ್ರನು ಐದು ಬಾಣಗಳಿಂದ ಧ್ವಂಸಮಾಡಿ ಪುನಃ ನಾಲ್ಕು ಬಾಣಗಳಿಂದ ನಗನು ಕುಳಿತಿದ್ದ ಆನೆಯ ನಾಲ್ಕು ಕಾಲುಗಳನ್ನೂ ಕತ್ತರಿಸಿದನು. ಮರುಕ್ಷಣದಲ್ಲಿಯೇ ನಗನು ಆನೆಯಿಂದ ಕೆಳಕ್ಕೆ ಧುಮುಕಿ ದೊಡ್ಡದಾದ ಗದೆಯನ್ನೆತ್ತಿಕೊಂಡು ಕುಶನ ಮುಂದೆ ನಿಂತನು. ಎವೆಯಿಕ್ಕುವುದರೊಳಗಾಗಿ ಕುಶನು ಗದೆಯನ್ನು ಹಿಡಿದಿದ್ದ ನಗನ ತೋಳನ್ನೇ ಕತ್ತರಿಸಿಬಿಟ್ಟನು. ನಗನು ಎಡಗೈಯಿಂದ ಕೆಳಗೆ ಬಿದ್ದಿದ್ದ ರಥದ ಚಕ್ರವನ್ನೇ ಎತ್ತಿಕೊಂಡು ಕುಶನನ್ನು ಪ್ರಹರಿಸಲು ಮುಂದಾದನು. ರಥಚಕ್ರಸಹಿತವಾಗಿದ್ದ ನಗನ ಆ ಎಡಗೈಯನ್ನು ಕುಶನು ಕ್ಷಣಮಾತ್ರದಲ್ಲಿ ಕತ್ತರಿಸಿದನು. ಕೈಗಳನ್ನು ಕಳೆದುಕೊಂಡರೂ ಹಿಮ್ಮೆಟ್ಟದೇ ತನ್ನ ಕಡೆಗೇ ರಭಸದಿಂದ ಮುನ್ನುಗಿ ಬರುತ್ತಿದ್ದ ನಗನ ತಲೆಯನ್ನು ಮತ್ತೊಂದು ಬಾಣದಿಂದ ಕತ್ತರಿಸಿದನು. ನಗನ ಆ

ತಲೆಯು ಅಂತರಿಕ್ಷಕ್ಕೆ ಚಿಮ್ಮಿ ಅದೃಶ್ಯವಾಯಿತು. ಈಶ್ವರನು ಆ ಮಹಾವೀರನ ತಲೆಯನ್ನು ತನ್ನ ರುಂಡಮಾಲೆಯಲ್ಲಿ ಸೇರಿಸಿಕೊಂಡನು.

ಮುಂದೆ ಕುಶನು ಅತ್ಯಂತಕ್ರುದ್ಧನಾಗಿ ಬಾಣಗಳಿಂದ ಶತ್ರುಗಳನ್ನು ಯಮನು ಪ್ರಾಣಿಗಳನ್ನು ಸಂಹರಿಸುವಂತೆಯೇ ಸಂಹರಿಸತೊಡಗಿದನು. ಇಂದ್ರನು ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದಂತೆ ಕುಶನು ಪರ್ವತೋಪಮವಾಗಿದ್ದ ಆನೆಗಳ ಕಾಲುಗಳನ್ನು ಕತ್ತರಿಸಿಹಾಕುತ್ತಿದ್ದನು. ಅಯೋಧ್ಯೆಯ ವೀರಸೈನಿಕರು ಕುಶನ ಅವ್ಯಾಹತವಾದ ಬಾಣಗಳಿಂದ ಗಾಯಗೊಂಡವರಾಗಿ ರಕ್ತದಲ್ಲಿ ತೋಯ್ದುಹೋಗಿ ಹೂಗಳಿಂದ ತುಂಬಿಹೋಗಿರುವ ಮುತ್ತುಗದ ಗಿಡಗಳಂತೆಯೇ ಕಾಣುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಕುಶನು ಅವಿರತವಾದ ಬಾಣಗಳ ಪ್ರಹಾರಗಳಿಂದ ಶತ್ರುಘ್ನನ ಚತುರಂಗಬಲವನ್ನೂ ಧ್ವಂಸ ಮಾಡಿದನು.

ಸೇನಾಪತಿಗಳೆಲ್ಲರೂ ಕುಶನ ಬಾಣಾಘಾತಕ್ಕೆ ಸಿಕ್ಕಿ ಅಸುನೀಗಿದ ನಂತರ ಶತ್ರುಘ್ನನು ಮಹಾಕ್ರುದ್ಧನಾಗಿ ಕುಶನನ್ನು ಎದುರಿಸಿನಿಂತು ಅತ್ಯಂತತೀಕ್ಷ್ಣವಾದ ಒಂಬತ್ತು ಬಾಣಗಳನ್ನು ಕುಶನ ಮೇಲೆ ಪ್ರಯೋಗಿಸಿದನು. ಧನುರ್ವಿದ್ಯಾವಿಶಾರದನಾಗಿದ್ದ ಕುಶನು ಮರುಕ್ಷಣದಲ್ಲಿಯೇ ಶತ್ರುಘ್ನನು ಪ್ರಯೋಗಿಸಿದ ಒಂಬತ್ತು ಬಾಣಗಳನ್ನೂ ಕತ್ತರಿಸಿದನಲ್ಲದೇ ಶತ್ರುಘ್ನನ ರಥದ ಕುದುರೆಗಳನ್ನೂ ಸಂಹರಿಸಿ ಅರುವತ್ತು ಬಾಣಗಳಿಂದ ಶತ್ರುಘ್ನನನ್ನು ಪ್ರಹರಿಸಿದನು. ಶತ್ರುಘ್ನನು ಆ ಬಾಣಗಳ ಪ್ರಹಾರದಿಂದ ಬಹಳವಾಗಿ ಗಾಯಗೊಂಡು ಚೇತನಾರಹಿತನಾಗಿ ರಥದಲ್ಲಿಯೇ ಬಿದ್ದುಬಿಟ್ಟನು. ಅಳಿದುಳಿದ ಯೋಧರು ಅಯೋಧ್ಯೆಗೆ ಪಲಾಯನಮಾಡಿದರು. ಅಷ್ಟರಲ್ಲಿ ಮೂರ್ಛೆಯಿಂದ ಎಚ್ಚೆತ್ತಿದ್ದ ಲವನು ಅಣ್ಣನನ್ನು ನೋಡಿ ಅತ್ಯಂತಸಂತೋಷದಿಂದ ಅವನ ಬಳಿಗೆ ಬಂದು ಅವನನ್ನು ಬಾಚಿತಬ್ಬಿಕೊಂಡು ನಡೆದ ಕಥೆಯೆಲ್ಲವನ್ನೂ ಅಣ್ಣನಿಗೆ ವಿವರಿಸಿ ಹೇಳಿದನು. ಕುಶನು ಕುದುರೆಯನ್ನು ಕಟ್ಟಿದುದಕ್ಕೆ ತನ್ನ ಒಪ್ಪಿಗೆಯನ್ನಿತ್ತನು. ಅಷ್ಟೇ ಅಲ್ಲ ಪುನಃ ಇಬ್ಬರೂ ಸೇರಿ ಕುದುರೆಯನ್ನು ಕಟ್ಟಿಹಾಕಿ ವಾಯ್ವಗ್ನಿಗಳಂತೆಯೇ ಇದ್ದ ಅವರು ಕುದುರೆಯನ್ನು ಬಿಡಿಸಿಕೊಳ್ಳಲು ಕ್ಷತ್ರಿಯವೀರರು ಬರುವುದನ್ನೇ ನಿರೀಕ್ಷಿಸುತ್ತಾ ನಿಂತಿದ್ದರು.

ಅತ್ತಲಾಗಿ ಶ್ರೀರಾಮನು ಸುವರ್ಣಸೀತಾಸಮೇತನಾಗಿ ಯಜ್ಞ ಮಂಟಪದಲ್ಲಿ ಕುಳಿತಿದ್ದನು. ಆ ಸಮಯದಲ್ಲಿ ಅವನು ಜಿಂಕೆಯ ಕೊಂಬನ್ನೂ, ರುರುಮೃಗದ ಚರ್ಮವನ್ನೂ, ದಂಡ-ಮೇಖಲೆಗಳನ್ನೂ ಧರಿಸಿ ಯಜ್ಞದೀಕ್ಷಿತನಾಗಿದ್ದನು. ಹೋಮದ ಹೊಗೆಯಿಂದಾಗಿ ಕಣ್ಣುಗಳು ಕೆಂಪಾಗಿದ್ದುವು. ಲಕ್ಷ್ಮಣ-ಭರತರೂ ಅವನ ಬಳಿಯಲ್ಲೇ ಇದ್ದರು.

ಸತ್ತುಳಿದ ಯೋದರು ಯಜ್ಞದೀಕ್ಷಿತನಾಗಿ ಕುಳಿತಿದ್ದ ಶ್ರೀರಾಮನ ಬಳಿಗೆ ಬಂದು ಗಡ-ಗಡನೆ ನಡುಗುತ್ತಾ ಹೇಳಿದರು :

"ಮಹಾರಾಜ! ಅಶ್ವಮೇಧಯಾಗದ ಸಲುವಾಗಿ ನೀನು ಬಿಟ್ಟ ಕುದುರೆಯು ಎಲ್ಲ ರಾಜ್ಯಗಳಲ್ಲಿಯೂ ಸಂಚರಿಸುತ್ತಿದ್ದಿತು. ಯಾವ ರಾಜನೂ ಅದನ್ನು ಕಟ್ಟಿಹಾಕುವ ಧೈರ್ಯಮಾಡಲಿಲ್ಲ. ಕಟ್ಟಿಹಾಕಿದ ಒಬ್ಬಿಬ್ಬ ರಾಜರೂ ನಮ್ಮಿಂದ ಪರಾಜಿತರಾಗಿ ಕುದುರೆಯನ್ನೂ ಕಪ್ಪ-ಕಾಣಿಕೆಗಳನ್ನೂ ಒಪ್ಪಿಸಿಕೊಟ್ಟರು. ಕುದುರೆಯು ಹಾಗೆಯೇ ಸ್ವೇಚ್ಛೆಯಿಂದ ಸಂಚರಿಸುತ್ತಾ ಒಂದು ಆಶ್ರಮಪ್ರದೇಶಕ್ಕೆ ಬಂದಿತು.

ಅಲ್ಲಿ ಹಲವಾರು ಋಷಿಕುಮಾರರಿದ್ದರು. ಅವರ ಜೊತೆಯಲ್ಲಿಯೇ ನಿನಗೆ ಅನುರೂಪನಾಗಿದ್ದ ಒಬ್ಬ ಬಾಲಕನೂ ಇದ್ದನು. ಕುದುರೆಯನ್ನು ನೋಡುತ್ತಲೇ ಆ ಬಾಲಕನು ಅದನ್ನು ಕಟ್ಟಿಹಾಕಿದನು. ಕುದುರೆಯನ್ನು ಬಿಡಿಸಿಕೊಳ್ಳಲು ನಾವು ಆ ಬಾಲಕನೊಡನೆ ಯುದ್ಧಮಾಡಬೇಕಾಯಿತು. ಆದರೆ ಅವನ ಎದುರಾಗಿ ನಿಂತು ನಾವು ಯುದ್ಧಮಾಡಲು ಸಮರ್ಥರಾಗಲಿಲ್ಲ. ನಮ್ಮ ಚತುರಂಗಬಲವೂ ನಾಶವಾಯಿತು. ಕಡೆಗೆ ನಿನ್ನ ತಮ್ಮನಾದ ಶತ್ರುಘ್ನನೇ ನೇರವಾಗಿ ಆ ಬಾಲಕನೊಡನೆ ಯುದ್ಧಮಾಡಬೇಕಾಯಿತು. ಶತ್ರುಘ್ನನು ಅವನ ಧನುಸ್ಸನ್ನು ಕತ್ತರಿಸಿ ಅವನನ್ನು ಮೂರ್ಛೆಗೊಳಿಸಿ ಸೆರೆಹಿಡಿದನು. ಹಾಗೆ ಬಾಲಕನನ್ನು ಸೆರೆಹಿಡಿದು ಕುದುರೆಯನ್ನೂ ಬಿಡಿಸಿಕೊಂಡು ಅಯೋಧ್ಯಾಪಟ್ಟಣದ ಕಡೆಗೆ ಪ್ರಯಾಣಮಾಡುತ್ತಿದ್ದಾಗ ಆ ಬಾಲಕನ ಬಂಧುವು ಧನುಷ್ಪಾಣಿಯಾಗಿ ಬಂದು ನಮ್ಮನ್ನು ಎದುರಿಸಿದನು. ಮಹಾಬಲಿಷ್ಠನಾಗಿದ್ದ ಆ ಎರಡನೆಯ ಬಾಲಕನು ಸ್ವಲ್ಪವೇ

ಸಮಯದಲ್ಲಿ ನಮ್ಮ ಸೈನಿಕರೆಲ್ಲರನ್ನೂ ಧ್ವಂಸಮಾಡಿ ಸೇನಾಪತಿಯನ್ನೂ ಸಂಹರಿಸಿಬಿಟ್ಟನು. ಅಳಿದುಳಿದ ನಾವು ಸಮಾಚಾರವನ್ನು ನಿವೇದಿಸಲು ನಿನ್ನ ಬಳಿಗೆ ಬಂದಿರುವೆವು."

ಸೈನಿಕರ ಮಾತುಗಳನ್ನು ಕೇಳಿ ಶ್ರೀರಾಮನು ಅಚ್ಚರಿಗೊಂಡನು. ರಾಜಭಟರು ಹೇಳಿದ ಮಾತುಗಳನ್ನು ಶ್ರೀರಾಮನಿಗೆ ನಂಬಲು ಸಾಧ್ಯವಾಗಲೇ ಇಲ್ಲ.

"ನಿಮಗೇನು ಭ್ರಮೆಯುಂಟಾಗಿರುವುದೇ? ನೀವು ಪಿಶಾಚಗ್ರಸ್ತರಾಗಿಲ್ಲ ತಾನೇ? ಅಜೇಯನಾದ ಶತ್ರುಘ್ನನನ್ನು ಎದುರಿಸಿ ನಿಲ್ಲುವವರು ಈ ಪ್ರಪಂಚದಲ್ಲಿ ಯಾರಿದ್ದಾರೆ? ಸಾವಧಾನಚಿತ್ತರಾಗಿ ವಿಷಯವೇನೆಂಬುದನ್ನು ವಿಶದವಾಗಿ ಹೇಳಿರಿ."

"ಮಹಾರಾಜ! ನಮಗೆ ನಿಶ್ಚಯವಾಗಿಯೂ ಯಾವ ವಿಧವಾದ ಭ್ರಾಂತಿಯೂ ಉಂಟಾಗಿಲ್ಲ. ನಾವಾರೂ ಪಿಶಾಚಗ್ರಸ್ತರೂ ಆಗಿರುವುದಿಲ್ಲ. ನಿನ್ನನ್ನು ಸ್ಮರಿಸಿದವರಿಗೆ ಇಂತಹ ಉಪಟಳಗಳು ಇರುವುದಿಲ್ಲವಲ್ಲವೇ? ನಾವು ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳುತ್ತಿದ್ದೇವೆ. ಶತ್ರುಘ್ನನೂ ಆ ಬಾಲಕನ ಬಾಣದ ಪ್ರಹಾರದಿಂದ ಪ್ರಜ್ಞಾಹೀನನಾಗಿ ಬಿದ್ದಿರುವನು."

ಸೈನಿಕರು ಮನೋವಿಕಲ್ಪದಿಂದ ಮಾತನಾಡುತ್ತಿರುವರೆಂದು ಭಾವಿಸಲು ಶ್ರೀರಾಮನಿಗೆ ಸಾಧ್ಯವಾಗಲಿಲ್ಲ. ಶತ್ರುಘ್ನನು ಮೂರ್ಛಿತನಾಗಿ ಬಿದ್ದಿರುವುದನ್ನು ತಿಳಿದು ಶ್ರೀರಾಮನಿಗೆ ಬಹಳ ವ್ಯಥೆಯಾಯಿತು.

"ನನ್ನ ತಮ್ಮನಾದ ಶತ್ರುಘ್ನನು ಅಜೇಯನು. ಬ್ರಾಹ್ಮಣದ್ವೇಷಿಯಾದ ಲವಣಾಸುರನನ್ನು ಸಂಹರಿಸಿದ ಮಹಾವೀರನು. ನನಗೆ ಅತ್ಯಂತ ವಿಧೇಯನಾಗಿದ್ದನು. ಅಂತಹವನಿಗೆ ಈ ಅವಸ್ಥೆಯುಂಟಾಗಲು ಕಾರಣವೇನಿರಬಹುದು?" ಎಂದು ಯೋಚಿಸುತ್ತಾ ಪಕ್ಕದಲ್ಲೇ ಇದ್ದ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನಿನಗೆ ಮಂಗಳವಾಗಲಿ. ನಾನು ಯಜ್ಞದೀಕ್ಷೆಯನ್ನು ಕೈಗೊಂಡಿರುವುದರಿಂದ ಯುದ್ಧಕ್ಕೆ ಹೋಗುವಂತಿಲ್ಲ. ನೀನೀಗಲೇ ದೊಡ್ಡ

ಸೈನ್ಯವನ್ನು ತೆಗೆದುಕೊಂಡು ಹೋಗಿ ಕುದುರೆಯನ್ನು ಕಟ್ಟಿಹಾಕಿರುವ ಬಾಲಕರನ್ನು ಪರಾಜಯಗೊಳಿಸಿ ಶತ್ರುಘ್ನನನ್ನೂ, ಕುದುರೆಯನ್ನೂ ಕರೆದು ಕೊಂಡು ಬಾ."

ಶ್ರೀರಾಮನ ಆಜ್ಞೆಯಂತೆ ಲಕ್ಷ್ಮಣನು ಸೇನಾಸಮೇತನಾಗಿ ಹೊರ ಟನು. ಸೈನ್ಯವು ಚತುರಂಗಬಲಯುಕ್ತವಾಗಿದ್ದಿತು. ಮದಿಸಿದ ಆನೆಗಳಿಂದ ಕೂಡಿದ್ದ ಗಜಸೈನ್ಯವೂ, ಸುವರ್ಣಾಭರಣಗಳಿಂದ ಸಮಲಂಕೃತವಾಗಿದ್ದ ರಥಸೈನ್ಯವೂ, ಯುದ್ಧಪಟುಗಳಾದ ಸೈನಿಕರಿಂದ ಕೂಡಿದ್ದ ಅಶ್ವಸೈನ್ಯವೂ, ಪದಾತಿಸೈನ್ಯವೂ ಸಾಲುಸಾಲಾಗಿ ಲಕ್ಷ್ಮಣನ ಹಿಂದೆ ಹೊರಟುವು. ಮಹಾ ಬಲಿಷ್ಠನಾದ ಲಕ್ಷ್ಮಣನೇ ಸೇನಾಪ್ರಮುಖನಾದನು. ಧರ್ಮಿಷ್ಠನೂ, ಬ್ರಾಹ್ಮಣಪ್ರಿಯನೂ ಆಗಿದ್ದ ಕಾಲಜಿತ್ ಎಂಬುವನು ಸೇನಾಪತಿಯಾದನು. ಗುಡುಗಿನಂತೆ ಶಬ್ದಮಾಡುತ್ತಾ ರಥಗಳು ಹೋಗುತ್ತಿದ್ದುವು. ಭೂಮಿಯನ್ನೇ ನಡುಗಿಸುತ್ತಾ ಪರ್ವತಗಳಂತೆ ಗಜಸೈನ್ಯವು ಹೋಗುತ್ತಿದ್ದಿತು. ಅಶ್ವಸೈನ್ಯವು ಕೆನೆಯುತ್ತಾ ಮುನ್ನಡೆಯಿತು. ಸಿಂಹನಾದಮಾಡುತ್ತಾ ಪದಾತಿಸೈನಿಕರು ಹೋಗುತ್ತಿದ್ದರು. ಅಂತಹ ಅದ್ಭುತವಾದ ಸೈನ್ಯದೊಡನೆ ಲಕ್ಷ್ಮಣನು ಶತ್ರುಘ್ನನು ಮೂರ್ಛಿತನಾಗಿ ಬಿದ್ದಿದ್ದ ಸ್ಥಳಕ್ಕೆ ಹೋದನು. ಸುಕೇಶನಾದ, ವಿಕಲನಾಗಿ ಅರೆಜೀವದಿಂದ ಬಿದ್ದಿದ್ದ ವೀರನಾದ ಶತ್ರುಘ್ನನನ್ನು ಲಕ್ಷ್ಮಣನು ನೋಡಿದನು.

ಇತ್ತಲಾಗಿ ಶತ್ರುಭಯಂಕರನಾದ ಕುಶನು ಭಯಂಕರವಾಗಿ ಕಾಣುತ್ತಿದ್ದ ಅಪಾರವಾದ ಸೈನ್ಯವನ್ನೂ ಮತ್ತು ಸೈನ್ಯಪ್ರಮುಖನಾಗಿದ್ದ ಲಕ್ಷ್ಮಣನನ್ನೂ ನೋಡಿ ಲವನಿಗೆ ಹೇಳಿದನು :

"ಲವ! ಅಸಂಖ್ಯಾತವಾದ ಆನೆಗಳಿಂದಲೂ, ರಥಗಳಿಂದಲೂ, ಅಶ್ವ-ಪದಾತಿಗಳಿಂದಲೂ ಕೂಡಿರುವ ಮಹಾಸೈನ್ಯವು ಆಗಮಿಸಿದೆ. ಈಗೇನು ಮಾಡೋಣ?"

ಲವನು ಹೇಳಿದನು :

"ಅಣ್ಣ! ಯುದ್ಧಮಾಡೋಣ. ಯುದ್ಧಮಾಡಲೆಂದೇ ನಾವಿಲ್ಲಿ ನಿಂತಿರುವೆವಲ್ಲವೇ? ಕುಂಬಳಕಾಯನ್ನೊಡೆಯುವಂತೆ ಈ ಸೈನಿಕರ ತಲೆ ಗಳನ್ನು ಒಡೆದುಹಾಕೋಣ. ಮಾವಿನಹಣ್ಣುಗಳನ್ನು ಸೀಳುವಂತೆ ಇವರ

ರಥಗಳನ್ನು ನುಚ್ಚುನೂರು ಮಾಡೋಣ. ಮಾಗಿದ ಹಣ್ಣುಗಳು ಮರದಿಂದ ಕೆಳಗುದುರುವಂತೆ-ನಮ್ಮಿಂದ ಪ್ರಹರಿಸಲ್ಪಡುವ ಈ ಸೈನಿಕರ ತಲೆಗಳು ತೊಪ-ತೊಪನೆ ಕೆಳಗುದುರಲಿ. ಅಗಸ್ತ್ಯರಿಗೆ ಸಮುದ್ರವೇ ಅಪೋಶನವಾದಂತೆ ನಿನಗೆ ಈ ಸೇನಾಸಮುದ್ರವು ಆಪೋಶನಕ್ಕೆ ಯೋಗ್ಯವಾಗಿದೆ. ಸಿಂಹದ ಮರಿಯ ಎದುರಿನಲ್ಲಿ ನರಿಗಳ ಗುಂಪು ನಿಲ್ಲಬಲ್ಲುದೇ? ಗಂಗಾನದಿಯನ್ನು ನೋಡಿದ ಮಾತ್ರದಿಂದಲೇ ಸಕಲಪಾಪಗಳೂ ವಿನಾಶಹೊಂದುವಂತೆ-ನಿನ್ನನ್ನು ನೋಡಿದ ಮಾತ್ರದಿಂದಲೇ ಈ ಮಹಾಸೈನ್ಯವು ವಿನಾಶಹೊಂದುವುದು. ನಾನು ಕೂಡ ನಿನ್ನೊಡನೆ ಸೇರಿಕೊಂಡು ಈ ಸೈನ್ಯದ ವೇಗವನ್ನು ತಡೆಯಬಲ್ಲೆನು. ಬೇಗನೆ ಬಾಣಗಳನ್ನು ಬಿಡು. ನಾನೂ ಈ ಸೈನ್ಯವನ್ನು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ಆಕ್ರಮಿಸುವೆನು. ಆದರೆ ನಾನೀಗ ಏನು ಮಾಡಲಿ? ನನ್ನ ಬಿಲ್ಲು ಮುರಿದು ಹೋಗಿದೆ"–ಎಂದು ಲವನು ದಿವ್ಯಧನುಸ್ಸನ್ನು ಪಡೆದುಕೊಳ್ಳಲು ಸೂರ್ಯನನ್ನು ಪ್ರಾರ್ಥಿಸಿದನು.

"ಸವಿತೃನಾಮಕನಾದ ಸೂರ್ಯನಿಗೆ ನಮಸ್ಕರಿಸುತ್ತೇನೆ. ತೇಜೋವಂತನಾದ ಪೂಷನಿಗೆ ನಮಸ್ಕರಿಸುತ್ತೇನೆ. ಏಳು ಕುದುರೆಗಳಿಂದ ಕೂಡಿ ನಿತ್ಯವೂ ಆಕಾಶದಲ್ಲಿ ಸಂಚರಿಸುವವನಿಗೆ ನಮಸ್ಕರಿಸುತ್ತೇನೆ. ಪ್ರತಿ ಮಾಸದಲ್ಲಿಯೂ ಮೇಷಾದಿ ರಾಶಿಗಳಿಗೆ ಅಧೀಶನಾಗುವವನಿಗೆ ನಮಸ್ಕರಿಸುತ್ತೇನೆ. ಎರಡು ಅಯನಗಳನ್ನುಂಟುಮಾಡುವ ಪ್ರಕಾಶರೂಪನಾದ ಸೂರ್ಯದೇವನಿಗೆ ನಮಸ್ಕರಿಸುತ್ತೇನೆ. ಮೂಗರಿಗೆ ಮಾತನ್ನೂ, ಕುರುಡರಿಗೆ ಕಣ್ಣನ್ನೂ, ಕಿವುಡರಿಗೆ ಕಿವಿಯನ್ನೂ ದಯಪಾಲಿಸುವವನಿಗೆ ನಮಸ್ಕರಿಸುತ್ತೇನೆ. ತಲೆಶೂಲೆ, ಕುಷ್ಠ ಮುಂತಾದ ವ್ಯಾಧಿಗಳನ್ನು ನಿವಾರಿಸುವ ಆರೋಗ್ಯಪ್ರದನಾದ ಭಾಸ್ಕರನಿಗೆ ನಮಸ್ಕರಿಸುತ್ತೇನೆ. ಸುವರ್ಣವರ್ಣನಾದ, ಸಹಸ್ರಕಿರಣನಾದ, ಲೋಕನೇತ್ರನಾದ ಸೂರ್ಯಭಗವಂತನಿಗೆ ನಮಸ್ಕರಿಸುತ್ತೇನೆ. ದಿವಾಕರನೂ, ಪಿಂಗನೂ, ಜಲವನ್ನು ಸೃಷ್ಟಿಸುವ ಮೇಘವೂ ಆಗಿರುವ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ ಋಗ್ವೇದಸ್ವರೂಪನಾದ ಬ್ರಹ್ಮಮಯನಾದ ಸೂರ್ಯನಿಗೆ ನಮಸ್ಕರಿಸುತ್ತೇನೆ. ಋಗ್ಯಜುಸ್ಸಾಮಾಥರ್ವವೇದಗಳ, ಪುರಾಣಾಗಮ-ಗಾಥೇತಿಹಾಸಗಳ ದ್ರಷ್ಟಾರನಾದ, ಬ್ರಹ್ಮಸ್ವರೂಪನಾದ ಛಾಯಾಪತಿಗೆ ನಮಸ್ಕರಿಸುತ್ತೇನೆ. ವಿಶ್ವರೂಪನಿಗೆ ನಮಸ್ಕರಿಸುತ್ತೇನೆ.

ರುದ್ರರೂಪನಾದ ರವಿಗೆ ನಮಸ್ಕರಿಸುತ್ತೇನೆ. ಲೋಕಕ್ಕೆ ಇಷ್ಟಾರ್ಥಪ್ರದನೂ, ಮನೋಹರನೂ, ವಿಶ್ವೇಶ್ವರನೂ, ಪುರುಷನೂ, ಸರ್ವದಾ ನಿರ್ಮಲನೂ, ಹಂಸನೂ, ತೀಕ್ಷ್ಣಕಿರಣನೂ, ರತ್ನಕುಂಡಲನೂ, ಆಗಿರುವ ದೇವದೇವ ನಾದ ಸೂರ್ಯನಿಗೆ ನಮಸ್ಕರಿಸುತ್ತೇನೆ. ನಿನ್ನ ದಯೆಯಿಂದ ಜಯಪ್ರದವಾದ ಧನುಸ್ಸು ನನಗೆ ಲಭಿಸುವಂತಾಗಲಿ.''

ಅನನ್ಯಭಕ್ತಿಯಿಂದ ಹೇಳಿದ ಸೌರಸ್ತೋತ್ರಕ್ಕೆ ಪ್ರಸನ್ನನಾದ ಸೂರ್ಯನು ಲವನಿಗೆ ದಿವ್ಯವಾದ ಧನುಸ್ಸನ್ನು ಕೊಟ್ಟು ಅನುಗ್ರಹಿಸಿದನು. ಆನಂದಭರಿತನಾದ ಲವನು ಅಣ್ಣನಿಗೆ ಹೇಳಿದನು :

``ಅಣ್ಣ! ಇದೋ ನೋಡು. ದಿವ್ಯವಾದ ಈ ಧನುಸ್ಸು ಸೂರ್ಯದೇವ ನಿಂದ ನನಗೆ ಲಭಿಸಿತು. ನಮ್ಮ ಗುರುಗಳಾದ ವಾಲ್ಮೀಕಿಗಳು ನನಗೆ ಈ ಸೌರಮಂತ್ರವನ್ನು ಉಪದೇಶಿಸಿದ್ದರು. ಅದನ್ನೇ ನಾನು ಪುರಶ್ಚರಣೆಮಾಡಿ ಸೂರ್ಯನನ್ನು ಪ್ರಸನ್ನಗೊಳಿಸಿ ಈ ಧನುಸ್ಸನ್ನು ಪಡೆದುಕೊಂಡೆನು.''

ಸಹೋದರರ ಆನಂದಕ್ಕೆ ಪಾರವೇ ಇಲ್ಲದಾಯಿತು. ವಾಯ್ವಗ್ನಿ ಗಳಂತಿದ್ದ ಇಬ್ಬರೂ ಲಕ್ಷ್ಮಣನ ರಕ್ಷಣೆಯಲ್ಲಿದ್ದ ಸೈನ್ಯವೆಂಬ ಮಹಾರಣ್ಯವನ್ನು ಸುಡುವುದಕ್ಕಾಗಿ ಒಳನುಗ್ಗಿದರು. ಪರ್ವತದ ಮೇಲೆ ಎರಡು ಮೇಘಗಳು ಮಳೆಗರೆಯುವಂತೆ ಲಕ್ಷ್ಮಣನ ಸೈನ್ಯದ ಮೇಲೆ ಬಾಣಗಳ ಮಳೆಗರೆದರು. ಅವರಿಬ್ಬರ ಸಿಂಹನಾದಗಳಿಗೆ ಬೆದರಿದ ಲಕ್ಷ್ಮಣನು ಸೈನ್ಯವು ಅರ್ಧ ಯೋಜನದಷ್ಟು ಹಿಮ್ಮೆಟ್ಟಿತು. ಅದನ್ನು ನೋಡಿ ಕೋಪಗೊಂಡ ಲಕ್ಷ್ಮಣ-ಕಾಲಜಿತರು ಕುಶನನ್ನು ಬಾಣಗಳಿಂದ ಆಕ್ರಮಿಸಿದರು. ಲಕ್ಷ್ಮಣನ ಸೈನಿಕರು ಮಹಾಬಲನಾದ ಲವನನ್ನು ಆಕ್ರಮಿಸಿದರು. ಅಪಾರಸಂಖ್ಯಾತರಾಗಿದ್ದ ಲಕ್ಷ್ಮಣನ ಸೈನಿಕರು ಏಕಾಕಿಯಾಗಿದ್ದ ಲವನನ್ನು ಆಕ್ರಮಿಸಿ ಬಾಣ-ವಜ್ರಾಯುದ-ಮುದ್ಗರ-ಪ್ರಾಸ-ಗದೆ-ಕತ್ತಿ-ಶಕ್ತ್ಯಾಯುಧ-ಯಷ್ಟಿ-ಪರಶ್ವಧ- ಕುಂತ-ಪಾಶ–ಮೊದಲಾದ ಆಯುಧಗಳಿಂದ ಸತತವಾಗಿ ಪ್ರಹರಿಸುತ್ತಿದ್ದರು. ಲವನು ಸ್ವಲ್ಪವಾದರೂ ವಿಚಲಿತನಾಗದೇ ಲಕ್ಷ್ಮಣನ ಸೈನಿಕರು ಬಿಡುತ್ತಿದ್ದ ಆಯುಧಗಳೆಲ್ಲವನ್ನೂ ತುಂಡರಿಸುತ್ತಾ ಪ್ರತಿಯೊಬ್ಬ ಯೋಧನನ್ನೂ ಬಾಣಗಳಿಂದ ಪ್ರಹರಿಸುತ್ತಿದ್ದನು. ಅವನು ಬಿಡುತ್ತಿದ್ದ ಬಾಣಗಳೊಂದೂ

ನಿಷ್ಫಲವಾಗುತ್ತಿರಲಿಲ್ಲ. ಬಾಣಗಳು ಧನುಸ್ಸಿನಿಂದ ಹೊರಬಂದಷ್ಟು ವೇಗದಲ್ಲಿಯೇ ಯೋಧರ ತಲೆಗಳೂ ಕೆಳಗುರುಳುತ್ತಿದ್ದುವು. ಹೀಗೆ ಲವನು ನೂರು-ಸಾವಿರ-ಲಕ್ಷಯೋಧರನ್ನು ಸಂಹಾರಮಾಡಿದನು. ಶತ್ರುಗಳ ಪ್ರಹಾರಗಳಿಂದ ಲವನ ದೇಹದಲ್ಲಿಯೂ ಗಾಯಗಳಾಗಿದ್ದುವು. ತನ್ನ ಮೇಲೆ ಎರಗಿಬಂದ ಸೈನಿಕರೆಲ್ಲರನ್ನೂ ಧ್ವಂಸಮಾಡಿದ ನಂತರ ಲವನು ಸುತ್ತಲೂ ನೋಡಿದನು. ಕುಶನೆಲ್ಲಿಯೂ ಕಾಣಲೇ ಇಲ್ಲ. ಎಲ್ಲಿಗೆ ಹೋದನೆಂದು ಚಿಂತಿಸುತ್ತಾ ನಿಂತಿದ್ದಾಗ ಲವಣಾಸುರನ ಸೋದರಮಾವನಾದ ರುಧಿರಾಕ್ಷನೆಂಬ ರಾಕ್ಷಸನು ಲವನ ಧನುಸ್ಸನ್ನು ಅಪಹರಿಸಿಕೊಂಡು ಹೋದನು. ಧನುಸ್ಸನ್ನೆತ್ತಿಕೊಂಡು ಓಡಿ ಹೋಗುತ್ತಿದ್ದ ರಾಕ್ಷಸನನ್ನು ನೋಡಿ ಲವನು ಗರ್ಜಿಸುತ್ತಾ ಹೇಳಿದನು :

"ರಾಕ್ಷಸ! ನಿಲ್ಲು-ನಿಲ್ಲು. ನನ್ನಿಂದ ತಪ್ಪಿಸಿಕೊಂಡು ನೀನು ಸಜೀವನಾಗಿ ಹೋಗಲಾರೆ."

ಎಂದೆನ್ನುತ್ತಾ ಚಕ್ರಾಯುಧವನ್ನೆತ್ತಿಕೊಂಡು ತಾಯಿಯ ಪಾದಾರವಿಂದಗಳನ್ನು ಸ್ಮರಿಸುತ್ತಾ ಆಕಾಶಕ್ಕೆ ಹಾರಿದನು. ಆ ಸಮಯದಲ್ಲಿ ಲವನು ರಕ್ತಸಿಕ್ತನಾಗಿದ್ದುದರಿಂದ ಅಗ್ನಿದೇವನಂತೆಯೂ–ಚಕ್ರಾಯುಧವನ್ನು ಹಿಡಿದಿದ್ದುದರಿಂದ ಚಕ್ರಪಾಣಿಯಾದ ವಿಷ್ಣುವಿನಂತೆಯೂ ಪ್ರಕಾಶಿಸುತ್ತಿದ್ದನು. ಚಕ್ರಧರನಾಗಿ ಆಕಾಶದಲ್ಲಿದ್ದ ಲವನನ್ನು ನೋಡಿ ಯೋಧರಲ್ಲಿ ಕೆಲವರು ಬಾಣಗಳನ್ನು ಧನುಸ್ಸಿನಲ್ಲಿ ಯೋಜಿಸಿ ಸನ್ನದ್ಧರಾಗಿ ನಿಂತರು. ಕೆಲವರು ಗುರಾಣಿಗಳಿಂದ ತಮ್ಮ ತಲೆಗಳನ್ನು ಮುಚ್ಚಿಕೊಂಡರು. ಮತ್ತೆ ಕೆಲವರು ಲವನು ಮೇಲೆ ಬಿದ್ದುಬಿಡುವನೆಂಬ ಭಯದಿಂದ ರಥಗಳ ಕೆಳಭಾಗಗಳಲ್ಲಿ ಅವಿತುಕೊಂಡರು.

ಆ ಸಮಯದಲ್ಲಿ ದಶರಥನ ಮಂತ್ರಿಯಾಗಿದ್ದ ಸುಯಜ್ಞನ ಮಕ್ಕಳಾದ ಜಿತಶ್ರಮ, ಧಾರ್ಮಿಕ, ಸುಕೇತ, ಶತ್ರುಸೂದನ, ಚಂದ್ರ, ಮದ, ಶಲ, ಕಾಲ, ಮಲ್ಲ, ಸಿಂಹ ಎಂಬ ವೀರಯೋಧರು ಆಕಾಶದಲ್ಲಿ ಚಕ್ರಹಸ್ತನಾಗಿದ್ದ ಲವನನ್ನು ತೀಕ್ಷ್ಣವಾದ ಬಾಣಗಳಿಂದ ಪ್ರಹರಿಸಿದರು. ಆ ಬಾಣಗಳ ಪ್ರಹಾರಗಳಿಂದ ಲವನ ಕೈಯಲ್ಲಿದ್ದ ಚಕ್ರವು ನುಚ್ಚುನೂರಾಗಿ ಕಳೆಕ್ಕೆ ಬಿದ್ದಿತು. ಒಡನೆಯೇ ಲವನು ಧರೆಗೆ ಬಂದು ಪರಿಘಾಯುಧವನ್ನೆತ್ತಿ

ಕೊಂಡು ಮಂತ್ರಿಕುಮಾರರನ್ನು ಪ್ರಹರಿಸಿದನು. ಲವನ ಪರಿಘಪ್ರಹಾರ ದಿಂದ ಮಂತ್ರಿಕುಮಾರರ ಕವಚಗಳು ಛಿದ್ರ-ಛಿದ್ರವಾದುವು. ಗುರಾಣಿಗಳು ಒಡೆದು ಕೆಳಗೆ ಬಿದ್ದುವು. ಅವರ ಶರೀರಗಳೆಲ್ಲವೂ ರಕ್ತದಿಂದ ತೋಯ್ದುಹೋದುವು. ವೇದಬಾಹ್ಯರೂ, ವಿಷ್ಣುವಿನಲ್ಲಿ-ತಂದೆ-ತಾಯಿ ಗಳಲ್ಲಿ ಭಕ್ತಿಯಿಲ್ಲದವರೂ, ನಾಸ್ತಿಕರೂ ರೌರವವೆಂಬ ನರಕದಲ್ಲಿ ಬೀಳು ವಂತೆ–ಲವನ ಸತತಪ್ರಹಾರದಿಂದಾಗಿ ಮಂತ್ರಿಕುಮಾರರು ಅಸುನೀಗಿ ನೆಲದ ಮೇಲೆ ಬಿದ್ದರು. ಅನಂತರ ರುಧಿರಾಕ್ಷನು ಭಾರವಾದ ಗದೆಯಿಂದ ಲವನನ್ನು ಅಪ್ಪಳಿಸಿದನು. ಒಡನೆಯೇ ಲವನು ಮೂರ್ಛಿತನಾಗಿ ಕೆಳಕ್ಕೆ ಬಿದ್ದನು. ಮುಹೂರ್ತಕಾಲಾನಂತರ ಮೂರ್ಛೆಯಿಂದ ಎಚ್ಚೆತ್ತ ಲವನು ಅತಿಕ್ರುದ್ಧನಾಗಿ ನೆಲದ ಮೇಲೆ ಬಿದ್ದಿದ್ದ ಕುಂತಾಯುಧವನ್ನೆತ್ತಿ ರಾಕ್ಷಸನ ಜುಟ್ಟುಹಿಡಿದು ಬಗ್ಗಿಸಿಕೊಂಡು ಆ ಆಯುಧದಿಂದ ಅವನ ತಲೆಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಿದನು. ಬಳಿಕ ಲವನು ರುಧಿರಾಕ್ಷನ ಬಳಿಯಲ್ಲಿದ್ದ ಸೂರ್ಯದತ್ತವಾದ ಧನುಸ್ಸನ್ನು ತೆಗೆದುಕೊಂಡು ಸೈನಿಕರ ಮೇಲೆ ಪುನಃ ಬಾಣಗಳನ್ನು ಸುರಿಸತೊಡಗಿದನು. ಆದರೂ ಅಸಂಖ್ಯಾತವಾಗಿದ್ದ ಆ ಸೈನ್ಯವು ಗರ್ಭಸ್ಥಶಿಶುವು ಹೊರಬಂದ ಕೂಡಲೇ ಅಜ್ಞಾನವು ಆವರಿಸು ವಂತೆ–ಲವನನ್ನು ಆವರಿಸಿಕೊಂಡಿತು. ಬೆಂಕಿಯನ್ನು ಆವರಿಸಿದ ಹುಲ್ಲನ್ನು ಬೆಂಕಿಯು ಕ್ಷಣಮಾತ್ರದಲ್ಲಿ ಸುಟ್ಟುಹಾಕುವಂತೆ–ಲವನು ತನ್ನನ್ನಾಕ್ರಮಿಸಿದ ಆ ಮಹಾಸೈನ್ಯವನ್ನೂ ಕ್ಷಣಮಾತ್ರದಲ್ಲಿ ಧ್ವಂಸಮಾಡಿದನು.

ಇತ್ತಲಾಗಿ ಸಿಂಹವಿಕ್ರಮನಾದ ಕುಶನು ಲಕ್ಷ್ಮಣನನ್ನು ಆಕ್ರಮಿಸಿ ದನು. ತನ್ನನ್ನು ಆಕ್ರಮಿಸಿ ಬಾಣಪ್ರಯೋಗಮಾಡುತ್ತಿದ್ದ ಕುಶನ ಮೇಲೆ ಲಕ್ಷ್ಮಣನು ತೀಕ್ಷ್ಣವಾದ ಐದು ಬಾಣಗಳನ್ನು ಪ್ರಯೋಗಿಸಿದನು. ಅದರಿಂದ ಕುಪಿತನಾದ ಕುಶನು ಲಕ್ಷ್ಮಣನಿಗೆ ಹಿಮ್ಮೆಟ್ಟದೆ ಸ್ಥಿರವಾಗಿ ನಿಲ್ಲೆಂದು ಗರ್ಜಿಸಿ ಹೇಳುತ್ತಾ ಒಂದು ತೀಕ್ಷ್ಣವಾದ ಬಾಣವನ್ನು ಲಕ್ಷ್ಮಣನ ಮೇಲೆ ಪ್ರಯೋಗಿ ಸಿದನು. ವಿಚಿತ್ರವಾದ ಆ ಬಾಣದ ಪ್ರಹಾರದಿಂದ ಲಕ್ಷ್ಮಣನು ರಥಸಹಿತ ನಾಗಿ ಗರ-ಗರನೆ ಸುತ್ತುತ್ತಿದ್ದನು. ಹಾಗೆ ರಥವು ತಿರುಗುತ್ತಿದ್ದ ವೇಗಕ್ಕೆ ರಥಕ್ಕೆ ಹೂಡಿದ್ದ ನಾಲ್ಕು ಕುದುರೆಗಳೂ ಸತ್ತುಹೋದುವು. ಅನಂತರ ಲಕ್ಷ್ಮಣನು ಮತ್ತೊಂದು ರಥವನ್ನೇರಿ ಬಂದು ತೀಕ್ಷ್ಣವಾದ ಬಾಣಗಳಿಂದ

ಕುಶನನ್ನು ಪ್ರಹರಿಸಿದನು. ಎರಡು ಬಾಣಗಳಿಂದ ಕುಶನ ಕವಚವನ್ನು ಕತ್ತರಿಸಿ ಪುನಃ ಮೂರು ಬಾಣಗಳಿಂದ ಅವನ ಕಿರೀಟವನ್ನೂ ಹಾರಿಸಿದನು. ಅದು ಪರಮಾದ್ಭುತವಾಗಿ ಕಂಡಿತು. ಆ ಸಮಯದಲ್ಲಿ ಕವಚದಿಂದ ವಿಹೀನನಾಗಿದ್ದ ಕುಶನು ಪೊರೆಯನ್ನು ಬಿಟ್ಟ ಹಾವಿನಂತೆಯೇ ಪ್ರಕಾಶಿಸಿದನು. ಬಳಿಕ ಶೂರನಾದ ಕುಶನು ವಿನಯಪೂರ್ವಕವಾಗಿ ವಕ್ರೋಕ್ತಿಯೊಡನೆ ಹೇಳಿದನು:

"ಲಕ್ಷ್ಮಣ! ಕವಚವನ್ನು ಕತ್ತರಿಸಿ ಕಿರೀಟವನ್ನು ಹಾರಿಸುವುದರ ಮೂಲಕ ನನ್ನ ಮೇಲಿದ್ದ ಭಾರವನ್ನು ನೀನು ಬಹಳವಾಗಿ ಕಡಿಮೆ ಮಾಡಿರುವೆ. ಇದಕ್ಕೆ ಪ್ರತಿಯಾಗಿ ನಾನೂ ನಿನಗೆ ಉಪಕಾರಮಾಡುವೆನು. ಈಗ ನಿನ್ನ ಸೈನ್ಯದ ಭಾರವು ನಿನಗೆ ಹೆಚ್ಚಾಗಿದೆಯಲ್ಲವೇ? ಈ ಭಾರವನ್ನು ನಾನು ಇಳಿಸಿಕೊಡುವೆನು"-ಎಂದು ಹೇಳುತ್ತಾ ಅಥರ್ವವೇದಪ್ರಸಿದ್ಧವಾದ ಸೂಕ್ತವೊಂದನ್ನು ಪುರಶ್ಚರಣೆಮಾಡಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿ ದನು. ಹಾಗೆ ಕುಶನು ಬಿಟ್ಟ ಆಗ್ನೇಯಾಸ್ತ್ರದಿಂದ ಸಹಸ್ರಮುಖವಾಗಿ ಉರಿಗಳೆದ್ದು ಮಹಾತ್ಮನಾದ ಲಕ್ಷ್ಮಣನ ರಥವನ್ನೇ ಸುಟ್ಟುಹಾಕಿದುವು. ವಸ್ತ್ರಾಭರಣಗಳನ್ನು ತೊಟ್ಟಿದ್ದ ಸೈನಿಕರೂ ಸುಟ್ಟುಹೋದರು. ಧ್ವಜಗಳೂ ಸುಟ್ಟುಹೋದುವು. ಕವಚಗಳನ್ನು ತೊಟ್ಟಿದ್ದ ವೀರರ ತಲೆಗೂದಲುಗಳು ಸುಟ್ಟುಹೋದುವು. ಹಂಸದಂತೆ ಪ್ರಕಾಶಮಾನವಾಗಿದ್ದ ಕುದುರೆಗಳ ಬಾಲಗಳೂ, ರಥಚಕ್ರಗಳೂ, ಛತ್ರ-ಚಾಮರಗಳೂ ಸುಟ್ಟು ಬೂದಿ ಯಾದುವು. ಆಯುಧಗಳೆಲ್ಲವೂ ಸುಟ್ಟುಹೋದುವು. ಹೀಗೆ ತನ್ನ ಸೈನ್ಯವು ಆಗ್ನೇಯಾಸ್ತ್ರದಿಂದ ಬೆಂದುಹೋಗುತ್ತಿರುವುದನ್ನು ನೋಡಿ ಶತ್ರುಸಂಹಾರಕ ನಾದ ಲಕ್ಷ್ಮಣನು ಆಗ್ನೇಯಾಸ್ತ್ರವನ್ನು ವಾರುಣಾಸ್ತ್ರದಿಂದ ಶಾಂತಗೊಳಿಸಿ ದನು. ಅನಂತರ ಕುಶನು ವಾಯವ್ಯಾಸ್ತ್ರವನ್ನು ಪ್ರಯೋಗಿಸಿದನು. ಅದರ ಪರಿಣಾಮವಾಗಿ ಲಕ್ಷ್ಮಣನ ಕಡೆಯ ಸೈನಿಕರು ಬಿರುಗಾಳಿಯಿಂದ ಆಕಾಶಕ್ಕೆ ಒಯ್ಯಲ್ಪಟ್ಟು ಆಕಾಶದಲ್ಲಿ ಹಾರಾಡುತ್ತಿರುವರೋ ಎಂಬಂತೆ ಕಾಣುತ್ತಿದ್ದರು. ಗಾಳಿಯ ವೇಗದಿಂದಾಗಿ ರಥಗಳೂ ಆನೆಗಳೂ ತೊಪ-ತೊಪನೆ ಬಿದ್ದುಹೋದುವು. ಅದರಿಂದ ಕ್ರುದ್ಧನಾದ ಸೇನಾಪತಿಯಾದ ಕಾಲಜಿತನು ಲಕ್ಷ್ಮಣನಿಗೆ ಹೇಳಿದನು :

"ಮಹಾರಾಜ! ಇವನ ತಮ್ಮನು ಬರುವುದರೊಳಗಾಗಿ ದಡವು ಸಮುದ್ರವನ್ನು ಅಡಗಿಸುವಂತೆ–ನಾನು ಇವನ ಪರಾಕ್ರಮವನ್ನು ಅಡಗಿಸಿ ಬಿಡುವೆನು"–ಎಂದು ಹೇಳಿ ಕುಶನೊಡನೆ ಯುದ್ಧಮಾಡಲು ಮುಂದಾದನು.

'ಎಲವೋ ಬಾಲಕ! ರಾಮನ ಸೈನ್ಯವನ್ನು ನಾಶಪಡಿಸಿರುವ ನೀನು ಈಗ ತಾನೇ ನನಗೆ ಸಿಕ್ಕಿರುವೆ. ಕ್ಷಣಮಾತ್ರದಲ್ಲಿ ನಿನ್ನ ದರ್ಪವನ್ನು ಅಡಗಿಸಿ ಬಿಡುವೆನು. ಇದು ನಿಶ್ಚಯ'–ಎಂದು ಗರ್ಜಿಸಿದನು.

ಕಾಲಜಿತನ ಆ ಮಾತನ್ನು ಕೇಳಿ ಕುಶನು ನಸುನಗುತ್ತಾ ಹೇಳಿದನು :

"ಆಡಿಗೆ ಕತ್ತಿನ ಮೊಲೆಗಳೂ, ಕಿವುಡನಿಗೆ ಕೇಳಲಾಗದ ಕಿವಿಗಳೂ ಇರುವಂತೆ ಕಾಲಜಿತನೆಂಬ ಹೆಸರು ನಿನಗೆ ವ್ಯರ್ಥವಾಗಿದೆ. ಎಲೈ ಮೂಢನೇ! ನಿನ್ನಂತಹ ಹುಲುಮಾತುಗಳನ್ನಾಡುವವನನ್ನು ಯಾರು ಸೇನಾಪತಿಯನ್ನಾಗಿ ಮಾಡಿದರು? ನನ್ನ ತಮ್ಮನು ನಿನ್ನೆದುರಿನಲ್ಲಿಯೇ ನಿನ್ನ ಸೈನ್ಯವನ್ನು ನಾಶಮಾಡುವನು. ನಿನ್ನ ನಾಲಿಗೆಯನ್ನು ಕತ್ತರಿಸುವ ಸಲುವಾಗಿಯೇ ಬಿಡುತ್ತಿರುವ ಈ ಬಾಣವನ್ನಾದರೂ ಕತ್ತರಿಸಿ ನಿನ್ನ ಸಾಹಸವನ್ನು ತೋರಿಸು"–ಎಂದು ಹೇಳಿ ಕಾಲಜಿತನ ನಾಲಿಗೆಯನ್ನೇ ಲಕ್ಷ್ಯವನ್ನಾಗಿಟ್ಟು ಕೊಂಡು ತೀಕ್ಷ್ಣವಾದ ಬಾಣವೊಂದನ್ನು ಪ್ರಯೋಗಿಸಿದನು. ಕ್ಷಣಮಾತ್ರದಲ್ಲಿ ಕಾಲಜಿತನ ನಾಲಿಗೆಯು ಕಳಚಿ ಬಿದ್ದಿತು.

"ಈಗ ನೀನು ಮೌನಿಯಾದೆಯಲ್ಲವೇ? ಈಗಲಾದರೂ ನೀನು ಸೈನ್ಯದ ಮಧ್ಯದಲ್ಲಿರುವ ಲವನನ್ನು ಕರೆಯಿಸಿ ಅವನನ್ನು ಪೂಜಿಸಿ ಮೌನವ್ರತವನ್ನು ಆಚರಿಸು" ಎಂದು ಕುಶನು ಅಬ್ಬರಿಸಿದನು.

ಅದರಿಂದ ಅತ್ಯಂತಕ್ರುದ್ಧನಾದ ಕಾಲಜಿತನು ನಾಲಿಗೆಯನ್ನು ಕಳೆದುಕೊಂಡಿದ್ದರೂ ವಿಷಣ್ಣನಾಗದೆ ವೇಗವಾದ ಒಂದು ಬಾಣದಿಂದ ಕುಶನ ವಕ್ಷಃಸ್ಥಳವನ್ನು ಪ್ರಹರಿಸಿ ಮತ್ತೊಂದು ಬಾಣದಿಂದ ಅವನ ಎಡಗೈಯನ್ನು ಪ್ರಹರಿಸಿದನು. ಮರುಕ್ಷಣದಲ್ಲಿಯೇ ಕುಶನು ಒಂದು ಬಾಣ ದಿಂದ ಕಾಲಜಿತನ ಬಲಗೈಯನ್ನು ಕತ್ತರಿಸಿ ಅರ್ಧಚಂದ್ರವೆಂಬ ಮತ್ತೊಂದು ಬಾಣದಿಂದ ಕುಂಡಲಗಳಿಂದ ಕೂಡಿದ್ದ ಕಾಲಜಿತನ ತಲೆಯನ್ನು ಹಾರಿಸಿದನು.

ಹೀಗೆ ಮಹಾಪರಾಕ್ರಮಿಯಾದ ಸೇನಾಪತಿಯಾದ ಕಾಲಜಿತನು ಮೃತನಾಗಲು ಲಕ್ಷ್ಮಣನು ಸಾಲ-ತಾಲ-ವಟವೃಕ್ಷಗಳನ್ನು ಏಕಕಾಲದಲ್ಲಿ ಕತ್ತರಿಸುವ ಸಾಮರ್ಥ್ಯದಿಂದ ಕೂಡಿದ್ದ ಘೋರವಾದ ಬಾಣಗಳನ್ನು ಕುಶನ ಮೇಲೆ ಸುರಿಸಿದನು. ಅನಂತರ ಆರು ಬಾಣಗಳನ್ನು ಕುಶನ ವಕ್ಷಃಸ್ಥಳಕ್ಕೆ ಪ್ರಯೋಗಿಸಿ ನಂತರ ಅವನ ಮೇಲೆ ಶಕ್ತಿ-ಗದೆ-ಕುಂತ-ಖಡ್ಗ-ಪರಶು-ತೋಮರ-ಮುಂತಾದ ಆಯುಧಗಳನ್ನು ಸತತವಾಗಿ ಪ್ರಯೋಗಿಸಿದನು. ಕುಶನು ಕೈಚಳಕದಿಂದ ತನ್ನ ಮೇಲೆರಗಿ ಬರುತ್ತಿದ್ದ ಬಾಣಗಳನ್ನೂ ಶಕ್ತ್ಯಾಯುಧವೇ ಮುಂತಾದ ಆಯುಧವಿಶೇಷಗಳನ್ನೂ ಏಳೇಳು ತುಂಡು ಗಳನ್ನಾಗಿ ಕತ್ತರಿಸಿದನು. ಬಳಿಕ ಕುಶನು ಲಕ್ಷ್ಮಣನನ್ನು ನಿಲ್ಲು-ನಿಲ್ಲೆಂದು ಕೂಗಿ ಹೇಳುತ್ತಾ ವಾಲ್ಮೀಕಿಗಳು ಕೊಟ್ಟಿದ್ದ ಐದು ಬಾಣಗಳನ್ನು ಧನುಸ್ಸಿ ನಲ್ಲಿ ಹೂಡಿದನು. ಆ ಬಾಣಗಳು ಹದ್ದಿನ ರೆಕ್ಕೆಗಳಿಂದ ಕೂಡಿದ್ದು ಅತ್ಯಂತ ಹರಿತವಾಗಿದ್ದುವು. ಸರ್ಪಗಳಂತೆ ಕ್ರೂರವಾಗಿದ್ದು ಉರಿಯುತ್ತಿರುವ ಬೆಂಕಿ ಯಂತೆ ಕಿಡಿಗಳನ್ನು ಕಾರುತ್ತಿದ್ದುವು. ಧನುಸ್ಸಿನಿಂದ ಹೊರಬಂದೊಡನೆಯೇ ಮರ್ಮಭೇದಿಗಳಾದ ಆ ಬಾಣಗಳು ಆಕಾಶದ ಕಡೆಯಿಂದ ಧಗ-ಧಗನೆ ಉರಿಯುತ್ತಾ ಬಂದು ಮಹಾತ್ಮನಾದ ಲಕ್ಷ್ಮಣನ ವಕ್ಷಃಸ್ಥಳವನ್ನು ಭೇದಿಸಿ ಬಿಟ್ಟುವು. ಲಕ್ಷ್ಮಣನು ತೇಜೋಹೀನನಾಗಿ-ಸೂರ್ಯನು ಆಕಾಶದಿಂದ ನೆಲಕ್ಕೆ ಬೀಳುವಂತೆ ಕೆಳಕ್ಕೆ ಬಿದ್ದನು.

ಆ ವೇಳೆಗೆ ಆಕಾಶದ ಕಡೆಯಿಂದ ಲವನ ಗರ್ಜನೆಯ ಶಬ್ದವು ಕುಶನಿಗೆ ಕೇಳಿಸಿತು. ಗಜಸೈನಿಕರೂ ಮತ್ತು ರಥಸೈನಿಕರೂ ಲವನನ್ನು ಆಕ್ರಮಿಸಿ ಯುದ್ಧಮಾಡುತ್ತಿದ್ದರು. ಅದನ್ನು ನೋಡಿದ ಕುಶನು ಧನುರ್ಬಾಣಗಳೊಡ ನೆಯೂ, ಕತ್ತಿ-ಗುರಾಣಿಗಳೊಡನೆಯೂ ಪಕ್ಷಿರಾಜನಂತೆ ಆಕಾಶಕ್ಕೆ ಹಾರಿ ತಮ್ಮನನ್ನು ಆಕ್ರಮಿಸಿ ಯುದ್ಧಮಾಡುತ್ತಿದ್ದ ಗಜಸೈನಿಕರನ್ನೂ, ರಥ ಸೈನಿಕರನ್ನೂ ಕ್ಷಣಮಾತ್ರದಲ್ಲಿ ಸಂಹರಿಸಿ ಲವನನ್ನು ಬಿಡಿಸಿಕೊಂಡು ಸಂತೋಷಭರಿತನಾಗಿ ಆಶ್ರಮವನ್ನು ಸೇರಿದನು. ಹೀಗೆ ಕುಶ-ಲವರು ವಾಲ್ಮೀಕಿಗಳ ಆಶ್ರಮದಲ್ಲಿ ಅಶ್ವಮೇಧಾಶ್ವದ ಬೆಂಗಾವಲಾಗಿ ಬಂದಿದ್ದ ಅಯೋಧ್ಯೆಯ ಸೈನಿಕರೆಲ್ಲರನ್ನೂ ಧ್ವಂಸಮಾಡಿ ಆಶ್ರಮದಲ್ಲಿ ನಿರ್ಭಯರಾಗಿದ್ದರು.

ಇತ್ತಲಾಗಿ ಗಂಗಾತೀರದಲ್ಲಿದ್ದ ಯಜ್ಞಮಂಟಪದಲ್ಲಿ ಯಜ್ಞದೀಕ್ಷಿತನಾಗಿ ಮುನಿಗಳೊಡನೆ ಕುಳಿತಿದ್ದ ಶ್ರೀರಾಮನು ಭರತನಿಗೆ ಹೇಳಿದನು :

"ಭರತ! ತಮ್ಮನಾದ ಶತ್ರುಘ್ನನನ್ನು ಜಯಿಸಿ ಕುದುರೆಯನ್ನು ಕಟ್ಟಿಹಾಕಿದ್ದ ಬಾಲಕರನ್ನು ಪರಾಜಯಗೊಳಿಸಿ ಶತ್ರುಘ್ನನನ್ನೂ ಕುದುರೆಯನ್ನೂ ಕರೆತರುವಂತೆ ಆಜ್ಞಾಪಿಸಿ ನಾನು ಲಕ್ಷ್ಮಣನನ್ನು ಕಳುಹಿಸಿಕೊಟ್ಟಿದ್ದೆನು. ಇಷ್ಟು ದಿವಸಗಳು ಕಳೆದರೂ ಅವನೇಕೆ ವಿಜಯಶಾಲಿಯಾಗಿ ಹಿಂದಿರುಗಲಿಲ್ಲವೆಂಬುದೇ ನನ್ನ ಯೋಚನೆಗೆ ಕಾರಣವಾಗಿದೆ. ಲಕ್ಷ್ಮಣನೇನು ಸಾಮಾನ್ಯನಲ್ಲ. ಕುಪಿತನಾದ ಲಕ್ಷ್ಮಣನನ್ನು ಕನಸಿನಲ್ಲಿ ಕಂಡರೂ ಮೂರು ಲೋಕಗಳೂ ವಿನಾಶಹೊಂದುವುವು. ಹೀಗಿರುವಾಗ ಪ್ರತ್ಯಕ್ಷವಾಗಿ ಅವನೊಡನೆ ಯುದ್ಧಮಾಡಲು ಯಾರಿಂದ ಸಾಧ್ಯವಾಗು ವುದು? ತಮ್ಮನಾದ ಶತ್ರುಘ್ನನು ಪರಾಜಯಹೊಂದಿರುವ ಕೋಪವೂ ಅವನಲ್ಲಿ ಅಡಗಿದೆ. ಮೇಲಾಗಿ ನನ್ನಿಂದ ಆಜ್ಞಪ್ತನಾಗಿದ್ದಾನೆ. ಅಂತಹವನ ಮೇಲೆ ಯುದ್ಧಮಾಡಲು ಕಾಡಿನಲ್ಲಿ ಹುಟ್ಟಿ ಅಜ್ಞರಾಗಿಯೂ, ಚಪಲಚಿತ್ತರಾಗಿಯೂ, ದಿಕ್ಕಿಲ್ಲದವರಾಗಿಯೂ ಇರುವ ಆ ಬಾಲಕರಿಗೆ ಹೇಗೆ ತಾನೇ ಸಾಧ್ಯವಾಗುವುದು? ಲಕ್ಷ್ಮಣನ ಭಯದಿಂದ ಆ ಬಾಲಕರು ಯಾರನ್ನಾದರೂ ಆಶ್ರಯಿಸಿರಬೇಕು. ಪ್ರಜ್ಞಾಶೂನ್ಯನಾಗಿ ಬಿದ್ದಿರುವ ಶತ್ರುಘ್ನನನ್ನು ಯಮಲೋಕದಿಂದಾದರೂ ಕರೆತಂದು ತಾಯಿಗೆ ತೋರಿಸುವಷ್ಟು ಸಾಮರ್ಥ್ಯವನ್ನು ನಮ್ಮ ಲಕ್ಷ್ಮಣನು ಹೊಂದಿದ್ದಾನೆ. ಇದರಲ್ಲಿ ಸಂಶಯವೇ ಇಲ್ಲ. ಕುಪಿತನಾಗಿ ಲಕ್ಷ್ಮಣನು ತನ್ನ ಮಕ್ಕಳಿಬ್ಬರನ್ನೂ ಕೊಲ್ಲುತ್ತಿರುವನೆಂಬ ವಾರ್ತೆಯನ್ನು ಕೇಳಿ ಅನಾಥೆಯಾದ ಅವರ ತಾಯಿಯು ಮಕ್ಕಳ ರಕ್ಷಣೆಗಾಗಿ ಯಾರ ಮೊರೆಹೋಗುವಳೋ? ಆ ಇಬ್ಬರು ಬಾಲಕರೂ ತಮ್ಮ ವಿನಾಶಕ್ಕಾಗಿಯೇ ನಮ್ಮ ಯಜ್ಞದ ವಿಘ್ನಕಾರಿಗಳಾದರೆಂದು ನಾನು ಭಾವಿಸುತ್ತೇನೆ. ಕುದುರೆಯು ದೇಶ-ದೇಶಗಳಲ್ಲಿ ಸಂಚರಿಸಿ ಅಯೋಧ್ಯೆಗೆ ಹಿಂದಿರುಗಲು ಎರಡು ದಿವಸಗಳ ಅವಧಿಯು ಮಾತ್ರವಿದ್ದಿತು. ಅಷ್ಟು ಕಾಲದವರೆಗೂ ಶತ್ರುಘ್ನನು ಕುದುರೆಯನ್ನು ರಕ್ಷಿಸುತ್ತಲೇ ಹಿಂಬಾಲಿಸುತ್ತಿದ್ದನು. ಶತ್ರುಘ್ನನಿಂದ ರಕ್ಷಿತವಾಗಿದ್ದ ಕುದುರೆಯನ್ನು ಅರಣ್ಯದ ಆ ಇಬ್ಬರು ಬಾಲಕರು ಚಾಪಲ್ಯದಿಂದ ಕಟ್ಟಿಹಾಕಿದ್ದಾರೆ. ಹಾಗೆ ಕಟ್ಟಿಹಾಕುವಾಗ ಅವರು ನನ್ನ

ನ್ನಾಗಲೀ, ನಿನ್ನನ್ನಾಗಲೀ, ಸುಗ್ರೀವ-ವಿಭೀಷಣರನ್ನಾಗಲೀ, ಅಂಗದ-ಹನು ಮಂತರನ್ನಾಗಲೀ ಲೆಕ್ಕಿಸಲೇ ಇಲ್ಲವೆಂದು ತೋರುತ್ತದೆ. ನಮ್ಮೆಲ್ಲರನ್ನೂ ಅವರು ತೃಣಪ್ರಾಯರನ್ನಾಗಿ ಭಾವಿಸಿದಂತಿದೆ. ಭರತ! ನೀನೀಗಲೇ ಕುದುರೆ ಯಿರುವೆಡೆಗೆ ಸೇವಕರನ್ನು ಕಳುಹಿಸು. ಅವರು ಲಕ್ಷ್ಮಣನ ಬಳಿಗೆ ಹೋಗಿ ಕುದುರೆಯನ್ನಾದರೂ ಅಟ್ಟಿಕೊಂಡು ಬರಲಿ. ಲಕ್ಷ್ಮಣನು ಕುಪಿತನಾಗಿದ್ದರೂ ನನ್ನ ಮಾತನ್ನು ಕೇಳುವನು."

ಶ್ರೀರಾಮನು ಹೀಗೆ ಹೇಳುತ್ತಲೇ ಭರತನು ಐವರು ಯೋಧರನ್ನು ಶ್ರೀರಾಮನ ಬಳಿಗೆ ಕರೆತಂದನು. ಬಂದ ಯೋಧರಿಗೆ ಶ್ರೀರಾಮನು ಹೇಳಿದನು:

"ವೀರಯೋಧರೇ! ನೀವೀಗಲೇ ಲಕ್ಷ್ಮಣನ ಬಳಿಗೆ ಹೋಗಿ ನನ್ನ ಈ ಸಂದೇಶವನ್ನು ಅವನಿಗೆ ತಿಳಿಯಪಡಿಸಬೇಕು.

'ಲಕ್ಷ್ಮಣ! ಯುದ್ಧದಲ್ಲಿ ಆ ಇಬ್ಬರು ಬಾಲಕರನ್ನು ಸಂಹರಿಸ ಬಾರದು. ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿ ವಿಮೋಹಿತರನ್ನಾಗಿಮಾಡಿ ಅವರನ್ನು ಕರೆತರಬೇಕು. ಅವರು ಅಪರಾಧಿಗಳೇ ಆಗಿದ್ದರೂ ಅವರನ್ನು ಶಿಕ್ಷಿಸಬಾರದು. ನೀನು ಶೂರನು. ಸಮರ್ಥನು. ಸರ್ವಾಸ್ತ್ರಕೋವಿದನು. ಮೇಲಾಗಿ ನಿನ್ನ ಬಳಿ ರಥವಿದೆ. ಅಪಾರಸೈನ್ಯವಿದೆ. ಆ ಬಾಲಕರಾದರೋ ರಥಹೀನರು. ಆಶ್ರಯರಹಿತರು. ಆದುದರಿಂದ ಸಂಹರಿಸದೇ ಆ ಇಬ್ಬರು ವೀರರನ್ನೂ ರಾಜಧಾನಿಗೆ ಕರೆದುಕೊಂಡು ಬಾ. ಮಕ್ಕಳ ವಿಷಯದಲ್ಲಿ ದಯೆತೋರುವ ಸಾಧುಗಳು ಲೋಕದಲ್ಲಿ ಪುತ್ರ-ಪೌತ್ರಸಹಿತರಾಗಿ ಚೆನ್ನಾಗಿ ಬಾಳುವರು. ಭೂಮಿಯಲ್ಲಿ ಹುಟ್ಟಿರುವ ನಾನು ಸೀತೆಯ ಮುಖಕ್ಕೆ ಸದೃಶ ವಾದ ಮುಖವನ್ನು ಹೊಂದಿರುವ ಮಗನ ಮುಖವನ್ನಂತೂ ನೋಡಲಿಲ್ಲ. ಮಕ್ಕಳ ವ್ಯಾಮೋಹದಿಂದಿರುವ ನಾನು ಅರಣ್ಯದಲ್ಲಿರುವ ಆ ಅನಾಥಬಾಲಕ ರನ್ನಾದರೂ ರಕ್ಷಿಸಬಯಸುತ್ತೇನೆ. ಅವರು ಯಾರ ಮಕ್ಕಳು? ಏತಕ್ಕಾಗಿ ಅರಣ್ಯದಲ್ಲಿ ಸಂಚರಿಸುತ್ತಿರುವರು? ಅವರ ತಾಯಿಯು ಎಲ್ಲಿರುವಳು? ಎಂಬುದೆಲ್ಲವನ್ನೂ ತಿಳಿದುಕೊಂಡು ಸಾಧ್ಯವಾದರೆ ಆ ಮಕ್ಕಳ ತಾಯಿಯನ್ನೂ ಜೊತೆಯಲ್ಲಿಯೇ ಕರೆದುಕೊಂಡು ಬಾ.'

ರಾಜಭಟರೇ! ನನ್ನ ಈ ಸಂದೇಶವನ್ನು ಯಥಾವತ್ತಾಗಿ ಲಕ್ಷ್ಮಣನಿಗೆ ತಿಳಿಸಿರಿ."

ಶ್ರೀರಾಮನು ರಾಜಭಟರಿಗೆ ಹೀಗೆ ಹೇಳುತ್ತಿರುವಾಗಲೇ ರಕ್ತಸಿಕ್ತ ರಾಗಿದ್ದ ಲಕ್ಷ್ಮಣನ ಕಡೆಯ ಯೋಧರು "ರಾಮ-ರಾಮ" ಎಂದು ಹಂಬಲಿ ಸುತ್ತಾ ಶ್ರೀರಾಮನ ಬಳಿಗೆ ಬಂದು ಹೇಳಿದರು :

"ಮಹಾಬಾಹುವೇ! ರಾಘವ! ಈ ಮಹಾಭಯದಿಂದ ನಮ್ಮನ್ನು ರಕ್ಷಿಸು. ಮಹಾಶೂರನಾದ ಲಕ್ಷ್ಮಣನು ಅಪಾರಸೈನ್ಯದೊಡನೆ ಕುದುರೆ ಯನ್ನೂ ಶತ್ರುಘ್ನನನ್ನೂ ಕರೆತರಲು ಹೋದುದು ಸರಿಯಷ್ಟೆ. ಕಾಡಿನಲ್ಲಿ ಲಕ್ಷ್ಮಣನು ಕುಶನೆಂಬ ಬಾಲಕನನ್ನು ಎದುರಿಸಿ ಯುದ್ಧಮಾಡಬೇಕಾಯಿತು. ಬಹಳ ಹೊತ್ತು ಯುದ್ಧವು ನಡೆದು ಕುಶನ ಬಾಣಗಳಿಂದ ಲಕ್ಷ್ಮಣನು ಬಹಳವಾಗಿ ಗಾಯಗೊಂಡನು. ಅನೇಕಸೈನಿಕರು ಅವನ ಬಾಣಗಳಿಂದ ಪ್ರಹೃತರಾಗಿ ರಕ್ತಸಿಕ್ತರಾಗಿ ಮುತ್ತುಗದ ಮರಗಳಂತೆ ಪ್ರಕಾಶಿಸುತ್ತಾ ಮೂರ್ಛಿತರಾಗಿ ಕೆಳಗೆ ಬಿದ್ದಿದ್ದಾರೆ. ಬಾಲಕನಾದ ಲವನ ಪ್ರಹಾರವನ್ನು ಸಹಿಸಲಾರದೇ ನಮ್ಮ ಹಲವಾರು ಸೈನಿಕರು ಬೆಟ್ಟದ ಗುಹೆಗಳಲ್ಲಿ ಅಡಿಗಿಕೊಂಡಿದ್ದಾರೆ. ಲಕ್ಷ್ಮಣನ ಸೇನಾಪತಿಯಾದ ಕಾಲಜಿತನು ಕುಶನ ಬಾಣಗಳಿಂದ ಹತನಾಗಿ ಅಸುತೊರೆದು ಬಿದ್ದಿದ್ದಾನೆ. ಅವನ ಅನುಯಾಯಿಗಳಾದ ಸೈನಿಕರಿಗೂ ಇದೇ ಗತಿಯಾಗಿದೆ. ಯುದ್ಧಮಾಡುತ್ತಿದ್ದಾಗ ಆ ಬಾಲಕನನ್ನು ನೋಡಿ ಲಕ್ಷ್ಮಣನ ಮನಸ್ಸು ಕರಗಿತು. ಕುಶನಿಗೆ ಹೇಳಿದನು :

"ಕುಶನೇ! ನಿನ್ನನ್ನು ಬಿಟ್ಟಿರುವೆನು. ನಿನ್ನ ತಮ್ಮನೊಡನೆ ನೀನು ಮನೆಗೆ ಹೋಗಿ ಸಾಮೋಪಾಯಕುಶಲನಾದವನೊಬ್ಬನು ನಮ್ಮಿಬ್ಬರನ್ನೂ ಬಿಟ್ಟನೆಂದು ನಿನ್ನ ತಾಯಿಗೆ ಹೇಳು."

ಲಕ್ಷ್ಮಣನ ಆ ಮಾತನ್ನು ಕೇಳಿ ಕುಶನು ಗಡುಸಾದ ಮಾತಿನಿಂದಲೇ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನೀನು ನನ್ನ ಬಾಣಗಳ ಪ್ರಹಾರದಿಂದಾಗಿ ಬಹಳ ಕ್ಲೇಶ ಪಡುತ್ತಿರುವೆ. ಆದುದರಿಂದ ನಿನ್ನೊಡನೆ ನಾನು ಯುದ್ಧಮಾಡಲು ಇಚ್ಛಿಸು ವುದಿಲ್ಲ. ನೀನು ನಿಮ್ಮ ಅಣ್ಣನಾದ ರಾಮನ ಬಳಿಗೆ ಹೊರಟುಹೋಗು.

ಯಾವನು ನೇರವಾಗಿ ತಾನೇ ಯುದ್ಧಕ್ಕೆ ಬರದೇ ನಿನ್ನನ್ನೂ ನಿನ್ನ ತಮ್ಮನನ್ನೂ ಯುದ್ಧಕ್ಕೆ ಕಳುಹಿಸಿ ಕ್ಲೇಶಪಡಿಸಿರುವನೋ–ಅವಮಾನಮಾಡಿಯಾ ನೆಂದು ಯಾರಿಗೆ ನೀನು ಭಯಪಡುತ್ತಿರುವೆಯೋ-ಅಂತಹ ರಾಮನಿಗೆ ಸ್ವಲ್ಪ ವಾದರೂ ಕರುಣೆಯೇ ಇಲ್ಲವೆಂದು ತೋರುತ್ತದೆ. ಆದರೆ ನಿನ್ನ ವಿಷಯದಲ್ಲಿ ನನಗೆ ಮರುಕವುಂಟಾಗಿದೆ. ಆದುದರಿಂದ ನಿನ್ನನ್ನು ಗಾಯಗೊಳಿಸದೆಯೇ ಬಿಟ್ಟುಬಿಡುವೆನು. ಹೊರಟುಹೋಗು. ಹಾಗೆ ಹಿಂದಿರುಗಿಹೋಗಲು ಇಚ್ಛಿಸದೆ ನಿನ್ನಲ್ಲಿ ನನ್ನೊಡನೆ ಯುದ್ಧಮಾಡುವಷ್ಟು ನಿಜಪೌರುಷವಿರುವು ದಾದರೆ ನನ್ನ ಮೇಲೆ ಬಾಣಪ್ರಯೋಗಮಾಡು."

ಪ್ರಭುವೇ! ಬಾಲಕನ ಉದ್ಧತವಾದ ಆ ಮಾತನ್ನು ಕೇಳಿದನಂತರ ಲಕ್ಷ್ಮಣನಿಗೆ ಯುದ್ಧವು ಅನಿವಾರ್ಯವೆನಿಸಿತು. ಏಳು ಬಾಣಗಳನ್ನು ಕುಶನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಆ ಬಾಣಗಳು ಕುಶನನ್ನು ಭೇದಿಸಿಕೊಂಡು ಹೊರಬಂದು ಕಾಡಿನಲ್ಲಿದ್ದ ವೃಕ್ಷಗಳನ್ನು ಸೀಳಿಹಾಕಿ ನೆಲದಲ್ಲಿ ಬಿದ್ದುವು. ಅಂತಹ ಪ್ರಹಾರದಿಂದಲೂ ಕುಶನು ಕಂಪಿಸಲಿಲ್ಲ. ಮರುಕ್ಷಣದಲ್ಲಿಯೇ ಅತ್ಯಂತತೀಕ್ಷ್ಣವಾದ ಬಾಣಗಳನ್ನು ಕುಶನು ಲಕ್ಷ್ಮಣನ ಮೇಲೆ ಪ್ರಯೋ ಗಿಸಿದನು. ಬಾಣಗಳ ಪ್ರಹಾರದಿಂದ ಲಕ್ಷ್ಮಣನ ದೇಹವು ಚರ್ಮದಿಂದ ವಿಹೀನವಾಗಿ ಅವನಿಗೆ ಹೊಸ ರೂಪವನ್ನು ತಂದಿತು. ಬಾಲಕನ ಸತತವಾದ ಬಾಣಗಳ ಪ್ರಯೋಗದಿಂದ ಕುಂಡಲಗಳಿಂದ ಸಹಿತನಾಗಿದ್ದ ಲಕ್ಷ್ಮಣನು ಮೂರ್ಛಿತನಾಗಿ ಕೆಳಗೆ ಬಿದ್ದನು. ನಿನ್ನ ಸೈನ್ಯವೂ ಭಗ್ನವಾಗಿ ದಿಕ್ಕಾ ಪಾಲಾಗಿ ಓಡಿಹೋಯಿತು. ನಾಯಕರಿಂದ ವಿಹೀನರಾದ ನಾವು ಸಮಾಚಾರ ವನ್ನು ತಿಳಿಸಲು ನಿನ್ನ ಬಳಿಗೆ ಬಂದಿರುತ್ತೇವೆ.

ಪ್ರಭುವೇ! ಯಜ್ಞದೀಕ್ಷೆಯನ್ನು ಸಾಕುಮಾಡು. ಕಾಡಿಗೆ ಹೋಗಿ ಕುಶನೊಡನೆ ಯುದ್ಧಮಾಡು. ನಿನ್ನನ್ನು ಬಿಟ್ಟು ಬೇರೆ ಯಾರೂ ಕುಶನನ್ನು ಎದುರಿಸಿ ನಿಲ್ಲಲಾರರು."

ರಾಜದೂತರ ಮಾತನ್ನು ಕೇಳುತ್ತಲೇ ರಾಮನು ಮೂರ್ಛಿತನಾಗಿ ಕೆಳಗೆ ಬಿದ್ದನು. ಒಡನೆಯೇ ಭರತನ ಶೈತ್ಯೋಪಚಾರದಿಂದ ಚೇತರಿಸಿಕೊಂಡ ಶ್ರೀರಾಮನಿಗೆ ಭರತನು ಹೇಳಿದನು :

“ರಾಘವ! ಲಕ್ಷ್ಮಣನ ಸಲುವಾಗಿ ದುಃಖಿಸಬೇಡ. ಲಕ್ಷ್ಮಣನು ನಿನ್ನ ಆಜ್ಞಾನುಸಾರವಾಗಿಯೇ ಶತ್ರುಘ್ನನನ್ನೂ ಕುದುರೆಯನ್ನೂ ಕರೆತರಲು ಕುಶನೊಡನೆ ಯುದ್ಧಮಾಡುತ್ತಾ ಮೂರ್ಛಿತನಾಗಿ ಬಿದ್ದಿರುವನು. ನನಗೆ ತಿಳಿದಿರುವಂತೆ ಅವನು ನಿನ್ನ ಆಜ್ಞಾನುಸಾರವಾಗಿ ಸೀತಾದೇವಿಯನ್ನು ಕಾಡಿಗೆ ಬಿಟ್ಟುಬಂದ ದಿನದಿಂದಲೂ ಬಹಳ ದುಃಖಿತನಾಗಿ ದೇಹತ್ಯಾಗವನ್ನು ಮಾಡಲು ಅಪೇಕ್ಷಿಸುತ್ತಲೇ ಇದ್ದನು. ನಿನ್ನ ಆಜ್ಞೆಯನ್ನು ನಡೆಸಿರುವೆನೆಂದು ನಿನ್ನ ಬಳಿಗೆ ಹೇಳಲು ಬಂದಾಗಲೇ ಲಕ್ಷ್ಮಣನು ಸೀತೆಯನ್ನು ಕಾಡಿಗೆ ಬಿಟ್ಟುಬಂದುದರ ದುಃಖದಿಂದ ಮೃತಪ್ರಾಯನಾಗಿದ್ದನು. ಆ ಸಮಯದಲ್ಲಿಯೂ ನಿನಗೆ ಸೀತೆಯ ವಿಷಯದಲ್ಲಾಗಲೀ ಲಕ್ಷ್ಮಣನ ವಿಷಯ ದಲ್ಲಾಗಲೀ ಕರುಣೆಯುಂಟಾಗಲೇ ಇಲ್ಲ. ನೀನು ಮಾಡಿದ ಸೀತಾತ್ಯಾಗವನ್ನು ನೆನೆಯುತ್ತಾ ಮರಣಕಾಲವನ್ನು ಎದುರುನೋಡುತ್ತಿದ್ದ ಲಕ್ಷ್ಮಣನು ಯಜ್ಞ ಕಾರ್ಯವನ್ನೇ ನೆಪವನ್ನಾಗಿ ಮಾಡಿಕೊಂಡು ನಿನ್ನ ಆಜ್ಞಾನುಸಾರವಾಗಿಯೇ ಕಾಡಿಗೆ ಹೋಗಿ ಕುಶನೊಡನೆ ಮಾಡಿದ ಯುದ್ಧ ವ್ಯಾಜದಿಂದ ಪ್ರಾಣಗಳನ್ನು ತೊರೆದಿದ್ದಾನೆ. ಹೀಗೆ ಪ್ರಾಣಬಿಡುವುದು ಲಕ್ಷ್ಮಣನಿಗೆ ಇಷ್ಟವೇ ಆಗಿದ್ದಿತು. ನಿರಪರಾಧಿನಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟುಬಂದುದರಿಂದ ಉಂಟಾದ ಪಾಪವನ್ನು ದೇಹದಲ್ಲಿ ಧರಿಸಿದ್ದ ಲಕ್ಷ್ಮಣನು ಕುಶನ ಧನುಸ್ಸಿನಿಂದ ಹೊರಟ ಬಾಣರೂಪವಾದ ಗಂಗೆಯಲ್ಲಿ ಮಿಂದು ಪವಿತ್ರಾತ್ಮನಾಗಿದ್ದಾನೆ.

ರಾಘವ! ಅಪರಿಶುದ್ಧನಾದ ನನಗೆ ನೀನು ಯಾವ ಕಾರ್ಯವನ್ನೂ ಹೇಳುವುದಿಲ್ಲ. ಈ ಅಯೋಧ್ಯೆಯಲ್ಲಿ ಎಷ್ಟು ದಿವಸಗಳು ಬದುಕಿದ್ದರೂ ನನ್ನ ಶರೀರವನ್ನು ಪಾವನವನ್ನಾಗಿ ಮಾಡಿಕೊಳ್ಳಲು ಸಾಧ್ಯವಾಗಲಾರದು. ಆದುದರಿಂದ ನಾನೀಗಲೇ ಪೂತಾತ್ಮನಾಗಲೂ ಅರಣ್ಯಕ್ಕೆ ಹೊರಡುತ್ತೇನೆ. ಸೀತಾ-ಶತ್ರುಘ್ನ-ಲಕ್ಷ್ಮಣರಿಲ್ಲದಿರುವ ಈ ಅಯೋಧ್ಯೆಯಲ್ಲಿ ನಾನು ಹೇಗೆ ತಾನೇ ಜೀವಿಸಿರಲಿ?”

“ಭರತ! ಚಿಂತಿಸಬೇಡ. ಪೂತಾತ್ಮನಾಗಲು ಈಗ ನಿನಗೂ ಕಾರ್ಯ ವನ್ನು ಹೇಳುತ್ತೇನೆ. ನೀನು ಸೈನ್ಯಸಮೇತನಾಗಿ ಈಗಲೇ ಕಾಡಿಗೆ ಹೋಗು. ಆ ಬಾಲಕರು ಯಾರೆಂಬುದನ್ನು ತಿಳಿ. ಕುಶನೊಡನೆ ಯುದ್ಧಮಾಡಿ

ಜಯಿಸಿ ಅವನನ್ನೂ ಮತ್ತು ಅವನ ತಮ್ಮನಾದ ಲವನನ್ನೂ ನನ್ನ ಬಳಿಗೆ ಕರೆದುಕೊಂಡು ಬಾ. ಮೂರ್ಛಿತರಾಗಿ ಬಿದ್ದಿರುವ ನಮ್ಮ ಅನುಜರನ್ನೂ ಎಚ್ಚರಗೊಳಿಸು. ಅವರು ಪ್ರಾಣಗಳನ್ನು ಬಿಟ್ಟಿರಲಾರರು. ವಾನರರೊಡನೆ ಹನುಮಂತ ಮತ್ತು ಜಾಂಬವಂತರು ನಿನಗೆ ಸಹಾಯಕರಾಗಿ ಬರಲಿ. ಈಗ ನೀನು ನನ್ನ ಮಾತನ್ನು ನಡೆಸು. ಹಿಂದಿನದನ್ನು ಜ್ಞಾಪಿಸಿಕೊ. ತಂದೆಯ ಆಜ್ಞೆಯಂತೆ ವನವಾಸಕ್ಕೆ ಹೊರಟ ನಾನು ಅವನ ಆಜ್ಞೆಯಂತೆಯೇ ನಡೆದುಕೊಂಡೆನು. ಆದರೆ ಅವನ ಆಜ್ಞೆಯನ್ನು ನೀನು ಮಾತ್ರ ಪರಿಪಾಲಿಸಲಿಲ್ಲ. ರಾಜನಾಗಿ ರಾಜ್ಯಭಾರಮಾಡಲಿಲ್ಲ. ಜಟಾ ವಲ್ಕಲಧರನಾಗಿ ನಂದಿಗ್ರಾಮದಲ್ಲೇ ಇದ್ದುಬಿಟ್ಟೆ. ಆ ಪಾಪವನ್ನು ನೀನೀಗ ಪರಿಹರಿಸಿಕೊಳ್ಳಬೇಕಾಗಿದೆ. ನನ್ನ ಮಾತಿನಂತೆ ನಡೆದು ಪರಿಶುದ್ಧನಾಗು."

"ಅಣ್ಣ! ನಾನು ನಿನ್ನ ಆಜ್ಞಾಧಾರಕನಾಗಿರುವೆನು. ನಿನ್ನ ಅಪಾರ ಸೈನ್ಯವನ್ನೂ ನಾಶಗೊಳಿಸಿದ ಆ ಇಬ್ಬರು ಬಾಲಕರು ಯಾರೆಂಬುದನ್ನು ನೀನರಿಯೆ. ಹನುಮಂತನೂ ತಿಳಿದಿರುವನೋ ಇಲ್ಲವೋ ತಿಳಿಯದು. ನೀತಿಜ್ಞನಾದ ಅಂಗದನಿಗೂ ತಿಳಿದಿಲ್ಲವೆಂದು ತೋರುತ್ತದೆ."

ಭರತನು ಹೇಳಿದ ಮಾತಿಗೆ ಅಂಗದನು ಉತ್ತರಿಸಿದನು :

"ಭರತ! ಯಾವನು ಲೋಕಾಪವಾದವೆಂಬ ಭಯದ ಕಾರಣದಿಂದ ಸೀತಾದೇವಿಯನ್ನು ಪರಿತ್ಯಾಗಮಾಡಿದನೋ–ಅಂತಹ ರಾಮನ ಪ್ರತಿ ರೂಪವೇ ಆ ಬಾಲಕರದ್ದಾಗಿರುವುದೆಂದು ನಾನು ತಿಳಿಯುವೆನು."

ಆ ಮಾತಿಗೆ ಯಾರೂ ಪ್ರತಿಕ್ರಿಯಿಸಲಿಲ್ಲ. ಭರತನು ರಾಮನಿಂದ ಆಜ್ಞಪ್ತನಾಗಿ ಹನುಮಂತನೇ ಮೊದಲಾದ ಕಪಿಶ್ರೇಷ್ಠರೊಡನೆ ರಥದಲ್ಲಿ ಕುಳಿತು ಪ್ರಯಾಣಹೊರಟನು. ನರ-ವಾನರರಿಂದ ಕೂಡಿದ್ದ ಆ ಮಹಾ ಸೈನ್ಯವು ರಮ್ಯವಾದ ಅಯೋಧ್ಯೆಯಿಂದ ಹೊರಟು ಭೂಮ್ಯಾಕಾಶಗಳೆರಡರಲ್ಲಿಯೂ ಪ್ರಯಾಣಮಾಡುತ್ತಿದ್ದಿತು. ಭರತನು ಅರಣ್ಯವನ್ನು ಪ್ರವೇಶಿಸಿ ಹನುಮಂತನಿಗೆ ಹೇಳಿದನು :

"ಮಾರುತಿಯೇ! ಅತ್ತ ನೋಡಿದೆಯಾ! ಯುದ್ಧದಲ್ಲಿ ಕುಶನ ಬಾಣ

ಗಳಿಂದ ಹತರಾದ ಯೋಧರು ನೂರಾರು ಸಂಖ್ಯೆಯಲ್ಲಿ ಕೆಳಗೆ ಬಿದ್ದಿದ್ದಾರೆ. ಆನೆಗಳೂ, ರಥಿಗಳೂ, ಕುದುರೆಗಳೂ, ತಂಡ-ತಂಡವಾಗಿ ಅಸುನೀಗಿ ಬಿದ್ದಿವೆ. ಅನೇಕ ಸೈನಿಕರು ನಿಂತಲ್ಲಿ ನಿಲ್ಲದೆ ಭಯದಿಂದ ಓಡುತ್ತಿದ್ದಾರೆ. ಇಲ್ಲಿ ಹುಟ್ಟಿ ಹರಿಯುತ್ತಿರುವ ರಕ್ತನದಿಯ ಪ್ರವಾಹದಲ್ಲಿ ಯೋಧರೆಲ್ಲರೂ ಕೊಚ್ಚಿ ಕೊಂಡು ಹೋಗುತ್ತಿದ್ದಾರೆ. ಲಕ್ಷ್ಮಣ-ಶತ್ರುಘ್ನರೂ ಈ ಪ್ರವಾಹದ ಮೂಲಕ ವಾಗಿ ಗಂಗಾನದಿಗೆ ಸೆಳೆಯಲ್ಪಟ್ಟಿರುವರೆಂದು ಭಾವಿಸುತ್ತೇನೆ. ಈ ಪ್ರವಾಹ ದಲ್ಲಿ ಮನುಷ್ಯರ ಕೈ-ಕಾಲುಗಳೂ, ವಾಹನಗಳೂ, ಪುಷ್ಪಮಾಲಿಕೆಗಳೂ ಕೊಚ್ಚಿಹೋಗುತ್ತಿರುವುವು. ನೀನು ಹಿಂದೆ ಸಮುದ್ರವನ್ನು ದಾಟಿ ಲಂಕೆಗೆ ಹೋದಂತೆ ಈಗಲೂ ಈ ರಕ್ತನದಿಯನ್ನು ದಾಟಿ ನಮ್ಮ ಬಂಧುಗಳು ಎಲ್ಲಿ ಬಿದ್ದಿರುವರೆಂಬುದನ್ನು ನೋಡಿಕೊಂಡು ಬಾ. ಬಾಲಕರಾದ ಆ ಕುಶ-ಲವರನ್ನು ನಾವೀಗ ನೋಡಬೇಕಾಗಿದೆ.

"ಭರತ! ಆಗ ಸೀತೆಯು ನನಗೆ ಸಮ್ಮುಖಿಳಾಗಿದ್ದುದರಿಂದ ನಾನು ಸಮುದ್ರವನ್ನು ದಾಟಿದೆನು. ಈಗ ಅವಳು ವಿಮುಖಿಳಾಗಿರುವಂತೆ ತೋರು ತ್ತಿದೆ. ಆದುದರಿಂದಲೇ ನನಗೆ ಈ ರಕ್ತನದಿಯನ್ನು ದಾಟಲು ಅಸಾಧ್ಯವೆಂದು ಕಾಣುತ್ತಿದೆ. ಆದರೂ ನಿನ್ನ ಮಾತಿನಂತೆ ಲಕ್ಷ್ಮಣ-ಶತ್ರುಘ್ನರು ಎಲ್ಲಿರುವ ರೆಂಬುದನ್ನು ತಿಳಿಯಲು ಹೋಗುತ್ತೇನೆ."

ಹನುಮಂತನು ಹೀಗೆ ಹೇಳಿ ನದಿಯನ್ನು ದಾಟಿದನು. ಅಲ್ಲವನು ಬಾಣಗಳಿಂದ ಭೇದಿಸಲ್ಪಟ್ಟ ಸರ್ವಾಂಗಗಳಿಂದ ಕೂಡಿ ನೆಲದ ಮೇಲೆ ಬಿದ್ದಿದ್ದ ಲಕ್ಷ್ಮಣ-ಶತ್ರುಘ್ನರನ್ನು ಕಂಡನು. ಅವರನ್ನು ಎರಡು ತೋಳುಗಳಿಂದಲೂ ಬಾಚಿ ಮೇಲಕ್ಕೆತ್ತಿಕೊಂಡು ಭರತನ ಬಳಿಗೆ ಬಂದನು. ಶರೀರಾದ್ಯಂತವಾಗಿ ಗಾಯಗೊಂಡಿದ್ದ ಲಕ್ಷ್ಮಣ-ಶತ್ರುಘ್ನರನ್ನು ಕಂಡು ಭರತನು ಉದ್ವಿಗ್ನನಾದನು. ಇಬ್ಬರನ್ನೂ ರಥದಲ್ಲಿ ಮಲಗಿಸಿ ಅವರ ರಕ್ಷಣೆಗಾಗಿ ಅಂಗದನನ್ನು ನೇಮಿಸಿ ಹನುಮಂತನೊಡನೆ ಪುನಃ ಹೇಳಿದನು :

"ಹನುಮಂತ! ದೇವತೆಗಳೇ ಈ ಬಾಲಕರ ವೇಷವನ್ನು ಧರಿಸಿ ಲಕ್ಷ್ಮಣ-ಶತ್ರುಘ್ನರನ್ನು ಮೂರ್ಛೆಗೊಳಿಸಿ ಹೋಗಿರಬಹುದೆಂದು ಭಾವಿಸು

ತ್ತೇನೆ. ರಾಮನ ಸೈನ್ಯವಿನಾಶಕರಾದ ಆ ಬಾಲಕರು ಎಲ್ಲಿರುವರೆಂಬುದನ್ನು ತಿಳಿದು ಬಾ."

"ಭರತ! ಲಕ್ಷ್ಮಣನು ಇಂದ್ರಜಿತುವಿನ ಬಾಣದಿಂದ ಪ್ರಹೃತನಾದಾಗಲೂ ಹೀಗೆ ಮೂರ್ಛಿತನಾಗಿರಲಿಲ್ಲ. ಮೂರ್ಛಾಕ್ರಾಂತನಾಗಿರುವ ಲಕ್ಷ್ಮಣನನ್ನು ನೋಡುತ್ತಿದ್ದರೆ ನನಗೂ ಮೂರ್ಛೆಯು ಆವರಿಸಿಬಿಡಬಹುದೆಂಬ ಭಯವುಂಟಾಗುತ್ತಿದೆ. ನಿಶ್ಚಯವಾಗಿಯೂ ಕುಶನ ಬಾಣಪ್ರಹಾರವು ಅಷ್ಟು ತೀಕ್ಷ್ಣವಾಗಿದೆ."

ಬಾಲಕರು ನಾಶಗೊಳಿಸಿದ್ದ ಅಪಾರವಾದ ಸೈನ್ಯವನ್ನು ಭರತನನ್ನು ಹಿಂಬಾಲಿಸಿ ಬಂದಿದ್ದ ನರ-ವಾನರಸೈನಿಕರು ಎವೆಯಿಕ್ಕದೇ ನೋಡುತ್ತಿದ್ದರು. ಅಷ್ಟರಲ್ಲಿ ಕುಶನು ಧನುಷ್ಟಂಕಾರಮಾಡುತ್ತಾ ಬಂದನು. ಅವನೊಡನೆ ಶೂರನಾದ ಲವನೂ ಕತ್ತಿ-ಗುರಾಣಿಗಳನ್ನು ಹಿಡಿದು ಯುದ್ಧಸನ್ನದ್ಧನಾಗಿ ನಿಂತನು. ಆ ವೇಳೆಗೆ ಸೂರ್ಯನು ಅಸ್ತಂಗತನಾದನು. ಅಂಧಕಾರವು ಸರ್ವತ್ರ ವ್ಯಾಪಿಸಿತು. ರಾಮನ ಕಡೆಯ ಸೈನಿಕರು ಒಬ್ಬರು ಮತ್ತೊಬ್ಬರನ್ನು ಗುರುತಿಸದಾದರು. ತಮ್ಮವರು ಯಾರೆಂಬುದನ್ನು ತಿಳಿಯುವ ಸಲುವಾಗಿ ಹೆಸರುಗಳನ್ನು ಹಿಡಿದು ಕೂಗುತ್ತಿದ್ದರು. ಆ ಮಧ್ಯದಲ್ಲಿ ಅನೇಕ ಮದಗಜಗಳು ದಿಕ್ಕುಕಾಣದೆ ಮುನ್ನುಗ್ಗಿ ಹೋಗುತ್ತಾ ಕಾಲತುಳಿತಗಳಿಂದ ಹಲವಾರು ರಥಗಳನ್ನು ಭಗ್ನಗೊಳಿಸಿದುವು. ಕುದುರೆಗಳು ನಿಯಂತ್ರಣತಪ್ಪಿ ವೇಗವಾಗಿ ರಥಗಳನ್ನು ಸೆಳೆದುಕೊಂಡು ಹೋಗುತ್ತಿದ್ದುದರಿಂದ ಸಾರಥಿಗಳು ಕೆಳಕ್ಕೆ ಬೀಳುತ್ತಿದ್ದರು. ಕುದುರೆಗಳ ವೇಗದಿಂದ ಅಶ್ವಾರೋಹಿಸೈನಿಕರೂ, ಪದಾದಿಗಳೂ ಬೀಳುತ್ತಿದ್ದರು. ಆ ಸಮಯದಲ್ಲಿ ಲವನು ಕತ್ತಿಯನ್ನು ಝಳಪಿಸುತ್ತಾ ಗುರಾಣಿಯನ್ನು ಹಿಡಿದು ಮಹಾಸೈನ್ಯವನ್ನು ಹೊಕ್ಕನು. ಎದುರಾಗಿ ಸಿಕ್ಕಿದ ಕುದುರೆಗಳ ಕಾಲುಗಳನ್ನೂ ಆನೆಗಳ ಸೊಂಡಿಲುಗಳನ್ನೂ ಕತ್ತರಿಸತೊಡಗಿದನು. ಕೊಡಲಿಯವನು ಕಟ್ಟಿಗೆಯನ್ನು ಸೀಳುವಂತೆ ಆನೆಗಳ ಮೇಲೇರಿ ಕುಂಭಸ್ಥಳಗಳನ್ನು ಕತ್ತಿಯಿಂದ ಸೀಳಿ ಅಲ್ಲಿರುತ್ತಿದ್ದ ಮುತ್ತುಗಳನ್ನು ಹೊರತೆಗೆದು ಎಲ್ಲೆಡೆಗಳಲ್ಲಿಯೂ ಎರಚುತ್ತಿದ್ದನು. ಆನೆಗಳ ದಂತಗಳ ಮೇಲೆ ಪ್ರಹರಿಸಿದ ಕತ್ತಿಯಿಂದ ಅಗ್ನಿಯು ಹುಟ್ಟಿ ಅದರ ಕಿಡಿಗಳು ಸೈನಿಕರನ್ನು ದಹಿಸತೊಡಗಿದುವು.

ಮತ್ತೊಂದು ರಣರಂಗದಲ್ಲಿ ಕ್ರುದ್ಧನಾದ ಕುಶನು ಬಾಣಗಳ ಸತತಪ್ರಹಾರಗಳಿಂದ ಶೂರರ ತಲೆಗಳನ್ನೂ, ಅಂಗದ-ಕೇಯೂರಗಳಿಂದ ಸಮಲಂಕೃತವಾಗಿದ್ದ ತೋಳುಗಳನ್ನೂ ಕತ್ತರಿಸುತ್ತಿದ್ದನು. ಅಂತೆಯೇ ಆನೆಗಳ ತಲೆಗಳನ್ನು ಬಾಣಪ್ರಹಾರಗಳ ಮೂಲಕ ಆಕಾಶಕ್ಕೆ ಹಾರಿಸುತ್ತಿದ್ದನು. ಅದನ್ನು ಕಂಡ ಭರತನು ತನ್ನ ಧನುಷ್ಟಂಕಾರದಿಂದ ದಿಗ್ಗಜಗಳನ್ನು ಕಿವುಡು ಮಾಡುತ್ತಾ ಮೇಘವು ಜಲಧಾರೆಯನ್ನು ಸುರಿಸುವಂತೆ ಇಬ್ಬರು ಬಾಲಕರ ಮೇಲೆ ಬಾಣಗಳ ಮಳೆಗರೆದನು. 'ಇವರೇನು ಶಿವನ ಮಕ್ಕಳಾದ ಷಣ್ಮುಖ-ಗಣೇಶರಿರಬಹುದೇ?' ಎಂದು ಭರತನು ಸಂದೇಹಿಸಿದನು.

ಹಾಗೆಯೇ ಮೇಘಶ್ಯಾಮಲವರ್ಣದವರಾಗಿಯೂ, ಕಾಕಪಕ್ಷಧರರಾಗಿಯೂ ಇದ್ದ ಆ ಬಾಲಕರನ್ನು ಹನುಮಂತನು ನೋಡಿ ಇವರು ಶ್ರೀರಾಮನಂತೆಯೇ ಇರುವವರೆಂದು ನಿಶ್ಚಯಿಸಿದನು. ರಾಮನ ಕಡೆಯ ಅಪಾರವಾದ ಸೈನ್ಯವನ್ನು ನೋಡಿ ಕುಶ-ಲವರು ಪರಸ್ಪರವಾಗಿ ಮಾತನಾಡಿಕೊಂಡರು. ಕುಶನು ಲವನಿಗೆ ಹೇಳಿದನು :

"ಲವ! ಕುದುರೆಯನ್ನು ಹೊಡೆದುಕೊಂಡು ಹೋಗಬೇಕೆಂಬ ಅಪೇಕ್ಷೆಯಿಂದ ಬಂದಿರುವ ಈ ಅಪಾರಸೈನ್ಯವನ್ನು ನೋಡು. ಈ ಸೈನ್ಯವನ್ನು ನೋಡಿ ನಾವು ಧೃತಿಗೆಡಬೇಕಾಗಿಲ್ಲ. ನಾನೊಬ್ಬನೇ ಈ ಮಹಾಸೈನ್ಯವನ್ನು ಧ್ವಂಸಮಾಡುತ್ತೇನೆ. ನೀನು ಇಲ್ಲಿಯೇ ಕುದುರೆಯನ್ನು ರಕ್ಷಿಸಿಕೊಂಡಿರು."

ಲವನು ಅಣ್ಣನ ಮಾತಿಗೆ ಸಮ್ಮತಿಸಿ ಕತ್ತಿ-ಗುರಾಣಿಗಳನ್ನು ಹಿಡಿದು ಕುದುರೆಯನ್ನು ರಕ್ಷಿಸುತ್ತಿದ್ದನು.

ಬಳಿಕ ಕುಶನು ಧನುಷ್ಪಾಣಿಯಾಗಿ ಭರತನ ಬಳಿಗೆ ಹೋಗಿ ಹೇಳಿದನು :

"ಶತ್ರುಘ್ನ-ಲಕ್ಷ್ಮಣರಿಬ್ಬರೂ ಮೂರ್ಛಿತರಾಗಿ ಕೆಳಗೆ ಬಿದ್ದಿರುವರು. ಇವರ ಸೈನ್ಯವೆಲ್ಲವೂ ಸಂಪೂರ್ಣವಾಗಿ ನಾಶವಾಯಿತು. ಇಷ್ಟಾದರೂ ನೀನು ನನ್ನ ಹೆಸರೇನೆಂಬುದನ್ನು ಅರಿತಿಲ್ಲವೇ? ನಿನ್ನೊಡನೆ ಯುದ್ಧಕ್ಕೆ ಬಂದಿರುವ ನಾನು ಕುಶನೆಂಬುದನ್ನು ತಿಳಿ."

"ಕುಶ! ನಾನು ಯುದ್ಧದಲ್ಲಿ ನಿನ್ನನ್ನಿಂದು ಸೋಲಿಸಿ ನಿನ್ನನ್ನೂ ನಿನ್ನ

ತಮ್ಮನನ್ನೂ ರಾಜಧಾನಿಗೆ ಕರೆದುಕೊಂಡು ಹೋಗುತ್ತೇನೆ. ಕುದುರೆಯನ್ನು ಈಗಲೇ ಬಿಟ್ಟುಕೊಟ್ಟರೆ ನಿನ್ನೊಡನೆ ಯುದ್ಧಮಾಡುವುದಿಲ್ಲ. ನನ್ನನ್ನೂ ನನ್ನ ತಮ್ಮನನ್ನೂ ಭರತನು ಬಿಟ್ಟುಬಿಟ್ಟನೆಂದು ನಿಮ್ಮ ತಾಯಿಗೆ ಹೇಳು. ತಾಪಸಿಯಾದ ನಿನ್ನ ತಾಯಿಯ ವಿಷಯದಲ್ಲಿ ನನಗೆ ಅನುಕಂಪವುಂಟಾಗಿದೆ. ನೀನು ಇದುವರೆಗೂ ನಮ್ಮ ಸೈನ್ಯವನ್ನು ನಾಶಪಡಿಸಿದ ದುಷ್ಟಕಾರ್ಯವನ್ನು ಕ್ಷಮಿಸಿಬಿಟ್ಟಿದ್ದೇನೆ."

ಭರತನ ಆ ಮಾತಿಗೆ ಕುಶನು ಬಾಯಿಂದ ಉತ್ತರಕೊಡಲು ಪ್ರಯತ್ನಿಸಲೇ ಇಲ್ಲ. ಏಳು ಬಾಣಗಳಿಂದ ಭರತನನ್ನೂ, ಹನ್ನೆರಡು ಬಾಣಗಳಿಂದ ವಾನರರನ್ನೂ, ನೂರು ಬಾಣಗಳಿಂದ ಹನುಮಂತನನ್ನೂ ಪ್ರಹರಿಸಿ ನಸುನಗುತ್ತಾ ಪುನಃ ಸಾವಿರ ಬಾಣಗಳಿಂದ ಅಂಗದನನ್ನೂ, ಐದುನೂರು ಬಾಣಗಳಿಂದ ನೀಲನನ್ನೂ, ಎಪ್ಪತ್ತು ಬಾಣಗಳಿಂದ ನಳನನ್ನೂ, ಮೂರು ಸಾವಿರ ಬಾಣಗಳಿಂದ ಜಾಂಬವಂತನನ್ನೂ ಪ್ರಹರಿಸಿದನು. ಅನೇಕ ಕಪಿನಾಯಕರು ಮೂರ್ಛಿತರಾಗಿ ಕೆಳಗೆ ಬಿದ್ದರು. ಕುದುರೆಯನ್ನು ಕಾಯುತ್ತಿದ್ದ ಲವನೂ ಕುಶನ ಅನುಮತಿಯನ್ನು ಪಡೆದು ಯುದ್ಧಮಾಡಲು ಉಪಕ್ರಮಿಸಿ ಆರು ಬಾಣಗಳಿಂದ ಭರತನ ಬಿಲ್ಲನ್ನು ಕತ್ತರಿಸಿ ರಥವನ್ನೂ ಧ್ವಂಸ ಮಾಡಿದನು. ಕುಶನ ಬಿಲ್ಲಿನಿಂದ ಹೊರಟ ತೀಕ್ಷ್ಣವಾದ ಬಾಣಗಳು ಭರತನನ್ನು ಮೂರ್ಛೆಗೊಳಿಸಿದುವು. ಭರತನು ಮೂರ್ಛಿತನಾಗಿ ಕೆಳಗೆ ಬಿದ್ದುದನ್ನು ನೋಡಿ ಹನುಮಂತನು ನೂರು ಯೋಜನ ವಿಸ್ತೀರ್ಣವಿದ್ದ ಪರ್ವತವನ್ನೇ ಕಿತ್ತು ತಂದು ಲವ-ಕುಶರ ಮೇಲೆಸೆದನು. ವಿಶಾಲಾಕ್ಷರಾದ ಕುಶ-ಲವರು ತಮ್ಮ ಮೇಲೆ ಬೀಳಲಿದ್ದ ಪರ್ವತವನ್ನು ಬಾಣಗಳ ಪ್ರಯೋಗದಿಂದ ಸಣ್ಣ-ಸಣ್ಣ ಚೂರುಗಳನ್ನಾಗಿ ಮಾಡಿಬಿಟ್ಟರು. ಕುಶನು ಸುವರ್ಣಮಯ ವಾದ ಚಿತ್ರಗಳಿಂದ ಕೂಡಿದ್ದ ಐದು ಬಾಣಗಳನ್ನು ಹನುಮಂತನ ಮೇಲೆ ಪ್ರಯೋಗಿಸಿ ಅವನನ್ನು ಮೂರ್ಛೆಗೊಳಿಸಿದನು. ಸ್ವಲ್ಪಹೊತ್ತಿನಲ್ಲಿಯೇ ಕುಶ-ಲವರ ಸತತವಾದ ಬಾಣಗಳ ಪ್ರಹಾರಗಳಿಂದ ನರ-ವಾನರಸೈನ್ಯವು ನಾಶವಾಯಿತು. ಅಳಿದುಳಿದ ಸೈನಿಕರು ಶ್ರೀರಾಮನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನೂ ವಿವರಿಸಿ ಹೇಳಿದರು.

ಶ್ರೀರಾಮನು ತಮ್ಮಂದಿರಿಗಾದ ದುರವಸ್ಥೆಯನ್ನು ನೆನೆದು

ದುಃಖಿಸುತ್ತಾ ಸುಗ್ರೀವ-ವಿಭೀಷಣರೊಡನೆ ರಥಾರೂಢನಾಗಿ ಕಾಡಿಗೆ ತೆರಳಿದನು. ಎಲ್ಲೆಡೆಗಳಲ್ಲಿಯೂ ಗಾಯಗೊಂಡ ಸೈನಿಕರ 'ರಾಮ-ರಾಮ'–ಎಂಬ ಆರ್ತನಾದಗಳೇ ಕೇಳಿಬರುತ್ತಿದ್ದುವು. ಧನುಷ್ಪಾಣಿಗಳಾಗಿ ಕತ್ತಿ-ಗುರಾಣಿಗಳನ್ನು ಹಿಡಿದು ನಿಂತಿದ್ದ, ವೀರಾಗ್ರಣಿಗಳಾದ, ತನ್ನಂತೆಯೇ ಇದ್ದ ಬಾಲಕರನ್ನು ನೋಡಿ ಶ್ರೀರಾಮನು ಪ್ರಶ್ನಿಸಿದನು :

"ಬಾಲಕರೇ! ನಮ್ಮ ಸೈನ್ಯವನ್ನು ಧ್ವಂಸಮಾಡಿದವರು ನೀವೇ ಅಲ್ಲವೇ? ನೀವು ಯಾರಲ್ಲಿ ಧನುರ್ವಿದ್ಯೆಯನ್ನು ಕಲಿತಿರಿ? ನಿಮಗೆ ಉಪನಯನಸಂಸ್ಕಾರವನ್ನು ಮಾಡಿದವರಾರು? ವೇದಾಧ್ಯಯನವನ್ನೂ ಕಲಾಭ್ಯಾಸವನ್ನೂ ಮಾಡಿರುವಿರಾ? ಧರ್ಮಶ್ರವಣತತ್ಪರರಾಗಿರುವಿರಾ? ಪರಸ್ತ್ರೀಯರ ಕಡೆಗೆ ನಿಮ್ಮ ದೃಷ್ಟಿಯು ಹೋಗದಲ್ಲವೇ? ಬ್ರಾಹ್ಮಣರಿಗೆ ಕೊಟ್ಟ ಮಾತನ್ನು ನಡೆಸಿಕೊಡುತ್ತಿರುವಿರಾ? ನಿಮ್ಮ ತಂದೆ-ತಾಯಿಗಳಾರು? ನಿಮ್ಮ ವಾಸಸ್ಥಾನವು ಯಾವುದು? ತಿಳಿಸಿರಿ."

"ಮಹಾರಾಜ! ನಮ್ಮ ವಂಶದ ಚರಿತ್ರೆಯನ್ನು ತಿಳಿದು ನೀನೇನು ಮಾಡುವೆ? ನಿಮ್ಮಂತಹವರು ಕ್ಷಾತ್ರಪೌರುಷಪ್ರದರ್ಶನವನ್ನು ಬಿಟ್ಟು ಬೇರೆ ಯಾವ ಮಾತನ್ನೂ ಆಡಲೇಬಾರದು. ಕ್ಷತ್ರಧರ್ಮಾನುಸಾರವಾಗಿ ಬೇಗನೆ ನಮ್ಮೊಡನೆ ಯುದ್ಧಮಾಡು. ವಿಳಂಬಮಾಡಬೇಡ. ಅಥವಾ ಕುದುರೆಯು ಬೇಡವೆಂದಾದರೂ ಹೇಳು."

"ಬಾಲಕರೇ! ನಿಮ್ಮ ಕುಲವು ಯಾವುದೆಂಬುದನ್ನು ತಿಳಿಸದಿದ್ದರೆ ನಾನು ನಿಮ್ಮೊಡನೆ ಯುದ್ಧಮಾಡುವುದಿಲ್ಲ."

"ಹಾಗಾದರೆ ಕೇಳು, ನಮ್ಮಿಬ್ಬರಿಗೂ ಸೀತಾದೇವಿಯು ಈ ಕಾಡಿನಲ್ಲಿ ಜನ್ಮವಿತ್ತಳು. ನಮಗೆ ಜಾತಕರ್ಮ-ನಾಮಕರಣ-ಅನ್ನಪ್ರಾಶನ-ಉಪನಯನಸಂಸ್ಕಾರಗಳನ್ನು ಮಹರ್ಷಿಗಳಾದ ವಾಲ್ಮೀಕಿಗಳೇ ನೆರವೇರಿಸಿ ವೇದಾಧ್ಯಯನವನ್ನೂ ಮಾಡಿಸಿದರು. ಸಜ್ಜನರಿಗೆ ಮನಸ್ಸಿಗೆ ಹಿತವಾಗುವ ರಾಮಕಥೆಯನ್ನು ನಮಗೆ ಬೋಧಿಸಿದರು. ಅಭ್ಯಾಸಬಲದಿಂದಲೂ, ಸಂಸ್ಕಾರಬಲದಿಂದಲೂ ನಿರ್ಮಲದೃಷ್ಟಿ-ಬುದ್ಧಿಸ್ವಾಸ್ಥ್ಯ-ಮನಃಸ್ವಾಸ್ಥ್ಯಗಳುಂಟಾಗಿ ಪರಾಕ್ರಮವೂ ವೃದ್ಧಿಗೊಳ್ಳುತ್ತದೆ. ಹಾಗೆ ವೃದ್ಧಿಹೊಂದಿದ ಪರಾಕ್ರಮ

ದಿಂದ ನಾವು ನಿನ್ನ ಸೈನ್ಯಗಳೆಲ್ಲವನ್ನೂ ನಾಶಗೊಳಿಸಿದೆವು. ನಿನಗೆ ದಾರಾ-ಪುತ್ರ-ಧನಾದಿಗಳಲ್ಲಿ ಮಮತೆಯಿಲ್ಲವೆಂದು ತೋರುತ್ತದೆ. ಆದುದರಿಂದಲೇ ವಿನಾಶಹೊಂದಿರುವ ನಿನ್ನ ಸೈನ್ಯದ ವಿಷಯದಲ್ಲಿ ನಿನಗಾವ ಅನುಕಂಪವೂ ಇಲ್ಲ. ನಮ್ಮೊಡನೆ ಯುದ್ದಮಾಡಲು ನಿನಗೆ ಸಾಮರ್ಥ್ಯವಿರುವುದೇ? ಅಥವಾ ನಿನ್ನ ಶಕ್ತಿ-ಸಾಮರ್ಥ್ಯಗಳನ್ನು ರಾಜಧಾನಿಯಲ್ಲಿಯೇ ಬಿಟ್ಟುಬಂದಿರುವೆಯಾ? ಶಕ್ತಿಹೀನನಾದವನಿಗೆ ತೀಕ್ಷ್ಣವಾದ ಬಾಣಗಳಿಂದ ಯುದ್ಧ ಮಾಡಲು ಹೇಗೆ ಸಾಧ್ಯವಾಗುವುದು?"

ಕುಶ-ಲವರು ತನ್ನ ಮಕ್ಕಳೆಂದು ತಿಳಿದೊಡನೆಯೇ ಶ್ರೀರಾಮನ ಕೈಯಿಂದ ಧನುಸ್ಸು ಕಳಚಿಬಿದ್ದಿತು. ಕ್ಷಣಕಾಲ ಮೂರ್ಛಿತನಾಗಿ ರಥ ದಲ್ಲಿಯೇ ಮಲಗಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಮೂರ್ಛೆಯಿಂದ ಎಚ್ಚೆತ್ತು ಸುಗ್ರೀವನಿಗೆ ಹೇಳಿದನು :

"ಕಪಿಶ್ರೇಷ್ಠನೇ! ಇವರಿಬ್ಬರೂ ಯಾರ ಮಕ್ಕಳೆಂಬುದನ್ನು ತಿಳಿದು ಕೊಂಡು ಬಾ. ಇವರನ್ನು ನೋಡಿ ನನ್ನ ಮನಸ್ಸು ಡೋಲಾಯಮಾನ ವಾಗಿದೆ."

"ರಾಘವ? ಇವರಿಬ್ಬರೂ ಪುರಾಣಪುರುಷನಾದ ಆ ಮಹಾವಿಷ್ಣು ವಿನ ಮಕ್ಕಳಿರಬೇಕೆಂದು ನಾನು ಭಾವಿಸುತ್ತೇನೆ. ಅರಣ್ಯದ ಮಧ್ಯದಲ್ಲಿರು ವರು. ನಿನ್ನ ಪ್ರತಿರೂಪಗಳಂತೆಯೇ ಕಾಣಿಸುತ್ತಿದ್ದಾರೆ. ಒಡೆಯನೇ ಇಲ್ಲದೇ ಯುದ್ಧದಲ್ಲಿ ಯಾರೂ ಜಯಶಾಲಿಗಳಾಗುವುದಿಲ್ಲ. ಇವರೊಡನೆ ಯುದ್ಧ ಮಾಡಲು ನಾನೇ ಹೋಗುವೆನು"—ಎಂದು ಹೇಳಿ ಒಂದು ವೃಕ್ಷವನ್ನು ಕಿತ್ತು ತಂದು ಕುಶ-ಲವರ ಮೇಲೆಸೆದನು. ಲವ-ಕುಶರು ತಮ್ಮ ಮೇಲೆ ಬೀಳಲಿದ್ದ ಆ ಮಹಾವೃಕ್ಷವನ್ನು ಕ್ಷಣಮಾತ್ರದಲ್ಲಿ ನಿಶಿತವಾದ ಬಾಣಗಳಿಂದ ನುಚ್ಚುನೂರುಮಾಡಿ ಪುನಃ ತೀಕ್ಷ್ಣವಾದ ಬಾಣಗಳಿಂದ ಸುಗ್ರೀವನನ್ನು ಪ್ರಹರಿಸಿದನು. ಸುಗ್ರೀವನು ಮೂರ್ಛಿತನಾಗಿ ಕೆಳಗೆ ಬಿದ್ದನು. ಅನಂತರ ನೀಲನು ಕುಶನನ್ನು ಎದುರಿಸಿ ನಿಂತನು. ಕುಶನು ಕೋಪಾವಿಷ್ಟನಾಗಿ ನೀಲ ನನ್ನು ತೀಕ್ಷ್ಣವಾದ ಬಾಣದಿಂದ ಪ್ರಹರಿಸಿದನು. ನೀಲನ ಶರೀರದಿಂದ ರಕ್ತವು ಹೊರಬರುತ್ತಲೇ ಆ ರಕ್ತದಿಂದ ಹಲವಾರು ನೀಲರು ಹುಟ್ಟಿದರು. ಅವರ ಮೇಲೆ ಕುಶನು ಬಾಣಪ್ರಯೋಗಮಾಡಿದನು. ಅವರ ರಕ್ತದಿಂದಲೂ ಲಕ್ಷ-

ಲಕ್ಷನೀಲರು ಹುಟ್ಟಿ ಯುದ್ಧಭೂಮಿಯೇ ನೀಲರಿಂದ ತುಂಬಿಹೋಯಿತು. ನೀಲನನ್ನು ಹೇಗೆ ಸಂಹರಿಸಬೇಕೆಂಬುದರ ಬಗೆಗೆ ಕುಶನು ಕ್ಷಣಕಾಲ ಯೋಚಿಸಿ ಜಲೂಕಾಸ್ತ್ರವನ್ನು ಪ್ರಯೋಗಿಸಿದನು. ನೀಲನ ರಕ್ತದಿಂದ ಹುಟ್ಟಿದ ಸಮಸ್ತನೀಲರೂ ಹತರಾದರು. ನೀಲನು ಮೂರ್ಛಿತನಾಗಿ ಕೆಳಗೆ ಬಿದ್ದನು. ಶ್ರೀರಾಮನ ಕಡೆಯ ಸೈನಿಕರಲ್ಲಿ ಯಾರೂ ಉಳಿದಿರಲಿಲ್ಲ. ಶ್ರೀರಾಮನೇ ಏಕಾಕಿಯಾಗಿ ಕುಶ-ಲವರೊಡನೆ ಯುದ್ಧಮಾಡಬೇಕಾಯಿತು. ಕಾಲಾಗ್ನಿಗೆ ಸಮಾನವಾದ, ಅತಿತೀಕ್ಷ್ಣವಾದ, ತೇಜೋವಿಶಿಷ್ಟವಾಗಿದ್ದ ಬಾಣಗಳನ್ನು ಶ್ರೀರಾಮನು ಬಾಲಕರ ಮೇಲೆ ಪ್ರಯೋಗಿಸಿದನು. ದರಿದ್ರನ ಮನೋ ರಥದಂತೆ ಮತ್ತು ಶರತ್ಕಾಲದ ಮೇಘಗಳಂತೆ ಶ್ರೀರಾಮನು ಬಿಟ್ಟ ಬಾಣಗಳು ವ್ಯರ್ಥವಾಗಿಹೋದುವು. ಶ್ರೀರಾಮನು ಕುಪಿತನಾಗಿ ಯಾವುದೇ ಬಾಣ ಗಳನ್ನು ಕುಶ-ಲವರ ಮೇಲೆ ಪ್ರಯೋಗಿಸಿದರೂ ಆ ಬಾಲಕರು ಶ್ರೀರಾಮನ ಬಾಣಗಳನ್ನು ಎರಡು ತುಂಡುಗಳನ್ನಾಗಿ ಕತ್ತರಿಸಿಬಿಡುತ್ತಿದ್ದರು. ಶ್ರೀರಾಮ ಮತ್ತು ಕುಶ-ಲವರ ಯುದ್ಧವು ಲೋಕಕ್ಕೇ ವಿಸ್ಮಯಕಾರಕವಾಗಿದ್ದಿತು. ತನ್ನ ಬಲಕ್ಕೆ ಸದೃಶವಾದ ಬಲವೇ ಬಾಲಕರಿಗೂ ಇದೆಯೆಂಬುದನ್ನು ಶ್ರೀರಾಮನು ಮನಗಂಡನು. ಬಾಲಕರ ಮುಖಗಳೂ ಸೀತಾದೇವಿಯ ಮುಖದಂತೆಯೇ ಇದ್ದುವು. ಬಾಲಕರ ಮುಖವನ್ನು ವೀಕ್ಷಿಸುತ್ತಾ ಆಲೋಚನಾಪರನಾಗಿದ್ದಾಗ ಕುಶ-ಲವರ ಬಾಣಗಳು ಶ್ರೀರಾಮನ ಮರ್ಮಸ್ಥಳಗಳಲ್ಲಿ ನುಸುಳಿದುವು. ಅದರಿಂದಾಗಿ ಶ್ರೀರಾಮನೂ ಮೂರ್ಛಿತನಾಗಿ ರಥದಲ್ಲಿ ಬಿದ್ದನು.

ರಾಮನು ಮೂರ್ಛಿತನಾಗಿ ಬಿದ್ದುದನ್ನು ಕಂಡು ಕುಶ-ಲವರು ರಥ ವನ್ನು ಹತ್ತಿ ಶ್ರೀರಾಮನ ಕುಂಡಲಗಳನ್ನೂ, ಕೇಯೂರ-ಕಂಠಾಭರಣಗಳನ್ನೂ ಬಿಚ್ಚಿಕೊಂಡರು. ಅಂತೆಯೇ ಲಕ್ಷ್ಮಣ-ಶತ್ರುಘ್ನರ ಶರೀರಗಳಲ್ಲಿದ್ದ ಆಭರಣಗಳನ್ನೂ ಬಿಚ್ಚಿಕೊಂಡರು. ಅಷ್ಟರಿಂದಲೇ ಅವರಿಗೆ ತೃಪ್ತಿಯಾಗಲಿಲ್ಲ. ಸೀತೆಯ ಬಳಿಗೆ ಹನುಮಂತನನ್ನು ಕರೆದೊಯ್ಯಬೇಕೆನ್ನಿಸಿತು. ಲವನು ಕುಶನಿಗೆ ಹೇಳಿದನು :

"ಅಣ್ಣ! ಮಹಾಬಲನಾದ ಹನುಮಂತನನ್ನು ಹಿಡಿದುತರುವೆನು. ಆ ಕಪಿಯನ್ನು ನೋಡಿದರೆ ನಮ್ಮ ತಾಯಿಯು ಖಂಡಿತವಾಗಿಯೂ ಸಂತೋಷ ಪಡುವಳು."

ಕುಶನೂ ಸಮ್ಮತಿಸಿದನು. ಎಚ್ಚರಗೊಂಡಿದ್ದು ಮೂರ್ಛಿತರಾದಂತೆ ನಟಿಸುತ್ತಿದ್ದ ಹನುಮಂತ-ಜಾಂಬವಂತರನ್ನು ರಥದಲ್ಲಿ ಏರಿಸಿಕೊಂಡು ಕುಶ-ಲವರು ಸೀತೆಯ ಬಳಿಗೆ ಬಂದು ಹೇಳಿದರು :

"ಅಮ್ಮ! ಸೇನಾಸಹಿತನಾದ ರಾಮನನ್ನು ಜಯಿಸಿ ಅವರ ಆಭರಣ ಗಳೆಲ್ಲವನ್ನೂ ತಂದಿರುವೆವು. ವಿನೋದಾರ್ಥವಾಗಿ ಈ ವಾನರರನ್ನು ಹಿಡಿದು ತಂದಿರುವೆವು. ನೋಡಮ್ಮಾ!"

ಸೀತಾದೇವಿಯು ಮಕ್ಕಳನ್ನು ತಬ್ಬಿಕೊಂಡು ಮುದ್ದಾಡಿ ಹೇಳಿದಳು :

"ಮಕ್ಕಳಿರಾ! ಮಾನಧನರಾದ ಈ ಜಾಂಬವಂತ-ಹನುಮಂತರನ್ನು ಪುನಃ ಕರೆದುಕೊಂಡು ಹೋಗಿ ಯುದ್ಧಭೂಮಿಯಲ್ಲಿಯೇ ಬಿಟ್ಟುಬನ್ನಿರಿ. ಇವರು ನನ್ನನ್ನು ನೋಡಿದರೆ ಪ್ರಾಣವನ್ನೇ ಬಿಡುವರು."

ತಾಯಿಯ ಮಾತಿನಂತೆ ಕುಶ-ಲವರು ಹನುಮಂತ-ಜಾಂಬವಂತ ರನ್ನು ರಥದಲ್ಲಿ ಕೂರಿಸಿಕೊಂಡು ಯುದ್ಧಭೂಮಿಯಲ್ಲಿ ಬಿಟ್ಟುಬಂದರು. ಅಷ್ಟರಲ್ಲಿ ವಾಲ್ಮೀಕಿಮಹರ್ಷಿಗಳು ವರುಣನ ಲೋಕದಿಂದ ಆಶ್ರಮಕ್ಕೆ ಆಗ ಮಿಸಿದರು. ಕುಶ-ಲವರು ಮಹರ್ಷಿಗಳ ಬಳಿಗೆ ಬಂದು ಅಭಿವಾದನ ಪೂರ್ವಕವಾಗಿ ನಮಸ್ಕಾರಮಾಡಿ ತಾವು ಮಾಡಿದ ಸಾಹಸಕಾರ್ಯಗಳನ್ನು ವಿವರಿಸಿ ಹೇಳಿದರು. ಮಹರ್ಷಿಗಳು ಒಡನೆಯೇ ರಾಮ-ಲಕ್ಷ್ಮಣ-ಭರತ- ಶತ್ರುಘ್ನರಿದ್ದ ಸ್ಥಳಕ್ಕೆ ಹೋಗಿ ಅಮೃತಮಯವಾದ ಉದಕದಿಂದ ಪ್ರೋಕ್ಷಣೆ ಮಾಡಿದರು. ರಾಮಾದಿಗಳು ನಿದ್ದೆಯಿಂದ ಎಚ್ಚೆತ್ತವರಂತೆ ಎದ್ದು ಕುಳಿತರು. ವಾಲ್ಮೀಕಿಗಳು ಶ್ರೀರಾಮನಿಗೆ ಹೇಳಿದರು :

"ರಾಘವ! ಇವರಿಬ್ಬರೂ ನಿನ್ನ ಮಕ್ಕಳು. ಇವರನ್ನು ಪರಿಗ್ರಹಿಸು. ಸೀತೆಯು ದೋಷರಹಿತಳೆಂದು ನಿನಗೆ ವಿಶ್ವಾಸವಿದ್ದರೆ ಅವಳನ್ನೂ ನೀನು ಕರೆದುಕೊಂಡು ಹೋಗಬಹುದು."

ಶ್ರೀರಾಮನು ಸೇನಾಸಮೇತನಾಗಿ ಅಯೋಧ್ಯೆಯನ್ನು ಸೇರಿದನು. ವಾಲ್ಮೀಕಿಗಳು ನಸುನಗುತ್ತಾ ಯಜ್ಞಾಶ್ವವನ್ನು ಬಿಟ್ಟುಬಿಡುವಂತೆ ಬಾಲಕರಿಗೆ ಹೇಳಿದರು. ಗುರುಗಳ ಆಜ್ಞೆಯಂತೆ ಕುಶ-ಲವರು ಕುದುರೆಯನ್ನು ಬಿಟ್ಟುಕೊಟ್ಟರು. ವಾಲ್ಮೀಕಿಗಳು ಶ್ರೀರಾಮನ ಅಭಿಪ್ರಾಯದಂತೆ ಯಜ್ಞವು

ನಡೆಯುತ್ತಿದ್ದಾಗ ಕುಶ-ಲವರೊಡನೆ ಸೀತಾದೇವಿಯನ್ನು ಕರೆದುಕೊಂಡು ಹೋಗಿ ಶ್ರೀರಾಮನ ಬಳಿ ಬಿಟ್ಟರು. ಯಜ್ಞವು ಮುಗಿದನಂತರ ಶ್ರೀರಾಮನು ಪತ್ನೀ-ಪುತ್ರಸಮೇತನಾಗಿ ವಾಲ್ಮೀಕಿಗಳನ್ನು ಪುರಸ್ಕರಿಸಿ ಬೀಳ್ಕೊಟ್ಟನು. ಶ್ರೀರಾಮನು ಸೀತಾದೇವಿಯಲ್ಲಿ ತನಗಿದ್ದ ಪ್ರೀತಿಯನ್ನು ತನ್ನ ಮಕ್ಕಳಲ್ಲಿಯೂ ತೋರುತ್ತಾ ಆನಂದತುಂದಿಲನಾಗಿದ್ದನು.

ಹೀಗೆ ಪೂರ್ವದಲ್ಲಿ ಶ್ರೀರಾಮನಿಗೂ ಅವನ ಮಕ್ಕಳಿಗೂ ಹೇಗೆ ಅದ್ಭುತವಾದ ಯುದ್ಧವು ನಡೆಯಿತೋ ಹಾಗೆಯೇ ಅರ್ಜುನನಿಗೂ ಅವನ ಮಗನಾದ ಬಭ್ರುವಾಹನನಿಗೂ ಪರಮಾದ್ಭುತವಾದ ಯುದ್ಧವು ನಡೆಯಿತು"–ಎಂದು ಜೈಮಿನಿಗಳು ಜನಮೇಜಯನಿಗೆ ಹೇಳಿದರು.

ಸೂತಪುರಾಣಿಕರು ಶೌನಕಾದಿ ಮಹರ್ಷಿಗಳಿಗೆ ಹೇಳುತ್ತಾರೆ :

"ಮುನಿಶ್ರೇಷ್ಠರೇ! ಜೈಮಿನಿಗಳು ಹೇಳಿದ ಕಥೆಯನ್ನೇ ನಾನು ನಿಮ್ಮೆಲ್ಲರಿಗೂ ಹೇಳಿರುವೆನು. ತಂದೆ-ಮಕ್ಕಳ ಯುದ್ಧಪ್ರಸಂಗವನ್ನು ವಾಲ್ಮೀಕಿಗಳು ರಾಮಾಯಣದಲ್ಲಿ ಹೇಳಿಲ್ಲ. ಹಾಗೆ ಹೇಳಿದ್ದರೆ ಈ ಲೋಕವು ಕರುಣಾಸಮುದ್ರದಲ್ಲಿ ಮುಳುಗಿಹೋಗುತ್ತಿದ್ದಿತು. ಈ ಆಖ್ಯಾನವನ್ನು ಶ್ರದ್ಧೆಯಿಂದ ಕೇಳುವ ನರಶ್ರೇಷ್ಠರು ಪುತ್ರ-ಪೌತ್ರಸಹಿತರಾಗಿ ಐಹಿಕವಾದ ಭೋಗಗಳನ್ನು ಅನುಭವಿಸಿ ಸರ್ವಪಾಪಗಳಿಂದಲೂ ಮುಕ್ತರಾಗಿ ಶಾಶ್ವತವಾದ ವಿಷ್ಣುಪದವನ್ನು ಹೊಂದುವರು."

ಪದ್ಮಪುರಾಣದಲ್ಲಿ ಬರುವ ರಾಮಾಶ್ವಮೇಧಯಾಗದ ಪ್ರಕರಣ

ಪದ್ಮಪುರಾಣದಲ್ಲಿ ಬರುವ ರಾಮಾಶ್ವಮೇಧಯಾಗಪ್ರಕರಣವು ರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಬಂದನಂತರದ ಪ್ರಸಂಗದಿಂದ ಪ್ರಾರಂಭವಾಗುತ್ತದೆ. ಈ ಕಥೆಯನ್ನು ಶೇಷನಾಗನು ವಾತ್ಸ್ಯಾಯನನಿಗೆ ಹೇಳುತ್ತಾನೆ. ವಾಲ್ಮೀಕಿರಾಮಾಯಣದ ಉತ್ತರಕಾಂಡದಲ್ಲಿರುವಂತೆಯೇ ಇಲ್ಲಿಯೂ ಅಗಸ್ತ್ಯರು ಶ್ರೀರಾಮನಿಗೆ ರಾವಣ-ಕುಂಭಕರ್ಣಾದಿಗಳ ಜನ್ಮವೃತ್ತಾಂತವನ್ನು ಹೇಳುತ್ತಾರೆ. ಆದರೆ ಒಂದು ವ್ಯತ್ಯಾಸ. ಪದ್ಮಪುರಾಣದಲ್ಲಿ ಬರುವ ಉತ್ತರರಾಮಾಯಣದ ಕಥೆಯಲ್ಲಿ ಅಗಸ್ತ್ಯರು ಬರುವ

ಮೊದಲೇ ಸೀತಾಪರಿತ್ಯಾಗವಾಗಿರುತ್ತದೆ. ವಾಲ್ಮೀಕಿರಾಮಾಯಣದಲ್ಲಿ ಅಗಸ್ತ್ಯರು ತೆರಳಿದನಂತರ ಸೀತಾಪರಿತ್ಯಾಗ. ಜೈಮಿನೀಭಾರತದಲ್ಲಿ ಅಗಸ್ತ್ಯರು ರಾವಣಾದಿಗಳ ಕಥೆಯನ್ನು ಹೇಳಿದ ಪ್ರಸಂಗವು ಬರುವುದಿಲ್ಲ.

ವಾಲ್ಮೀಕಿರಾಮಾಯಣದಲ್ಲಿ ಲಕ್ಷ್ಮಣನೊಡನೆ ಕುದುರೆಯು ಹೊರಟಿತು. ರಾಜರೆಲ್ಲರೂ ತಾವಾಗಿಯೇ ಕಪ್ಪ-ಕಾಣಿಕೆಗಳನ್ನು ತಂದೊಪ್ಪಿಸಿದರು. ದೇಶದಲ್ಲೆಲ್ಲಾ ಸುತ್ತಾಡಿಕೊಂಡು ಕುದುರೆಯು ಹಿಂದಿರುಗಿತು. ಇಷ್ಟು ಮಾತ್ರವಿದೆ. ಯಾವ ಯಾವ ದೇಶದಲ್ಲಿ ತಿರುಗಾಡಿತೆಂದಾಗಲೀ ಯಾರೊಡನೆ ಲಕ್ಷ್ಮಣನು ಯುದ್ಧಮಾಡಿದನೆಂದಾಗಲೀ ವಾಲ್ಮೀಕಿರಾಮಾಯಣದಲ್ಲಿ ಬರುವುದಿಲ್ಲ. ಉತ್ತರಕಾಂಡದ ೯೨ನೆಯ ಸರ್ಗದಲ್ಲಿರುವ ಕೇವಲ ಹತ್ತು ಶ್ಲೋಕಗಳಲ್ಲಿ ಅಶ್ವಮೇಧಾಶ್ವದ ಪ್ರಸಂಗವೇ ಮುಗಿದುಹೋಗುತ್ತದೆ.

ಪದ್ಮಪುರಾಣ ಮತ್ತು ಜೈಮಿನೀಭಾರತಗಳಲ್ಲಿ ಕುದುರೆಯ ರಕ್ಷಣೆಗಾಗಿ ಶತ್ರುಘ್ನನು ಹೋಗುತ್ತಾನೆ. ಪದ್ಮಪುರಾಣದಲ್ಲಿ ಶತ್ರುಘ್ನನು ಕುದುರೆಯೊಡನೆ ಸಂಚರಿಸಿದ ದೇಶಗಳು, ಅಲ್ಲಿಯ ವೃತ್ತಾಂತಗಳ ಕಥೆಗಳು, ಉಪಕಥೆಗಳು ಹೇರಳವಾಗಿವೆ. ಪಾತಾಲಖಂಡದ ಐವತ್ತುಮೂರು ಅಧ್ಯಾಯಗಳಲ್ಲಿ ಶ್ರೀರಾಮನ ಅಶ್ವಮೇಧದ ಕುದುರೆಯು ನಾನಾದೇಶಗಳಲ್ಲಿ ಸಂಚರಿಸಿದ ಅದ್ಭುತಕಥೆಯಿದೆ. ಶಿವ-ಶತ್ರುಘ್ನರ ಯುದ್ಧ, ಶಿವ-ಹನುಮಂತರ ಯುದ್ಧ, ವೀರಭದ್ರ-ಪುಷ್ಕಲರ (ಭರತನ ಮಗ) ಯುದ್ಧ, ಶ್ರೀರಾಮ-ಶಿವರ ಸಮಾಗಮ–ಇವೇ ಮುಂತಾದ ಪ್ರಸಂಗಗಳು ಬರುತ್ತವೆ. ಕಡೆಯದಾಗಿ ಶತ್ರುಘ್ನನು ಪುಷ್ಕಲ-ಹನುಮಂತರೊಡನೆ ವಾಲ್ಮೀಕಿಗಳ ಆಶ್ರಮಕ್ಕೆ ಬರುತ್ತಾನೆ. ಜೈಮಿನೀಭಾರತದಲ್ಲಿಯೂ ನಾಲ್ಕಾರು ಶ್ಲೋಕಗಳಲ್ಲಿಯೇ ಕುದುರೆಯ ದೇಶಪರ್ಯಟನವು ಮುಗಿದು ವಾಲ್ಮೀಕಿಮಹರ್ಷಿಗಳ ಆಶ್ರಮಕ್ಕೆ ಬರುತ್ತದೆ. ಮುಂದಿನ ಕಥೆಯು ಸಾಮಾನ್ಯವಾಗಿ ಜೈಮಿನೀಭಾರತದಲ್ಲಿಯೂ ಮತ್ತು ಪದ್ಮಪುರಾಣದಲ್ಲಿಯೂ ಒಂದೇ ರೀತಿಯಾಗಿದೆ ಎನ್ನಬಹುದು. ಆದರೆ ಪದ್ಮಪುರಾಣದಲ್ಲಿಯೂ ಲವನು ಕುದುರೆಯನ್ನು ಕಟ್ಟಿದನಂತರ ಶ್ರೀರಾಮನ ಸೀತಾಪರಿತ್ಯಾಗದ ಪ್ರಸಂಗವು ಪುನಃ ಬರುತ್ತದೆ. ಆ ಸಂದರ್ಭದಲ್ಲಿ ಸೀತಾ-ರಾಮರ ವಿಯೋಗಕ್ಕೆ ಕಾರಣವಾದ ಶಾಪದ ಪ್ರಸಂಗವೂ ಅಗಸನ ಪೂರ್ವಜನ್ಮವೃತ್ತಾಂತವೂ ಬರುತ್ತದೆ. ಅದು ಹೀಗಿದೆ :

ಶ್ರೀರಾಮನು ಸೀತೆಯು ಗರ್ಭಿಣಿಯಾಗಿದ್ದಾಗ ಕಾಡಿಗೇಕೆ ಕಳುಹಿಸಿದ ನೆಂಬುದಕ್ಕೆ ಈ ಪ್ರಕರಣದಲ್ಲಿ ಒಂದು ಕಥೆಯಿದೆ. ಅದನ್ನು ಇಲ್ಲಿ ಯಥಾವತ್ತಾಗಿ ಕೊಡಲಾಗಿದೆ.

ಹಿಂದೆ ಹೇಳಿದಂತೆ ಶೇಷನಾಗನು ವಾತ್ಸ್ಯಾಯನಮಹರ್ಷಿಗೆ ಉತ್ತರ ರಾಮಾಯಣದ ಕಥೆಯನ್ನು ಹೇಳುತ್ತಿರುತ್ತಾನೆ. ಸೀತೆಯ ವಿಷಯದಲ್ಲಿ ಅಗಸನು ಸಲ್ಲದ ಮಾತುಗಳನ್ನು ಹೇಳಿದನೆಂಬ ಮಾತುಗಳನ್ನು ಕೇಳಿದ ನಂತರ ವಾತ್ಸ್ಯಾಯನನು ಶೇಷನಾಗನನ್ನು ಪ್ರಶ್ನಿಸುತ್ತಾನೆ :

ಜಗತ್ಪವಿತ್ರಸತ್ಕೀರ್ತಿರ್ಜಾನಕ್ಯಾವಾಚ್ಯವಾಚನಮ್ ।
ಕಥಂ ಸಮಾಕರೋತ್ಸ್ವಾಮಿಂಸ್ತನ್ಮೇ ಕಥಯ ಸುವ್ರತ ॥

"ಸ್ವಾಮಿಯೇ! ಸುವ್ರತನೇ! ಜಗತ್ತನ್ನೇ ಪವಿತ್ರಗೊಳಿಸುವ ಸತ್ಕೀರ್ತಿಯುಳ್ಳ ಜಾನಕಿಯ ವಿಷಯದಲ್ಲಿ ಅಗಸನು ಕೆಟ್ಟಮಾತುಗಳನ್ನು ಹೇಗೆ ತಾನೇ ಆಡಿದನು? ಅದನ್ನು ದಯಮಾಡಿ ಹೇಳು.

ನನ್ನ ಮನಸ್ಸಿಗೆ ಹಿತವೂ, ಸುಖವೂ ಉಂಟಾಗುವಂತೆ ಮಾಡು. ನಿನ್ನ ವಚನಾಮೃತವನ್ನು ಕೇಳುತ್ತಿರುವ ನನಗೆ ತೃಪ್ತಿಯೆಂಬುದೇ ಇಲ್ಲ. ನಿನ್ನ ಅಮೃತವಾಣಿಯು ಜನನ-ಮರಣಗಳನ್ನೂ ದೂರೀಕರಿಸುತ್ತದೆ"

ವಾತ್ಸ್ಯಾಯನ ಪ್ರಶ್ನೆಗೆ ಉತ್ತರವಾಗಿ ಶೇಷನು ಹೇಳುತ್ತಾನೆ :

"ವಾತ್ಸ್ಯಾಯನ! ನಿನ್ನ ಆಶಯದಂತೆ ಅಗಸನು ಸೀತೆಯ ವಿಷಯದಲ್ಲಿ ನಿಷ್ಠುರವಾದ ಮಾತುಗಳನ್ನಾಡಲು ಕಾರಣವೇನೆಂಬುದನ್ನು ಹೇಳುವೆನು ; ಕೇಳು.

ಮಿಥಿಲಾಪಟ್ಟಣದಲ್ಲಿ ಜನಕನೆಂಬ ಹೆಸರಿನ ರಾಜನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಅವನೊಮ್ಮೆ ಯಜ್ಞಮಂಟಪವನ್ನು ನಿರ್ಮಿಸುವ ಸಲುವಾಗಿ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದಾಗ ರತಿಯಂತೆ ಸುಂದರಿಯಾದ ಹುಡುಗಿಯು ಸಿಕ್ಕಿದಳು. ಅವಳನ್ನು ಕಂಡ ಸೀರಧ್ವಜನು ಪರಮಹೃಷ್ಟನಾಗಿ ಅವಳಿಗೆ 'ಸೀತಾ'–ಎಂದು ಹೆಸರಿಟ್ಟನು. ಆಕೆಯು ಉದ್ಯಾನವನದಲ್ಲಿ ಆಟವಾಡುತ್ತಿದ್ದಾಗ ಮನೋಹರವಾಗಿ ಮಾತ ನಾಡುತ್ತಿದ್ದ ಗಿಳಿಯ ದಂಪತಿಗಳನ್ನು ನೋಡಿದಳು. ಅವು ಅತ್ಯಂತ

ಹರ್ಷದಿಂದಿದ್ದುವು. ಕಾಮಾಸಕ್ತವಾಗಿದ್ದುವು. ಸ್ನೇಹದಿಂದ ಶುಭಕರವಾದ ಮಾತುಗಳನ್ನಾಡುತ್ತಿದ್ದುವು. ಆ ಗಿಳಿಗಳು ರಮಿಸುತ್ತಾ ಆಕಾಶಕ್ಕೆ ಹಾರಿ ಅಲ್ಲಿದ್ದ ಬೆಟ್ಟದ ತುದಿಯಲ್ಲಿ ಕುಳಿತು ಮಾತನಾಡಿಕೊಳ್ಳುತ್ತಿದ್ದುವು :

"ಭೂಮಿಯಲ್ಲಿ ರಾಮನೆಂಬುವನು ರಾಜನಾಗುತ್ತಾನೆ. ಅವನಿಗೆ 'ಸೀತಾ'–ಎಂಬ ಹೆಸರಿನವಳು ಪತ್ನಿಯಾಗುತ್ತಾಳೆ. ಶ್ರೀರಾಮನು ಸೀತೆಯೊಡನೆ ಹನ್ನೊಂದು ಸಾವಿರ ವರ್ಷಗಳವರೆಗೆ ಭೂಮಂಡಲದ ಎಲ್ಲ ರಾಜರನ್ನೂ ತನ್ನ ಅಧೀನದಲ್ಲಿಟ್ಟುಕೊಂಡು ರಾಜ್ಯವಾಳುತ್ತಾನೆ. ಜಾನಕಿಯೂ ಧನ್ಯಳು. ಶ್ರೀರಾಮನೂ ಧನ್ಯನು. ಇಬ್ಬರೂ ಭೂಮಿಯಲ್ಲಿ ಸಂತೋಷದಿಂದ ರಮಿಸುತ್ತಿರುತ್ತಾರಲ್ಲವೇ!"

ಗಿಳಿಗಳು ಹೇಳುತ್ತಿದ್ದ ಆ ಮಾತುಗಳು ಉದ್ಯಾನವನದಲ್ಲಿದ್ದ ಸೀತೆಗೂ ಕೇಳಿಸಿತು. ಆ ಪಕ್ಷಿಗಳು ದೇವತೆಗಳೇ ಇರಬೇಕೆಂದು ತರ್ಕಿಸಿದಳು.

"ಈ ಎರಡು ಗಿಳಿಗಳೂ ನನ್ನ ಸಂಬಂಧವಾದ ಕಥೆಯನ್ನೇ ರಮ್ಯವಾಗಿ ಹೇಳುತ್ತಿವೆ. ನಾನು ಈ ಪಕ್ಷಿಗಳನ್ನು ಹಿಡಿದುಕೊಂಡು ಉಳಿದ ನನ್ನ ಭವಿಷ್ಯವೆಲ್ಲವನ್ನೂ ಇವುಗಳಿಂದ ತಿಳಿದುಕೊಳ್ಳುವೆನು."

ಹೀಗೆ ಯೋಚಿಸಿದ ಸೀತೆಯು ಗಿಳಿಗಳನ್ನು ಮೆಲ್ಲನೆ ಉಪಾಯಾಂತರಗಳಿಂದ ಹಿಡಿದುಕೊಳ್ಳುವಂತೆ ತನ್ನ ಸಖಿಯರಿಗೆ ಹೇಳಿದಳು. ಅಂತೆಯೇ ಗೆಳತಿಯರು ಗಿಳಿಗಳನ್ನು ಹಿಡಿದು ತಂದು ಸೀತೆಗೊಪ್ಪಿಸಿದರು. ಮನೋಹರವಾಗಿ ಶಬ್ದಮಾಡುತ್ತಿದ್ದ ಗಿಳಿಗಳಿಗೆ ಸೀತೆಯು ಹೇಳಿದಳು :

"ರಮ್ಯವಾದ ಗಿಳಿಗಳೇ! ನೀವು ಭಯಪಡುವ ಕಾರಣವಿಲ್ಲ. ನೀವು ಯಾರು? ಎಲ್ಲಿಂದ ಬಂದಿರಿ? ನೀವು ಪರಸ್ಪರವಾಗಿ ರಾಮ-ಸೀತೆಯರ ಸಂಬಂಧವಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ನಾನು ಕೇಳಿದೆನು. ರಾಮನಾರು? ಸೀತೆಯೆಂಬುವಳು ಯಾವಳು? ನಿಮಗೆ ಅವರ ವಿಚಾರವು ಹೇಗೆ ತಿಳಿಯಿತು? ಎಲ್ಲ ವಿಷಯಗಳನ್ನೂ ಹೇಳಿರಿ. ನನಗೆ ನೀವು ಸ್ವಲ್ಪವೂ ಭಯಪಡಬೇಕಾಗಿಲ್ಲ."

"ರಾಜಕುಮಾರಿ? ವಾಲ್ಮೀಕಿಗಳೆಂಬ ಮಹರ್ಷಿಗಳಿರುವರು. ನಾವು ಅವರಿರುವ ಆಶ್ರಮದಲ್ಲಿಯೇ ಇದ್ದೇವೆ. ಅವರು ಮುಂದೆ ನಡೆಯಲಿರುವ

ಶ್ರೀರಾಮನ ಇತಿಹಾಸವನ್ನು ರಾಮಾಯಣವೆಂಬ ಹೆಸರಿನಿಂದ ರಚಿಸಿ ಶಿಷ್ಯರಿಗೆ ಬಾಯಿಪಾಠ ಮಾಡಿಸುತ್ತಿದ್ದಾರೆ. ಸರ್ವಪ್ರಾಣಿಗಳ ಹಿತದಲ್ಲಿಯೂ ನಿರತರಾಗಿರುವ ಆ ಮಹರ್ಷಿಗಳು ಯಾವಾಗಲೂ ಶ್ರೀರಾಮನ ಪಾದಾರವಿಂದಗಳನ್ನೇ ಸ್ಮರಿಸುತ್ತಿರುತ್ತಾರೆ. ಶಿಷ್ಯರು ಹಾಡುತ್ತಿರುವ ರಾಮಾಯಣವನ್ನು ಕೇಳಿ ಕೇಳಿ ನಮಗೂ ರಾಮಾಯಣವು ಬಾಯಿಪಾಠವಾಗಿಬಿಟ್ಟಿದೆ. ರಾಮನಾರು? ಸೀತೆ ಯಾರು? ರಾಮನಿಂದ ಆಕೆಗೆ ಏನೇನಾಗುತ್ತದೆ?–ಎಂಬುದೆಲ್ಲವನ್ನೂ ನಾವು ಈಗಲೇ ಹೇಳಬಲ್ಲೆವು.

ಋಷ್ಯಶೃಂಗರು ಮಾಡಿಸುವ ಪುತ್ರಕಾಮೇಷ್ಟಿಯ ಫಲವಾಗಿ ಶ್ರೀಹರಿಯು ತನ್ನನ್ನು ನಾಲ್ಕು ಭಾಗಗಳನ್ನಾಗಿ ವಿಭಾಗಿಸಿಕೊಂಡು ದಶರಥನ ನಾಲ್ವರು ಮಕ್ಕಳಾಗಿ ಹುಟ್ಟುತ್ತಾನೆ. ಹಲವಾರು ವರ್ಷಗಳು ಕಳೆದನಂತರ ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಮಿಥಿಲಾಪಟ್ಟಣಕ್ಕೆ ಕರೆದೊಯ್ಯುತ್ತಾರೆ. ಅಲ್ಲಿರುವ ಶಿವಧನುಸ್ಸನ್ನು ಭೇದಿಸಿ ಶ್ರೀರಾಮನು ಸೀತೆಯನ್ನು ಮದುವೆಯಾಗುತ್ತಾನೆ. ಸೀತೆಯೊಡನೆ ಶ್ರೀರಾಮನು ರಾಜ್ಯಭಾರವನ್ನು ಮಾಡುತ್ತಾನೆ. ವಾಲ್ಮೀಕಿಗಳ ಶಿಷ್ಯರು ಹಾಡುತ್ತಿದ್ದುದನ್ನು ನಿನಗೂ ನಾವು ಹೇಳಿದ್ದೇವೆ. ನಾವಿನ್ನು ಆಶ್ರಮಕ್ಕೆ ಹೋಗಬೇಕಾಗಿದೆ. ನಮ್ಮನ್ನು ಬಿಟ್ಟು ಬಿಡು."

ಮನೋಹರವಾದ ಆ ಮಾತುಗಳನ್ನು ಕೇಳಿ ಉತ್ಸುಕವಾದ ಸೀತೆಯು ಪುನಃ ಗಿಳಿಗಳನ್ನು ಪ್ರಶ್ನಿಸಿದಳು :

"ನೀವು ಹೇಳಿದುದನ್ನು ಕೇಳಿ ನನಗೆ ತೃಪ್ತಿಯಾಗಲಿಲ್ಲ. ನೀವು ಪುನಃ ಹೇಳಿರಿ. ಆ ರಾಮನು ಎಲ್ಲಿದ್ದಾನೆ? ಹೇಗಿದ್ದಾನೆ? ಯಾರ ಮಗನು? ಜಾನಕಿಯನ್ನು ಹೇಗೆ ಮದುವೆಯಾಗುತ್ತಾನೆ?"

ಅವಳ ಮಾತನ್ನು ಕೇಳಿದ ಹೆಣ್ಣುಗಿಳಿಗೆ ತನ್ನನ್ನು ಹಿಡಿದುಕೊಂಡಿರುವವಳೆ ಕಾಮಾರ್ತಳಾಗಿರುವ ಜಾನಕಿ ಎಂಬುದು ತಿಳಿಯಿತು. ಒಡನೆಯೇ ಅವಳ ಕಾಲುಗಳ ಮೇಲೆ ಬಿದ್ದು ಹೇಳಿತು.

ಸೂರ್ಯವಂಶಕ್ಕೆ ತಿಲಕಪ್ರಾಯನಾದ ದಶರಥನೆಂಬ ರಾಜನಿದ್ದನು. ಅವನನ್ನು ಶತ್ರುಗಳ ವಿಜಯಕ್ಕಾಗಿ ದೇವತೆಗಳೂ ಆಶ್ರಯಿಸುತ್ತಾರೆ

ಅಂತಹ ವೀರಾಧಿವೀರನವನು. ಅವನು ರೂಪವತಿಯರಾದ ಮೂವರು ಪತ್ನಿಯರಲ್ಲಿ ನಾಲ್ವರು ಮಕ್ಕಳನ್ನು ಪಡೆಯುತ್ತಾನೆ. ಅವರಲ್ಲಿ ಹಿರಿಯನು ರಾಮನು. ಭರತ-ಲಕ್ಷ್ಮಣ-ಶತ್ರುಘ್ನರು ಅನುಕ್ರಮವಾಗಿ ಹುಟ್ಟುತ್ತಾರೆ. ಶ್ರೀರಾಮನು ರಘುನಾಥನೆಂಬ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ. ಅವನ ಹೆಸರುಗಳು ಅನಂತವಾಗಿರುತ್ತವೆ. ಅವನು ಮಹಾಬಲಿಷ್ಠನು"–ಎಂದು ಹೇಳಿ ಅವನ ಸೌಂದರ್ಯವನ್ನು ಆ ಹೆಣ್ಣುಗಿಳಿಯು ವರ್ಣಿಸಿ ಹೇಳಿತು.

"ಮಹಾಬಲಪರಾಕ್ರಮವುಳ್ಳ ಸರ್ವೈಶ್ವರ್ಯಸಂಪನ್ನನಾದ ಶ್ರೀರಾಮನನ್ನು ವರ್ಣಿಸಲು ಯಾರಿಂದ ತಾನೇ ಸಾಧ್ಯವಾಗುವುದು? ನಿಶ್ಚಯವಾಗಿಯೂ ಸುಂದರಿಯಾದ ಆ ಜಾನಕಿಯೇ ಧನ್ಯಳು. ಶ್ರೀರಾಮನೊಡನೆ ಅವಳು ಹನ್ನೊಂದುಸಾವಿರ ವರ್ಷಗಳು ಸುಖವಾಗಿರುತ್ತಾಳೆ.

ಅದು ಸರಿ. ಅಮ್ಮ? ನೀನು ಯಾರು? ನಿನ್ನ ಹೆಸರೇನು? ರಾಮನ ವಿಷಯವನ್ನು ಇಷ್ಟು ಉತ್ಸುಕತೆಯಿಂದ ಕೇಳಲು ಕಾರಣವೇನು?"

"ನನ್ನ ಅರಗಿಳಿಯೇ! ನೀನು ಹೇಳಿದ ಆ ಜಾನಕಿಯೇ ನಾನು. ನನ್ನನ್ನು ಮೋಹಿಸಿ ಬರುವವನೇ ಆ ಶ್ರೀರಾಮನು. ನೀನು ಹೇಳಿದಂತೆ ರಾಮನು ಬಂದು ನನ್ನನ್ನು ಮದುವೆಯಾದನಂತರ ನಿಮ್ಮನ್ನು ಬಿಟ್ಟುಬಿಡುತ್ತೇನೆ. ಅಲ್ಲಿಯವರೆಗೂ ನೀವು ಇಲ್ಲಿಯೇ ಒಳ್ಳೆಯ ಹಣ್ಣು-ಹಂಪಲಗಳನ್ನು ತಿಂದುಕೊಂಡಿರಿ."

ಜಾನಕಿಯ ಮಾತುಗಳನ್ನು ಕೇಳಿ ಪಕ್ಷಿಗಳು ಭಯಗೊಂಡುವು. ಸೀತೆಯ ಅರಮನೆಯಲ್ಲಿರಲು ಒಪ್ಪಲಿಲ್ಲ.

"ಎಲ್ಲೈ ಸಾಧ್ವಿಯೇ! ನಾವು ಪಕ್ಷಿಗಳು. ಕಾಡಿನಲ್ಲಿ ಮರದ ಮೇಲೆ ವಾಸಮಾಡಿಕೊಂಡು ಸುಖವಾಗಿರುತ್ತೇವೆ. ಸ್ವೇಚ್ಛೆಯಿಂದ ಹಾರಾಡುತ್ತಿರುತ್ತೇವೆ. ಮೇಲಾಗಿ ಈ ಹೆಣ್ಣುಗಿಳಿಯು ಗರ್ಭವತಿಯಾಗಿದೆ. ನಮ್ಮ ಸ್ಥಾನಕ್ಕೆ ಹೋಗಿ ಮೊಟ್ಟೆಗಳನ್ನಿಟ್ಟು ಮರಿಗಳನ್ನು ಮಾಡಿ ಪುನಃ ನಿನ್ನಲ್ಲಿಗೆ ಬರುತ್ತೇವೆ. ಈಗ ನಮ್ಮನ್ನು ಬಿಟ್ಟುಬಿಡು."–ಎಂದು ಕೇಳಿಕೊಂಡವು. ಆದರೆ ಸೀತೆಯು ಹೆಣ್ಣುಗಿಳಿಯನ್ನು ಬಿಡಲು ಒಪ್ಪಲಿಲ್ಲ. ಬಹಳವಾಗಿ ಬೇಡಿಕೊಂಡರೂ ಸೀತೆಯು ಬಿಡದಿರಲು ಹೆಣ್ಣುಗಿಳಿಯು ಸೀತೆಗೆ ಶಾಪಕೊಟ್ಟಿತು.

ಯಥಾ ತ್ವಂ ಪತಿನಾ ಸಾರ್ಧಂ ವಿಯೋಜಯಸಿ ಮಾಮಿತಃ ।
ತಥಾ ತ್ವಮಪಿ ರಾಮೇಣ ವಿಮುಕ್ತಾ ಭವ ಗರ್ಭಿಣೀ ॥

"ನಾನು ಗರ್ಭಿಣಿಯಾಗಿರುವಾಗ ನೀನು ಹೇಗೆ ನನ್ನನ್ನು ಗಂಡನಿಂದ ಬೇರ್ಪಡಿಸಿದೆಯೋ ಹಾಗೆಯೇ ನೀನೂ ಗರ್ಭಿಣಿಯಾದಾಗ ಶ್ರೀರಾಮನಿಂದ ಬೇರೆಯಾಗುವೆ"–ಹೀಗೆ ಶಾಪವನ್ನಿತ್ತು ಪತಿಯನ್ನಗಲಿದ ದುಃಖದಿಂದ 'ರಾಮ ರಾಮ'–ಎಂದು ಹೇಳುತ್ತಾ ಹೆಣ್ಣುಗಿಳಿಯು ಪ್ರಾಣಬಿಟ್ಟಿತು. ಪತ್ನಿಯು ಸತ್ತುದನ್ನು ನೋಡಿ ಗಂಡುಗಿಳಿಯು ಕೋಪದಿಂದ ದುಃಖಿಸುತ್ತಾ ಗಂಗೆಯಲ್ಲಿ ಬಿದ್ದಿತು. ದುಃಖಿಸುತ್ತಿದ್ದುದರಿಂದಲೂ, ಕೋಪಗೊಂಡಿದ್ದುದರಿಂದಲೂ, ಸೀತೆಯ ಮೇಲಿದ್ದ ಛಲದಿಂದಲೂ ಆ ಗುಂಡುಗಿಳಿಯೇ ಮುಂದೆ ಕ್ರೋಧನೆಂಬ ಹೆಸರಿನ ರಜಕನಾಗಿ ಹುಟ್ಟಿತು. ರಜಕನ ಮಾತಿನಿಂದಲೇ ಸೀತೆಯು ನಿಂದಿತಳಾದಳು. ರಾಮನ ವಿಯೋಗವನ್ನು ಹೊಂದಿದಳು. ಅರಣ್ಯಕ್ಕೂ ಹೋಗಬೇಕಾಯಿತು. ಹೀಗೆ ಗಿಳಿಯ ಶಾಪದ ಕಾರಣದಿಂದಾಗಿ ಗರ್ಭಿಣಿಯಾಗಿದ್ದಾಗ ಸೀತೆಗೆ ರಾಮನಿಂದ ವಿಯೋಗವು ಸಂಭವಿಸಿತು.

ಪದ್ಮಪುರಾಣದಲ್ಲಿ ಶತ್ರುಘ್ನನು ಕಾಲಜಿತ್ ಎಂಬ ಸೇನಾನಾಯಕನೊಡನೆಯೂ, ಹನುಮಂತ-ಸುಗ್ರೀವರೊಡನೆಯೂ, ಸುಮತಿ ಎಂಬ ಮಂತ್ರಿಯೊಡನೆಯೂ ಕುದುರೆಯೊಡನೆ ಹೋಗಿರುತ್ತಾನೆ. ಲವ-ಕುಶರ ಯುದ್ಧಪ್ರಸಂಗದಲ್ಲಿ ಕಾಲಜಿತನನ್ನು ಲವನು ಸಂಹರಿಸುತ್ತಾನೆ. ಶತ್ರುಘ್ನನ ಬಾಣದಿಂದ ಲವನು ಮೂರ್ಛಿತನಾಗುತ್ತಾನೆ. (ಜೈಮಿನೀಭಾರತದಂತೆಯೇ) ಮುಂದೆ ಕುಶನು ಬರುತ್ತಾನೆ. ಶತ್ರುಘ್ನ-ಕುಶರಿಗೆ ಯುದ್ಧವಾಗುತ್ತದೆ. ಶತ್ರುಘ್ನನು ಮೂರ್ಛಿತನಾಗುತ್ತಾನೆ.

ಇಲ್ಲಿಂದ ಮುಂದಕ್ಕೆ ಜೈಮಿನೀಭಾರತದ ಕಥೆಗೂ ಪದ್ಮಪುರಾಣದ ಕಥೆಗೂ ಬಹಳ ವ್ಯತ್ಯಾಸವು ಕಂಡುಬರುತ್ತದೆ.

ಶತ್ರುಘ್ನನು ಮೂರ್ಛಿತನಾದನಂತರ ಕುಶನು ಹನುಮಂತ-ಸುಗ್ರೀವರನ್ನು ಬಿಗಿದು ಸೀತೆಯ ಬಳಿಗೆ ಒಯ್ಯುತ್ತಾನೆ. ಸೀತೆಗೆ ಯುದ್ಧದ ಸಮಾಚಾರವನ್ನೆಲ್ಲಾ ಹೇಳಿ ತಾನು ಬಿಗಿದು ತಂದಿರುವ ಸುಗ್ರೀವ-ಹನುಮಂತರನ್ನು ಸೀತೆಗೆ ತೋರಿಸುತ್ತಾನೆ. ಸೀತೆಯು ಹನುಮಂತ-ಸುಗ್ರೀವರನ್ನೂ–ಕುದುರೆ

ಯನ್ನೂ ಬಿಟ್ಟುಬಿಡುವಂತೆ ಮಕ್ಕಳಿಗೆ ಹೇಳಿ ಯುದ್ಧದಲ್ಲಿ ಸತ್ತುಹೋದವರೆಲ್ಲರೂ ಜೀವಿಸುವಂತೆ ಸೂರ್ಯನನ್ನು ಪ್ರಾರ್ಥಿಸುತ್ತಾಳೆ. ಸತ್ತುಹೋಗಿದ್ದ ಸೈನಿಕರೆಲ್ಲರೂ ಬದುಕುತ್ತಾರೆ. ಶತ್ರುಘ್ನನೂ ಎಚ್ಚರಗೊಳ್ಳುತ್ತಾನೆ. ಅನಂತರ ಕುದುರೆಯೊಡನೆ ಎಲ್ಲರೂ ಅಯೋಧ್ಯೆಗೆ ಹೋಗುತ್ತಾರೆ. ಸುಮತಿ ಎಂಬ ಮಂತ್ರಿಯು ವಾಲ್ಮೀಕಿಮಹರ್ಷಿಗಳ ಆಶ್ರಮಪ್ರದೇಶದಲ್ಲಾದ ಎಲ್ಲ ವೃತ್ತಾಂತಗಳನ್ನೂ ತಿಳಿಸುತ್ತಾನೆ. ವಾಲ್ಮೀಕಿಗಳಿಂದ ವಿಷಯವನ್ನು ತಿಳಿದು ಶ್ರೀರಾಮನು ಸೀತೆಯನ್ನೂ ಮತ್ತು ಲವ-ಕುಶರನ್ನೂ ಕರೆತರುವಂತೆ ಲಕ್ಷ್ಮಣನಿಗೆ ಹೇಳಿಕಳುಹಿಸುತ್ತಾನೆ. ಸೀತೆಯು ಬರಲೊಲ್ಲದೇ ಕುಶ-ಲವರನ್ನು ಮಾತ್ರವೇ ಕಳುಹಿಸುತ್ತಾಳೆ. ವಾಲ್ಮೀಕಿಗಳ ಅಪ್ಪಣೆಯಂತೆ ಶ್ರೀರಾಮನ ಆಸ್ಥಾನದಲ್ಲಿ ಕುಶ-ಲವರು ರಾಮಾಯಣವನ್ನು ಹಾಡುತ್ತಾರೆ. ಶ್ರೀರಾಮನಿಗೆ ಕುಶ-ಲವರು ತನ್ನ ಮಕ್ಕಳೇ ಎಂದು ದೃಢವಾಗುತ್ತದೆ. ಸೀತೆಯನ್ನು ಕರೆತರಲು ಪುನಃ ಶ್ರೀರಾಮನು ಲಕ್ಷ್ಮಣನನ್ನು ಕಳುಹಿಸುತ್ತಾನೆ. ಆಗ ಸೀತಾದೇವಿಯು ಬಂದು ರಾಮನನ್ನು ಸೇರುತ್ತಾಳೆ. ನಿಜವಾದ ಸೀತೆಯೊಡನೆ ಶ್ರೀರಾಮನು ಯಜ್ಞದ ಅವಭೃಥವನ್ನು ಮಾಡುತ್ತಾನೆ. ಮುಂದೆ ಶ್ರೀರಾಮನು ಜನಕಪುತ್ರಿಯಾದ ಸೀತಾದೇವಿಯೊಡನೆ ಮೂರು ಅಶ್ವಮೇಧಯಾಗಗಳನ್ನು ಮಾಡಿ ಮೂರು ಲೋಕಗಳಲ್ಲಿಯೂ ಅತುಲವಾದ ಕೀರ್ತಿಯನ್ನು ಪಡೆಯುತ್ತಾನೆ.

ಇದು ಪದ್ಮಪುರಾಣದ ಪಾತಾಲಖಂಡದಲ್ಲಿ ಬರುವ ಕಥಾಸಾರಾಂಶ.

ಪರಿಶಿಷ್ಟ

ಉಮಾಸಂಹಿತಾಯಾಂ ನವಗ್ರಹದಶಾಭುಕ್ತಿದೋಷಪರಿಹಾರ ಪಾರಾಯಣಕ್ರಮಃ

(ಮೊದಲು ದಶಾ-ಭುಕ್ತಿದೋಷನಿವಾರಣಾರ್ಥವಾಗಿ ಸಂಕಲ್ಪಮಾಡಿ ಅನಂತರದಲ್ಲಿ ರಾಮಾಯಣಪಾರಾಯಣದಂತೆಯೇ ಧ್ಯಾನಶ್ಲೋಕಗಳನ್ನು ಹೇಳಿಕೊಂಡು ಆಯಾ ದೋಷನಿವಾರಣೆಗೆ ಉದ್ದಿಷ್ಟವಾದ ಸರ್ಗಗಳನ್ನು ಪಾರಾಯಣಮಾಡಿ ನಂತರ ಹೇಳಬೇಕಾದ ಶ್ಲೋಕಗಳನ್ನೂ ಹೇಳಿ ಮುಗಿಸ ಬೇಕು.)

ಈಶ್ವರ ಉವಾಚ

ಅಥ ವಕ್ಷ್ಯಾಮಿ ದೋಷಾಣಾಂ ದಶಾಭುಕ್ತಿಷು ಪಾರ್ವತಿ ।
ನವಗ್ರಹೈಃ ಕಾರಿತಾನಾಂ ಪರಿಹಾರಂ ಯಥೋದಿತಮ್ ॥೧॥

ಬ್ರಹ್ಮಾ ತದಾತ್ಮಜಾಶ್ಚಾಪಿ ಶಕ್ರಾದ್ಯಾಶ್ಚ ಸುರೋತ್ತಮಾಃ ।
ರಾಮಾಯಣಸ್ಥಘಟ್ಟಾನಾಂ ಕೇಷಾಞ್ಚಿತ್ಪಾಠಮಾತ್ರತಃ
ಪೀಡಾಂ ನವಗ್ರಹಕೃತಾಮುತ್ತೇರುಃ ಕೃಪಯಾ ಪ್ರಭೋಃ ॥೨॥

ಈಶ್ವರನು ಪಾರ್ವತಿಯನ್ನು ಕುರಿತು ಹೇಳುತ್ತಾನೆ :

"ಪಾರ್ವತಿ! ನವಗ್ರಹಗಳ ದಶಾ-ಭುಕ್ತಿಗಳ ಕಾಲದಲ್ಲಿ ಪ್ರಾಪ್ತವಾಗ ತಕ್ಕ ದೋಷಗಳ ಪರಿಹಾರವನ್ನು ಕ್ರಮವಾಗಿ ಹೇಳುತ್ತೇನೆ. ಬ್ರಹ್ಮನೂ ಮತ್ತು ಅವನ ಮಕ್ಕಳೂ ಮತ್ತು ಇಂದ್ರಾದಿದೇವತೆಗಳೂ ರಾಮಾಯಣದ ಕೆಲವು ಘಟ್ಟಗಳಲ್ಲಿ ಬರುವ ಶ್ಲೋಕಗಳ ಪಾರಾಯಣಮಾತ್ರದಿಂದಲೇ ಪ್ರಭು ರಾಮಚಂದ್ರನ ಅನುಗ್ರಹಕ್ಕೆ ಪಾತ್ರರಾಗಿ ದಶಾ-ಭುಕ್ತಿಗಳ ಕಾಲದಲ್ಲಿ ನವಗ್ರಹಗಳಿಂದ ಪ್ರಾಪ್ತವಾಗುವ ದೋಷಗಳಿಂದ ಪಾರಾಗಿರುತ್ತಾರೆ.

ಸೂರ್ಯದಶಾದೋಷಪರಿಹಾರಃ

ದುಷ್ಟಾ ದಶಾ ಚೇತ್ಸೂರ್ಯಸ್ಯ ನಿಯಮಾತ್ಪೂತಮಾನಸಃ ।
ಹರೇಣ ಗಜ್ಗಾಧರಣಸರ್ಗಂ ನಿತ್ಯಂ ಪಠೇದ್ದ್ವಿಜಃ ॥೩॥

ಸೂರ್ಯದಶೆಯು ದೋಷಯುಕ್ತವಾಗಿದ್ದಲ್ಲಿ ಮಾನವನು ಪರಿಶುದ್ಧ

ವಾದ ಮನಸ್ಸಿನಿಂದ ಕೂಡಿದವನಾಗಿ ಹರನು ಗಂಗೆಯನ್ನು ಧರಿಸಿದ ಸರ್ಗವನ್ನು ಸೂರ್ಯದಶೆಯು ಮುಗಿಯುವವರೆಗೂ ನಿಯಮದಿಂದ ಪಾರಾ ಯಣ ಮಾಡುತ್ತಿರಬೇಕು. (ಸೂರ್ಯದಶೆ : ಬಾಲಕಾಂಡ ಸರ್ಗ-೪೩ ಸಂಪುಟ ೧ ಪುಟ ೧೨೭)

ಸೂರ್ಯಸ್ಯೈವ ದಶಾಯಾಂ ತು ಸೂರ್ಯಭುಕ್ತಿಸ್ತು ದೋಷದಾ ।
ಹರೇಣ ಕಾಲಕೂಟಸ್ಯ ಭಕ್ಷಣಂ ಯತ್ರ ಸರ್ಗಕೇ ।
ತಂ ಪಠೇತ್ಪ್ರಾತರೈಕಾಗ್ರ್ಯಾದ್ಧ್ಯಾತ್ವಾ ರುದ್ರಂ ಪರಾತ್ಪರಮ್ ॥೪॥

ಸೂರ್ಯನ ದಶೆಯಲ್ಲಿ ಸೂರ್ಯಭುಕ್ತಿಯು ದೋಷಾವಹವಾಗಿದ್ದರೆ ಪರಾತ್ಪರನಾದ ರುದ್ರನನ್ನು ಧ್ಯಾನಮಾಡಿ ಹರನು ಕಾಲಕೂಟವಿಷವನ್ನು ಭಕ್ಷಿಸಿದ ಸರ್ಗವನ್ನು ಏಕಾಗ್ರವಾದ ಮನಸ್ಸಿನಿಂದ ಪ್ರಾತಃಕಾಲದಲ್ಲಿ ಪಾರಾಯಣಮಾಡಬೇಕು. (ಸೂರ್ಯದಶೆ-ಸೂರ್ಯಭುಕ್ತಿ ಬಾಲಕಾಂಡ ಸರ್ಗ ೪೫ ಸಂಪುಟ ೧ ಪುಟ ೧೩೩)

ಚನ್ದ್ರಭುಕ್ತಿರ್ಯದಾ ಕ್ರೂರಾ ಸೂರ್ಯಸ್ಯೈವ ದಶಾನ್ತರೇ ।
ಪಠೇಚ್ಛೂರ್ಪಣಖಾಭಙ್ಗ ಸರ್ಗಂ ತ್ರಿಷವಣಂ ಯತಃ ॥೫॥

ಸೂರ್ಯದಶೆಯಲ್ಲಿ ಚಂದ್ರಭುಕ್ತಿಯು ಕ್ರೂರವಾಗಿದ್ದರೆ ಶೂರ್ಪಣಖಾನಾಸಿಕಾಭಂಗಸರ್ಗವನ್ನು ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಈ ಮೂರು ಕಾಲಗಳಲ್ಲಿಯೂ ಪಾರಾಯಣಮಾಡಬೇಕು. (ಸೂರ್ಯದಶೆ-ಚಂದ್ರಭುಕ್ತಿ-ಅರಣ್ಯಕಾಂಡ ಸರ್ಗ ೧೮ ಸಂಪುಟ ೪-ಪುಟ ೭೦೬)

ಕುಜಭುಕ್ತಿರ್ದೋಷದಾ ಚೇತ್ಸೂರ್ಯಸ್ಯ ಚ ದಶಾನ್ತರೇ ।
ಆದಾವಯೋಧ್ಯಾಕಾಣ್ಡಸ್ಯ ಪಠೇತ್ಸರ್ಗದ್ವಯಂ ವ್ರತೀ ॥೬॥

ಸೂರ್ಯನ ದಶೆಯಲ್ಲಿ ಕುಜಭುಕ್ತಿಯು ದೋಷಾವಹವಾಗಿದ್ದರೆ ಅಯೋಧ್ಯಾಕಾಂಡದ ಒಂದು ಮತ್ತು ಎರಡನೆಯ ಸರ್ಗಗಳನ್ನು ಪಾರಾ ಯಣಮಾಡಬೇಕು. (ಸೂರ್ಯದಶೆ-ಕುಜಭುಕ್ತಿ ಅಯೋಧ್ಯಾಕಾಂಡ ಸರ್ಗ ೧ ಮತ್ತು ೨ ಸಂಪುಟ ೨ ಪುಟ ೨೨೧ ರಿಂದ ೨೩೦ರ ವರೆಗೆ)

ಬುಧಸ್ಯ ಯದಿ ಚೇದ್ಭುಕ್ತಿಃ ಕ್ರೂರಾ ಸೂರ್ಯದಶಾನ್ತರೇ ।
ಅಧಿಕಂ ಮೇನಿರೇ ವಿಷ್ಣುಮಿತಿಸರ್ಗಂ ಸದಾ ಪಠೇತ್ ॥೭॥

ಸೂರ್ಯದಶೆಯಲ್ಲಿ ಬುಧಭುಕ್ತಿಯು ದೋಷಾವಹವಾಗಿದ್ದರೆ ಅಧಿಕಂ ಮೇನಿರೇ ವಿಷ್ಣುಂ ಎಂಬ ಶ್ಲೋಕವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಸೂರ್ಯದಶೆ-ಬುಧಭುಕ್ತಿ ಬಾಲಕಾಂಡ ಸರ್ಗ - ೭೫ ಸಂಪುಟ ೧ ಪುಟ ೨೧೧)

ಗುರೋರ್ಭುಕ್ತಿರ್ದೋಷದಾ ಚೇದಾದಿತ್ಯಸ್ಯ ದಶಾನ್ತರೇ ।
ಸ ರಾಮೋ ರಥಮಾಸ್ಥಾಯೇತ್ಯಾದಿಸರ್ಗಂ ಪಠೇನ್ಮುದಾ ॥೮॥

ಸೂರ್ಯನ ದಶೆಯಲ್ಲಿ ಗುರುಭುಕ್ತಿಯು ದೋಷಾವಹವಾಗಿದ್ದರೆ ಸ ರಾಮೋ ರಥಮಾಸ್ಥಾಯ – ಎಂದು ಪ್ರಾರಂಭವಾಗುವ ಸರ್ಗವನ್ನು ಪಾರಾಯಣಮಾಡಬೇಕು. (ಸೂರ್ಯದಶೆ-ಗುರುಭುಕ್ತಿ ಅಯೋಧ್ಯಾಕಾಂಡ ಸರ್ಗ ೧೭ ಸಂಪುಟ ೨ ಪುಟ ೨೯೬)

ಶುಕ್ರಭುಕ್ತಿಕ್ರೌರ್ಯದೋಷಶಾನ್ತ್ಯರ್ಥಂ ಭಾಸ್ಕರಾನ್ತರೇ ।
ಸೀತೋಕ್ತಸ್ವವಿವಾಹಾಖ್ಯಸರ್ಗಂ ಸರ್ವಾತ್ಮನಾ ಪಠೇತ್ ॥೯॥

ಸೂರ್ಯದಶೆಯಲ್ಲಿ ಶುಕ್ರಭುಕ್ತಿಯು ದೋಷಾವಹವಾಗಿದ್ದರೆ ಸೀತೆಯು ತನ್ನ ವಿವಾಹಪ್ರಸಂಗವನ್ನು ಅನಸೂಯೆಗೆ ಹೇಳಿದ ಸರ್ಗವನ್ನು ಪಾರಾಯಣಮಾಡಬೇಕು. (ಸೂರ್ಯದಶೆ-ಶುಕ್ರಭುಕ್ತಿ ಅಯೋಧ್ಯಾಕಾಂಡ ಸರ್ಗ ೧೧೮ ಸಂಪುಟ ೪ ಪುಟ ೬೪೩)

ಶನಿಭುಕ್ತಿರ್ಯದಿ ಕ್ರೂರಾ ದಶಾಯಾಂ ಭಾಸ್ಕರಸ್ಯ ಚ ।
ಇಂದ್ರಜಿದ್ವಧಸರ್ಗಂ ತು ಪಠೇಚ್ಚ ಶೃಣುಯಾದಪಿ ॥೧೦॥

ಸೂರ್ಯದಶೆಯಲ್ಲಿ ಶನಿಭುಕ್ತಿಯು ದೋಷಾವಹವಾಗಿದ್ದರೆ ಇಂದ್ರ ಜಿದ್ವಧಸರ್ಗವನ್ನು ಪಾರಾಯಣಮಾಡಬೇಕು ಅಥವಾ ಕೇಳಬೇಕು. (ಸೂರ್ಯದಶೆ-ಶನಿಭುಕ್ತಿ ಯುದ್ಧಕಾಂಡ ಸರ್ಗ ೯೦ ಸಂಪುಟ ೯ ಪುಟ ೧೮೫೬)

ರಾಹೋಶ್ಚೇದ್ದೋಷದಾ ಭುಕ್ತಿರ್ದಿನರಶ್ಮೇರ್ದಶಾನ್ತರೇ ।
ದೇವೇಭ್ಯಃ ಪಾರ್ವತೀಶಾಪಸರ್ಗಂ ತು ಪ್ರಯತಃ ಪಠೇತ್ ॥೧೧॥

ಸೂರ್ಯದಶೆಯಲ್ಲಿ ರಾಹುಭುಕ್ತಿಯು ದೋಷಾವಹವಾಗಿದ್ದರೆ ಪಾರ್ವತಿಯು ದೇವತೆಗಳಿಗೆ ಶಾಪವನ್ನು ಕೊಟ್ಟ ಸರ್ಗವನ್ನು ಪಾರಾಯಣ

ಮಾಡಬೇಕು. (ಸೂರ್ಯದಶೆ-ರಾಹುಭುಕ್ತಿ ಬಾಲಕಾಂಡ ಸರ್ಗ ೩೬ ಸಂಪುಟ ೧ ಪುಟ ೧೦೯)

ಕೇತುಭುಕ್ತಿಸ್ತು ದುಷ್ಟಾ ಚೇದ್ದಶಾಯಾಂ ತು ರವೇಸ್ತದಾ ।
ಜಟಾಯುಷೇ ಮೋಕ್ಷದಾನಸರ್ಗಂ ಭಕ್ತಿಯುತಃ ಪಠೇತ್ ॥೧೨॥

ಸೂರ್ಯದಶೆಯಲ್ಲಿ ಕೇತುಭುಕ್ತಿಯು ದೋಷಾವಹವಾಗಿದ್ದರೆ ಜಟಾಯುವಿಗೆ ಶ್ರೀರಾಮನು ಮೋಕ್ಷವನ್ನು ಅನುಗ್ರಹಿಸಿದ ಸರ್ಗವನ್ನು ಪಾರಾಯಣಮಾಡಬೇಕು. (ಸೂರ್ಯದಶೆ-ಕೇತುಭುಕ್ತಿ ಅರಣ್ಯಕಾಂಡ ಸರ್ಗ ೬೮ ಸಂಪುಟ ೫ ಪುಟ ೮೬೭)

ಚನ್ದ್ರದಶಾದೋಷಪರಿಹಾರಃ

ಸೋಮಸ್ಯ ಚೇದ್ದಶಾ ದುಷ್ಟಾ ತಸ್ಯಾಃ ಶಾನ್ತ್ಯರ್ಥಮಾದರಾತ್ ।
ತತಃ ಸ ಮಧ್ಯಂಗತಮಿತ್ಯಮುಂ ಸರ್ಗಂ ಪಠೇನ್ನಿಶಿ ।
ಶುಕ್ಲಪಕ್ಷೇ ಪ್ರದೋಷೇ ಚ ತತಶ್ಚನ್ದ್ರಂ ಪ್ರಪೂಜಯೇತ್ ॥೧೩॥

ಚಂದ್ರದಶೆಯು ದೋಷಾವಹವಾಗಿದ್ದರೆ ಅದರ ಶಾಂತ್ಯರ್ಥವಾಗಿ ಶ್ರದ್ಧೆಯಿಂದಲೂ, ಆದರದಿಂದಲೂ, 'ತತಃ ಸ ಮಧ್ಯಂಗತಂ' ಎಂಬ ಸರ್ಗ ವನ್ನು ರಾತ್ರಿಯಲ್ಲಿ ಪಾರಾಯಣಮಾಡಬೇಕು. ಶುಕ್ಲಪಕ್ಷದ ಪ್ರದೋಷ ಸಮಯದಲ್ಲಿ ಪಾರಾಯಣಮಾಡಿ ಬಳಿಕ ಚಂದ್ರನನ್ನು ಪೂಜಿಸಬೇಕು. (ಚಂದ್ರದಶೆ : ಸುಂದರಕಾಂಡ ಸರ್ಗ ೫ ಸಂಪುಟ ೬ ಪುಟ ೧೧೮೬)

ಅಶುಭಾ ಸೋಮಭುಕ್ತಿಶ್ಚೇತ್ಸೋಮಸ್ಯೈವ ದಶಾನ್ತರೇ ।
ನೃಗಸ್ಯ ಚರಿತಂ ಕೃತ್ಸ್ನಂ ಪಠೇದುತ್ತರಕಾಣ್ಡಗಮ್ ॥೧೪॥

ಚಂದ್ರದಶೆಯಲ್ಲಿ ಚಂದ್ರಭುಕ್ತಿಯು ದೋಷಾವಹವಾಗಿದ್ದರೆ ಉತ್ತರ ಕಾಂಡದಲ್ಲಿರುವ ನೃಗನ ಚರಿತ್ರೆಯನ್ನು ಸಮಗ್ರವಾಗಿ ಪಾರಾಯಣ ಮಾಡಬೇಕು. (ಚಂದ್ರದಶೆ-ಚಂದ್ರಭುಕ್ತಿ ಉತ್ತರಕಾಂಡ ಸರ್ಗ ೫೩-೫೪ ಸಂಪುಟ ೧೦ ಪುಟ ೨೨೨೯ ರಿಂದ ೨೨೩೩ರ ವರೆಗೆ)

ಸೂರ್ಯಭುಕ್ತಿರ್ಯದಾ ಕ್ರೂರಾ ಪ್ರಾಪ್ಯ ಸೋಮಸ್ಯ ವೈ ದಶಾಮ್ ।
ಹನೂಮದ್ರಾಮಸಂಬನ್ಧಸರ್ಗಂ ಭಕ್ತ್ಯಾ ಚ ವಾಚಯೇತ್ ॥೧೫॥

ಚಂದ್ರನ ದಶೆಯಲ್ಲಿ ಸೂರ್ಯಭುಕ್ತಿಯು ಕ್ರೂರವಾಗಿದ್ದರೆ ಹನುಮಂತನೂ – ಶ್ರೀರಾಮನೂ ಸಂಧಿಸಿದ ಸರ್ಗವನ್ನು ಪಾರಾಯಣಮಾಡಬೇಕು. (ಚಂದ್ರದಶೆ-ಸೂರ್ಯಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೩ ಸಂಪುಟ ೫ ಪುಟ ೯೧೦)

ಭೌಮಸ್ಯ ಭುಕ್ತ್ಯಾ ದೋಷಶ್ಚೇನ್ನಿಶಾಕರದಶಾನ್ತರೇ ।
ವಿಶ್ವಾಮಿತ್ರೇಣ ನಯನಂ ಪಠೇದ್ರಾಘವಯೋರ್ಮುದಾ ॥೧೬॥

ಚಂದ್ರನ ದಶೆಯಲ್ಲಿ ಕುಜಭುಕ್ತಿಯು ಕ್ರೂರವಾಗಿದ್ದರೆ ವಿಶ್ವಾಮಿತ್ರರು ರಾಮ-ಲಕ್ಷ್ಮಣರನ್ನು ಯಜ್ಞಸಂರಕ್ಷಣೆಗಾಗಿ ಕರೆದೊಯ್ದ ಪ್ರಸಂಗವಿರುವ ಸರ್ಗಗಳನ್ನು ಪಾರಾಯಣಮಾಡಬೇಕು. (ಚಂದ್ರದಶೆ-ಕುಜಭುಕ್ತಿ ಬಾಲ ಕಾಂಡ ಸರ್ಗಗಳು ೧೯-೨೦-೨೧-೨೨ ಸಂಪುಟ ೧ ಪುಟ ೬೬ ರಿಂದ ೭೫ರ ವರೆಗೆ)

ಸೌಮ್ಯಭುಕ್ತಿರಸೌಮ್ಯಾ ಚೇತ್ಸೋಮಸ್ಯೈವ ದಶಾನ್ತರೇ ।
ಸೀತಾರಾಘವಸಂವಾದಸರ್ಗಾನ್ಮಧ್ಯನ್ದಿನೇ ಪಠೇತ್ ॥೧೭॥

ಚಂದ್ರನ ದಶೆಯಲ್ಲಿ ಬುಧಭುಕ್ತಿಯು ಕ್ರೂರವಾಗಿದ್ದರೆ ಸೀತಾ-ರಾಘವ ಸಂವಾದಸರ್ಗಗಳನ್ನು ಮಧ್ಯಾಹ್ನದ ಸಮಯದಲ್ಲಿ ಪಾರಾಯಣಮಾಡಬೇಕು. (ಚಂದ್ರದಶೆ-ಬುಧಭುಕ್ತಿ ಅಯೋಧ್ಯಾಕಾಂಡ ಸರ್ಗ ೨೬-೨೭-೨೮-೨೯-೩೦ ಸಂಪುಟ ೨ ಪುಟ ೩೩೪ ರಿಂದ ೩೪೯ರ ವರೆಗೆ)

ಚನ್ದ್ರಸ್ಯೈವ ದಶಾಯಾಂ ತು ಗುರುಭಕ್ತಿರ್ಯದಾಶುಭಾ ।
ನಾರದೋಕ್ತಾಂ ರಾಮಕಥಾಂ ಪೂತಾತ್ಮಾ ಪ್ರಯತಃ ಪಠೇತ್ ॥೧೮॥

ಚಂದ್ರದಶೆಯಲ್ಲಿ ಗುರುಭುಕ್ತಿಯು ಕ್ರೂರವಾಗಿದ್ದರೆ ಪೂತಾತ್ಮನಾಗಿ (ಶುಚೀಭೂತನಾಗಿ) ನಾರದರು ಹೇಳಿರುವ ರಾಮಕಥೆಯ ಸರ್ಗವನ್ನು ಪಾರಾಯಣಮಾಡಬೇಕು. (ಚಂದ್ರದಶೆ-ಗುರುಭುಕ್ತಿ ಬಾಲಕಾಂಡ ಸರ್ಗ ೧ ಸಂಪುಟ ೧ ಪುಟ ೧)

ಶುಕ್ರಸ್ಯಾನ್ತರ್ದಶಾ ದುಷ್ಟಾ ಯದಿ ಸೋಮದಶಾನ್ತರೇ ।
ಉತ್ಥಾನಸರ್ಗಂ ವಹ್ನೇಸ್ತು ಸೀತಾಯಾಃ ಪ್ರಯತಃ ಪಠೇತ್ ॥೧೯॥

ಚಂದ್ರದಶೆಯಲ್ಲಿ ಶುಕ್ರಭುಕ್ತಿಯು ಕ್ರೂರವಾಗಿದ್ದರೆ ಸೀತೆಯು ಅಗ್ನಿಯಿಂದ ಮೇಲೆದ್ದು ಬಂದ ಸರ್ಗವನ್ನು ಪಾರಾಯಣಮಾಡಬೇಕು. (ಚಂದ್ರದಶೆ-ಶುಕ್ರಭುಕ್ತಿ ಯುದ್ಧಕಾಂಡ ಸರ್ಗ ೧೧೮ ಸಂಪುಟ ೯ ಪುಟ ೧೯೮೧)

ಶನೈಶ್ಚರಸ್ಯ ದುಷ್ಟಾ ಚೇದ್ಭುಕ್ತಿಶ್ಚನ್ದ್ರದಶಾನ್ತರೇ ।
ಸಾಯಂಪ್ರಾತಃ ಪಠೇತ್ಸರ್ಗಂ ನಿತ್ಯಂ ಖರವಧಾತ್ಮಕಮ್ ॥೨೦॥

ಚಂದ್ರದಶೆಯಲ್ಲಿ ಶನಿಭುಕ್ತಿಯು ಕ್ರೂರವಾಗಿದ್ದರೆ ಖರನ ವಧೆಯಿರುವ ಸರ್ಗವನ್ನು ಪ್ರಾತಃಕಾಲ-ಸಾಯಂಕಾಲಗಳಲ್ಲಿ ಪಾರಾಯಣಮಾಡಬೇಕು.

(ಚಂದ್ರದಶೆ-ಶನಿಭುಕ್ತಿ ಅರಣ್ಯಕಾಂಡ ಸರ್ಗ ೩೦ ಸಂಪುಟ ೪ ಪುಟ ೭೪೨)

ರಾಹುಭುಕ್ತಿರ್ದೋಷದಾ ಚೇಚ್ಚನ್ದ್ರಸ್ಯ ತು ದಶಾನ್ತರೇ ।
ಅಹಲ್ಯಾಶಾಪನಿರ್ಮೋಕ್ಷಸರ್ಗಂ ಭಕ್ತ್ಯಾತ್ರ ಸಂಪಠೇತ್ ॥೨೧॥

ಚಂದ್ರದಶೆಯಲ್ಲಿ ರಾಹುಭುಕ್ತಿಯು ಕ್ರೂರವಾಗಿದ್ದರೆ ಅಹಲ್ಯಾಶಾಪನಿರ್ಮೋಚನಸರ್ಗವನ್ನು ಭಕ್ತಿಪೂರ್ವಕವಾಗಿ ಪಾರಾಯಣಮಾಡಬೇಕು. (ಚಂದ್ರದಶೆ-ರಾಹುಭುಕ್ತಿ ಬಾಲಕಾಂಡ ಸರ್ಗ ೪೯ ಸಂಪುಟ ೧ ಪುಟ ೧೪೫)

ಮಹಾದಶಾಯಾಂ ಸೋಮಸ್ಯ ಕೇತೋಶ್ಚೇದ್ಭುಕ್ತಿರಕ್ಷಮಾ ।
ರಕ್ಷೋವಧಪ್ರತಿಜ್ಞಾಖ್ಯಂ ಪಠೇತ್ಸರ್ಗಂ ಪ್ರಯತ್ನತಃ ॥೨೨॥

ಚಂದ್ರದಶೆಯಲ್ಲಿ ಕೇತುಭುಕ್ತಿಯು ಕ್ರೂರವಾಗಿದ್ದರೆ ಶ್ರೀರಾಮನು ರಾಕ್ಷಸರನ್ನು ಸಂಹರಿಸುವೆನೆಂದು ಪ್ರತಿಜ್ಞೆಮಾಡಿದ ಸರ್ಗವನ್ನು ಪಾರಾಯಣಮಾಡಬೇಕು. (ಚಂದ್ರದಶೆ-ಕೇತುಭುಕ್ತಿ ಅರಣ್ಯಕಾಂಡ ಸರ್ಗ ೬ ಸಂಪುಟ ೪ ಪುಟ ೬೬೬)

ಕುಜದಶಾದೋಷಪರಿಹಾರಃ

ಕುಜಸ್ಯ ಚೇದ್ದಶಾ ದುಷ್ಟಾ ಕುಮಾರೋತ್ಪತ್ತಿಸರ್ಗಕೌ ।
ಪಠೇದ್ವಾ ಶೃಣುಯಾದ್ವಾಪಿ ಸುಬ್ರಹ್ಮಣ್ಯಾರ್ಪಿತಾಶಯಃ ।
ಪಠನಾನ್ತೇ ಚ ವಲ್ಲೀಶಂ ಪೂಜಯೇದಾಲಯೇಽಪಿವಾ ॥೨೩॥

ಕುಜದಶೆಯು ದೋಷಾವಹವಾಗಿದ್ದರೆ ಕುಮಾರೋತ್ಪತ್ತಿಯ ೨ ಸರ್ಗಗಳನ್ನು ಪಾರಾಯಣಮಾಡಬೇಕು ಅಥವಾ ಕೇಳಬೇಕು. ಅನಂತರದಲ್ಲಿ ಸುಬ್ರಹ್ಮಣ್ಯಸ್ವಾಮಿಯನ್ನು ಮನೆಯಲ್ಲಾಗಲೀ, ದೇವಾಲಯದಲ್ಲಾಗಲೀ ಪೂಜಿಸಬೇಕು. (ಕುಜದಶೆ : ಬಾಲಕಾಂಡ ಸರ್ಗ ೩೬-೩೭ ಸಂಪುಟ ೧ ಪುಟ ೧೦೯ ರಿಂದ ೧೧೪ರ ವರೆಗೆ)

ಮಹಾದಶಾಯಾಂ ಭೌಮಸ್ಯ ತಸ್ಯೈವಾನ್ತರ್ದಶಾಶುಭಾ ।
ಅಗಸ್ತ್ಯಪೂಜಾಂ ರಾಮಾಯ ಪಠೇದುತ್ತರಕಾಣ್ಡಗಾಮ್ ॥೨೪॥

ಕುಜನ ಮಹಾದಶೆಯಲ್ಲಿ ಕುಜಭುಕ್ತಿಯು ಕ್ರೂರವಾಗಿದ್ದರೆ ಉತ್ತರ ಕಾಂಡದಲ್ಲಿ ಅಗಸ್ತ್ಯರು ರಾಮನಿಗೆ ಮಾಡಿದ ಸತ್ಕಾರವನ್ನು ಕುರಿತಾದ ಸರ್ಗ ವನ್ನು ಪಾರಾಯಣಮಾಡಬೇಕು. (ಕುಜದಶೆ-ಕುಜಭುಕ್ತಿ ಉತ್ತರಕಾಂಡ ಸರ್ಗ ೭೬ ಸಂಪುಟ ೧೧ ಪುಟ ೨೨೯೨)

ಭೌಮಸ್ಯೈವ ದಶಾಭಾಗೇ ಸೂರ್ಯಭುಕ್ತಿಃ ಶುಭಾ ನ ಚೇತ್ ।
ಕನ್ದರ್ಪನಾಶನಾಖ್ಯಂ ತು ಪಠೇತ್ಸರ್ಗಮನುತ್ತಮಮ್ ॥೨೫॥

ಕುಜದಶೆಯಲ್ಲಿ ಸೂರ್ಯಭುಕ್ತಿಯು ಕ್ರೂರವಾಗಿದ್ದರೆ ಉತ್ತ ಮೋತ್ತಮವಾದ ಕಂದರ್ಪನಾಶನವೆಂಬ ಸರ್ಗವನ್ನು ಪಾರಾಯಣಮಾಡ ಬೇಕು. (ಕುಜದಶೆ-ಸೂರ್ಯಭುಕ್ತಿ ಬಾಲಕಾಂಡ ಸರ್ಗ ೨೩ ಸಂಪುಟ ೧ ಪುಟ ೭೫)

ಮಹಾದಶಾಯಾಂ ಭೌಮಸ್ಯ ಸೋಮಭುಕ್ತಿರ್ನ ಚೇಚ್ಛುಭಾ ।
ವಾನರೋತ್ಪತ್ತಿಸರ್ಗಂ ತು ಭಕ್ತಿಯುಕ್ತಸ್ತದಾ ಪಠೇತ್ ॥೨೬॥

ಕುಜದಶೆಯಲ್ಲಿ ಚಂದ್ರಭುಕ್ತಿಯು ಕ್ರೂರವಾಗಿದ್ದರೆ ಭಕ್ತಿಯಿಂದ ಕೂಡಿದವನಾಗಿ ವಾನರೋತ್ಪತ್ತಿಸರ್ಗವನ್ನು ಪಾರಾಯಣಮಾಡಬೇಕು. (ಕುಜದಶೆ-ಚಂದ್ರಭುಕ್ತಿ ಬಾಲಕಾಂಡ ಸರ್ಗ ೧೭ ಸಂಪುಟ ೧ ಪುಟ ೫೭)

ಬುಧಭುಕ್ತಿರ್ದೋಷದಾ ಚೇತ್ಕುಜಸ್ಯೈವ ದಶಾನ್ತರೇ ।
ಪಾಯಸಸ್ಯ ಪ್ರದಾನಾಖ್ಯಂ ಪಠೇತ್ಸರ್ಗಂ ಪ್ರಯತ್ನತಃ ॥೨೭॥

ಕುಜದಶೆಯಲ್ಲಿ ಬುಧಭುಕ್ತಿಯು ಕ್ರೂರವಾಗಿದ್ದರೆ ಪಾಯಸಪ್ರದಾನ

ಸರ್ಗವನ್ನು ಪಾರಾಯಣಮಾಡಬೇಕು. (ಕುಜದಶೆ-ಬುಧಭುಕ್ತಿ ಬಾಲಕಾಂಡ ಸರ್ಗ ೧೬ ಸಂಪುಟ ೧ ಪುಟ ೫೪)

ಗುರೋಶ್ಚೇದ್ದೋಷದಾ ಭುಕ್ತಿರ್ಭೌಮಸ್ಯ ತು ದಶಾನ್ತರೇ ।
ಉಪದೇಶಂ ಹನುಮತೋ ರಾವಣಾಯ ತದಾ ಪಠೇತ್ ॥೨೮॥

ಕುಜದಶೆಯಲ್ಲಿ ಗುರುಭುಕ್ತಿಯು ದೋಷಾವಹವಾಗಿದ್ದರೆ ರಾವಣನಿಗೆ ಹನುಮಂತನು ಉಪದೇಶಿಸಿದ ಸರ್ಗವನ್ನು ಪಾರಾಯಣಮಾಡಬೇಕು. (ಕುಜದಶೆ-ಗುರುಭುಕ್ತಿ ಸುಂದರಕಾಂಡ ಸರ್ಗ ೫೧ ಸಂಪುಟ ೬ ಪುಟ ೧೩೬೭)

ಶುಕ್ರಭುಕ್ತಿರ್ದೋಷದಾ ಚೇಲ್ಲೋಹಿತಾಜ್ಗದಶಾನ್ತರೇ ।
ಸೀತಾಯಾಃ ಪ್ರಾರ್ಥನಂ ವಹ್ನಿಮುದ್ದಿಶ್ಯ ಹನುಮತ್ಕೃತೇ ।
ಯತ್ರ ತಂ ಸರ್ಗಮಾಧ್ಯಾಯನ್ನಾಞ್ಜನೇಯಂ ಪಠೇತ ಮಾತ್ ॥೨೯॥

ಕುಜದಶೆಯಲ್ಲಿ ಶುಕ್ರಭುಕ್ತಿಯು ಕ್ರೂರವಾಗಿದ್ದರೆ ಹನುಮಂತನ ಸಲುವಾಗಿ ಅಗ್ನಿಯನ್ನು ಉದ್ದೇಶಿಸಿ ಸೀತೆಯು ಮಾಡಿದ ಪ್ರಾರ್ಥನೆಯಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕುಜದಶೆ-ಶುಕ್ರಭುಕ್ತಿ ಸುಂದರ ಕಾಂಡ ಸರ್ಗ ೫೩ ಸಂಪುಟ ೬ ಪುಟ ೧೩೨೫)

ಸೌರೇರನ್ತರ್ದಶಾ ಕ್ರೂರಾ ಯದಿ ಭೌಮದಶಾನ್ತರೇ ।
ಕಬನ್ಧಬಾಹುಲವನಸರ್ಗಂ ಧ್ಯಾಯನ್ ಶನಿಂ ಪಠೇತ್ ॥೩೦॥

ಕುಜದಶೆಯಲ್ಲಿ ಶನಿಭುಕ್ತಿಯು ಕ್ರೂರವಾಗಿದ್ದರೆ ಶನಿಯನ್ನು ಧ್ಯಾನ ಮಾಡುತ್ತಾ ಕಬಂಧನ ಬಾಹುಗಳನ್ನು ಕತ್ತರಿಸಿದ ಸರ್ಗವನ್ನು ಪಾರಾಯಣ ಮಾಡಬೇಕು. (ಕುಜದಶೆ-ಶನಿಭುಕ್ತಿ ಅರಣ್ಯಕಾಂಡ ಸರ್ಗ ೭೦ ಸಂಪುಟ ೫ ಪುಟ ೮೭೬)

ಅಜ್ಗಾರಕದಶಾಯಾನ್ತು ರಾಹೋರನ್ತರ್ದಶಾಶುಭಾ ।
ಪಠೇತ್ತು ಪ್ರಥಮೇ ಯುದ್ಧೇ ರಾವಣಸ್ಯ ಪರಾಭವಮ್ ॥೩೧॥

ಕುಜದಶೆಯಲ್ಲಿ ರಾಹುಭುಕ್ತಿಯು ಕ್ರೂರವಾಗಿದ್ದರೆ ಮೊದಲನೆಯ ಯುದ್ಧದಲ್ಲಿ ರಾವಣನಿಗಾದ ಪರಾಭವವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಕುಜದಶೆ-ರಾಹುಭುಕ್ತಿ ಯುದ್ಧಕಾಂಡ ಸರ್ಗ ೫೯ ಸಂಪುಟ ೮ ಪುಟ ೧೬೬೯)

ಕೇತುಭುಕ್ತಿರ್ದೋಷದಾ ಚೇದಙ್ಗಾರಕದಶಾನ್ತರೇ ।
ಸೀತಾಕೃತಾಂ ರಾಕ್ಷಸೀನಾಂ ರಕ್ಷಾಂ ಹನುಮತಃ ಪಠೇತ್ ॥೩೨॥

ಕುಜದಶೆಯಲ್ಲಿ ಕೇತುಭುಕ್ತಿಯು ದೋಷಾವಹವಾಗಿದ್ದರೆ ಸೀತೆಯು ಹನುಮಂತನಿಂದ ರಾಕ್ಷಸಿಯರನ್ನು ರಕ್ಷಿಸಿದ ಸರ್ಗವನ್ನು ಪಾರಾಯಣ ಮಾಡಬೇಕು. (ಕುಜದಶೆ-ಕೇತುಭುಕ್ತಿ ಯುದ್ಧಕಾಂಡ ಸರ್ಗ ೧೧೩ ಸಂಪುಟ ೯ ಪುಟ ೧೯೬೩)

ರಾಹುದಶಾದೋಷಪರಿಹಾರಃ

ದಶಾ ಚೇತ್ತಮಸೋ ದುಷ್ಟಾ ಕಪಿಭಿಃ ಕೃತಮಾದರಾತ್ ।
ಲಙ್ಕಾದಹನಸರ್ಗಂ ತು ಯುದ್ಧಕಾಣ್ಡಗತಂ ಪಠೇತ್ ॥೩೩॥

ಅನ್ತೇ ತು ಜ್ವಾಲಾಮಾಲಿನ್ಯಾಃ ಪೂಜಾಂ ಕೃತ್ವಾಥ ಯತ್ನತಃ ।
ನಿವೇದಯೇದಪೂಪಾಂಶ್ಚ ಮಾಧ್ವೀಕಂ ಚ ನಿವೇದಯೇತ್ ॥೩೪॥

ರಾಹುದಶೆಯು ದೋಷಾವಹವಾಗಿದ್ದರೆ ಯುದ್ಧಕಾಂಡದಲ್ಲಿರುವ ಕಪಿಗಳು ಮಾಡಿದ ಲಂಕಾದಹನಸರ್ಗವನ್ನು ಪಾರಾಯಣಮಾಡಿ ಕಡೆಯಲ್ಲಿ ಜ್ವಾಲಾಮಾಲಿನೀಪೂಜೆಯನ್ನು ಮಾಡಿ ಕಡುಬುಗಳನ್ನೂ, ಜೇನುತುಪ್ಪವನ್ನೂ ನಿವೇದನೆಮಾಡಬೇಕು. (ರಾಹುದಶೆ : ಯುದ್ಧಕಾಂಡ ಸರ್ಗ ೭೫ ಸಂಪುಟ ೯ ಪುಟ ೧೭೯೩)

ತತ್ರೈವ ರಾಹುಭುಕ್ತಿಶ್ಚೇದ್ದೋಷದಾ ತತ್ಪ್ರಶಾನ್ತಯೇ ।
ನಾಗಾಸ್ತ್ರಬನ್ಧನಿರ್ಮೋಕ್ಷಸರ್ಗಂ ಭಕ್ತ್ಯಾ ಯುತಃ ಪಠೇತ್ ॥೩೫॥

ರಾಹುದಶೆಯಲ್ಲಿ ರಾಹುಭುಕ್ತಿಯು ಕ್ರೂರವಾಗಿದ್ದರೆ ಅದರ ಶಾಂತಿ ಗಾಗಿ ನಾಗಾಸ್ತ್ರಬಂಧನಿರ್ಮೋಕ್ಷಣಸರ್ಗವನ್ನು ಭಕ್ತಿಯಿಂದ ಪಾರಾಯಣ ಮಾಡಬೇಕು. (ರಾಹುದಶೆ-ರಾಹುಭುಕ್ತಿ ಯುದ್ಧಕಾಂಡ ಸರ್ಗ ೫೦ ಸಂಪುಟ ೮ ಪುಟ ೧೬೩೧)

ರಾಹೋರ್ದಶಾಯಾಂ ಸೂರ್ಯಸ್ಯ ಪೀಡಾ ಚೇದ್ಭುಕ್ತಿಶೋ ಭವೇತ್ ।
ಬಾಲಕಾಣ್ಡಗತಂ ಸೂರ್ಯವಂಶಾಖ್ಯಾನಂ ಯತಃ ಪಠೇತ್ ॥೩೬॥

ರಾಹುದಶೆಯಲ್ಲಿ ಸೂರ್ಯಭುಕ್ತಿಯು ಕ್ರೂರವಾಗಿದ್ದರೆ ಬಾಲಕಾಂಡ

ದಲ್ಲಿರುವ ಸೂರ್ಯವಂಶಾಖ್ಯಾನಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಸೂರ್ಯಭುಕ್ತಿ ಬಾಲಕಾಂಡ ಸರ್ಗ ೭೦ ಸಂಪುಟ ೧ ಪುಟ ೧೯೬)

ಚನ್ದ್ರಭುಕ್ತಿರ್ದೋಷದಾ ಚೇದ್ರಾಹೋರೇವ ದಶಾನ್ತರೇ ।
ನರ್ಮದಾಯಾಂ ರಾವಣಸ್ಯ ಪೂಜಾಸರ್ಗಂ ಯತಃ ಪಠೇತ್ ॥೩೭॥

ರಾಹುದಶೆಯಲ್ಲಿ ಚಂದ್ರಭುಕ್ತಿಯು ದೋಷವಹವಾಗಿದ್ದರೆ ನರ್ಮದಾ ನದಿಯಲ್ಲಿ ರಾವಣನು ಮಾಡಿದ ಪೂಜೆಯ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಚಂದ್ರಭುಕ್ತಿ ಉತ್ತರಕಾಂಡ ಸರ್ಗ ೩೧ ಸಂಪುಟ ೧೦ ಪುಟ ೨೧೫೮)

ರಾಹೋರ್ದಶಾಯಾಂ ಭೌಮಸ್ಯ ಭುಕ್ತ್ಯಾ ಚೇದ್ದುರಿತಂ ಭವೇತ್ ।
ಪಠೇತ್ಕೈಲಾಸಚಲನೇ ರಾವಣಸ್ಯ ಚ ರೋದನಮ್ ॥೩೮॥

ರಾಹುದಶೆಯಲ್ಲಿ ಅಂಗಾರಕಭುಕ್ತಿಯು ದೋಷಾವಹವಾಗಿದ್ದರೆ ಕೈಲಾಸಪರ್ವತದಲ್ಲಿ ರಾವಣನು ಮಾಡಿದ ರೋದನವಿರುವ ಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಕುಜಭುಕ್ತಿ ಉತ್ತರಕಾಂಡ ಸರ್ಗ ೧೬ ಸಂಪುಟ ೧೦ ಪುಟ ೨೦೯೨)

ಬುಧಸ್ಯ ಭುಕ್ತ್ಯಾ ದೋಷಶ್ಚೇತ್ತಮಸಸ್ತು ದಶಾನ್ತರೇ ।
ಪಠೇದ್ಬ್ರಹ್ಮಕೃತಂ ಸ್ತೋತ್ರಂ ರಾವಣಸ್ಯ ವಧಾತ್ಪರಮ್ ॥೩೯॥

ರಾಹುದಶೆಯಲ್ಲಿ ಬುಧಭುಕ್ತಿಯು ಕ್ರೂರವಾಗಿದ್ದರೆ ರಾವಣನ ವಧೆಯಾದನಂತರ ಬ್ರಹ್ಮನು ಮಾಡಿದ ಸ್ತೋತ್ರವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ರಾಹುದಶೆ-ಬುಧಭುಕ್ತಿ ಯುದ್ಧಕಾಂಡ ಸರ್ಗ ೧೧೭ ಸಂಪುಟ ೯ ಪುಟ ೧೯೭೭)

ರಾಹೋರ್ದಶಾಯಾಂ ಭುಕ್ತ್ಯಾ ಚೇತ್ಸುರೇಜ್ಯಸ್ಯಾಶುಭಂ ಭವೇತ್ ।
ಸರ್ಗಂ ರಾಜ್ಯಾಭಿಷೇಕಾಖ್ಯಂ ಸುಗ್ರೀವಸ್ಯ ಸದಾ ಪಠೇತ್ ॥೪೦॥

ರಾಹುದಶೆಯಲ್ಲಿ ಗುರುಭುಕ್ತಿಯು ಕ್ರೂರವಾಗಿದ್ದರೆ ಸುಗ್ರೀವನ ರಾಜ್ಯಾಭಿಷೇಕಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಗುರುಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೨೬ ಸಂಪುಟ ೫ ಪುಟ ೯೯೭)

ಕವೇರ್ಭುಕ್ತಿರನರ್ಥಾ ಚೇದ್ರಾಹೋರ್ದತ್ತೇ ದಶಾನ್ತರೇ ।
ಹನೂಮತಾ ರಾಘವಸ್ಯ ಚೂಡಾಮಣ್ಯರ್ಪಣಂ ಪಠೇತ್ ॥೪೧॥

ರಾಹುದಶೆಯಲ್ಲಿ ಶುಕ್ರಭುಕ್ತಿಯು ಕ್ರೂರವಾಗಿದ್ದರೆ ಹನುಮಂತನು ಶ್ರೀರಾಮನಿಗೆ ಚೂಡಾಮಣಿಯನ್ನು ಅರ್ಪಿಸಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಶುಕ್ರಭುಕ್ತಿ ಸುಂದರಕಾಂಡ ಸರ್ಗ ೬೫ ಸಂಪುಟ ೬ ಪುಟ ೧೪೩೪)

ಶನೈಶ್ಚರಸ್ಯ ಭುಕ್ತ್ಯಾ ಚೇದ್ದೋಷೋ ರಾಹುದಶಾನ್ತರೇ ।
ಹನೂಮತಾಕ್ಷನಾಶಾಖ್ಯಸರ್ಗಪಾರಾಯಣಂ ಚರೇತ್ ॥೪೨॥

ರಾಹುದಶೆಯಲ್ಲಿ ಶನಿಭುಕ್ತಿಯು ಕ್ರೂರವಾಗಿದ್ದರೆ ಹನುಮಂತನು ಅಕ್ಷಕುಮಾರನನ್ನು ಸಂಹರಿಸಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ರಾಹುದಶೆ-ಶನಿಭುಕ್ತಿ ಸುಂದರಕಾಂಡ ಸರ್ಗ ೪೭ ಸಂಪುಟ ೬ ಪುಟ ೧೩೪೮)

ಕೇತೋರನ್ತರ್ದಶಾ ದುಷ್ಟಾ ರಾಹೋಶ್ಚೇತ್ಸ್ಯಾದ್ದಶಾನ್ತರೇ ।
ರಾಮೇಣ ಜಾಮದಗ್ನ್ಯಸ್ಯ ಲೋಕಾನಾಂ ನಾಶನಂ ಪಠೇತ್ ॥೪೩॥

ರಾಹುದಶೆಯಲ್ಲಿ ಕೇತುಭುಕ್ತಿಯು ದೋಷಾವಹವಾಗಿದ್ದರೆ ಶ್ರೀರಾಮನು ಪರಶುರಾಮನ ಉತ್ತಮಲೋಕಗಳೆಲ್ಲವನ್ನೂ ವಿನಾಶಗೊಳಿಸಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ರಾಹುದಶೆ-ಕೇತುಭುಕ್ತಿ ಬಾಲಕಾಂಡ ಸರ್ಗ ೭೬ ಸಂಪುಟ ೧ ಪುಟ ೨೧೪)

ಗುರುದಶಾದೋಷಪರಿಹಾರಃ

ಗುರೋರ್ದಶಾ ಚೇದುಗ್ರಾ ಸ್ಯಾತ್ತದಾ ಸುನ್ದರಕಾಣ್ಡಕೇ ।
ಪಠೇತ್ಸಮುದ್ರತರಣಸರ್ಗಮೇಕಂ ಹನೂಮತಃ ।
ಅನ್ತೇ ಚ ಸಿತಯಾ ಮಿಶ್ರಾಂಲ್ಲಾಜಾನ್ ಹನುಮತೇಽರ್ಪಯೇತ್ ॥೪೪॥

ಗುರುದಶೆಯು ದೋಷಾವಹವಾಗಿದ್ದರೆ ಸುಂದರಕಾಂಡದ ಸಮುದ್ರ ತರಣದ ಸರ್ಗವನ್ನು ಪಾರಾಯಣಮಾಡಿ ಸಕ್ಕರೆಯಿಂದ ಮಿಶ್ರವಾದ ಅರಳನ್ನು

ಹನುಮಂತನಿಗೆ ನಿವೇದನೆಮಾಡಬೇಕು. (ಗುರುದಶೆ : ಸುಂದರಕಾಂಡ ಸರ್ಗ ೧ ಸಂಪುಟ ೬ ಪುಟ ೧೧೫೩)

ಗುರೋರ್ದಶಾಯಾಂ ತಸ್ಯೈವ ಭುಕ್ತಿಶ್ಚೇದ್ದೋಷದಾ ಭವೇತ್ ।
ಪಠೇತ್ತು ಶರಭಙ್ಗಸ್ಯ ಮೋಕ್ಷಸರ್ಗಂ ದ್ವಿಸಂಧ್ಯಯೋಃ ॥೪೫॥

ಗುರುದಶೆಯಲ್ಲಿ ಗುರುಭುಕ್ತಿಯು ಕೆಟ್ಟುದಾಗಿದ್ದರೆ ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಶರಭಂಗರ ಮೋಕ್ಷಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಗುರುಭಕ್ತಿ ಅರಣ್ಯಕಾಂಡ ಸರ್ಗ ೫ ಸಂಪುಟ ೪ ಪುಟ ೬೬೨)

ಗುರೋರ್ದಶಾಯಾಂ ಸೂರ್ಯಸ್ಯ ಭುಕ್ತಿಶ್ಚೇದ್ದೋಷಭಾವಿನೀ ।
ಸುಗ್ರೀವೋಕ್ತಂ ವಾನರಾಣಾಂ ಪೂರ್ವದಿಙ್ಮಾರ್ಗಮಾಪಠೇತ್ ॥೪೬॥

ಗುರುದಶೆಯಲ್ಲಿ ಸೂರ್ಯಭುಕ್ತಿಯು ದೋಷಾವಹವಾಗಿದ್ದರೆ ಸುಗ್ರೀವನು ವಾನರರಿಗೆ ಹೇಳಿದ ಪೂರ್ವದಿಕ್ಕಿನ ಮಾರ್ಗಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಸೂರ್ಯಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೪೦ ಸಂಪುಟ ೬ ಪುಟ ೧೦೬೧)

ಗುರೋರ್ದಶಾಯಾಂ ಚನ್ದ್ರಸ್ಯ ಭುಕ್ತಿರ್ಯದಿ ವಿಪತ್ತಿದಾ ।
ಸಂಪಾತಿಪಕ್ಷಸ್ಯೋತ್ಪತ್ತಿಕಥಾಸರ್ಗಾನ್ ಪಠೇತ್ಸುಧೀಃ ॥೪೭॥

ಗುರುದಶೆಯಲ್ಲಿ ಚಂದ್ರಭುಕ್ತಿಯು ವಿಪತ್ಕಾರಕವಾಗಿದ್ದರೆ ಸಂಪಾತಿಯ ರೆಕ್ಕೆಗಳ ಪುನರುತ್ಪತ್ತಿಗೆ ಸಂಬಂಧಿಸಿದ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಚಂದ್ರಭುಕ್ತಿ ಕಿಷ್ಕಿಂಧಾಕಾಂಡ ಸರ್ಗಗಳು ೬೦-೬೧-೬೨-೬೩ ಸಂಪುಟ ೬ ಪುಟ ೧೧೨೩ ರಿಂದ ೧೧೩೦ರ ವರೆಗೆ)

ಗುರೋರ್ಮಹಾದಶಾಯಾಂ ತು ಕುಜಭುಕ್ತಿರ್ಯದಾಶುಭಾ ।
ಅಯೋಧ್ಯಾವರ್ಣನಂ ಬಾಲಕಾಣ್ಡಸ್ಥಂ ಸರ್ಗಮಾಪಠೇತ್ ॥೪೮॥

ಗುರುದಶೆಯಲ್ಲಿ ಕುಜಭುಕ್ತಿಯು ಕ್ರೂರವಾಗಿದ್ದರೆ ಬಾಲಕಾಂಡದಲ್ಲಿ ಬರುವ ಅಯೋಧ್ಯಾವರ್ಣನೆಯ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಕುಜಭುಕ್ತಿ ಬಾಲಕಾಂಡ ಸರ್ಗ ೫ ಸಂಪುಟ ೧ ಪುಟ ೨೧)

ಗುರೋರ್ದಶಾಯಾಂ ಸೌಮ್ಯಸ್ಯ ಭುಕ್ತಿರ್ಯದಿ ವಿಪತ್ಪ್ರದಾ ।
ದೇವಾನಾಂ ಪ್ರಾರ್ಥನಾಸರ್ಗೌ ವಿಷ್ಣುಂ ಪ್ರತಿ ಯತಃ ಪಠೇತ್ ॥೪೯॥

ಗುರುದಶೆಯಲ್ಲಿ ಬುಧಭುಕ್ತಿಯು ಅಶುಭವಾಗಿದ್ದರೆ ದೇವತೆಗಳು ವಿಷ್ಣುವನ್ನು ಪ್ರಾರ್ಥನೆಮಾಡುವ ಪ್ರಸಂಗವಿರುವ ಎರಡು ಸರ್ಗಗಳನ್ನು ಪಾರಾಯಣಮಾಡಬೇಕು. (ಗುರುದಶೆ-ಬುಧಭುಕ್ತಿ ಬಾಲಕಾಂಡ ಸರ್ಗಗಳು ೧೫-೧೬ ಸಂಪುಟ ೧ ಪುಟ ೫೧ ರಿಂದ ೫೭ ರ ವರೆಗೆ)

ಗುರೋರ್ದಶಾಯಾಂ ಶುಕ್ರಸ್ಯ ಭುಕ್ತಿಶ್ಚೇದ್ದೋಷದಾ ಭವೇತ್ ।
ಬಾಲಕಾಣ್ಡಾನ್ತಿಮಂ ಸರ್ಗಂ ಪಠೇದ್ಭಕ್ತಿಸಮನ್ವಿತಃ ॥೫೦॥

ಗುರುದಶೆಯಲ್ಲಿ ಶುಕ್ರಭುಕ್ತಿಯು ಅಶುಭವಾಗಿದ್ದರೆ ಬಾಲಕಾಂಡದ ಕಡೆಯ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಶುಕ್ರಭುಕ್ತಿ ಬಾಲಕಾಂಡ ಸರ್ಗ ೭೭ ಸಂಪುಟ ೧ ಪುಟ ೨೧೬)

ಶನಿಭುಕ್ತಿರ್ದೋಷದಾ ಚೇತ್ಸುರೇಜ್ಯಸ್ಯ ದಶಾನ್ತರೇ ।
ಸುಮನ್ತ್ರಸ್ಯಾನುಗ್ರಹಾರ್ಥಂ ಪಠೇದ್ರಾಮಸ್ಯ ದರ್ಶನಮ್ ॥೫೧॥

ಗುರುದಶೆಯಲ್ಲಿ ಶನಿಭುಕ್ತಿಯು ಕ್ರೂರವಾಗಿದ್ದರೆ ಸುಮಂತ್ರನ ಅನುಗ್ರಹಾರ್ಥವಾಗಿ ಶ್ರೀರಾಮನು ದಯಪಾಲಿಸಿದ ದಿವ್ಯದರ್ಶನಪ್ರಸಂಗ ವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ಶನಿಭುಕ್ತಿ ಅಯೋಧ್ಯಾಕಾಂಡ ಸರ್ಗ ೧೬ ಸಂಪುಟ ೨ ಪುಟ ೭೯೧)

ರಾಹುಭುಕ್ತಿರ್ದೋಷದಾ ಚೇದ್ಗುರೋರೇವ ದಶಾನ್ತರೇ ।
ಶಬರೀಮೋಕ್ಷಸರ್ಗಂ ತು ಪಠೇದ್ಭಕ್ತಿಸಮನ್ವಿತಃ ॥೫೨॥

ಗುರುದಶೆಯಲ್ಲಿ ರಾಹುಭುಕ್ತಿಯು ದೋಷಾವಹವಾಗಿದ್ದರೆ ಶಬರೀ ಮೋಕ್ಷಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಗುರುದಶೆ-ರಾಹುಭುಕ್ತಿ ಅರಣ್ಯಕಾಂಡ ಸರ್ಗ ೭೪ ಸಂಪುಟ ೫ ಪುಟ ೮೮೮)

ಕೇತುಭುಕ್ತ್ಯಾ ಭವೇತ್ಪೀಡಾ ಗುರೋರ್ಯದಿ ದಶಾನ್ತರೇ ।
ಪಠೇನ್ಮಧುವನಧ್ವಂಸಸರ್ಗದ್ವಯಮನುತ್ತಮಮ್ ॥೫೩॥

ಗುರುದಶೆಯಲ್ಲಿ ಕೇತುಭುಕ್ತಿಯು ಅಶುಭದಾಯಕವಾಗಿದ್ದರೆ

ಮಧುವನಧ್ವಂಸಪ್ರಸಂಗವಿರುವ ಎರಡು ಸರ್ಗಗಳನ್ನು ಪಾರಾಯಣಮಾಡ ಬೇಕು. (ಗುರುದಶೆ-ಕೇತುಭುಕ್ತಿ ಸುಂದರಕಾಂಡ ಸರ್ಗ ೬೧-೬೨ ಸಂಪುಟ ೬ ಪುಟ ೧೪೨೦ ರಿಂದ ೧೪೨೭ರ ವರೆಗೆ)

ಶನಿದಶಾದೋಷಪರಿಹಾರಃ

ಶನೈಶ್ಚರಸ್ಯ ದುಷ್ಟಾ ಚೇದ್ದಶಾ ರಾಕ್ಷಸನಾಶನಮ್ ।
ವಿಶ್ವಾಮಿತ್ರಾಧ್ವರೇ ಸರ್ಗಂ ಪಠೇತ್ಪೂರ್ವಂ ತು ಭೋಜನಾತ್ ॥೫೪॥

ಪಾಠಕಾಲೇ ಭವೇನ್ಮೌನೀ ಶೃಣುಯಾದ್ವಾಪಿ ತಾದೃಶಃ ।
ಮೃತ್ಯುಞ್ಜಯಾಯ ಪಾಠಾನ್ತೇ ತಿಲಾನ್ನಂ ವಿನಿವೇದಯೇತ್ ॥೫೫॥

ಶನಿದಶೆಯು ದೋಷಾವಹವಾಗಿದ್ದರೆ ವಿಶ್ವಾಮಿತ್ರರ ಯಜ್ಞದಲ್ಲಾದ ರಾಕ್ಷಸರ ವಿನಾಶಪ್ರಸಂಗವಿರುವ ಸರ್ಗವನ್ನು ಊಟಕ್ಕೆ ಮೊದಲು ಪಾರಾಯಣಮಾಡಿ ಅನಂತರದಲ್ಲಿ ಮೃತ್ಯುಂಜಯನಿಗೆ ಪೂಜೆಮಾಡಿ ಎಳ್ಳನ್ನವನ್ನು ನಿವೇದನೆಮಾಡಬೇಕು. (ಶನಿದಶೆ : ಬಾಲಕಾಂಡ ಸರ್ಗ ೩೦ ಸಂಪುಟ ೧ ಪುಟ ೯೪)

ಶನೇರ್ದಶಾಯಾಂ ಭುಕ್ತಿಶ್ಚೇಚ್ಛನೇರೇವಾಹಿತಾ ಭವೇತ್ ।
ಬ್ರಹ್ಮಾಸ್ತ್ರಬನ್ಧಮುಕ್ತ್ಯಾಖ್ಯಂ ಪಠೇತ್ಸರ್ಗಂ ಹನೂಮತಃ ॥೫೬॥

ಶನಿದಶೆಯಲ್ಲಿ ಶನಿಭುಕ್ತಿಯು ದೋಷಾವಹವಾಗಿದ್ದರೆ ಹನುಮಂತನು ಬ್ರಹ್ಮಾಸ್ತ್ರದಿಂದ ಮುಕ್ತನಾದ ಪ್ರಸಂಗವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಶನಿದಶೆ-ಶನಿಭುಕ್ತಿ ಸುಂದರಕಾಂಡ ಸರ್ಗ ೪೮ ಸಂಪುಟ ೬ ಪುಟ ೧೩೫೫)

ಶನೈಶ್ಚರದಶಾಯಾನ್ತು ಸೂರ್ಯಭುಕ್ತಿರ್ಯದಾಶುಭಾ ।
ಹನೂಮಜ್ಜನನಂ ಸರ್ಗಂ ಕಿಷ್ಕಿನ್ಧಾಕಾಣ್ಡಗಂ ಪಠೇತ್ ॥೫೭॥

ಶನಿದಶೆಯಲ್ಲಿ ಸೂರ್ಯಭುಕ್ತಿಯು ದೋಷಾವಹವಾಗಿದ್ದರೆ ಕಿಷ್ಕಿಂಧಾ ಕಾಂಡದಲ್ಲಿ ಬರುವ ಹನುಮಜ್ಜನನಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ಸೂರ್ಯಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೬೬ ಸಂಪುಟ ೬ ಪುಟ ೧೧೩೬)

ಚನ್ದ್ರಭುಕ್ತಿರ್ದೋಷದಾ ಚೇಚ್ಛನೈಶ್ಚರದಶಾನ್ತರೇ ।
ತಾಟಕಾವಧಸರ್ಗಂ ತು ಪಠೇದಾದೋಷನಾಶನಮ್ ॥೫೮॥

ಶನಿದಶೆಯಲ್ಲಿ ಚಂದ್ರಭುಕ್ತಿಯು ದೋಷಾವಹವಾಗಿದ್ದರೆ ದೋಷನಾಶಕವಾದ ತಾಟಕಾವಧೆಯ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ಚಂದ್ರಭುಕ್ತಿ ಬಾಲಕಾಂಡ ಸರ್ಗ ೨೬ ಸಂಪುಟ ೧ ಪುಟ ೮೩)

ಭೌಮಸ್ಯ ಭುಕ್ತಿಶ್ಚೇತ್ತೂ ರಾ ಶನೇರೇವ ಯದಾ ದಶಾ ।
ಸ್ವಯಂಪ್ರಭಾಬಿಲೋತ್ತಾರಸರ್ಗಂ ಪಾರಾಯಣಂ ಚರೇತ್ ॥೫೯॥

ಶನಿದಶೆಯಲ್ಲಿ ಕುಜಭುಕ್ತಿಯು ಅಶುಭವಾಗಿದ್ದರೆ ವಾನರರು ಸ್ವಯಂಬ್ರಭಾ ಬಿಲದಿಂದ ಹೊರಬಂದ ಪ್ರಸಂಗವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಶನಿದಶೆ-ಕುಜಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೫೨ ಸಂಪುಟ ೬ ಪುಟ ೧೧೦೨)

ಶನೇರ್ದಶಾಯಾಂ ಸೌಮ್ಯಸ್ಯ ಭುಕ್ತಿಶ್ಚೇತ್ಕ್ಲೇಶದಾಯಿನೀ ।
ಲಙ್ಕಾದಾಹಂ ಹನುಮತಾ ಕೃತಂ ಸರ್ಗಂ ಸದಾ ಪಠೇತ್ ॥೬೦॥

ಶನಿದಶೆಯಲ್ಲಿ ಬುಧಭುಕ್ತಿಯು ಕ್ಲೇಶದಾಯಕವಾಗಿದ್ದರೆ ಹನುಮಂತನ ಲಂಕಾದಹನಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ಬುಧಭುಕ್ತಿ ಸುಂದರಕಾಂಡ ಸರ್ಗ ೫೪ ಸಂಪುಟ ೬ ಪುಟ ೧೩೭೯)

ಮಹಾದಶಾಯಾಂ ಸೌರಸ್ಯ ಗುರುಭುಕ್ತಿಸ್ತು ದೋಷದಾ ।
ರಾಮಾಲಿಙ್ಗನಸರ್ಗಂ ತು ಪಠೇದ್ದಾಸಹನೂಮತಃ ॥೬೧॥

ಶನಿಮಹಾದಶೆಯಲ್ಲಿ ಗುರುಭುಕ್ತಿಯು ದೋಷಾವಹವಾಗಿದ್ದರೆ ಶ್ರೀರಾಮನು ಹನುಮಂತನನ್ನು ಆಲಿಂಗಿಸಿಕೊಂಡ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ಗುರುಭುಕ್ತಿ ಯುದ್ಧಕಾಂಡ ಸರ್ಗ-೧ ಸಂಪುಟ ೭ ಪುಟ ೧೪೪೮)

ಶನೇರ್ದಶಾಯಾಂ ಶುಕ್ರಸ್ಯ ಭುಕ್ತಿರ್ಯದಿ ವಿಪತ್ಪ್ರದಾ ।
ಚೂಡಾಮಣಿಪ್ರದಾನಾಖ್ಯಂ ಪಠೇತ್ಸರ್ಗಂ ಹನೂಮತೇ ॥೬೨॥

ಶನಿದಶೆಯಲ್ಲಿ ಶುಕ್ರಭುಕ್ತಿಯು ವಿಪತ್ಪ್ರದವಾಗಿದ್ದರೆ ಸೀತೆಯು ಹನು

ಮಂತನಿಗೆ ಚೂಡಾಮಣಿಯನ್ನು ಪ್ರದಾನಮಾಡಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಸೆ-ಶುಕ್ರಭುಕ್ತಿ ಸುಂದರಕಾಂಡ ಸರ್ಗ ೩೮ ಸಂಪುಟ ೬ ಪುಟ ೧೩೧೬)

ರಾಹೋಶ್ಚೇದ್ಭುಕ್ತಿರಶುಭಾ ಶೌರಸ್ಯಾಥ ದಶಾನ್ತರೇ ।
ಮಾಯಾಮೃಗವಧಾಭಿಖ್ಯಂ ಪಠೇತ್ಸರ್ಗಂ ಪ್ರಯತ್ನತಃ ॥೬೩॥

ಶನಿದಶೆಯಲ್ಲಿ ರಾಹುಭುಕ್ತಿಯು ಅಶುಭವಾಗಿದ್ದರೆ ಮಾಯಾಮೃಗದ ವಧೆಯ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ರಾಹುಭುಕ್ತಿ ಅರಣ್ಯಕಾಂಡ ಸರ್ಗ ೪೪ ಸಂಪುಟ ೪ ಪುಟ ೭೮೫)

ಕೇತುಭುಕ್ತಿರನರ್ಥಾ ಚೇದ್ದತ್ತೇ ಶನಿದಶಾನ್ತರೇ ।
ಸೀತಾಭರಣಜಾಲಾನಾಂ ಸುಗ್ರೀವೇಣಾರ್ಪಣಂ ಪಠೇತ್ ॥೬೪॥

ಶನಿದಶೆಯಲ್ಲಿ ಕೇತುಭುಕ್ತಿಯು ಅಶುಭವಾಗಿದ್ದರೆ ಸೀತೆಯ ಆಭರಣಗಳ ಸಮೂಹವನ್ನು ಸುಗ್ರೀವನು ಶ್ರೀರಾಮನಿಗೆ ಸಮರ್ಪಿಸಿದ ಪ್ರಸಂಗ ವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶನಿದಶೆ-ಕೇತುಭುಕ್ತಿ ಕಿಷ್ಕಿಂಧಾಕಾಂಡ ಸರ್ಗ ೬ ಸಂಪುಟ ೫ ಪುಟ ೯೨೦)

ಬುಧದಶಾದೋಷಪರಿಹಾರಃ

ದಶಾ ಬುಧಸ್ಯ ದುಷ್ಟಾ ಚೇತ್ಸೀತಾಗ್ರೇ ಹನುಮತ್ಕೃತಮ್ ।
ಶ್ರೀರಾಮವರ್ಣನಂ ಸರ್ಗಂ ಪಠೇತ್ಸಂಪೂಜ್ಯ ರಾಘವಮ್ ।
ಪಠನಾನ್ತೇ ರಾಘವಸ್ಯ ಮುದ್ಗಾನ್ನಂ ವಿನಿವೇದಯೇತ್ ॥೬೫॥

ಬುಧದಶೆಯು ದೋಷಾವಹವಾಗಿದ್ದರೆ ಹನುಮಂತನು ಸೀತೆಯ ಮುಂದೆ ಹೇಳಿದ ಶ್ರೀರಾಮನ ವರ್ಣನಾಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಿ ಕಡೆಯಲ್ಲಿ ರಾಘವನನ್ನು ಪೂಜಿಸಿ ಮುದ್ಗಾನ್ನವನ್ನು ನಿವೇದನೆಮಾಡಬೇಕು. (ಬುಧದಶೆ : ಸುಂದರಕಾಂಡ ಸರ್ಗ ೩೫ ಸಂಪುಟ ೬ ಪುಟ ೧೨೯೭)

ಬುಧಭುಕ್ತಿಸ್ತು ತತ್ರೈವ ಯದಿ ದೋಷಪ್ರದಾ ಭವೇತ್ ।
ವಾಮನೋತ್ಪತ್ತಿಚರಿತಸರ್ಗಂ ಪ್ರಾತಃ ಪಠೇಚ್ಚತುಃ ॥೬೬॥

ಬುಧದಶೆಯಲ್ಲಿ ಬುಧಭುಕ್ತಿಯು ದೋಷಾವಹವಾಗಿದ್ದರೆ ವಾಮನನ ಉತ್ಪತ್ತಿಪ್ರಸಂಗವಿರುವ ಸರ್ಗವನ್ನು ಪ್ರಾತಃಕಾಲದಲ್ಲಿ ನಾಲ್ಕು ಬಾರಿ ಪಾರಾಯಣಮಾಡಬೇಕು. (ಬುಧದಶೆ-ಬುಧಭುಕ್ತಿ ಬಾಲಕಾಂಡ ಸರ್ಗ-೨೯ ಸಂಪುಟ ೧ ಪುಟ ೯೧)

ಬುಧಸ್ಯ ತು ದಶಾಯಾಂ ಚೇತ್ಸೂರ್ಯಭುಕ್ತಿಸ್ತು ದೋಷದಾ ।
ತದಾ ಮೂಲಬಲಧ್ವಂಸಸರ್ಗಂ ತ್ರಿಷವಣಂ ಪಠೇತ್ ॥೬೭॥

ಬುಧದಶೆಯಲ್ಲಿ ಸೂರ್ಯಭುಕ್ತಿಯು ದೋಷಾವಹವಾಗಿದ್ದರೆ ಮೂಲಬಲಧ್ವಂಸನದ ಸರ್ಗವನ್ನು ಪ್ರತಿನಿತ್ಯವೂ ಮೂರು ಕಾಲಗಳಲ್ಲಿಯೂ ಪಾರಾಯಣಮಾಡಬೇಕು. (ಬುಧದಶೆ-ಸೂರ್ಯಭುಕ್ತಿ ಯುದ್ಧಕಾಂಡ ಸರ್ಗ ೯೩ ಸಂಪುಟ ೯ ಪುಟ ೧೮೭೪)

ಮಹಾದಶಾಯಾಂ ಸೌಮ್ಯಸ್ಯ ಚನ್ದ್ರಸ್ಯಾನ್ತರ್ದಶಾಶುಭಾ ।
ಸಂವಾದಮತ್ರೇಃ ರಾಮೇಣ ಸರ್ಗಂ ತು ಪ್ರಯತಃ ಪಠೇತ್ ॥೬೮॥

ಬುಧದಶೆಯಲ್ಲಿ ಚಂದ್ರಭುಕ್ತಿಯು ಅಶುಭದಾಯಕವಾಗಿದ್ದರೆ ಅತ್ರಿ ಮಹರ್ಷಿಗಳಿಗೂ ಶ್ರೀರಾಮನಿಗೂ ನಡೆದ ಸಂವಾದಪ್ರಸಂಗವಿರುವ ಸರ್ಗ ವನ್ನು ಪಾರಾಯಣಮಾಡಬೇಕು. (ಬುಧದಶೆ-ಚಂದ್ರಭುಕ್ತಿ ಅಯೋಧ್ಯಾ ಕಾಂಡ ಸರ್ಗ-೧೧೭ ಸಂಪುಟ ೪ ಪುಟ ೬೪೦)

ಬುಧಸ್ಯ ಚೇದ್ದಶಾಯಾಂ ತು ಭೌಮಭುಕ್ತಿಸ್ತು ಪೀಡಯೇತ್ ।
ಸೀತಾ ಶುಭನಿಮಿತ್ತಾಖ್ಯಸರ್ಗಂ ಷಡ್ವಾರಮಾಪಠೇತ್ ॥೬೯॥

ಬುಧನ ದಶೆಯಲ್ಲಿ ಅಂಗಾರಕನ ಭುಕ್ತಿಯು ಕಷ್ಟದಾಯಕವಾಗಿದ್ದರೆ ಸೀತೆಯ ಶುಭನಿಮಿತ್ತಗಳನ್ನು ವಿವರಿಸಿ ಹೇಳುವ ಸರ್ಗವನ್ನು ದಿನಕ್ಕೆ ಆರು ಬಾರಿ ಪಾರಾಯಣಮಾಡಬೇಕು. (ಬುಧದಶೆ-ಕುಜಭುಕ್ತಿ ಸುಂದರಕಾಂಡ ಸರ್ಗ ೨೭ ಸಂಪುಟ ೬ ಪುಟ ೧೨೭೧)

ಅಶುಭಾ ಗುರುಭುಕ್ತಿಶ್ಚೇದ್ಬುಧಸ್ಯೈವ ದಶಾನ್ತರೇ ।
ಸರ್ಗಂ ಪಠೇತ್ತು ಸುರಭೇರಾಖ್ಯಾನಂ ಭರತೋದಿತಮ್ ॥೭೦॥

ಬುಧನ ದಶೆಯಲ್ಲಿ ಗುರುಭುಕ್ತಿಯು ಅಶುಭದಾಯಕವಾಗಿದ್ದರೆ

ಭರತನು ಹೇಳಿದ ಸುರಭಿಯ ಆಖ್ಯಾನವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಬುಧದಶೆ-ಗುರುಭುಕ್ತಿ ಅಯೋಧ್ಯಾಕಾಂಡ ಸರ್ಗ ೭೪ ಸಂಪುಟ ೩ ಪುಟ ೫೦೪)

ಬುಧಸ್ಯೈವ ದಶಾಯಾಂ ತು ಶುಕ್ರಭುಕ್ತಿರ್ಯದಾಹಿತಾ ।
ಸೀತಾರಾಘವಸಂವಾದಂ ಪಠೇದಾರಣ್ಯಕಾಣ್ಡಗಮ್ ॥೭೧॥

ಬುಧನ ದಶೆಯಲ್ಲಿ ಶುಕ್ರಭುಕ್ತಿಯು ಕಷ್ಟದಾಯಕವಾದರೆ ಅರಣ್ಯ ಕಾಂಡದಲ್ಲಿ ಬರುವ ಸೀತಾ-ರಾಮಸಂವಾದದ ಸರ್ಗವನ್ನು ಪಾರಾಯಣ ಮಾಡಬೇಕು. (ಬುಧದಶೆ-ಶುಕ್ರಭುಕ್ತಿ ಅರಣ್ಯಕಾಂಡ ಸರ್ಗಗಳು ೯-೧೦ ಸಂಪುಟ ೪ ಪುಟ ೬೭೩ ರಿಂದ ೬೭೮ರ ವರೆಗೆ)

ಶನಿಭುಕ್ತಿರ್ದೋಷದಾ ಚೇದ್ಬುಧಸ್ಯ ತು ದಶಾನ್ತರೇ ।
ಸ್ಮರನ್ಮನಸಿ ಕೋದಣ್ಡಪಾಣಿಂ ರಾಘವಮಾದರಾತ್ ।
ಪಠೇತ್ಸರ್ಗಂ ಭಕ್ತಿಯುತೋ ರಾವಣಸ್ಯ ವಧಾತ್ಮಕಮ್ ॥೭೨॥

ಬುಧದಶೆಯಲ್ಲಿ ಶನಿಭುಕ್ತಿಯು ದೋಷಾವಹವಾಗಿದ್ದರೆ ಕೋದಂಡ ಪಾಣಿಯಾದ ಶ್ರೀರಾಮನನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡು ರಾವಣವಧಾತ್ಮಕ ವಾದ ಸರ್ಗವನ್ನು ಭಕ್ತಿಯಿಂದ ಪಾರಾಯಣಮಾಡಬೇಕು. (ಬುಧದಶೆ-ಶನಿ ಭುಕ್ತಿ ಯುದ್ಧಕಾಂಡ ಸರ್ಗ ೧೦೮ ಸಂಪುಟ ೯ ಪುಟ ೧೯೪೦)

ಮಹಾದಶಾಯಾಂ ಸೌಮ್ಯಸ್ಯ ರಾಹುಭುಕ್ತಿಸ್ತು ದೋಷದಾ ।
ಚಾರೇಣ ತು ದಶಾಸ್ಯಸ್ಯ ರಾಘವಸ್ಯ ಪ್ರದರ್ಶನಮ್ ।
ಸರ್ಗಮೇಕಂ ಪಠೇದ್ಯತ್ತೋ ಗ್ರನ್ಥೇ ಸಂಪೂಜ್ಯ ರಾಘವಮ್ ॥೭೩॥

ಬುಧದಶೆಯಲ್ಲಿ ರಾಹುಭುಕ್ತಿಯು ಅಶುಭಪ್ರದವಾಗಿದ್ದರೆ ಶುದ್ಧನಾಗಿ ಗ್ರಂಥದಲ್ಲಿ ರಾಘವನನ್ನು ಆವಾಹಿಸಿ ಪೂಜೆಮಾಡಿ ಚಾರನು ರಾವಣನಿಗೆ ರಾಘವನನ್ನು ತೋರಿಸಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಬುಧದಶೆ-ರಾಹುಭುಕ್ತಿ ಯುದ್ಧಕಾಂಡ ಸರ್ಗ-೨೮ ಸಂಪುಟ ೮ ಪುಟ ೧೫೪೯)

ಕೇತುಭುಕ್ತಿರ್ದೋಷದಾ ಚೇದ್ಬುಧಸ್ಯಾಥ ದಶಾನ್ತರೇ ।
ಹನೂಮತಾಶೋಕವನೇ ಸೀತಾನ್ವೇಷಣಮಾಪಠೇತ್ ॥೭೪॥

ಬುಧದಶೆಯಲ್ಲಿ ಕೇತುಭುಕ್ತಿಯು ದೋಷಾವಹವಾಗಿದ್ದರೆ ಅಶೋಕ ವನದಲ್ಲಿ ಹನುಮಂತನು ಸೀತಾನ್ವೇಷಣಮಾಡಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಬುಧದಶೆ-ಕೇತುಭುಕ್ತಿ ಸುಂದರಕಾಂಡ ಸರ್ಗ-೧೪ ಸಂಪುಟ ೬ ಪುಟ ೧೨೨೫)

ಕೇತುದಶಾದೋಷಪರಿಹಾರಃ

ಕೇತೋರ್ದಶಾ ದೋಷದಾ ಚೇತ್ಸರ್ಗಂ ಗುಹಸಮಾಗಮಮ್ ।
ರಾಘವಸ್ಯ ಪಠೇದ್ಭಕ್ತ್ಯಾ ಹೃದಿ ಕೃತ್ವಾ ರಘೂತ್ತಮಮ್ ।
ಅನ್ತೇ ನಿವೇದಯೇದಸ್ಯಾನ್ಮಾಷಾಪೂಪಾನ್ ಘೃತಾಚಿತಾನ್ ॥೭೫॥

ಕೇತುದಶೆಯು ದೋಷಾವಹವಾಗಿದ್ದಲ್ಲಿ ಶ್ರೀರಾಮನನ್ನು ಮನಸ್ಸಿನಲ್ಲಿ ಧ್ಯಾನಮಾಡಿಕೊಂಡು ಗುಹಸಮಾಗಮದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಿ ರಾಘವನನ್ನು ಸಂಪೂಜಿಸಿ ತುಪ್ಪದಲ್ಲಿ ಕರಿದ ಉದ್ದಿನ ವಡೆಗಳನ್ನು ನಿವೇದನೆಮಾಡಬೇಕು. (ಕೇತುದಶೆ : ಅಯೋಧ್ಯಾಕಾಂಡ ಸರ್ಗ ೫೦ ಸಂಪುಟ ೨ ಪುಟ ೪೧೩)

ಕೇತೋರ್ದಶಾಯಾಂ ಕೇತೋಶ್ಚೇದ್ಭುಕ್ತಿರ್ದೋಷವಿಧಾಯಿನೀ ।
ದೈವಪ್ರಶಂಸಾಂ ರಾಮಸ್ಯ ಮುಖಾಬ್ಜಾನ್ನಿಃಸೃತಾಂ ಪಠೇತ್ ॥೭೬॥

ಕೇತುದಶೆಯಲ್ಲಿ ಕೇತುಭುಕ್ತಿಯು ಕಷ್ಟದಾಯಕವಾಗಿದ್ದರೆ ಶ್ರೀರಾಮನ ಮುಖದಿಂದ ನಿಸ್ಸೃತವಾದ ದೈವಪ್ರಶಂಸಾಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಕೇತುಭುಕ್ತಿ ಅಯೋಧ್ಯಾಕಾಂಡ ಸರ್ಗ-೨೨ ಸಂಪುಟ ೨ ಪುಟ ೩೧೮)

ಕೇತೋರ್ದಶಾಯಾಂ ಸೂರ್ಯಸ್ಯ ಭುಕ್ತಿಶ್ಚೇತ್ಕ್ಲೇಶಕಾರಿಣೀ ।
ಪಠೇದಯೋಧ್ಯಾಕಾಣ್ಡಸ್ಥಂ ಸೂರ್ಯವಂಶಾನುಕೀರ್ತನಮ್ ॥೭೭॥

ಕೇತುದಶೆಯಲ್ಲಿ ಸೂರ್ಯಭುಕ್ತಿಯು ಕ್ರೂರವಾಗಿದ್ದರೆ ಅಯೋಧ್ಯಾ ಕಾಂಡದಲ್ಲಿ ಬರುವ ಸೂರ್ಯವಂಶಾನುಕೀರ್ತನವಿರುವ ಸರ್ಗವನ್ನು ಪಾರಾ ಯಣಮಾಡಬೇಕು. (ಕೇತುದಶೆ-ಸೂರ್ಯಭುಕ್ತಿ ಅಯೋಧ್ಯಾಕಾಂಡ ಸರ್ಗ ೧೧೦ ಸಂಪುಟ ೩ ಪುಟ ೬೧೯)

ಕೇತೋರ್ದಶಾಯಾಂ ಸೋಮಸ್ಯ ದುಷ್ಟಾ ತ್ವನ್ತರ್ದಶಾ ಯದಿ ।
ಬಲಾತಿಬಲಯೋರ್ದಾನಂ ರಾಘವಸ್ಯ ಪಠೇದ್ಯತಃ ॥೭೮॥

ಕೇತುದಶೆಯಲ್ಲಿ ಚಂದ್ರಭುಕ್ತಿಯು ಕ್ರೂರವಾಗಿದ್ದರೆ ವಿಶ್ವಾಮಿತ್ರರು ಶ್ರೀರಾಮನಿಗೆ ಬಲಾತಿಬಲವಿದ್ಯೆಗಳನ್ನು ಉಪದೇಶಿಸಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಚಂದ್ರಭುಕ್ತಿ ಬಾಲಕಾಂಡ ಸರ್ಗ ೨೨ ಸಂಪುಟ ೧ ಪುಟ ೭೩)

ಕೇತೋರ್ದಶಾಯಾಂ ಭೌಮಸ್ಯ ಯದಿ ಭುಕ್ತ್ಯಾಹಿತಂ ಭವೇತ್ ।
ಕಚ್ಚಿತ್ಸರ್ಗಂ ಪಠೇತ್ಸಮ್ಯಕ್ ಹೃದಿ ಧ್ಯಾಯನ್ರಘೂತ್ತಮಮ್ ॥೭೯॥

ಕೇತುದಶೆಯಲ್ಲಿ ಕುಜಭುಕ್ತಿಯು ಕೆಟ್ಟುದಾಗಿದ್ದರೆ ಮನಸ್ಸಿನಲ್ಲಿ ಶ್ರೀರಾಮನನ್ನು ಧ್ಯಾನಮಾಡುತ್ತಾ ಕಚ್ಚಿತ್ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಕುಜಭುಕ್ತಿ ಅಯೋಧ್ಯಾಕಾಂಡ ಸರ್ಗ ೧೦೦ ಸಂಪುಟ ೩ ಪುಟ ೫೮೫)

ಕೇತೋರ್ದಶಾಯಾಂ ಭುಕ್ತಿಸ್ತು ಬುಧಸ್ಯ ಯದಿ ದೋಷದಾ ।
ಪಠೇದ್ರಾಮಕಥಾಂ ಪ್ರೋಕ್ತಾಂ ಭರತಾಯ ಹನೂಮತಾ ॥೮೦॥

ಕೇತುದಶೆಯಲ್ಲಿ ಬುಧಭುಕ್ತಿಯು ಕೆಟ್ಟುದಾಗಿದ್ದರೆ ಭರತನಿಗೆ ಹನುಮಂತನು ಹೇಳಿದ ರಾಮಕಥಾಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಬುಧಭುಕ್ತಿ ಯುದ್ಧಕಾಂಡ ಸರ್ಗ ೧೨೬ ಸಂಪುಟ ೯ ಪುಟ ೨೦೦೭)

ಗುರುಭುಕ್ತಿರ್ದೋಷದಾತ್ರೀ ಕೇತೋಶ್ಚೇತ್ತು ದಶಾನ್ತರೇ ।
ಹನೂಮದುಕ್ತಂ ಸೀತಾಯೈ ರಾಮಸ್ಯ ವಿಜಯಂ ಪಠೇತ್ ॥೮೧॥

ಕೇತುದಶೆಯಲ್ಲಿ ಗುರುಭುಕ್ತಿಯು ಕಷ್ಟದಾಯಕವಾಗಿದ್ದರೆ ಹನುಮಂತನು ರಾಮನ ವಿಜಯವನ್ನು ಸೀತೆಗೆ ಹೇಳಿದ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಗುರುಭುಕ್ತಿ ಯುದ್ಧಕಾಂಡ ಸರ್ಗ ೧೧೩ ಸಂಪುಟ ೯ ಪುಟ ೧೯೭೩)

ಶುಕ್ರಭುಕ್ತ್ಯಾ ತು ದೋಷಶ್ಚೇತ್ಕೇತೋರೇವ ದಶಾನ್ತರೇ ।
ಹನೂಮದುಕ್ತಂ ರಾಮಾಯ ಸೀತಾದರ್ಶನಮಾಪಠೇತ್ ॥೮೨॥

ಕೇತುದಶೆಯಲ್ಲಿ ಶುಕ್ರಭುಕ್ತಿಯು ದೋಷಾವಹವಾಗಿದ್ದರೆ ಶ್ರೀರಾಮ ನಿಗೆ ಹನುಮಂತನು ಹೇಳಿದ ಸೀತಾದರ್ಶನಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಕೇತುದಶೆ-ಶುಕ್ರಭುಕ್ತಿ ಸುಂದರಕಾಂಡ ಸರ್ಗ ೬೪ ಸಂಪುಟ ೬ ಪುಟ ೧೪೩೦)

ಮಹಾದಶಾಯಾಂ ಕೇತೋಶ್ಚೇಚ್ಛನಿಭುಕ್ತಿರನರ್ಥದಾ ।
ಪಠೇತ್ತ್ರಿಸನ್ಧ್ಯಂ ಪ್ರಯತಃ ಪ್ರಹಸ್ತವಧಸರ್ಗಕಮ್ ॥೮೩॥

ಕೇತುದಶೆಯಲ್ಲಿ ಶನಿಭುಕ್ತಿಯು ಕೆಟ್ಟುದಾಗಿದ್ದರೆ ಶುದ್ಧನಾಗಿ ಮೂರು ಸಂಧ್ಯೆಗಳಲ್ಲಿಯೂ ಪ್ರಹಸ್ತನ ವಧಾಪ್ರಸಂಗವಿರುವ ಸರ್ಗವನ್ನು ಪಾರಾಯಣ ಮಾಡಬೇಕು. (ಕೇತುದಶೆ-ಶನಿಭುಕ್ತಿ ಯುದ್ಧಕಾಂಡ ಸರ್ಗ ೫೮ ಸಂಪುಟ ೮ ಪುಟ ೧೬೬೩)

ಕೇತೋರ್ಮಹಾದಶಾಯಾಂ ತು ರಾಹುಭುಕ್ತಿರನರ್ಥದಾ ।
ಕುಮ್ಭಕರ್ಣಸ್ಯ ನಿಧನಂ ಪಠೇತ್ಸರ್ಗಂ ದಿವಾನಿಶಮ್ ॥೮೪॥

ಕೇತುದಶೆಯಲ್ಲಿ ರಾಹುಭುಕ್ತಿಯು ಕೆಟ್ಟುದಾಗಿದ್ದರೆ ಕುಂಭಕರ್ಣ ನಿಧನಪ್ರಸಂಗವಿರುವ ಸರ್ಗವನ್ನು ಹಗಲಿನಲ್ಲಿಯೂ ಮತ್ತು ರಾತ್ರಿಯಲ್ಲಿಯೂ ಪಾರಾಯಣಮಾಡಬೇಕು. (ಕೇತುದಶೆ-ರಾಹುಭುಕ್ತಿ ಯುದ್ಧಕಾಂಡ ಸರ್ಗ ೬೭ ಸಂಪುಟ ೮ ಪುಟ ೧೭೨೨)

ಶುಕ್ರದಶಾದೋಷಪರಿಹಾರಃ

ಶುಕ್ರಸ್ಯ ಚೇದ್ದಶಾ ದುಷ್ಟಾ ಸೀತೋದ್ವಾಹಾಖ್ಯಸರ್ಗಕಮ್ ।
ಜಾನಕೀಂ ಮನಸಾ ಧ್ಯಾಯನ್ಸರ್ವಾಭರಣಭೂಷಿತಾಮ್ ॥೮೫॥

ಪಠೇತ್ಕುಙ್ಕುಮಗನ್ಧಾದ್ಯೈರಭ್ಯರ್ಚ್ಯ ಗ್ರನ್ಥಸತ್ತಮಮ್ ।
ಸುವಾಸಿನೀಭ್ಯಃ ಪಾಠಾನ್ತೇ ಮಲ್ಲಿಕಾಜಾತಿಮಾಲತೀಃ ॥೮೬॥

ಶ್ವೇತಪುಷ್ಪಾಣಿ ಚಾನ್ಯಾನಿ ಚನ್ದನಂ ಕುಙ್ಕುಮಂ ತಥಾ ।
ತಾಮ್ಬೂಲಂ ಚ ಯಥಾಶಕ್ತಿ ದದ್ಯಾದ್ರಜತದಕ್ಷಿಣಾಮ್ ॥೮೭॥

ಶುಕ್ರದಶೆಯು ದೋಷಾವಹವಾಗಿದ್ದರೆ ಸೀತಾವಿವಾಹಸರ್ಗವನ್ನು ಪಾರಾಯಣಮಾಡಿ ಸರ್ವಾಭರಣಭೂಷಿತೆಯಾದ ಸೀತಾದೇವಿಯನ್ನು

ಮನಸ್ಸಿನಲ್ಲಿ ಧ್ಯಾನಮಾಡಿಕೊಂಡು ಪಾರಾಯಣದ ಪುಸ್ತಕಕ್ಕೆ ಪೂಜೆಮಾಡಿ ಅನಂತರದಲ್ಲಿ ಮಲ್ಲಿಕಾ-ಮಾಲತೀ ಮುಂತಾದ ಬಿಳಿಯ ಹೂಗಳನ್ನೂ, ಚಂದನ-ಕುಂಕುಮಗಳನ್ನೂ, ತಾಂಬೂಲವನ್ನೂ, ಯಥಾಶಕ್ತಿ ರಜತದಕ್ಷಿಣೆಯನ್ನೂ ಸುವಾಸಿನಿಯರಿಗಿತ್ತು ಸತ್ಕರಿಸಬೇಕು. (ಶುಕ್ರದಶೆ : ಬಾಲಕಾಂಡ ಸರ್ಗ ೭೩ ಸಂಪುಟ ೧ ಪುಟ ೨೦೫)

ತತ್ರೈವ ಶುಕ್ರಭುಕ್ತಿಶ್ಚೇತ್ಪ್ರಾಣಿನಾಂ ದೋಷಕಾರಿಣೀ ।
ಅಙ್ಗುಲೀಯಪ್ರದಾನಸ್ಯ ಸರ್ಗಂ ಸುನ್ದರಕಾಣ್ಡಗಮ್ ।
ಪಠೇತ್ತ್ರಿಷವಣಂ ಭಕ್ತ್ಯಾ ಪೂಜಯಿತ್ವಾ ಮಹೀಸುತಾಮ್ ॥೮೮॥

ಶುಕ್ರದಶೆಯಲ್ಲಿ ಶುಕ್ರಭುಕ್ತಿಯು ದೋಷಾವಹವಾಗಿದ್ದರೆ ಸೀತೆಯನ್ನು ಭಕ್ತಿಯಿಂದ ಸಂಪೂಜಿಸಿ ಸುಂದರಕಾಂಡದಲ್ಲಿರುವ ಅಂಗುಲೀಯಪ್ರದಾನ ಸರ್ಗವನ್ನು ಪ್ರಾತಃಕಾಲ-ಮಧ್ಯಾಹ್ನ-ಸಾಯಂಕಾಲಗಳಲ್ಲಿ ಪಾರಾಯಣ ಮಾಡಬೇಕು. (ಶುಕ್ರದಶೆ-ಶುಕ್ರಭುಕ್ತಿ ಸುಂದರಕಾಂಡ ಸರ್ಗ ೩೬ ಸಂಪುಟ ೬ ಪುಟ ೧೩೦೫)

ಸಾ ಚೇದ್ಭುಕ್ತಿರ್ದೋಷದಾ ಸ್ಯಾತ್ ಸ್ತ್ರೀಣಾಂ ತತ್ರೈವ ಕಾಣ್ಡಕೇ ।
ಸೀತಾಯಾ ಆಞ್ಜನೇಯೇನ ಸಂವಾದಸ್ಯ ತು ಸರ್ಗಕಮ್ ।
ಶೃಣುಯುಸ್ತಾ ಅರ್ಥತಶ್ಚ ಶಬ್ದತಶ್ಚ ದ್ವಿಜಾನನಾತ್ ॥೮೯॥

ಶುಕ್ರದಶೆಯಲ್ಲಿ ಶುಕ್ರಭುಕ್ತಿಯು ಸ್ತ್ರೀಯರಿಗೆ ದೋಷಾವಹವಾಗಿದ್ದರೆ ಸೀತಾ ಮತ್ತು ಆಂಜನೇಯರ ನಡುವೆ ಆದ ಸಂಭಾಷಣೆಯ ಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. ಆ ಸರ್ಗದ ಅರ್ಥವನ್ನು ಬ್ರಾಹ್ಮಣರ ಮೂಲಕವಾಗಿ ತಿಳಿದುಕೊಳ್ಳಬೇಕು. (ಶುಕ್ರದಶೆ-ಶುಕ್ರಭುಕ್ತಿ (ಸ್ತ್ರೀಯರಿಗೆ) ಸುಂದರಕಾಂಡ ಸರ್ಗಗಳು ೩೩-೩೪-೩೫ ಸಂಪುಟ ೬ ಪುಟ ೧೨೯೦ ರಿಂದ ೧೩೦೫ರ ವರೆಗೆ)

ಭಾರ್ಗವಸ್ಯ ದಶಾಯಾಂ ತು ಸೂರ್ಯಭುಕ್ತಿರ್ಯದಾಶುಭಾ ।
ಪಠೇಚ್ಛಿವಧನುರ್ಭಙ್ಗ ಸರ್ಗಮತ್ಯನ್ತಮಾದೃತಃ ॥೯೦॥

ಶುಕ್ರದಶೆಯಲ್ಲಿ ಸೂರ್ಯಭುಕ್ತಿಯು ದೋಷಾವಹವಾಗಿದ್ದರೆ ಶಿವ ಧನುರ್ಭಂಗಸರ್ಗವನ್ನು ಶ್ರದ್ಧಾಪೂರ್ವಕವಾಗಿ ಪಾರಾಯಣಮಾಡಬೇಕು.

(ಶುಕ್ರದಸೆ-ಸೂರ್ಯಭುಕ್ತಿ ಬಾಲಕಾಂಡ ಸರ್ಗ ೬೭ ಸಂಪುಟ ೧ ಪುಟ ೧೮೯)

ಮಹಾದಶಾಯಾಂ ಶುಕ್ರಸ್ಯ ಚನ್ದ್ರಭುಕ್ತಿಸ್ತು ದೋಷದಾ ।
ಪಠೇಚ್ಚನ್ದ್ರೋದಯೇ ಶುಕ್ಲಪಕ್ಷೇ ಪಶ್ಯನ್ಸುಧಾಕರಮ್ ।
ಇಲೋಪಾಖ್ಯಾನಸರ್ಗಂ ತು ಧ್ಯಾತ್ವಾಮ್ಬಾಂ ಚನ್ದ್ರಮಣ್ಡಲೇ ॥೯೧॥

ಶುಕ್ರದಶೆಯಲ್ಲಿ ಚಂದ್ರಭುಕ್ತಿಯು ದೋಷಾವಹವಾಗಿದ್ದರೆ ಶುಕ್ಲಪಕ್ಷದಲ್ಲಿ ಚಂದ್ರೋದಯವಾದನಂತರ ಚಂದ್ರನನ್ನೇ ನೋಡುತ್ತಾ ಚಂದ್ರಮಂಡಲದಲ್ಲಿ ಸೀತಾಮಾತೆಯು ಇರುವಂತೆ ಧ್ಯಾನಮಾಡುತ್ತಾ ಇಲೋಪಾಖ್ಯಾನಸರ್ಗವನ್ನು ಪಾರಾಯಣಮಾಡಬೇಕು. (ಶುಕ್ರದಶೆ-ಚಂದ್ರಭುಕ್ತಿ ಉತ್ತರಕಾಂಡ ಸರ್ಗಗಳು ೮೭-೮೮-೮೯-೯೦ ಸಂಪುಟ ೧೧ ಪುಟ ೨೩೧೭ ರಿಂದ ೨೩೨೭ರ ವರೆಗೆ)

ಕವೇರ್ದಶಾಯಾಂ ಭೌಮಸ್ಯ ಯದಿ ಭುಕ್ತಿಃ ಪ್ರಪೀಡಯೇತ್ ।
ರಾಜ್ಯಾಭಿಷೇಕಸರ್ಗಂ ತು ಪಠೇತ್ಪಾದುಕಯೋಃ ಪ್ರಭೋಃ ॥೯೨॥

ಶುಕ್ರದಶೆಯಲ್ಲಿ ಕುಜಭುಕ್ತಿಯು ದೋಷಾವಹವಾಗಿದ್ದರೆ ಶ್ರೀರಾಮಚಂದ್ರಪ್ರಭುವಿನ ಪಾದುಕೆಗಳ ರಾಜ್ಯಾಭಿಷೇಕಸರ್ಗವನ್ನು ಪಾರಾಯಣಮಾಡಬೇಕು. (ಶುಕ್ರದಶೆ-ಕುಜಭುಕ್ತಿ ಅಯೋಧ್ಯಾಕಾಂಡ ಸರ್ಗ ೧೧೫ ಸಂಪುಟ ೪ ಪುಟ ೬೩೪)

ಬುಧಭುಕ್ತಿರ್ದೋಷದಾ ಚೇಚ್ಛುಕ್ರಸ್ಯೈವ ದಶಾನ್ತರೇ ।
ಮಾಲ್ಯವನ್ಮಾಲಿವಿಜಯಂ ಪಠೇತ್ಸರ್ಗತ್ರಯಂ ಯತಃ ॥೯೩॥

ಶುಕ್ರದಶೆಯಲ್ಲಿ ಬುಧಭುಕ್ತಿಯು ದೋಷಾವಹವಾಗಿದ್ದರೆ ಮಹಾವಿಷ್ಣುವು ಮಾಲ್ಯವಂತ ಮತ್ತು ಮಾಲಿಗಳನ್ನು ಪರಾಜಯಗೊಳಿಸಿದ ಸರ್ಗಗಳನ್ನು ಪಾರಾಯಣಮಾಡಬೇಕು. (ಶುಕ್ರದಶೆ-ಬುಧಭುಕ್ತಿ ಉತ್ತರಕಾಂಡ ಸರ್ಗಗಳು ೬-೭-೮ ಸಂಪುಟ ೧೦ ಪುಟ ೨೦೪೯ ರಿಂದ ೨೦೬೪ರ ವರೆಗೆ)

ಗುರುಭುಕ್ತಿಃ ಪೀಡಿಕಾ ಚೇಚ್ಛುಕ್ರಸ್ಯ ತು ದಶಾನ್ತರೇ ।
ಪಠೇದ್ದಶರಥಸ್ಯಾಶ್ವಮೇಧಸರ್ಗಂ ಪ್ರಯತ್ನತಃ ॥೯೪॥

ಶುಕ್ರದಶೆಯಲ್ಲಿ ಗುರುಭುಕ್ತಿಯು ಕೆಟ್ಟುದಾಗಿದ್ದರೆ ದಶರಥನು ಮಾಡಿದ ಅಶ್ವಮೇಧಯಾಗಪ್ರಸಂಗವಿರುವ ಸರ್ಗವನ್ನು ಪಾರಾಯಣಮಾಡಬೇಕು. (ಶುಕ್ರದಶೆ-ಗುರುಭುಕ್ತಿ ಬಾಲಕಾಂಡ ಸರ್ಗ-೧೪ ಸಂಪುಟ ೧ ಪುಟ ೪೫)

ಮಹಾದಶಾಯಾಂ ಶುಕ್ರಸ್ಯ ಮನ್ದಸ್ಯಾನ್ತರ್ದಶಾಶುಭಾ ।
ಓಷಧಿಕ್ಷ್ಮಾಭೃದಾಯತ್ತ ಲಕ್ಷ್ಮಣೋಜ್ಜೀವನಂ ಪಠೇತ್ ॥೯೫॥

ಶುಕ್ರದಶೆಯಲ್ಲಿ ಶನಿಭುಕ್ತಿಯು ಕಷ್ಟದಾಯಕವಾಗಿದ್ದರೆ ಹನುಮಂತನು ಓಷಧಿಪರ್ವತವನ್ನು ತಂದು ಲಕ್ಷ್ಮಣನನ್ನು ಉಜ್ಜೀವಿಸಿದ ಸರ್ಗವನ್ನು ಪಾರಾಯಣಮಾಡಬೇಕು. (ಶುಕ್ರದಶೆ-ಶನಿಭುಕ್ತಿ ಯುದ್ಧಕಾಂಡ ಸರ್ಗ ೧೦೧ ಸಂಪುಟ ೯ ಪುಟ ೧೯೦೮)

ಶುಕ್ರಸ್ಯ ಚೇದ್ದಶಾಯಾಂ ತು ರಾಹುಭುಕ್ತಿಸ್ತು ದೋಷದಾ ।
ಶ್ವಭ್ರಕ್ಷೇಪಂ ವಿರಾಧಸ್ಯ ಸರ್ಗಮಾದರತಃ ಪಠೇತ್ ॥೯೬॥

ಶುಕ್ರದಶೆಯಲ್ಲಿ ರಾಹುಭುಕ್ತಿಯು ದೋಷಾವಹವಾಗಿದ್ದರೆ ವಿರಾಧ ನನ್ನು ಹಳ್ಳಕ್ಕೆ ಹಾಕಿದ ಸರ್ಗವನ್ನು ಶ್ರದ್ಧೆಯಿಂದ ಪಾರಾಯಣಮಾಡಬೇಕು. (ಶುಕ್ರದಶೆ-ರಾಹುಭುಕ್ತಿ ಅರಣ್ಯಕಾಂಡ ಸರ್ಗ-೪ ಸಂಪುಟ ೪ ಪುಟ ೬೫೮)

ಶುಕ್ರಸ್ಯ ತು ದಶಾಯಾಂ ತು ಕೇತುಭುಕ್ತಿರ್ಯದಾಶುಭಾ ।
ಸಿನ್ಧುತೀರೇ ರಾಘವಸ್ಯ ಶಯನಂ ದರ್ಭಸಂಸ್ತರೇ ।
ಪಠೇದಾಸೇತುಬನ್ಧಾನ್ತಮನ್ತೇ ನೀರಾಜಯೇತ್ಪ್ರಭುಮ್ ॥೯೭॥

ಶುಕ್ರದಶೆಯಲ್ಲಿ ಕೇತುಭುಕ್ತಿಯು ಪೀಡಾದಾಯಕವಾಗಿದ್ದರೆ ಶ್ರೀರಾಮನು ಸಮುದ್ರತೀರದಲ್ಲಿ ದರ್ಭೆಗಳ ಮೇಲೆ ಪವಡಿಸಿದ ಪ್ರಸಂಗದಿಂದ ಸೇತುಬಂಧದವರೆಗಿನ ಸರ್ಗಗಳನ್ನು ಪಾರಾಯಣಮಾಡಿ ಶ್ರೀರಾಮನ ವಿಗ್ರಹಕ್ಕೆ ನೀರಾಜನಮಾಡಬೇಕು. (ಶುಕ್ರದಶೆ-ಕೇತುಭುಕ್ತಿ ಯುದ್ಧಕಾಂಡ ಸರ್ಗಗಳು ೨೧-೨೨ ಸಂಪುಟ ೮ ಪುಟ ೧೫೮೯ ರಿಂದ ೧೫೬೦)

ಈಶ್ವರನು ಪಾರ್ವತಿಗೆ ಹೇಳುತ್ತಾನೆ :

ಏವಂ ನವಗ್ರಹಾಣಾಂ ತು ದಶಾಸ್ವಾನ್ತರ್ದಶಾಃ ಪ್ರಿಯೇ ।
ಉದ್ದಿಶ್ಯ ಪರಿಹಾರೋಽಯಂ ಕಥಿತಸ್ತೇ ಸುಮಧ್ಯಮೇ ॥೯೮॥

ಪ್ರಿಯಂ ರವೇರಿಕ್ಷುದಣ್ಡಂ ಚನ್ದ್ರಸ್ಯ ತು ಪಯಃ ಪ್ರಿಯಮ್ ।
ಭೌಮಪ್ರಿಯಂ ಪಾಯಸಂ ಸ್ಯಾದ್ಬುಧೋ ದ್ರಾಕ್ಷಾಫಲಪ್ರಿಯಃ ॥೯೯॥

ಗುರೋಃ ಪ್ರಿಯಾ ತು ಕದಲೀ ರಸಖಣ್ಡಂ ಕವೇಃ ಪ್ರಿಯಮ್ ।
ಜಮ್ಬೂಫಲೈಃ ಶನಿಪ್ರೀತೀ ರಾಹುರ್ನಿತ್ಯಂ ಮಧುಪ್ರಿಯಃ ।
ಕೇತೋಃ ಪ್ರಿಯಂ ನಾರಿಕೇಲಮೇತಾನಿ ವಿನಿವೇದಯೇತ್ ॥೧೦೦॥

ದಶಾನಾಂ ದೋಷಶಾನ್ತ್ಯರ್ಥಂ ಪಾಠ್ಯೇ ರಾಮಾಯಣಾಂಶಕೇ ।
ತತ್ತದ್ಗ್ರಹಪ್ರೀತಿಕರಂ ಪದಾರ್ಥಂ ವಿನಿವೇದಯೇತ್ ॥೧೦೧॥

ರಾಮಾಯಣಾಂಶೇ ಪಠಿತೇ ಭುಕ್ತಿದೋಷಪ್ರಶಾನ್ತಯೇ ।
ದಶಾನಾಥಪ್ರಿಯಂ ತ್ವಾದೌ ಭುಕ್ತಿನಾಥಸ್ಯ ಚಾನ್ತತಃ ।
ನಿವೇದಯೇತ್ಪ್ರಿಯಂ ವಸ್ತು ಯತ್ನಾತ್ಸಂಪಾದ್ಯ ಸಾದರಮ್ ॥೧೦೨॥

ಅಲಭ್ಯಂ ಯದಿ ಕಿಂಚಿತ್ಸ್ಯಾದನ್ಯದ್ಯತ್ಕಿಂಚಿದುತ್ತಮಮ್ ।
ನಿವೇದಯೇದ್ಭಕ್ತಿಯುಕ್ತಸ್ತದಭಾವೇ ನವಂ ಫಲಮ್ ॥೧೦೩॥

ನಾರಿಕೇಲಂ ತಥಾ ದ್ರಾಕ್ಷಾ ಕದಲ್ಯಾಶ್ಚ ಫಲೋತ್ತಮಮ್ ।
ನವಗ್ರಹಾಣಾಂ ಪ್ರೀತ್ಯೈ ಸ್ಯಾದಲಾಭೇ ತನ್ನಿವೇದಯೇತ್ ॥೧೦೪॥

ಏವಂ ದಶಾಭುಕ್ತಿಜನ್ಯದೋಷಾಣಾಂ ಪರಿಶಾನ್ತಯೇ ।
ರಾಮಾಯಣಾಂಶಕಾಃ ಪ್ರೋಕ್ತಾಃ ಶ್ರವಣಾದ್ಭುಕ್ತಿಮುಕ್ತಿದಾಃ ॥೧೦೫॥

"ಪ್ರಿಯೇ! ನಾನೀಗ ಪೂರ್ವಾಂಗ-ಉತ್ತರಾಂಗನ್ಯಾಸ, ಧ್ಯಾನ ಶ್ಲೋಕಾದಿಗಳನ್ನು ಹೇಳಿಕೊಂಡು ಆಯಾ ದೋಷದ ಪರಿಹಾರಕ್ಕೆ ಉದ್ದಿಷ್ಟವಾದ ಸರ್ಗಗಳ ಪಾರಾಯಣಮಾಡಿದಲ್ಲಿ ನವಗ್ರಹಗಳ ದೋಷಪರಿಹಾರವಾಗುವುದೆಂಬ ವಿಷಯವನ್ನು ಹೇಳಿದೆನು. ಇನ್ನು ಮುಂದೆ ಆಯಾ ಗ್ರಹಗಳಿಗೆ ಮಾಡಬೇಕಾದ ನಿವೇದನವನ್ನು ಕುರಿತು ಹೇಳುತ್ತೇನೆ.

ಸೂರ್ಯನಿಗೆ ಕಬ್ಬನ್ನು ನಿವೇದನ ಮಾಡಬೇಕು. ಚಂದ್ರನಿಗೆ ಹಾಲು ಪ್ರಿಯವಾದುದು. ಅಂಗಾರಕನಿಗೆ ಪಾಯಸ, ಬುಧನಿಗೆ ದ್ರಾಕ್ಷಾಫಲ, ಗುರುವಿಗೆ ಬಾಳೇಹಣ್ಣು, ಶುಕ್ರನಿಗೆ ಕಲ್ಲುಸಕ್ಕರೆ, ಶನೀಶ್ವರನಿಗೆ ನೇರಳೆಹಣ್ಣು

ಪ್ರಿಯವಾದುದು. ರಾಹುವಿಗೆ ಜೇನುತುಪ್ಪ, ಕೇತುವಿಗೆ ತೆಂಗಿನಕಾಯಿ ಪ್ರಿಯವಾದುದು. ಆಯಾ ಗ್ರಹಗಳ ದಶೆಗಳ ಕಾಲದಲ್ಲಿಯೂ, ದಶಾಭುಕ್ತಿಗಳ ಕಾಲದಲ್ಲಿಯೂ ಶಾಂತ್ಯರ್ಥವಾಗಿ ಅದಕ್ಕೆ ಉದ್ದಿಷ್ಟವಾದ ರಾಮಾಯಣಸರ್ಗಗಳನ್ನು ಪಾರಾಯಣಮಾಡಿದನಂತರ ಮೇಲೆ ಹೇಳಿದ ರೀತಿಯಲ್ಲಿ ಆಯಾ ಗ್ರಹಗಳಿಗೆ ಪ್ರೀತಿಕರವಾದ ಫಲಗಳನ್ನು ನಿವೇದನೆಮಾಡಬೇಕು. ದಶಾಭುಕ್ತಿಯ ದೋಷನಿವಾರಣೆಗಾಗಿ ಪಾರಾಯಣವನ್ನು ಮಾಡುವಾಗ ಮೊದಲು ದಶಾನಾಥನಿಗೆ ಪ್ರಿಯವಾದುದನ್ನು ನಿವೇದನೆಮಾಡಿ ಕಡೆಯಲ್ಲಿ ಭುಕ್ತಿನಾಥ ನಿಗೆ ಪ್ರಿಯವಾದುದನ್ನು ನಿವೇದನೆಮಾಡಬೇಕು. ಗ್ರಹಗಳಿಗೆ ಪ್ರೀತಿಕರವಾದ, ಮೇಲೆ ಹೇಳಿರುವ ಪದಾರ್ಥಗಳನ್ನೇ ಪ್ರಯತ್ನಪೂರ್ವಕವಾಗಿ ತಂದು ನಿವೇದನೆಮಾಡಬೇಕು. ಒಂದುವೇಳೆ ಸಿಕ್ಕದೆಯೇ ಹೋದರೆ ಬೇರಾವ ಫಲವನ್ನಾದರೂ ನಿವೇದನೆಮಾಡಬಹುದು. ತೆಂಗಿನಕಾಯಿ, ದ್ರಾಕ್ಷಿ ಮತ್ತು ಬಾಳೇಹಣ್ಣು ಇವುಗಳನ್ನು ಎಲ್ಲ ಗ್ರಹಗಳಿಗೂ ನಿವೇದನೆಮಾಡಬಹುದು. ಈ ರೀತಿಯಾಗಿ ದಶಾಭುಕ್ತಿಗಳ ದೋಷಪರಿಹಾರಕವಾದ, ಭುಕ್ತಿ-ಮುಕ್ತಿ* ದಾಯಕವಾದ ರಾಮಾಯಣದ ಸರ್ಗಗಳ ವಿವರಣೆಯನ್ನು ಹೇಳಿರುವೆನು ಪಾರ್ವತಿ!"

---

೩೨ ದಿವಸಗಳಲ್ಲಿ ರಾಮಾಯಣದ ಗಾಯನ

ಉತ್ತರಕಾಂಡದ ೯೪ನೆಯ ಸರ್ಗದಲ್ಲಿ ಲವ-ಕುಶರು ಶ್ರೀರಾಮನ ಸಮ್ಮುಖದಲ್ಲಿ ದಿನಕ್ಕೆ ೨೦ ಸರ್ಗಗಳಂತೆ ನಾರದರು ಹೇಳಿದ ಮೂಲ ರಾಮಾಯಣದಿಂದ ಪ್ರಾರಂಭಿಸಿ ಹಾಡಿದರೆಂಬ ವಚನವಿದೆ.

ಪ್ರವೃತ್ತಮಾದಿತಃ ಪೂರ್ವಸರ್ಗಂ ನಾರದದರ್ಶಿತಮ್ ।
ತತಃ ಪ್ರಭೃತಿ ಸರ್ಗಾಂಶ್ಚ ಯಾವದ್ವಿಂಶತ್ಯಗಾಯತಾಮ್ ॥೧೭॥

ತತೋಽಪರಾಹ್ಣಸಮಯೇ ರಾಘವಃ ಸಮಭಾಷತ ।
ಶ್ರುತ್ವಾ ವಿಂಶತಿಸರ್ಗಾಂಸ್ತಾನ್ಭ್ರಾತರಂ ಭ್ರಾತೃವತ್ಸಲಃ ॥೧೮॥

ಮುಂದೆ ಲವ-ಕುಶರೇ ಶ್ರೀರಾಮನಿಗೆ ಈ ಮಹಾಕಾವ್ಯವನ್ನು ರಚಿಸಿ

* ಭುಕ್ತಿಃ = ಇಂದ್ರಿಯಸುಖ, ಮುಕ್ತಿಃ = ಮೋಕ್ಷ.

ದವರು ಯಾರೆಂಬುದನ್ನೂ ಶ್ಲೋಕಗಳ-ಆಖ್ಯಾನಗಳ ಮತ್ತು ಸರ್ಗಗಳ ಸಂಖ್ಯೆ ಎಷ್ಟೆಂಬುದನ್ನೂ ಹೇಳುತ್ತಾರೆ.

ವಾಲ್ಮೀಕಿರ್ಭಗವಾನ್ಕರ್ತಾ ಸಮ್ಪ್ರಾಪ್ತೋ ಯಜ್ಞಸಂವಿಧಮ್ ।
ಯೇನೇದಂ ಚರಿತಂ ತುಭ್ಯಮಶೇಷಂ ಸಮ್ಪ್ರದರ್ಶಿತಮ್ ॥೨೫॥

ಸಂನಿಬದ್ಧಂ ಹಿ ಶ್ಲೋಕಾನಾಂ ಚತುರ್ವಿಂಶತ್ಸಹಸ್ರಕಮ್ ।
ಉಪಾಖ್ಯಾನಶತಂ ಚೈವ ಭಾರ್ಗವೇಣ ತಪಸ್ವಿನಾ ॥೨೬॥

ಆದಿಪ್ರಭೃತಿ ವೈ ರಾಜನ್ ಪಞ್ಚಸರ್ಗಶತಾನಿ ಚ ।
ಕಾಣ್ಡಾನಿ ಷಟ್ ಕೃತಾನೀಹ ಸೋತ್ತರಾಣಿ ಮಹಾತ್ಮನಾ ॥೨೭॥

ನೂರು ಉಪಾಖ್ಯಾನಗಳಿರುವ ಈ ರಾಮಾಯಣವನ್ನು ವಾಲ್ಮೀಕಿ ಮಹರ್ಷಿಗಳು ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಲ್ಲಿ ರಚಿಸಿದರು. ಅದನ್ನು ಅವರು ಏಳು ಕಾಂಡಗಳನ್ನಾಗಿಯೂ, ಐದುನೂರು ಸರ್ಗಗಳನ್ನಾಗಿಯೂ ವಿಭಾಗಿಸಿದ್ದಾರೆ.

ಐದುನೂರು ಸರ್ಗಗಳಾದರೆ ಕಥೆಯು ಇಪ್ಪತ್ತೈದುದಿವಸಗಳಲ್ಲಿ ಮುಗಿಯುತ್ತದೆ. ಆದರೆ ಈಗ ಶ್ಲೋಕಗಳ ಸಂಖ್ಯೆ ಮತ್ತು ಕಾಂಡಗಳ ಸಂಖ್ಯೆ ಗ್ರಂಥದಲ್ಲಿ ಹೇಳಿರುವಂತೆಯೇ ಇದ್ದರೂ ಸರ್ಗಗಳ ಸಂಖ್ಯೆ ೬೪೫.

ಬಾಲಕಾಂಡ	೭೭
ಅಯೋಧ್ಯಾಕಾಂಡ	೧೧೯
ಅರಣ್ಯಕಾಂಡ	೭೫
ಕಿಷ್ಕಿಂಧಾಕಾಂಡ	೬೭
ಸುಂದರಕಾಂಡ	೬೮
ಯುದ್ಧಕಾಂಡ	೧೨೮
ಉತ್ತರಕಾಂಡ	೧೧೧
	೬೪೫

ಶ್ಲೋಕಸಂಖ್ಯೆಯು ಇಪ್ಪತ್ತುನಾಲ್ಕು ಸಾವಿರಗಳೇ ಆಗಿದ್ದರೂ ಸರ್ಗಗಳ ಸಂಖ್ಯೆಯು ೧೪೫ರಷ್ಟು ಏಕೆ ಹೆಚ್ಚಾಯಿತೆಂಬುದಕ್ಕೆ ಕಾರಣ ಹುಡುಕುವುದು ಕಷ್ಟ. ಲಿಪಿಕಾರರ ದೋಷದಿಂದಾಗಿ ಹೀಗಾಗಿರಬಹುದೆಂದು

ಊಹಿಸಬಹುದಾಗಿದೆ. ಈಗ ಪ್ರಚಲಿತವಿರುವ ಪಾಠಗಳಲ್ಲಿಯೂ ಕೆಲವು ರಾಮಾಯಣಗಳಲ್ಲಿ ೬೪೭ ಸರ್ಗಗಳಿವೆ. ಎರಡು ಕಡೆಗಳಲ್ಲಿ ಸರ್ಗಗಳನ್ನು ವಿಭಾಗಮಾಡಿರುವುದರಿಂದ ಸಂಖ್ಯೆ ಹೆಚ್ಚಾಗಿದೆ. ಹೀಗೆಯೇ ಕಾಲವು ಗತಿಸಿದಂತೆ ಐದು ನೂರು ಸರ್ಗಗಳಿದ್ದುದು ೬೪೫ ಸರ್ಗಗಳಾಗಿರಬಹುದು.

ಈ ಸಂಖ್ಯೆಗೆ ಅನುಗುಣವಾಗಿ ವಿಭಾಗಿಸಿ ಲವ-ಕುಶರು ೩೨ ದಿವಸಗಳಲ್ಲಿ ರಾಮಾಯಣವನ್ನು ಹಾಡಿದರೆಂದು ಕೆಲವು ವಿದ್ವಾಂಸರು ನಿರ್ಣಯಿಸಿದ್ದಾರೆ ಮತ್ತು ಅವರು ಯಾವ ಯಾವ ದಿವಸ ಎಲ್ಲಿಗೆ ನಿಲ್ಲಿಸಿದರೆಂಬುದನ್ನು ಹೇಳಿದ್ದಾರೆ. ಪ್ರವಚನಕಾರರಿಗೆ ಅನುಕೂಲವಾಗಲೆಂಬ ಆಶಯದಿಂದ ಆ ಪಟ್ಟಿಯನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ.

ಬಾಲಕಾಂಡ

1ನೆಯ	ದಿವಸ	1ನೇ	ಸರ್ಗದಿಂದ	21ನೇ	ಸರ್ಗ ಪೂರ್ತಿ	21	ಸರ್ಗಗಳು
2ನೆಯ	ದಿವಸ	22	”	44	”	23	”
3	”	45	”	65	”	21	”
4	”	66	”	77	”	ಮತ್ತು	
ಅಯೋಧ್ಯಾ		1	”	9	”	21	ಸರ್ಗಗಳು
5	”	10	”	30	”	21	”
6	”	31	”	51	”	21	”
7	”	52	”	71	”	20	”
8	”	72	”	97	”	26	”
9	”	98	”	119	”	22	”
ಅರಣ್ಯಕಾಂಡ							
10	”	1	”	21	”	21	”
11	”	22	”	42	”	21	”
12	”	43	”	63	”	21	”
13	”	64	”	75	”	ಮತ್ತು	”
ಕಿಷ್ಕಿಂಧಾ		1	”	8	”	20	”

ಕಿಷ್ಕಿಂಧಾಕಾಂಡ							
14ನೆಯ	ದಿವಸ	9ನೇ	ಸರ್ಗದಿಂದ	29ನೇ	ಸರ್ಗ ಪೂರ್ತಿ	21	ಸರ್ಗಗಳು
15	”	30	”	50	”	21	”
16	”	51	”	67	”	ಮತ್ತು	
ಸುಂದರಕಾಂಡ		1	”	3	”	20	ಸರ್ಗಗಳು
17	”	4	”	23	”	20	ಸರ್ಗಗಳು
18	”	24	”	47	”	24	”
19	”	48	”	68	”	21	”
ಯುದ್ಧಕಾಂಡ							
20	”	1	”	24	”	24	”
21	”	25	”	50	”	26	”
22	”	51	”	70	”	20	”
23	”	71	”	90	”	20	”
24	”	91	”	111	”	21	”
25	”	112	”	128	”	17	”
ಉತ್ತರಕಾಂಡ							
26	”	1	”	20	”	20	”
27	”	21	”	40	”	20	”
28	”	41	”	60	”	20	”
29	”	61	”	80	”	20	”
30	”	81	”	98	”	18	”
31	”	99	”	105	”	7	”
32	”	106	”	111	”	6	”
						645	

ಆತ್ಮೋದ್ಧಾರಕಶ್ರೀರಾಮತಾರಕಮಂತ್ರಗಳು

ರಾಮರಹಸ್ಯೋಪನಿಷತ್ತಿನಲ್ಲಿ ೨ನೆಯ ಅಧ್ಯಾಯ
ರಾಮಮಂತ್ರಗಳ ವಿಭಿನ್ನಸ್ವರೂಪ, ವಿನಿಯೋಗ ಮತ್ತು ಧ್ಯಾನ

ಸನಕಾದಿಮಹರ್ಷಿಗಳು ಹನುಮಂತನನ್ನು ಪ್ರಶ್ನಿಸುತ್ತಾರೆ :

"ಮಹಾಬಲನಾದ ಆಂಜನೇಯನೇ! ತಾರಕಬ್ರಹ್ಮನಾದ ಶ್ರೀರಾಮನ ಮಂತ್ರಸಮುದಾಯದ ಸ್ವರೂಪವನ್ನು ಹೇಳು."

ಹನುಮಂತನು ಹೇಳುತ್ತಾನೆ :

ಏಕಾಕ್ಷರಶ್ರೀರಾಮಮಂತ್ರಃ

ವಹ್ನಿಸ್ಥಂ ಶಯನಂ ವಿಷ್ಣೋರರ್ಧಚನ್ದ್ರವಿಭೂಷಿತಮ್ ।
ಏಕಾಕ್ಷರೋ ಮನುಃ ಪ್ರೋಕ್ತೋ ಮನ್ತ್ರರಾಜಃ ಸುರದ್ರುಮಃ ॥

"ಅಗ್ನಿಬೀಜವಾದ ರೇಫಕ್ಕೆ (ರ್) ವಿಷ್ಣುಶಯ್ಯೆಯಾದ ಶೇಷವು ಅರ್ಥಾತ್ 'ಆ' ಕಾರವು ಸೇರಿ ಅದು ಅರ್ಧಚಂದ್ರರೂಪವಾದ ಅನುಸ್ವಾರ ದಿಂದ ವಿಭೂಷಿತವಾದರೆ–ಶ್ರೀರಾಮನ ಏಕಾಕ್ಷರಮಂತ್ರ "ರಾಂ" ಆಗುತ್ತದೆ. ಈ ಮಂತ್ರರಾಜವು ಕಲ್ಪವೃಕ್ಷಕ್ಕೆ ಸಮಾನವಾಗಿದ್ದು ಸಮಸ್ತಕಾಮನೆಗಳನ್ನೂ ಈಡೇರಿಸುತ್ತದೆ.

ಬ್ರಹ್ಮಾ ಮುನಿಃ ಸ್ಯಾದ್ಗಾಯತ್ರಛನ್ದೋ ರಾಮೋಽಸ್ಯ ದೇವತಾ ।
ದೀರ್ಘಾರ್ಧೇನ್ದುಯುಜಾಙ್ಗಾನಿ ಕುರ್ಯಾದ್ವಹ್ನ್ಯಾತ್ಮನೋ ಮನೋಃ ॥

ಬೀಜಶಕ್ತ್ಯಾದಿ ಬೀಜೇನ ಇಷ್ಟಾರ್ಥಂ ವಿನಿಯೋಜಯೇತ್ ।

ಈ ಮಂತ್ರಕ್ಕೆ ಬ್ರಹ್ಮಾ ಋಷಿಃ । ದೇವೀ ಗಾಯತ್ರೀ ಛನ್ದಃ । ಶ್ರೀರಾಮೋ ದೇವತಾ । ವಹ್ನಿಸ್ವರೂಪವಾದ (ರಕಾರರೂಪವಾದ) ಈ ಮಂತ್ರದೊಡನೆ ದೀರ್ಘಸ್ವರವನ್ನೂ ಮತ್ತು ಅರ್ಧಚಂದ್ರವನ್ನೂ ಸೇರಿಸಿ ಹಾಗೆ ಸಿದ್ಧವಾದ ಬೀಜಾಕ್ಷರದಿಂದ ಕರನ್ಯಾಸಾಂಗನ್ಯಾಸಗಳನ್ನು ಮಾಡಬೇಕು.

ಅಥ ಕರನ್ಯಾಸಃ :- **ರಾಂ ಅಙ್ಗುಷ್ಠಾಭ್ಯಾಂ ನಮಃ । ರೀಂ ತರ್ಜ-**

ನೀಭ್ಯಾಂ ನಮಃ । ರೂಂ ಮಧ್ಯಮಾಭ್ಯಾಂ ನಮಃ । ರೈಂ ಅನಾಮಿಕಾಭ್ಯಾಂ ನಮಃ । ರೌಂ ಕನಿಷ್ಠಿಕಾಭ್ಯಾಂ ನಮಃ। ರಃ ಕರತಲಕರಪೃಷ್ಠಾಭ್ಯಾಂ ನಮಃ॥

ಹೃದಯಾದಿ ಷಡಙ್ಗನ್ಯಾಸಃ :- ರಾಂ ಹೃದಯಾಯ ನಮಃ । ರೀಂ ಶಿರಸೇ ಸ್ವಾಹಾ । ರೂಂ ಶಿಖಾಯೈ ವಷಟ್ । ರೈಂ ಕವಚಾಯ ಹುಂ । ರೌಂ ನೇತ್ರತ್ರಯಾಯ ವೌಷಟ್ । ರಃ ಅಸ್ತ್ರಾಯ ಫಟ್ ॥ ರಾಂ ಬೀಜಂ ರಾಂ ಶಕ್ತಿಃ । ಅಭೀಷ್ಟಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಧ್ಯಾನಮ್ :-

ಸರಯೂತೀರಮನ್ದಾರವೇದಿಕಾಪಙ್ಕಜಾಸನೇ ।
ಶ್ಯಾಮಂ ವೀರಾಸನಾಸೀನಂ ಜ್ಞಾನಮುದ್ರೋಪಶೋಭಿತಮ್ ॥

ವಾಮೋರುನ್ಯಸ್ತತದ್ಧಸ್ತಂ ಸೀತಾಲಕ್ಷ್ಮಣಸಂಯುತಮ್ ।
ಅವೇಕ್ಷಮಾಣಮಾತ್ಮಾನಮಾತ್ಮನ್ಯಮಿತತೇಜಸಮ್ ॥

ಶುದ್ಧಸ್ಫಟಿಕಸಂಕಾಶಂ ಕೇವಲಂ ಮೋಕ್ಷಕಾಂಕ್ಷಯಾ ।
ಚಿನ್ತಯನ್ಪರಮಾತ್ಮಾನಂ ಭಾನುಲಕ್ಷಂ ಜಪೇನ್ಮನುಮ್ ॥

ಸರಯೂನದಿಯ ತೀರದಲ್ಲಿ ಮಂದಾರವೃಕ್ಷದ ತಳಭಾಗದಲ್ಲಿ ಕಮಲ ಪುಷ್ಪದಿಂದ ಆಚ್ಛಾದಿತವಾಗಿರುವ ಮಣಿಮಯವಾದ ವೇದಿಕೆಯಿದೆ. ಅದರ ಮೇಲೆ ಶ್ಯಾಮಲವರ್ಣನಾದ ಶ್ರೀರಾಮನು ವೀರಾಸನದಲ್ಲಿ ಕುಳಿತಿದ್ದಾನೆ. ಅವನ ಬಲಗೈ ಜ್ಞಾನಮುದ್ರೆಯಿಂದ* ಸುಶೋಭಿತವಾಗಿದೆ. ಅವನು ಎಡಗೈ

* ಜ್ಞಾನಮುದ್ರೆಯ ಲಕ್ಷಣವು ಹೀಗಿದೆ :
ತರ್ಜನ್ಯಙ್ಗುಷ್ಠಕೌ ಸಕ್ತಾವಗ್ರತೋ ಹೃದಿ ವಿನ್ಯಸೇತ್ ।
ವಾಮಂ ಹಸ್ತಾಮ್ಬುಜಂ ವಾಮೇ ಜಾನುಮೂರ್ಧನಿ ವಿನ್ಯಸೇತ್ ।
ಜ್ಞಾನಮುದ್ರಾ ಭವೇದೇಷಾ ರಾಮಚನ್ದ್ರಸ್ಯ ವಲ್ಲಭಾ ॥

ಬಲಗೈಯ್ಯಿನ ತೋರುಬೆರಳನ್ನೂ ಮತ್ತು ಹೆಬ್ಬೆರಳನ್ನೂ ಜೋಡಿಸಿ ಹೃದಯದ ನಡುವೆ ಇಟ್ಟುಕೊಳ್ಳಬೇಕು. ಅಂತೆಯೇ ಎಡಭಾಗದ ಕರಕಮಲವನ್ನು ಜೋಡಿಸಿ ಎಡತೊಡೆಯ ಮೇಲೆ ಇಟ್ಟುಕೊಳ್ಳಬೇಕು. ಇದಕ್ಕೆ ಜ್ಞಾನಮುದ್ರೆ ಎಂದು ಹೆಸರು. ಇದು ಶ್ರೀರಾಮನಿಗೆ ಅತ್ಯಂತಪ್ರಿಯವಾದುದು.

ಯನ್ನು ಎಡತೊಡೆಯ ಮೇಲೆ ಇಟ್ಟುಕೊಂಡಿದ್ದಾನೆ. ಅವನ ಎಡಪಾರ್ಶ್ವ ದಲ್ಲಿ ಸೀತಾದೇವಿಯೂ ಬಲಪಾರ್ಶ್ವದಲ್ಲಿ ಲಕ್ಷ್ಮಣನೂ ವಿರಾಜಮಾನರಾಗಿ ದ್ದಾರೆ. ಶ್ರೀರಾಮನು ಅಮಿತವಾದ ತೇಜಸ್ಸಿನಿಂದ ಕೂಡಿದ ತನ್ನ ಸ್ವರೂಪ ವನ್ನು ಹೃನ್ಮಂದಿರದಲ್ಲಿ ಕಾಣುತ್ತಿದ್ದಾನೆ. ಅವನ ಆ ದಿವ್ಯಸ್ವರೂಪವು ಶುದ್ಧಸ್ಫಟಿಕದಂತೆ ನಿರ್ಮಲವಾಗಿದೆ. ಅಂತಹ ಶ್ರೀರಾಮನ ದಿವ್ಯಸ್ವರೂಪವನ್ನು ಧ್ಯಾನಮಾಡುತ್ತಾ ಕೇವಲ ಮೋಕ್ಷಕಾಮಿಯಾಗಿ ಈ ಏಕಾಕ್ಷರಮಂತ್ರವನ್ನು ಹನ್ನೆರಡು ಲಕ್ಷ ಜಪಮಾಡಬೇಕು.

ದ್ವ್ಯಕ್ಷರಶ್ರೀರಾಮಮಂತ್ರಃ

ವಹ್ನಿರ್ನಾರಾಯಣೋ ನಾಡ್ಯೋ ಜಾಠರಃ ಕೇವಲೋऽಪಿ ಚ ।
ದ್ವ್ಯಕ್ಷರೋ ಮನ್ತ್ರರಾಜೋऽಯಂ ಸರ್ವಾಭೀಷ್ಟಪ್ರದಸ್ತತಃ ।
ಏಕಾಕ್ಷರೋಕ್ತಮೃಷ್ಯಾದಿಸ್ಯಾದಾದ್ಯೇನ ಷಡಙ್ಗಕಮ್ ॥

ವಹ್ನಿ (ರ್) ನಾರಾಯಣ (ಆ) ನಾಡಿ (ಮ್) ಜಾಠರ (ಅ) ಕೇವಲ (ಃ) ಇವೆಲ್ಲವೂ ಸೇರಿದರೆ 'ರಾಮಃ' ಎಂಬ ದ್ವ್ಯಕ್ಷರಮಂತ್ರವಾಗುತ್ತದೆ. ಈ ಮಂತ್ರರಾಜವು ಅಭೀಷ್ಟವಾದ ಫಲವನ್ನು ನೀಡುತ್ತದೆ. ಈ ದ್ವ್ಯಕ್ಷರರಾಮಮಂತ್ರದ ಋಷಿ-ಛಂದಸ್ಸು ಮತ್ತು ದೇವತೆಗಳು ಏಕಾಕ್ಷರ ಮಂತ್ರದಂತೆಯೇ (**ಬ್ರಹ್ಮಾ ಋಷಿಃ । ದೇವೀಗಾಯತ್ರೀ ಛನ್ದಃ । ಶ್ರೀರಾಮೋದೇವತಾ ।**) ಈ ಮಂತ್ರದ ಮೊದಲ ಅಕ್ಷರದೊಡನೆ ದೀರ್ಘಸ್ವರವನ್ನೂ ಅನುಸ್ವರವನ್ನೂ ಸೇರಿಸಿ ಷಡಂಗನ್ಯಾಸಮಾಡಬೇಕು. (ಏಕಾಕ್ಷರಮಂತ್ರದಂತೆಯೇ ಅಂಗನ್ಯಾಸ-ಕರನ್ಯಾಸಗಳು.)

ತ್ರ್ಯಕ್ಷರಶ್ರೀರಾಮಮಂತ್ರಃ

ತಾರಮಾಯಾರಮಾನಙ್ಗವಾಕ್ಸ್ವಬೀಜೈಶ್ಚ ಷಡ್ವಿಧಃ ।
ತ್ರ್ಯಕ್ಷರೋ ಮನ್ತ್ರರಾಜಃ ಸ್ಯಾತ್ಸರ್ವಾಭೀಷ್ಟಫಲಪ್ರದಃ ॥

ರಾಮಃ ಎಂಬ ದ್ವ್ಯಕ್ಷರರಾಮಮಂತ್ರಕ್ಕೆ ಮೊದಲು ತಾರ (ಓಂ) ಮಾಯಾ (ಹ್ರೀಂ) ರಮಾ (ಶ್ರೀಂ) ಅನಂಗ (ಕ್ಲೀಂ) ವಾಕ್ (ಐಂ) ಸ್ವಬೀಜ (ರಾಂ) ಈ ಆರು ಪ್ರಕಾರವಾದ ಬೀಜಾಕ್ಷರಗಳು ಒಟ್ಟುಗೂಡಿದರೆ

ಆರು ವಿಧವಾದ ತ್ರ್ಯಕ್ಷರರಾಮಮಂತ್ರಗಳಾಗುತ್ತವೆ. ಓಂ ರಾಮಃ । ಹ್ರೀಂ ರಾಮಃ ।। ಶ್ರೀಂ ರಾಮಃ । ಕ್ಲೀಂ ರಾಮಃ । ಐಂ ರಾಮಃ। ರಾಂ ರಾಮಃ। ಈ ತ್ರ್ಯಕ್ಷರರಾಮಮಂತ್ರಜಪದಿಂದ ಸಕಲವಾದ ಅಭೀಷ್ಟಗಳೂ ಸಿದ್ಧಿಸುತ್ತವೆ.

ಚತುರಕ್ಷರಶ್ರೀರಾಮಮಂತ್ರಃ

ದ್ವ್ಯಕ್ಷರಶ್ಚನ್ದ್ರಭದ್ರಾನ್ತೋ ದ್ವಿವಿಧಶ್ಚತುರಕ್ಷರಃ ।
ಋಷ್ಯಾದಿ ಪೂರ್ವವತ್ ಜ್ಞೇಯಮೇತಯೋಶ್ಚ ವಿಚಕ್ಷಣೈಃ ॥

ದ್ವ್ಯಕ್ಷರಮಂತ್ರವಾದ ರಾಮಃ ಎಂಬ ಮಂತ್ರದ ಕಡೆಯಲ್ಲಿ ಚಂದ್ರ ಮತ್ತು ಭದ್ರ ಎಂಬ ಪದಗಳನ್ನು ಸೇರಿಸಿದರೆ ಚತುರಕ್ಷರರಾಮಮಂತ್ರವಾಗು ತ್ತದೆ. ರಾಮಚಂದ್ರಃ । ರಾಮಭದ್ರಃ । – ವಿದ್ವಾಂಸರು ಈ ಚತುರಕ್ಷರ ರಾಮಮಂತ್ರಕ್ಕೂ ಋಷ್ಯಾದಿಗಳನ್ನು ಹಿಂದಿನಂತೆಯೇ ಹೇಳಬೇಕೆಂದು ಹೇಳುತ್ತಾರೆ.

ಪಂಚಾಕ್ಷರಶ್ರೀರಾಮಮಂತ್ರಃ

ಸುಪ್ರತಿಷ್ಠೌ ರಮೌ ವಾಯೌ ಹೃತ್ಪಞ್ಚಾರ್ಣೋ ಮನುರ್ಮತಃ ।
ವಿಶ್ವಾಮಿತ್ರಋಷಿಃ ಪ್ರೋಕ್ತೋ ಪಙ್ಕ್ತಿಶ್ಛನ್ದೋಽಸ್ಯ ದೇವತಾ ॥

ರಾಮಭದ್ರೋ ಬೀಜಶಕ್ತಿಃ ಪ್ರಥಮಾರ್ಣಮಿತಿ ಕ್ರಮಾತ್ ।
ಭ್ರೂಮಧ್ಯೇ ಹೃದಿ ನಾಭ್ಯೂರ್ವೋಃ ಪಾದಯೋರ್ವಿನ್ಯಸೇನ್ಮನುಮ್ ॥

ಪ್ರತಿಷ್ಠಾ (ಆ) ಸಹಿತವಾದ (ರ್) ಮತ್ತು (ಮ್) ಅರ್ಥಾತ್ 'ರಾಮಾ' ಶಬ್ದಕ್ಕೆ ಮುಂದೆ 'ಆಯ' ಶಬ್ದವನ್ನು ಸೇರಿಸಿ ಹೃದಯ (ನಮಃ) ಪದವನ್ನು ಸೇರಿಸಿದರೆ ಪಂಚಾಕ್ಷರಶ್ರೀರಾಮಮಂತ್ರವಾಗುತ್ತದೆ. "ರಾಮಾಯ ನಮಃ"

ಈ ಪಂಚಾಕ್ಷರರಾಮಮಂತ್ರಕ್ಕೆ ವಿಶ್ವಾಮಿತ್ರಋಷಿಃ । ಪಙ್ಕ್ತಿಃ ಛಂದಃ। ರಾಮಭದ್ರೋ ದೇವತಾ । ರಾಂ ಬೀಜಂ । ಮಾಂ ಶಕ್ತಿಃ । ರಾಂ ಭ್ರೂಮಧ್ಯೇ । ಮಾಂ ಹೃದಿ । ಯಂ ನಾಭೌ । ನಂ ಊರುದ್ವಯೇ । ಮಃ ಪಾದದ್ವಯೇ । ಇತಿ ನ್ಯಾಸಂ ಕುರ್ಯಾತ್ ॥

ಷಡಙ್ಗಂ ಪೂರ್ವವದ್ವಿದ್ಯಾನ್ಮನ್ತ್ರಾರ್ಣೈರ್ಮನುನಾಸ್ತ್ರಕಮ್ ।

ಷಡಂಗನ್ಯಾಸವನ್ನು ಹಿಂದಿನಂತೆಯೇ ಮಾಡಬೇಕು. ಮೂಲಮಂತ್ರದಿಂದ ಅಸ್ತ್ರಾಯ ಫಟ್ ಮಾಡಬೇಕು.

ಅಥ ಕರನ್ಯಾಸಃ :- ರಾಂ ಅಂಗುಷ್ಠಿಕಾಭ್ಯಾಂ ನಮಃ। ಮಾಂ ತರ್ಜನೀಭ್ಯಾಂ ನಮಃ । ಯಂ ಮಧ್ಯಮಾಭ್ಯಾಂ ನಮಃ । ನಂ ಅನಾಮಿ-ಕಾಭ್ಯಾಂ ನಮಃ । ಮಃ ಕನಿಷ್ಠಿಕಾಭ್ಯಾಂ ನಮಃ । ರಾಮಾಯ ನಮಃ ಕರತಲಕರಪೃಷ್ಠಾಭ್ಯಾಂ ನಮಃ ॥

ಅಥ ಹೃದಯಾದಿನ್ಯಾಸಃ :- ರಾಂ ಹೃದಯಾಯ ನಮಃ । ಮಾಂ ಶಿರಸೇ ಸ್ವಾಹಾ । ಯಂ ಶಿಖಾಯೈ ವಷಟ್ । ನಂ ಕವಚಾಯ ಹುಂ । ಮಃ ನೇತ್ರತ್ರಯಾಯ ವೌಷಟ್ । ರಾಮಾಯ ನಮಃ ಅಸ್ತ್ರಾಯ ಷಟ್ ॥

ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ । ಧ್ಯಾನಮ್ :-

ಮಧ್ಯೇವನಂ ಕಲ್ಪತರೋರ್ಮೂಲೇ ಪುಷ್ಪಲತಾಸನೇ ।
ಲಕ್ಷ್ಮಣೇನ ಪ್ರಗುಣಿತಮಕ್ಷ್ಣಃ ಕೋಣೇನ ಸಾಯಕಮ್ ॥

ಅವೇಕ್ಷಮಾಣಂ ಜಾನಕ್ಯಾ ಕೃತವ್ಯಜನಮೀಶ್ವರಮ್ ।
ಜಟಾಭಾರಲಸಚ್ಛೀರ್ಷಂ ಶ್ಯಾಮಂ ಮುನಿಗಣಾವೃತಮ್ ॥

ಲಕ್ಷ್ಮಣೇನ ಧೃತಚ್ಛತ್ರಮಥವಾ ಪುಷ್ಪಕೋಪರಿ ।
ದಶಾಸ್ಯಮಥನಂ ಶಾನ್ತಂ ಸಸುಗ್ರೀವವಿಭೀಷಣಮ್ ।
ಏವಂ ಲಬ್ಧ್ವಾ ಜಯಾರ್ಥೀ ತು ವರ್ಣಲಕ್ಷಂ ಜಪೇನ್ಮನುಮ್ ॥

ವನವಾಸಕಾಲದಲ್ಲಿ ಅರಣ್ಯದ ಮಧ್ಯದಲ್ಲಿ ಕಲ್ಪವೃಕ್ಷದ ಕೆಳಭಾಗದಲ್ಲಿರುವ ಪುಷ್ಪಲತೆಯ ಆಸನದ ಮೇಲೆ ಶ್ರೀರಾಮನು ಕುಳಿತಿದ್ದಾನೆ. ಲಕ್ಷ್ಮಣನಿಂದ ಹೆದೆಯೇರಿಸಲ್ಪಡುತ್ತಿದ್ದ ಬಾಣವನ್ನು ಶ್ರೀರಾಮನು ಕಡೆಗಣ್ಣಿನಿಂದ ನೋಡುತ್ತಿದ್ದಾನೆ. ಜಾನಕಿಯು ಬೀಸಣಿಗೆಯಿಂದ ಗಾಳಿಯನ್ನು ಬೀಸುತ್ತಿದ್ದಾಳೆ. ಶ್ರೀರಾಮನ ತಲೆಯು ಜಟೆಯ ಭಾರದಿಂದ ಸುಶೋಭಿತವಾಗಿದೆ. ಅವನ ಶರೀರವು ಶ್ಯಾಮಲವರ್ಣದಿಂದ ಸುಶೋಭಿಸುತ್ತಿದೆ. ಅವನ ಸುತ್ತಲೂ ಮುನಿಜನರು ಕುಳಿತಿದ್ದಾರೆ.

ಅಥವಾ

ಶ್ರೀರಾಮನು ಪುಷ್ಪಕವಿಮಾನದಲ್ಲಿ ಕುಳಿತಿದ್ದಾನೆ. ಲಕ್ಷ್ಮಣನು ಅವನ ತಲೆಯ ಮೇಲೆ ಶ್ವೇತಚ್ಛತ್ರಿಯನ್ನು ಹಿಡಿದಿದ್ದಾನೆ. ರಾವಣನನ್ನು ಸಂಹರಿಸಿದ ಶ್ರೀರಾಮನು ಶಾಂತನಾಗಿ ಸುಗ್ರೀವ-ವಿಭೀಷಣರೊಡನೆ ಪುಷ್ಪಕ ವಿಮಾನದಲ್ಲಿ ಕುಳಿತಿದ್ದಾನೆ. ಇಂತಹ ಶ್ರೀರಾಮನನ್ನು ಧ್ಯಾನಮಾಡಿ ಕಾರ್ಯದ ಜಯವನ್ನು ಅಪೇಕ್ಷಿಸುವ ಸಾಧಕನು ಮಂತ್ರದ ಅಕ್ಷರಗಳ ಸಂಖ್ಯೆಗೆ ಅನುಗುಣವಾಗಿ ಐದು ಲಕ್ಷ ಜಪವನ್ನು ಮಾಡಬೇಕು.

ಷಡಕ್ಷರಶ್ರೀರಾಮಮಂತ್ರಃ

ಸ್ವಕಾಮಶಕ್ತಿವಾಗ್ಲಕ್ಷ್ಮೀಸ್ತವಾದ್ಯಾಃ ಪಞ್ಚವರ್ಣಕಾಃ ।
ಷಡಕ್ಷರಃ ಷಡ್ವಿಧಃ ಸ್ಯಾಚ್ಚತುರ್ವರ್ಗಫಲಪ್ರದಃ ॥

ಸ್ವಬೀಜ (ರಾಂ) ಕಾಮಬೀಜ (ಕ್ಲೀಂ) ಶಕ್ತಿಬೀಜ (ಹ್ರೀಂ) ವಾಗ್ಬೀಜ (ಐಂ) ಲಕ್ಷ್ಮೀಬೀಜ (ಶ್ರೀಂ) ಸ್ತವಬೀಜ (ಓಂ) ಈ ಬೀಜಾಕ್ಷರಗಳನ್ನು ಪಂಚಾಕ್ಷರಮಂತ್ರದ ಮೊದಲು ಸೇರಿಸಿದರೆ ಷಡಕ್ಷರ ರಾಮಮಂತ್ರವಾಗುತ್ತದೆ. ಈ ಮಹಾಮಂತ್ರದ ಜಪವು ಚತುರ್ವಿಧಪುರು ಷಾರ್ಥಗಳನ್ನೂ ಸಿದ್ಧಿಸಿಕೊಡುತ್ತದೆ.

(1) ರಾಂ ರಾಮಾಯ ನಮಃ (2) ಕ್ಲೀಂ ರಾಮಾಯ ನಮಃ (3) ಹ್ರೀಂ ರಾಮಾಯ ನಮಃ (4) ಐಂ ರಾಮಾಯ ನಮಃ (5) ಶ್ರೀಂ ರಾಮಾಯ ನಮಃ (6) ಓಂ ರಾಮಾಯ ನಮಃ ॥

ಪಞ್ಚಾಶನ್ಮಾತೃಕಾಮನ್ತ್ರ ವರ್ಣಪ್ರತ್ಯೇಕಪೂರ್ವಕಮ್ ।
ಲಕ್ಷ್ಮೀವಾಙ್ಮನ್ಮಥಾರಿಶ್ಚ ತಾರಾದಿಃ ಸ್ಯಾದನೇಕಧಾ ॥

ಶ್ರೀಮಾಯಾಮನ್ಮಥೈಕೈಕಂ ಬೀಜಾದ್ಯನ್ತರ್ಗತೋ ಮನುಃ ।
ಚತುರ್ವರ್ಣಃ ಸ ಏವಃ ಸ್ಯಾತ್ ಷಡ್ವರ್ಣೋ ವಾಂಛಿತಪ್ರದಃ ॥

ಅಕಾರವೇ ಮೊದಲಾಗಿ ಐವತ್ತು ಅಕ್ಷರಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಪಂಚಾಕ್ಷರರಾಮಮಂತ್ರದೊಡನೆ ಸೇರಿಸಿದರೆ ಅದೂ ಷಡಕ್ಷರರಾಮ ಮಂತ್ರವಾಗುತ್ತದೆ. ಅಂ ರಾಮಾಯ ನಮಃ । ಆಂ ರಾಮಾಯ ನಮಃ ।

ಇಂ ರಾಮಾಯ ನಮಃ । ಈಂ ರಾಮಾಯ ನಮಃ । ಇತ್ಯಾದಿ. ಪಂಚಾಕ್ಷರ ಮಂತ್ರದ ಆದಿಯಲ್ಲಿ ಶ್ರೀಂ-ಐಂ-ಕ್ಲೀಂ-ಓಂ ಎಂಬ ಬೀಜಾಕ್ಷರಗಳನ್ನು ಸೇರಿಸಿದರೆ ಅದೂ ಷಡಕ್ಷರರಾಮಮಂತ್ರವಾಗುತ್ತದೆ.

ಶ್ರೀಬೀಜ (ಶ್ರೀಂ) ಮಾಯಾಬೀಜ (ಹ್ರೀಂ) ಕಾಮಬೀಜ (ಕ್ಲೀಂ) ಈ ಬೀಜಾಕ್ಷರಗಳನ್ನು ಚತುರಕ್ಷರರಾಮಮಂತ್ರದ ಮುಂದೆ ಮತ್ತು ಹಿಂದೆ ಸೇರಿಸಿ ಹೇಳಿದರೆ ಅದೂ ಷಡಕ್ಷರರಾಮಮಂತ್ರವಾಗುತ್ತದೆ.

ಶ್ರೀಂ ರಾಮಚಂದ್ರಃ ಶ್ರೀಂ । ಹ್ರೀಂ ರಾಮಚಂದ್ರಃ ಹ್ರೀಂ । ಕ್ಲೀಂ ರಾಮಚಂದ್ರಃ ಕ್ಲೀಂ । ಶ್ರೀಂ ರಾಮಭದ್ರಃ ಶ್ರೀಂ । ಹ್ರೀಂ ರಾಮಭದ್ರಃ ಹ್ರೀಂ। ಕ್ಲೀಂ ರಾಮಭದ್ರಃ ಕ್ಲೀಂ । ಈ ವಿಧವಾದ ಷಡಕ್ಷರರಾಮಮಂತ್ರ ಗಳು ಜಪಮಾಡಿದವರಿಗೆ ಮನೋವಾಂಛಿತವಾದ ಫಲಗಳನ್ನು ಕೊಡುತ್ತವೆ.

ಸ್ವಾಹಾನ್ತೋ ಹುಂ ಫಡನ್ತೋ ವಾ ನತ್ಯನ್ತೋ ವಾ ಭವೇದಯಮ್ ।
ಅಷ್ಟಾವಿಂಶತ್ಯುತ್ತರಶತಭೇದಃ ಷಡ್ವರ್ಣ ಈರಿತಃ ॥

ರಾಂ ರಾಮಾಯ ನಮಃ ಎಂಬ ಪದವು ಸ್ವಾಹಾಂತವಾಗಿ–ಹುಂ ಫಟ್ ಅಂತವಾಗಿ ಅಥವಾ ನಮಃ ಅಂತವಾಗಿಯೂ ಇರಬಹುದು. ರಾಂರಾಮಾಯ ಸ್ವಾಹಾ । ರಾಂ ರಾಮಾಯ ಹುಂ ಫಟ್ । ರಾಂ ರಾಮಾಯ ನಮಃ ।

ಹೀಗೆ ರಾಮಷಡಕ್ಷರೀಮಂತ್ರದ ೧೨೮ ಭೇದಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ.

ಬ್ರಹ್ಮಾ ಸಮ್ಮೋಹನಃ ಶಕ್ತಿರ್ದಕ್ಷಿಣಾಮೂರ್ತಿರೇವ ಚ ।
ಅಗಸ್ತ್ಯಶ್ಚ ಶಿವಃ ಪ್ರೋಕ್ತಾ ಮುನಯೋಽನುಕ್ರಮಾಸ್ತು ಯೇ ॥

ಬ್ರಹ್ಮಾ, ಸಮ್ಮೋಹನ, ಶಕ್ತಿ, ದಕ್ಷಿಣಾಮೂರ್ತಿ, ಅಗಸ್ತ್ಯ ಮತ್ತು ಶಿವ– ಇವರು ಅನುಕ್ರಮವಾಗಿ ಆರು ವಿಧ ಮಂತ್ರಗಳಿಗೂ ಋಷಿಗಳಾಗಿದ್ದಾರೆ.

ಛನ್ದೋ ಗಾಯತ್ರಸಂಜ್ಞಂ ಚ ಶ್ರೀರಾಮಶ್ಚೈವ ದೇವತಾ ।
ಅಥವಾ ಕಾಮಬೀಜಾದೇರ್ವಿಶ್ವಾಮಿತ್ರೋ ಮುನಿರ್ಮನೋಃ ॥

ಛನ್ದೋ ದೇವ್ಯಾದಿ ಗಾಯತ್ರೀ ರಾಮಭದ್ರೋಽಸ್ಯ ದೇವತಾ ।
ಬೀಜಶಕ್ತೀ ಯಥಾಪೂರ್ವಂ ಷಡ್ವರ್ಣಾನ್ವಿನ್ಯಸೇತ್ಕ್ರಮಾತ್ ॥

ಬ್ರಹ್ಮರನ್ದ್ರೇ ಭ್ರುವೋರ್ಮಧ್ಯೇ ಹೃನ್ನಾಭ್ಯೋರುಷು ಪಾದಯೋಃ ।
ಬೀಜೈಃ ಷಡ್ದೀರ್ಘಯುಕ್ತೈರ್ವಾ ಮನ್ತ್ರಾರ್ಣೋ ವಾ ಷಡಙ್ಗಕಮ್ ॥

ಈ ಎಲ್ಲ ಮಂತ್ರಗಳಿಗೂ ಗಾಯತ್ರೀ ಛಂದಃ । ಶ್ರೀರಾಮೋ ದೇವತಾ। ಅಥವಾ ಕ್ಲೀಂ ರಾಮಾಯ ನಮಃ । ಎಂಬುದರಿಂದ ಮುಂದಿನ ಎಲ್ಲ ಷಡಕ್ಷರರಾಮಮಂತ್ರಗಳಿಗೂ **ವಿಶ್ವಾಮಿತ್ರ ಋಷಿಃ ।ದೇವೀ ಗಾಯತ್ರೀ ಛಂದಃ । ಶ್ರೀರಾಮಭದ್ರೋ ದೇವತಾ ।** ಎಂದೂ ಹೇಳಬಹುದು.

ರಾಮಷಡ್ವಿಧಮಂತ್ರಸ್ವರೂಪಮ್

ಷಡ್ವಿಧಮನ್ತ್ರಸ್ವರೂಪಮ್	ಋಷಿಃ	ಛಂದಃ	ದೇವತಾ
ರಾಂ ರಾಮಾಯ ನಮಃ	ಬ್ರಹ್ಮಾ	ಗಾಯತ್ರೀ	ಶ್ರೀರಾಮಃ
ಕ್ಲೀಂ ರಾಮಾಯ ನಮಃ	ಸಮ್ಮೋಹನಃ	ಗಾಯತ್ರೀ	ಶ್ರೀರಾಮಃ
ಹ್ರೀಂ ರಾಮಾಯ ನಮಃ	ಶಕ್ತಿಃ	ಗಾಯತ್ರೀ	ಶ್ರೀರಾಮಃ
ಐಂ ರಾಮಾಯ ನಮಃ	ದಕ್ಷಿಣಾಮೂರ್ತಿಃ	ಗಾಯತ್ರೀ	ಶ್ರೀರಾಮಃ
ಶ್ರೀಂ ರಾಮಾಯ ನಮಃ	ಅಗಸ್ತ್ಯಃ	ಗಾಯತ್ರೀ	ಶ್ರೀರಾಮಃ
ಶ್ರೀಂ ರಾಮಾಯ ನಮಃ	ಶಿವಃ	ಗಾಯತ್ರೀ	ಶ್ರೀರಾಮಃ

ರಾಂ ಬೀಜಂ । ಮಾಂ ಶಕ್ತಿಃ । ರಾಂ ಬ್ರಹ್ಮರಂಧ್ರೇ । ರಾಂ ಭ್ರುವೋ ರ್ಮಧ್ಯೇ । ಮಾಂ ಹೃದಿ । ಯಂ ನಾಭೌ । ನಂ ಊರೌ । ಮಂ ಪಾದಯೋಃ ಎಂದು ಹೇಳಿಕೊಂಡು ಅಂಗನ್ಯಾಸಮಾಡಬೇಕು. ಅನುಸ್ವಾರಯುಕ್ತವಾದ ದೀರ್ಘಸ್ವರದಿಂದ ಯುಕ್ತವಾದ 'ರ' ಕಾರದಿಂದ ಅಂಗನ್ಯಾಸ-ಕರನ್ಯಾಸ ಗಳನ್ನು ಮಾಡಬೇಕು. **ರಾಂ–ಅಂಗುಷ್ಠಿಕಾಭ್ಯಾಂ ನಮಃ–ಇತ್ಯಾದಿ. ಅಸ್ತ್ರಾಯ ಫಟ್ ॥**

ಭೂರ್ಭುವಸ್ಸುವರೋಮಿತಿ ದಿಗ್ಬಂಧಃ । ಧ್ಯಾನಂ :–

ಕಾಲಾಮ್ಭೋಧರಕಾನ್ತಿಕಾನ್ತಮನಿಶಂ ವೀರಾಸನಾಧ್ಯಾಸಿತಂ
ಮುದ್ರಾಂ ಜ್ಞಾನಮಯೀಂ ದಧಾನಮಪರಂ ಹಸ್ತಾಮ್ಬುಜಂ ಜಾನುನಿ ।

ಸೀತಾಂ ಪಾರ್ಶ್ವಗತಾಂ ಸರೋರುಹಕರಾಂ ವಿದ್ಯುನ್ನಿಭಾಂ ರಾಘವಮ್ ।
ಪಶ್ಯನ್ತಂ ಮುಕುಟಾಙ್ಗದಾದಿವಿವಿಧಾಕಲ್ಪೋಜ್ಜ್ವಲಾಙ್ಗಂ ಭಜೇ ॥

ಭಗವಾನ್ ಶ್ರೀರಾಮನ ಅಂಗಕಾಂತಿಯು ಮೇಘದ ಕಾಂತಿಯಂತೆ ಶ್ಯಾಮಲವಾಗಿದೆ. ಅವನು ವೀರಾಸನದಲ್ಲಿ ಕುಳಿತಿದ್ದಾನೆ. ಬಲಗೈಯಲ್ಲಿ ಜ್ಞಾನಮುದ್ರೆಯನ್ನು ಧರಿಸಿ ಎಡಗೈಯನ್ನು ಎಡತೊಡೆಯ ಮೇಲೆ ಇಟ್ಟು ಕೊಂಡಿದ್ದಾನೆ. ಶ್ರೀರಾಮನ ಎಡಪಕ್ಕದಲ್ಲಿ ವಿದ್ಯುತ್ತಿನಂತೆ ಪ್ರಕಾಶಿಸುತ್ತಿರುವ ಸೀತಾದೇವಿಯು ಕೈಯಲ್ಲಿ ಕಮಲವನ್ನು ಹಿಡಿದು ಕುಳಿತಿದ್ದಾಳೆ. ಅವಳನ್ನು ಶ್ರೀರಾಮಚಂದ್ರನು ನೋಡುತ್ತಿದ್ದಾನೆ. ಅವನ ದಿವ್ಯಶರೀರವು ಕಿರೀಟ ದಿಂದಲೂ, ಕನಕಾಂಗದ-ಕೇಯೂರಾದಿ ಆಭರಣಗಳಿಂದಲೂ, ದಿವ್ಯ ವಸ್ತ್ರಗಳಿಂದಲೂ ಸಿಂಗರಿಸಲ್ಪಟ್ಟಿದೆ. ಅಂತಹ ಉಜ್ಜ್ವಲಪ್ರಕಾಶನಾದ ಶ್ರೀರಾಮಚಂದ್ರನನ್ನು ಭಜಿಸುತ್ತೇನೆ. (ಧ್ಯಾನಮಾಡುತ್ತೇನೆ.)

ಉತ್ತರಾಂಗನ್ಯಾಸವನ್ನು ಮಾಡಿ ಜಪವನ್ನು ಮುಗಿಸಬೇಕು.

ಸಪ್ತಾಕ್ಷರಶ್ರೀರಾಮಮಂತ್ರಃ

ಶ್ರೀರಾಮಚನ್ದ್ರಭದ್ರಾನ್ತೋ ಙೇನ್ತೋ ನತಿಯುತೋ ದ್ವಿಧಾ ।
ಸಪ್ತಾಕ್ಷರೋ ಮನ್ತ್ರರಾಜಃ ಸರ್ವಕಾಮಫಲಪ್ರದಃ ॥

ರಾಮಶಬ್ದದ ಕಡೆಯಲ್ಲಿ ಚಂದ್ರ ಅಥವಾ ಭದ್ರ ಎಂಬ ಪದಗಳನ್ನು ಸೇರಿಸಬೇಕು. ರಾಮಚಂದ್ರ ಅಥವಾ ರಾಮಭದ್ರ ಎಂಬ ಪದಗಳ ಚತುರ್ಥೀ ವಿಭಕ್ತಿಯೊಡನೆ (ರಾಮಚಂದ್ರಾಯ-ರಾಮಭದ್ರಾಯ) ನಮಃ ಎಂಬ ಪದ ವನ್ನು ಸೇರಿಸಿದರೆ ಸಪ್ತಾಕ್ಷರರಾಮಮಂತ್ರವಾಗುತ್ತದೆ. ರಾಮಚಂದ್ರಾಯ ನಮಃ । ರಾಮಭದ್ರಾಯ ನಮಃ । ಈ ಸಪ್ತಾಕ್ಷರರಾಮಮಂತ್ರದ ಪುನಶ್ಚರಣೆಯು ಸಕಲವಿಧವಾದ ಕಾಮನೆಗಳನ್ನೂ ಈಡೇರಿಸಿಕೊಡುತ್ತದೆ.

ಅಷ್ಟಾಕ್ಷರಶ್ರೀರಾಮಮಂತ್ರಃ

ತಾರಾದಿಸಹಿತಃ ಸೋಽಪಿ ದ್ವಿವಿಧೋಽಷ್ಟಾಕ್ಷರೋ ಮತಃ ।
ತಾರಂ ರಾಮಚತುರ್ಥ್ಯನ್ತಃ ಕ್ರೋಡಾಸ್ತ್ರಂ ವಹ್ನಿತಲ್ಪಗಾ ॥

ಅಷ್ಟಾರ್ಣೋಽಯಂ ಪರೋ ಮನ್ತ್ರರ್ಋಷ್ಯಾದಿಃ ಸ್ಯಾತ್ ಷಡರ್ಣವತ್ ।

ಪುನರಷ್ಟಾಕ್ಷರಸ್ಯಾಥ ರಾಮ ಏವ ಋಷಿಃ ಸ್ಮೃತಃ ।
ಗಾಯತ್ರಂ ಛನ್ದ ಇತ್ಯಸ್ಯ ದೇವತಾ ರಾಮ ಏವ ಚ ॥

ರಾಮಚಂದ್ರಾಯ ನಮಃ । ರಾಮಭದ್ರಾಯ ನಮಃ । ಎಂಬ ಸಪ್ತಾಕ್ಷರೀಮಂತ್ರಗಳನ್ನು ಓಂಕಾರದೊಡನೆ ಸೇರಿಸಿ ಓಂ ರಾಮಚಂದ್ರಾಯ ನಮಃ। ಓಂ ರಾಮಭದ್ರಾಯ ನಮಃ। ಎಂದು ಹೇಳಿದರೆ ಅದೇ ಎರಡು ವಿಧವಾದ ಅಷ್ಟಾಕ್ಷರರಾಮಮಂತ್ರವಾಗುತ್ತದೆ. ತಾರ (ಓಂ) ಚತುರ್ಥ್ಯಂತವಾದ ರಾಮಶಬ್ದ (ರಾಮಾಯ) ಕ್ರೋಡಾಸ್ತ್ರ (ಹುಂ ಫಟ್) ವಹ್ನಿತಲ್ಪಗಾ (ಸ್ವಾಹಾ) ಓಂ ರಾಮಾಯ ಹುಂಫಟ್ ಸ್ವಾಹಾ । ಇದು ಅತ್ಯಂತಶ್ರೇಷ್ಠವಾದ ಅಷ್ಟಾಕ್ಷರರಾಮಮಂತ್ರವಾಗಿದೆ. ಷಡಕ್ಷರಮಂತ್ರ ದಂತೆಯೇ ಇದಕ್ಕೆ ಋಷಿ, ಛಂದಸ್ಸು ಮತ್ತು ದೇವತೆಗಳು. ಇದಕ್ಕೆ ಅತಿರಿಕ್ತವಾದ ಬೇರೆಯ ಅಷ್ಟಾಕ್ಷರರಾಮಮಂತ್ರಕ್ಕೆ ಶ್ರೀರಾಮನೇ ಋಷಿ. ಗಾಯತ್ರಿಯೇ ಛಂದಸ್ಸು. ಶ್ರೀರಾಮನೇ ದೇವತೆ.

ತಾರಂ ಶ್ರೀಬೀಜಯುಗ್ಮಂ ಚ ಬೀಜಶಕ್ತ್ಯಾದಯೋ ಮತಃ ।
ಷಡಙ್ಗಂ ಚ ತತಃ ಕುರ್ಯಾನ್ಮನ್ತ್ರಾರ್ಣೈರೇವ ಬುದ್ಧಿಮಾನ್ ॥

ತಾರ (ಓಂ), ಎರಡು ಶ್ರೀಬೀಜಾಕ್ಷರಗಳು (ಶ್ರೀಂ ಶ್ರೀಂ) ಇವು ಕ್ರಮವಾಗಿ ಅಷ್ಟಾಕ್ಷರಮಂತ್ರಕ್ಕೆ ಬೀಜ ಮತ್ತು ಶಕ್ತಿಗಳಾಗಿವೆ. ಓಂ ಬೀಜಂ । ಶ್ರೀಂ ಶ್ರೀಂ ಶಕ್ತಿಃ । ಅನಂತರ ಬುದ್ಧಿವಂತನಾದ ಮನುಷ್ಯನು ಮಂತ್ರಾಕ್ಷರಗಳಿಂದ ಷಡಂಗನ್ಯಾಸವನ್ನು ಮಾಡಬೇಕು. ಧ್ಯಾನಾದಿಗಳು ಹಿಂದಿನಂತೆಯೇ.

ಶಿವೋಮಾರಾಮಅಷ್ಟಾಕ್ಷರಶ್ರೀರಾಮಮಂತ್ರಃ

ತಾರಂ ಶ್ರೀಬೀಜಯುಗ್ಮಂ ಚ ರಾಮಾಯ ನಮ ಉಚ್ಚರೇತ್ ।
ಗ್ಲೌಮೋಂ ಬೀಜಂ ವದೇನ್ಮಾಯಾಂ ಹೃದ್ರಾಮಾಯ ಪುನಶ್ಚ ತಾಮ್ ।
ಶಿವೋಮಾರಾಮಮನ್ತ್ರೋಽಯಂ ವಸ್ವರ್ಣಸ್ತು ವಸುಪ್ರದಃ ॥

ಓಂ ಶ್ರೀಂ ಶ್ರೀಂ ರಾಮಾಯ ನಮಃ। ಓಂ ಹ್ರೀಂ ನಮೋ ರಾಮಾಯ ಹ್ರೀಂ । ಅಥವಾ ಓಂಕಾರದ ಸ್ಥಾನದಲ್ಲಿ (ಗ್ಲೌಂ) ಎಂದೂ

ಇಟ್ಟುಕೊಳ್ಳಬಹುದು. ಇದು ಶಿವೋಮಾರಾಮಮಂತ್ರವಾಗುತ್ತದೆ. ಇದು ಅಷ್ಟಾಕ್ಷರಮಂತ್ರ. ಐಶ್ವರ್ಯಪ್ರದವಾದುದು.

ಋಷಿಃ ಸದಾಶಿವಃ ಪ್ರೋಕ್ತೋ ಗಾಯತ್ರಂ ಛನ್ದ ಉಚ್ಯತೇ ।
ಶಿವೋಮಾರಾಮಚನ್ದ್ರೋऽತ್ರ ದೇವತಾ ಪರಿಕೀರ್ತಿತಾ ।

ಈ ಮಂತ್ರಕ್ಕೆ ಸದಾಶಿವಋಷಿಃ । ಗಾಯತ್ರೀ ಛಂದಃ । ಶಿವೋಮಾರಾಮಚಂದ್ರೋ ದೇವತಾ ।

ದೀರ್ಘಯಾ ಮಾಯಯಾಜ್ಞಾಗ್ನಿ ತಾರಪಞ್ಚಾರ್ಣಯುಕ್ತಯಾ ।

ದೀರ್ಘಸ್ವರಯುಕ್ತವಾದ ಮಾಯಾಬೀಜ (ಹ್ರಾಂ) ದೊಡನೆ ಪ್ರಣವ ಯುಕ್ತವಾದ (ಓಂ) ಪಂಚಾಕ್ಷರಮಂತ್ರದ ಮೂಲಕವಾಗಿ (ನಮೋ ರಾಮಾಯ) ಷಡಂಗನ್ಯಾಸವನ್ನು ಮಾಡಬೇಕು.

ಅಥ ಕರನ್ಯಾಸಃ :-ಹ್ರಾಂ ಓಂ ನಮೋ ರಾಮಾಯ ಅಂಗುಷ್ಠಾಭ್ಯಾಂ ನಮಃ । ಹ್ರೀಂ ಓಂ ನಮೋ ರಾಮಾಯ ತರ್ಜನೀಭ್ಯಾಂ ನಮಃ । ಹ್ರೂಂ ಓಂ ನಮೋ ರಾಮಾಯ ಮಧ್ಯಮಾಭ್ಯಾಂ ನಮಃ । ಹೈಂ ಓಂ ನಮೋ ರಾಮಾಯ ಅನಾಮಿಕಾಭ್ಯಾಂ ನಮಃ । ಹ್ರೌಂ ಓಂ ನಮೋ ರಾಮಾಯ ಕನಿಷ್ಠಿಕಾಭ್ಯಾಂ ನಮಃ । ಹ್ರಃ ಓಂ ನಮೋ ರಾಮಾಯ ಕರತಲಕರ-ಪೃಷ್ಠಾಭ್ಯಾಂ ನಮಃ ॥ ಏವಂ ಹೃದಯಾದಿನ್ಯಾಸಃ ॥

ಭೂರ್ಭುವಃಸುವರೋಮಿತಿ ದಿಗ್ಬನ್ಧಃ । ಧ್ಯಾನಮ್ ॥

ರಾಮಂ ತ್ರಿಣೇತ್ರಂ ಸೋಮಾರ್ಧಧಾರಿಣಂ ಶೂಲಿನಂ ಪರಮ್ ।
ಭಸ್ಮೋದ್ಧೂಲಿತಸರ್ವಾಙ್ಗಂ ಕಪರ್ದಿನಮುಪಾಸ್ಮಹೇ ॥

ತ್ರಿಣೇತ್ರನಾದ, ಅರ್ಧಚಂದ್ರನನ್ನೂ ಶೂಲವನ್ನೂ ಧರಿಸಿರುವ, ಸರ್ವಾಂಗಗಳನ್ನೂ ಭಸ್ಮದಿಂದ ಲೇಪಿಸಿಕೊಂಡಿರುವ, ಜಟಾಜೂಟನಾದ, ಶಿವಸ್ವರೂಪನಾದ ಶ್ರೀರಾಮಚಂದ್ರನನ್ನು ಉಪಾಸನೆಮಾಡುತ್ತೇನೆ.

ರಾಮಾಭಿರಾಮಾಂ ಸೌನ್ದರ್ಯಸೀಮಾಂ ಸೋಮಾವತಂಸಿತಾಮ್ ।
ಪಾಶಾಙ್ಕುಶಧನುರ್ಬಾಣಧರಾಂ ಧ್ಯಾಯೇತ್ತ್ರಿಲೋಚನಾಮ್ ॥

ಯಾವಳು ರಮಣಿಯರಲ್ಲಿಯೇ ಸರ್ವಾಧಿಕಸೌಂದರ್ಯವತಿಯಾಗಿರು

ವಳೋ, ಸೌಂದರ್ಯಸೀಮಾಪ್ರಾಯಳಾಗಿರುವಳೋ, ಚಂದ್ರನು ಯಾವಳ ಶಿರೋಭೂಷಣವಾಗಿರುವನೋ, ಯಾವಳು ಪಾಶಾಂಕುಶ-ಧನುರ್ಬಾಣ ಗಳನ್ನು ಹಿಡಿದಿರುವಳೋ, ಯಾವಳು ತ್ರಿಲೋಚನೆಯೋ ಅಂತಹ ಉಮಾ ದೇವಿಯನ್ನು ನಾನು ಶ್ರೀರಾಮನ ಪತ್ನಿಯಾದ ಸೀತೆಯೆಂದು ಭಾವಿಸಿ ಧ್ಯಾನ ಮಾಡುತ್ತೇನೆ.

ಧ್ಯಾಯನ್ನೇವಂ ವರ್ಣಲಕ್ಷಂ ಜಪತರ್ಪಣತತ್ಪರಃ ।
ಬಿಲ್ವಪತ್ರೈಃ ಫಲೈಃ ಪುಷ್ಪೈಸ್ತಿಲಾಜ್ಯೈಃ ಪಙ್ಕಜೈರ್ಹುನೇತ್ ॥

ಹೀಗೆ ಧ್ಯಾನಮಾಡಿ ಜಪತರ್ಪಣತತ್ಪರನಾಗಿ ಮಂತ್ರದಲ್ಲಿರುವ ಅಕ್ಷರ ಗಳಿಗೆ ಅನುಗುಣವಾಗಿ ಈ ಅಷ್ಟಾಕ್ಷರಮಹಾಮಂತ್ರವನ್ನು ಎಂಟು ಲಕ್ಷ ಜಪ ಮಾಡಬೇಕು. ಬಿಲ್ವಪತ್ರ, ಫಲ-ಪುಷ್ಪ, ಎಳ್ಳು-ತುಪ್ಪ ಮತ್ತು ಕಮಲಪತ್ರ ಗಳಿಂದ ಹೋಮಮಾಡಬೇಕು.

ಸ್ವಯಮಾಯಾನ್ತಿ ನಿಧಯಃ ಸಿದ್ಧಯಶ್ಚ ಸುರೇಪ್ಸಿತಾಃ ।

ಈ ಅಷ್ಟಾಕ್ಷರಮಂತ್ರವನ್ನು ಎಂಟು ಲಕ್ಷ ಜಪಮಾಡುವುದರಿಂದ ಸಮಸ್ತನಿಧಿಗಳೂ ತಾವಾಗಿಯೇ ಸಾಧಕನ ಬಳಿಗೆ ಬರುತ್ತವೆ. ದೇವತೆಗಳು ಬಯಸುವ ಸಿದ್ಧಿಗಳು ಕೂಡ ಸುಲಭವಾಗಿ ಲಭಿಸುತ್ತವೆ.

ಪುನರಷ್ಟಾಕ್ಷರಸ್ಯಾಥ ಬ್ರಹ್ಮಗಾಯತ್ರರಾಘವಾಃ ॥

ಶ್ರೀರಾಮಃ ಶರಣಂ ಮಮ ಎಂಬ ಮತ್ತೊಂದು ಅಷ್ಟಾಕ್ಷರ ಮಂತ್ರಕ್ಕೆ ಬ್ರಹ್ಮಾ ಋಷಿಃ । ಗಾಯತ್ರೀ ಛಂದಃ । ಶ್ರೀರಾಘವೋ ದೇವತಾ ।

ಋಷ್ಯಾದಯಸ್ತು ವಿಜ್ಞೇಯಾಃ ಶ್ರೀಬೀಜಂ ನಮಶಕ್ತಿಕಮ್ ।
ತತ್ಪ್ರೀತ್ಯೈ ವಿನಿಯೋಗಶ್ಚ ಮನ್ತ್ರಾರ್ಣೈರಙ್ಗಕಲ್ಪನಾ ॥

ಈ ಅಷ್ಟಾಕ್ಷರಮಂತ್ರಕ್ಕೆ ಮೇಲೆ ಹೇಳಿರುವಂತೆ ಋಷಿ-ಛಂದಸ್ಸು-ದೇವತೆಗಳನ್ನು ತಿಳಿದುಕೊಳ್ಳಬೇಕು. ಶ್ರೀಂ ಬೀಜಂ । ನಮಃ ಶಕ್ತಿಃ । ಶ್ರೀರಾಘವನ ಪ್ರೀತ್ಯರ್ಥವಾಗಿ ಈ ಅಷ್ಟಾಕ್ಷರಮಂತ್ರದ ಜಪವನ್ನು ಮಾಡ

ಬೇಕು. ಮಂತ್ರಗಳ ಅಕ್ಷರಗಳಿಂದಲೇ ಹಿಂದೆ ಹೇಳಿರುವಂತೆ ಕರನ್ಯಾಸ-ಅಂಗ ನ್ಯಾಸಗಳನ್ನು ಮಾಡಬೇಕು.

ಭೂರ್ಭುವಸ್ಸುವರೋಮಿತಿ ದಿಗ್ಬಂಧಃ । ಧ್ಯಾನಂ :-

ಕೇಯೂರಾಙ್ಗದಕಙ್ಕಣೈರ್ಮಣಿಗಣೈರ್ವಿದ್ಯೋತಮಾನಂ ಸದಾ
ರಾಮಂ ಪಾರ್ವಣಚನ್ದ್ರಕೋಟಿಸದೃಶಚ್ಛತ್ರೇಣ ವೈ ರಾಜತಮ್ ॥
ಹೇಮಸ್ತಮ್ಭಸಹಸ್ರಷೋಡಶಯುತೇ ಮಧ್ಯೇ ಮಹಾಮಣ್ಡಪೇ
ದೇವೇಶಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಮ್ ॥

ಯಾವನು ಮಣಿಮಯವಾದ ಕೇಯೂರ-ಅಂಗದ-ಕಂಕಣಗಳಿಂದ ಸರ್ವಕಾಲದಲ್ಲಿಯೂ ಪ್ರಕಾಶಮಾನವಾಗಿ ಕಾಣುತ್ತಿರುವನೋ, ಹುಣ್ಣಿಮೆಯ ಕೋಟಿಚಂದ್ರರ ಪ್ರಭೆಗೆ ಸಮಾನವಾದ ಪ್ರಭೆಯುಳ್ಳ ಶ್ವೇತಚ್ಛತ್ರದಿಂದ ದೇದೀಪ್ಯಮಾನನಾಗಿ ಕಾಣುತ್ತಿರುವನೋ, ಸುವರ್ಣಮಯವಾದ ಸಾವಿರ ಕಂಬಗಳ ಮಧ್ಯದಲ್ಲಿರುವ ಮಹಾಮಂಟಪದಲ್ಲಿ ಭರತಾದಿಗಳಿಂದ ಪರಿವೃತನಾಗಿರುವನೋ—ಅಂತಹ ಶ್ಯಾಮಲವರ್ಣನಾದ ದೇವೇಶನಾದ ಶ್ರೀರಾಮನನ್ನು ಧ್ಯಾನಮಾಡುತ್ತೇನೆ.

ಕಿಂ ಮನ್ತ್ರೈರ್ಬಹುಭಿರ್ವಿನಶ್ವರಫಲೈರಾಯಾಸಸಾಧ್ಯೈರ್ವೃಥಾ
ಕಿಂಚಿಲ್ಲೋಭವಿತಾನಮಾತ್ರವಿಫಲೈಃ ಸಂಸಾರದುಃಖಾವಹೈಃ ।
ಏಕಂ ಸನ್ನಪಿ ಸರ್ವಮನ್ತ್ರಫಲದೋ ಲೋಭಾದಿದೋಷೋಜ್ಝಿತಃ
ಶ್ರೀರಾಮಃ ಶರಣಂ ಮಮೇತಿ ಸತತಂ ಮನ್ತ್ರೋಽಯಮಷ್ಟಾಕ್ಷರಃ ॥

ಕೇವಲ ಶ್ರಮಸಾಧ್ಯವಾದ, ನಶ್ವರವಾದ ಫಲಗಳನ್ನೀಯುವ, ಸಾಂಸಾರಿಕವಾದ ದುಃಖಗಳನ್ನು ಕೊಡುವ ಹಲವಾರು ಮಂತ್ರಗಳ ವ್ಯರ್ಥವಾದ ಅನುಷ್ಠಾನದಿಂದ ಯಾವ ಲಾಭವಿದೆ? ಕೆಲವು ಮಂತ್ರಗಳು ಆಶೆಯನ್ನೇ ಹೆಚ್ಚುಮಾಡುತ್ತಿದ್ದು ಮನುಷ್ಯನ ಜೀವನವನ್ನೇ ವಿಫಲಗೊಳಿಸುತ್ತವೆ. ಯಾವುದು ಏಕಮಾತ್ರಮಾಂತ್ರವಾಗಿದ್ದರೂ ಸಮಸ್ತಮಂತ್ರಗಳ ಪುನಶ್ಚರಣೆಯಿಂದ ಲಭಿಸುವ ಫಲಗಳೆಲ್ಲವನ್ನೂ ಕೊಡುವುದಾಗಿದೆಯೋ, ಲೋಭಾದಿ ದೋಷಗಳಿಂದ ರಹಿತವಾಗಿರುವುದೋ ಅಂತಹ—'ಶ್ರೀರಾಮಃ ಶರಣಂ

ಮಮ'–ಎಂಬ ಅಷ್ಟಾಕ್ಷರಮಂತ್ರವನ್ನು ಸರ್ವಕಾಲದಲ್ಲಿಯೂ ಜಪಿಸುತ್ತಿರಬೇಕು.

ನವಾಕ್ಷರಶ್ರೀರಾಮಮಂತ್ರಃ

ಏವಮಷ್ಟಾಕ್ಷರಃ ಸಮ್ಯಕ್ ಸಪ್ತಧಾ ಪರಿಕೀರ್ತಿತಃ ।
ರಾಮಸಪ್ತಾಕ್ಷರೋ ಮನ್ತ್ರ ಆದ್ಯನ್ತೇ ತಾರಸಂಯುತಃ ॥

ನವಾರ್ಣೋ ಮನ್ತ್ರರಾಜಸ್ಯಾಚ್ಛೇಷಂ ಷಡರ್ಣವನ್ನ್ಯಸೇತ್ ।

ಓಂ ರಾಮಚಂದ್ರಾಯ ನಮಃ । ಓಂ ರಾಮಾಯ ಹುಂ ಫಟ್ ಸ್ವಾಹಾ । ಓಂ ಶ್ರೀಂ ಶ್ರೀಂ ರಾಮಾಯ ನಮಃ । ಓಂ ಹ್ರೀಂ ನಮೋ ರಾಮಾಯ ಹ್ರೀಂ । ಗ್ಲೌಂ ಶ್ರೀಂ ಶ್ರೀಂ ರಾಮಾಯ ನಮಃ । ಗ್ಲೌಂ ಹ್ರೀಂ ನಮೋ ರಾಮಾಯ ಹ್ರೀಂ । ಶ್ರೀರಾಮಃ ಶರಣಂ ಮಮ ॥

ಹೀಗೆ ಏಳು ಬಗೆಯ ಅಷ್ಟಾಕ್ಷರರಾಮಮಂತ್ರಗಳನ್ನು ಹೇಳಿಯಾಯಿತು. ರಾಮನ ರಾಮಚಂದ್ರಾಯ ನಮಃ ಅಥವಾ ರಾಮಭದ್ರಾಯ ನಮಃ ಎಂಬ ಸಪ್ತಾಕ್ಷರಮಂತ್ರಕ್ಕೆ ಆದಿ ಮತ್ತು ಅಂತ್ಯದಲ್ಲಿ ಪ್ರಣವವನ್ನು ಸೇರಿಸಿದರೆ (ಓಂ ರಾಮಚಂದ್ರಾಯ ನಮಃ ಓಂ । ಓಂ ರಾಮಭದ್ರಾಯ ನಮಃ ಓಂ) ನವಾಕ್ಷರರಾಮಮಂತ್ರವಾಗುತ್ತದೆ. ಇದರ ಅಂಗನ್ಯಾಸ-ಕರನ್ಯಾಸಗಳು ಷಡಕ್ಷರಮಂತ್ರದಂತೆಯೇ.

ದಶಾಕ್ಷರಶ್ರೀರಾಮಮಂತ್ರಃ

ಜಾನಕೀವಲ್ಲಭಂ ಙೇನ್ತಂ ವಹ್ನೇರ್ಜಾಯಾಹುತಾದಿಕಮ್ ।
ದಶಾಕ್ಷರೋಽಯಂ ಮನ್ತ್ರಃ ಸ್ಯಾತ್ಸರ್ವಾಭೀಷ್ಟಫಲಪ್ರದಃ ॥

ಚತುರ್ಥ್ಯಂತವಾದ ಜಾನಕೀವಲ್ಲಭಶಬ್ದಕ್ಕೆ (ಜಾನಕೀವಲ್ಲಭಾಯ) ಹುಂ ಮತ್ತು ಸ್ವಾಹಾ ಶಬ್ದಗಳನ್ನು ಸೇರಿಸಿದರೆ (ಜಾನಕೀವಲ್ಲಭಾಯ ಹುಂ ಸ್ವಾಹಾ) ದಶಾಕ್ಷರಮಂತ್ರವಾಗುತ್ತದೆ. ಈ ದಶಾಕ್ಷರಮಂತ್ರದ ಪುನಶ್ಚರಣೆಯು ಸರ್ವಾಭೀಷ್ಟಫಲದಾಯಕವಾದುದು.

ದಶಾಕ್ಷರಸ್ಯ ಮನ್ತ್ರಸ್ಯ ವಸಿಷ್ಠೋಽಸ್ಯ ಋಷಿರ್ವಿರಾಟ್ ।

ಛನ್ದೋಽಸ್ಯ ದೇವತಾ ರಾಮಃ ಸೀತಾಪಾಣಿಪರಿಗ್ರಹಃ ।
ಆದ್ಯೋ ಬೀಜಂ ದ್ವಿಠಃ ಶಕ್ತಿಃ ಕಾಮೇನಾಙ್ಗಕ್ರಿಯಾ ಮತಾ ॥

ದಶಾಕ್ಷರರಾಮಂತ್ರಕ್ಕೆ ವಸಿಷ್ಠಋಷಿಃ । ವಿರಾಟ್‌ಛಂದಃ । ಸೀತಾ ಪಾಣಿಗ್ರಾಹೀ ಶ್ರೀರಾಮಚಂದ್ರೋ ದೇವತಾ । ಓಂ ಬೀಜಂ । ಸ್ವಾಹಾ ಶಕ್ತಿಃ । ದೀರ್ಘಸ್ವರಯುಕ್ತವಾದ ಕಾಮಬೀಜದಿಂದ (ಕ್ಲೀಂ) ಅಂಗನ್ಯಾಸ-ಕರನ್ಯಾಸಗಳನ್ನು ಮಾಡಬೇಕು.

ಶಿರೋಲಲಾಟಭ್ರೂಮಧ್ಯೇ ತಾಲುಕರ್ಣೇಷು ಹೃದ್ಯಪಿ ।
ನಾಭ್ಯೂರುಜಾನುಪಾದೇಷು ದಶಾರ್ಣಾನ್ವಿನ್ಯಸೇನ್ಮನೋಃ ॥

ಮಂತ್ರದ ಹತ್ತು ಅಕ್ಷರಗಳಿಂದ ಅನುಕ್ರಮವಾಗಿ ಶಿರಸ್ಸು-ಲಲಾಟಗಳಲ್ಲಿ ಅಂಗನ್ಯಾಸವನ್ನು ಮಾಡಬೇಕು. ಜಾಂ ಶಿರಸಿ । ನಂ ಲಲಾಟೇ । ಕೀಂ ಭ್ರೂಮಧ್ಯೇ । ವಂ ತಾಲೌ । ಲಂ ಕರ್ಣಯೋಃ । ಭಾಂ ಹೃದಿ । ಯಂ ನಾಭೌ । ಹುಂ ಊರೌ । ಸ್ವಾಂ ಜಾನುನಿ । ಹಾಂ ಪಾದಯೋಃ ॥

ಭೂರ್ಭುವಃಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ಅಯೋಧ್ಯಾನಗರೇ ರತ್ನಚಿತ್ರೇ ಸೌವರ್ಣಮಣ್ಡಪೇ ।
ಮನ್ದಾರಪುಷ್ಪೈರಾಬದ್ಧವಿತಾನೇ ತೋರಣಾಂಚಿತೇ ॥

ಸಿಂಹಾಸನೇ ಸಮಾಸೀನಂ ಪುಷ್ಪಕೋಪರಿ ರಾಘವಮ್ ।
ರಕ್ಷೋಭಿರ್ಹರಿಭಿರ್ದೇವೈರ್ದಿವ್ಯಯಾನಗತೈಃ ಶುಭೈಃ ॥

ಸಂಸ್ತೂಯಮಾನಂ ಮುನಿಭಿಃ ಪ್ರಹ್ವೈಶ್ಚ ಪರಿಸೇವಿತಮ್ ।
ಸೀತಾಲಂಕೃತವಾಮಾಙ್ಗಂ ಲಕ್ಷ್ಮಣೇನೋಪಸೇವಿತಮ್ ।
ಶ್ಯಾಮಂ ಪ್ರಸನ್ನವದನಂ ಸರ್ವಾಭರಣಭೂಷಿತಮ್ ॥

ದಿವ್ಯವಾದ ಅಯೋಧ್ಯಾಪಟ್ಟಣದಲ್ಲಿ ರತ್ನಗಳಿಂದ ಚಿತ್ರಿಸಲ್ಪಟ್ಟಿರುವ ಒಂದು ಸುವರ್ಣಮಯ ಮಂಟಪವಿದೆ. ಆ ಮಂಟಪವು ಮಂದಾರಪುಷ್ಪಗಳಿಂದ ಸಮಲಂಕೃತವಾಗಿದೆ. ಅದರ ಸುತ್ತಲೂ ತೋರಣಗಳು ಕಟ್ಟಲ್ಪಟ್ಟಿವೆ. ಆ ಮಂಟಪದಲ್ಲಿರುವ ಪುಷ್ಪಕವಿಮಾನದಲ್ಲಿರುವ ಸಿಂಹಾಸನದಲ್ಲಿ

ಶ್ರೀರಾಮನು ಕುಳಿತಿದ್ದಾನೆ. ಆ ಪುಷ್ಪಕವಿಮಾನದ ಒಂದು ಕಡೆಯಲ್ಲಿ ಶುಭ ಸ್ವರೂಪರಾದ ದೇವತೆಗಳೂ, ವಾನರರೂ, ರಾಕ್ಷಸರೂ, ಮಹರ್ಷಿಗಳೂ ವಿನೀತರಾಗಿ ಕುಳಿತು ಶ್ರೀರಾಮನನ್ನು ಸ್ತೋತ್ರಮಾಡುತ್ತಿದ್ದಾರೆ. ಶ್ರೀರಾಮನ ಎಡಭಾಗವು ಸೀತಾದೇವಿಯಿಂದ ಸಮಲಂಕೃತವಾಗಿದೆ. ಬಲಭಾಗದಲ್ಲಿ ಲಕ್ಷ್ಮಣನು ನಿಂತಿದ್ದಾನೆ. ಅಂತಹ ಸರ್ವಾಭರಣಭೂಷಿತನಾದ, ಪ್ರಸನ್ನವದನನಾದ, ಶ್ಯಾಮಲವರ್ಣನಾದ ಶ್ರೀರಾಮನನ್ನು ಧ್ಯಾನಮಾಡ ಬೇಕು.

ಧ್ಯಾಯನ್ನೇವಂ ಜಪೇನ್ಮನ್ತ್ರಂ ವರ್ಣಲಕ್ಷಮನನ್ಯಧೀಃ ॥

ಶ್ರೀರಾಮನ ಇಂತಹ ದಿವ್ಯಸ್ವರೂಪವನ್ನೇ ಮನಸ್ಸಿನಲ್ಲಿ ಧ್ಯಾನ ಮಾಡುತ್ತಾ ಅನನ್ಯಚಿತ್ತನಾಗಿ ಸಾಧಕನು ದಶಾಕ್ಷರಮಂತ್ರದ ಹತ್ತು ಲಕ್ಷ ಜಪವನ್ನು ಮಾಡಬೇಕು.

ರಾಮಂ ಙೇನ್ತಂ ಧನುಷ್ಪಾಣಯೇಽನ್ತಃ ಸ್ಯಾದ್ವಹ್ನಿಸುನ್ದರೀ ।
ದಶಾಕ್ಷರೋಽಯಂ ಮನ್ತ್ರಸ್ಸ್ಯಾನ್ಮುನಿರ್ಬ್ರಹ್ಮಾ ವಿರಾಟ್ ಸ್ಮೃತಃ ॥

ಛನ್ದಸ್ತು ದೇವತಾ ಪ್ರೋಕ್ತೋ ರಾಮೋ ರಾಕ್ಷಸಮರ್ದನಃ ।
ಶೇಷಂ ತು ಪೂರ್ವವತ್ಕುರ್ಯಾಚ್ಚಾಪಬಾಣಧರಂ ಸ್ಮರೇತ್ ॥

ಚತುರ್ಥೀವಿಭಕ್ತ್ಯಂತವಾದ ರಾಮ ಶಬ್ದಕ್ಕೆ (ರಾಮಾಯ) ಧನುಷ್ಪಾಣಯೇ ಎಂಬ ಪದವನ್ನು ಸೇರಿಸಿ ಕಡೆಯಲ್ಲಿ ವಹ್ನಿಸುಂದರಿಯನ್ನು (ಸ್ವಾಹಾ ಪದವನ್ನು) ಸೇರಿಸಿದರೆ ಇದು ಮತ್ತೊಂದು ದಶಾಕ್ಷರರಾಮ ಮಂತ್ರವಾಗುತ್ತದೆ. **ರಾಮಾಯ ಧನುಷ್ಪಾಣಯೇ ಸ್ವಾಹಾ ।** ಇದಕ್ಕೆ **ಬ್ರಹ್ಮಾ ಋಷಿಃ । ವಿರಾಟ್ ಛಂದಃ । ರಾಕ್ಷಸಮರ್ದನಶ್ರೀರಾಮಚಂದ್ರೋ ದೇವತಾ ।** ಹಿಂದಿನಂತೆ ಅಂಗನ್ಯಾಸ-ಕರನ್ಯಾಸಗಳನ್ನು ಮಾಡಬೇಕು. ಧನು ರ್ಬಾಣಗಳನ್ನು ಧರಿಸಿರುವ ಶ್ರೀರಾಮನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಜಪಮಾಡಬೇಕು.

ಏಕಾದಶಾಕ್ಷರಶ್ರೀರಾಮಮಂತ್ರಃ

ತಾರಮಾಯಾರಮಾನಙ್ಗವಾಕ್ಸ್ವಬೀಜೈಶ್ಚ ಷಡ್ವಿಧಃ ।
ದಶಾರ್ಣೋ ಮನ್ತ್ರರಾಜಃ ಸ್ಯಾದ್ರುದ್ರವರ್ಣಾತ್ಮಕೋ ಮನುಃ ॥

ದಶಾಕ್ಷರಶ್ರೀರಾಮಮಂತ್ರಕ್ಕೆ (ರಾಮಾಯ ಧನುಷ್ಪಾಣಯೇ ಸ್ವಾಹಾ) ಅನುಕ್ರಮವಾಗಿ ತಾರ (ಓಂ) ಮಾಯಾ (ಹ್ರೀಂ) ರಮಾ (ಶ್ರೀಂ) ಅನಂಗ (ಕ್ಲೀಂ) ವಾಕ್ (ಐಂ) ಸ್ವಬೀಜ (ರಾಂ) ಈ ಬೀಜಾಕ್ಷರಗಳನ್ನು ಮೊದಲು ಸೇರಿಸಿ ಹೇಳಿದರೆ ಆರು ವಿಧವಾದ ಏಕಾದಶಾಕ್ಷರ ರಾಮಮಂತ್ರಗಳಾಗುತ್ತವೆ. ಓಂ ರಾಮಾಯ ಧನುಷ್ಪಾಣಯೇ ಸ್ವಾಹಾ ।ಹ್ರೀಂ ರಾಮಾಯ ಧನುಷ್ಪಾಣಯೇ ಸ್ವಾಹಾ ।ಶ್ರೀಂ ರಾಮಾಯ ಧನುಷ್ಪಾಣಯೇ ಸ್ವಾಹಾ । ಕ್ಲೀಂ ರಾಮಾಯ ಧನುಷ್ಪಾಣಯೇ ಸ್ವಾಹಾ । ಐಂ ರಾಮಾಯ ಧನುಷ್ಪಾಣಯೇ ಸ್ವಾಹಾ । ರಾಂ ರಾಮಾಯ ಧನುಷ್ಪಾಣಯೇ ಸ್ವಾಹಾ ॥

ಶೇಷಂ ಷಡರ್ಣವತ್ ಜ್ಞೇಯಂ ನ್ಯಾಸಧ್ಯಾನಾದಿಕಂ ಬುಧೈಃ ।

ಇದಕ್ಕೆ ಅಂಗನ್ಯಾಸ-ಕರನ್ಯಾಸ-ಧ್ಯಾನಾದಿಗಳು ಷಡಕ್ಷರರಾಮಮಂತ್ರದ ಅನುಸಾರವಾಗಿಯೇ–ಎಂದು ವಿದ್ವಾಂಸರು ತಿಳಿಯಬೇಕು.

ದ್ವಾದಶಾಕ್ಷರಶ್ರೀರಾಮಮಂತ್ರಃ

ದ್ವಾದಶಾಕ್ಷರಮನ್ತ್ರಸ್ಯ ಶ್ರೀರಾಮಋಷಿರುಚ್ಯತೇ ॥

ಜಗತೀಛನ್ದ ಇತ್ಯುಕ್ತಂ ಶ್ರೀರಾಮೋ ದೇವತಾ ಮತಾ ।
ಪ್ರಣವೋ ಬೀಜಮಿತ್ಯುಕ್ತಃ ಕ್ಲೀಂ ಶಕ್ತಿರ್ಹ್ರೀಂ ಚ ಕೀಲಕಮ್ ॥

ಮುಂದೆ ಹೇಳಲಿರುವ ದ್ವಾದಶಾಕ್ಷರರಾಮಮಂತ್ರಕ್ಕೆ

ಶ್ರೀರಾಮ ಋಷಿಃ । ಜಗತೀ ಛಂದಃ । ಶ್ರೀರಾಮೋ ದೇವತಾ । ಓಂ ಬೀಜಂ । ಕ್ಲೀಂ ಶಕ್ತಿಃ । ಹ್ರೀಂ ಕೀಲಕಂ ।

ಮನ್ತ್ರೇಣಾಙ್ಗಾನಿ ವಿನ್ಯಸ್ಯ ಶಿಷ್ಟಂ ಪೂರ್ವವದಾಚರೇತ್ ।

ಮಂತ್ರವರ್ಣಗಳಿಂದ ಅಂಗನ್ಯಾಸವನ್ನು ಮಾಡಿ ಉಳಿದ ಕರನ್ಯಾಸ-ಧ್ಯಾನಾದಿಗಳನ್ನು ಹಿಂದಿನಂತೆಯೇ ಮಾಡಬೇಕು.

ತಾರಂ ಮಾಯಾಂ ಸಮುಚ್ಚಾರ್ಯ ಭರತಾಗ್ರಜ ಇತ್ಯಪಿ ॥

ರಾಮಂ ಕ್ಲೀಂ ವಹ್ನಿಜಾಯಾನ್ತಂ ಮನ್ತ್ರೋಽಯಂ ದ್ವಾದಶಾಕ್ಷರಃ ।
ಓಂ ಹೃದ್ಭಗವತೇ ರಾಮಚನ್ದ್ರ ಭದ್ರೌ ಚ ಙೇಯುತೌ ॥

ಅರ್ಕಾರ್ಣೋ ದ್ವಿವಿಧೋಽಪ್ಯಸ್ಯ ಋಷಿಧ್ಯಾನಾದಿ ಪೂರ್ವವತ್ ।
ಛನ್ದಸ್ತು ಜಗತೀ ಚೈವ ಮನ್ತ್ರಾರ್ಣೈರಙ್ಗಕಲ್ಪನಾ ॥

ಓಂ ಹ್ರೀಂ ಭರತಾಗ್ರಜ ರಾಮ ಕ್ಲೀಂ ಸ್ವಾಹಾ । ಓಂ ನಮೋ ಭಗವತೇ ರಾಮಚನ್ದ್ರಾಯ । ಓಂ ನಮೋ ಭಗವತೇ ರಾಮ ಭದ್ರಾಯ । ಈ ಮೂರು ದ್ವಾದಶಾಕ್ಷರಶ್ರೀರಾಮಮಂತ್ರಗಳು. ಋಷಿ-ಛಂದಸ್ಸು-ದೇವತಾದಿಗಳು ಹಿಂದಿನಂತೆಯೇ. ಮಂತ್ರಗಳಲ್ಲಿರುವ ಅಕ್ಷರ ಗಳಿಂದ ಅಂಗನ್ಯಾಸವನ್ನು ಮಾಡಬೇಕು.

ತ್ರಯೋದಶಾಕ್ಷರಶ್ರೀರಾಮಮಂತ್ರಃ

ಶ್ರೀರಾಮೇತಿ ಪದಂ ಚೋಕ್ತ್ವಾ ಜಯ ರಾಮ ತತಃ ಪರಮ್ ।
ಜಯದ್ವಯಂ ವದೇತ್ಪ್ರಾಜ್ಞೋ ರಾಮೇತಿ ಮನುರಾಜಕಃ ॥

ತ್ರಯೋದಶಾರ್ಣ ಋಷ್ಯಾದಿ ಪೂರ್ವವತ್ಸರ್ವಕಾಮದಃ ।
ಪದದ್ವಯದ್ವಿರಾವೃತ್ತೇರಙ್ಗಂ ಧ್ಯಾನಂ ದಶಾರ್ಣವತ್ ॥

'ಶ್ರೀರಾಮ ಜಯರಾಮ ಜಯ ಜಯರಾಮ'–ಇದು ಮಂತ್ರಗಳಿಗೆ ರಾಜನಾಗಿದ್ದು ತ್ರಯೋದಶಾಕ್ಷರರಾಮಮಂತ್ರವಾಗಿದೆ. ಇದಕ್ಕೆ ಋಷಿ-ಛಂದಸ್ಸು-ದೇವತಾದಿಗಳು ಹಿಂದಿನಂತೆಯೇ. ಎರಡೆರಡು ಪದ ಗಳನ್ನು ಸೇರಿಸಿ ಕರನ್ಯಾಸ-ಅಂಗನ್ಯಾಸಗಳನ್ನು ಮಾಡಬೇಕು.

ಅಥ ಕರನ್ಯಾಸಃ :- ಶ್ರೀರಾಮ ಜಯ–ಅಙ್ಗುಷ್ಠಾಭ್ಯಾಂ ನಮಃ । ರಾಮ ಜಯ ತರ್ಜನೀಭ್ಯಾಂ ನಮಃ । ಜಯ ರಾಮ ಮಧ್ಯಮಾಭ್ಯಾಂ ನಮಃ । ಶ್ರೀರಾಮ ಜಯ–ಅನಾಮಿಕಾಭ್ಯಾಂ ನಮಃ । ರಾಮ ಜಯ–ಕನಿಷ್ಠಿ ಕಾಭ್ಯಾಂ ನಮಃ । ಜಯ ರಾಮ–ಕರತಲಕರಪೃಷ್ಠಾಭ್ಯಾಂ ನಮಃ । ಏವಂ ಹೃದಯಾದಿನ್ಯಾಸಃ ॥ ಧ್ಯಾನವು ದಶಾಕ್ಷರಮಂತ್ರದಲ್ಲಿರುವಂತೆಯೇ.

ಚತುರ್ದಶಾಕ್ಷರಶ್ರೀರಾಮಮಂತ್ರಃ

ತಾರಾದಿಸಹಿತಃ ಸೋಽಪಿ ಸ ಚತುರ್ದಶವರ್ಣಕಃ ।

ತ್ರಯೋದಶಾಕ್ಷರರಾಮಮಂತ್ರಕ್ಕೆ ಆದಿಯಲ್ಲಿ ಪ್ರಣವವೇ ಮೊದಲಾದ ಬೀಜಾಕ್ಷರಗಳನ್ನು ಸೇರಿಸಿ ಹೇಳಿದರೆ ಚತುರ್ದಶಾಕ್ಷರರಾಮಮಂತ್ರವಾಗು

ತ್ತದೆ. ಓಂ ಶ್ರೀರಾಮ ಜಯ ರಾಮ ಜಯ ಜಯ ರಾಮ ॥ ಹ್ರೀಂ ಶ್ರೀರಾಮ ಜಯ ರಾಮ ಜಯ ಜಯ ರಾಮ । ಇತ್ಯಾದಿ.

ಪಞ್ಚದಶಾಕ್ಷರಶ್ರೀರಾಮಮಂತ್ರಃ

ತ್ರಯೋದಶಾರ್ಣಮುಚ್ಚಾರ್ಯ ಪಶ್ಚಾದ್ರಾಮೇತಿ ಯೋಜಯೇತ್ ।
ಸ ವೈ ಪಞ್ಚದಶಾರ್ಣಸ್ತು ಜಪತಾಂ ಕಲ್ಪಭೂರುಹಃ ॥

ತ್ರಯೋದಶಾಕ್ಷರಮಂತ್ರಕ್ಕೆ ಕಡೆಯಲ್ಲಿ 'ರಾಮ' ಎಂಬ ಪದವನ್ನು ಸೇರಿಸಿದರೆ ಪಂಚದಶಾಕ್ಷರರಾಮಮಂತ್ರವಾಗುತ್ತದೆ. ಶ್ರೀರಾಮ ಜಯ ರಾಮ ಜಯ ಜಯ ರಾಮ ರಾಮ ಇದನ್ನು ಜಪಿಸುವ ಸಾಧಕರಿಗೆ ಈ ಮಹಾಮಂತ್ರವು ಸಕಲೇಷ್ಟಾರ್ಥಗಳನ್ನೂ ಕೊಡುವ ಕಲ್ಪವೃಕ್ಷವೇ ಆಗುತ್ತದೆ.

ಷೋಡಶಾಕ್ಷರಶ್ರೀರಾಮಮಂತ್ರಃ

ನಮಶ್ಚ ಸೀತಾಪತಯೇ ರಾಮಾಯೇತಿ ಹನದ್ವಯಮ್ ।
ತತಸ್ತು ಕವಚಾಸ್ತ್ರಾನ್ತಃ ಷೋಡಶಾಕ್ಷರ ಈರಿತಃ ।
ತಸ್ಯಾಗಸ್ತ್ಯ ಋಷಿಶ್ಛನ್ದೋ ಬೃಹತೀ ದೇವತಾ ಚ ಸಃ ॥

ನಮಃ ಸೀತಾಪತಯೇ ರಾಮಾಯ ಹನ ಹನ ಹುಂ ಫಟ್ । ಇದು ಷೋಡಶಾಕ್ಷರರಾಮಮಂತ್ರವಾಗಿದೆ. ಈ ಮಂತ್ರಕ್ಕೆ ಅಗಸ್ತ್ಯಋಷಿಃ । ಬೃಹತೀ ಛನ್ದಃ। ಸೀತಾಪತಿಃ ಶ್ರೀರಾಮೋ ದೇವತಾ ।

ರಾಂ ಬೀಜಂ ಶಕ್ತಿರಸ್ತ್ರಂ ಚ ಕೀಲಕಂ ಹುಮಿತೀರಿತಮ್ ।
ದ್ವಿಪಞ್ಚತ್ರಿಚತುರ್ವರ್ಣೈಃ ಸರ್ವೈರಙ್ಗಂ ನ್ಯಸೇತ ಮಾತ್ ॥

ರಾಂ ಬೀಜಂ । ಫಟ್ ಶಕ್ತಿಃ । ಹುಂ ಕೀಲಕಂ । ಈ ಮಂತ್ರದ ೨-೫-೩-೪-೨ ಅಕ್ಷರಗಳಿಂದಲೂ ಮತ್ತು ಪೂರ್ಣಮಂತ್ರಾಕ್ಷರಗಳಿಂದಲೂ ಕರನ್ಯಾಸ-ಅಂಗನ್ಯಾಸಗಳನ್ನು ಮಾಡಬೇಕು.

ಅಥ ಕರನ್ಯಾಸಃ :- ನಮಃ ಅಂಗುಷ್ಠಿಕಾಭ್ಯಾಂ ನಮಃ । ಸೀತಾಪತಯೇ ತರ್ಜನೀಭ್ಯಾಂ ನಮಃ । ರಾಮಾಯ ಮಧ್ಯಮಾಭ್ಯಾಂ ನಮಃ । ಹನ-ಹನ ಅನಾಮಿಕಾಭ್ಯಾಂ ನಮಃ । ಹುಂ ಫಟ್ ಕನಿಷ್ಠಿಕಾಭ್ಯಾಂ ನಮಃ । ಸೀತಾಪತಯೇ ರಾಮಾಯ ಹನ ಹನ ಹುಂ ಫಟ್ ಕಲತಲಕರ-ಪೃಷ್ಠಾಭ್ಯಾಂ ನಮಃ । ಏವಂ ಹೃದಯಾದಿ ನ್ಯಾಸಃ ॥

ಸಪ್ತದಶಾಕ್ಷರಶ್ರೀರಾಮಮಂತ್ರಃ

ತಾರಾದಿಸಹಿತಃ ಸೋಽಪಿ ಮನ್ತ್ರಃ ಸಪ್ತದಶಾಕ್ಷರಃ ॥

ಷೋಡಶಾಕ್ಷರರಾಮಮಂತ್ರವು ಓಂಕಾರವೇ ಮೊದಲಾದ ಬೀಜಾಕ್ಷರಗಳೊಡನೆ ಸೇರಿದಲ್ಲಿ ಸಪ್ತದಶಾಕ್ಷರರಾಮಮಂತ್ರವಾಗುತ್ತದೆ.

ಓಂ ನಮಃ ಸೀತಾಪತಯೇ ರಾಮಾಯ ಹನ ಹನ ಹುಂ ಫಟ್ ।–ಇತ್ಯಾದಿ.

ಅಷ್ಟಾದಶಾಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ರಾಮಂ ಙೇನ್ತಂ ಮಹಾ ತತಃ ।
ಪುರುಷಾಯ ಪರಂ ಪಶ್ಚಾದ್ಧೃದನ್ತೋಽಷ್ಟಾದಶಾಕ್ಷರಃ ।
ವಿಶ್ವಾಮಿತ್ರೋ ಮುನಿಶ್ಛನ್ದೋ ಗಾಯತ್ರಂ ದೇವತಾ ಚ ಸಃ ॥

ಓಂ ನಮೋ ಭಗವತೇ ರಾಮಾಯ ಮಹಾಪುರುಷಾಯ ನಮಃ ।–ಇದು ಅಷ್ಟಾದಶಾಕ್ಷರರಾಮಮಂತ್ರವಾಗಿದೆ. ಈ ಮಂತ್ರಕ್ಕೆ **ವಿಶ್ವಾಮಿತ್ರಋಷಿಃ । ಗಾಯತ್ರೀ ಛನ್ದಃ । ಮಹಾಪುರುಷಃ ಶ್ರೀರಾಮೋ ದೇವತಾ ।**

ಏಕೋನವಿಂಶತ್ಯಕ್ಷರಶ್ರೀರಾಮಮಂತ್ರಃ

ಕಾಮಾದಿಸಹಿತಃ ಸೋಽಪಿ ಮನ್ತ್ರ ಏಕೋನವಿಂಶಕಃ ॥

ಅಷ್ಟಾದಶಾಕ್ಷರರಾಮಮಂತ್ರವು ಕಾಮಾದಿ ಬೀಜಾಕ್ಷರಗಳಿಂದ ಯುಕ್ತವಾದರೆ ಏಕೋನವಿಂಶತ್ಯಕ್ಷರರಾಮಮಂತ್ರವಾಗುತ್ತದೆ. **ಕ್ಲೀಂ ಓಂ ನಮೋ ಭಗವತೇ ರಾಮಾಯ ಮಹಾಪುರುಷಾಯ ನಮಃ**–ಇತ್ಯಾದಿ.

ವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ರಾಮಾಯೇತಿ ಪರಂ ವದೇತ್ ।
ಸರ್ವಶಬ್ದಂ ಸಮುಚ್ಚಾರ್ಯ ಸೌಭಾಗ್ಯಂ ದೇಹಿ ಮೇ ವದೇತ್ ।
ವಹ್ನಿಜಾಯಾಂ ತಥೋಚ್ಚಾರ್ಯ ಮನ್ತ್ರೋ ವಿಂಶಾರ್ಣಕೋ ಮತಃ ॥

ಓಂ ನಮೋ ಭಗವತೇ ರಾಮಾಯ ಸರ್ವಸೌಭಾಗ್ಯಂ ದೇಹಿ ಮೇ ಸ್ವಾಹಾ ।–ಇದು ವಿಂಶತ್ಯಕ್ಷರರಾಮಮಂತ್ರವಾಗಿದೆ.

ಏಕವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ರಾಮಾಯ ಸಕಲಂ ವದೇತ್ ।
ಆಪನ್ನಿವಾರಣಾಯೇತಿ ವಹ್ನಿಜಾಯಾಂ ತತೋ ವದೇತ್ ।
ಏಕವಿಂಶಾರ್ಣಕೋ ಮನ್ತ್ರಃ ಸರ್ವಾಭೀಷ್ಟಫಲಪ್ರದಃ ।

ಓಂ ನಮೋ ಭಗವತೇ ರಾಮಾಯ ಸಕಲಾಪನ್ನಿವಾರಣಾಯ ಸ್ವಾಹಾ ।–ಇದು ಏಕವಿಂಶತ್ಯಕ್ಷರಶ್ರೀರಾಮಮಂತ್ರವಾಗಿದೆ. ಈ ಮಂತ್ರ ಪುನಶ್ಚರಣೆಯಿಂದ ಸಕಲವಾದ ಅಭೀಷ್ಟಗಳೂ ಸಿದ್ಧಿಸುತ್ತವೆ.

ದ್ವಾವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ರಮಾ ಸ್ವಬೀಜಂ ಚ ತತೋ ದಾಶರಥಾಯ ಚ ।
ತತಃ ಸೀತಾವಲ್ಲಭಾಯ ಸರ್ವಾಭೀಷ್ಟಫಲಂ ವದೇತ್ ।
ತತೋ ದಾಯ ಹೃದನ್ತೋಽಯಂ ಮನ್ತ್ರೋ ದ್ವಾವಿಂಶದಕ್ಷರಃ ॥

ಓಂ ಶ್ರೀಂ ರಾಂ ದಾಶರಥಾಯ ಸೀತಾವಲ್ಲಭಾಯ ಸರ್ವಾಭೀಷ್ಟದಾಯ ನಮಃ ।–ಇದು ದ್ವಾವಿಂಶತ್ಯಕ್ಷರರಾಮಮಂತ್ರವಾಗಿದೆ.

ತ್ರಯೋವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ವೀರರಾಮಾಯ ಸಂವದೇತ್ ।
ಕಲ ಶತ್ರೂನ್ ಹನದ್ವಂದ್ವಂ ವಹ್ನಿಜಾಯಾಂ ತತೋ ವದೇತ್ ॥

ತ್ರಯೋವಿಂಶಾಕ್ಷರೋ ಮನ್ತ್ರಃ ಸರ್ವಶತ್ರುನಿಬರ್ಹಣಃ ।
ವಿಶ್ವಾಮಿತ್ರೋ ಮುನಿಃ ಪ್ರೋಕ್ತೋ ಗಾಯತ್ರೀ ಛನ್ದ ಉಚ್ಯತೇ ॥

ದೇವತಾ ವೀರರಾಮೋಽಸೌ ಬೀಜಾದ್ಯಾಃ ಪೂರ್ವವನ್ಮತಾಃ ।
ಮೂಲಮನ್ತ್ರ ವಿಭಾಗೇನ ನ್ಯಾಸಾನ್ಕೃತ್ವಾ ವಿಚಕ್ಷಣಃ ॥

ಓಂ ನಮೋ ಭಗವತೇ ವೀರರಾಮಾಯ ಸಕಲಶತ್ರೂನ್ ಹನ ಹನ ಸ್ವಾಹಾ ।–ಇದು ತ್ರಯೋವಿಂಶತ್ಯಕ್ಷರಶ್ರೀರಾಮಮಂತ್ರವಾಗಿದೆ. ಈ ಮಂತ್ರಜಪದಿಂದ ಸಮಸ್ತಶತ್ರುಗಳೂ ವಿನಾಶಹೊಂದುತ್ತಾರೆ.

ಈ ಮಂತ್ರಕ್ಕೆ ವಿಶ್ವಾಮಿತ್ರಋಷಿಃ । ಗಾಯತ್ರೀ ಛನ್ದಃ ಛ ವೀರರಾಮೋ ದೇವತಾ । ಬೀಜ–ಶಕ್ತಿ ಇವುಗಳು ಹಿಂದಿನಂತೆಯೇ. ವಿದ್ವಾಂಸನಾದವನು ಮೂಲಮಂತ್ರವನ್ನು ಆರು ಭಾಗಗಳನ್ನಾಗಿ ವಿಭಾಗಿಸಿ ಕರನ್ಯಾಸಾಂಗನ್ಯಾಸ ಗಳನ್ನು ಮಾಡಬೇಕು.

ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ । ಧ್ಯಾನಂ ।

ಶರಂ ಧನುಷಿ ಸನ್ಧಾಯ ತಿಷ್ಠನ್ತಂ ರಾವಣೋನ್ಮುಖಮ್ ।
ವಜ್ರಪಾಣಿಂ ರಥಾರೂಢಂ ರಾಮಂ ಧ್ಯಾತ್ವಾ ಜಪೇನ್ಮನುಮ್ ॥

ಶ್ರೀರಾಮನು ಬಾಣವನ್ನು ಹೆದೆಯೇರಿಸಿ ರಾವಣನಿಗೆ ಅಭಿಮುಖ ನಾಗಿರುವಂತೆ, ವಜ್ರಾಯುಧವನ್ನು ಹಿಡಿದು ರಥದಲ್ಲಿ ಕುಳಿತಿರುವಂತೆ ಶ್ರೀರಾಮನನ್ನು ಧ್ಯಾನಿಸುತ್ತಾ ಮಂತ್ರಜಪವನ್ನು ಮಾಡಬೇಕು.

ಚತುರ್ವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ಶ್ರೀರಾಮಾಯ ಪದಂ ವದೇತ್ ।
ತಾರಕಬ್ರಹ್ಮಣೇ ಚೋಕ್ತ್ವಾ ಮಾಂ ತಾರಯ ಪದಂ ವದೇತ್ ॥

ನಮಸ್ತಾರಾತ್ಮಕೋ ಮನ್ತ್ರಶ್ಚತುರ್ವಿಂಶತಿವರ್ಣಕಃ ।
ಬೀಜಾದಿಕಂ ಯಥಾಪೂರ್ವಂ ಸರ್ವಂ ಕುರ್ಯಾತ್ ಷಡರ್ಣವತ್ ॥

ಓಂ ನಮೋ ಭಗವತೇ ಶ್ರೀರಾಮಾಯ ತಾರಕಬ್ರಹ್ಮಣೇ ಮಾಂ ತಾರಯ ನಮಃ ಓಂ । ಇದು ಚತುರ್ವಿಂಶತ್ಯಕ್ಷರಶ್ರೀರಾಮಮಂತ್ರ. ಬೀಜ-ಶಕ್ತಿ-ಕೀಲಕ ಇವುಗಳು ಹಿಂದಿನಂತೆಯೇ. ಷಡಕ್ಷರಮಂತ್ರದಂತೆ ಅಂಗನ್ಯಾಸ-ಕರನ್ಯಾಸಾದಿಗಳನ್ನು ಮಾಡಬೇಕು.

ಪಂಚವಿಂಶತ್ಯಕ್ಷರಶ್ರೀರಾಮಮಂತ್ರಃ

ಕಾಮಸ್ತಾರೋ ನತಿಶ್ಚೈವ ತತೋ ಭಗವತೇ ಪದಮ್ ।
ರಾಮಚನ್ದ್ರಾಯ ಚೋಚ್ಚಾರ್ಯ ಸಕಲೇತಿ ಪದಂ ವದೇತ್ ॥

ಜನವಶ್ಯಕರಾಯೇತಿ ಸ್ವಾಹಾ ಕಾಮಾತ್ಮಕೋ ಮನುಃ ।
ಸರ್ವವಶ್ಯಕರೋ ಮನ್ತ್ರಃ ಪಂಚವಿಂಶತಿವರ್ಣಕಃ ॥

ಕ್ಲೀಂ ಓಂ ನಮೋ ಭಗವತೇ ರಾಮಚಂದ್ರಾಯ ಸಕಲ ಜನವಶ್ಯಕರಾಯ ಸ್ವಾಹಾ ।

ಇದು ಪಂಚವಿಂಶತ್ಯಕ್ಷರಶ್ರೀರಾಮಮಂತ್ರ. ಕಾಮಾತ್ಮಕವಾದ ಈ ಮಂತ್ರವು ಸಕಲವನ್ನೂ ವಶಪಡಿಸಿಕೊಡುತ್ತದೆ.

ಷಡ್ವಿಂಶತ್ಯಕ್ಷರಶ್ರೀರಾಮಮಂತ್ರಃ

ಆದೌ ತಾರೇಣ ಸಂಯುಕ್ತೋ ಮನ್ತ್ರಃ ಷಡ್ವಿಂಶದಕ್ಷರಃ ।

ಪಂಚವಿಂಶತ್ಯಕ್ಷರರಾಮಮಂತ್ರಕ್ಕೆ ಆದಿಯಲ್ಲಿ ಪ್ರಣವವನ್ನು ಸೇರಿಸಿದರೆ ಷಡ್ವಿಂಶತ್ಯಕ್ಷರರಾಮಮಂತ್ರವಾಗುತ್ತದೆ. ಓಂ ಕ್ಲೀಂ ಓಂ ನಮೋ ಭಗವತೇ ರಾಮಚಂದ್ರಾಯ ಸಕಲಜನವಶ್ಯಕರಾಯ ಸ್ವಾಹಾ ।

ಸಪ್ತವಿಂಶತ್ಯಕ್ಷರಶ್ರೀರಾಮಮಂತ್ರಃ

ಅನ್ತೇಽಪಿ ತಾರಸಂಯುಕ್ತಃ ಸಪ್ತವಿಂಶತಿವರ್ಣಕಃ ॥

ಷಡ್ವಿಂಶತ್ಯಕ್ಷರಶ್ರೀರಾಮಮಂತ್ರಕ್ಕೆ ಅಂತ್ಯದಲ್ಲಿ ಪ್ರಣವವನ್ನು ಸೇರಿಸಿ ಹೇಳಿದರೆ ಸಪ್ತವಿಂಶತ್ಯಕ್ಷರರಾಮಮಂತ್ರವಾಗುತ್ತದೆ. ಓಂ ಕ್ಲೀಂ ಓಂ ನಮೋ ಭಗವತೇ ರಾಮಚಂದ್ರಾಯ ಸಕಲಜನವಶ್ಯಕರಾಯ ಸ್ವಾಹಾ ಓಂ ।

ಅಷ್ಟಾವಿಂಶತ್ಯಕ್ಷರಶ್ರೀರಾಮಮಂತ್ರಃ

ತಾರಂ ನಮೋ ಭಗವತೇ ರಕ್ಷೋಘ್ನವಿಶದಾಯ ಚ ।
ಸರ್ವವಿಘ್ನಾನ್ ಸಮುಚ್ಚಾರ್ಯ ನಿವಾರಯ ಪದದ್ವಯಮ್ ॥

ಸ್ವಾಹಾನ್ತೋ ಮನ್ತ್ರರಾಜೋಽಯಮಷ್ಟಾವಿಂಶತಿವರ್ಣಕಃ ।
ಅನ್ತೇ ತಾರೇಣ ಸಂಯುಕ್ತ ಏಕೋನತ್ರಿಂಶದಕ್ಷರಃ ॥
ಆದೌ ಸ್ವಬೀಜಸಂಯುಕ್ತಸ್ತ್ರಿಂಶದ್ವರ್ಣಾತ್ಮಕೋ ಮನುಃ ।
ಅನ್ತೇಽಪಿ ತೇನ ಸಂಯುಕ್ತ ಏಕತ್ರಿಂಶಾತ್ಮಕಃ ಸ್ಮೃತಃ ॥

ಓಂ ನಮೋ ಭಗವತೇ ರಕ್ಷೋಘ್ನವಿಶದಾಯ ಸರ್ವವಿಘ್ನಾನ್ನಿವಾರಯ ನಿವಾರಯ ಸ್ವಾಹಾ । ಎಂಬ ಈ ಶ್ರೇಷ್ಠವಾದ ಮಂತ್ರವು ಅಷ್ಟಾವಿಂಶತ್ಯಕ್ಷರಶ್ರೀರಾಮಮಂತ್ರವಾಗಿದೆ.

ಏಕೋನತ್ರಿಂಶದಕ್ಷರಶ್ರೀರಾಮಮಂತ್ರಃ

ಅಷ್ಟಾವಿಂಶತ್ಯಕ್ಷರಶ್ರೀರಾಮಮಂತ್ರಕ್ಕೆ ಕಡೆಯಲ್ಲಿ ಪ್ರಣವವನ್ನು ಸೇರಿಸಿ ಹೇಳಿದರೆ ಏಕೋನತ್ರಿಂಶದಕ್ಷರಶ್ರೀರಾಮಮಂತ್ರವಾಗುತ್ತದೆ. ಓಂ **ನಮೋ ಭಗವತೇ ರಕ್ಷೋಘ್ನವಿಶದಾಯ ಸರ್ವವಿಘ್ನಾನ್ನಿವಾರಯ ನಿವಾರಯ ಸ್ವಾಹಾ ಓಂ ।**

ತ್ರಿಂಶದಕ್ಷರಶ್ರೀರಾಮಮಂತ್ರಃ

ಏಕೋನತ್ರಿಂಶದಕ್ಷರಶ್ರೀರಾಮಮಂತ್ರಕ್ಕೆ ಆದಿಯಲ್ಲಿ ಸ್ವಬೀಜವನ್ನು (ರಾಂ) ಸೇರಿಸಿ ಹೇಳಿದರೆ ತ್ರಿಂಶದಕ್ಷರಶ್ರೀರಾಮಮಂತ್ರವಾಗುತ್ತದೆ. **ರಾಂ ಓಂ ನಮೋ ಭಗವತೇ ರಕ್ಷೋಘ್ನವಿಶದಾಯ ಸರ್ವವಿಘ್ನಾನ್ನಿವಾರಯ ನಿವಾರಯ ಸ್ವಾಹಾ ಓಂ ।**

ಏಕತ್ರಿಂಶದಕ್ಷರಶ್ರೀರಾಮಮಂತ್ರಃ

ತ್ರಿಂಶದಕ್ಷರಶ್ರೀರಾಮಮಂತ್ರದ ಕಡೆಯಲ್ಲಿಯೂ ಸ್ವಬೀಜವನ್ನು (ರಾಂ) ಸೇರಿಸಿ ಹೇಳಿದರೆ ಏಕತ್ರಿಂಶದಕ್ಷರಶ್ರೀರಾಮಮಂತ್ರವಾಗುತ್ತದೆ. **ರಾಂ ಓಂ ನಮೋ ಭಗವತೇ ರಕ್ಷೋಘ್ನವಿಶದಾಯ ಸರ್ವವಿಘ್ನಾನ್ನಿವಾರಯ ನಿವಾರಯ ಸ್ವಾಹಾ ಓಂ ರಾಂ ।**

ದ್ವಾತ್ರಿಂಶದಕ್ಷರಶ್ರೀರಾಮಮಂತ್ರಃ

ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ ।
ಭೋ ದಶಾಸ್ಯಾನ್ತಕಾಸ್ಮಾಕಂ ಶ್ರಿಯಂ ದಾಪಯ ದೇಹಿ ಮೇ ॥

ರಾಮಭದ್ರ ಮಹೇಷ್ವಾಸ ರಘುವೀರ ನೃಪೋತ್ತಮ ।
ದಶಾಸ್ಯಾನ್ತಕ ಮಾಂ ರಕ್ಷ ದೇಹಿ ಮೇ ಪರಮಾಂ ಶ್ರಿಯಮ್ ॥

ಈ ಎರಡು ಮಂತ್ರಗಳೂ ದ್ವಾತ್ರಿಂಶದಕ್ಷರಶ್ರೀರಾಮಮಂತ್ರಗಳಾಗಿವೆ.

ಮಹಾಧನುರ್ಧರನಾದ ರಾಮಚಂದ್ರನೇ! ನೃಪಶ್ರೇಷ್ಠನಾದ ರಘು ವೀರನೇ! ದಶಮುಖನಾದ ರಾವಣನಿಗೆ ಅಂತಕಪ್ರಾಯನಾದವನೇ! ನಮಗೆ ಐಶ್ವರ್ಯವನ್ನು ದಯಪಾಲಿಸು.

ಅನುಷ್ಟುಭಋಷಿಃ ರಾಮಶ್ಛನ್ದೋಽನುಷ್ಟುಪ್ ಸ ದೇವತಾ ।
ರಾಂ ಬೀಜಮಸ್ಯ ಯಂ ಶಕ್ತಿರಿಷ್ಟಾರ್ಥೇ ವಿನಿಯೋಜಯೇತ್ ॥

ಈ ಮಂತ್ರಕ್ಕೆ ಅನುಷ್ಟಭಋಷಿಃ । ಅನುಷ್ಟುಪ್ ಛನ್ದಃ । ಶ್ರೀರಾಮೋ ದೇವತಾ । ರಾಂ ಬೀಜಂ । ಯಂ ಶಕ್ತಿಃ । ಅಭೀಷ್ಟಸಿದ್ಧಿಗಾಗಿ ಈ ಮಂತ್ರದ ಪುನಶ್ಚರಣೆಯನ್ನು ಮಾಡಬೇಕು.

ಪಾದಂ ಹೃದಿ ಚ ವಿನ್ಯಸ್ಯ ಪಾದಂ ಶಿರಸಿ ವಿನ್ಯಸೇತ್ ।
ಶಿಖಾಯಾಂ ಪಞ್ಚಭಿರ್ನ್ಯಸ್ಯ ತ್ರಿವರ್ಣೈಃ ಕವಚಂ ನ್ಯಸೇತ್ ॥
ನೇತ್ರಯೋಃ ಪಞ್ಚವರ್ಣೈಶ್ಚ ದಾಪಯೇತ್ಯಸ್ತ್ರಮುಚ್ಯತೇ ।

ಈ ಮಂತ್ರಕ್ಕೆ ಕರನ್ಯಾಸವು ಹೀಗಿದೆ :

ಅಥ ಕರನ್ಯಾಸಃ :- ರಾಮಚನ್ದ್ರ ಮಹೇಷ್ವಾಸ-ಅಂಗುಷ್ಠಾಭ್ಯಾಂ ನಮಃ । ರಘುವೀರ ನೃಪೋತ್ತಮ-ತರ್ಜನೀಭ್ಯಾಂ ನಮಃ । ದಶಾಸ್ಯಾನ್ತಕ-ಮಧ್ಯಮಾಭ್ಯಾಂ ನಮಃ । ಅಸ್ಮಾಕಂ-ಅನಾಮಿಕಾಭ್ಯಾಂ ನಮಃ । ಶ್ರಿಯಂ ದಾಪಯ-ಕನಿಷ್ಠಿಕಾಭ್ಯಾಂ ನಮಃ । ದೇಹಿ ಮೇ-ಕರತಲಕರಪೃಷ್ಠಾಭ್ಯಾಂ ನಮಃ ॥ ಏವಂ ಹೃದಯಾದಿನ್ಯಾಸಃ ॥

ಭೂರ್ಭುವಃಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ಚಾಪಬಾಣಧರಂ ಶ್ಯಾಮಂ ಸಸುಗ್ರೀವವಿಭೀಷಣಮ್ ।
ಹತ್ವಾ ರಾವಣಮಾಯಾನ್ತಂ ಕೃತತ್ರೈಲೋಕ್ಯರಕ್ಷಣಮ್ ।
ರಾಮಭದ್ರಂ ಹೃದಿ ಧ್ಯಾತ್ವಾ ದಶಲಕ್ಷಂ ಜಪೇನ್ಮನುಮ್ ॥

ಧನುರ್ಬಾಣಧರನಾದ ಶ್ಯಾಮಲವರ್ಣನಾದ ಶ್ರೀರಾಮನು ರಾವಣನನ್ನು ಸಂಹರಿಸಿ ಮೂರು ಲೋಕಗಳ ರಕ್ಷಣೆಯ ಕಾರ್ಯವನ್ನು ಸಂಪನ್ನಗೊಳಿಸಿ ಸುಗ್ರೀವ-ವಿಭೀಷಣರೊಡನೆ ಆಗಮಿಸುತ್ತಿದ್ದಾನೆ. ಹೀಗೆ ಮನಸ್ಸಿನಲ್ಲಿ ಧ್ಯಾನಮಾಡಿಕೊಂಡು ಮೂವತ್ತೆರಡು ಅಕ್ಷರಗಳ ಈ ಮಂತ್ರವನ್ನು ಹತ್ತು ಲಕ್ಷ ಜಪಮಾಡಬೇಕು.

ಶ್ರೀರಾಮಗಾಯತ್ರೀಮಂತ್ರಃ

ವದೇದ್ದಾಶರಥಾಯೇತಿ ವಿದ್ಮಹೇತಿ ಪರಂ ತತಃ ।

ಸೀತಾಪದಂ ಸಮುದ್ಧೃತ್ಯ ವಲ್ಲಭಾಯ ತತೋ ವದೇತ್ ।
ಧೀಮಹೀತಿ ವದೇತ್ತನ್ನೋ ರಾಮಶ್ಚಾಪಿ ಪ್ರಚೋದಯಾತ್ ॥

ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।

ತಾರಾದಿರೇಷಾ ಗಾಯತ್ರೀ ಮುಕ್ತಿಮೇವ ಪ್ರಯಚ್ಛತಿ ।

ಪ್ರಣವದಿಂದ ಕೂಡಿರುವ ರಾಮಗಾಯತ್ರಿಯ ಪುನಶ್ಚರಣೆಯಿಂದ ಮುಕ್ತಿಯೇ ಲಭಿಸುತ್ತದೆ.

ಓಂ ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।

ಮಾಯಾದಿರಪಿ ವೈದುಷ್ಯಂ ರಾಮಾದಿಶ್ಚ ಶ್ರಿಯಃ ಪದಮ್ ।
ಮದನೇನಾಪಿ ಸಂಯುಕ್ತಃ ಸಮ್ಮೋಹಯತಿ ಮೇದಿನೀಮ್ ॥

ರಾಮಗಾಯತ್ರಿಗೆ ಮೊದಲಿನಲ್ಲಿ ಮಾಯಾಬೀಜವನ್ನು (ಹ್ರೀಂ) ಸೇರಿಸಿ ಪುನಶ್ಚರಣೆಮಾಡಿದರೆ ಸಾಧಕನು ವಿದ್ವಾಂಸನಾಗುತ್ತಾನೆ. ಹ್ರೀಂ **ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।**

ರಾಂ ಬೀಜದೊಡನೆ ಸೇರಿಸಿ ಹೇಳಿದರೆ ಲಕ್ಷ್ಮೀಪ್ರದ. ರಾಂ **ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।**

'ಕ್ಲೀಂ' ಬೀಜದೊಡನೆ ರಾಮಗಾಯತ್ರಿಯ ಮಂತ್ರಜಪಮಾಡಿದವನು ಈ ಜಗತ್ತನ್ನೇ ವಿಮೋಹಗೊಳಿಸಲು ಸಮರ್ಥನಾಗುತ್ತಾನೆ. ಕ್ಲೀಂ **ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।**

ಕ್ಲೀಂ-ರಾಂ-ಹ್ರೀಂ-ಓಂ ಎಂಬ ನಾಲ್ಕು ಬೀಜಾಕ್ಷರಗಳನ್ನು ಸೇರಿಸಿ ರಾಮಗಾಯತ್ರಿಯನ್ನು ಹೇಳಿದರೆ ಇಪ್ಪತ್ತೊಂಬತ್ತು ಅಕ್ಷರಗಳ ರಾಮಮಂತ್ರ ವಾಗುತ್ತದೆ. ಕ್ಲೀಂ ರಾಂ ಹ್ರೀಂ ಓಂ **ದಾಶರಥಾಯ ವಿದ್ಮಹೇ ಸೀತಾವಲ್ಲಭಾಯ ಧೀಮಹಿ । ತನ್ನೋ ರಾಮಃ ಪ್ರಚೋದಯಾತ್ ।**

ಪಞ್ಚ ತ್ರೀಣಿ ಷಡರ್ಣೈಶ್ಚ ತ್ರೀಣಿ ಚತ್ವಾರಿ ವರ್ಣಕೈಃ ।
ಚತ್ವಾರಿ ಚ ಚತುರ್ವರ್ಣೈರಙ್ಗನ್ಯಾಸಂ ಪ್ರಕಲ್ಪಯೇತ್ ॥

ರಾಮಗಾಯತ್ರೀಮಂತ್ರಕ್ಕೆ ಕರನ್ಯಾಸವನ್ನು ಹೀಗೆ ಮಾಡಬೇಕು.

ಅಥ ಕರನ್ಯಾಸಃ :- ದಾಶರಥಾಯ–ಅಂಗುಷ್ಠಾಭ್ಯಾಂ ನಮಃ । ವಿದ್ಮಹೇ–ತರ್ಜನೀಭ್ಯಾಂ ನಮಃ । ಸೀತಾವಲ್ಲಭಾಯ–ಮಧ್ಯಮಾಭ್ಯಾಂ ನಮಃ । ಧೀಮಹಿ–ಅನಾಮಿಕಾಭ್ಯಾಂ ನಮಃ । ತನ್ನೋ ರಾಮಃ–ಕನಿಷ್ಠಿ–ಕಾಭ್ಯಾಂ ನಮಃ । ಪ್ರಚೋದಯಾತ್–ಕರತಲಕರಪೃಷ್ಠಾಭ್ಯಾಂ ನಮಃ । ಏವಂ ಹೃದಯಾದಿ ನ್ಯಾಸಃ ॥

ಬೀಜಧ್ಯಾನಾದಿಕಂ ಸರ್ವಂ ಕುರ್ಯಾತ್ ಷಡ್ವರ್ಣವತ ಮಾತ್।

ಬೀಜ-ಧ್ಯಾನಾದಿಗಳನ್ನು ಷಡಕ್ಷರರಾಮಮಂತ್ರದಲ್ಲಿರುವಂತೆ ಮಾಡಬೇಕು.

ಸಪ್ತಚತ್ವಾರಿಂಶದಕ್ಷರಶ್ರೀರಾಮಮಾಲಾಮಂತ್ರಃ

ತಾರಂ ನಮೋ ಭಗವತೇ ಚತುರ್ಥ್ಯಾ ರಘುನನ್ದನಮ್ ।
ರಕ್ಷೋಘ್ನವಿಶದಂ ತದ್ವನ್ಮಧುರೇತಿ ವದೇತ್ತತಃ ॥
ಪ್ರಸನ್ನವದನಂ ಙೇನ್ತಂ ವದೇದಮಿತತೇಜಸೇ ।
ಬಲರಾಮೌ ಚತುರ್ಥ್ಯನ್ತೌ ವಿಷ್ಣುಂ ಙೇನ್ತಂ ನತಿಸ್ತತಃ ॥

ಪ್ರೋಕ್ತೋ ಮಾಲಾಮನುಃ ಸಪ್ತಚತ್ವಾರಿಂಶದ್ಭಿರಕ್ಷರೈಃ ॥

ಓಂ ನಮೋ ಭಗವತೇ ರಘುನಂದನಾಯ ರಕ್ಷೋಘ್ನವಿಶದಾಯ ಮಧುರಪ್ರಸನ್ನವದನಾಯ ಅಮಿತತೇಜಸೇ ಬಲಾಯರಾಮಾಯ ವಿಷ್ಣವೇ ನಮಃ ॥ ಇದು ನಲವತ್ತೇಳು ಅಕ್ಷರಗಳ ಶ್ರೀರಾಮ ಮಾಲಾಮಂತ್ರವಾಗಿದೆ.

ಋಷಿಶ್ಛನ್ದೋ ದೇವತಾದಿ ಬ್ರಹ್ಮಾನುಷ್ಟುಭರಾಘವಾಃ ।
ಸಪ್ತರ್ತುಸಪ್ತದಶಷಡ್ರುದ್ರಸಂಖ್ಯೈಃ ಷಡಙ್ಗಕಮ್ ॥

ಈ ಮಂತ್ರಕ್ಕೆ ಬ್ರಹ್ಮಾ ಋಷಿಃ । ಅನುಷ್ಟುಪ್ ಛನ್ದಃ । ರಘುನಾಥೋ ದೇವತಾ । ಈ ಮಂತ್ರದ ಕರನ್ಯಾಸಾಂಗನ್ಯಾಸಗಳು ಹೀಗಿವೆ.

ಅಥ ಕರನ್ಯಾಸಃ:- ಓಂ ನಮೋ ಭಗವತೇ-ಅಂಗುಷ್ಠಿಕಾಭ್ಯಾಂ ನಮಃ। ರಘುನಂದನಾಯ-ತರ್ಜನೀಭ್ಯಾಂ ನಮಃ। ರಕ್ಷೋಘ್ನವಿಶದಾಯ-ಮಧ್ಯ-ಮಾಭ್ಯಾಂ ನಮಃ । ಮಧುರಪ್ರಸನ್ನವದನಾಯ-ಅನಾಮಿಕಾಭ್ಯಾಂ ನಮಃ । ಅಮಿತತೇಜಸೇ-ಕನಿಷ್ಠಿಕಾಭ್ಯಾಂ ನಮಃ । ಬಲಾಯ ರಾಮಾಯ ವಿಷ್ಣವೇ ನಮಃ-ಕರತಲಕರಪೃಷ್ಠಾಭ್ಯಾಂ ನಮಃ ॥ ಏವಂ ಹೃದಯಾದಿನ್ಯಾಸಃ ॥

ಧ್ಯಾನಂ ದಶಾಕ್ಷರಂ ಪ್ರೋಕ್ತಂ ಲಕ್ಷಮೇಕಂ ಜಪೇನ್ಮನುಮ್ ॥

ದಶಾಕ್ಷರಮಂತ್ರದಲ್ಲಿರುವಂತೆಯೇ ಧ್ಯಾನಾದಿಗಳನ್ನು ಮಾಡಬೇಕು. ಈ ಮಂತ್ರವನ್ನು ಲಕ್ಷಸಂಖ್ಯೆಯಲ್ಲಿ ಜಪಿಸಬೇಕು.

ಷಡಕ್ಷರಸೀತಾಮಂತ್ರಃ

ಶ್ರಿಯಂ ಸೀತಾಂ ಚತುರ್ಥ್ಯನ್ತಾಂ ಸ್ವಾಹಾನ್ತೋಽಯಂ ಷಡಕ್ಷರಃ ।
ಜನಕೋಽಸ್ಯ ಋಷಿಶ್ಛನ್ದೋ ಗಾಯತ್ರೀದೇವತಾ ಮನೋಃ ॥

ಸೀತಾ ಭಗವತೀ ಪ್ರೋಕ್ತಾ ಶ್ರೀಂ ಬೀಜಂ ನತಿಶಕ್ತಿಕಮ್ ।
ಕೀಲಕಂ ಸೀತಾಚತುರ್ಥ್ಯನ್ತಮಿಷ್ಟಾರ್ಥೇ ವಿನಿಯೋಜಯೇತ್ ।
ದೀರ್ಘಸ್ವರಯುತಾದ್ಯೇನ ಷಡಙ್ಗಾನಿ ಪ್ರಕಲ್ಪಯೇತ್ ॥

ಶ್ರೀಂ ಸೀತಾಯೈ ಸ್ವಾಹಾ—ಇದು ಸೀತಾಷಡಕ್ಷರಮಂತ್ರವಾಗಿದೆ. ಈ ಮಂತ್ರಕ್ಕೆ ಜನಕಋಷಿಃ। ಗಾಯತ್ರೀಛನ್ದಃ। ಭಗವತೀ ಸೀತಾದೇವತಾ । ಶ್ರೀಂ ಬೀಜಂ। ನಮಃ ಶಕ್ತಿಃ । ಸೀತಾಯೈ ಕೀಲಕಂ-ಅಭೀಷ್ಟಸಿದ್ಧಿಯೇ ಈ ಮಂತ್ರಜಪದ ಪ್ರಯೋಜನ. ದೀರ್ಘಸ್ವರಯುಕ್ತವಾದ ಬೀಜಾಕ್ಷರದಿಂದ ಅಂಗನ್ಯಾಸ-ಕರನ್ಯಾಸಗಳನ್ನು ಮಾಡಬೇಕು.

ಅಥ ಕರನ್ಯಾಸಃ :-ಶ್ರಾಂ ಅಂಗುಷ್ಠಿಕಾಭ್ಯಾಂ ನಮಃ । ಶ್ರೀಂ ತರ್ಜನೀಭ್ಯಾಂ ನಮಃ । ಶ್ರೂಂ ಮಧ್ಯಮಾಭ್ಯಾಂ ನಮಃ ।ಶ್ರೈಂ ಅನಾ ಮಿಕಾಭ್ಯಾಂ ನಮಃ । ಶ್ರೌಂ ಕನಿಷ್ಠಿಕಾಭ್ಯಾಂ ನಮಃ । ಶ್ರಃ ಕರತಲಕರ ಪೃಷ್ಠಾಭ್ಯಾಂ ನಮಃ। ಏವಂ ಹೃದಯಾದಿನ್ಯಾಸಃ ॥

ಭೂರ್ಭುವಃಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ಸ್ವರ್ಣಾಭಾಮಮ್ಬುಜಕರಾಂ ರಾಮಾಲೋಕನತತ್ಪರಾಮ್ ।
ಧ್ಯಾಯೇತ್ ಷಟ್ಕೋಣಮಧ್ಯಸ್ಥರಾಮಾಙ್ಕೋಪರಿ ಶೋಭಿತಾಮ್ ॥

ಭಗವತಿಯಾದ ಸೀತಾದೇವಿಯು ಷಟ್ಕೋಣಚಕ್ರದಲ್ಲಿ ವಿರಾಜಮಾನನಾಗಿರುವ ಶ್ರೀರಾಮಚಂದ್ರನ ಎಡತೊಡೆಯ ಮೇಲೆ ಕುಳಿತು ಸುಶೋಭಿಸುತ್ತಿದ್ದಾಳೆ ಮತ್ತು ಅವನ ಮುಖಾರವಿಂದದ ದರ್ಶನದಲ್ಲಿಯೇ ಆಸಕ್ತಳಾಗಿದ್ದಾಳೆ. ಸುವರ್ಣದ ಕಾಂತಿಯಿಂದ ವಿರಾಜಿಸುತ್ತಿದ್ದಾಳೆ ಮತ್ತು ಕೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಹೀಗಿರುವ ಸೀತಾದೇವಿಯನ್ನು ಧ್ಯಾನ ಮಾಡುತ್ತಾ ಮಂತ್ರಜಪಮಾಡಬೇಕು.

ಸಪ್ತಾಕ್ಷರಲಕ್ಷ್ಮಣಮಂತ್ರಃ

ಲಕಾರಂ ತು ಸಮುದ್ಧೃತ್ಯ ಲಕ್ಷ್ಮಣಾಯ ನಮೋಽನ್ತಕಃ ।
ಅಗಸ್ತ್ಯಋಷಿರಸ್ಯಾಥ ಗಾಯತ್ರಂ ಛನ್ದ ಉಚ್ಯತೇ ॥
ಲಕ್ಷ್ಮಣೋ ದೇವತಾ ಪ್ರೋಕ್ತೋ ಲಂ ಬೀಜಂ ಶಕ್ತಿರಸ್ಯ ಹಿ ।
ನಮಸ್ತು ವಿನಿಯೋಗೋ ಹಿ ಪುರುಷಾರ್ಥಚತುಷ್ಟಯೇ ॥

ಲಂ ಲಕ್ಷ್ಮಣಾಯ ನಮಃ – ಇದು ಲಕ್ಷ್ಮಣನ ಸಪ್ತಾಕ್ಷರಮಂತ್ರವಾಗಿದೆ. ಈ ಮಂತ್ರಕ್ಕೆ ಅಗಸ್ತ್ಯಋಷಿಃ। ಗಾಯತ್ರೀಛನ್ದಃ। ಲಕ್ಷ್ಮಣೋ ದೇವತಾ । ಲಂ ಬೀಜಂ । ನಮಃ ಶಕ್ತಿಃ । ಚತುರ್ವಿಧಪುರುಷಾರ್ಥಸಿದ್ಧಿಗಾಗಿ ಈ ಮಂತ್ರದ ಜಪವನ್ನು ಮಾಡಬೇಕು.

ದೀರ್ಘಭಾಜಾ ಸ್ವಬೀಜೇನ ಷಡಙ್ಗಾನಿ ಪ್ರಕಲ್ಪಯೇತ್ ।

ದೀರ್ಘಸ್ವರದಿಂದ ಯುಕ್ತವಾದ ಲಂ ಬೀಜದಿಂದ ಷಡಂಗನ್ಯಾಸವನ್ನು ಮಾಡಬೇಕು.

ಅಥ ಕರನ್ಯಾಸಃ :- ಲಾಂ ಅಂಗುಷ್ಠಿಕಾಭ್ಯಾಂ ನಮಃ । ಲೀಂ ತರ್ಜನೀಭ್ಯಾಂ ನಮಃ। ಲೂಂ ಮಧ್ಯಮಾಭ್ಯಾಂ ನಮಃ । ಲೈಂ ಅನಾಮಿಕಾಭ್ಯಾಂ ನಮಃ। ಲೌಂ ಕನಿಷ್ಠಿಕಾಭ್ಯಾಂ ನಮಃ । ಲಃ ಕರತಲಕರಪೃಷ್ಠಾಭ್ಯಾಂ ನಮಃ । ಏವಂ ಹೃದಯಾದಿನ್ಯಾಸಃ ॥ ಅಥ ಧ್ಯಾನಂ :-

ದ್ವಿಭುಜಂ ಸ್ವರ್ಣರುಚಿರತನುಂ ಪದ್ಮನಿಭೇಕ್ಷಣಮ್ ।
ಧನುರ್ಬಾಣಧರಂ ದೇವಂ ರಾಮಾರಾಧನತತ್ಪರಮ್ ॥

ಎರಡು ಭುಜಗಳಿಂದ ಕೂಡಿರುವ, ಸುವರ್ಣಸದೃಶವಾದ ಶರೀರಕಾಂತಿಯಿಂದ ಶೋಭಿಸುವ, ಸುಂದರಶರೀರನಾದ, ಕಮಲದಂತೆ ವಿಶಾಲವಾದ

ನೇತ್ರಗಳುಳ್ಳ, ಧನುರ್ಬಾಣಗಳನ್ನು ಧರಿಸಿರುವ, ಶ್ರೀರಾಮನ ಸೇವೆ ಯಲ್ಲಿಯೇ ತತ್ಪರನಾಗಿರುವ ಲಕ್ಷ್ಮಣನನ್ನು ಧ್ಯಾನಮಾಡುತ್ತೇನೆ.

ಹೀಗೆ ಲಕ್ಷ್ಮಣನನ್ನು ಧ್ಯಾನಮಾಡುತ್ತಾ ಲಕ್ಷ್ಮಣಸಪ್ತಾಕ್ಷರಮಂತ್ರವನ್ನು ಜಪಿಸಬೇಕು.

ಸಪ್ತಾಕ್ಷರಭರತಮಂತ್ರಃ

ಭಕಾರಂ ತು ಸಮುದ್ಧೃತ್ಯ ಭರತಾಯ ನಮೋಽನ್ತಕಃ ।
ಅಗಸ್ತ್ಯಋುಷಿರಸ್ಯಾಥ ಶೇಷಂ ಪೂರ್ವವದಾಚರೇತ್ ॥

ಭಂ ಭರತಾಯ ನಮಃ - ಇದು ಭರತನ ಸಪ್ತಾಕ್ಷರಮಂತ್ರವಾಗಿದೆ. ಈ ಮಂತ್ರಕ್ಕೆ ಅಗಸ್ತ್ಯಋುಷಿಃ । ಗಾಯತ್ರೀಛನ್ದಃ । ಭರತೋ ದೇವತಾ । ಭಂ ಬೀಜಂ । ನಮಃ ಶಕ್ತಿಃ । ಅಂಗನ್ಯಾಸ-ಕರನ್ಯಾಸಗಳನ್ನು ಭಾಂ-ಭೀಂ-ಭೂಂ-ಭೈಂ-ಭೌಂ-ಭಃ-ಎಂಬ ಬೀಜಾಕ್ಷರಗಳಿಂದ ಮಾಡಬೇಕು.

ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ಭರತಂ ಶ್ಯಾಮಲಂ ಶಾನ್ತಂ ರಾಮಸೇವಾಪರಾಯಣಮ್ ।
ಧನುರ್ಬಾಣಧರಂ ವೀರಂ ಕೈಕೇಯೀತನಯಂ ಭಜೇ ॥

ಶ್ಯಾಮಲವರ್ಣದ ಅಂಗಕಾಂತಿಯಿಂದ ಕೂಡಿರುವ, ಶಾಂತಸ್ವಭಾವ ದವನಾದ, ಶ್ರೀರಾಮನ ಸೇವೆಯಲ್ಲಿಯೇ ತತ್ಪರನಾದ, ಧನುರ್ಬಾಣಗಳನ್ನು ಧರಿಸಿರುವ, ವೀರನಾದ, ಕೈಕೇಯಿಯ ಮಗನಾದ ಭರತನನ್ನು ಧ್ಯಾನಮಾಡು ತ್ತೇನೆ–ಎಂದು ಹೇಳಿಕೊಂಡು ಶ್ರೀರಾಮನ ಸೇವೆಯಲ್ಲಿ ನಿರತನಾಗಿರುವ ಶ್ಯಾಮಲವರ್ಣದವನಾದ ಭರತನನ್ನೇ ಧ್ಯಾನಿಸುತ್ತಾ ಭರತಸಪ್ತಾಕ್ಷರ ಮಂತ್ರವನ್ನು ಜಪಿಸಬೇಕು.

ಸಪ್ತಾಕ್ಷರಶತ್ರುಘ್ನಮಂತ್ರಃ

ಶಂ ಬೀಜಂ ತು ಸಮುದ್ಧೃತ್ಯ ಶತ್ರುಘ್ನಾಯ ನಮೋಽನ್ತಕಃ ।
ಋುಷ್ಯಾದಯೋ ಯಥಾಪೂರ್ವಂ ವಿನಿಯೋಗೋಽರಿನಿಗ್ರಹೇ ॥

ಶಂ ಶತ್ರುಘ್ನಾಯ ನಮಃ–ಇದು ಶತ್ರುಘ್ನನ ಸಪ್ತಾಕ್ಷರಮಂತ್ರ ವಾಗಿದೆ. ಋುಷಿ-ಛಂದಸ್ಸುಗಳು ಹಿಂದಿನಂತೆಯೇ. ಶತ್ರುಘ್ನೋ ದೇವತಾ ।

ಶತ್ರುನಿಗ್ರಹಕ್ಕಾಗಿ ಶತ್ರುಘ್ನಮಂತ್ರವನ್ನು ಜಪಿಸಬೇಕು. ಶಂ ಬೀಜಂ ।ನಮಃ ಶಕ್ತಿಃ । ಶಾಂ-ಶೀಂ-ಶೂಂ-ಶೈಂ-ಶೌಂ-ಶಃ ಎಂಬ ಬೀಜಮಂತ್ರಗಳೊಡನೆ ಕರನ್ಯಾಸಾಂಗನ್ಯಾಸಗಳನ್ನು ಮಾಡಬೇಕು.

ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ದ್ವಿಭುಜಂ ಸ್ವರ್ಣವರ್ಣಾಭಂ ರಾಮಸೇವಾಪರಾಯಣಮ್ ।
ಲವಣಾಸುರಹನ್ತಾರಂ ಸುಮಿತ್ರಾತನಯಂ ಭಜೇ ॥

ಎರಡು ಭುಜಗಳಿಂದ ಕೂಡಿರುವ, ಸುವರ್ಣವರ್ಣದ ಅಂಗಕಾಂತಿಯಿಂದ ರಾರಾಜಿಸುತ್ತಿರುವ, ರಾಮಸೇವಾಪರಾಯಣನಾದ, ಲವಣಾಸುರ ಸಂಹಾರಕನಾದ, ಸುಮಿತ್ರಾದೇವಿಯ ಮಗನಾದ ಶತ್ರುಘ್ನನನ್ನು ಧ್ಯಾನ ಮಾಡುತ್ತೇನೆ. ಹೀಗೆ ಹೇಳಿಕೊಂಡು ಶ್ರೀರಾಮನ ಸೇವೆಯಲ್ಲಿ ನಿರತನಾದ ಶತ್ರುಘ್ನನನ್ನೇ ಧ್ಯಾನಮಾಡುತ್ತಾ ಶತ್ರುಘ್ನಸಪ್ತಾಕ್ಷರಮಂತ್ರವನ್ನು ಜಪಿಸ ಬೇಕು.

ಸಪ್ತಾಕ್ಷರಹನುಮನ್ಮಂತ್ರಃ

ಹ್ರಂ ಹನುಮಾಂಶ್ಚತುರ್ಥ್ಯನ್ತಂ ಹೃದನ್ತೋ ಮನ್ತ್ರರಾಜಕಃ ।
ರಾಮಚನ್ದ್ರ ಋಷಿಃ ಪ್ರೋಕ್ತೋ ಯೋಜಯೇತ್ಪೂರ್ವವತ್ಕ್ರಿಯಾಮ್ ॥

ಹ್ರಂ ಹನುಮತೇ ನಮಃ –ಎಂಬ ಸಪ್ತಾಕ್ಷರಹನುಮನ್ಮಂತ್ರವು ಎಲ್ಲ ಮಂತ್ರಗಳಿಗೂ ಶ್ರೇಷ್ಠವಾದ ಮಂತ್ರವಾಗಿದೆ. ಈ ಮಂತ್ರಕ್ಕೆ ಶ್ರೀರಾಮಚಂದ್ರಋಷಿಃ। ಗಾಯತ್ರೀ ಛನ್ದಃ। ಹನುಮಾನ್ ದೇವತಾ । ಹ್ರಂ ಬೀಜಂ । ನಮಃ ಶಕ್ತಿಃ । ಹ್ರಾಂ–ಹ್ರೀಂ–ಹ್ರೂಂ–ಹ್ರೈಂ–ಹ್ರೌಂ– ಹ್ರಃ–ಎಂಬ ಬೀಜಾಕ್ಷರಗಳೊಡನೆ ಅನುಕ್ರಮವಾಗಿ ಕರನ್ಯಾಸ-ಅಂಗನ್ಯಾಸ ಗಳನ್ನು ಮಾಡಬೇಕು.

ಭೂರ್ಭುವಸ್ಸುವರೋಮಿತಿ ದಿಗ್ಬನ್ಧಃ । ಧ್ಯಾನಂ :-

ದ್ವಿಭುಜಂ ಸ್ವರ್ಣವರ್ಣಾಭಂ ರಾಮಸೇವಾಪರಾಯಣಮ್ ।
ಮೌಞ್ಜೀಕೌಪೀನಸಹಿತಂ ಮಾಂ ಧ್ಯಾಯೇದ್ರಾಮಸೇವಕಮ್ ॥

ಮೌಂಜೀ-ಕೌಪೀನಗಳನ್ನು ಧರಿಸಿ ಶ್ರೀರಾಮನ ಸೇವೆಯಲ್ಲಿ ನಿರತನಾಗಿರುವ, ಎರಡು ಭುಜಗಳಿಂದ ಕೂಡಿರುವ, ಸುವರ್ಣವರ್ಣದ ಕಾಂತಿಯಿಂದ

ಪರಿಶೋಭಿಸುತ್ತಿರುವ ನನ್ನನ್ನು ಧ್ಯಾನಮಾಡಬೇಕು. ಹೀಗೆ ರಾಮನ ಸೇವೆ ಮಾಡುತ್ತಿರುವ ಆಂಜನೇಯನನ್ನು ಧ್ಯಾನಮಾಡುತ್ತಾ ಹನುಮಂತನ ಸಪ್ತಾಕ್ಷರಮಂತ್ರವನ್ನು ಜಪಿಸಿದರೆ ಸಕಲೇಷ್ಟಾರ್ಥಗಳೂ ಈಡೇರುತ್ತವೆ.

ರಾಮರಹಸ್ಯೋಪನಿಷತ್ತಿನಲ್ಲಿ ಎರಡನೆಯ ಅಧ್ಯಾಯವು ಮುಗಿಯಿತು.

ಶ್ರೀರಾಮಮಂತ್ರಪುನಶ್ಚರಣವಿಧಿಃ

ಸನಕಾದಿಮಹರ್ಷಿಗಳು ಹನುಮಂತನನ್ನು ಪ್ರಶ್ನಿಸುತ್ತಾರೆ :

"ಆಂಜನೇಯ! ರಾಮಮಂತ್ರಗಳ ಪುನಶ್ಚರಣವಿಧಿಯನ್ನು ಹೇಳು."

ಹನುಮಂತನು ಹೇಳುತ್ತಾನೆ :

ನಿತ್ಯಂ ತ್ರಿಷವಣಸ್ನಾಯೀ ಪಯೋಮೂಲಫಲಾದಿಕಮ್ ।
ಅಥ ವಾ ಪಾಯಸಾಹಾರೀ ಹವಿಷ್ಯಾನ್ನಾದ ಏವ ವಾ ॥

"ಮಹರ್ಷಿಗಳೇ! ಸಾಧಕನು ಪ್ರತಿನಿತ್ಯವೂ ಪ್ರಾತರ್ಮಧ್ಯಂದಿನ ಸಾಯಾಹ್ನಗಳಲ್ಲಿ ಸ್ನಾನಮಾಡಬೇಕು. ಹಾಲು-ಹಣ್ಣುಗಳನ್ನು ಆಹಾರವಾಗಿ ತೆಗೆದುಕೊಳ್ಳಬೇಕು. ಪಾಯಸವನ್ನಾದರೂ ತೆಗೆದುಕೊಳ್ಳಬಹುದು. ಹವಿಷ್ಯಾನ್ನವನ್ನಾದರೂ ಊಟಮಾಡಬಹುದು.

ಷಡ್ರಸೈಶ್ಚ ಪರಿತ್ಯಕ್ತಃ ಸ್ವಾಶ್ರಮೋಕ್ತವಿಧಿಂ ಚರನ್ ।
ವನಿತಾದಿಷು ವಾಕ್ಕರ್ಮಮನೋಭಿರ್ನಿಃಸ್ಪೃಹಃ ಶುಚಿಃ ॥

ಷಡ್ರಸೋಪೇತವಾದ ಭೋಜನವನ್ನು ಮಾಡಕೂಡದು. ತನ್ನ ವರ್ಣಾಶ್ರಮಕ್ಕೆ ವಿಹಿತವಾದ ಕರ್ಮಗಳನ್ನು ಮಾಡುತ್ತಿರಬೇಕು. ಸ್ತ್ರೀಭೋಗವೇ ಮೊದಲಾದ ಸುಖ-ಲಾಲಸೆಗಳನ್ನು ಮನಸ್ಸು, ಮಾತು ಮತ್ತು ಕ್ರಿಯೆಗಳಿಂದ ಸಂಪೂರ್ಣವಾಗಿ ವರ್ಜಿಸಬೇಕು. ಶುದ್ಧವಾದ ಆಚಾರ-ವಿಚಾರವುಳ್ಳವನಾಗಿರಬೇಕು.

ಭೂಮಿಶಾಯೀ ಬ್ರಹ್ಮಚಾರೀ ನಿಷ್ಕಾಮೋ ಗುರುಭಕ್ತಿಮಾನ್ ।
ಸ್ನಾನಪೂಜಾಜಪಧ್ಯಾನಹೋಮತರ್ಪಣತತ್ಪರಃ ॥

ಭೂಮಿಯ ಮೇಲೆ ಮಲಗಬೇಕು. ಬ್ರಹ್ಮಚರ್ಯವ್ರತನಿಷ್ಠನಾಗಿರ

ಬೇಕು. ನಿಷ್ಕಾಮನಾಗಿರಬೇಕು. ಮಂತ್ರೋಪದೇಶಮಾಡಿದ ಗುರುವಿನಲ್ಲಿ ದೃಢವಾದ ಭಕ್ತಿಯುಳ್ಳವನಾಗಿರಬೇಕು. ಸ್ನಾನ-ಪೂಜಾ-ಜಪ-ಧ್ಯಾನ-ಹೋಮ-ತರ್ಪಣಗಳಲ್ಲಿ ತತ್ಪರನಾಗಿರಬೇಕು.

ಗುರೂಪದಿಷ್ಟಮಾರ್ಗೇಣ ಧ್ಯಾಯನ್ರಾಮಮನನ್ಯಧೀಃ ।
ಸೂರ್ಯೇನ್ದುಗುರುದೀಪಾದಿಗೋಬ್ರಾಹ್ಮಣಸಮೀಪತಃ ॥

ಶ್ರೀರಾಮಸಂನಿಧೌ ಮೌನೀ ಮನ್ತ್ರಾರ್ಥಮನುಚಿನ್ತಯನ್ ।
ವ್ಯಾಘ್ರಚರ್ಮಾಸನೇ ಸ್ಥಿತ್ವಾ ಸ್ವಸ್ತಿಕಾದ್ಯಾಸನಕ್ರಮಾತ್ ॥

ತುಲಸೀಪಾರಿಜಾತಶ್ರೀವೃಕ್ಷಮೂಲಾದಿಕಸ್ಥಲೇ ।
ಪದ್ಮಾಕ್ಷತುಲಸೀಕಾಷ್ಠ ರುದ್ರಾಕ್ಷಕೃತಮಾಲಯಾ ॥

ಮಾತೃಕಾಮಾಲಯಾ ಮನ್ತ್ರೀ ಮನಸ್ಯೈವ ಮನುಂ ಜಪೇತ್ ।
ಅಭ್ಯರ್ಚ್ಯ ವೈಷ್ಣವೇ ಪೀಠೇ ಜಪೇದಕ್ಷರಲಕ್ಷಕಮ್ ॥

ಗುರುವು ಉಪದೇಶಿಸಿದ ಮಾರ್ಗವನ್ನು ಅನುಸರಿಸಿ ಅನನ್ಯವಾದ ಮನಸ್ಸಿನಿಂದ ಶ್ರೀರಾಮಚಂದ್ರನನ್ನೇ ಧ್ಯಾನಮಾಡುತ್ತಾ ಸೂರ್ಯ-ಚಂದ್ರ-ಗುರು-ದೀಪ-ಸಮಕ್ಷದಲ್ಲಿ ಗೋಬ್ರಾಹ್ಮಣರ ಮತ್ತು ಶ್ರೀರಾಮವಿಗ್ರಹದ ಸನ್ನಿಧಿಯಲ್ಲಿ ಮೌನಿಯಾಗಿರುತ್ತಾ ಜಪವನ್ನು ಮಾಡಬೇಕು. ಜಪಕಾಲದಲ್ಲಿ ಧ್ಯಾನಶ್ಲೋಕದಲ್ಲಿರುವ ಮೂರ್ತಿಯನ್ನು ಬಾರಿ-ಬಾರಿಗೂ ಧ್ಯಾನಿಸುತ್ತಾ ಜಪಮಾಡಬೇಕು. ವ್ಯಾಘ್ರಚರ್ಮದ ಮೇಲೆ ಸ್ವಸ್ತಿಕಾದಿ ಆಸನಕ್ರಮದಲ್ಲಿ ಕುಳಿತು ಜಪಮಾಡಬೇಕು. ತುಲಸೀ-ಪಾರಿಜಾತ ಅಥವಾ ಬಿಲ್ವವೃಕ್ಷಗಳ ಸಮೀಪದಲ್ಲಿ ಜಪಮಾಡುವುದು ಶ್ರೇಯಸ್ಕರ. ಪದ್ಮಾಕ್ಷ, ತುಲಸೀಕಡ್ಡಿ ಅಥವಾ ರುದ್ರಾಕ್ಷಗಳಿಂದ ಮಾಡಿದ ಮಾಲೆಯನ್ನು ಜಪವನ್ನು ಎಣಿಸುವ ಸಲುವಾಗಿ ಇಟ್ಟುಕೊಳ್ಳಬೇಕು. ಅಥವಾ ಮಾತೃಕಾ (ಕೈಬೆರಳುಗಳ ಗಿಣ್ಣುಗಳ) ಮಾಲೆಯನ್ನಾದರೂ ಎಣಿಕೆಗೆ ಉಪಯೋಗಿಸಬಹುದು. ಮನಸ್ಸಿನಲ್ಲಿಯೇ ಮಂತ್ರಜಪಮಾಡಬೇಕು. ಯಂತ್ರವನ್ನು ವೈಷ್ಣವಪೀಠದ ಮೇಲಿಟ್ಟು ಪೂಜೆ ಮಾಡಿ ಮಂತ್ರದಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಸಂಖ್ಯೆಗೆ ಅನುಗುಣವಾದ ಲಕ್ಷಗಳ ಸಂಖ್ಯೆಯಲ್ಲಿ ಜಪಮಾಡಬೇಕು. (ಮಂತ್ರದಲ್ಲಿ ಆರು ಅಕ್ಷರಗಳಿದ್ದರೆ ಆರು ಲಕ್ಷ ಜಪಮಾಡಬೇಕು.)

ತರ್ಪಯೇತ್ತದ್ದಶಾಂಶೇನ ಪಾಯಸಾತ್ತದ್ದಶಾಂಶತಃ ।
ಜುಹುಯಾದ್ಗೋಘೃತೇನೈವ ಭೋಜಯೇತ್ತದ್ದಶಾಂಶತಃ ॥

ಎಷ್ಟು ಬಾರಿ ಜಪವನ್ನು ಮಾಡಿಯಾಗಿದೆಯೋ ಅದರಲ್ಲಿ ಹತ್ತನೆಯ ಒಂದು ಬಾರಿಯಷ್ಟು ತರ್ಪಣವನ್ನು ಕೊಡಬೇಕು. (ಉದಾ : ಆರು ಲಕ್ಷ ಜಪಿಸಿದ್ದರೆ ಅರುವತ್ತು ಸಾವಿರ ಬಾರಿ ತರ್ಪಣಮಾಡಬೇಕು.)

ಅನಂತರ ಅಷ್ಟೇ ಬಾರಿ (ಜಪಸಂಖ್ಯೆಯಲ್ಲಿ ಹತ್ತನೇ ಒಂದು ಬಾರಿ) ಹಸುವಿನ ತುಪ್ಪದಿಂದ ಹೋಮವನ್ನು ಮಾಡಬೇಕು. ಅದರಲ್ಲಿ ಹತ್ತನೆಯ ಒಂದು ಭಾಗದಷ್ಟು ಮಂದಿಗೆ ಭೋಜನಮಾಡಿಸಬೇಕು.

ತತಃ ಪುಷ್ಪಾಞ್ಜಲಿಂ ಮೂಲಮನ್ತ್ರೇಣ ವಿಧಿವಚ್ಚರೇತ್ ।
ತತಃ ಸಿದ್ಧಿಮನುರ್ಭೂತ್ವಾ ಜೀವನ್ಮುಕ್ತೋ ಭವೇನ್ಮುನಿಃ ॥

ಅನಂತರ ಮೂಲಮಂತ್ರದಿಂದ ವಿಧಿವತ್ತಾಗಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು. ಈ ವಿಧವಾದ ಅನುಷ್ಠಾನದಿಂದ ಸಾಧಕನಿಗೆ ಮಂತ್ರ ಸಿದ್ಧಿಯಾಗುತ್ತದೆ. ಶ್ರೀರಾಮತಾರಕಮಂತ್ರವನ್ನು ಸಿದ್ಧಿಮಾಡಿಕೊಂಡ ಮನುಷ್ಯನು ಜೀವನ್ಮುಕ್ತನಾಗುತ್ತಾನೆ.

ಅಣಿಮಾದಿರ್ಭಜತ್ಯೇನಂ ಯೂನಂ ವರವಧೂರಿವ ।
ಐಹಿಕೇಷು ಚ ಕಾರ್ಯೇಷು ಮಹಾಪತ್ಸು ಚ ಸರ್ವದಾ ॥

ನೈವ ಯೋಜ್ಯೋ ರಾಮಮನ್ತ್ರಃ ಕೇವಲಂ ಮೋಕ್ಷಸಾಧಕಃ ।
ಐಹಿಕೇ ಸಮನುಪ್ರಾಪ್ತೇ ಮಾಂ ಸ್ಮರೇದ್ರಾಮ ಸೇವಕಮ್ ॥

ಯುವಕನೊಬ್ಬನನ್ನು ಸುಂದರಸ್ತ್ರೀಯೊಬ್ಬಳು ಸೇವಿಸಲು ತಾನಾಗಿಯೇ ಬರುವಂತೆ-ಅಣಿಮಾದಿ ಸಿದ್ಧಿಗಳೆಲ್ಲವೂ ತಾವಾಗಿಯೇ ಬಂದು ಆ ತಾರಕಮಂತ್ರವನ್ನು ಸಿದ್ಧಿಮಾಡಿಕೊಂಡವನನ್ನು ಸೇವಿಸುತ್ತವೆ. ಐಹಿಕವಾದ ಕಾರ್ಯಗಳ ಸಿದ್ಧಿಗಾಗಿ, ದೊಡ್ಡ-ದೊಡ್ಡ ಆಪತ್ತುಗಳ ನಿವಾರಣೆಗಾಗಿ ರಾಮ ಮಂತ್ರವನ್ನು ಉಪಯೋಗಿಸಬಾರದು. ರಾಮಮಂತ್ರವು ಕೇವಲ ಮೋಕ್ಷ ಸಾಧಕವಾದುದು. ಮೋಕ್ಷಸಾಧನೆಗಾಗಿಯೇ ಈ ಮಂತ್ರವನ್ನು ವಿನಿಯೋಗಿಸ ಬೇಕು. ಐಹಿಕವಾದ ಸುಖವು ಬೇಕಾಗಿದ್ದಲ್ಲಿ ಆಪತ್ತುಗಳ ನಿವಾರಣೆಯಾಗ ಬೇಕಾಗಿದ್ದಲ್ಲಿ ರಾಮಸೇವಕನಾದ ನನ್ನನ್ನು ಸ್ಮರಿಸಿದರೆ ಸಾಕು.

ಯೋ ರಾಮಂ ಸಂಸ್ಮರೇನ್ನಿತ್ಯಂ ಭಕ್ತ್ಯಾ ಮನುಪರಾಯಣಃ ।
ತಸ್ಯಾಹಮಿಷ್ಟಸಂಸಿದ್ಧ್ಯೈ ದೀಕ್ಷಿತೋಽಸ್ಮಿ ಮುನೀಶ್ವರಾಃ ॥

ಮುನಿಶ್ರೇಷ್ಠರೇ! ಯಾರು ನಿತ್ಯವೂ ಭಕ್ತಿಭಾವದಿಂದ ಮಂತ್ರಜಪದಲ್ಲಿಯೇ ನಿರತರಾಗಿರುತ್ತಾ ಶ್ರೀರಾಮನನ್ನು ಯಾವಾಗಲೂ ಸ್ಮರಿಸುತ್ತಿರುವರೋ-ಅಂತಹವರ ಅಭೀಷ್ಟಸಿದ್ಧಿಗಾಗಿ ನಾನು ಯಾವಾಗಲೂ ದೀಕ್ಷಾಬದ್ಧನಾಗಿರುತ್ತೇನೆ.

ವಾಂಛಿತಾರ್ಥಂ ಪ್ರದಾಸ್ಯಾಮಿ ಭಕ್ತಾನಾಂ ರಾಘವಸ್ಯ ತು ।
ಸರ್ವದಾ ಜಾಗರೂಕೋಽಸ್ಮಿ ರಾಮಕಾರ್ಯಧುರಂಧರಃ ॥

ಶ್ರೀರಾಮನ ಭಕ್ತರಿಗೆ ನಾನು ಅವರ ಮನೋವಾಂಛಿತಗಳೆಲ್ಲವನ್ನೂ ನೆರವೇರಿಸಿಕೊಡುತ್ತೇನೆ. ಶ್ರೀರಾಮನ ಕಾರ್ಯದ ಭಾರವನ್ನು ವಹಿಸಿರುವ ನಾನು ರಾಮನ ಭಕ್ತರ ಇಷ್ಟಾರ್ಥಸಿದ್ಧಿಗಾಗಿ ಸದಾ ಜಾಗರೂಕನಾಗಿರು ತ್ತೇನೆ.

ಸಕಲವಿಧವಾದ ಮನೋಭಿಲಷಿತಗಳ ಸಿದ್ಧಿಗೂ ಶ್ರೀಮದ್ವಾಲ್ಮೀಕಿರಾಮಾಯಣದ ಪಾರಾಯಣವೇ ಪರಮಾಶ್ರಯ

ಸಾವಿರಾರು ಜನರು ಶ್ರದ್ಧೆಯಿಂದ ಪಾರಾಯಣಮಾಡಿ ಸಿದ್ಧಿಯನ್ನು ಪಡೆದುಕೊಂಡಿರುತ್ತಾರೆ. ನಮ್ಮ ವಾಚಕವೃಂದಕ್ಕೂ ಇದರ ಫಲವು ಸಿಗಲೆಂಬ ಆಶಯದಿಂದ ಇದನ್ನು ಪ್ರಕಟಿಸಲಾಗಿದೆ.

ಉಮಾಸಂಹಿತೆ

1. ಧರ್ಮಕಾರ್ಯವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗಲು

ಧರ್ಮಕಾಮಸ್ತು ಕೌಸಲ್ಯಾರಾಮಸಂವಾದಮಾದರಾತ್ ।
ಮಙ್ಗಲಾನ್ತಂ ಪಠೇತ್ಪ್ರಾತಃ ಮಧ್ಯಾಹ್ನೇ ವಾ ಸ್ಮರನ್ಪ್ರಭುಮ್ ॥

ಧರ್ಮಕಾರ್ಯದ ಸಿದ್ಧಿಗಾಗಿ ಕೌಸಲ್ಯಾ-ಶ್ರೀರಾಮಸಂವಾದರೂಪವಾದ ಸರ್ಗಗಳನ್ನು ಪ್ರಾತಃಕಾಲದಲ್ಲಾಗಲೀ ಮಧ್ಯಾಹ್ನದಲ್ಲಾಗಲೀ ಪಾರಾಯಣ ಮಾಡಬೇಕು. (ಅಯೋಧ್ಯಾಕಾಂಡ-ಸರ್ಗಗಳು ೨೧-೨೨-೨೩-೨೪-೨೫ ಸಂಪುಟ-೨ ಪುಟ-೩೧೧ ರಿಂದ ೩೩೪ರ ವರೆಗೆ.)

ಸಂಕಲ್ಪ :- **ಶ್ರೀಸೀತಾಲಕ್ಷ್ಮಣಭರತಶತ್ರುಘ್ನಹನುಮತ್ಸಮೇತ ಶ್ರೀರಾಮಚನ್ದ್ರಪ್ರಭೋಃ ಪ್ರಸಾದೇನ ಪ್ರಾರೀಪ್ಸಿತಧರ್ಮಕಾರ್ಯ ಪರಿಸಮಾಪ್ತ್ಯರ್ಥಂ ಕೌಸಲ್ಯಾರಾಮಸಂವಾದಾತ್ಮಕಶ್ರೀಮದ್ರಾಮಾಯಣ ಘಟ್ಟಪಾರಾಯಣಮಹಂ ಕರಿಷ್ಯೇ ॥**

ಪುಸ್ತಕಕ್ಕೆ ಅಥವಾ ಶ್ರೀರಾಮನ ಚಿತ್ರಪಟಕ್ಕೆ ಷೋಡಶೋಪಚಾರ ಪೂಜೆಯನ್ನು ಮಾಡಿ ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

2. ಅರ್ಥಕಾಮನೆಗಾಗಿ

ಅರ್ಥಕಾಮಃ ಪಠೇತ್ಸರ್ಗಂ ಯಾತ್ರಾದಾನಕಥಾಂಶಕಮ್ ।
ರಾಮಸ್ಯಾರಣ್ಯಗಮನಸಮಯೇ ತು ತ್ರಿಸನ್ಧ್ಯಕಮ್ ॥

ಅರ್ಥಕಾಮನಾದವನು (ನಿರೀಕ್ಷಿಸಿದಂತೆ ಹಣವು ಬಾರದಿದ್ದರೆ, ಯಾವುದಾದರೂ ಕಾರಣದಿಂದ ಬರುವ ಹಣವು ನಿಂತುಹೋಗಿದ್ದರೆ, ಹಣದ

ಅಡಚಣೆಯಿದ್ದರೆ, ಬರುವ ಹಣಕ್ಕಾಗಿ ನ್ಯಾಯಾಲಯದಲ್ಲಿ ವ್ಯವಹಾರವಿದ್ದರೆ) ಶ್ರೀರಾಮನು ಅರಣ್ಯಕ್ಕೆ ಹೊರಡುವ ಸಮಯದ ಸರ್ಗವನ್ನು ಪ್ರಾತಃಕಾಲ-ಮಧ್ಯಾಹ್ನ-ಸಾಯಂಕಾಲ ಈ ಮೂರು ಕಾಲಗಳಲ್ಲಿಯೂ ಪಾರಾಯಣ ಮಾಡಬೇಕು. (ಅಯೋಧ್ಯಾಕಾಂಡ-ಸರ್ಗ ೩೨ ಸಂಪುಟ-೨ ಪುಟ-೩೫೩)

ಸಂಕಲ್ಪ :-....ಪ್ರಭೋಃ ಪ್ರಸಾದೇನ ಅಸ್ಮದುಪಾತ್ತೇಷು ಅರ್ಥ-ಪದೇಷು ಕರ್ಮಸು ಪುಷ್ಕಲಧನಾವಾಪ್ತ್ಯರ್ಥಂ ಯಾತ್ರಾದಾನಾತ್ಮಕ ಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥

ಶ್ರೀರಾಮನ ಚಿತ್ರಪಟಕ್ಕೆ ಷೋಡಶೋಪಚಾರಪೂಜೆಮಾಡಿ ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

3. ವಿವಾಹಸಿದ್ಧಿಗಾಗಿ

ಕನ್ಯಾರ್ಥೀ ಚ ವಟುಃ ಕನ್ಯಾಪ್ಯನುರೂಪವರಾರ್ಥಿನೀ ।
ಸೀತಾವಿವಾಹಸರ್ಗಂ ತು ಪಠೇತ್ಪ್ರಾತಃ ಪ್ರಯತ್ನತಃ ।
ಗವ್ಯಂ ನಿವೇದಯೇತ್ಕ್ಷೀರಂ ಸದ್ಯೋ ದುಗ್ಧಂ ಶುಚಿಸ್ಥಲೇ ॥

ಕನ್ಯಾರ್ಥಿಯಾದ ವಟುವಾಗಲೀ, ಅನುರೂಪನಾದ ವರನನ್ನು ಅಪೇಕ್ಷಿಸುವ ವಧುವಾಗಲೀ-ಸೀತಾವಿವಾಹಪ್ರಸಂಗವಿರುವ ಸರ್ಗವನ್ನು ಪ್ರಾತಃ ಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಪಾರಾಯಣಮಾಡಬೇಕು. (ಬಾಲ ಕಾಂಡ-ಸರ್ಗ ೭೩ ಸಂಪುಟ-೧ ಪುಟ-೨೦೫)

ಸಂಕಲ್ಪ :-.....ಪ್ರಭೋಃ ಪ್ರಸಾದೇನ ಮಮ ಶೀಘ್ರಮೇವ ವಿವಾಹಸಿದ್ಧ್ಯರ್ಥಂ ಶ್ರೀಸೀತಾರಾಮವಿವಾಹಾತ್ಮಕಶ್ರೀಮದ್ರಾಮಾಯಣ ಘಟ್ಟಪಾರಾಯಣಮಹಂ ಕರಿಷ್ಯೇ ॥

ಪರಿಶುದ್ಧವಾದ ಸ್ಥಳದಲ್ಲಿ ಪಾರಾಯಣಮಾಡಿ ಆಗತಾನೇ ಕರೆದ ಹಸುವಿನ ಹಾಲನ್ನು ನಿವೇದನಮಾಡಬೇಕು.

೪. ಮೋಕ್ಷಸಾಮ್ರಾಜ್ಯಸಿದ್ಧಿಗಾಗಿ

ಮೋಕ್ಷಾರ್ಥಿಭಿಸ್ತು ಪಾಠ್ಯಾ ಸ್ಯಾಜ್ಜಟಾಯೋರ್ಮೋಕ್ಷದಾಯಕಾ ।
ರಾಮಸ್ಯ ಲಕ್ಷ್ಮಣಾಶ್ವಾಸಾದಾರಭ್ಯ ಪ್ರಯತ್ನೈಃ ಕಥಾ ॥

ಮೋಕ್ಷಾಪೇಕ್ಷಿಗಳು ಶ್ರೀರಾಮನಿಗೆ ಲಕ್ಷ್ಮಣನು ಆಶ್ವಾಸನೆಯನ್ನು ಕೊಡುವ ಪ್ರಸಂಗದಿಂದ ಪ್ರಾರಂಭಿಸಿ ಶ್ರೀರಾಮನು ಜಟಾಯುವಿಗೆ ಮೋಕ್ಷ ವನ್ನು ದಯಪಾಲಿಸಿದವರೆಗಿನ ಸರ್ಗಗಳನ್ನು ಪಾರಾಯಣಮಾಡಬೇಕು. (ಅರಣ್ಯಕಾಂಡ ಸರ್ಗಗಳು-೬೫-೬೬-೬೭-೬೮ ಸಂಪುಟ-೫ ಪುಟ-೮೬೧ ರಿಂದ ೮೭೧ರ ವರೆಗೆ)

ಸಂಕಲ್ಪ :-....ಪ್ರಭೋಃ ಪ್ರಸಾದೇನ ಸಕಲವಿಧಪುಣ್ಯಪಾಪಬನ್ಧ ನಿವೃತ್ತಿದ್ವಾರಾ ಮೋಕ್ಷಸಾಂರಾಜ್ಯಸಿದ್ಧ್ಯರ್ಥಂ ಜಟಾಯೋ-ರ್ಮೋಕ್ಷಾತ್ಮಕಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥

ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

5. ಕೆಟ್ಟರೋಗಗಳ ನಿವಾರಣೆಗಾಗಿ

ಅಪಸ್ಮಾರಶ್ವಾಸಖಾಸಕುಷ್ಠಾದಿಗರಶಾನ್ತಯೇ ।
ಆದ್ಯೇ ಯುದ್ಧೇ ದಶಾಸ್ಯಸ್ಯ ಮೌಲಿಭಙ್ಗಂ ದಿನೇ ದಿನೇ ।
ಪಠೇದ್ದ್ವಿವಾರಂ ನೈವೇದ್ಯಮಾದೌ ಮಧ್ವನ್ತತಃ ಪಯಃ ॥

ಅಪಸ್ಮಾರ, ಉಬ್ಬಸ, ಕುಷ್ಠ ಇವೇ ಮುಂತಾದ ರೋಗಗಳ ಪರಿಹಾರ ಕ್ಕಾಗಿ ರಾವಣನ ಕಿರೀಟವನ್ನು ಧ್ವಂಸಮಾಡಿದ ಪ್ರಸಂಗವಿರುವ ಸರ್ಗವನ್ನು ದಿನಕ್ಕೆ ಎರಡು ಬಾರಿ ಪಾರಾಯಣಮಾಡಬೇಕು. (ಯುದ್ಧಕಾಂಡ ಸರ್ಗ-೫೯ ಸಂಪುಟ-೮ ಪುಟ-೧೬೯೯)

ಸಂಕಲ್ಪ :-....ಪ್ರಭೋಃ ಪ್ರಸಾದೇನ ಸಕಲವಿಧರೋಗಶಾನ್ತ್ಯರ್ಥಂ ರಾವಣಕಿರೀಟಭಙ್ಗಾತ್ಮಕ ಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥

ಮೊದಲು ಜೇನುತುಪ್ಪವನ್ನೂ ಕಡೆಯಲ್ಲಿ ಹಾಲನ್ನೂ ನಿವೇದನಮಾಡ ಬೇಕು.

6. ಭೂತ-ಪ್ರೇತಾದಿಗಳ ಪೀಡಾಪರಿಹಾರಾರ್ಥವಾಗಿ

ಭೂತವೇತಾಲಪೀಡಾ ಚೇಲ್ಲಙ್ಕಾವಿಜಯಸರ್ಗಕಮ್ ।
ಆದೌ ಗುಡಾನ್ನಂ ನೈವೇದ್ಯಂ ಕೃತ್ವಾ ಸಾಯಂ ಪಠೇದ್ಯತಃ ।

ವಿಮಾರ್ಗಸರ್ವತ್ರೇತಿ ಪದ್ಯಸ್ಯಾನ್ತೇ ನೀರಾಜನಾರ್ಪಣಮ್ ।
ಕೃತ್ವಾಥ ಪ್ರಣಮೇದ್ಭೂಮೌ ಆಞ್ಜನೇಯಂ ಹೃದಾ ಸ್ಮರನ್ ॥

ಭೂತ-ಪ್ರೇತಾದಿಗಳ ಪೀಡಾಪರಿಹಾರಾರ್ಥವಾಗಿ ಲಂಕಾವಿಜಯ ವಿರುವ ಸರ್ಗವನ್ನು ಸಾಯಂಕಾಲ ಪಾರಾಯಣಮಾಡಬೇಕು. **ವಿಮಾರ್ಗ ಸರ್ವತ್ರಗತೋ ಯಥಾ ಸುಖಮ್** ಎಂಬ ಪಾದವನ್ನು ಹೇಳಿದನಂತರ ಕರ್ಪೂರಾರತಿಯನ್ನು ಮಾಡಿ ಆಂಜನೇಯನಿಗೆ ಸಾಷ್ಟಾಂಗನಮಸ್ಕಾರಮಾಡ ಬೇಕು. (ಸುಂದರಕಾಂಡ ಸರ್ಗ ೩ ಸಂಪುಟ-೬ ಪುಟ-೧೧೭೮)

ಸಂಕಲ್ಪ :- **ಪ್ರಭೋಃ ಪ್ರಸಾದೇನ ಭೂಮ್ಯನ್ತರಿಕ್ಷಚರ ಭೂತವೇತಾಲಾದಿಕೃತಪೀಡಾನಿವೃತ್ತ್ಯರ್ಥಂ ಲಙ್ಕಾದೇವತಾವಿಜಯಾತ್ಮಕ ಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ.**

ಪ್ರಾರಂಭದಲ್ಲಿ ಬೆಲ್ಲದ ಅನ್ನವನ್ನು (ಪೊಂಗಲ್) ನಿವೇದನಮಾಡ ಬೇಕು.

೭. ಮಾನಸಿಕವಾದ ಖಾಯಿಲೆಗಳ ನಿವಾರಣೆಗಾಗಿ

ಉನ್ಮಾದದೋಷಶಾನ್ತ್ಯರ್ಥಂ ಹನೂಮಚ್ಚಿನ್ತನಂ ಪಠೇತ್ ।
ಅಶೋಕವನಿಕಾಯಾನಸಮಯೇ ಸಮುಪಸ್ಥಿತಮ್ ।
ನಿವೇದಯತ್ತತಃ ಪ್ರಾತಃ ಮಾಷಚೂರ್ಣಾನ್ನ ಮಾದೃತಃ ॥

ಮಾನಸಿಕರೋಗಗಳ ಶಾಂತ್ಯರ್ಥವಾಗಿ ಅಶೋಕವನಕ್ಕೆ ಪ್ರವೇಶ ಮಾಡುವ ಮೊದಲು ಹನುಮಂತನು ಯೋಚಿಸಿದ ಪ್ರಸಂಗವನ್ನು ಪ್ರಾತಃ ಕಾಲದಲ್ಲಿ ಪಾರಾಯಣಮಾಡಬೇಕು. (ಸುಂದರಕಾಂಡ ಸರ್ಗ-೧೩ ಸಂಪುಟ-೬ ಪುಟ-೧೨೧೮)

ಸಂಕಲ್ಪ :- ..... **ಪ್ರಭೋಃ ಪ್ರಸಾದೇನ** ಗಂಡಸಾಗಿದ್ದರೆ..... **ನಾಮ್ನಃ** ಹೆಂಗಸಾಗಿದ್ದರೆ.... **ನಾಮ್ನ್ಯಾಃ ಮಮ ಪ್ರಾರಬ್ಧವಶಗತ ಉನ್ಮಾದದೋಷಶಾನ್ತ್ಯರ್ಥಂ ಮಾರುತಿನಿರ್ವೇದಾತ್ಮಕಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥**

ಉದ್ದಿನಪುಡಿ ಅನ್ನವನ್ನು ನಿವೇದನಮಾಡಬೇಕು.

8. ದಾರಿದ್ರ್ಯದ ನಿವಾರಣೆಗಾಗಿ

ದಾರಿದ್ರ್ಯಧ್ವಂಸಕಾಮಸ್ತು ಲಙ್ಕಾಯಾಂ ತು ಹನೂಮತಾ ।
ಮೈಥಿಲೀದರ್ಶನಂ ಪ್ರಾಪ್ತಂ ಪಠೇತ್ಪಾಪವಿಮೋಚನಮ್ ॥

ಬಡತನವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಹನುಮಂತನು ಸೀತೆ ಯನ್ನು ಸಂದರ್ಶಿಸಿದ ಪ್ರಸಂಗವಿರುವ ಸಕಲಪಾಪವಿಮೋಚಕವಾದ ಸರ್ಗ ವನ್ನು ಪಾರಾಯಣಮಾಡಬೇಕು. (ಸುಂದರಕಾಂಡ ಸರ್ಗ ೧೫ ಸಂಪುಟ ೬ ಪುಟ ೧೨೩೦)

ಸಂಕಲ್ಪ :-.... **ಪ್ರಭೋಃ ಪ್ರಸಾದೇನ ವರ್ತಮಾನದಾರಿದ್ರ್ಯ ನಿವೃತ್ತಿಪೂರ್ವಕಕಮಲಾಕಟಾಕ್ಷಸಿದ್ಧ್ಯರ್ಥಂ ಹನೂಮತ್ಕೃತಸೀತಾದರ್ಶ ನಾತ್ಮಕಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ.**

ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

9. ಸಮಸ್ತದುಃಖನಿವಾರಣೆಗಾಗಿ

ದುಃಖಧ್ವಂಸನಕಾಮಸ್ತು ರಾವಣಸ್ಯ ವಧೋತ್ತರಮ್ ।
ಸೀತಾಞ್ಜನೇಯಸಂವಾದಸರ್ಗಂ ತು ಪ್ರಯತಃ ಪಠೇತ್ ॥

ಸಕಲವಿಧವಾದ ದುಃಖಗಳ ನಿವಾರಣೆಗಾಗಿ ಯುದ್ಧಕಾಂಡದಲ್ಲಿ ಸೀತಾ ಮತ್ತು ಆಂಜನೇಯರ ಸಂವಾದಪ್ರಸಂಗವಿರುವ ಸರ್ಗವನ್ನು ಪ್ರಾತಃಕಾಲದಲ್ಲಿ ಪಾರಾಯಣಮಾಡಬೇಕು. (ಯುದ್ಧಕಾಂಡ ಸರ್ಗ-೧೧೬ ಸಂಪುಟ-೯ ಪುಟ-೧೯೭೪.)

ಸಂಕಲ್ಪ :-...**ಪ್ರಭೋಃ ಪ್ರಸಾದೇನ ಉತ್ತರೋತ್ತರಮನು- ಭೂಯಮಾನಸರ್ವವಿಧದುಃಖನಿವಾರಣಾರ್ಥಂ ಸೀತಾಞ್ಜನೇಯ ಸಂವಾದಾತ್ಮಕಶ್ರೀಮದ್ರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥**

ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

10. ಅನಿರೀಕ್ಷಿತವಾಗಿ ಬರುವ ಆಪತ್ತುಗಳ ಪರಿಹಾರಕ್ಕಾಗಿ

ಅತರ್ಕಿತಾಪದುದ್ಧಾರಕಾಮಶ್ಚೇದಭಯಾರ್ಪಣಮ್ ।
ವಿಭೀಷಣಾಯ ರಾಮಸ್ಯ ಪಠೇದರ್ಥಂ ವಿಚಿನ್ತಯನ್ ।
ಆದಾವನ್ತೇ ಚ ಸುಸ್ಫೋಟ್ಯ ನಾರಿಕೇಲಂ ನಿವೇದಯೇತ್ ॥

ಅನಿರೀಕ್ಷಿತವಾಗಿ ಆಪತ್ತುಗಳು ಒದಗಿಬಂದಾಗ ಶ್ರೀರಾಮನು ವಿಭೀಷಣನಿಗೆ ಅಭಯದಾನಮಾಡಿದ ಪ್ರಸಂಗವಿರುವ ಸರ್ಗಗಳನ್ನು ಪ್ರಾತಃ ಕಾಲದಲ್ಲಿ ಪಾರಾಯಣಮಾಡಬೇಕು. (ಯುದ್ಧಕಾಂಡ ಸರ್ಗ-೧೮-೧೯ ಸಂಪುಟ-೭-೮ ಪುಟ-೧೫೦೭ ರಿಂದ ೧೫೧೫೪ ವರೆಗೆ)

ಸಂಕಲ್ಪ :- ....ಪ್ರಭೋಃ ಪ್ರಸಾದೇನ ಅತರ್ಕಿತಾಗತಮಹಾ ವಿಪದುದ್ಧಾರಾರ್ಥಂ ವಿಭೀಷಣಸಂಗ್ರಹಾತ್ಮಕಶ್ರೀಮದ್ರಾಮಾಯಣ ಘಟ್ಟಪಾರಾಯಣಮಹಂ ಕರಿಷ್ಯೇ ॥

ಪ್ರಾರಂಭದಲ್ಲಿಯೂ ಮತ್ತು ಕಡೆಯಲ್ಲಿಯೂ ತೆಂಗಿನಕಾಯನ್ನು ಒಡೆದು ನಿವೇದನಮಾಡಬೇಕು.

11. ಬೇರ್ಪಟ್ಟಿರುವ ಬಂಧುಗಳ ಪುನರ್ಮಿಲನಕ್ಕಾಗಿ

ವಿಶ್ಲಿಷ್ಟಬನ್ಧುಸಂಯೋಗಕಾಮನಾ ಚೇದ್ಧನೂಮತಃ ।
ರಾಮಾಙ್ಗುಲೀಯಾರ್ಪಣಂ ತು ಸೀತಾಯೈ ಸನ್ಧ್ಯಯೋಃ ಪಠೇತ್ ॥

ಬಿಟ್ಟುಹೋಗಿರುವ ಬಂಧುಗಳೊಡನೆ ಸೇರಬೇಕೆನ್ನುವ ಆಶಯವಿದ್ದರೆ ಆಂಜನೇಯನು ಶ್ರೀರಾಮನ ಉಂಗುರವನ್ನು ಸೀತಾದೇವಿಗೆ ಅರ್ಪಿಸಿದ ಪ್ರಸಂಗವಿರುವ ಸರ್ಗವನ್ನು ಪ್ರಾತಃಕಾಲ-ಸಾಯಂಕಾಲಗಳಲ್ಲಿ ಪಾರಾಯಣ ಮಾಡಬೇಕು. (ಸುಂದರಕಾಂಡ ಸರ್ಗ-೩೬ ಸಂಪುಟ-೬ ಪುಟ-೧೩೦೫)

ಸಂಕಲ್ಪ : ....ಪ್ರಭೋಃ ಪ್ರಸಾದೇನ ಮಮ ವಿಶ್ಲಿಷ್ಟಬಂಧುಜನ ಸಂಯೋಗಸಿದ್ಧ್ಯರ್ಥಂ ಅಂಗುಲೀಯಪ್ರದಾನಾತ್ಮಕಶ್ರೀಮದ್ರಾಮಾಯಣ ಘಟ್ಟಪಾರಾಯಣಮಹಂ ಕರಿಷ್ಯೇ ॥

ಪ್ರಾರಂಭದಲ್ಲಿ ಅಥವಾ ಕಡೆಯಲ್ಲಿ ಹಲಸಿನಹಣ್ಣು ಅಥವಾ ಮಾವಿನ ಹಣ್ಣನ್ನು ನಿವೇದನಮಾಡಬೇಕು.

12. ದುಃಸ್ವಪ್ನದೋಷನಿವಾರಣಾರ್ಥವಾಗಿ

ದುಃಸ್ವಪ್ನದೋಷಶಾನ್ತ್ಯರ್ಥಂ ತ್ರಿಜಟಾಸ್ವಪ್ನದರ್ಶನಮ್ ।
ಪಠೇತ್ರ್ಯಹಂ ಪ್ರಾತರೇವ ಶರ್ಕರಾಂ ವಿನಿವೇದಯೇತ್ ॥

ದುಃಸ್ವಪ್ನದೋಷಪರಿಹಾಕ್ಕಾಗಿ ತ್ರಿಜಟೆಯು ಸೀತಾದೇವಿಗೆ ಹೇಳಿದ ಸ್ವಪ್ನವೃತ್ತಾಂತಪ್ರಸಂಗವಿರುವ ಸರ್ಗವನ್ನು ಪ್ರಾತಃಕಾಲದಲ್ಲಿ ಮೂರು ದಿವಸ ಪಾರಾಯಣಮಾಡಬೇಕು. (ಸುಂದರಕಾಂಡ ಸರ್ಗ-೨೭ ಸಂಪುಟ-೬ ಪುಟ-೧೨೭೧)

ಸಂಕಲ್ಪ :- ....ಪ್ರಭೋಃ ಪ್ರಸಾದೇನ ದುಃಸ್ವಪ್ನದೋಷ ಶಾನ್ತ್ಯರ್ಥಂ ತ್ರಿಜಟಾಸ್ವಪ್ನಾತ್ಮಕಶ್ರೀಮದ್ರಾಮಾಯಣಘಟ್ಟಪಾರಾಯಣ ಮಹಂ ಕರಿಷ್ಯೇ ॥

ಸಕ್ಕರೆಯನ್ನು ನಿವೇದನಮಾಡಬೇಕು.

13. ಪರಸ್ತ್ರೀಸಂಗದ ದೋಷನಿವಾರಣೆಗಾಗಿ

ಪಾರದಾರಿಕದೋಷಸ್ಯ ಶಾನ್ತಯೇ ಹನುಮತ್ಕೃತಮ್ ।
ನಿರ್ವಿಕಾರಮನಾ ಭೂತ್ವಾ ಶುದ್ಧಾನ್ತೇ ರಾವಣಸ್ಯ ಚ ॥

ಜಾನಕ್ಯನ್ವೇಷಣಕಥಾಸರ್ಗಪಞ್ಚಕಮಾದರಾತ್ ।
ಸಕೃತ್ಪಠೇತ್ಪ್ರಾತರೇವ ನಿವೇದ್ಯಾಪೂಪವಿಂಶತಿಮ್ ॥

ಅನಿವಾರ್ಯಕಾರಣಗಳಿಂದ ಮಾಡಿದ ಪರಸ್ತ್ರೀಗಮನದೋಷಪರಿಹಾರ ಕ್ಕಾಗಿ ಹನುಮಂತನು ರಾವಣನ ಅಂತಃಪುರದಲ್ಲಿ ಸೀತೆಯನ್ನು ಹುಡುಕಿದ ಪ್ರಸಂಗವಿರುವ ಸರ್ಗಗಳನ್ನು ಪ್ರಾತಃಕಾಲದಲ್ಲಿಯೇ ಒಂದಾವರ್ತಿ ನಿರ್ವಿಕಾರ ವಾದ ಮನಸ್ಸಿನಿಂದ ಪಾರಾಯಣಮಾಡಬೇಕು. (ಸುಂದರಕಾಂಡ ಸರ್ಗಗಳು-೭-೮-೯-೧೦-೧೧ ಸಂಪುಟ-೬ ಪುಟ-೧೧೯೫ ರಿಂದ ೧೨೧೫ರ ವರೆಗೆ)

ಸಂಕಲ್ಪ :- ... ಪ್ರಭೋಃ ಪ್ರಸಾದೇನ ಪಾರದಾರಿಕತಾದೋಷ ಶಾನ್ತ್ಯರ್ಥಂ ಹನುಮತ್ಕೃತಸೀತಾವಿಚಯಾತ್ಮಕಶ್ರೀಮದ್ರಾಮಾಯಣ ಘಟ್ಟಪಾರಾಯಣಮಹಂ ಕರಿಷ್ಯೇ ॥

ಇಪ್ಪತ್ತು ಅತಿರಸಗಳನ್ನು ನಿವೇದನಮಾಡಬೇಕು.

14. ಶ್ರೀರಾಮನನ್ನು ನಿಂದಿಸಿದ ದೋಷಪರಿಹಾರಕ್ಕಾಗಿ

ಬುದ್ಧ್ಯಾಽಬುದ್ಧ್ಯಾ ರಾಮವಿಭೋರ್ವಿಹಿತಾಗಃಪ್ರಶಾನ್ತಯೇ ।
ಕಾಕನಿಗ್ರಹವೃತ್ತಾನ್ತಸರ್ಗಂ ನತ್ವಾ ಪಠೇತ್ಪ್ರಭುಮ್ ॥

ತಿಳಿದೋ ತಿಳಿಯದೆಯೋ ಶ್ರೀರಾಮನನ್ನು ನಿಂದಿಸಿದ ದೋಷಪರಿಹಾರಕ್ಕಾಗಿ ಶ್ರೀರಾಮನು ಕಾಕಾಸುರನಿಗೆ ಮಾಡಿದ ಅನುಗ್ರಹವಿರುವ ಸರ್ಗವನ್ನು ಪ್ರಾತಃಕಾಲದಲ್ಲಿ ಪ್ರಭುವಾದ ಶ್ರೀರಾಮನನ್ನು ನಮಸ್ಕರಿಸಿ ಪಾರಾಯಣಮಾಡಬೇಕು. (ಸುಂದರಕಾಂಡ ಸರ್ಗ-೩೮ ಸಂಪುಟ-೬ ಪುಟ-೧೩೧೬)

ಸಂಕಲ್ಪ :- ... ಪ್ರಭೋಃ ಪ್ರಸಾದೇನ **ಬುದ್ಧಿಪೂರ್ವಕಂ ಅಬುದ್ಧಿಪೂರ್ವಕಂ ವಾ ಶ್ರೀರಾಮಸಂನಿಧೌ ತದ್ಭಾಗವತಸಂನಿಧೌ ವಾ ಕೃತಾನಾಂ ಮಹಾಪಚಾರಾಣಾಂ ಶಾನ್ತ್ಯರ್ಥಂ ಕಾಕಾನುಗ್ರಹಾತ್ಮಕ ಶ್ರೀರಾಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥**

ಐದು ಬಾಳೇಹಣ್ಣುಗಳನ್ನು ನಿವೇದನಮಾಡಬೇಕು.

15. ಸಕಲಸುಖೋಪೇತವಾದ ಜನ್ಮಾಂತರಪ್ರಾಪ್ತಿಗಾಗಿ

ಸರ್ವಸೌಖ್ಯಾಸ್ಪದಂ ಭಾವಿಜನ್ಮ ಕಾಂಕ್ಷದ್ಭಿರಾದರಾತ್ ।
ಅಯೋಧ್ಯಾಯಾಂ ರಘೂತ್ತಂಸರಾಜ್ಯಪಟ್ಟಾಭಿಷೇಚನಮ್ ।
ಪಠನೀಯಂ ಮಾಸಮಾತ್ರಂ ಮುದ್ಗಾನ್ನಂ ವಿನಿವೇದಯೇತ್ ॥

ಮುಂದಿನ ಜನ್ಮದಲ್ಲಿ ಐಶ್ವರ್ಯವನ್ನೂ ಸುಖವನ್ನೂ ಅಪೇಕ್ಷಿಸು ವವರು ಶ್ರೀರಾಮನ ಪಟ್ಟಾಭಿಷೇಕಪ್ರಸಂಗವಿರುವ ಸರ್ಗವನ್ನು ಒಂದು ತಿಂಗಳು ಪಾರಾಯಣಮಾಡಬೇಕು. (ಯುದ್ಧಕಾಂಡ ಸರ್ಗ-೧೨೮ ಸಂಪುಟ-೯ ಪುಟ-೨೦೧೮)

ಸಂಕಲ್ಪ :- .... ಪ್ರಭೋಃ ಪ್ರಸಾದೇನ **ಸಕಲಸುಖೋಪೇತ**

ಜನ್ಮಾಂತರಸಿದ್ಧ್ಯರ್ಥಂ ಶ್ರೀರಾಮಪಟ್ಟಾಭಿಷೇಕಾತ್ಮಕಶ್ರೀಮದ್ರಾ-ಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥

ಹುಗ್ಗಿಯನ್ನು (ಪೊಂಗಲನ್ನು) ನಿವೇದನಮಾಡಬೇಕು.

16. ಪುತ್ರಪ್ರಾಪ್ತಿಗಾಗಿ

ಪುತ್ರಕಾಮಸ್ತು ಪುತ್ರೀಯಾಮಿಷ್ಟಿಂ ದಶರಥಸ್ಯ ತಾಮ್ ।
ಆಗರ್ಭಧಾರಣಂ ಸ್ತ್ರೀಣಾಂ ಪಾಯಸೇನ ಪಠೇಚ್ಛುಚಿಃ ॥

ನಿವೇದಯೇತ್ಪ್ರತಿದಿನಂ ಘೃತಮಿಶ್ರಂ ತು ಪಾಯಸಮ್ ।
ಶ್ರಾವಯೇಚ್ಚಾಪಿ ಪತ್ನೀಂ ಸ್ವಾಂ ಕುಲ್ಯಾಂ ವಿಂಶತಿವಾಸರಾನ್ ॥

ಮಕ್ಕಳಿಲ್ಲದವರು ಮಕ್ಕಳನ್ನು ಪಡೆಯಲು ಪುತ್ರಕಾಮೇಷ್ಟಿಯಾಗದಲ್ಲಿ ಪಾಯಸಪ್ರದಾನದ ಮತ್ತು ದಶರಥನ ಮಹಿಷಿಯರು ಗರ್ಭವತಿಯರಾಗುವ ವರೆಗಿನ ಸರ್ಗಗಳನ್ನು ಇಪ್ಪತ್ತು ದಿವಸಗಳು ಪ್ರಾತಃಕಾಲದಲ್ಲಿ ಪರಿಶುದ್ಧರಾಗಿ ಪಾರಾಯಣಮಾಡಬೇಕು. ಪತಿಯು ಮಾಡುವ ಪಾರಾಯಣವನ್ನು ಪತ್ನಿಯೂ ಶ್ರದ್ಧೆಯಿಂದಲೂ ಭಕ್ತಿಯಿಂದಲೂ ಕೇಳಬೇಕು. (ಬಾಲಕಾಂಡ ಸರ್ಗ-೧೫-೧೬ ಸಂಪುಟ-೧ ಪುಟ-೫೧ ರಿಂದ ೫೭ರ ವರೆಗೆ.)

ಸಂಕಲ್ಪ :- .... **ಪ್ರಭೋಃ ಪ್ರಸಾದೇನ ಪುತ್ರಜನ್ಮಪ್ರತಿ-ಬನ್ಧಕಾನಾಂ ಸರ್ವವಿಧಪಾಪಾನಾಂ ಸದ್ಯೋ ವಿನಾಶದ್ವಾರಾ ಪುತ್ರ ಲಾಭಾರ್ಥಂ ಪುತ್ರಕಾಮೇಷ್ಟಿಪಾಯಸದಾನಾತ್ಮಕಶ್ರೀಮದ್ರಾಮಾ-ಯಣಘಟ್ಟಪಾರಾಯಣಮಹಂ ಕರಿಷ್ಯೇ ॥**

ತುಪ್ಪದಿಂದ ಬೆರೆತ ಪಾಯಸವನ್ನು ನಿವೇದನಮಾಡಬೇಕು.

17. ಸುಖಪ್ರಸವಕ್ಕಾಗಿ

ಸುಖಪ್ರಸವಕಾಮಸ್ತು ಗರ್ಭಿಣೀನಾಂ ತು ತಚ್ಛ್ರವೇ ।
ಅವತಾರಕಥಾಸರ್ಗಂ ರಾಮಸ್ಯ ಪ್ರಯತಃ ಪಠೇತ್ ।
ಯಥಾಲಾಭಂ ತು ನೈವೇದ್ಯಂ ಕಾರ್ಯಂ ದ್ರವ್ಯೇಣ ಚಾಲ್ಪಶಃ ॥

ಸ್ತ್ರೀಯರ ಸುಖಪ್ರಸವಕ್ಕಾಗಿ ಶ್ರೀರಾಮನ ಅವತಾರಪ್ರಸಂಗವಿರುವ

ಸರ್ಗವನ್ನು ಗರ್ಭಿಣೀಸ್ತ್ರೀಯರಿಗೆ ಕೇಳಿಸುವಂತೆ ಪಾರಾಯಣಮಾಡಬೇಕು. (ಬಾಲಕಾಂಡ ಸರ್ಗ-೧೮ ಸಂಪುಟ-೧ ಪುಟ-೬೧)

ಸಂಕಲ್ಪ :-...ಪ್ರಭೋಃ ಪ್ರಸಾದೇನ...ನಾಮ್ನ್ಯಾಃ ಗರ್ಭಿಣ್ಯಾಃ ಸುಖಪ್ರಸವಸಿದ್ಧ್ಯರ್ಥಂ ಶ್ರೀರಾಮಾವತಾರಕಥಾತ್ಮಕಶ್ರೀಮದ್ರಾಮಾ-ಯಣಘಟ್ಟಪಾರಾಯಣಮಹಂ ಕರಿಷ್ಯೇ ॥

ಯಾವುದನ್ನಾದರೂ ನಿವೇದನಮಾಡಬಹುದು.

18. ಕಾರಾಗೃಹಪ್ರವೇಶದ ಭಯನಿವಾರಣೆಗಾಗಿ

ಕಾರಾಗೃಹಪ್ರವೇಶಃಸ್ಯಾದಿತಿ ಯಸ್ಯಾಸ್ತಿ ವೈ ಭಯಮ್ ।
ವಿಭೀಷಣೇನ ಸೀತಾಯಾ ನಯನಂ ರಾಮಸಂನಿಧೌ ।
ಸ ಪಠೇನ್ಮಧುರೈರ್ದ್ರವ್ಯೈಸ್ತೋಷಯಿತ್ವಾ ರಘೂತ್ತಮಮ್ ॥

ಕಾರಾಗೃಹವಾಸವು ಪ್ರಾಪ್ತವಾಗುವುದೆಂಬ ಭಯವು ಬಂದಾಗ ವಿಭೀಷಣನು ಶ್ರೀರಾಮನ ಸನ್ನಿಧಿಗೆ ಸೀತೆಯನ್ನೊಯ್ದ ಸರ್ಗವನ್ನು ಪಾರಾಯಣ ಮಾಡಬೇಕು. (ಯುದ್ಧಕಾಂಡ ಸರ್ಗ-೧೧೭ ಸಂಪುಟ-೯ ಪುಟ-೧೯೭೭)

ಸಂಕಲ್ಪ :-... ಪ್ರಭೋಃ ಪ್ರಸಾದೇನ ಕಾರಾಗೃಹಪ್ರವೇಶಭಯ ನಿವೃತ್ತ್ಯರ್ಥಂ ಸೀತಾನಯನಾತ್ಮಕಶ್ರೀಮದ್ರಾಮಾಯಣಘಟ್ಟ-ಪಾರಾಯಣಮಹಂ ಕರಿಷ್ಯೇ ॥

ಸಿಹಿಪದಾರ್ಥಗಳನ್ನು ನಿವೇದಿಸಬೇಕು.

19. ಸಕಲಸದ್ಗುಣಸಂಪನ್ನನಾದ ಪುತ್ರನನ್ನು ಪಡೆಯುವ ಸಲುವಾಗಿ

ಅಯೋಧ್ಯಾಕಾಣ್ಡಪ್ರಾರಮ್ಭೇ ಶ್ರೀರಾಮಗುಣಸಂತತೇಃ ।
ಪಠನಾದ್ಗುಣವಾನ್ಪುತ್ರೋ ನಿರ್ಗುಣೋಽಪಿ ಭವೇದ್ಧ್ರುವಮ್ ॥

ಸದ್ಗುಣಗಳುಳ್ಳ ಪುತ್ರನನ್ನು ಪಡೆಯುವ ಸಲುವಾಗಿ, ಮಗನು ದುರ್ಗುಣನಾಗಿದ್ದರೂ–ಸದ್ಗುಣಿಯಾಗುವಂತೆ ಮಾಡುವ ಸಲುವಾಗಿ ಶ್ರೀರಾಮನ ಗುಣಗಣಗಳಿಂದ ಸಂಪನ್ನವಾಗಿರುವ ಅಯೋಧ್ಯಾಕಾಂಡದ ಪ್ರಾರಂಭದಲ್ಲಿರುವ ಸರ್ಗಗಳನ್ನು ಪಾರಾಯಣಮಾಡಬೇಕು. ಈ ಸರ್ಗ

ಗಳನ್ನು ಪಾರಾಯಣಮಾಡುವುದರಿಂದ ಸದ್ಗುಣಿಯಾದ ಮಗನು ಹುಟ್ಟು ವನು. ಹುಟ್ಟಿದ ಮಗನು ದುರ್ಗುಣಿಯಾಗಿದ್ದರೂ ಶ್ರೀರಾಮನ ಪ್ರಸಾದ ದಿಂದ ಸದ್ಗುಣಿಯಾಗುವನು. ಇದು ನಿಶ್ಚಯ. (ಅಯೋಧ್ಯಾಕಾಂಡ- ಸರ್ಗ-೧-೨ ಸಂಪುಟ-೨ ಪುಟ-೨೨೧ ರಿಂದ ೨೩೦ ರವರೆಗೆ)

ಸಂಕಲ್ಪ :-...ಪ್ರಭೋಃ ಪ್ರಸಾದೇನ ಸದ್ಗುಣಪುತ್ರಲಾಭಾರ್ಥಂ **ಅಥವಾ.... ನಾಮ್ನಃ / ನಾಮ್ನ್ಯಾಃ / ಮಮ ಪುತ್ರಸ್ಯ / ಪುತ್ರಿಕಾಯಾಃ ಸಕಲಸದ್ಗುಣಾವಾಪ್ತ್ಯರ್ಥಂ ಶ್ರೀರಾಮಗುಣವರ್ಣನಾತ್ಮಕಶ್ರೀಮದ್ರಾ- ಮಾಯಣಘಟ್ಟಪಾರಾಯಣಮಹಂ ಕರಿಷ್ಯೇ ॥**

ಐದು ಬಾಳೇಹಣ್ಣುಗಳನ್ನು ನಿವೇದಿಸಬೇಕು.

೨೦. ಮನೋಭೀಷ್ಟಸಿದ್ಧಿಗಾಗಿ

ಅತ್ರಾನಿರ್ದಿಷ್ಟಕಾಮಾಸ್ತು ಯೇ ಸ್ಯುರ್ನಾನಾವಿಧೇಪ್ಸಿತಾಃ ।
ತೈಃ ಪಾಠ್ಯಂ ಭಾರ್ಗವವಿಜಯಕಥಾಸರ್ಗದ್ವಯಂ ಯತ್ನೈಃ ।
ಪಾಯಸಾಪೂಪನೈವೇದ್ಯಂ ಪಠನಾನ್ತೇ ತು ಕಾರಯೇತ್ ॥

ಇಲ್ಲಿ ನಿರ್ದೇಶಿಸದೇ ಇರುವ ನಾನಾವಿಧ ಫಲಗಳನ್ನಪೇಕ್ಷಿಸುವ ಯಾವುದೇ ಆಸೆ-ಆಕಾಂಕ್ಷೆಯುಳ್ಳವರು ಶ್ರೀರಾಮನು ಪರಶುರಾಮನನ್ನು ಜಯಿಸಿದ ಕಥಾಪ್ರಸಂಗವಿರುವ ಸರ್ಗಗಳನ್ನು ಪಾರಾಯಣಮಾಡಬೇಕು. (ಬಾಲಕಾಂಡ ಸರ್ಗಗಳು-೭೫-೭೬ ಸಂಪುಟ-೧ ಪುಟ-೨೧೧ ರಿಂದ ೨೧೬ರ ವರೆಗೆ)

ಸಂಕಲ್ಪ :-...ಪ್ರಭೋಃ ಪ್ರಸಾದೇನ ಅಸ್ಮಚ್ಚಿನ್ತಿತಸಕಲಾಭೀಷ್ಟ ಸಿದ್ಧ್ಯರ್ಥಂ ಭಾರ್ಗವವಿಜಯಾತ್ಮಕಶ್ರೀಮದ್ರಾಮಾಯಣಘಟ್ಟ **ಪಾರಾಯಣಮಹಂ ಕರಿಷ್ಯೇ ॥**

ಪಾಯಸ ಮತ್ತು ಅತಿರಸಗಳನ್ನು ನಿವೇದನಮಾಡಬೇಕು.

ಶ್ರೀರಾಮನ ನಲವತ್ತೇಳು ಮಂತ್ರಸ್ತೋತ್ರಗಳು

ಅಥಹೈನಂ ಭರದ್ವಾಜೋ ಯಾಜ್ಞವಲ್ಕ್ಯಮುವಾಚಾಥ ಕೈ- ರ್ಮನ್ತ್ರೈಃ ಸ್ತುತಃ ಶ್ರೀರಾಮಃ ಪ್ರೀತೋ ಭವತಿ ಸ್ವಾತ್ಮಾನಂ ದರ್ಶಯತಿ ತಾನ್ನೋ ಬ್ರೂಹಿ ಭಗವನ್ನಿತಿ ।

ಭರದ್ವಾಜರು ಯಾಜ್ಞವಲ್ಕ್ಯರನ್ನು ಪ್ರಶ್ನಿಸುತ್ತಾರೆ :

"ಪೂಜ್ಯರೇ! ಯಾವ ಮಂತ್ರಗಳಿಂದ ಸ್ತೋತ್ರಮಾಡಿದರೆ ಭಗವಾನ್ ಶ್ರೀರಾಮನು ಪ್ರಸನ್ನನಾಗುತ್ತಾನೆ ಮತ್ತು ತನ್ನ ನಿಜಸ್ವರೂಪವನ್ನು ಪ್ರತ್ಯಕ್ಷವಾಗಿ ತೋರಿಸಿಕೊಳ್ಳುತ್ತಾನೆ? ಆ ಮಹಾಮಂತ್ರದ ಉಪದೇಶವನ್ನು ನಮಗೆ ಮಾಡಿರಿ."

ಸ ಹೋವಾಚ ಯಾಜ್ಞವಲ್ಕ್ಯಃ ಶ್ರೀರಾಮೇಣೈವಂ ಶಿಕ್ಷಿತೋ ಬ್ರಹ್ಮಾ ಪ್ರವರೇ ತಯಾ ಗದ್ಯಯಾ ಗಾಥಯಾ ನಮಸ್ಕರೋತಿ ।

ಯಾಜ್ಞವಲ್ಕ್ಯರು ಹೇಳುತ್ತಾರೆ :

"ಶ್ರೀರಾಮನಿಂದ ಉಪದಿಷ್ಟನಾದ ಬ್ರಹ್ಮನು ಆ ದಿವ್ಯಮಂತ್ರದ ಉಪದೇಶವನ್ನು ಪಡೆದು ಗದ್ಯರೂಪವಾದ ಮತ್ತು ಗಾಥಾರೂಪವಾದ ಆ ಮಂತ್ರಗಳಿಂದ ಶ್ರೀರಾಮನಿಗೆ ನಮಸ್ಕರಿಸಿದನು.

ವಿಶ್ವಾಧಾರಂ ಮಹಾವಿಷ್ಣುಂ ನಾರಾಯಣಮನಾಮಯಮ್ ।
ಪರಿಪೂರ್ಣಾನನ್ದವಿಜ್ಞಂ ಪರಂಜ್ಯೋತಿಃಸ್ವರೂಪಿಣಮ್ ।
ಮನಸಾ ಸಂಸ್ಮರನ್ ಬ್ರಹ್ಮಾ ತುಷ್ಟಾವ ಪರಮೇಶ್ವರಮ್ ॥

ಸಂಪೂರ್ಣಜಗತ್ತಿಗೂ ಆಧಾರಭೂತನಾಗಿರುವ, ಮಹಾವಿಷ್ಣುಸ್ವರೂಪನಾಗಿರುವ, ರೋಗ-ಶೋಕಗಳಿಂದ ರಹಿತನಾಗಿರುವ, ನಾರಾಯಣಾತ್ಮನಾಗಿರುವ, ಪರಿಪೂರ್ಣವಾದ ಆನಂದಕ್ಕೂ ವಿಜ್ಞಾನಕ್ಕೂ ಆಶ್ರಯನಾಗಿರುವ, ಪರಮಪ್ರಕಾಶರೂಪನಾಗಿರುವ, ಪರಮೇಶ್ವರನಾದ ಶ್ರೀರಾಮನನ್ನು ಬ್ರಹ್ಮನು ಮನಸ್ಸಿನಿಂದ ಸ್ಮರಿಸುತ್ತಾ ಈ ಪ್ರಕಾರವಾಗಿ ಸ್ತುತಿಸಿದನು.

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನದ್ವೈತಪರಮಾ-
ನನ್ದಾತ್ಮಾ ಯತ್ಪರಂ ಬ್ರಹ್ಮ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚಾಖಣ್ಡೈಕ-
ರಸಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಬ್ರಹ್ಮಾ-
ನನ್ದಾಮೃತಂ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೩॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯತ್ತಾರಕಂ
ಬ್ರಹ್ಮ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೋ ಬ್ರಹ್ಮಾ
ವಿಷ್ಣುರೀಶ್ವರೋ ಯಃ ಸರ್ವದೇವಾತ್ಮಾ ಭೂರ್ಭುವಃಸ್ಸ್ವಸ್ತಸ್ಮೈ
ವೈ ನಮೋ ನಮಃ ॥೫॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಸರ್ವೇ
ವೇದಾಃ ಸಾಙ್ಗಾಃ ಸಶಾಖಾಃ ಸಪುರಾಣಾ ಭೂರ್ಭುವಃಸ್ವಸ್ತಸ್ಮೈ
ವೈ ನಮೋ ನಮಃ ॥೬॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೋ ಜೀವಾತ್ಮಾ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೭॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಸರ್ವ-
ಭೂತಾನ್ತರಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೮॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ದೇವಾಸುರ
ಮನುಷ್ಯಾದಿಭಾವಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೯॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಮತ್ಸ್ಯ-
ಕೂರ್ಮಾದ್ಯವತಾರಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೦॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಪ್ರಾಣೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೧॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೋಽನ್ತಃಕರಣ
ಚತುಷ್ಟಯಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೨॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಯಮೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೩॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚಾನ್ತಕೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೪॥
ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಮೃತ್ಯು-
ರ್ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೫॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚಾಮೃತಂ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೬॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾನಿ ಪಞ್ಚ-
ಮಹಾಭೂತಾನಿ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೭॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಸ್ಥಾವರ-
ಜಙ್ಗಮಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೮॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಚ ಪಞ್ಚಾ-
ಗ್ನಯೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೧೯॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾಃ ಸಪ್ತಮಹಾ
ವ್ಯಾಹೃತಯೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೦॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ವಿದ್ಯಾ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೧॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ಸರಸ್ವತೀ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೨॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ಲಕ್ಷ್ಮೀ-
ರ್ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೩॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ಗೌರೀ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೪॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ಜಾನಕೀ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೫॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಚ್ಚ
ತ್ರೈಲೋಕ್ಯಂ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೬॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಸೂರ್ಯೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೨೭॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಸೋಮೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೨೮||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾನಿ ಚ ನಕ್ಷ-
ತ್ರಾಣಿ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೨೯||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ನವಗ್ರಹಾ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೦||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಚಾಷ್ಟೌ
ಲೋಕಪಾಲಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೧||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಚಾಷ್ಟೌ
ವಸವೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೨||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಚೈಕಾದಶ
ರುದ್ರಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೩||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೇ ಚ ದ್ವಾದ-
ಶಾದಿತ್ಯಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೪||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಚ್ಚ ಭೂತಂ
ಭವ್ಯಂ ಭವಿಷ್ಯದ್ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೫||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಬ್ರಹ್ಮಾಣ್ಡ-
ಸ್ಯಾನ್ತರ್ಬಹಿರ್ವ್ಯಾಪ್ನೋತಿ ವಿರಾಟ್ ಭೂರ್ಭುವಃಸ್ವಸ್ತಸ್ಮೈ ವೈ ನಮೋ
ನಮಃ ||೩೬||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೋ ಹಿರಣ್ಯ-
ಗರ್ಭೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೭||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಾ ಪ್ರಕೃತಿ-
ರ್ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೮||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚೋಙ್ಕಾರೋ
ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ||೩೯||

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚತಸ್ರೋಽರ್ಧ ಮಾತ್ರಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೦॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಪರಮ-ಪೂರುಷೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೧॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಮಹೇ-ಶ್ವರೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೨॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಶ್ಚ ಮಹಾ ದೇವೋ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೩॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯ ಓಂ ನಮೋ ಭಗವತೇ ವಾಸುದೇವಾಯ ಯೋ ಮಹಾವಿಷ್ಣುರ್ಭೂರ್ಭುವಃ-ಸ್ವಸ್ತಸ್ಮೈ ವೈ ನಮೋ ನಮಃ ॥೪೪॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಪರಮಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೫॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯೋ ವಿಜ್ಞಾ-ನಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೬॥

ಓಂ ಯೋ ವೈ ಶ್ರೀರಾಮಚನ್ದ್ರಃ ಸ ಭಗವಾನ್ ಯಃ ಸಚ್ಚಿದಾ-ನಂದೈಕರಸಾತ್ಮಾ ಭೂರ್ಭುವಃಸ್ವಸ್ತಸ್ಮೈ ವೈ ನಮೋ ನಮಃ ॥೪೭॥

ಇತ್ಯೇತೈ ಬ್ರಹ್ಮವಿತ್ ಸಪ್ತಚತ್ವಾರಿಂಶನ್ಮನ್ತ್ರೈರ್ನಿತ್ಯಂ ದೇವಂ ಸ್ತುವನ್ ತತೋ ದೇವಃ ಪ್ರೀತೋ ಭವತಿ । ತಸ್ಮಾದ್ಯ ಏತೈರ್ಮನ್ತ್ರೈರ್ನಿತ್ಯಂ ದೇವಂ ಸ್ತೌತಿ ಸ ದೇವಂ ಪಶ್ಯತಿ ಸೋಽಮೃತತ್ವಂ ಚ ಗಚ್ಛತಿ । ಸೋಮೃತತ್ವಂ ಚ ಗಚ್ಛತೀತಿ ॥

ಬ್ರಹ್ಮವಿದನಾದ ಯಾವನು ಈ ನಲವತ್ತೇಳು ಮಂತ್ರಗಳಿಂದ ನಿತ್ಯವೂ ದೇವದೇವನಾದ ಶ್ರೀರಾಮನನ್ನು ಸ್ತೋತ್ರಮಾಡುವನೋ ಅಂತಹವನ ವಿಷಯದಲ್ಲಿ ಶ್ರೀರಾಮನು ಸುಪ್ರೀತನಾಗುವನು. ಈ ಮಂತ್ರಗಳಿಂದ ಶ್ರೀರಾಮನನ್ನು ಪ್ರಾರ್ಥಿಸುವವನು ಶ್ರೀರಾಮನನ್ನೇ ಕಾಣುವನು. ಅಮೃತತ್ತ್ವವನ್ನು ಹೊಂದುವನು. ಅಮರನಾಗುವನು.

೧೧ನೆಯ ಸಂಪುಟವೂ ಸೇರಿ ಸಮಗ್ರರಾಮಾಯಣದ ವಿಷಯಾನುಕ್ರಮಣಿಕೆ

ಶ್ರೀಮದ್ವಾಲ್ಮೀಕಿರಾಮಾಯಣದ ಮಹಿಮೆ

ಸ್ಕಾಂದಪುರಾಣ-ಉತ್ತರಖಂಡ : ವಿಷಯಾನುಕ್ರಮಣಿಕೆ

ಶ್ರೀಮದ್ವಾಲ್ಮೀಕಿರಾಮಾಯಣ

ಒಂದನೆಯ ಸಂಪುಟ-ಬಾಲಕಾಂಡ-ಮೂಲಶ್ಲೋಕಗಳ ಸರ್ಗಾನುಕ್ರಮಣಿಕೆ ಮತ್ತು ವಿಷಯಾನುಕ್ರಮಣಿಕೆ

(ವಿ.ಸೂ. ಮೊದಲನೆಯದು ಸರ್ಗ ಪುಟಸಂಖ್ಯೆ-ಎರಡನೆಯದು ವಿಷಯ ಪುಟಸಂಖ್ಯೆ)

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ

ಎರಡನೆಯ ಸಂಪುಟ - ಅಯೋಧ್ಯಾಕಾಂಡ

ಮೂರನೆಯ ಸಂಪುಟ - ಅಯೋಧ್ಯಾಕಾಂಡ

ನಾಲ್ಕನೆಯ ಸಂಪುಟ - ಅಯೋಧ್ಯಾಕಾಂಡ

ಅರಣ್ಯಕಾಂಡ

ಐದನೆಯ ಸಂಪುಟ-ಅರಣ್ಯಕಾಂಡ

ಆರನೆಯ ಸಂಪುಟ–ಕಿಷ್ಕಿಂಧಾಕಾಂಡ

ಸುಂದರಕಾಂಡ-ಮೂಲಶ್ಲೋಕಗಳ ಸರ್ಗಾನುಕ್ರಮಣಿಕೆ

ಏಳನೆಯ ಸಂಪುಟ

ಸುಂದರಕಾಂಡದ ವಿಷಯಾನುಕ್ರಮಣಿಕೆ

ಯುದ್ಧಕಾಂಡ


ಎಂಟನೆಯ ಸಂಪುಟ-ಯುದ್ಧಕಾಂಡ

ಒಂಬತ್ತನೆಯ ಸಂಪುಟ-ಯುದ್ಧಕಾಂಡ

ಹತ್ತನೆಯ ಸಂಪುಟ-ಉತ್ತರಕಾಂಡ

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.